

# ಬಯಲ ಬೇರ ಚಿಗುರು

ಸಂಪಾದಕರು

ಮೋಹನ ನಾಗಮ್ಮನವರ

# ಬಯಲ ಬೇರ ಚಿಗುರು

(ಕಥಾ ಸಂಕಲನ)

ಸಂಪಾದಕರು


**ಮೋಹನ ನಾಗಮ್ಮನವರ**



**ಕರ್ನಾಟಕ ವಿದ್ಯಾವರ್ಧಕ ಸಂಘ**

ಧಾರವಾಡ - ೫೮೦ ೦೦೧

Bayala Bera Chiguru - A collection of Short Stories Edited by Mohan Nagammanavar, Navodaya Nagar, Dharwad-580 003. Published by General Secretary, Karnataka Vidyavardhak Sangh, Dharwad - 580 001 (Karnataka).

Pages : xx + 322

First Edition : 2003

© Author's

Price Rs. 150/-

ಪುಟಗಳು : xx + ೩೨೨

ಮೊದಲ ಮುದ್ರಣ : ೨೦೦೩

© ಲೇಖಕರವು

ಬೆಲೆ ರೂ. ೧೫೦/-

ಸಂಪಾದಕರು : **ಮೋಹನ ನಾಗಮ್ಮನವರ**
ನವೋದಯ ನಗರ,
ಧಾರವಾಡ - ೫೮೦ ೦೦೩.

ಪ್ರಕಾಶಕರು : **ಪ್ರಧಾನ ಕಾರ್ಯದರ್ಶಿ**
ಕರ್ನಾಟಕ ವಿದ್ಯಾವರ್ಧಕ ಸಂಘ,
ಧಾರವಾಡ - ೫೮೦ ೦೦೧.

ಮುಖ ಪುಟ : ರವೀಂದ್ರ ವಿಶ್ವಜ್ಞ
ಧಾರವಾಡ - ೫೮೦ ೦೦೮.

ಮುದ್ರಣ : ಬಿ. ಜಿ. ಪ್ರಿಂಟರ್ಸ್
ಧಾರವಾಡ - ೫೮೦ ೦೦೧.
ದೂರವಾಣಿ : ೨೪೪೪೯೪೮

## *ಅರ್ಪಣೆ*

ಕನ್ನಡ - ಕನ್ನಡಿಗ - ಕರ್ನಾಟಕದ ಹಿತರಕ್ಷಣೆಯ

ಸಾರ್ಥಕ ನೂರಹದಿಮೂರು ವರ್ಷಗಳನ್ನು ಕಂಡ

ಕನ್ನಡ ಕಾರ್ಯ, ಕಾಳಜಿಗಳ ಅನುದಿನದ ಅಂತರಗಂಗೆ

***"ಕರ್ನಾಟಕ ವಿದ್ಯಾವರ್ಧಕ ಸಂಘ"*** ವೆಂಬ

***'ತಾಯಿ'ಗೆ –***

# ಚಿಗುರುವ ಮೊದಲು.....

ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ನಡೆದ ಕಥಾ ಕಮ್ಮಟದಲ್ಲಿ ಪಾಲ್ಗೊಂಡ ಹಿರಿಯರ ಹಾಗೂ ಕಿರಿಯರ ಕಥೆಗಳನ್ನು ಸೇರಿಸಿ ಪ್ರಾತಿನಿಧಿಕ ಕಥಾಸಂಕಲನವೊಂದನ್ನು ಪ್ರಕಟಿಸಲು ನಿರ್ಧರಿಸಿದ ಕಾರಣಕ್ಕಾಗಿ ಹೊರಬರುತ್ತಿರುವ ಬಯಲ ಬೇರ ಚಿಗುರು ಕಥಾಸಂಕಲನದಲ್ಲಿ ಒಟ್ಟು ೪೨ ಕಥೆಗಳಿವೆ. ಆ ಪೈಕಿ ೧೫ ಕಥೆಗಳು ಹಿರಿಯ ಕಥೆಗಾರರ ಸಂಕಲನದಿಂದ ಆಯ್ದಂತಹವು. ಇನ್ನುಳಿದ ೨೭ ಕಥೆಗಳು ಕಥಾಕಮ್ಮಟದಲ್ಲಿ ಪಾಲ್ಗೊಂಡ ಕಿರಿಯ ಕಥೆಗಾರರು ಕಮ್ಮಟದ ಸಂದರ್ಭದಲ್ಲಿ ಹಾಗೂ ಕಮ್ಮಟದ ನಂತರ ಬರೆದಂತಹವು.

ಸಂಕಲನದ ಹಿರಿಯರ ಬಹುಪಾಲು ಕಥೆಗಳು ಕಾಲದ ಒರೆಗೆ ಸಿಕ್ಕು ಶ್ರೇಷ್ಠವೆಂದು ನಿರೂಪಿತವಾದವು. ಅವರ ಹಿಂದಿನ ತಲೆಮಾರಿನ ಕೆಲವರಿಗೆ ಶ್ರೇಷ್ಠತೆಯ ಸರ್ಟಿಫಿಕೇಟು ದಕ್ಕದೇ ಹೋದರೂ ವರ್ತಮಾನದ ಕೈಗನ್ನಡಿಯೆಂದು ನಿರೂಪಿತವಾದವು. ಈಗಾಗಲೇ ಚರ್ಚೆಗೊಡ್ಡಿಕೊಂಡ ಈ ಕಥೆಗಳು ತಮ್ಮೊಳಗಿನ ಸಾಮರ್ಥ್ಯದ ಬಲದಿಂದಾಗಿ ಕಾಲಪ್ರವಾಹದೆದುರು ಮೈಲುಗಲ್ಲಿನಂತೆ ಉಳಿದಿವೆ. ಈ ಕಥೆಗಳು ಬರುವ ದಿನಗಳಲ್ಲಿನ್ನೂ ಚರ್ಚೆಯಾಗುತ್ತಲೇ ಹೋಗುತ್ತವೆ. ಈ ಕಾಲದ ಒಪ್ಪಿತ ಸೂತ್ರ ಹಾಗೂ ಶೈಲಿ ಮತ್ತೊಂದು ಅವಧಿಯಲ್ಲಿ ತಮ್ಮ ಹೊಸತನ ಉಳಿಸಿಕೊಳ್ಳದೇ ಹೋಗಲೂಬಹುದು. ಆದರೆ ಜೀವಪರ ಧೋರಣೆ, ಮಾನವೀಯ ಆಶಯಗಳು ಈ ಸೃಷ್ಟಿಯ ಅಂತಿಮತೆಯವರೆಗೂ ಉಳಿಯುತ್ತವೆ. ಶೈಲಿಯನ್ನು ಮರೆತ ಕ್ಷಣ ಆಶಯಗಳೇ ಪ್ರಧಾನವಾಗಿಯಾದರೂ ಅವುಗಳಿಗೊಂದು ಚಿರಂತನತೆ ಪ್ರಾಪ್ತವಾದೀತು.

ಹಾಗೆ ನೋಡಿದರೆ, ಕೇವಲ ನೂರು ವರ್ಷಗಳ ಇತಿಹಾಸ ಹೊಂದಿರುವ ಕನ್ನಡದ ಸಣ್ಣ ಕಥಾಸಾಹಿತ್ಯ ಪ್ರಕಾರದಲ್ಲಿ ಬಂದ ಬೆಳೆ ಸಣ್ಣ ಪ್ರಮಾಣದ್ದೇನಲ್ಲ. ಆಯಾ ಕಾಲಘಟ್ಟದಲ್ಲಿ ತೆನೆಯೊಡೆದ ಕಥೆಗಳ ಕೃಷಿ ಸಾಮಾಜಿಕ ಪರಿವರ್ತನೆಯ ಆಶಯವನ್ನೇ ಪ್ರಧಾನವಾಗಿಟ್ಟುಕೊಂಡು ಬೆಳೆದಿದ್ದರಿಂದ ಮನರಂಜನೆಯಾಚೆಗೆ ಮೆದುಳಿಗೂ ಕೈಹಾಕಿದವು. ಈ ಶತಮಾನದ ಸಾಮಾಜಿಕ ಬದಲಾವಣೆಯಲ್ಲಿ ಇಂಥ ಕಥೆಗಳ ಕೊಡುಗೆಯೂ ಇದೆ ಎಂಬುದನ್ನು ನಾವಿಲ್ಲಿ ಗಮನಿಸಬೇಕು. ಸಮುದಾಯವನ್ನು ಪ್ರಭಾವಿತಗೊಳಿಸಬಲ್ಲ ತಾಕತ್ತಿರುವ ಕಥೆಗಳ ಪರಿಣಾಮ ಕಂಡದ್ದರಿಂದ ಮತ್ತು ಆ ಪರಿಣಾಮಗಳು ಕಾಲದ ಅಲೆಯಲ್ಲಿ ಸಾಧಿಸಿದ ಫಲಿತಾಂಶಗಳ ಬಗೆಗಿನ ಮನವರಿಕೆಯಿಂದಾಗಿ ಸಣ್ಣ ಕಥೆ ಎಂಬುದನ್ನು ಅಷ್ಟು ಸುಲಭವಾಗಿ ತಳ್ಳಿಹಾಕಲಾಗುವದಿಲ್ಲ.

ಆಯಾ ನೆಲದ ಕಥೆ ಅಲ್ಲಿನ ಪರಂಪರೆಯ, ವಾಸ್ತವದ ಪ್ರತಿಫಲನವೇ ಆಗಿರುತ್ತದೆ. ಈ ಪ್ರತಿಫಲನಕ್ಕೆ ನಾವೆಲ್ಲ ಸೇರಿ ಇಂತಹುದೇ ಪಂಥದ ಬೇಲಿಯೆಂದು ಗುರುತಿಸಿ ಕಂಪೌಂಡು ಕಟ್ಟಬಹುದು. ಹಾಗೆ ನಾವು ಪಂಗಡದ ಗೋಡೆ ಕಟ್ಟಿಕೊಂಡಿದ್ದೇವೆಂದು ತಿಳಿದು ಬೀಗಿದ ಮರುಕ್ಷಣ ಆ ಕಂಪೌಂಡ್ ಗೋಡೆಗಳ ನಡುವಿನ ನೀರು ನೆಲಕ್ಕಿಳಿದು ಮತ್ತೆಲ್ಲೋ ಪ್ರಕಟಗೊಳ್ಳುವಂತೆ ಸಾಹಿತ್ಯದ ಗತಿ. ನೆಲದ ಮೇಲಿನದ್ದು ನೋಟಕ್ಕೆ ದಕ್ಕುವಂತಹುದಾಗಿ ಕಾಣುವ ಈ ಸಂಗತಿ ಹಿಡಿಯ ಹೋದರೆ ತೆಕ್ಕೆಗೆ ನಿಲುಕದ್ದು. ನೆಲದ ಮೇಲಿನ ಹರಿವಿನ ನದಿಗೆ ನೆಲದ ಕೆಳಗೂ ಝರಿಗಳಿರುವಂತೆ, ನಾವರಿಯದ ಸುಳಿಗಳಿರುವಂತೆ ಸಾಹಿತ್ಯಕ್ಕೂ ಅದರದೇ ನಡಿಗೆ ಇದೆ.

ನೀರಿಗೆ ಬಣ್ಣ ಹಾಕಿದಂತೆ ನಮ್ಮ ಸಿದ್ಧಾಂತ. ಕ್ರಾಂತಿಯ ಕೆಂಪು ಬಣ್ಣವೋ, ಕಂದಾಚಾರದ ಕೇಸರಿಯೋ ಎಲ್ಲ ಸರಿ. ಸಾಹಿತ್ಯ ಮುಖ್ಯ. ಅದು ವಾಹಕ. ಈ ವಾಹಕದ ಬಳಕೆ ವಿವೇಚನೆಯ ಮಾತು. ಜನಮುಖೀ ವಿವೇಚನೆ, ಸಮಾನತೆಯ ಸಂಕಲ್ಪವೇ ಪರಮಾದರ್ಶವೆಂದು ನಿರೂಪಿತಗೊಂಡಿದೆ. ಸಾಹಿತ್ಯದ ವಾಹಕವು ಜನಪರವಾಗಿರಬೇಕೆಂಬ ಚಿಂತನೆಯೇ ಈ ಯುಗದ ಮಹತ್ವದ ಮೌಲ್ಯ. ಈ ನಿಖರ ಗೆರೆಯ ಗಡಿಯಾಚೆಗೆ ಮತ್ತು ಈಚೆಗೆ ಎಂಬ ಜಿಜ್ಞಾಸೆ ಹಲವಾರು ಬಾರಿ ಮೂಡಿದೆ. ಈ ಜಿಜ್ಞಾಸೆ ಕೂಡ ಜೀವಂತಿಕೆಯ ಲಕ್ಷಣ. ಈ ಜಿಜ್ಞಾಸೆಯಿಂದಾಗಿ ಸಂವಾದವೇರ್ಪಟ್ಟು, ಈ ಸಂವಾದದಲ್ಲಿ ಯಾರು ಬೇಕಾದರೂ ಭಾಗಿಯಾಗಲು ಸಾಧ್ಯವಾದದ್ದು ಮತ್ತೊಂದು ಮಹತ್ವದ ಅಂಶ.

ಯಾವುದೋ ಕಾಲದ ನಿರೂಪಿತ ಸಿದ್ಧಾಂತವೇ ಸಂವಿಧಾನದಂತಾಗಿ ಹಲವರ ಕೊರಳಿಗೆ ಉರುಳಾಗಿ ಮತ್ತುಳಿದ ಕೆಲವರಿಗೆ ಕಿರೀಟವಾಗುಳಿದ ಮೌಲ್ಯಗಳ ಮೂಲೋತ್ಪಾಟನೆಯ ಮಹಾ ವಿಚಾರಸಂಗ್ರಾಮದಲ್ಲಿ ಕಥೆ ಕಾವ್ಯವೆಂದು ನಾವೇನೇ ವಿಂಗಡಿಸಿದರೂ ಈ ಎಲ್ಲದರ ಉದ್ದೇಶ ಯುಗಪರಿವರ್ತನೆ. ಹಾಗಾಗಿ ಇಲ್ಲಿರುವ ಯಾವುದನ್ನೂ ನಾವು ಅಲ್ಲಗಳೆಯುವಂತಿಲ್ಲ.

ಈ ಶತಮಾನದ ಹಾದಿಯಲ್ಲಿ ಕನ್ನಡದ ಹಲವು ಮಹನೀಯರ ಕಥನ ಸಾಹಿತ್ಯದ ಆಶಯಗಳು ಕಾಲಕ್ರಮೇಣ ಸರ್ಕಾರದ ಕಾಯ್ದೆಗಳಾದವು. ಪುಸ್ತಕದ ಆದರ್ಶವೆಂದುಕೊಂಡು ಮೂಗು ಮುರಿದವರೇ ಬೆಚ್ಚಿ ಬೀಳುವಂತೆ ಅವೇ ಸಾಮಾಜಿಕ ವಾಸ್ತವಗಳಾದವು. ಲಂಕೇಶ್‌ರ 'ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ'ಯ ಉಮಾಪತಿ ಮುಂದೆ ವಾಸ್ತವದಲ್ಲಿ ಸ್ಕಾಲರ್‌ಶಿಪ್‌ಗಾಗಿ ಹುಡುಕುವಂತಾಗಲಿಲ್ಲ. ಅವರ 'ಕಲ್ಲು ಕರಗುವ ಸಮಯ'ದ ಕಥಾನಾಯಕನ ಮದುವೆಗೆ ಸರ್ಕಾರವೇ ಜೊತೆಗೂಡಿ ನಿಲ್ಲುವ ಕಾಯ್ದೆ ಬಂದಿತು. ಯಾರೋ ಕನಸು ಕಂಡ ಗೇಣಿದಾರನ ಭೂಮಾಲೀಕತ್ವ ನನಸೂ ಆಯಿತು. ಈ ಕಥೆಗಳ ಪರಿಣಾಮದಲ್ಲಿ ಕಥೆ ಸಾಮಾಜಿಕ ಪರಿವರ್ತನೆಯ ಮಾತನ್ನೇ ಮುಖ್ಯವಾಗಿಟ್ಟುಕೊಂಡು ಹೇಳುವುದಿಲ್ಲ. ಮನುಷ್ಯರ ವೈಯಕ್ತಿಕ ಬದುಕಿನ ಗತಿ ಸ್ಥಿತಿಗಳಲ್ಲಿ ಆದ ಮಾರ್ಪಾಡುಗಳೂ ಸಹ ಪರಿವರ್ತನೆಯ ಆಶಯವನ್ನೇ ಹೇಳುತ್ತವೆ.

ಹೀಗೆಂದ ಮಾತ್ರಕ್ಕೆ ಎಲ್ಲವೂ ಸಾಹಿತ್ಯದಿಂದಲೇ ಆಯಿತೆಂದು ನಾನು ಹೇಳುವದಿಲ್ಲ. ಏನೆಲ್ಲ ಆಗಿದ್ದುದರಲ್ಲಿ ಸಾಹಿತ್ಯದ್ದು ಗಮನಾರ್ಹ ಪಾತ್ರವೆಂಬುದು ಸುಳ್ಳಲ್ಲ. ಈ ದಿಕ್ಕಿನಲ್ಲಿ ಕಥಾ ಪ್ರಕಾರವು ಕೂಡ ಪ್ರಮುಖವಾದದ್ದು. ಕಥೆಯನ್ನು ಬೆಳೆಸುವಲ್ಲಿ ಬಲಗೊಳಿಸುವಲ್ಲಿ ಶ್ರಮಿಸಿದ ಆಯಾ ಕಾಲದ ಪ್ರಗತಿಶೀಲ ಚಿಂತನೆಯ ಕಥೆಗಾರರಿಗೆ ಧನ್ಯವಾದಗಳನ್ನು ಹೇಳುತ್ತ ವರ್ತಮಾನದಲ್ಲಿ ಕಥಾಪ್ರಕಾರ ಸೊರಗಿದಂತೆನ್ನಿಸಿ ಕಥಾಪ್ರಕಾರ ಬಲಗೊಳಿಸುವ ಆ ನಿಟ್ಟಿನಲ್ಲಿ ಸಂವಾದವೇರ್ಪಡಿಸುವ ಅಳಿಲು ಪ್ರಯತ್ನವೆಂದು ಕರ್ನಾಟಕ ವಿದ್ಯಾವರ್ಧಕ ಸಂಘ ಕಥಾ ಕಮ್ಮಟ ಹಮ್ಮಿಕೊಂಡಿತ್ತು.

ಡಾ. ಪಾಟೀಲ ಪುಟ್ಟಪ್ಪನವರ 'ಶಿಲಾಬಾಲಿಕೆ ನುಡಿದಳು' ಕಥೆಯಿಂದ ಹಿಡಿದು ಪಿ.ಯು.ಸಿ. ವಿದ್ಯಾರ್ಥಿನಿ ಸುಮಾ ಜೋಶಿ ಅವರ 'ದೈವದ ಚಿತ್ತಾರ' ಕಥೆಯವರೆಗೆ ಇಲ್ಲಿ ಬೇರೆ ಬೇರೆ ಚಿಂತನೆಯ ಬೇರೆ ಬೇರೆ ವಯೋಮಾನದವರ ಕಥೆಗಳಿವೆ. ಇಲ್ಲಿರುವ ಎಲ್ಲ ಕಥೆಗಳ ಬಹು ಮುಖ್ಯ ಲಕ್ಷಣ ಆ ಕಥೆಗಳ ಹಿಂದಿನ ಸಾಮಾಜಿಕ ಕಳಕಳಿ ಮತ್ತು ಪರಿವರ್ತನೆಯ ಪ್ರಜ್ಞೆ. ಕಥೆಯೆಂಬುದು ಮನರಂಜನೆಯ ಮಾತಾಗದೆ ಹೊಸದೇನಾದರು ಹೇಳಬೇಕು ಮತ್ತು ಹಾಗೆ ಹೇಳುವಂತಹುದು ಪ್ರಗತಿಗೆ ಪೂರಕವಾಗಿರಬೇಕು ಎಂಬ ಆಲೋಚನೆಯೇ ಮಹತ್ವದ ಸಂಗತಿ.

ವಿಮರ್ಶಕರೆಂದು ಖ್ಯಾತರಾದ ಪ್ರೊ. ಕೀರ್ತಿನಾಥ ಕುರ್ತಕೋಟಿ ಕೂಡ ತಮ್ಮ ಬದುಕಿನ ಆರಂಭ ಕಾಲದಲ್ಲಿ ಕಥೆ ಬರೆದವರೇ. ೧೯೫೫ರ ಪ್ರಜಾವಾಣಿ ದೀಪಾವಳಿ ವಿಶೇಷಾಂಕದ ಕಥಾ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಪಡೆದ ಅವರ 'ಬಯಲಾಟ' ಕಥೆ ಮೊಟ್ಟ ಮೊದಲ ಬಾರಿಗೆ ಈ ಸಂಕಲನದಲ್ಲಿ ಪ್ರಕಟಗೊಳ್ಳುತ್ತಿದೆ. ಸಂಕಲನದಲ್ಲಿಯೇ ಅತ್ಯಂತ ಸಣ್ಣಕಥೆ ಸುಬ್ಬು ಹೊಲೆಯಾರ್‌ರವರ 'ದನ ಕಾಯದವನು'. ಕಥೆ ಸಣ್ಣದಾದರೂ ಹೇಳುವ ಹರವು ದೊಡ್ಡದು. ಡಾ. ಗಿರಡ್ಡಿ ಗೋವಿಂದರಾಜರ ಹೆಸರಾಂತ 'ಒಂದು ಬೇವಿನ ಮರದ' ಕಥೆ ಇಲ್ಲಿದೆ. ಡಾ. ಗಿರಡ್ಡಿಯವರ ಒಂದು ಬೇವಿನ ಮರ.........ಕ್ಕೆ ಬೇರೆ ಬೇರೆ ಆಯಾಮಮುಗಳಿವೆ. ಅದು ಪರಿಸರದ ಪಡಿಪಾಟಲವನ್ನು ಹೇಳುವಂತೆ ಹಳ್ಳಿಯೊಂದರ ಸಾಮಾಜಿಕ ಮೌಲ್ಯಗಳ ಸ್ಥಾನ ಪಲ್ಲಟತೆಯನ್ನೂ ಹೇಳುತ್ತದೆ. ಹಾಗಾಗಿಯೆ ಆ ಕಥೆಗೆ ಸಾರ್ವಕಾಲಿಕತೆ ಲಭ್ಯವಾಗಿದೆ.

ರವಿ ಬೆಳೆಗೆರೆಯವರ 'ಭ್ರೂಣ ಸಂಭಾಷಣೆ' ವಾಸ್ತವತೆಯನ್ನು ಬಿಚ್ಚಿಕೊಳ್ಳುತ್ತಲೇ ನಾವೆಲ್ಲ ತೊಟ್ಟುಕೊಂಡ ಹುಸಿಮುಖವಾಡಗಳ ಅನಾವರಣ ಮಾಡುತ್ತದೆ. ಡಾ. ಜಿ. ಎಸ್. ಅಮೂರರ ಫ್ಯಾಂಟಸಿ ಮೂಲಕ ಕಥೆ ಹೇಳುವ ವಾದವನ್ನು ಬಹುಪಾಲು ಹೋಲುವ 'ಭ್ರೂಣ ಸಂಭಾಷಣೆ' ಅವಾಸ್ತವ ನೆಲೆಯಿಂದ ವಾಸ್ತವವನ್ನು ಬಿಚ್ಚಿಡುವ ಪ್ರಯತ್ನ. ಸಿದ್ಧಲಿಂಗ ದೇಸಾಯಿ ಕವಿ, ನಾಟಕಕಾರರಾಗಿಯೇ ಪರಿಚಿತರು. ಇಪ್ಪತ್ತೈದು ವರ್ಷಗಳ ಹಿಂದೆಯೇ ಪ್ರಜಾವಾಣಿಯಲ್ಲಿ ಪ್ರಕಟಗೊಂಡ ಅವರ ಕಥೆ 'ನಾ ಇನ್ನೂ ಸತ್ತಿಲ್ಲ' ಈಗಲೂ ಪ್ರಸ್ತುತ. ವೈಯಕ್ತಿಕ ಆಯ್ಕೆಯಲ್ಲದ, ಅನಿವಾರ್ಯವಾದ ದಾಂಪತ್ಯದ ದುರಂತ ಹೇಳುವ 'ನಾ ಇನ್ನೂ ಸತ್ತಿಲ್ಲ' ಕಥೆಯಲ್ಲಿ ಸ್ಥಳೀಯ ಭಾಷೆಯ ಬಳಕೆಯನ್ನು ಗಮನಿಸಬೇಕಾಗಿದೆ.

'ಬಿಡುಗಡೆ' ಕಥೆಯಲ್ಲಿ ಬಿಡುಗಡೆಗಾಗಿ ಅಲೆದಾಡುವ ಕಥಾನಾಯಕನ ಸಾವಿನ ನಂತರವೂ ಬಿಡುಗಡೆ ದಕ್ಕದ ಘಟನೆಯನ್ನು ಬಣ್ಣಿಸುವ ಅಬ್ದುಲ್ ರೆಹಮಾನ್ ಹೊಸಬರೆನ್ನಿಸುವದಿಲ್ಲ. ಆದರೆ ಹೊಸಬರೆನ್ನುವ ಲಕ್ಷಣ ತೋರುವ ಹಜರೇಸಾಬ ನದಾಫ 'ನಾವು ಮಾಡಿದ ತಪ್ಪು' ಕಥೆಯ ಮೂಲಕ ಹುಬ್ಬಳ್ಳಿಯ ಸುತ್ತಲಿನ ಗ್ರಾಮೀಣ ಪರಿಸರ ತೋರುತ್ತಾರೆ. ಅವರು ನೋಡುವ ನೋಟಕ್ಕೆ ದಕ್ಕದೇ ಹೋದ ವಿವರಗಳಿಲ್ಲ. ಗ್ರಾಮೀಣ ಬದುಕು ಶಹರದೆಡೆಗೆ ಸಾಮೂಹಿಕ ವಲಸೆ ಹೊರಡುತ್ತಿರುವ ಸಂಗತಿ, ಗ್ರಾಮ ಭಾರತದ ಅಡಿಪಾಯ ಶಿಥಿಲಗೊಂಡಿರುವ ಎಚ್ಚರಿಕೆಯಾಗಿದೆ. 'ತಣ್ಣೀರು' ಕಥೆಯ ಶಬ್ಬೀರ್ ಅಹ್ಮದ್ ಮಡಕಿ ಸಾವಿನೆದುರು ಕ್ಷುಲ್ಲಕವೆನ್ನಿಸುವ ಜಾತಿ ಪ್ರಶ್ನೆಯ ಬಗ್ಗೆ ಹೇಳಿದರೆ, ಖುರ್ಷಿದ್ ಆಲಂ ಮೋಮೀನ್ 'ಇದೆಂಥ ಅದೃಷ್ಟ'ದಲ್ಲಿ ಅಂಗೈಗೆ ಬಂದ ತುತ್ತು ಬಾಯಿಗೆ ಬಾರದೇ ಹೋದ ಬಗ್ಗೆ ಹಳಹಳಿಸುತ್ತಲೇ ಬದುಕೊಂದರ ಖಾಸಗಿ ದುರಂತ ಬಣ್ಣಿಸುತ್ತಾರೆ. ಅದು ಸಾಮಾಜಿಕ ದುರಂತವೂ ಆಗಿದೆ.

'ಕುರುರಾಯನಿದನೆಲ್ಲ ಕಂಡು' ಕಥೆಯ ಜಿ. ಯೋಗೀಶ್ ಹಾಗೂ 'ನಗ್ನಸತ್ಯ' ಕಥೆಯ ಪ್ರಸನ್ನ ಬೆನ್ನೂರ ಹೇಳುವ ಲೋಕವೇ ಬೇರೆ ಇದ್ದರೂ ಇಬ್ಬರೂ ಬಳಸಿಕೊಂಡ ಅಥವಾ ದುಡಿಸಿಕೊಂಡ ಸ್ಥಳೀಯತೆ ಬೆರಗು ಮೂಡಿಸುತ್ತದೆ. 'ಅಂಬಿಗ' ಕಥೆಯ ಅಂಜನಾ ಹೆಗಡೆ ತಲೆಯೆತ್ತಿದ ಸ್ತ್ರೀವಾದದ ಸಂಕೇತವಾದರೆ 'ಸ್ಕ್ರಿಪ್ಟ್' ಕಥೆಯ ಎಂ. ಜೆ. ಪದ್ಮಿನಿ ವೇದಿಕೆ ಮೇಲಿನ ಸೋಗಲಾಡಿತನವನ್ನು ಕುಟುಕುತ್ತಾರೆ. ಮುಳುಗಡೆಯ ಸಂಕಟ ಸೂತಕಗಳನ್ನು ಸುನಂದಾ ಹಾಲಭಾವಿ ತಮ್ಮ 'ಚೆನ್ನೀಮನೆ' ಕಥೆಯಲ್ಲಿ ಬಿಡಿಸಿಟ್ಟರೆ ಡಾ. ಚಿತ್ರಾ ದೈಜೋಡೆ ತಮ್ಮ 'ಕುಸುಮ' ಕಥೆಯಲ್ಲಿ ಬೇರೊಂದು ಸಿದ್ಧಾಂತ ಮಂಡಿಸುತ್ತಾರೆ. ಹೆಣ್ಣು ಗಂಡಿನ ನಡುವಿನ ಸಂಬಂಧಕ್ಕಿಂತ ಸಾಹಚರ್ಯವೇ ಪ್ರಮುಖವೆಂದು ಹೇಳುವ ಡಾ. ಚಿತ್ರಾ ಕಟ್ಟಿಕೊಂಡ ಕಥೆಯ ಹಂದರವೇ ಹೊಸ ಬಗೆಯದು.

'ಎಲ್ಲಿದ್ದರೇನಂತೆ' ಕಥೆಯ ಸಂಕೇತ ಪಾಟೀಲ ಕಥೆಯುದ್ದಕ್ಕೂ ಸಂಕೇತಗಳನ್ನು ತೋರುತ್ತ ತಮ್ಮ ಹೆಸರು ಸಂಕೇತ ಎಂಬದನ್ನು ಸಾರ್ಥಕಪಡಿಸಿಕೊಂಡಿರಬಹುದು. ಈ ಸಂಕೇತಗಳ ನಡುವೆಯೇ ಅರಳಿಕೊಳ್ಳುವ ಕಥೆಯ ಸೊಗಸುಗಾರಿಕೆಗೆ ಕಥೆಗಾರನ ಜಾಣ್ಮೆಗೆ ಮನಸೋಲುತ್ತದೆ. ತಲೆಬರಹ ಇಲ್ಲದ ವೀಣಾ ಕುಲಕರ್ಣಿಯವರ ಕಥೆ, ಕಥೆಯೊಂದರ ಆರಂಭವಿದ್ದೀತು ಅಥವಾ ಮುಗಿಯದ ಕಥೆಯ ಮಧ್ಯಂತರವಿದ್ದೀತು. ಆದರೆ ಕಥನದ ಸೊಬಗು ಗಮನಿಸುವಂತಹುದು. 'ಯುಗಾದಿ' ಕಥೆಯ ಎಸ್. ಎಚ್. ರೆಡ್ಡಿ ಹರಡಿಕೊಂಡ ವಿಶಾಲ ಕಥೆಯ ಕ್ಯಾನ್ವಾಸ್‌ನಲ್ಲಿ ಬೇಗ ಬೇಗ ಹೇಳುವ ಧಾವಂತದಲ್ಲಿ ತಾವೇ ಸಿಕ್ಕಿ ಬಿದ್ದಂತಿದ್ದಾರೆ. 'ದ್ಯಾವಪ್ಪನ ದುನಿಯಾದ' ಕೆ. ಸಿದ್ರಾಮ ಆಧುನಿಕ ದಲಿತ ವಿಚಾರವನ್ನು ತಮ್ಮ ಪಾತ್ರಗಳ ಮೂಲಕ ಮಾತನಾಡಿಸುವದನ್ನೇ ಕಥೆಯೆಂದು ತಿಳಿದುಕೊಂಡಂತಿದ್ದಾರೆ. 'ಕೊಲೆಯ ಕೈವಾಡ' ಕಥೆಯ ಸುಕುಮಾರ ಸಿಮಾನಿ,

'ಕಂಬನಿ ಒರೆಸಿದ ಕೈ' ಕಥೆಯ ಸರೋಜಾರಾವ್, 'ಕನಸುಗಳ ಗೂಡಿಗೆ ಬಿದ್ದ ಬೆಂಕಿ'ಯಲ್ಲಿ ವಿಜಯ ಕಾಂಬಳೆ 'ಹಳೇಮರ'ದಲ್ಲಿ ಲಕ್ಷ್ಮಣ ಧೋಂಡೆ ಗ್ರಾಮೀಣ ಪರಿಸರದ, ಅದೂ ದಲಿತ ವಲಯದ ಸಮಸ್ಯೆಗಳನ್ನೆಲ್ಲ ಆಯ್ದುಕೊಂಡಿದ್ದಾರೆ. 'ನಿರ್ಧಾರ' ಕಥೆಯಲ್ಲಿ ನೈತಿಕತೆಯ ಪ್ರಶ್ನೆಯೇ ಬಹುಮುಖ್ಯವಾಗಿ ಕೊನೆಗೂ ನೈತಿಕತೆಯನ್ನೇ ಒಪ್ಪಿಕೊಳ್ಳುವ ಸುಖಾಂತದಿಂದಾಗಿ ಕೆ. ಜಿ. ಭದ್ರಣ್ಣವರ ಪಾತ್ರಗಳನ್ನು ಚೆನ್ನಾಗಿ ದುಡಿಸಿಕೊಂಡಿದ್ದಾರೆ.

❖ ❖ ❖

ಕಥೆ, ಕಥೆಯಾಗಿಯೆ ಇರಬೇಕು. ಕಲಾತ್ಮಕತೆಯು ಕಥೆಯ ಪ್ರಮುಖ ಅಂಶವಾಗಿರಬೇಕು. ಹಾಗೆಯೆ ಕಥೆಯೆಂಬುದು ವರದಿಯೋ, ಭಾಷಣವೋ ಆಗಿರಬಾರದು ಎಂದು ನಾನು ಖಚಿತವಾಗಿ ನಂಬಿಕೊಂಡವನು. ಕಥೆಯಾಗಲಿ, ಕಾವ್ಯವಾಗಲಿ, ಯಾವುದೇ ಪ್ರಕಾರದ ಕಲೆಯಾಗಲಿ ಯಾವುದೂ ಗಣಿತದಂತೆ ನಿಶ್ಚಿತ ಸೂತ್ರಕ್ಕೆ ಬದ್ಧವಲ್ಲವಾದ ಕಾರಣ ಪ್ರತಿಯೊಬ್ಬ ಕಥೆಗಾರನೂ ತನ್ನ ಕ್ರಿಯಾಶೀಲತೆಯ ಕುಸುರಿ ಕೆಲಸದಲ್ಲಿ ಹೊಸ ದಾರಿ ಹಿಡಿಯಲಿ ಎಂಬ ನಂಬಿಕೆ ನನ್ನದು.

ಬಹುಶಃ ಈ ಕಾಲಘಟ್ಟದಲ್ಲಿ ಅಬ್ಬರದ ಚರ್ಚೆಗಳು, ಮುಗಿಲು ಮುಟ್ಟುವ ಘೋಷಣೆಗಳು, ಯಾವುದೋ ಪ್ರತೀಕಾರಕ್ಕೆಂದು ಹೊರಟ ಪಂಥ - ಪಂಗಡಗಳ ಜಾತ್ರೆಗಳ ನಂತರ ಕವಿದುಕೊಂಡ ಪರಸ್ಪರ ಅಪನಂಬುಗೆಗಳು ಹಾಗೂ ಸಾಹಿತ್ಯದ ಸಾಮೂಹಿಕ ಬೇಸಾಯದ ನಡುವೆ ಮಾರು ಮಾರಿಗೆ ಹುಟ್ಟಿಕೊಂಡ ಸಾವಿರಾರು ಕಂಪೌಂಡ್ ಗೋಡೆಗಳು, ಬರೆಯ ಹೊರಟವನನ್ನೇ ತಬ್ಬಲಿಯಾಗಿಸಿದ ಸ್ಥಿತಿಯಲ್ಲಿನ್ನೂ ಹುಸಿ ಬೌದ್ಧಿಕ ಕಸರತ್ತಿಗೆ ಹೆಣಗುತ್ತ ಪದಪುಂಜದಲ್ಲಿ ಮತ್ತೆ ಮತ್ತೆ ಕಳೆದುಕೊಳ್ಳುವುದಕ್ಕಿಂತ ತೆರೆದ ಹೃದಯಗಳಿಂದಲೇ ಸಂವಾದಿಸಬೇಕಾಗಿದೆ.

ನೂರು ವರ್ಷದ ಕನ್ನಡ ಕಥಾ ಸಾಹಿತ್ಯಕ್ಕೆ ಸೂಕ್ತ ವಿಮರ್ಶೆ ದೊರೆಯದೇ ಹೋದದ್ದು ದುರಂತ. ವಿಮರ್ಶಕರೆನಿಸಿಕೊಂಡವರಲ್ಲಿ ಕೆಲವರಿಗೆ ಪಾಶ್ಚಿಮಾತ್ಯ ಸಾಹಿತ್ಯದ ಹ್ಯಾಂಗೋವರ್ ಇದ್ದರೆ, ಕೆಲವರಿಗೆ ಸನಾತನದ ಕಾಮಾಲೆ. ಕಂಡದ್ದೆಲ್ಲ ಹಳದಿ. ಪಾಶ್ಚಿಮಾತ್ಯ ವಿಮರ್ಶೆಯ ಮಾನದಂಡ ಹಿಡಿದವರಿಗೆ ಹಲಬಗೆಯ ಬಣ್ಣಗಳು. ಆನೆ ಬಣ್ಣಿಸಿದ ಕುರುಡರ ಕಥೆಯಂತೆ ವಿಮರ್ಶೆಯ ಕಾಂಟ್ರಾಕ್ಟರುಗಳು ತಮಗೆ ತೋಚಿದಂತೆ, ತಾವೊಪ್ಪಿಕೊಂಡ ನಿಲುವಿನಂತೆ ವಿಮರ್ಶೆ ಮಾಡಲು ಹೆಣಗಿದರೇ ವಿನಃ ಯಾವ ವಿಮರ್ಶೆಯೂ ಪರಿಪೂರ್ಣವೆನಿಸಲಿಲ್ಲ. ಭಾರತೀಯ ಮೂಲದ ಸಮಸ್ಯೆಗಳೇ ಬೇರೆ. ಭಾರತೀಯವಲ್ಲದ ಮೂಲಗಳಲ್ಲಿ ಕಂಡುಕೊಂಡ ಸಮಸ್ಯೆಗಳೇ ಬೇರೆ.

ಹೊಸ ಸಹಸ್ರಮಾನದ ತೆರೆದ ಬಾಗಿಲಿನೆದುರು ನಾವಿದ್ದೇವೆ. ನಮ್ಮ ಬೆನ್ನ ಹಿಂದೆ ಸಣ್ಣ ಕಥೆಗಳ ಪಾಲಿಗೆ ಒಂದು ಶತಮಾನದ ಇತಿಹಾಸವಿದೆ. ಅದಕ್ಕೂ ಮೊದಲು ಕಥೆ

ಇರಲಿಲ್ಲವೆಂದಲ್ಲ. ಕಾವ್ಯ ಪುಟಗಳು ಬಣ್ಣನೆಯಿಂದ ತುಂಬಿದ್ದರೂ ಅವೆಲ್ಲವುಗಳ ಉದ್ದೇಶ ಕಥೆ ಹೇಳುವುದೇ ಆಗಿತ್ತು. ಜನಪದೀಯ ಕಥೆಗಳೂ ಇದ್ದವು. ಈಗ ನಾವು ನಂಬಿಕೊಂಡ 'ಕಥೆ' ಮಾತ್ರ ನೂರು ವರ್ಷದ ಆಯುಷ್ಯ ಕಂಡು ದಶಕದಿಂದ ದಶಕಕ್ಕೆ ಭಿನ್ನ ಸ್ಥರ, ಭಿನ್ನ ಸ್ವರ, ಭಿನ್ನ ನುಡಿಗಟ್ಟು, ಭಿನ್ನ ಹಂಬಲಗಳ ಹೊತ್ತು ನಮ್ಮೆದುರು ನಿಂತಿವೆ. ನೂರು ವರ್ಷದುದ್ದಕ್ಕೂ ಜಾತಿ ಸಮಸ್ಯೆ, ಪಾರತಂತ್ರ್ಯ, ನಿರುದ್ಯೋಗ, ಬಡತನ, ವೈಯಕ್ತಿಕತೆಯ ಹುಡುಕಾಟದಂತಹ ಸಂಗತಿಗಳಿಂದ ಹಿಡಿದು ಸಾಮಾಜಿಕ ಹೋರಾಟಗಳೇರ್ಪಡುವಲ್ಲಿ ಚಳುವಳಿಗಾರಿಕೆಯನ್ನು ಸಾಧಿಸಿದೆ.

ಆದರೂ ಈ ಸಂದರ್ಭದಲ್ಲಿ ಪ್ರಮುಖ ಕಥೆಗಾರ ಕುಂ. ವೀರಭದ್ರಪ್ಪನವರ ಮಾತನ್ನು ಹೇಳಿಕೊಳ್ಳುತ್ತಲೇ ಮುಂದುವರೆಯೋಣ. ಕುಂ. ವೀ. ಪ್ರಕಾರ 'ಪ್ರಾಚೀನ ಕಾಲದಿಂದಲೂ ಸಣ್ಣ ಕಥೆಯೇ ಅತ್ಯಂತ ಜನಪ್ರಿಯ ಸಾಹಿತ್ಯದ ಪ್ರಕಾರ. ನಿಯತಕಾಲಿಕೆಗಳಿಲ್ಲದಿದ್ದರೆ ಕಥಾ ಪ್ರಕಾರ ಹುಲುಸಾಗಿ ಬೆಳೆಯುತ್ತಿರಲಿಲ್ಲವೇನೋ ! ಕಾವ್ಯಕ್ಕಿರುವ ಒಂದು ಶಿಸ್ತು ಸಣ್ಣ ಕಥೆಗಿಲ್ಲ. ಕಾವ್ಯಕ್ಕೆ ಸಿಕ್ಕಷ್ಟು ರಾಜಮನ್ನಣೆ, ವಿಮರ್ಶಾ ಮನ್ನಣೆ ಕಥೆಗೆ ದೊರೆತಿಲ್ಲ. ಅಲ್ಲದೆ ಕಥೆಗೆ, ಕಥೆ ಬರೆಯುವವರಿಗೆ ಒಂದು ನಿರ್ದಿಷ್ಟ ನೀತಿ ಸಂಹಿತೆ ಇಲ್ಲ. ಆದ್ದರಿಂದ ಒಂದು ಕಥೆಯನ್ನು ಯಾರು ಹೇಗಾದರೂ ಬರೆದುಬಿಡಬಹುದೆನ್ನುವಷ್ಟರ ಮಟ್ಟಿಗೆ ಅಡ್ಡಾದಿಡ್ಡಿ ಬೆಳೆದುಬಿಟ್ಟಿದೆ. ಕಾವ್ಯವನ್ನು ಕುವೆಂಪು, ಬೇಂದ್ರೆ, ಅಡಿಗರಂಥವರು ಕೈ ಹಿಡಿದು ನಡೆಸಿ ಅದಕ್ಕೊಂದು ಸಂಸ್ಕಾರ ಕೊಟ್ಟರು. ಕಥಾ ಪ್ರಕಾರಕ್ಕೆ ಮಾಸ್ತಿಯಂಥವರೇನೋ ಇದ್ದರು. ಅವರೂ ಹುಲುಸಾಗಿ ಬರೆದರು. ಆದರೆ, ಅವರು ಒಂದು ಪರಂಪರೆಯ ನಿರ್ಮಾಣಕ್ಕೆ ಕಾರಣರಾಗಲಿಲ್ಲ. ಅಷ್ಟು ಹೊತ್ತಿಗಾಗಲೇ (ಸಣ್ಣ ಕಥೆ) ರಚನಾಶಾಸ್ತ್ರದ ಎಲ್ಲೆಗಳನ್ನು ದಾಟಿ ಬರವಣಿಗೆ ಹಲವರಿಗೆ ದಕ್ಕಿ ಜನಪ್ರಿಯ ಕಥೆಗಾರರು ಓತಪ್ರೋತವಾಗಿ ಹುಟ್ಟಿಬಿಟ್ಟಿದ್ದರು...' ಈ ಹೇಳಿಕೆಯ ಆಚೆ ಮತ್ತು ಈಚೆಗೆಯೇ ಕನ್ನಡ ಕಥಾ ಸಾಹಿತ್ಯದ ಹರವು ಇದ್ದುದರಿಂದ ಈ ಮಾತನ್ನೇ ಮಧ್ಯಬಿಂದುವಾಗಿಟ್ಟುಕೊಂಡು ಮುಂದುವರಿಯಬಹುದೇನೋ....

ಕುಂ.ವೀ. ಮಾತಿನ ಮಧ್ಯಬಿಂದುವಿನಾಚೆ, ಅಂದರೆ 'ಕಥೆ' ಹುಟ್ಟಿಕೊಂಡ ಪ್ರಥಮದಲ್ಲಿಯೆ ಕೊಡಗಿನ ಗೌರಮ್ಮನವರು ತಮ್ಮ ಕಥೆಗಳ ಮೂಲಕ ೩೦ ರ ದಶಕದಲ್ಲಿಯೆ ವರದಕ್ಷಿಣೆ ಸಮಸ್ಯೆಗಳನ್ನು, ಹೆಣ್ಣಿನ ಅಂತರಂಗದ ತಲ್ಲಣಗಳನ್ನು ಕಥಾರೂಪದಲ್ಲಿ ಹಿಡಿದಿಟ್ಟಿದ್ದರು. ಶೈಲಿಯ ವಿಷಯವನ್ನು ಬದಿಗಿರಿಸಿ ನೋಡಿದರೆ ಕೊಡಗಿನ ಗೌರಮ್ಮನವರ ಕಥೆಗಳು ಇಂದಿಗೂ ಪ್ರಸ್ತುತ. ಮಹಿಳೆಯರ ಕಥೆಗಳ ವಿಷಯದಲ್ಲಿ ಮಾತನಾಡುವುದಾದರೆ ಸಂಸ್ಕೃತಿ, ಸಂಪ್ರದಾಯ, ಪರಂಪರೆಯ ಚೌಕಟ್ಟಿನಲ್ಲಿಯೆ ಗೌರಮ್ಮ ಯಾವುದೇ ಸಿದ್ಧಾಂತಗಳ ಅಬ್ಬರವಿಲ್ಲದೆಯೆ 'ಸ್ತ್ರೀ'ಯನ್ನು ಪರಿಚಯಿಸಿದ್ದರು. ನಂತರ ವಾಣಿ, ತ್ರಿವೇಣಿಯವರೂ ಕಥೆ ಬರೆದರು.ಆ ಸಂದರ್ಭಕ್ಕೆ ರಂಜನೀಯವಾಗಿ ಕಥೆ ಹೇಳುವ ಮನೋರಂಜನಾ ಮಾದರಿಯ ಕಥೆಗಳಿದ್ದವು. ರಾಜಲಕ್ಷ್ಮಿ ಎನ್. ರಾವ್ ಕಥೆಗಳೂ ಆ ಕಾಲದ ಪ್ರಮುಖ ಕಥೆಗಳು.

ಸುಗಮ ಮಾದರಿ ಕಥೆಗಳು ಆರ್ತದನಿಯಲ್ಲಿ ಹೆಣ್ಣಿನ ಬದುಕಿನ ಬಗ್ಗೆ ಮಾತನಾಡಿದರೆ ಡಾ. ವೀಣಾ ಶಾಂತೇಶ್ವರರವರು 'ಸ್ತ್ರೀವಾದ' ಎನ್ನುವುದಿನ್ನೂ ಪ್ರಚಲಿತವಿರದ ಆ ದಿನಗಳಲ್ಲಿ ಪುರುಷ ಸಮಾನ ಚಿಂತನೆಯಿಂದಾಗಿ, ಪರಂಪರಾಗತ ರೂಢಿ ಮೌಲ್ಯಗಳನ್ನೆಲ್ಲ ಬುಡಮೇಲು ಮಾಡಿದ ಕ್ರಾಂತಿಕಾರಿಯಂತೆ ಕಂಡರು. ಅವರ ಕಥೆಗಳ ಸ್ತ್ರೀ ಪಾತ್ರಗಳು, ಮತ್ತವುಗಳ ಹಿಂದಿನ ಆಲೋಚನೆ ಜಡಗಟ್ಟಿದಂತಿದ್ದ ಪುರುಷ ಪ್ರಧಾನ ಮೌಲ್ಯಗಳನ್ನು ಜೊತೆಗೆ ಸಾಹಿತ್ಯಿಕ ಮೌಲ್ಯಗಳನ್ನೂ ಮರುಪರಿಶೀಲನೆ ಮಾಡಿದವು.

ನೋವು ಸಂಕಟಗಳೆಲ್ಲ, ಶ್ರೇಷ್ಠ ಜಾತಿಯ ಹುಟ್ಟಿನಿಂದ ಮಾತ್ರವೇ ಇಲ್ಲವಾಗಿ ಬಿಡುತ್ತವೆ. ಅದೇನಿದ್ದರೂ ಕೆಳಜಾತಿಗಳಲ್ಲಿ ಮಾತ್ರ ಎಂದು ಭ್ರಮಿಸುವವರನ್ನು ಕ್ಷಣಕಾಲ ಮರುವಿಚಾರ ಮಾಡುವಂತೆ ಕಥೆಗಳನ್ನು ನೀಡಿದ ಸುನಂದಾ ಬೆಳಗಾಂವಕರ ಒಂದು ಕಡೆಯಾದರೆ, ಇನ್ನೊಂದೆಡೆ ಶಿಷ್ಟ ಮಹಿಳೆಗಿಂತ ಗ್ರಾಮ ಮೂಲಕ ಅನಕ್ಷರಸ್ಥ, ಅದರಲ್ಲೂ ಕೆಳವರ್ಗದ ದಿಟ್ಟ ಮಹಿಳಾ ಪಾತ್ರಗಳೇ ಪ್ರಮುಖವಾದ ಗೀತಾ ನಾಗಭೂಷಣರ ಕಥೆಗಳೂ ಇವೆ. ಉತ್ತಮ ಕಥಾ ಕೌಶಲ ಪ್ರದರ್ಶಿಸುವ ವೈದೇಹಿ, ಡಾ. ಕಮಲಾ ಹೆಮ್ಮಿಗೆ, ಪ್ರತಿಭಾ ನಂದಕುಮಾರ, ಮಾಲತಿ ಪಟ್ಟಣಶೆಟ್ಟಿ, ಡಾ. ಕೆ. ಆರ್. ಸಂಧ್ಯಾ ರೆಡ್ಡಿ, ಹೇಮಾ ಪಟ್ಟಣಶೆಟ್ಟಿಯವರ ಕಥೆಗಳಲ್ಲಿನ ಸ್ತ್ರೀ ಪಾತ್ರಗಳು ಆಧುನಿಕ ಶಿಕ್ಷಣ, ಆರ್ಥಿಕ ಸ್ವಾತಂತ್ರ್ಯಗಳಿದ್ದಾಗ್ಯೂ ಬಂಧಿಯಂತೆ ತೊಳಲುತ್ತಾರೆ. ಸ್ವಗತದಲ್ಲಿಯೆ ಬದುಕು ಸವೆಸುವ ಶಿಷ್ಟ ಪಾತ್ರಗಳೆಲ್ಲ ಗೊಂದಲದಲ್ಲಿದ್ದಂತೆ ಕಂಡರೆ ಗೀತಾ ನಾಗಭೂಷಣರ ಕಥೆಗಳ ಸ್ತ್ರೀ ಪಾತ್ರಗಳು ಕೂಡಲೇ ಸಿಡಿಯುತ್ತವೆ. ಏರುಗಚ್ಚೆ ಹಾಕಿ ಸೈಕಲ್ ರಿಕ್ಷಾ ತುಳಿಯಬಲ್ಲವು; ಬೀಡಿ ಸೇದಬಲ್ಲವು; ಮೆಚ್ಚಿದವನೊಂದಿಗೆ ಯಾವ ಎಗ್ಗೂ ಇಲ್ಲದೆ ಮಲಗಿ ಸುಖಿಸಬಲ್ಲವು ! ಮತ್ತೊಂದು ದಿಕ್ಕಿನಲ್ಲಿ ಸಿದ್ಧಾಂತಗಳ ಪೂರ್ವಗ್ರಹವಿಲ್ಲದೆ ಮಾನವೀಯ ಧೋರಣೆಗಳೇ ಪ್ರಮುಖವಾಗಿ ಬರೆಯುವ ಶಾಂತಾದೇವಿ ಕಣವಿಯವರ ಸಮನ್ವಯದ ಕಥೆಗಳೂ ಇವೆ. ಸಾರಾ ಅಬೂಬಕರ, ಬಾನು ಮುಷ್ತಾಕ್, ರೇಖಾರಾಣಿ, ಬಿ. ಟಿ. ಲಲಿತಾನಾಯಕ, ಬಿ. ಟಿ. ಜಾಹ್ನವಿ, ಡಾ. ಎಚ್. ಗಿರಿಜಮ್ಮ ಸೇರಿದಂತೆ ಇನ್ನೂ ಹಲವಾರು ಗಣ್ಯ ಲೇಖಕಿಯರ ಕಥೆಗಳು ಸಲ್ಲಿಸಿದ ಕೊಡುಗೆ ಕೂಡ ಮಹತ್ವದ್ದು.

ಇತ್ತೀಚಿನ ಮೂರು ದಶಕಗಳಲ್ಲಿ ಮೇಲೆದ್ದು ನೆಲಮುಗಿಲ ನಡುವೆ ಸಂವಹನವೇರ್ಪಡಿಸಿದ ದಲಿತ ಕಥೆಗಾರರ ಕಥೆಗಳದ್ದೇ ಬೇರೆ ಬಗೆಯ ಸೊಗಸುಗಾರಿಕೆ. ಆಫ್ರಿಕಾದ ಕಪ್ಪು ಸಾಹಿತ್ಯಕ್ಕೆ ಹಾಗೂ ಅವರೇ ಹುಟ್ಟು ಹಾಕಿದ ಆಧುನಿಕ ಸಂಗೀತಕ್ಕೆ ಬೇರುಗಳಾಗಿದ್ದುದು ಅವರ ನುಡಿಗಟ್ಟು. ಅವರದೇ ಭಾಷೆಯ ಬನಿ. ಹಾಗೆಯೆ ಆ ಸಮೂಹಕ್ಕಿದ್ದ ಸಮೃದ್ಧ ಜನಪದೀಯ ಸಂಭ್ರಮ, ಹೊಸ ಅರಿವು ಹಾಗೂ ಶಿಷ್ಟ ಲೋಕಕ್ಕೆ ಪರಿಚಯವೇ ಇರದ ನೆಲಮೂಲದ ಬನಿ - ದನಿಗಳೆಲ್ಲ ಸಾಹಿತ್ಯಕ್ಕೆ ಸಂಗೀತಕ್ಕೆ ದೊರೆತೊಡನೆ ಎರಡೂ ರಂಗಗಳಲ್ಲಿ ನಿಂತು ಹೋದ ಚಕ್ರಗಳೊಮ್ಮೆಲೇ ತಿರುಗತೊಡಗಿ ಮನುಷ್ಯರ ಗತಿ ಹಾಗೂ ಸ್ಥಿತಿಗಳೆರಡೂ

ಹೊರಳತೊಡಗಿದವು. ಆಫ್ರಿಕಾದ ಕಪ್ಪು ಸಾಹಿತ್ಯದಂತೆ ಕನ್ನಡದಲ್ಲಿ ಬೇರೊಂದು ದನಿಯಲ್ಲಿ ಬರೆಯಬಲ್ಲವರ ನಕ್ಷತ್ರ ಲೋಕವೇ ಮೂಡಿಕೊಂಡಿತು.

ಕೆಲವರು ಕಲಾತ್ಮಕವೆಂದರೂ, ಕೆಲವರು ಕನ್ನಡಕ್ಕೆ ಮತ್ತೆ ಅನುವಾದ ಮಾಡಿಕೊಂಡು ಓದಬೇಕಿದೆಯೆಂದು ಜರಿದರೂ ದೇವನೂರ ಮಹಾದೇವರ 'ಒಡಲಾಳ', 'ಕುಸುಮ ಬಾಲೆ', 'ಅಮಾಸ' ಕಥೆಗಳು; ಮೊಗಳ್ಳಿ ಗಣೇಶರ ಎಲ್ಲ ಕಥೆಗಳ ಸಶಕ್ತ ಸಾಲುಗಳು; ಹರಿತ ವೈಚಾರಿಕ ನೋಟಗಳ ಬರಗೂರರ ಕಥೆಗಳು ಸಾಹಿತ್ಯದ ಒಳಪದರಿನಲ್ಲಿ ಮೂಡಿಸಿದ ತಲ್ಲಣಗಳು ಇತ್ತೀಚಿನ ಪ್ರಮುಖ ಬೆಳವಣಿಗೆ. ಅದಕ್ಕೂ ಮೊದಲು ದಲಿತ ಸಂವೇದನೆಯ ಕಥೆಗಳು ಬಂದಿರಲಿಲ್ಲವೆಂದಲ್ಲ. ದಲಿತರ ಸಮಸ್ಯೆಗಳಿಗೆ ಸ್ಪಂದಿಸಿದ ನೋಟಕ್ಕಿಂತ ದಲಿತರೇ ತಮ್ಮ ಬರವಣಿಗೆಯ ಮೂಲಕ ಒಳಗಿನದ್ದನ್ನು ಹೊರ ಚೆಲ್ಲುವಾಗ ಮೂಡಿದ ಸಂವೇದನೆಯೇ ಬೇರೆಯಾಗಿತ್ತು.

ಶಾಂತಿನಾಥ ದೇಸಾಯಿ, ಯಶವಂತ ಚಿತ್ತಾಲರೆಲ್ಲ ವ್ಯಯಕ್ತಿಕತೆಯ ಹುಡುಕಾಟ, ಬದುಕಿನೆದುರು ಮನುಷ್ಯನ ಕುಬ್ಜತೆಗಳ, ಕೃತ್ರಿಮ ಸಂಬಂಧಗಳ ಅನಾವರಣ ಸೇರಿದಂತೆ ವ್ಯಯಕ್ತಿಕ ಬದುಕಿನ ಹುಸಿತನಗಳನ್ನು ಹೇಳಿದರು.

ಡಾ. ಬೆಸಗರಹಳ್ಳಿ ರಾಮಣ್ಣ, ರಾಘವೇಂದ್ರ ಖಾಸನೀಸ್, ಲಂಕೇಶ್, ಪೂರ್ಣಚಂದ್ರ ತೇಜಸ್ವಿ, ಯು. ಆರ್. ಅನಂತಮೂರ್ತಿಯವರು ಬರೆಯುತ್ತಲೇ ಸಂಘರ್ಷವೊಂದಕ್ಕೆ ಅಣಿಗೊಳಿಸುವ ಹೋರಾಟದ ಆಶಯವನ್ನೇ ಪ್ರಮುಖವಾಗಿಸಿದರು. ಕಥೆಗಾರಿಕೆಯಲ್ಲಿ ರಂಜನೆಗಿಂತ ಮಿಗಿಲಾಗಿ ಚಿಂತನೆಯೆ ಪ್ರಮುಖವಾಗಿ, ಸಮಾನತೆಯ ಅರ್ಥಗಳೇ ಪ್ರಬಲ ಸಂಗತಿಯಾಗಿ ಕಾಲದ ಬದಲಾವಣೆಯಲ್ಲಿ ಪೂರಕ ಪಾತ್ರವನ್ನು ನಿರ್ವಹಿಸಿದರು.

ಕುಂ. ವೀ. ಹೇಳಿದಂತೆ ಒಂದು ಕಾಲದಲ್ಲಿ ಸಣ್ಣ ಕಥಾಪ್ರಕಾರಕ್ಕೆ ಸಂಸ್ಕಾರ ದಕ್ಕದೇ ಹೋಗಿರಬಹುದು. ಬೇಂದ್ರೆ, ಅಡಿಗರಂತೆ ಕಾವ್ಯದ ಕೈ ಹಿಡಿದು ನಡೆಸಿದಂತೆ ಸಣ್ಣ ಕಥೆಗಳನ್ನು ನಿರ್ದೇಶಿಸಿದವರಿರಲಿಕ್ಕಿಲ್ಲ. ಆದರೆ ಈ ನೂರು ವರ್ಷ ಸವೆದ ಹಾದಿಯಲ್ಲಿ ನಿಂತು ಹೊರಳಿದರೆ ಲಂಕೇಶ್‌ರಾದಿಯಾಗಿ ಸ್ವತಃ ಕುಂ.ವೀ. ಕನ್ನಡ ಕಥಾ ಸಾಹಿತ್ಯಕ್ಕೆ ಗತಿ ದೊರಕಿಸಿ ಕೊಟ್ಟಿದ್ದಂತೂ ನಿಜ.

ಆಯಾ ಕಾಲದ ಪ್ರಾಮುಖ್ಯತೆಗನುಗುಣವಾಗಿ ಕನ್ನಡದ ಸಣ್ಣಕಥೆಗಳು ಸ್ಪಂದಿಸಿವೆ. ಸಮಸ್ಯೆಯನ್ನು ಅರಿತಿವೆ. ಪರಿಹಾರ ಹುಡುಕಲು ಹೆಣಗಿವೆ. ಬಾಗಲೋಡಿ ದೇವರಾಯರಿಂದ ಹಿಡಿದು ಡಾ. ನಾ. ಮೊಗಸಾಲೆ, ಪ್ರೊ. ಸುಧಾಕರ, ಜಯಂತ ಕಾಯ್ಕಿಣಿ, ವಿವೇಕ ಶಾನಭಾಗ, ಕೆ. ವಿ. ತಿರುಮಲೇಶ, ಎಂ. ಎಸ್. ಕೆ. ಪ್ರಭು, ರವಿ ಬೆಳಗೆರೆ, ರಾಜಶೇಖರ ನೀರಮಾನ್ವಿ, ಎಂ. ವ್ಯಾಸ, ಶ್ರೀರಾಮ, ಡಾ. ಬಸವರಾಜ ಸಾದರ, ಪ್ರಹ್ಲಾದ ಅಗಸನಕಟ್ಟೆ,

ಕರೀಗೌಡ ಬೀಚನಹಳ್ಳಿ, ಪರಂಜ್ಯೋತಿಯವರಿಂದ ಹಿಡಿದು ಇತ್ತೀಚಿನ ಡಾ. ನಟರಾಜ ಹುಳಿಯಾರರ ಕಥೆಗಳು ಕೇವಲ ಕಥೆಗಳಲ್ಲ, ಸಮಕಾಲೀನ ವ್ಯಥೆಗಳಿಗೆ ಸ್ಪಂದಿಸಿದ ಕಥೆಗಳು.

ಇವತ್ತು ಸ್ಥಿತಿ ಬದಲಾಗಿದೆ. ಯಾರೋ ಶೋಷಣೆಯ ಬಗ್ಗೆ ಬರೆಯುವಾಗ, ನಡೆವ ಶೋಷಣೆಯನ್ನು ಕಂಡ ಹಾದಿಹೋಕನೊಬ್ಬ ವ್ಯಥೆಪಟ್ಟು ಅನುಕಂಪದಿಂದ ಬರೆದಂತಿತ್ತು. ಇವತ್ತು ದಲಿತರಾಗಿರಬಹುದು, ಮಹಿಳೆಯರಾಗಿರಬಹುದು - ಶೋಷಿತರೇ ಬರೆದುಕೊಳ್ಳುವ ಸ್ಥಿತಿ ಇದೆ. ಹಾಗೆಯೆ ಸಾಮಾಜಿಕ ಸ್ಥಿತಿಗಳ ಸಮಸ್ಯೆಗಳು ಬೇರೊಂದು ರೀತಿಯಲ್ಲಿ ಕಾಣಿಸಿಕೊಳ್ಳುತ್ತಿವೆ. ಅಕ್ಷರ ಕಲಿತ ಮಾತ್ರಕ್ಕೆ, ಆರ್ಥಿಕ ಸಾಮರ್ಥ್ಯ ದೊರೆತ ಮಾತ್ರಕ್ಕೆ ದಲಿತರ ಸಮಸ್ಯೆಗಳು ಕೊನೆಗೊಳ್ಳುತ್ತಿಲ್ಲ. ಅನಕ್ಷರಸ್ಥ ದಲಿತರ ಸಮಸ್ಯೆಗಳಂತೆಯೆ ಬೇರೊಂದು ಬಗೆಯಲ್ಲಿ ಅಕ್ಷರಸ್ಥ ದಲಿತರೂ ಕಲಿಕೆಯ ನಂತರವೂ, ಆರ್ಥಿಕ ಸುಸ್ಥಿತಿಯ ನಂತರವೂ ಹೊಸ ಸಮಸ್ಯೆಗಳನ್ನೆದುರಿಸುತ್ತಿದ್ದಾರೆ. ಮಹಿಳೆಯರ ಭಾಗೀದಾರಿಕೆ ಹೆಚ್ಚಿದಷ್ಟೂ, ಅರಿವಿನ ಕ್ಷಿತಿಜ ವಿಸ್ತಾರವಾದಷ್ಟೂ ವರದಕ್ಷಿಣೆಯಂತಹ ಸಾಮಾಜಿಕ ಸಮಸ್ಯೆಗಳು ನಿಲ್ಲುತ್ತಿಲ್ಲ.

ಜೀವಿಸಿರುವ ವ್ಯಕ್ತಿಗಳು ತಮ್ಮಂತೆಯೆ ಜೀವಂತವಿದ್ದ ಹೆಣ್ಣೊಬ್ಬಳನ್ನು ದಹಿಸುವ ವರದಿಗಳು ದಿನ ಬೆಳಗಾದರೆ ಬರುತ್ತಲೇ ಇವೆ. ಅನಕ್ಷರಸ್ಥರಿಗಿಂತ ಅಕ್ಷರಸ್ಥರ ನಡುವೆಯೆ ವರದಿಯಾಗುತ್ತಿರುವ ಈ ಪ್ರಕರಣಗಳು ಶಿಲಾಯುಗದಲ್ಲಿಯೂ ಕಾಣದ ಕ್ರೌರ್ಯವೊಂದು ನಾಗರಿಕ ಸಮಾಜದಲ್ಲಿ ಅವ್ಯಾಹತವಾಗಿ ನಡೆಯುತ್ತಿರುವುದು ನಮ್ಮ ಶಿಕ್ಷಣ, ನಾಗರಿಕತೆಯನ್ನೇ ಪ್ರಶ್ನಿಸುವಂತಿದೆ. ಸಾಹಿತ್ಯದ ಹಾದಿಯುದ್ದಕ್ಕೂ ನವ್ಯ, ನವೋದಯ, ಬಂಡಾಯ, ದಲಿತ, ಸ್ತ್ರೀವಾದಗಳೆಂದು ಹೆಜ್ಜೆ ಗುರುತುಗಳು ಕಾಣುತ್ತಲೇ ಬಂದಿವೆ. ಆದರೆ ಇವೆಲ್ಲವೂ ಮಾನವೀಯ ಧೋರಣೆಗಳಿಂದ ಹೊರತಾದ ಪರಸ್ಪರ ಬೇಲಿ ನಿರ್ಮಾಣಕ್ಕೆ ಕಾರಣವಾಗದಂತಿರಲಿ ಎಂದಷ್ಟೇ ನಾನೀ ಸಂದರ್ಭದಲ್ಲಿ ಆಶಿಸುತ್ತೇನೆ.

ಆಧುನಿಕ ವಿಜ್ಞಾನ - ತಂತ್ರಜ್ಞಾನಗಳು ಹಾಗೂ ಮನುಷ್ಯ ಸಾಧಿಸಿದ ವೇಗದಿಂದಾಗಿ ಭೂಗೋಲವೇ ಒಂದು Global Village ನಂತಾಗಿರುವಾಗ ಮಧ್ಯಯುಗದ ವಸಾಹತುಶಾಹಿ, ಸಾಮ್ರಾಜ್ಯಶಾಹಿ ಶಕ್ತಿಗಳು ತೃತೀಯ ಜಗತ್ತಿನ ರಾಷ್ಟ್ರಗಳನ್ನು ಅಪರೋಕ್ಷವಾಗಿ, ಪರೋಕ್ಷವಾಗಿ ಸ್ವಾಧೀನಪಡಿಸಿಕೊಳ್ಳಲು ಹೆಣಗುತ್ತಿವೆ. ದೇಶ ನಡೆಸುತ್ತಿರುವವರು ವೈಯಕ್ತಿಕ ಉಳಿವಿಗಾಗಿ ದಂಗೆ ಮತ್ತು ಯುದ್ಧಗಳನ್ನು ಪ್ರೋತ್ಸಾಹಿಸುವ ನಿಜ ಅರ್ಥದ ಅರಾಜಕತೆಯಲ್ಲಿ ನಾವಿದ್ದೇವೆ. ವೈಜ್ಞಾನಿಕ ಪ್ರಗತಿಯ ಈ ದಿನಗಳಲ್ಲಿಯೂ ಕೇವಲ ಇಂಡಿಯಾ ಮಾತ್ರವಲ್ಲದೆ ವಿಶ್ವದೆಲ್ಲೆಡೆ ಧರ್ಮದ ಹೆಸರಿನ ಯುದ್ಧಗಳು, ಅಂತಃಕಲಹಗಳು, ಭಯೋತ್ಪಾದನೆಗಳು, ಭಯಭೀತಗೊಳಿಸಿರುವ ವರ್ತಮಾನದಲ್ಲಿ 'ಧರ್ಮ', 'ಜಾತಿ'ಯ ಬೇರುಗಳು ಇನ್ನೂ ಆಳಕ್ಕಿಳಿಯುತ್ತಿವೆ. ಹಿಂಸೆ, ಪ್ರತಿ ಹಿಂಸೆಗಳು ಪ್ರತಿಕ್ಷಣದ ಸಂಗತಿಯಾಗಿ ಆಯಾ ಬಲಹೀನ ರಾಷ್ಟ್ರದ ಕೊರಳಿಗೆ ಬಹುರಾಷ್ಟ್ರೀಯ ಕಂಪನಿಗಳು ಕಾಣದ ಉರುಳು ಹಾಕಿರುವ ಈ ಸ್ಥಿತಿಯಲ್ಲಿ

ಸಾಹಿತ್ಯ ಮತ್ತೆ ಜೀವನ್ಮುಖಿಯಾಗಿ ನಿಲ್ಲಬೇಕಿದೆ. ಮನುಷ್ಯ ಮನುಷ್ಯರ ನಡುವಣ ಭ್ರಾತೃತ್ವ ಮತ್ತು ಸಮಾನತೆಯ ಸೂತ್ರಗಳೇ ಶಾಶ್ವತ ಪರಿಹಾರ ಎಂಬುದು ಕಟ್ಟಕಡೆಯ ಸತ್ಯವಾದ ಕಾರಣ ಇರುವ ಸಮಸ್ಯೆಗಳನ್ನೆಲ್ಲ ಇದೇ ನೆಲೆಯಲ್ಲಿ ಚರ್ಚಿಸಲು ನಾವೆಲ್ಲ ಒಂದೆಡೆಗೆ ಸೇರಬೇಕಿದೆ.

ಕಿರಿಯರು ಬರೆದ ಕಥೆಗಳಲ್ಲಿ ಕೆಲವರನ್ನು ಹೊರತುಪಡಿಸಿದರೆ ಮತ್ತುಳಿದವರಿಗೆ ಆಶಯ ದಕ್ಕಿದೆ. ಆ ಆಶಯಗಳನ್ನು ಕಥೆಯ ಚೌಕಟ್ಟಿನಲ್ಲಿಟ್ಟು ಸಿಂಗರಿಸಲಿನ್ನೂ ಅವರಿಗೆ ಸಮಯ ಬೇಕು. ಕಥಾಪ್ರಕಾರವೇ ಹಾಗೆ. ಅದು ಒಂದೇ ಏಟಿಗೆ ಒಲಿಯುವಂತಹುದಲ್ಲ. ಅದು ಒಲಿಯಿತೆಂದು ಗೊತ್ತಾದಾಗಲೂ ಇನ್ನೂ ಒಲಿಸಿಕೊಳ್ಳುವುದು ಬಹಳವಿದೆ ಎಂದು ಮನವರಿಕೆಯಾಗುತ್ತದೆ.

ಕಥೆ ಒಲಿದವರು, ಕಥೆಯೆಂಬುವಳನ್ನು ಒಲಿಸಿಕೊಳ್ಳಲಿರುವವರು ಮಾಡಿದ ಪ್ರಯತ್ನಗಳಲ್ಲಿವೆ. ಈ ದಿಕ್ಕಿನಲ್ಲಿ ಇದೊಂದು ಹಿರಿಯರು ಕಿರಿಯರು ಸೇರಿ ಶ್ರಮಿಸಿದ ಫಲ. ಕನ್ನಡ - ಕನ್ನಡಿಗ - ಕರ್ನಾಟಕದ ಹಿತರಕ್ಷಣೆಯ ವಿಷಯದಲ್ಲಿ ಶತಮಾನ ಕಂಡ ಕನ್ನಡದ ಹಿರಿಯ ಸಂಸ್ಥೆ ಕರ್ನಾಟಕ ವಿದ್ಯಾವರ್ಧಕ ಸಂಘವು ನೂರ ಹದಿನಾಲ್ಕನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಸಂದರ್ಭದಲ್ಲಿ ಬಿಡುಗಡೆಯಾಗುತ್ತಿರುವ "ಬಯಲ ಬೇರ ಚಿಗುರು" ಕಥನ ಸಾಹಿತ್ಯದ ಕಡಲ ಮೇಲೆ ತೇಲಿ ಬಿಟ್ಟ ಮತ್ತೊಂದು ಪುಟ್ಟ ದೋಣಿ. ಸಹೃದಯಿ ಕನ್ನಡಿಗರು ಇದನ್ನು ಎದೆ ತೆರೆದು ಒಪ್ಪಿಸಿಕೊಳ್ಳಿ.

೨೦ ಜುಲೈ, ೨೦೦೩ **ಮೋಹನ ನಾಗಮ್ಮನವರ**

# ಕೃತಜ್ಞತೆಗಳು

- ಕಥಾ ಕಮ್ಮಟ ಸಂಘಟಿಸುವ ಸ್ವಾತಂತ್ರ್ಯ ಕೊಟ್ಟಿದ್ದಲ್ಲದೇ 'ಕಥನ ಕುತೂಹಲ' ಹಾಗೂ 'ಬಯಲ ಬೇರ ಚಿಗುರು' ಪುಸ್ತಕಗಳನ್ನು ಸಂಪಾದಿಸುವ ಅವಕಾಶ ನೀಡಿದ ಕರ್ನಾಟಕ ವಿದ್ಯಾವರ್ಧಕ ಸಂಘದ ಎಲ್ಲ ಪದಾಧಿಕಾರಿಗಳಿಗೆ
- ಕಥಾಕಮ್ಮಟಕ್ಕೆ ಮಾರ್ಗದರ್ಶನ ನೀಡಿ, ಎರಡೂ ಪುಸ್ತಕಗಳಲ್ಲಿ ಲೇಖನ, ಕಥೆ ಬಳಸಿಕೊಳ್ಳಲು ಅನುಮತಿ ನೀಡಿದ ಎಲ್ಲ ಹಿರಿಯರಿಗೆ
- ಕಥಾಕಮ್ಮಟದಲ್ಲಿ ಭಾಗವಹಿಸಿದ ಎಲ್ಲ ಕಥೆಗಾರರಿಗೆ, ಇಲ್ಲಿ ಪ್ರಕಟಗೊಂಡ ಕಥೆಗಳನ್ನು ಮುದ್ರಿಸಲು ಅನುಮತಿ ನೀಡಿದ ಎಲ್ಲ ಹೊಸ ಕಥೆಗಾರರಿಗೆ
- ಕಮ್ಮಟದ ಸಂದರ್ಭದಲ್ಲಿ ಮುಂದೆ ನಿಂತು, ಕಮ್ಮಟದಲ್ಲಿ ಪಾಲ್ಗೊಂಡವರ ಯೋಗ ಕ್ಷೇಮ ವಿಚಾರಿಸಿ ಎರಡೂ ಪುಸ್ತಕಗಳ ಪ್ರಕಟಣೆಯ ಕುರಿತಾಗಿ ಕಾಳಜಿ ತೋರಿದ ಶ್ರೀ ಎಸ್. ಎಂ. ಹೊಳೆಯಣ್ಣವರ ಹಾಗೂ ಶ್ರೀ ಎಚ್. ಸಿ. ಮೊಗಲಿ ಅವರಿಗೆ
- ಎಲ್ಲ ಪ್ರಕ್ರಿಯೆಯಲ್ಲಿ ಜೊತೆಗೆ ನಿಂತು ಸಹಕರಿಸಿದ ಹಿರಿಯರಾದ ಪ್ರೊ. ಬಿ.ವ್ಹಿ. ಗುಂಜೆಟ್ಟಿ, ಶ್ರೀಮತಿ ಹನುಮಾಕ್ಷಿ ಗೋಗಿ, ಶ್ರೀ ಸಿದ್ಧಲಿಂಗ ದೇಸಾಯಿ, ಪ್ರೊ. ವೀಣಾ ಕುಲಕರ್ಣಿ ಹಾಗೂ ಕೆ. ಸಿದ್ರಾಮ ಇವರಿಗೆ
- ಈ ಕಾರ್ಯದಲ್ಲಿ ಅತ್ಯುತ್ಸಾಹದಿಂದ ಪಾಲ್ಗೊಂಡು ನನ್ನ ಶ್ರಮ ಹಂಚಿಕೊಂಡ ಸಂಘದ ಅಧೀಕ್ಷಕ ಶ್ರೀ ಶಿವಪುತ್ರಣ್ಣ ರಾಚಯ್ಯನವರ, ಶ್ರೀ ಎನ್. ಎಸ್. ಕಾಶಪ್ಪನವರ ಹಾಗೂ ಸಂಘದ ಎಲ್ಲ ಸಿಬ್ಬಂದಿ ಮಿತ್ರರಿಗೆ
- ಡಿ.ಟಿ.ಪಿ. ಮಾಡಿದ ಜ್ಯೋತಿ, ಮುದ್ರಿಸಿದ ಬಿ. ಜಿ. ಪ್ರಿಂಟರ್ಸ್‌ಗೆ, ಮುಖಪುಟ ವಿನ್ಯಾಸ ಮಾಡಿದ ವಿಶ್ವಜ್ಞ ಸಹೋದರರಿಗೆ, ಎಲ್ಲ ವಿಷಯದಲ್ಲಿ ಆದರಿಸಿ ಪ್ರೀತಿ ತೋರಿದ ನಾಡಿನ ಎಲ್ಲ ಮಾಧ್ಯಮಗಳ ಮಿತ್ರರಿಗೆ

**ಹೃದಯ ತುಂಬಿದ ಕೃತಜ್ಞತೆಗಳು**

೨೦ ಜುಲೈ ೨೦೦೩

**ಮೋಹನ ನಾಗಮ್ಮನವರ**

ಪರಿವಿಡಿ

# ಬಯಲ ಬೇರು


| | | ಪುಟ |
|---|---|---|
| ● ಶಿಲಾಬಾಲಿಕೆ ನುಡಿದಳು | ಡಾ. ಪಾಟೀಲ ಪುಟ್ಟಪ್ಪ | ೧ |
| ● ಬಯಲಾಟ | ಪ್ರೊ. ಕೀರ್ತಿನಾಥ ಕುರ್ತಕೋಟಿ | ೧೧ |
| ● ಕನ್ನಡಿಯ ಕಣ್ಣು | ಆರ್ಯ | ೨೦ |
| ● ಒಂದು ಬೇವಿನಮರದ ಕಥೆ | ಡಾ. ಗಿರಡ್ಡಿ ಗೋವಿಂದರಾಜ | ೩೯ |
| ● ತಿಮ್ಮಣ್ಣ ಭಾವ | ವಿಷ್ಣು ನಾಯ್ಕ | ೫೭ |
| ● ಬಿಸಿಲು ಮತ್ತು ಬೇವಿನಮರ | ಡಾ. ಕಮಲಾ ಹೆಮ್ಮಿಗೆ | ೬೭ |
| ● ಭ್ರೂಣ ಸಂಭಾಷಣೆ | ರವಿ ಬೆಳಗೆರೆ | ೭೨ |
| ● ಮಣ್ಣಿನ ಗುಣ | ಪ್ರೊ. ಕೊರಗಲ್ ವಿರೂಪಾಕ್ಷಪ್ಪ | ೮೧ |
| ● ಬೆಳಕು ಮಬ್ಬಿನ ಹೆಜ್ಜೆಯಾಟ | ಡಾ. ಬಸವರಾಜ ಸಾದರ | ೯೨ |
| ● ನಾ ಇನ್ನೂ ಸತ್ತಿಲ್ಲ | ಸಿದ್ಧಲಿಂಗ ದೇಸಾಯಿ | ೧೦೦ |
| ● ತಾಯವ್ವ | ಬಸೂ ಬೇವಿನಗಿಡದ | ೧೦೬ |
| ● ಸತ್ಯಲಿಂಗನ ಸಾವು | ಮೋಹನ ನಾಗಮ್ಮನವರ | ೧೧೫ |
| ● ದನ ಕಾಯದವನು | ಸುಬ್ಬು ಹೊಲೆಯಾರ್ | ೧೨೯ |
| ● ಋಣ | ಲೋಹಿತ್ ನಾಯ್ಕರ್ | ೧೩೧ |
| ● ಸಂಜೆಗಣ್ಣಲ್ಲಿ | ಪ್ರಹ್ಲಾದ ಅಗಸನಕಟ್ಟೆ | ೧೪೮ |
| ● ದೇವರು ಕೈಬಿಟ್ಟವನು | ಆರೂರು ಲಕ್ಷ್ಮಣ ಶೇಟ್ | ೧೫೬ |
| ● ಪಾದರಕ್ಷೆ ಮಾತನಾಡಿತು | ಸುದರ್ಶನ ದೇಸಾಯಿ | ೧೬೩ |

# ಚಿಗುರ ಸಾಲು


| | | |
|---|---|---|
| ● ಕುರುರಾಯನಿದನೆಲ್ಲ ಕಂಡು | ಜಿ. ಯೋಗೀಶ್ | ೧೭೯ |
| ● ಅಂಬಿಗ | ಅಂಜನಾ ಹೆಗಡೆ | ೧೮೩ |
| ● ಸ್ಕ್ರಿಪ್ಟ್ | ಎಂ. ಜೆ. ಪದ್ಮಿನಿ | ೧೮೮ |
| ● ವಶ | ಸುನಂದಾ ಪ್ರಕಾಶ ಕಡಮೆ | ೧೯೦ |
| ● ಬಿಡುಗಡೆ | ಅಬ್ದುಲ್ ರೆಹಮಾನ್ | ೧೯೭ |
| ● ನಗ್ನಸತ್ಯ | ಪ್ರಸನ್ನ ಬೆನ್ನೂರ | ೨೦೯ |
| ● ಎಲ್ಲಿದ್ದರೇನಂತೆ | ಸಂಕೇತ ಪಾಟೀಲ | ೨೧೬ |
| ● ಕುಸುಮ | ಡಾ. ಚಿತ್ರಾ ದೈಜೋಡೆ | ೨೩೧ |
| ● ಚೆನ್ನೀಮನೆ | ಸುನಂದಾ ಹಾಲಭಾವಿ | ೨೩೯ |
| ● ಯುಗಾದಿ | ಎಸ್. ಹೆಚ್. ರೆಡ್ಡಿ | ೨೪೫ |
| ● ಆಘಾತ | ರವಿಕಾಂತ ಎಂ. ಕೆ. | ೨೫೨ |
| ● ಕಂಬನಿ ಒರೆಸಿದ ಕೈ | ಸರೋಜಾ ರಾವ್ | ೨೫೫ |
| ● ..... | ವೀಣಾ ಕುಲಕರ್ಣಿ | ೨೫೯ |
| ● ಕನಸುಗಳ ಗೂಡಿಗೆ ಬಿದ್ದ ಬೆಂಕಿ | ವಿಜಯ ಕಾಂಬಳೆ | ೨೬೩ |
| ● ಹಳೇಮರ | ಲಕ್ಷ್ಮಣ ಧೋಂಡೆ | ೨೭೧ |
| ● ತಣ್ಣೀರು | ಶಬ್ಬೀರ ಅಹ್ಮದ್ ಮಡಕಿ | ೨೭೪ |
| ● ದುರಾಶೆ | ಎಚ್. ಎ. ಭೋಗಲೆ | ೨೭೬ |
| ● ಕೊಲೆಯ ಕೈವಾಡ | ಸುಕುಮಾರ ಎಸ್. ಸಿಮಾನಿ | ೨೮೦ |
| ● ಇದೆಂಥಾ ಅದೃಷ್ಟ | ಖುರ್ಷಿದ್ ಆಲಂ ಮೋಮೀನ್ | ೨೮೪ |
| ● ದ್ಯಾವಪ್ಪನ ದುನಿಯಾ | ಕೆ. ಸಿದ್ರಾಮ | ೨೯೦ |
| ● ನಿರ್ಧಾರ | ಕೆ. ಜಿ. ಭದ್ರಣ್ಣವರ | ೨೯೪ |
| ● ಸಾವು ಬದುಕಿನ ನಡುವೆ | ವೈ. ಬಿ. ಕಡಕೋಳ | ೨೯೮ |
| ● ನಾವು ಮಾಡಿದ ತಪ್ಪು | ಹಜರೇಸಾಬ ನದಾಫ್ | ೩೦೩ |
| ● ದೈವದ ಚಿತ್ತಾರ | ಸುಮಾ ಜೋಶಿ | ೩೦೯ |
| ● ಕೈ ಜಾರಿದವಳು | ಜಯಪ್ರಕಾಶ ಅಬ್ಬಿಗೇರಿ | ೩೧೬ |

# ಬಯಲ ಬೇರು

# ಶಿಲಾಬಾಲಿಕೆ ನುಡಿದಳು

● ಡಾ. ಪಾಟೀಲ ಪುಟ್ಟಪ್ಪ

ಬೇಲೂರನ್ನು ನೋಡಲು ಬಂದಿದ್ದ ಅಮೆರಿಕನ್ ಪ್ರವಾಸಿಗರನ್ನು ಕಳಿಸಿ ಬಂದು ದೇವಪ್ಪ, ಚೆನ್ನಕೇಶವ ದೇವಸ್ಥಾನದ ಕಟ್ಟೆಯ ಮೇಲೆ ಉಸ್ಸೆಂದು ಕುಳಿತಿದ್ದ. ದಿನದ ಘಟನೆಗಳು ಚಲಚ್ಚಿತ್ರದಂತೆ ಅವನ ಮನಸ್ಸಿನ ಪರದೆಯ ಮೇಲೆ ಮೂಡಿಹೋದವು.

ಅಂದು ಅಮಾವಾಸ್ಯೆ. ರಾತ್ರಿ ಎಂಟು ಗಂಟೆಗೇ ಇರುಳು ಹೆಪ್ಪುಗಟ್ಟಿದಂತೆ ದಟ್ಟವಾಗಿ ಇಳಿದು ಬಂದಿತ್ತು. ಇಡಿಯ ದಿನ ಅವನು ಕಂಟ್ರ್ಯಾಕ್ಟಿನ ಕೂಲಿಯ ಆಳುಗಳೊಂದಿಗೆ ಪೇಚಾಡಿದ್ದ. ಅದರ ಮೇಲೆ ಅಮೆರಿಕನ್ ಪ್ರವಾಸಿಗರನ್ನು ದೇವಸ್ಥಾನದ ಒಳಗೆ, ಹೊರಗೆ, ಸುತ್ತಲೂ ಕರೆದುಕೊಂಡು ಹೋಗಿ, ಶಿಲಾಬಾಲಿಕೆಯರ ವಿವಿಧ ಭಂಗಿಗಳ ಬಗೆಗೆ ನಿಂತು ವಿಸ್ತಾರವಾಗಿ ಹೇಳಿ ದೇವಪ್ಪ ಸುಸ್ತಾಗಿದ್ದುದ್ದೇನೂ ಸುಳ್ಳಲ್ಲ.

ಆ ಪ್ರವಾಸಿಗರು ಬಂದಾಗ ಆಗಲೇ ಸಮಿಸಮೀಪ ಸಂಜೆ ಆರು ಗಂಟೆಯೇ ಆಗಿದ್ದಿತು.

ಹೊನ್ನಿನ ಆರತಿಯೆತ್ತಿ ಬೆಳಗಿದಂತೆ ಸೂರ್ಯನು ಚೆನ್ನಕೇಶವ ದೇವಸ್ಥಾನದ ಮೇಲೆ ತನ್ನ ಸ್ನಿಗ್ಧ ಪ್ರಕಾಶವನ್ನು ಚೆಲ್ಲಿದ್ದ. ಅನ್ನ ಹುಡುಕಿಕೊಂಡು ದೂರ ಹಾರಿಹೋಗಿದ್ದ ಹಕ್ಕಿಗಳು ತಮ್ಮ ಗೂಡುಗಳಿಗೆ ಹಿಂತಿರುಗಿ ಬರತೊಡಗಿದ್ದವು. ದಿನದ ಲೆಕ್ಕ ಬರೆದು ಮುಗಿಸುವಂತೆ ಸೃಷ್ಟಿಯಲ್ಲಿ ಎಲ್ಲವೂ ಅವಸರವಸರವಾಗಿ ನಡೆದಿತ್ತು.

ತಾನೂ ಕೂಡ ಇನ್ನು ಮನೆಗೆ ಹೋಗಬೇಕು ಎಂದು ದೇವಪ್ಪ ಹೊರಡುವುದರಲ್ಲಿದ್ದ. ಅಷ್ಟರಲ್ಲಿ ಆ ಅಮೆರಿಕನ್ ಪ್ರವಾಸಿಗರು ಅಲ್ಲಿಗೆ ಬಂದರು.

ಅವರಿಗೆ ದೇವಸ್ಥಾನದ ವಿವಿಧ ಭಾಗಗಳನ್ನು ತೋರಿಸಿ ವಿವರಣೆ ನೀಡುವ ಮಾರ್ಗದರ್ಶಿಗಳು ಒಬ್ಬರೂ ಇಲ್ಲವೆಂದು ಅವನು ವ್ಯಸನಪಟ್ಟುಕೊಂಡ. ದಿನವಿಡೀ ಕಾಯ್ದುಕೊಂಡು ಕುಳಿತಿರುತ್ತಿದ್ದ ಅವರು ಆ ದಿನ ಕಾಣಲೇ ಇಲ್ಲ. ದೇವಸ್ಥಾನ ತೋರಿಸಿ ವಿವರಣೆ ನೀಡುವುದು ತನ್ನ ಕೆಲಸವಲ್ಲವಾದರೂ ವಿದೇಶಿಯರಿಗೆ ತಿಳಿಸಿ ಹೇಳುವುದು ತನ್ನ ಕರ್ತವ್ಯವೆಂದು ಅವನು ಭಾವಿಸಿದ. ತಿಳಿಸಿ ಹೇಳುವವರು ಒಬ್ಬರೂ ಇಲ್ಲವೆಂದರೆ, ಆತುರಪಟ್ಟುಕೊಂಡು ಇಲ್ಲಿಗೆ ಬಂದ ಅವರು ನಮ್ಮ ದೇಶದ ಬಗೆಗೆ ಏನೆಂದುಕೊಂಡಾರು ?

ದೇಶದ ಮರ್ಯಾದೆ ಕಾಯುವ ಕೆಲಸವನ್ನು ಪ್ರತಿಯೊಬ್ಬನೂ ಮಾಡಬೇಕು. ಮನೆಯವನು ಅತಿಥಿಗಳನ್ನು ಸ್ವಾಗತಿಸುವಂತೆ ದೇವಪ್ಪ ಮುಂದೆ ಬಂದು ಅವರನ್ನು ಸ್ವಾಗತಿಸಿದ. ಮಾರ್ಗದರ್ಶಿಗಳ ಪೈಕಿ ಒಬ್ಬನಿರಬೇಕೆಂದು ಅವರು ಸಹಜ ಭಾವನೆ ಮಾಡಿಕೊಂಡರು.

ಸ್ವತಃ ಶಿಲ್ಪಿಯಾಗಿ, ಆ ಭವ್ಯ ಆಕೃತಿಗಳನ್ನೆಲ್ಲ ತಾನೇ ಬಿಡಿಸಿರುವನೇನೋ ಎಂಬಂತೆ ದೇವಪ್ಪ ಅಲ್ಲಿ ಆಗಿದ್ದ ಅದ್ಭುತ ಶಿಲ್ಪಕಾರ್ಯದ ಬಗೆಗೆ ವಿವರಣೆ ನೀಡುತ್ತಹೋದ. ಅವರು ಭಾರತದ ಅನೇಕ ಕಡೆಗಳಿಗೆ ಹೋಗಿ ಬಂದಿದ್ದರು. ಆದರೆ ಯಾವ ಮಾರ್ಗದರ್ಶಿಯೂ ಅವರಿಗೆ ಈ ತೆರನಾದ ಅನುಭವವನ್ನು ಮಾಡಿಕೊಟ್ಟಿರಲಿಲ್ಲ.

ದೇವಸ್ಥಾನವನ್ನು ನೋಡಿ ಆದ ಮೇಲೆ, ತಮ್ಮ ಲಕ್ಷುರೀ ಬಸ್ ಬಳಿಗೆ ಹೋಗುತ್ತ, ಅವರು ದೇವಪ್ಪನನ್ನು ಮನಸಾರೆ ಪ್ರಶಂಸಿಸಿ ಅವನ ಕೈಗೆ ಹತ್ತು ರೂಪಾಯಿ ಇಡಹೋದರು.

ಏನೋ ಅಶುಭವನ್ನು ಕಂಡವನಂತೆ ಅವನು ಅವರ ಕೊಡುಗೆಯನ್ನು ನಿರಾಕರಿಸುತ್ತ, 'ನೀವು ನಮ್ಮ ಅತಿಥಿಗಳು. ನಿಮ್ಮಿಂದ ನಾನು ಕಾಣಿಕೆಯನ್ನು ಸ್ವೀಕರಿಸುವುದೇ ? ಛೇ, ಇದೆಲ್ಲಿಯ ಮಾತು ? ಅಲ್ಲದೆ, ನಾನು ಮಾಡಿರುವುದಾದರೂ ಏನು ಮಹಾ ! ನಿಮ್ಮ ಜತೆಗೆ ಬಂದುದರಿಂದ ಶಿಲಾಬಾಲಿಕೆಯರನ್ನು ಇನ್ನೊಮ್ಮೆ ನೋಡುವ ಅವಕಾಶ ನನಗೆ ಲಭಿಸಿತು. ಅವರನ್ನು ದಿನವೂ ಒಮ್ಮೆಯಾದರೂ ನೋಡಿ ಬರದಿದ್ದರೆ ನನಗೆ ಸಮಾಧಾನವೇ ಇಲ್ಲ'.

'ನೀನೇ ಸುದೈವಿ' ಎಂದು ಅವರು ಅಭಿನಂದಿಸಿದಾಗ ದೇವಪ್ಪನ ಮನಸ್ಸಿಗೆ ಈಗ ಅಮೃತಸೇವನೆ ಮಾಡಿದಂತಾಯಿತು.

ಅವರ ಬಸ್ಸು ಇನ್ನೇನು ಬಿಡಬೇಕು, ಅಷ್ಟರಲ್ಲಿ ಆ ಪ್ರವಾಸಿಗರ ಪೈಕಿ ಒಬ್ಬನು, 'ನಮ್ಮಿಂದ ನೀನು ಹಣ ತೆಗೆದುಕೊಳ್ಳುವುದು ಬೇಡ. ನೀನು ನಮಗೋಸುಗ ತುಂಬ ಪ್ರಯಾಸ ಪಟ್ಟಿರುವೆ. ಈ ಸಿಗರೇಟನ್ನಾದರೂ ಸೇದು. ನಿನ್ನ ಆಯಾಸ ಪರಿಹಾರವಾಗುತ್ತದೆ' ಎಂದು ಹೇಳುತ್ತ ಅವನ ಕೈಯಲ್ಲಿ ಮರಿಜುವಾನಾ ಸಿಗರೇಟಿನ ಒಂದು ಪ್ಯಾಕ್‌ನ್ನು ಬಹು ಬಲವಂತ ಮಾಡಿ ಇರಿಸಿದ.

ದೇವಪ್ಪನಿಗೆ ಆಯಾಸವೆನಿಸಿತ್ತು. ಒಂದು ಸಿಗರೇಟು ಎಳೆದು ಮನೆಗೆ ಹೋದರಾದೀತೆಂದು ಅವನು ಪ್ಯಾಕಿನಿಂದ ಒಂದನ್ನು ಹೊರಗೆ ತೆಗೆದು ಅದಕ್ಕೆ ಬೆಂಕಿ ಹಚ್ಚಿದ. ಒಂದು ಜುರಿ ಎಳೆದುಕೊಂಡಂತೆ ಅವನಿಗೆ ಅನಿರ್ವಚನೀಯ ಸುಖ ಎನಿಸಿತು.

ಇಡಿಯ ದೇಹಕ್ಕೆ ಜೊಂಪು ಬಂದಂತೆ ಅವನಿಗೆ ಅನುಭವವಾಯಿತು.

❖ ❖ ❖

ಅವನಿಗೆ ಎದುರುಗಡೆಯ ಬಾವಿಯಲ್ಲಿ ಯಾರೋ ಈಜಾಡುತ್ತಿದ್ದ ಸದ್ದು ಕೇಳಿಸಿತು. ಆಮೇಲೆ ಒಮ್ಮೆಲೇ ನಿಃಶ್ಶಬ್ದ. ಅನಂತರ ಮಂಜುಳವಾಗಿ ಹಾಡೊಂದು ಗಾಳಿಯಲ್ಲಿ ಬಹು ಮಧುರವಾಗಿ ತೇಲಿ ಬಂದಿತು.

ದೇವಪ್ಪನಿಗೆ ಕುತೂಹಲವೆನಿಸಿತು. ಎದ್ದುಹೋಗಿ ನೋಡುತ್ತಾನೆ. ಅಲೌಕಿಕ ಸುಂದರಿಯೊಬ್ಬಳು ನೀರಿನಿಂದ ಎದ್ದು ಬಂದು, ಮಧುರವಾಗಿ ಹಾಡುತ್ತ ತನ್ನ ಮೈ ಕೈಗಳನ್ನು ಒರೆಸಿಕೊಳ್ಳುತ್ತಿದ್ದಳು. ಅವಳ ಧ್ವನಿ ಹಾಗೂ ರೂಪ, ಎರಡೂ ಒಂದಕ್ಕೊಂದು 'ನಾನು ಮೇಲು, ತಾನು ಮೇಲು' ಎಂದು ಸ್ಪರ್ಧೆ ಹೂಡಿರುವಂತೆ ಅವನಿಗೆ ಕಂಡವು.

ಆಕೆ ಯಾರಾಗಿರಬಹುದು ? ಆಲೋಚಿಸಿದಂತೆಲ್ಲ ಅವನಿಗೆ ಅವಳು ಹೆಚ್ಚಿನ ಸಮಸ್ಯೆ ಎನಿಸಿದಳು.

ಉಸಿರಾಡಿಸಿದರೆ ಅವಳಿಗೆಲ್ಲಿ ಕೇಳಿಸೀತೋ ಎಂದು ಅವನಿಗೆ ಭಯ. ಸದ್ದು ಮಾಡದೆ ನಿಂತು ಅವನು ಅವಳ ರೂಪವನ್ನು ಕಣ್ಣಿನಿಂದ, ಅವಳ ಸಂಗೀತವನ್ನು ಕಿವಿಯಿಂದ ಹೀರಿದ. ಅವನಿಗೆ ಅನಿರ್ವಚನೀಯ ಆನಂದವೆನಿಸಿತು.

ಅವಳ ದೃಷ್ಟಿ ನೀರಿನ ಮೇಲೆ ಬಿದ್ದಾಗ ಅವಳಿಗೆ ಏನೋ ಒಂದು ಪ್ರತಿಬಿಂಬ ಕಾಣಿಸಿತು. ಯಾರೋ ಮೇಲೆ ನಿಂತು ತನ್ನನ್ನು ಕದ್ದು ಅವಲೋಕಿಸುತ್ತಿರುವರೆಂದು ಅವಳಿಗೆ ನಾಚಿಕೆ ಹಾಗೂ ಸಿಟ್ಟು, ಎರಡೂ ಒಮ್ಮೆಲೇ ಬಂದವು.

ಆಕೆ ತನ್ನ ಅಂಗಾಂಗವನ್ನು ಮುಚ್ಚಿಕೊಂಡು, ಮುಖವನ್ನು ಮೇಲಕ್ಕೆತ್ತಿ, 'ಪರಸ್ತ್ರೀಯರನ್ನು ಹೀಗೆ ಕದ್ದು ನೋಡಬಾರದೆನ್ನುವುದು ಗಂಡಸರಾದ ನಿಮಗೆ ಏಕೆ ತಿಳಿಯುವುದಿಲ್ಲವೋ ಏನೋ ? ನಿಮ್ಮ ಸ್ತ್ರೀಯರನ್ನೂ ಹೀಗೆ ಯಾರಾದರೂ ನೋಡಿದರೆ' ಎಂದು ಕೇಳಿದಳು.

'ಕದ್ದು ನೋಡದಿದ್ದರೆ ಪರಸ್ತ್ರೀಯರನ್ನು ಇನ್ನು ಬೇರೆ ಯಾವ ಬಗೆಯಿಂದ ನೋಡುವುದು ಸಾಧ್ಯ ?' ಎಂದು ಅವನು ತನ್ನ ಕೃತಿಯನ್ನು ಸಮರ್ಥಿಸಿಕೊಳ್ಳುತ್ತ ಅವಳಿಗೆ ಪ್ರತಿ ಪ್ರಶ್ನೆ ಹಾಕಿದ.

'ಇಬ್ಬರು ಮೂವರು ಹೆಂಗಸರಿದ್ದರೆ, ನೀವು ಅವಳೆದುರಿನಲ್ಲಿ ಸಾಧು ಸಜ್ಜನರಂತೆ ನಿರುಪದ್ರವಿಯಾಗಿ ವರ್ತಿಸುತ್ತೀರಿ. ಒಬ್ಬಳೇ ಇದ್ದಳೆಂದರೆ, ಅವಳೊಂದಿಗೆ ನೀವು ಕುರಿಯನ್ನು ನುಂಗುವ ತೋಳನಂತೆ ವರ್ತಿಸುತ್ತೀರಿ. ಗಂಡಸರೆಲ್ಲರೂ ನೀವು ಸ್ವಭಾವದಲ್ಲಿ ಒಂದೇ ರೀತಿ'. ಆಕೆ ಇಡಿಯ ಪುರುಷಕುಲವನ್ನೇ ಅಪರಾಧೀ ಸ್ಥಾನದಲ್ಲಿ ನಿಲ್ಲಿಸಿ ಆಡಿಕೊಂಡಳು.

ಅವಳ ಟೀಕೆಗೆ ಉತ್ತರ ಕೊಡುವ ಗೊಡವೆಗೆ ಹೋಗದೆ, ಅವನು ಮಾತಿನ ದಿಕ್ಕನ್ನು ಬದಲಿಸಿ, 'ನಿನ್ನನ್ನು ನಾನು ಎಲ್ಲಿಯೋ ನೋಡಿದಂತೆ ಇದೆಯಲ್ಲ ? ಮುಖ ತುಂಬ ಪರಿಚಯದ್ದಾಗಿ ಕಾಣುತ್ತದೆ ?' ಎಂದು ಕುತೂಹಲಿಸಿ ಕೇಳಿದ.

'ಗಂಡಸರ ನಿಮ್ಮ ಜಾತಿಯೇ ವಿಚಿತ್ರ' ಎಂದು ಅವಳು ವ್ಯಾಖ್ಯೆ ನುಡಿದಳು.

'ಹೇಗೆ ?' ಅವಳನ್ನು ಆಹ್ವಾನಿಸುವಂತೆ ಅವನ ಪ್ರಶ್ನೆ.

'ಹೇಗೆ ? ಇಲ್ಲಿ ಕೇಳಿ. ಮನೆಯಲ್ಲಿ ಹೆಂಡತಿ ರೂಪಲಾವಣ್ಯ ತುಂಬಿಕೊಂಡಿದ್ದರೂ ನೀವು ಅವಳೆಡೆಗೆ ಕಣ್ಣೆತ್ತಿ ಕೂಡ ನೋಡುವುದಿಲ್ಲ. ಹೊರಗೆ ಇನ್ನೊಬ್ಬ ಹೆಂಗಸು, ಅವಳು ಹೇಗೇ ಇರಲಿ, ಸ್ವಲ್ಪ ತೋರಿಸಿಕೊಂಡರೂ ಸಾಕು, ಆಕೆ ಲೋಕೋತ್ತರ ಸುಂದರಿ ಎಂಬಂತೆ ನೀವು ಅವಳಿಗೆ ಮರುಳಾಗುತ್ತೀರಿ. ನನ್ನನ್ನು ದಿನವೂ ನೋಡಿ ನೋಡದಿದ್ದವರಂತೆ ನನ್ನನ್ನು ಪ್ರಶ್ನಿಸುತ್ತಿದ್ದೀರಿ. ನಾನು ದಿನವೂ ನಿಮ್ಮ ಕಣ್ಣೆದುರು ನಾನಾ ಭಂಗಿಗಳಲ್ಲಿ ಕುಣಿದಿದ್ದೇನೆ' ಎಂದು ಹೇಳುತ್ತ ಅವಳು ಸೀರೆ ಸುತ್ತಿಕೊಂಡು ಮೇಲಕ್ಕೆ ಹತ್ತಿ ಬಂದಳು.

ದೇಹವನ್ನು ಬಳುಕಿಸುತ್ತ ಒಂದೊಂದೇ ಹೆಜ್ಜೆಯನ್ನು ಕಿತ್ತು ಅವಳು ಮೇಲಕ್ಕೆ ಹತ್ತಿ ಬರುತ್ತಿರುವ ದೃಶ್ಯವನ್ನು ಕಂಡು ಅವನಿಗೆ ಮರೆವು ಹರಿದು ನೆನೆಹು ಒಮ್ಮೆಲೇ ಮರುಕಳಿಸಿದಂತಾಯಿತು. 'ಓ, ಈಗ ಗೊತ್ತಾಯಿತು. ನೀನು ಶಿಲಾಬಾಲಿಕೆ ಅಲ್ಲವೆ ?' ಎಂದು ಅವನು ಉದ್ವಿಗ್ನನಾಗಿ ಕೇಳಿದ.

'ನಿತ್ಯವೂ ನೋಡುವ ಮನೆಯ ಹೆಂಡತಿಯನ್ನೇ ಮರೆಯುವ ಪುರುಷ ದೃಷ್ಟಿಗೆ ಈಗ ಬೆಳಕು ಬಿದ್ದಿತೇನೋ' ಎನ್ನುತ್ತ ಆಕೆ ಕಿಲಕಿಲನೆ ನಕ್ಕಳು. ಅವಳ ದಂತಪಂಕ್ತಿಯ ಪ್ರಕಾಶದಿಂದ ಅವಳ ಮುಖ ಬೆಳಗಿಕೊಂಡಿತು.

'ನಿನ್ನ ಆಕೃತಿಯಂತೆಯೇ ಆ ವಿಗ್ರಹಗಳೂ ಬಹು ಸುಂದರವಾಗಿವೆ. ನಿನ್ನನ್ನೇ ಆ ವಿಗ್ರಹಗಳಲ್ಲಿ ಎರಕಹೊಯ್ದು ನಿಲ್ಲಿಸಿದಂತಾಗಿದೆ. ನಿನ್ನ ಸೌಂದರ್ಯಕ್ಕೇ ರೂಪು ಕೊಟ್ಟು ಶಿಲ್ಪಿಯು ರೂವಾರಿಯ ಕೆಲಸ ಮಾಡಿ ತೋರಿಸಿದ್ದಾನೆ. ಅದು ನಿಜವಾದ ಪ್ರೇಮದ ಕೆಲಸ'.

ಆ ಮಾತನ್ನು ಕೇಳುತ್ತಲೂ ಅವಳ ಕಣ್ಣು ಕಂಬನಿ ತುಂಬಿಕೊಂಡವು.

ತಾನು ಆಡಬಾರದ ಮಾತನ್ನೇನೋ ಆಡಿದಂತೆ ಅವನ ಮನಸ್ಸಿಗೆ ಹಳಹಳಿ ಎನಿಸಿತು. 'ನಾನು ನಿನ್ನ ಮನಸ್ಸು ನೋಯಿಸಿದೆ, ಕ್ಷಮಿಸಬೇಕು' ಎಂದು ಅವನು ಕೇಳಿದ.

'ಛೇ, ಅದೆಂಥ ಮಾತು ? ಕ್ಷಮಿಸಬೇಕೆಂದು ಕೇಳುವಂಥ ಯಾವ ಮಾತನ್ನೂ ನೀವು ಆಡಲಿಲ್ಲ. ನಿಮ್ಮ ಮಾತು ಕೇಳಿ ನನಗೆ ಹಿಂದಿನ ಪ್ರಸಂಗಗಳು ಕಣ್ಣಿಗೆ ಕಟ್ಟಿದಂತಾದವು. ನನ್ನನ್ನು ಕಲ್ಲಿನಲ್ಲಿ ಕೆತ್ತುವ ಪ್ರೇಮದ ಕೆಲಸ ಮಾಡಿದವರನ್ನು ನಾನು ನೆನೆದುಕೊಂಡೆ' ಎಂದು ಆಕೆ ಹೃದಯ ತುಂಬಿಕೊಂಡು ಅಭಿಮಾನದಿಂದ ಹೇಳಿದಳು.

❖ ❖ ❖

ಅವರಿಬ್ಬರ ಹೆಸರುಗಳು ಅನ್ವರ್ಥಕವಾಗಿಯೇ ಇದ್ದವು. ಅವನು ಹೂವಯ್ಯ, ಆಕೆ ಮಧುವಂತಿ. ಹೂವನ್ನು ಬಿಟ್ಟು ಮಧುವಿಗೆ ಬೇರೆ ಅಸ್ತಿತ್ವವೇ ಇಲ್ಲ. ಮಧು ಇಲ್ಲದ ಹೂವು ಇರಬಹುದು; ಆದರೆ ಹೂವು ಇಲ್ಲದೆ ಮಧು ಇರಲಾರದು. ಹೂವಿನಲ್ಲಿ ಮಧು ಇರುವಂತೆ ಆಕೆ ಹೂವಯ್ಯನ ದೇಹದ ಉಸಿರಾಗಿದ್ದಳು.

ಸ್ಥಪತಿ ಶಿಲ್ಪಾಚಾರ್ಯ ವಿಶ್ವಕರ್ಮನ ಏಕಮಾತ್ರ ಪುತ್ರಿ ಆಕೆ. ಹೂವಯ್ಯನಾದರೋ ಸ್ಥಪತಿಯ ಪ್ರೀತಿಪಾತ್ರ ಶಿಷ್ಯ.

ವಿಶ್ವಕರ್ಮ ಸ್ಥಪತಿಯಿಂದ ಭಲೇ ಎನ್ನುವ ಪ್ರಶಂಸೆ ಪಡೆಯುವುದೇನು ಸಾಮಾನ್ಯ ಸಂಗತಿಯಾಗಿರಲಿಲ್ಲ. ಪ್ರಥಮ ದರ್ಜೆಯದಲ್ಲದ ಯಾವುದೇನನ್ನೂ ಅವನು ಕಣ್ಣೆತ್ತಿ ನೋಡಿದವನೇ ಅಲ್ಲ.

ಸ್ಥಪತಿ ಮೆಚ್ಚುವಂಥ ಕೃತಿಯನ್ನು ನಿರ್ಮಿಸಿದರೆ ಮಧುವಂತಿ ತನ್ನ ಕೈ ಹಿಡಿಯುವಳೆನ್ನುವ ವಿಶ್ವಾಸ ಹೂವಯ್ಯನಿಗೆ. ಮದುವೆಗೆ ಮಧುವಂತಿ ಮಾತ್ರ ಒಪ್ಪಿದರೆ ಸಾಲದು, ಅವಳ ತಂದೆ ಒಪ್ಪಬೇಕು. ಅವಳ ತಂದೆಯ ಮನಸ್ಸನ್ನು ಗೆಲ್ಲಬೇಕಾದರೆ ತಾನು ಕಲಾಸಿದ್ಧಿಯನ್ನು ತೋರಿಸಬೇಕು. ಆ ಮುದುಕ ಸಂತೋಷಗೊಂಡರೆ ನಿಜವಾದ ಕಲಾಪ್ರತಿಭೆಯನ್ನು ಕಂಡಾಗಲೇ ಸಂತೋಷಗೊಂಡಾನು.

ಹೂವಯ್ಯನಿಗೆ ತಾನು ಬಿಡಿಸಬೇಕೆಂದಿದ್ದ ಶಿಲ್ಪಕೃತಿಯಲ್ಲಿ ರೂಪ ತುಂಬುವುದಕ್ಕೆ ಒಂದು ದೃಷ್ಟಾಂತ ಬೇಕಿದ್ದಿತು.

ಮಧುವಂತಿ ಬಂದು ಕುಣಿದಳು. ಅವಳ ಮೂರ್ತಿ ಅವನ ಕಣ್ಣು ತುಂಬಿಕೊಂಡಿತು. ಮನಸ್ಸು ತುಂಬಿಕೊಂಡಿತು. ಸುತ್ತಣ ಸೃಷ್ಟಿಯೇ ಮಧುಮಯವಾದಂತಾಯಿತು.

ಕಲ್ಪನೆಯ ಬೆನ್ನು ಏರಿಕೊಂಡು ಹೊರಟಿದ್ದ ಅವನ ಮನಸ್ಸಿಗೆ ಥಟ್ಟನೆ ಏನೋ ಹೊಳೆಯಿತು. 'ಏಕಾಗಬಾರದು' ಎಂದು ಅವನು ತನ್ನಷ್ಟಕ್ಕೆ ತಾನೇ ತರ್ಕಿಸಿದ.

ಅವನು ಕಣ್ಣುಮುಚ್ಚಿ ಕುಳಿತಿದ್ದ ಸಮಾಧಿ ಸ್ಥಿತಿಯನ್ನು ನೋಡಿ, 'ವಿಶ್ವಾಮಿತ್ರ ತಪಸ್ಸಿಗೆ ಕುಳಿತಂತಾಗಿದೆ' ಎಂದು ಮಧುವಂತಿ ವಿನೋದ ಮಾಡಿದಳು.

'ಹೌದು ಮಧು' ಹೂವಯ್ಯ ಕಣ್ತೆರೆದು ಹೇಳಿದ. 'ನಾನು ವಿಶ್ವಾಮಿತ್ರ. ನನಗೆ ನೀನು ಮೇನಕೆ ಆಗಬೇಕು. ಈಗ ನಾನು ಕಲೆಯ ಶಕುಂತಲೆಯನ್ನು ಸೃಷ್ಟಿಸಬೇಕಾಗಿದೆ. ನಿನ್ನ ತಂದೆಯನ್ನು ಸಂತೋಷಪಡಿಸುವುದು ಸುಲಭದ ಸಂಗತಿಯಲ್ಲ. ಈ ಕೆಲಸದಲ್ಲಿ ನನಗೆ ನಿನ್ನ ಸಹಾಯ ಬೇಕು'.

'ನಾನೇನು ಶಿಲ್ಪಿಯೇ ? ನಿನಗೆ ನಾನು ಯಾವ ರೀತಿಯಿಂದ ಸಹಾಯ ಮಾಡಬಲ್ಲೆ ?' ಎಂದು ಮಧುವಂತಿ ಕುತೂಹಲಗೊಂಡು ಕೇಳಿದಳು.

'ನೀನು ಶಿಲ್ಪಿ ಆಗದಿದ್ದರೇನಂತೆ ? ನನ್ನಿಂದ ಮಹಾಶಿಲ್ಪ ರಚನೆ ಆಗುವಂತೆ ಸ್ಫೂರ್ತಿಕೊಡುವ ಶಕ್ತಿ ನಿನ್ನಲ್ಲಿದೆ. ನಾನು ನಿನ್ನನ್ನೇ ದೃಷ್ಟಾಂತವಾಗಿ ನನ್ನ ಕಣ್ಣೆದುರು ನಿಲ್ಲಿಸಿಕೊಂಡು ಶಿಲ್ಪ ರಚಿಸಬೇಕೆಂದಿದ್ದೇನೆ'.

ಹೂವಯ್ಯ ಈ ಮಾತು ಹೇಳುತ್ತಲೂ ಮಧುವಂತಿಯ ಮುಖ ಅರಳಿಕೊಂಡಿತು. 'ನಾನು ನಿನಗೋಸುಗ ಒಂಟಿಗಾಲ ಮೇಲೆ ನಿಂತು ತಪಸ್ಸು ಬೇಕಾದರೂ ಮಾಡಬಲ್ಲೆ' ಎಂದು ಆಕೆ ಉತ್ಸುಕತೆಯಿಂದ ಹೇಳಿದಳು.

'ಆದರೆ, ಒಂದು ಕರಾರು ನೀನು ಪಾಲಿಸಬೇಕು. ಸ್ಥಪತಿಯವರ ಆಜ್ಞೆ ನಿನಗೆ ಗೊತ್ತೇ ಇದೆ. ನಿನ್ನ ಚೇಷ್ಟೆ, ಸಂಯಮದ ಎಲ್ಲೆಕಟ್ಟು ಮೀರಿಹೋಗಬಾರದು. ಶಿಲ್ಪ-ಶೀಲಚ್ಯುತಿಯನ್ನು ಸ್ಥಪತಿಯವರು ಎಂದೂ ಸಹಿಸುವುದಿಲ್ಲ' ಎಂದು ಹೂವಯ್ಯ, ತಾನು ವ್ರತಬದ್ಧನಾಗಿ ತನ್ನೆದುರು ನಿರ್ಮಿಸಿಕೊಂಡಿದ್ದ ಲಕ್ಷ್ಮಣರೇಖೆಯನ್ನು ತೋರಿಸಿಕೊಟ್ಟ.

❖ ❖ ❖

ಹೂವಯ್ಯ ಕರಗತ ಮಾಡಿಕೊಂಡಿದ್ದ ಶಿಲ್ಪಸಿದ್ಧಿಯನ್ನು ಕಂಡು ಸ್ಥಪತಿ ವಿಶ್ವಕರ್ಮ ಸಂಪ್ರೀತನಾಗಿ ತನ್ನ ಹೆಂಡತಿ ಚೆಲುವಾಂಬೆಯ ಎದುರು ಅವನನ್ನು ಪ್ರಶಂಸೆ ಮಾಡಿದನು. ಗಂಡು ಮಕ್ಕಳಿಲ್ಲದ ತನ್ನ ಕುಟುಂಬದಲ್ಲಿ ಸ್ಥಪತಿ ಕಾರ್ಯ ಮುಂದುವರಿಯುವುದಿಲ್ಲ ಎನ್ನುವ ಅಳುಕು ಈಗ ಅವನ ಮನಸ್ಸಿನಲ್ಲಿ ಉಳಿದಿರಲಿಲ್ಲ. ಅವನಿಗೆ ಸಂಪೂರ್ಣ ಸಂತೃಪ್ತಿ ಎನಿಸಿತ್ತು.

'ಮಧುವಂತಿಗೆ ವರನನ್ನು ಗೊತ್ತುಪಡಿಸುವ ಚಿಂತೆಯೊಂದು ಪರಿಹಾರ ವಾದಂತಾಯಿತು' ಎಂದು ವಿಶ್ವಕರ್ಮ ಹೆಂಡತಿಗೆ ಹೇಳಿದ.

'ನಿಮ್ಮ ಅಳಿಯನಾಗುವ ಆ ಪುಣ್ಯಶಾಲಿ ಯಾರು ?' ಎಂದು ಚೆಲುವಾಂಬೆ ಕುತೂಹಲಗೊಂಡು ಕೇಳಿದಳು. ಯಾವ ಹೆಸರು ಬರುವುದೋ ಎಂದು ಅವಳ ಮನಸ್ಸಿಗೆ ದಿಗಿಲು. ದೇವರೇ ನನಗೆ ಬೇಕಾದ ಹೆಸರನ್ನೇ ಹೇಳಿಸು ಎಂದು ಆಕೆ ಚೆನ್ನಕೇಶವನನ್ನು ಪ್ರಾರ್ಥಿಸಿದಳು.

'ವರನನ್ನಾಗಿ ಹೂವಪ್ಪನನ್ನು ಗೊತ್ತು ಮಾಡಿದರೆ ಹೇಗೆ' ಎನ್ನುವ ಮಾತು ಗಂಡನ ಬಾಯಿಂದ ಬರುತ್ತಲೂ ಚೆಲುವಾಂಬೆಗೆ ಜೇನು ಸವಿದಂತಾಯಿತು. 'ನಿಮ್ಮ ಇಚ್ಛೆಯೇ ನನ್ನ ಇಚ್ಛೆ' ಎಂದು ಆಕೆ ಗಂಡನಿಗೆ ಹೇಳಿದಳು.

❖ ❖ ❖

ಹೂವಯ್ಯನ ಶಿಲ್ಪಕಾರ್ಯವನ್ನು ಸ್ಥಪತಿ ವಿಶ್ವಕರ್ಮ ಅನೇಕರಿಗೆ ಕರೆದು ತೋರಿಸಿದ್ದನು. ಅವನು ಸಾಧಿಸಿದ್ದ ಶಿಲ್ಪ ನೈಪುಣ್ಯವನ್ನು ಎಷ್ಟು ವರ್ಣಿಸಿ ಹೇಳಿದರೂ ಸ್ಥಪತಿಗೆ ಸಮಾಧಾನವಿಲ್ಲ.

'ನಿನಗೆ ಕಲಿಸತಕ್ಕ ಗುರು ಈ ಜಗತ್ತಿನಲ್ಲಿ ಈಗ ಯಾರೂ ಇಲ್ಲ. ನನ್ನನ್ನು ನೀನು ಜಯಿಸಿಬಿಟ್ಟಿರುವೆ. ಶಿಲ್ಪದ ಎಲ್ಲ ಸೂಕ್ಷ್ಮ ವಿನ್ಯಾಸಗಳೂ ನಿನಗೆ ಕರತಲಾಮಲಕವಾಗಿವೆ. ಕಲೆಯನ್ನು ಬಲ್ಲ ನಿನ್ನ ಕೈಯಲ್ಲಿ ಕಲ್ಲೂ ಕೂಡ ಮೇಣವಾಗಿದೆ. ನಿನಗೆ ನಾನು ಏನು ಬಹುಮಾನ ಕೊಡಬಲ್ಲೆ ?'

ಹೂವಯ್ಯನಿಗೆ ಸ್ಥಪತಿಯಿಂದ ಸೈ ಎನಿಸಿಕೊಳ್ಳುವುದಕ್ಕಿಂತಲೂ ಹೆಚ್ಚಿನ ಬಹುಮಾನ ಬೇರೆ ಯಾವುದು ಬೇಕು ?

'ಇದೆಲ್ಲವೂ ನಿಮ್ಮ ಆಶೀರ್ವಾದ. ನೀವು ಶಿಲ್ಪ ಕಲಿಸದಿದ್ದರೆ ನಾನೂ ಒಂದು ಕಲ್ಲಾಗಿರುತ್ತಿದ್ದೆ. ನೀವು ನನ್ನನ್ನು ಮುಟ್ಟಿ ಒಬ್ಬ ಮನುಷ್ಯನನ್ನಾಗಿ ಮಾಡಿದ್ದೀರಿ'.

ಶಿಷ್ಯ ಹೂವಯ್ಯ ವ್ಯಕ್ತಪಡಿಸಿದ ಈ ಕೃತಜ್ಞತೆಯ ನುಡಿಯನ್ನು ಕೇಳಿ ವಿಶ್ವಕರ್ಮನ ಹೃದಯ ತುಂಬಿ ಬಂದಿತು. 'ಜಕ್ಕಣಾಚಾರಿಯನ್ನು ಮೀರಿಸುವಂತೆ ನಿನ್ನ ಹೆಸರು ಅಜರಾಮರವಾಗಿ ಉಳಿಯುತ್ತದೆ' ಎಂದು ಹೇಳಿದ.

ತಂದೆ ಹೋಗುವುದನ್ನೇ ಕಾಯ್ದಿದ್ದ ಮಧುವಂತಿ ಮರೆಯಿಂದ ಓಡಿಬಂದು, ಹೂವಯ್ಯನೆದುರು ನಿಂತು, 'ನಿನಗೆ ಬಹುಮಾನ ಕೊಡುವುದು ಆಚಾರ್ಯರ ಬಳಿಯಲ್ಲಿ ಏನೂ ಇರಲಿಲ್ಲವೇ ? ಇಷ್ಟೊಂದು ದೊಡ್ಡ ಶಿಲ್ಪಿಗೆ ಕೇವಲ ಬಾಯಿ ಪ್ರಶಂಸೆಯೊಂದೇ ಬಹುಮಾನವೇ ?' ಎಂದು ಕೇಳಿದಳು.

'ನೀನಾಗಿದ್ದರೆ ಏನು ಕೊಡುತ್ತಿದ್ದೆ ?' ಎಂದು ಹೂವಯ್ಯ ಸಹಜವಾಗಿ ಕೇಳಿದ.

'ನಾನಾಗಿದ್ದರೆ ಇದೋ ನೋಡು' ಎಂದು ಮಧುವಂತಿ ಮುಖದಲ್ಲಿ ತುಂಟ ನಗೆಯನ್ನು ತುಳುಕಿಸುತ್ತ, ಹೂವಯ್ಯ 'ಬೇಡ, ಬೇಡ' ಎಂದು ಅಂಗಲಾಚಿದರೂ, ಅವನ ಪ್ರತಿರೋಧವನ್ನು ಲೆಕ್ಕಿಸದೆ ಅವನ ಮುಖವನ್ನು ತನ್ನೆರಡೂ ಕೈಗಳಲ್ಲಿ ಹಿಡಿದುಕೊಂಡು ಅವನ ತುಟಿಗಳ ಮೇಲೆ ಬಲವಾಗಿ ಮುತ್ತು ಕೊಟ್ಟಳು.

'ಮಧೂ, ಅನಾಹುತ ಮಾಡಿಬಿಟ್ಟೆ. ನಾನು ನಿನಗೆ ಎಷ್ಟು ಸಲ ಹೇಳಲಿಲ್ಲ ? ನಾನು ಹಿಡಿದಿರುವ ಈ ಶಿಲ್ಪವ್ರತ ಮುಗಿಯುವವರೆಗೂ ನೀನು ತಡೆಯಬೇಕೆಂದು. ಸ್ಥಪತಿಯವರು ಶಿಲ್ಪಿಗಳಿಗೆಲ್ಲ ವಿಧಿಸಿರುವ ಆಜ್ಞೆ ನಿನಗೆ ಗೊತ್ತೇ ಇದೆ. ಹೆಣ್ಣಿನ ಮೋಹದೊಳಗೆ ಸಿಲುಕಬಾರದು. ಪರಸ್ತ್ರೀಯರನ್ನು ಸ್ಪರ್ಶ ಮಾಡಬಾರದು. ಅದರಿಂದ ಶಿಲ್ಪಕಾರ್ಯ ಅಪವಿತ್ರವಾಗುತ್ತದೆ ಎಂದು ಅವರು ಹೇಳಿರುವುದನ್ನು ನೀನು ಕೇಳಿಲ್ಲವೇ ? ಇದು ಸ್ಥಪತಿಯವರಿಗೆ ಗೊತ್ತಾದರೆ ಪರಿಣಾಮ ಏನಾದೀತೆಂಬುದು ನಿನಗೆ ತಿಳಿಯದೇನು ?'

ಹೂವಯ್ಯನ ಮನಸ್ಸಿಗಾದ ಭೀತಿ ಅವಳಿಗೂ ಆಗಿದ್ದಿತು. ಅವಳ ಹೃದಯ ಅಶುಭವನ್ನು ನೆನೆದು ಹೊಡೆದುಕೊಳ್ಳತೊಡಗಿತು.

'ನನ್ನಿಂದ ಅನುಚಿತವಾಯಿತು. ನಿನ್ನ ಶಿಲ್ಪಕಾರ್ಯ ಮುಗಿಯುವವರೆಗೂ ನಾನು ಇಂಥ ತಪ್ಪನ್ನು ಇನ್ನೆಂದೂ ಮಾಡುವುದಿಲ್ಲ, ಸ್ವಾಮಿ ಚೆನ್ನಕೇಶವನ ಸಾಕ್ಷಿ' ಎಂದು ಮಧುವಂತಿ ತನ್ನ ಗಲ್ಲ ಗಲ್ಲ ಬಡಿದುಕೊಂಡಳು. ಅವಳ ಮನಸ್ಸು ಪಶ್ಚಾತ್ತಾಪದ ಉರಿಯಲ್ಲಿ ಸುಟ್ಟು ಪರಿಶುದ್ಧವಾಗಿದ್ದಿತು.

ಆಗಬಾರದ ಅನುಚಿತ ಸಂಭವಿಸಿತೆನ್ನುವ ಎದೆಗುದಿ ಹೂವಯ್ಯನಲ್ಲಿ ಇದ್ದಿತಾದುದರಿಂದ ಮರುದಿನ ಅವನಿಗೆ ತನ್ನ ಕೆಲಸದ ಮೇಲೆ ಮನಸ್ಸನ್ನು ಕೇಂದ್ರೀಕರಿಸಲಿಕ್ಕೆ ಆಗಲಿಲ್ಲ. ಉಳಿಯ ಮೇಲೆ ಹೊಡೆತ ಅಸ್ಥಿರವಾಗಿ ಬೀಳತೊಡಗಿದ್ದವು. ಅಪಸ್ವರ ಆದುದನ್ನು ಸಂಗೀತ ಶಾಸ್ತ್ರಜ್ಞನು ಗದ್ದಲದಲ್ಲಿಯೂ ಗುರುತಿಸುವಂತೆ ಸ್ಥಪತಿ ಶಿಲ್ಪಾಚಾರ್ಯನು ಗುರುತಿಸಿದ್ದನು.

ಹೂವಯ್ಯನಿಂದ ಅಚಾತುರ್ಯ ಆಗಿ ಹೋಗಿತ್ತು. ಶಿಲಾಬಾಲಿಕೆಯೋರ್ವಳ ಬೆರಳನ್ನು ಬಿಡಿಸುತ್ತಿದ್ದಾಗ ಕಲ್ಲಿನ ದೊಡ್ಡ ಪೆಣಿಕೆಯೊಂದು ಹಾರಿ ಹೋಗಿ ಅದು ವಿಕೃತಗೊಂಡಿತ್ತು. ಸ್ಥಪತಿ ಎದುರಿಗೆ ಬಂದು 'ಹೂವಯ್ಯ' ಎಂದು ಕೋಪದಿಂದ ಎತ್ತರದ ಧ್ವನಿಯಲ್ಲಿ ಕೂಗಿದಾಗ, ಅವನ ಮೈ ಬೆವೆತುಕೊಂಡಿತ್ತು.

'ನಾನು ಏನು ಹೇಳಿದ್ದೆ' ಎನ್ನುವ ವಿಶ್ವಕರ್ಮನ ಪ್ರಶ್ನೆ ಏನೋ ಅನಾಹುತ ಆಗಿದೆ ಎನ್ನುವುದನ್ನು ಹೇಳುತ್ತಿತ್ತು.

ಸ್ಥಪತಿ ಏನು ಮಾಡುವರೋ ಎಂದು ಅರ್ಥಗರ್ಭಿತ ದೃಷ್ಟಿಯಿಂದ ಅವರು ಒಬ್ಬರೊಬ್ಬರ ಮುಖ ನೋಡಿದರು.

ಅವರು ನೋಡನೋಡುತ್ತಿದ್ದಂತೆ ಶಿಲ್ಪಾಚಾರ್ಯರು ಹೂವಯ್ಯನ ಕೈಯೊಳಗಿನ ಉಳಿಯನ್ನು ಕಸಿದುಕೊಂಡಿದ್ದರು. ಅವನಿಗೆ ಇದಕ್ಕಿಂತಲೂ ಹೆಚ್ಚಿನ ಶಿಕ್ಷೆ ಬೇರೆ ಯಾವುದು ಬೇಕು ? ಉಳಿಯನ್ನು ಕಳೆದುಕೊಂಡ ಶಿಲ್ಪಿಯು ಸತ್ತಂತೆಯೇ ಸರಿ.

'ಇಲ್ಲಿ ಇನ್ನೂ ಏಕೆ ಕುಳಿತಿರುವೆ ನಡೆ' ಎಂದು ಸ್ಥಪತಿ ಗುಡುಗುತ್ತಿದ್ದಂತೆ ಹೂವಯ್ಯ ಜೀವನ್ಮೃತನಂತೆ ನಿರ್ವಿಣ್ಣನಾಗಿದ್ದ. ಅವನು ಅಲ್ಲಿಂದ ಹೇಗೆ ಎದ್ದುಹೋದನೋ ಅವನಿಗೇ ತಿಳಿಯದು. ಹೋಗಬೇಕೆಂದರೂ ಅವನು ಎಲ್ಲಿಗೆ ಹೋಗಬೇಕು ? ಭೂಮಿ ಬಾಯ್ದೆರೆದು ತನ್ನನ್ನು ನುಂಗಿಕೊಂಡಿದ್ದರೆ ಅವನಿಗೆ ಸಮಾಧಾನವೆನಿಸುತ್ತಿತ್ತು.

ಹೂವಯ್ಯ ಹೊರಟುಹೋದ.

ಅವನಿಗಾಗುವ ಶಿಕ್ಷೆಯನ್ನು ನೆನೆದು ಶಿಲ್ಪಿಗಳೆಲ್ಲ ನಡುಗಿದರು. ನಾಳೆ ಹೂವಯ್ಯನ ಕೈಯನ್ನು ಕಡಿದು ಹಾಕುತ್ತಾರೆ. ಒಂದು ಮಹೋನ್ನತ ಕಲಾಪ್ರತಿಭೆ ತನ್ನ ಉಚ್ಛ್ರಾಯ ಸ್ಥಿತಿಯಲ್ಲಿಯೇ ಈ ರೀತಿ ಕೊನೆಗೊಳ್ಳುವಂತಾಯಿತೆಂದು ಅವರು ಮಮ್ಮಲ ಮರುಗಿದರು.

ಚೆಲುವಾಂಬೆ ಮಗಳನ್ನು ಕರೆದು 'ನಿನಗೆ ನಾವು ಗಂಡು ಗೊತ್ತು ಮಾಡಿದ್ದೇವೆ' ಎಂದು ಕಕ್ಕುಲಾತಿಯಿಂದ ಹೇಳಿದಳು.

ವರ ಯಾರೋ ಎಂದು ಮಧುವಂತಿ ಹೆದರಿಕೊಂಡು, 'ನನಗೆ ಈಗಲೇ ಮದುವೆ ಬೇಡ' ಎಂದಳು.

'ನಿನಗೆ ಬೇಕಾದ ಗಂಡನ್ನೇ ಗೊತ್ತು ಮಾಡಿದರೂ ನೀನು ಮದುವೆ ಬೇಡ ಎಂದು ಹೇಳುತ್ತೀಯಾ ?'

ಮಧುವಂತಿಗೆ ಕುತೂಹಲವೆನಿಸಿತು, 'ಅವರು ಯಾರು ?' ಎಂದು ಕೇಳಿದಳು.

ಚೆಲುವಾಂಬೆ ಮುಖವನ್ನು ಹಿಗ್ಗಿಸಿ 'ಹೂವಯ್ಯ' ಎಂದು ಹೇಳಿದಳು.

'ನಿಜವೇ ಅವ್ವ ?' ಎಂದು ಮಧುವಂತಿ ಉತ್ಸುಕತೆಯಿಂದ ಕೇಳಿದಳು. ತನ್ನ ಮನಸ್ಸಿನ ಅನುಮಾನವನ್ನು ಸೂಚಿಸುತ್ತ, 'ಅಪ್ಪಾಜಿಯೊಂದು ಒಪ್ಪಬೇಕಲ್ಲ ?' ಎಂದಳು.

'ಅವರು ಒಪ್ಪಿ ಹೇಳಿದುದನ್ನೇ ನಾನು ನಿನಗೆ ಹೇಳುತ್ತಿದ್ದೇನೆ' ಎಂದು ಚೆಲುವಾಂಬೆ ನುಡಿದಾಗ, ಮಧುವಂತಿ, 'ಅವ್ವ, ನೀನು ಎಷ್ಟು ಒಳ್ಳೆಯವಳು' ಎಂದು ಹೇಳುತ್ತ ತಾಯಿಯನ್ನು ತಬ್ಬಿಕೊಂಡಳು.

❖ ❖ ❖

ಮರುದಿನ ಶಿಲ್ಪಿಗಳ ಶಿಬಿರದಲ್ಲೆಲ್ಲ ಕಳವಳ, ಕೋಲಾಹಲ.

ಕೈ ಕಡಿಸಿಕೊಂಡು ಅವಮಾನದ ಬಾಳನ್ನು ಬದುಕುವುದಕ್ಕಿಂತಲೂ ಸಾಯುವುದೇ ಶ್ರೇಯಸ್ಕರ ಎಂದು ಹೂವಯ್ಯನು ಶಿಬಿರದ ಬಾವಿಯಲ್ಲಿ ಕಲ್ಲುಕಟ್ಟಿ ಹಾರಿಕೊಂಡು ಆತ್ಮಾಹುತಿ ಕೊಟ್ಟಿದ್ದ.

ತನ್ನ ಜೀವನದ ಹೊದಿಕೆ ಆಗಿದ್ದ ಹೂವು ಬಾಡಿಬಿದ್ದ ಮೇಲೆ ಮಧು ಎಲ್ಲಿ ಇರುತ್ತದೆ ? ಅವಳೂ ಹೂವಯ್ಯನನ್ನು ಹಿಂಬಾಲಿಸಿದಳು.

❖ ❖ ❖

ಮಧುವಂತಿ ದೇವಪ್ಪನಿಗೆ ಹೇಳಿದಳು : 'ನಾನು ಚಿರವಧು. ನನ್ನ ಪ್ರಿಯಕರನಿಗಾಗಿ ನಾನು ಎಂಟುನೂರು ವರ್ಷಗಳಿಂದಲೂ ಇಲ್ಲಿಯೇ ಕಾಯ್ದು ಕುಳಿತಿದ್ದೇನೆ. ಕಾಲ ಸ್ಥಿತಿಗಳೊಂದೂ ನನ್ನ ಮೇಲೆ ಪರಿಣಾಮ ಬೀರಲಾರವು ! ನೀವು ಬೇಲೂರಿಗೆ ಬರುತ್ತಿರುವುದು ಚೆನ್ನಕೇಶವನನ್ನು ನೋಡುವುದಕ್ಕೆ ಅಲ್ಲ, ನನ್ನನ್ನು ನೋಡುವುದಕ್ಕೆ. ಏನು ರೂಪ, ಏನು ಲಾವಣ್ಯ ಎಂದು ನೀವು ವರ್ಣಿಸುತ್ತೀರಿ. ನನಗೆ ಆ ಮಾಟ ಮಾಡಿ ಅಲ್ಲಿ ನಿಲ್ಲಿಸಿದವರು ಯಾರೆಂಬುದನ್ನು ನೀವು ಒಂದು

ಕ್ಷಣವಾದರೂ ಯೋಚಿಸಿದ್ದೀರಾ ? ನಿಮ್ಮಲ್ಲಿ ಕಲಾವಿದನನ್ನು ಗೌರವಿಸುವ ಕೃತಜ್ಞತೆಯ ಲವಲೇಶವಾದರೂ ಇದೆಯೇ ? ಅವನು ಬದುಕಿದ್ದಾಗ ಕೇಳುವುದಿಲ್ಲ. ಸತ್ತಾಗ ನೆನೆಯುವುದಿಲ್ಲ. ನೀವು ಕಣ್ಣೆತ್ತಿ ನೋಡದಿದ್ದರೆ ಕಲೆ, ಕಲಾವಿದ ಸತ್ತೇ ಹೋದಂತೆ ಎಂದು ನೀವು ತಿಳಿದುಕೊಂಡೀರೋ ?

'ಇಲ್ಲ ಇಲ್ಲ' ಎಂದು ದೇವಪ್ಪ ಹೇಳಿದ.

ಅವನನ್ನು 'ಏಳು' ಎಂದು ಎಬ್ಬಿಸಿ, ಬಾಗಿಲು ಹಾಕಿಕೊಂಡು ಹೋಗಬೇಕೆಂದು ಬಂದಿದ್ದ ಪೂಜಾರಿಯು ಅದು ತನಗೇ ಹೇಳಿದ್ದೆಂದು ತಿಳಿದುಕೊಂಡ.

●

# ಬಯಲಾಟ

● ಪ್ರೊ. ಕೀರ್ತಿನಾಥ ಕುರ್ತಕೋಟಿ

ಸೂಟಿಯಲ್ಲಿ ಊರಿಗೆ ಬರಲಿದ್ದ ಗೌಡರ ಮಗನನ್ನು ಕರೆತರಲು, ಸವಾರಿಗಾಡಿ ಮಾಡಿಕೊಂಡು ಸ್ಟೇಷನ್ನಿಗೆ ಹೋಗಿದ್ದ ಕರಿಯಪ್ಪ ಮರಳಿದಾಗ ರಾತ್ರಿ ಹತ್ತು ಗಂಟೆಯ ಮೇಲಾಗಿತ್ತು. ಎಂಟುಗಂಟೆಗೇ ಬರಬೇಕಾಗಿದ್ದ ಗಾಡಿ ಒಂದು ತಾಸು ತಡವಾಗಿ ಬಂದಿತ್ತು. ಗೌಡರ ಮಗನೂ ಬಂದಿರಲಿಲ್ಲ. ಹುಡುಕಿ ಹುಡುಕಿ ನಿರಾಶನಾಗಿ ಗಾಡಿಹೋಗುವವರೆಗೆ ದಾರಿ ಕಾದು ಕರಿಯಪ್ಪ ತಿರುಗಿದ್ದ.

ಎತ್ತುಗಳು ದಣಿದಿದ್ದರೂ ಊರ ಕಡೆಗಿನ ದಾರಿಯಾದ್ದರಿಂದ ವೇಗವಾಗಿಯೇ ಓಟ ಬಿಟ್ಟವು. ಬಾರಕೋಲನ್ನು ಎತ್ತುವ ತ್ರಾಣ ಕರಿಯಪ್ಪನಿಗಾದರೂ ಎಲ್ಲಿತ್ತು ? ಇಡೀದಿನ ಕೆಲಸ ಮಾಡಿಮಾಡಿ ದಣಿದು ಹೋಗಿದ್ದ; ಗೌಡರಿಂದ ಬೈಗಳು ತಿಂದುತಿಂದು ದಣಿದಿದ್ದ. ಮುದುಕನಾಗಿಯೂ ಬೈಸಿಕೊಳ್ಳುವುದು ತಪ್ಪಿರಲಿಲ್ಲ. ಮೇಲಾಗಿ ಅಂದು ಅವನಿಗೆ ಊಟವಾಗಿರಲಿಲ್ಲ. ಮಧ್ಯಾಹ್ನ ಹೆಣ್ಣಾಳುಗಳನ್ನು ಕೂಡಿಸಿ ಹತ್ತಿಯನ್ನು ಅರೆಸುವ ಕೆಲಸವಿದ್ದದ್ದರಿಂದ, ಗೌಡರ ಮನೆಯಲ್ಲಿಯೇ ರೊಟ್ಟಿ ತಿಂದು ಮುಗಿಸಿದ್ದ. ಸಂಜೆಯಾದೊಡನೆ ಚಕ್ಕಡಿ ಹೂಡಿಕೊಂಡು ಸ್ಟೇಷನ್ನಿಗೆ ಹೋಗಬೇಕಾಗಿತ್ತು. ಬೇಕೆಂದೇ ಕಮತಿಗರ ಭರಮ, 'ಬುತ್ತಿ ತಂದುಕೊಡಾಕ ನೀಲವ್ವಗ (ಕರಿಯಪ್ಪನ ಒಬ್ಬಳೇ ಮಗಳು) ಹೇಳಿ ಹೋಗಲೇನ ಕಾಕಾ ?' ಎಂದು ಮೀಸೆಯಲ್ಲಿ ನಗುತ್ತ ಕೆಣಕಿ ಕೇಳಿದ್ದ. ದಿನಕ್ಕೊಮ್ಮೆಯಾದರೂ ಈ ರೀತಿ ಅವನನ್ನು ಚೇಷ್ಟೆ ಮಾಡುವದು ಉಳಿದೆಲ್ಲ ಆಳುಗಳಿಗೆ ನಿತ್ಯದ ರೂಢಿಯಾಗಿತ್ತು. ಕರಿಯಪ್ಪ ಸಾಮಾನ್ಯವಾಗಿ ಅದನ್ನೆಲ್ಲ ಹಚ್ಚಿಕೊಳ್ಳುತ್ತಿರಲಿಲ್ಲ. ಆದರೆ ಇಂದು ಅದೇ ಮಾತು ಹೊಟ್ಟೆ ಹಸಿದಾಗ, ಮುಳ್ಳಿನಂತೆ ಚುಚ್ಚುತ್ತಿತ್ತು.

ಗಾಡಿಬಿಟ್ಟಾಗ ಕರಿಯಪ್ಪನಿಗೆ ಈ ಮಾತೆಲ್ಲ ನೆನಪಾಗಿದ್ದವು. ಒಬ್ಬನೇ ಇದ್ದದ್ದರಿಂದಲೋ ಏನೋ, ಅವನಿಗರಿಯದಂತೆಯೇ ಸಂಕಟವಾಗುತ್ತಿತ್ತು. ಅದನ್ನು ಮರೆಸಬೇಕೆಂದು ಎಲೆ-ಅಡಿಕೆಯ ಸಾಮಾನು ಹೊರತೆಗೆದ. ಆದರೆ ಒಂದು ಒಣಗಿದ್ದ ಎಲೆಯನ್ನು ಬಿಟ್ಟರೆ ಮತ್ತೇನೂ ಇರಲಿಲ್ಲ. ತಂಬಾಕಿನ ಚೀಲ ಬರಿದಾಗಿತ್ತು; ಸುಣ್ಣ ಒಣಗಿ ಪುಡಿಯಾಗಿತ್ತು. ಗಡಿಬಿಡಿಯಲ್ಲಿ

ಅವನ್ನೆಲ್ಲ ತರಲು ಮರತೇ ಹೋಗಿತ್ತು. ಕರಿಯಪ್ಪನಿಗೆ ಸಿಟ್ಟುಬಂದು. ಬಾರಕೋಲನ್ನೇರಿಸಿ ಎತ್ತಿಗೆ ಒಂದೇಟು ಬಿಗಿದ. ಆದರೆ ಅವುಗಳ ವೇಗದಲ್ಲೇನೂ ಹೆಚ್ಚು – ಕಡಿಮೆಯಾಗಲಿಲ್ಲ.

ಯೋಚಿಸಿ ನೋಡಿದರೆ ಅವನ ಬಾಳುವೆಯೆಲ್ಲ ಇನ್ನೊಬ್ಬರನ್ನು ತೃಪ್ತಿಗೊಳಿಸುವುದರಲ್ಲಿಯೇ ಕಳೆದುಹೋಗಿತ್ತು. ಸಣ್ಣವನಿದ್ದಾಗಲೇ ಜೀತದಾಳಾಗಿ ಗೌಡರ ಮನೆಯನ್ನು ಸೇರಿದ್ದ. ಮುಂದೆರಡು ವರ್ಷಗಳಲ್ಲಿಯೇ ತಂದೆ ಸತ್ತುಹೋಗಿದ್ದ. ಗೌಡರ ಮನೆಯ ಕೆಲಸ ಕಾಯಂ ಆಯಿತು. ನಡುವೆ ಒಮ್ಮೆ ಶ್ಯಾನುಭೋಗರಿಗೂ ಗೌಡರಿಗೂ ಬಣಹಾರಿದಾಗ, ಶ್ಯಾನುಭೋಗರ ರಾಮಣ್ಣ ಹೆಚ್ಚಿನ ಸಂಬಳದ ಆಸೆ ತೋರಿಸಿ ಕರಿಯಪ್ಪನನ್ನು ಗೌಡರ ಮನೆಯಿಂದ ಬಿಡಿಸಿದ್ದ. ಆದರೆ ಅದರಿಂದಾಗಿ ಗೌಡರಿಗೆ ಒತ್ತೆ ಬಿದ್ದಿದ್ದ ಎರಡೆಕರೆ ಹೊಲವನ್ನು ಕಳೆದುಕೊಳ್ಳಬೇಕಾಯಿತು. ಒಂದು ವರ್ಷದಲ್ಲಿ ರಾಮಣ್ಣನ ಮನೆಯ ಕೆಲಸವೂ ತಪ್ಪಿತು. ತಿರುಗಿ ಗೌಡರಿಗೇ ಕಾಲುಬಿದ್ದು ಮತ್ತೆ ಅಲ್ಲಿಯೇ ಇರುವಂತಾಯಿತು. ಅವನ ಮದುವೆಯ ವಿಷಯವೂ ಹೀಗೆಯೇ. ಇದ್ದ ಗಂಡನಿಗೆ ಸೋಡಚೀಟಿ ಕೊಟ್ಟು ಗಯ್ಯಾಳಿಯಾಗಿದ್ದ ಗಿರಿಯವ್ವನನ್ನು, ಯಾರೋ ಪಂಚರೆನಿಸಿ ಕೊಳ್ಳುವವರು ಇವನಿಗೆ, ಏನೇನೋ ಆಸೆ ತೋರಿಸಿ ಗಂಟು ಹಾಕಿದ್ದರು. ಲಗ್ನವಾದ ಮೇಲೆ ನಾಲ್ಕು ವರ್ಷ ಎಲ್ಲ ಸುಸೂತ್ರವಾಗಿಯೇ ಸಾಗಿತ್ತು. ಆದರೆ ಗಿರಿಯವ್ವನ ಮೊದಲ ಗಂಡ ಊರು ಬಿಟ್ಟು ಹೋದವನು ತಿರುಗಿ ಬಂದು, ನ್ಯಾಯ ಹೂಡಿ, ಅವಳನ್ನು ಮತ್ತೆ ತನ್ನ ವಶಕ್ಕೆ ತೆಗೆದುಕೊಂಡಿದ್ದ. ನಾಲ್ಕು ವರ್ಷಗಳ ಸಂಸಾರದ ಫಲವಾಗಿದ್ದ 'ನೀಲಿ' ಮಾತ್ರ. ಪಂಚರ ನ್ಯಾಯ ನಿರ್ಣಯದ ಮೇರೆಗೆ ಕರಿಯಪ್ಪನ ಹತ್ತಿರವೇ ಉಳಿದಿದ್ದಳು.

ಜನರಿಗೆ ಇದೆಲ್ಲ ಮಾತಾಡಿಕೊಳ್ಳಲು ವಿಷಯವಾಗಿತ್ತು. ಕರಿಯಪ್ಪನ ಮದುವೆ ಗಾದೆಯ ಮಾತಾಗಿತ್ತು. ಇದರಿಂದಾಗಿ ಕರಿಯಪ್ಪ ಯಾವ ಕೆಲಸದಲ್ಲಿಯೂ ಸಾಮರ್ಥ್ಯವಿಲ್ಲದವನಾಗಿದ್ದ. ತನ್ನ ಚಾಕರಿಯನ್ನು ಕಾಯ್ದುಕೊಳ್ಳಲಾರದವನಿಗೆ, ತನ್ನ ಹೆಂಡತಿಯನ್ನು ಕಾಯ್ದುಕೊಳ್ಳಲಾರದವನಿಗೆ ಯೋಗ್ಯತೆಯಿದೆಯೆಂದರೆ ಯಾರು ನಂಬಬೇಕು ? ಯಾವ ಕೆಲಸವೂ ಅವನಿಂದಾಗುವದಿಲ್ಲವೆಂಬ ಮಾತು ಅನುಭವ ಸಿದ್ಧವಾಗಿತ್ತು. ಇಷ್ಟೇ ಅಲ್ಲ, ಅವನ ಮುಖ ನೋಡಿದರೆ ಆಗಬೇಕಾದ ಕೆಲಸವೂ ಆಗುವುದಿಲ್ಲವೆಂಬ ನಂಬಿಕೆ ಜನರಲ್ಲಿತ್ತು. ಆ ನಂಬಿಕೆ ಬರಬರುತ್ತ ಅವನಲ್ಲಿಯೂ ಆಳವಾಗಿ ನೆಲೆಯೂರಿತು. ಜೀವನವೇ ಅವನಿಗೆ ಮೋಸಮಾಡಿತ್ತು. ಜಗತ್ತಿನ ಆಟದಲ್ಲಿ ಅವನಿಗೆ ಯಾವ ಭಾಗವೂ ಇರಲಿಲ್ಲ. ದೊಡ್ಡವರು ಕೆಲಸ ಹೇಳಿ ಬಯ್ಯುತ್ತಿದ್ದರು. ಹುಡುಗರು ಆಸೆ ತೋರಿಸಿ ಚೇಷ್ಟೆ ಮಾಡುತ್ತಿದ್ದರು. ಹೋಳಿ ಹುಣ್ಣಿಮೆಗೊಮ್ಮೆ ಹುಡುಗರು ಅವನನ್ನು ಹೆಣದಂತೆ ಸಿದಿಗೆಯ ಮೇಲೆ ಕಟ್ಟಿ ಮೆರವಣಿಗೆ ಮಾಡುತ್ತಿದ್ದರು.

ಆದರೆ ಈ ಎಲ್ಲ ಕೊರತೆಗಳನ್ನು ತುಂಬಿಕೊಳ್ಳುವ ಒಂದು ಗುಣ ಅವನಲ್ಲಿತ್ತು. ಅವನಂತೆ ಕಥೆ ಹೇಳುವವರೇ ಇರಲಿಲ್ಲ. ದೊಡ್ಡವರೆದುರು ಮಾತನಾಡಲೂ ಹೆದರುತ್ತಿದ್ದ ಅವನು, ಹುಡುಗರು ಕತೆ ಹೇಳೆಂದು ಗಂಟುಬಿದ್ದರೆ ಮೈಮರೆತು ಬಿಡುತ್ತಿದ್ದ. ಅದರಲ್ಲಿಯೂ ದೆವ್ವದ ಕತೆಗಳನ್ನೂ ಅವನೇ ಹೇಳಬೇಕು. ಗೌಡರ ಮನೆಯಲ್ಲಿಯ ಹತ್ತಿಪ್ಪತ್ತು ಮಕ್ಕಳಿಗೆ ಅವನೆಂದರೆ ಕತೆಗಳ ಅಕ್ಷಯ ನಿಧಿಯಾಗಿದ್ದ. ಅದೇನು ಮಾಟಗಾರಿಕೆಯಿರುತ್ತಿತ್ತೋ, ಕತೆಗಳು ಜೀವಂತವಾಗಿ ಅವನ ಬಾಯಿಂದ ಹಬ್ಬುತ್ತಿದ್ದವು. ಕತೆ ಮುಗಿದ ಮೇಲೆ ಪ್ರತಿಯೊಬ್ಬ ಹುಡುಗನೂ 'ನೀ ದೆವ್ವನ್ನ ನೋಡೀ ಏನು ಕರಿಯಪ್ಪಾ ?' ಎಂದು ಕೇಳಲೇಬೇಕು. ಕರಿಯಪ್ಪನಿಗೆ ದೆವ್ವಗಳಲ್ಲಿ ನಂಬಿಕೆಯಿರಲಿಲ್ಲ. ಆದರೆ ಇಷ್ಟು ಕತೆ ಹೇಳಿ ಇಲ್ಲವೆನ್ನುವುದು ಹೇಗೆ ? 'ಅವನ್ನೆಲ್ಲಾ ಸಣ್ಣ ಹುಡುಗರೂ ಕೇಳಬಾರದಿರಿ' ಎಂದು ಹೇಳಿ ಸುಮ್ಮನಿರಿಸುತ್ತಿದ್ದ.

ತಾನು ಇಂದು ಇಲ್ಲಿಗೆ ಬಂದು ಬಿಟ್ಟಿದ್ದರಿಂದ ಕತೆ ಹೇಳುವುದು ತಪ್ಪಿಹೋಗಿತ್ತು. ಬೆಳಗಿನಿಂದ ಯಾವ ಕೆಲಸವೂ ಪೂರ್ಣವಾಗಿರಲಿಲ್ಲ. ಎದ್ದ ಹೊತ್ತೇ ಚೆನ್ನಾಗಿರಲಿಲ್ಲವೆನಿಸಿತು. ಆದರೆ ಹಿಂದೆ ಎಷ್ಟೋ ಇಂಥ ದಿನಗಳು ಬಂದು ಹೋಗಿದ್ದವು. ಆಗೆಲ್ಲ ಅವುಗಳ ಕಡೆಗೆ ದುರ್ಲಕ್ಷ್ಯ ಮಾಡಿಯೇ ಅವನು ಸಾಗಿದ್ದ. ಇಂದು ಮಾತ್ರ ಮನಸ್ಸು ಅಕಾರಣವಾಗಿ ಕುದಿಯುತ್ತಿತ್ತು. ಬಾಳುವೆಯೆಲ್ಲ ನಿರರ್ಥಕವೆನಿಸಿತು. ಒಂದು ಕ್ಷಣ ಅವನಿಗೆ ಎಲ್ಲವೂ ಸುಳ್ಳೆನಿಸಿತು. ತಾನು ಮಾಡುವ ಕೆಲಸ, ತನ್ನ ಹೆಂಡತಿ ಮಗಳು, ಸುತ್ತಮುತ್ತಲಿನ ಜನರು, ತಾನು ಹೊಡೆಯುವ ಚಕ್ಕಡಿ, ಎತ್ತುಗಳು ಇವೆಲ್ಲ ತಾನು ಹೇಳುವ ದೆವ್ವದ ಕತೆಗಳಂತೆಯೇ ಸುಳ್ಳಿನ ಆಟವಾಗಿ ಕಂಡಿತು. ತನ್ನ ಬಾಳುವೆ, ಜಗತ್ತಿನೆದುರಿಗೆ ತನ್ನ ತಪ್ಪನ್ನು ಮುಚ್ಚಿಕೊಳ್ಳಲು ಹೇಳಿದ ಸುಳ್ಳಿನಂತೆ ಕಂಡಿತು.

ಗಾಡಿ ಇನ್ನೂ ಅರ್ಧದಾರಿಯನ್ನೂ ಕ್ರಮಿಸಿರಲಿಲ್ಲ. ಗೌಡರ ಹೊಲದಲ್ಲಿಯ ಭರಮಪ್ಪನ ಗುಡಿಗೆ ಬಂದಾಗ ಅರ್ಧದಾರಿ ಮುಗಿಯುತ್ತದೆಂಬ ಲೆಕ್ಕವಿತ್ತು. ದಾರಿಹೋಕರಿಗೆ, ಎತ್ತುಗಳಿಗೆ, ಭೂತಪಿಶಾಚಿಗಳಿಗೆ ಬಾಧೆ ತಟ್ಟಬಾರದೆಂದು ಆ ಗುಡಿಯಲ್ಲಿ ಭರಮಪ್ಪ ಕಾಯುತ್ತಿದ್ದಾನೆಂದು ಜನರಲ್ಲಿ ನಂಬಿಕೆಯಿತ್ತು. ಆ ಗುಡಿಯ ಎದುರಿಗಿದ್ದ ಕತ್ತರಿಯಿಂದ ದಾರಿ ಎರಡು ಸೀಳಾಗಿ ಒಡೆದಿತ್ತು. ಒಂದು ದಾರಿ ಹೊಸಳ್ಳಿಗೆ, ಇನ್ನೊಂದು ಅಲ್ಲಿಂದ ಮೂರು ಮೈಲು ದೂರದಲ್ಲಿ ಈಗ 'ಬೇಚಿರಾಕ' (ಹಾಳುಬಿದ್ದ) ಆಗಿದ್ದ ಬೆಳ್ಳಿಕೊಪ್ಪಕ್ಕೆ ಹೋಗುತ್ತಿತ್ತು.

ಕರಿಯಪ್ಪನಿಗೆ ಕೂತುಕೂತು ಬೇಸರಬಂದಿತ್ತು. ಎತ್ತುಗಳು ತಮ್ಮ ದಾರಿ ಹಿಡಿದು ಹೊರಟಿದ್ದವು. ಇಕ್ಕೆಲದ ಹೊಲಗಳಲ್ಲಿ, ಹಗಲು ಹಸಿರಾಗಿ ಕಾಣುತ್ತಿದ್ದ ಬೆಳೆ ಈಗ ಕಪ್ಪಾಗಿ ಗಾಳಿಯಲ್ಲಿ ಸುಯ್ಗುರೆಯುತ್ತಿತ್ತು. ಸವೆದು ಸವೆದು ಬೂದಿಯಾಗಿ ಕಾಣುತ್ತಿದ್ದ ದಾರಿಯೊಂದನ್ನು ಬಿಟ್ಟರೆ ಉಳಿದೆಲ್ಲ ಕಡೆಗೂ ಕಪ್ಪು ಬಣ್ಣವೇ ಕಾಣುತ್ತಿತ್ತು. ಕರಿಯಪ್ಪನಿಗೆ ಹೊರಗೆ ನೋಡಿ ನೋಡಿ ತಲೆಹಿಡಿಯಿತು. ಒಮ್ಮೆ ಜೋರಾಗಿ ಆಕಳಿಸಿದ. ಇಲ್ಲಿಯವರೆಗೆ ಆಗಾಗ ಒಂದೊಂದು

ನೆನಪಾದರೂ ಸುಳಿಯುತ್ತಿದ್ದವು. ಈಗ ಅವೂ ಬಾರದಷ್ಟು ಬೇಸರ ಬಂದಿತ್ತು. ಗಾಡಿಯ ಧಡಿಕೆಗೆ ಕಣ್ಣಿಗೆ ಮಬ್ಬು ಕವಿದಂತಾಯಿತು. ರೂಢಿವಶದಿಂದ ಕರಿಯಪ್ಪ ಕೆಳಗೊಮ್ಮೆ ನೋಡಿದಾಗ, ಕಂದೀಲು ಗಾಳಿಯ ರಭಸದಿಂದ ಆರಿಹೋಗಿತ್ತು. ಗೌಡರ ಮಗ ಬಂದಿದ್ದರೆ ಇನ್ನೊಮ್ಮೆ ಹಚ್ಚಬಹುದಾಗಿತ್ತು. ಈಗೇನೂ ಅದರ ಕಾರಣವಿರಲಿಲ್ಲ. ಕರಿಯಪ್ಪನಿಗೆ ನಿದ್ದೆ ಬಂದಂತಾಯಿತು. ಬಾರಕೋಲನ್ನು ಹಿಡಿದ ಕೈಗೆ ಒರಟು ಬಂದಂತಾಗಿತ್ತು. ಎಷ್ಟು ಮುಂದೆ ಸಾಗಿದ್ದರೂ ಸುತ್ತಲೂ ವಾತಾವರಣ ಬದಲಾಗಿರಲಿಲ್ಲ. ಇರುಳು ಸ್ತಬ್ಧವಾಗಿತ್ತು. ಎತ್ತುಗಳು ಕೆಳಗೆ ಗೋಣು ಹಾಕಿ ನಡೆಯುತ್ತಿದ್ದರೂ ನಿಂತಂತೆ ಕಾಣುತ್ತಿದ್ದವು. ಆಗ ಕಾಣುತ್ತಿದ್ದ ನಕ್ಷತ್ರಗಳೇ ಈಗಲೂ ಅದೇ ದಿಕ್ಕಿನಲ್ಲಿ ಕಾಣುತ್ತಿದ್ದವು. ಎತ್ತುಗಳ ಕೊರಳಲ್ಲಿಯ ಗಂಟೆಗಳ ಸಪ್ಪಳವೂ ಆಗ ಕೇಳಿದಂತೆಯೇ ಈಗಲೂ ಕೇಳುತ್ತಿತ್ತು. ಜೀವನ ಸ್ವಲ್ಪ ಹೊತ್ತಿನವರೆಗೆ ಹೆಪ್ಪುಗಟ್ಟಿದಂತಾಗಿತ್ತು. ಕರಿಯಪ್ಪನಿಗೆ ಕಣ್ಣು ತಾವಾಗಿಯೇ ಮುಚ್ಚಿದವು.

ಕೆಲಹೊತ್ತಿನವರೆಗೆ ಹೊರಜಗತ್ತಿನ ಅರಿವು ಇದ್ದೇ ಇತ್ತು. ಆದರೆ ಅದರಲ್ಲೇನೂ ಚಟುವಟಿಕೆ ಇರಲಿಲ್ಲ. ನಿರ್ವಿಕಾರವಾದ ಮೌನ ಅವನನ್ನು ಆವರಿಸಿತ್ತು. ಅಂಥ ಬಟ್ಟಬಯಲಿನಲ್ಲಿಯೂ ಗವಿಯಲ್ಲಿ ಹೋಗುತ್ತಿದ್ದಂತೆ ಅವನಿಗೆ ಅನುಭವವಾಗತೊಡಗಿತು. ಸ್ವಲ್ಪ ಹೊತ್ತಿನ ಮೇಲೆ ನಿದ್ದೆ ಮುಸುಕಿನಂತೆ ಮುಚ್ಚಿತು.

ಎಷ್ಟು ಹೊತ್ತು ಹೀಗೆಯೇ ಸಾಗಿತ್ತೋ ಬಲ್ಲವರಾರು ? ಕರಿಯಪ್ಪನಿಗೆ ನಡುವೆ ಒಮ್ಮೆಲೇ ಎಚ್ಚರವಾಯಿತು. 'ಹಲಲಲಲ ಕೇಹೂ' ಎಂಬ ಕೇಕೆಯನ್ನು ಕೇಳಿ ಬೆಚ್ಚಿಬಿದ್ದ. ಆ ರಭಸಕ್ಕೆ ಅವನ ತಲೆ ಚಕ್ಕಡಿಯ ಮಗ್ಗುಲಾಗಿದ್ದ ಬಿದಿರಿಗೆ ಜೋರಾಗಿ ಬಡಿಯಿತು. ಕಣ್ಣನ್ನು ಕಿತ್ತು ತೆರೆದು ನೋಡಿದ. ಅದೇ ದಾರಿ, ಅದೇ ಕತ್ತಲೆ, ಅದೇ ಮುಂದುಗಡೆಗೆ ಆಕಾರ ಕಂಡವು. ಎಷ್ಟು ದೂರ ಬಂದಿದ್ದೇನೆಂಬುದರ ಅರಿವಾಗಲಿಲ್ಲ. ಆಗ ಕೇಳಿದ ಕೇಕೆ ಎಲ್ಲಿಂದ ಬಂದಿತೆಂಬುದನ್ನು ನೋಡಲು ಹೊರಗೆ ಹಣಿಕಿಹಾಕಿದ. ಈಗ ಕೇಕೆಯ ಬದಲಾಗಿ ಮದ್ದಳೆಯ ತಾಳದೊಂದಿಗೆ ಅಸ್ಪಷ್ಟವಾದ ಹಾಡೊಂದು ಕೇಳಬಂತು. ಅದು ಬಯಲಾಟದ ಹಾಡೆಂಬುದು ಅವನಿಗೆ ಕೂಡಲೆ ಗೊತ್ತಾಯಿತು.

ಊರ ಹತ್ತಿರಕ್ಕೆ ತಾನು ಬಂದಿದ್ದೇನೆಂದು ಅನಿಸಿತು. ಇನ್ನೊಂದು ಕೂಗಳತೆಯನ್ನು ದಾಟಿದರೆ ಮುಗಿಯಿತೆಂದುಕೊಂಡು ಒಮ್ಮೆ ಆಕಳಿಸಿ ಎತ್ತುಗಳ ಬೆನ್ನು ಚಪ್ಪರಿಸಿದ. ಹಾಡು ಅದೇ ಲಯದಲ್ಲಿ ಇನ್ನೂ ನಡೆದಿತ್ತು. ಊರಿನಲ್ಲಿ ಬಯಲಾಟ ಇಂದು ನಡೆಯಬಹುದೆಂದು ತನಗೇನೂ ಗೊತ್ತಿರಲಿಲ್ಲ. ಇಂಥ ಸುದ್ದಿಗಳನ್ನು ಯಾರೂ ಅವನಿಗೆ ಹೇಳುತ್ತಿರಲಿಲ್ಲ. ಆದರೆ ಯಾರೂ ಅದರ ಬಗ್ಗೆ ಮಾತಾಡುತ್ತಿರುವಂತೆ ಅವನಿಗೇನೂ ನೆನಪಿರಲಿಲ್ಲ. ಬಹುಶಃ ತಳವಾರ ಓಣಿಯ ಮೇಳದವರಿರಬೇಕು.

ಹಾಡು ಈಗ ದಿಡುಗಿನಲ್ಲಿ ನಡೆದಿತ್ತು. ತಲೆ ತಿರುಗಿ ತನ್ನ ಸುತ್ತು ತಾನೇ ಭ್ರಮಿಸುವ ನಿದ್ದೆಯ ಬೊಗರೆಯಂತೆ, ಹಾಡು ವೇಗದ ತುಟ್ಟ ತುದಿಯನ್ನು ಮುಟ್ಟಿ, ಮತ್ತೆ ವಿಲಂತಕ್ಕೆ ಬಂದು ಮುಟ್ಟಿತು. ಕರಿಯಪ್ಪ ಎತ್ತುಗಳನ್ನು ಓಡಿಸಿದ. ಯಾಕೋ ಬಯಲಾಟವನ್ನು ನೋಡಬೇಕೆಂದೆನಿಸಿತು. ಮನಸ್ಸಿನಲ್ಲಿದ್ದ ಸಂಕಟವನ್ನೆಲ್ಲ ಮರೆಯಬೇಕೆಂದೆನಿಸಿತು.

ಸ್ವಲ್ಪ ಮುಂದೆ ಹೋದಾಗ ದಾರಿ ಬಲಗಡೆಗೆ ಹೊರಳಿತ್ತು. ಅಲ್ಲಿಂದ ಮುಂದೆ ನೋಡಿದಾಗ, ವಿಶಾಲವಾದ ಬಯಲಿನಲ್ಲಿ ಆಟದ ಅಟ್ಟ ಕಂಡಿತು. ಅದರೆದುರು ನೂರಾರು ಜನರು ಮನಸ್ಸಿಗೆ ಬಂದಂತೆ ಕುಳಿತಿದ್ದರು. ಅಟ್ಟದ ಮೇಲೆ ಹಿಲಾಲಿನ ಬೆಳಕಿನಲ್ಲಿ ಮೂರು ನಾಲ್ಕು ಪಾತ್ರಗಳು ಕುಣಿಯುತ್ತಿದ್ದವು; ನಿಂತ ಸ್ಥಳವನ್ನು ಬದಲು ಮಾಡುತ್ತಿದ್ದವು.

ಕರಿಯಪ್ಪ ಎತ್ತುಗಳ ಕೊರಳು ಹರಿದು, ಗಾಡಿಯಿಂದ ಮೇವು ತಂದು ಅವುಗಳ ಮುಂದೆ ಹಾಕಿದ. ಬಯಲಾಟವನ್ನು ನೋಡಬೇಕೆಂದು ಮನಸ್ಸಿದ್ದರೂ ಹತ್ತಿರ ಹೋಗಿ ಕೂಡುವ ಧೈರ್ಯವಾಗಲಿಲ್ಲ. ದೂರದಲ್ಲಿದ್ದೇ ನೋಡಿದರಾಯಿತೆಂದುಕೊಂಡ. ಎತ್ತುಗಳನ್ನು ಮೇಯಲಿಕ್ಕೆ ಬಿಟ್ಟು, ಗಾಡಿಯ ಮೂಕಿಯ ಮೇಲೆಯೇ ಕುಳಿತು, ಆಟವನ್ನು ನೋಡ ಹತ್ತಿದ. ಯಾರ ಲಕ್ಷ್ಯವೂ ಇವನ ಕಡೆಗೆ ಹೋಗಲಿಲ್ಲವಾದ್ದರಿಂದ ಮೈಚಳಿ ಬಿಟ್ಟು ಕುಳಿತ.

ಕರಿಯಪ್ಪ ವಿಸ್ಮಯದಿಂದ ನೋಡಹತ್ತಿದ. ಕತೆಗಾರನ ಚೀರುದನಿ, ಮದ್ದಳೆಕಾರನ ಆವೇಶ, ಪಾತ್ರಧಾರಿಯ ಬಣ್ಣ, ಸಾರಥಿಯ ವಿನೋದ ಇವುಗಳೆಲ್ಲಾ ಅತಿಶಯೋಕ್ತಿಯಿಂದ ಒಂದು ಅರ್ಥಪೂರ್ಣತೆ ಬಂದಿತ್ತು. ಅಟ್ಟದ ಮೆಲೆ ನಡೆಯುವ ಆ ಕ್ರಿಯೆ ತನ್ನ ಮಹತ್ವವನ್ನು ಚೀರಿ ಹೇಳುವಂತಿತ್ತು. ನೂರಾರು ಜನರು ಬೆಕ್ಕಸ ಬೆರಗಾಗಿ ಕೇಳುವುದೇನೂ ಕಾರಣವಿಲ್ಲದೆ ಇಲ್ಲ ! ದಿನನಿತ್ಯದ ಬಾಳಿನ ಗತಿಯೇ ಬೇರೆ ! ಇಲ್ಲಿ ನಡೆದಿರುವುದರ ಗತಿಯೇ ಬೇರೆ ! ಅಟ್ಟದ ಮೇಲಿನದಕ್ಕೂ ಇಲ್ಲಿಯ ಲೋಕಕ್ಕೂ ಏನೂ ಸಂಬಂಧವೇ ಇಲ್ಲ. ಇಲ್ಲದಿದ್ದರೆ ಇಂಥ ಆವೇಶ ಬರುವುದಾದರೂ ಹೇಗೆ ?

ಹೌದು, ಏನೂ ಸಂಬಂಧವಿಲ್ಲ. ಕರಿಯಪ್ಪನ ಕುತೂಹಲ ಸ್ವಲ್ಪ ಕೆರಳಿತು. ಕತೆಗಾರನಾದವನು ಮೇಲೋಣಿಯ ಬಸಪ್ಪನೇ ಇರಬೇಕು. ದಿನವೂ ಅವನು ಮಾತನಾಡುವ ದನಿಗೂ, ಈಗ ಬಯಲನ್ನೆಲ್ಲ ದುಮದುಮಿಸಿ ಹೊಮ್ಮುವ ದನಿಗೂ ಏನು ಸಂಬಂಧ ? ಅರ್ಜುನನ ವೇಷ ಹಾಕಿದವನು ಯಾರಿರಬಹುದೆಂದು ಕರಿಯಪ್ಪನ ಮನಸ್ಸು ಕೇಳಿತು. ಈ ಅದ್ಭುತವಾದ ವೇಷಭೂಷಣದಲ್ಲಿ ಅವನ ಗುರುತು ಸಿಗುವುದು ಕಠಿಣವಾಗಿತ್ತು. ಮುಖಕ್ಕೆ ಹಚ್ಚಿದ ಬಣ್ಣದಿಂದ ಅವನ ಸ್ವರೂಪ ಬದಲಾಗಿತ್ತು.

ಅವನು ಯಾರೇ ಇರಲಿ, ನಾಳೆ ಗಳೆ ಹೂಡಿಕೊಂಡು ನಡೆದಾಗ ಅವನೇ ಅರ್ಜುನನಾಗಿದ್ದನೆಂದರೆ ನಂಬುವದಿರಲಿ, ನಗೆಯನ್ನೂ ತಡೆಯುವದು ಅಸಾಧ್ಯವಾದೀತು. ಆದರೆ ಈಗ ಕಣ್ಣಾರೆ ಕಾಣುವದನ್ನು ನಂಬದಿರುವದು ಹೇಗೆ ?

ಚಳಿ ಹೆಚ್ಚಾಗಿತ್ತು. ಆಟದ ಪರಿಣಾಮದಿಂದಲೋ ಅಥವಾ ಚಳಿಯ ದೆಸೆಯಿಂದಲೋ ಕರಿಯಪ್ಪನಿಗೆ ಗದಗುಟ್ಟಿ ನಡುಗುವಂತಾಯಿತು. ಚಕ್ಕಡಿಯೊಳಗಿಂದ ತನ್ನ ಕಂಬಳಿಯನ್ನು ಹೊರತೆಗೆದು ಮೈತುಂಬ ಹೊದ್ದುಕೊಂಡ. ಹಿತವೆನಿಸಿತು. ಕಣ್ಣಿನಲ್ಲಿಯ ನಿದ್ರೆ ಎಂದೋ ಹಾರಿಹೋಗಿತ್ತು. ಎಲೆಯಡಿಕೆಯೊಂದು ಇದ್ದಿದ್ದರೆ ಎಷ್ಟು ಸುಖವಾಗಬಹುದಿತ್ತು ಎಂಬ ವಿಚಾರ ಸುಳಿಯದೆ ಹೋಗಲಿಲ್ಲ. ಮತ್ತೆ ಆಟದ ಕಡೆಗೆ ತನ್ನ ಲಕ್ಷ್ಯವನ್ನು ಹರಿಯಬಿಟ್ಟು, ತದೇಕ ಚಿತ್ತನಾಗಿ ನೋಡಹತ್ತಿದ.

ರಂಗದದ ಮೇಲಿನ ದೃಶ್ಯ ಈಗ ಬದಲಾಗಿತ್ತು. ಚಿತ್ರಾಂಗದೆ ಬಭ್ರುವಾಹನನೊಡನೆ ಸಂವಾದದಲ್ಲಿ ತೊಡಗಿದ್ದಳು. ಬಭ್ರುವಾಹನ ಅರ್ಜುನನಿಗಿಂತ ಹೆಚ್ಚು ಭಯಂಕರನಾಗಿದ್ದ. ಯಾರು ಎದುರು ಬಂದರೂ ಮಣಿಯದಷ್ಟು ಉದ್ಧಟನಾಗಿ ತೋರುತ್ತಿದ್ದ. ಅವನ ಕುಣಿತಕ್ಕೆ ಅಟ್ಟ ಗದಗದ ನಡುಗುತ್ತಿತ್ತು. 'ಭಪ್ಪರೆ ಮಗನ, ಮಾತು ಹ್ಯಾಗ ಬರತಾವ ನೋಡೋ, ಅಳ್ಳುಹುರದ್ಹಾಂಗ !' ಪ್ರೇಕ್ಷಕ ವರ್ಗದಿಂದ ಹೊಗಳಿಕೆ ಬಂತು.

ಕರಿಯಪ್ಪನ ಒಂದು ಮನಸ್ಸು ಆಟದ ಕಡೆಗಿತ್ತು. ಇನ್ನೊಂದು ಮನಸ್ಸು ಯೋಚನೆಯಲ್ಲಿ ತೊಡಗಿತ್ತು. ಇಷ್ಟೇ ಆ ಯೋಚನೆ ಒಂದು ಕ್ರಮವಿರಲಿಲ್ಲ. ನಾಳೆ ಈ ಬಭ್ರುವಾಹನನ ಕತೆಯನ್ನು ಗೌಡರ ಮಕ್ಕಳಿಗೆ ಹೇಳಬೇಕೆಂದು ವಿಚಾರ ಬಂತು. ಜಡವಾದ ಮನಸ್ಸು ಈಗ ಉತ್ತೇಜಿತವಾದದ್ದರಿಂದ ಏನೇನೋ ನೆನಪುಗಳು ಮೂಡಿ ಬಂದವು. ಒಮ್ಮೆ ಗಿರಿಯವ್ವನೊಂದಿಗೆ ಇಂಥದೇ ಒಂದು ಆಟವನ್ನು ನೋಡಲು ಬಂದಿದ್ದ. ಆಗ ಕೂಡಿದ ಜನರೆಲ್ಲ ತನ್ನನ್ನು ನೋಡಿ ನಕ್ಕಿದ್ದರು. 'ಇವನ್ನೇನ ನಂಬಿಕೊಂಡ ಬಾಳೇ ಮಾಡತಾಳ ಆಕೆ' ಎಂದು ಯಾವಳೋ ಒಬ್ಬ ಹೆಣ್ಣು ಮಗಳು ತಿವಿದು ಮಾತನಾಡಿದಾಗ, ಗಿರಿಯವ್ವ ಸಿಟ್ಟಿಗೆದ್ದು ಮನೆಗೆ ನಡೆದಿದ್ದಳು. ಆಗ ಅವಳ ಸ್ವರೂಪ ಎಷ್ಟು ಉಗ್ರವಾಗಿತ್ತು ! 'ನೀ ಬೇಕಾರ ಬಾ, ನಾ ಅನಕಾ ಹೊಂಟೀನ ನೋಡು' ಎಂದಿಷ್ಟು ನುಡಿದು, ಸಿಟ್ಟಿಗೆದ್ದ ದ್ರೌಪದಿಯಂತೆ ಕಾಲಪ್ಪಳಿಸುತ್ತ ನಡೆದೇ ಬಿಟ್ಟಳು ! ತಾನೂ ಅವಳ ಹಿಂದೆ 'ಸಾರಥಿ'ಯಂತೆ ನಡೆದು ಹೋಗಿದ್ದೆ. ಅಲ್ಲಿದ್ದ ಕೆಲವರು ತಮ್ಮನ್ನು ನೋಡಿ ಗಟ್ಟಿಯಾಗಿಯೇ ನಕ್ಕಿದ್ದರು !

ಆದರೆ ಒಂದು ದಿನವೂ ತನಗೆ ಹೀಗೆ ವರ್ತಿಸುವ ಅವಕಾಶವೇ ಸಿಕ್ಕಿರಲಿಲ್ಲ. ಅವನು ಸಿಟ್ಟಿಗೆದ್ದರೂ ಜನರು ನಗುತ್ತಿದ್ದರು ! ತಮ್ಮ ಮಾತಿಗೆ ಮಹತ್ವವೇ ಇರಲಿಲ್ಲ. ಈಗ ಅಟ್ಟದ ಮೇಲಿದ್ದವರು ಏನು ಮಾತಾಡಿದರೂ ಜನರು ಬಾಯಲ್ಲಿ ಅಕ್ಕಿಕಾಳು ಹಾಕಿಕೊಂಡು ಕೇಳುತ್ತಾರೆ ! ಬದುಕಿನಲ್ಲಿಯೂ ಹೀಗೆಯೇ ಇರಲು ಸಾಧ್ಯವಾದರೆ ? ಕರಿಯಪ್ಪನಿಗೆ ಜೀವನ ತನಗೆ ಮೋಸಮಾಡಿದೆಯೆಂದೆನಿಸಿತು. ದೈವಕೊಟ್ಟು, ಕಸಿದು ಏನೇನೋ ಆಟಹೂಡಿತ್ತು. ಅಳುವದೊಂದೇ ತನಗುಳಿದಿರುವ ಕಾರ್ಯ. ಹೌದು, ಬದುಕು ವ್ಯರ್ಥವಾದದ್ದುಕ್ಕಾಗಿ ಆಕೆ ಬೇಕಾಗಿತ್ತು.

ಕರಿಯಪ್ಪ ಮನಸ್ಸನ್ನು ತಡೆಹಿಡಿದು ರಂಗದ ಕಡೆಗೆ ಲಕ್ಷ್ಯವನ್ನು ಹಾಕಿದ. ದೃಶ್ಯದ ಮೇಲೆ ದೃಶ್ಯಗಳು ಮೂಡಿ ಮರೆಯಾದವು. ರಾತ್ರಿ ಬಲಿಯುತ್ತಿತ್ತು. ಆಟ ರಾತ್ರಿಯೊಂದಿಗೆ ಜಿದ್ದು ಕಟ್ಟಿದಂತೆ ಮುಂದೆ ಮುಂದೆ ಓಡುತ್ತಿತ್ತು. ಮದ್ದಳೆಯ ದನಿ ವಿವಿಧ ಲಯಗಳಲ್ಲಿ ಏರಿ ಇಳಿಯುತ್ತಿತ್ತು.

ತನ್ನ ಅಳುಬುರುಕತನದ ಬಗ್ಗೆ ತನಗೇ ನಾಚಿಕೆ ಬಂದಿತು ಕರಿಯಪ್ಪನಿಗೆ. ತನ್ನ ದುಃಖದಲ್ಲಿಯೂ ಆವೇಶವಿರಲಿಲ್ಲ. ಅದು ಒಣದಾಗಿತ್ತು. ಮನಸ್ಸಿನ ತುಂಬ ಹೊಟ್ಟು ಹಾರಿದ ಅನುಭವವಾಗುತ್ತಿತ್ತು. ಅದೇ ಇಲ್ಲಿ ಚಿತ್ರಾಂಗದೆ ವಿಲಾಪ ಮಾಡುತ್ತಿದ್ದಳು. ಅರ್ಜುನ ಬಬ್ರುವಾಹನನಿಂದ ಸತ್ತ ಸುದ್ದಿ ಅವಳಿಗೆ ತಿಳಿದು ಅಳುತ್ತಿದ್ದಳು. ಅವಳ ದುಃಖಕ್ಕೆ ಬೆಲೆಯಿತ್ತು. ಸುತ್ತಲಿನ ಚಳಿಗೆ ಮರಗಟ್ಟಿದಂತಿದ್ದರೂ, ಜನರು ಕಣ್ಣುಕರಗಿದಂತೆ ಅಳುತ್ತಿದ್ದರು. 'ಅಯ್ಯೋ ಹರಹರಾ, ಚಂದ್ರಮೌಳೇಶ್ವರಾ' ಎಂದು, ಮಧ್ಯರಾತ್ರಿಯಲ್ಲಿ ನಾಯಿಯೊಂದು ಹಾಳ್ಗರೆಯುವಂತೆ ಕೂಗಿಕೊಂಡರೂ ಜನರು ನೀರವವಾಗಿ ಆಲಿಸುತ್ತಿದ್ದರು.

ಬರಬರುತ್ತ ಶೋಕದ ದನಿ ತಗ್ಗಿತು. ದೃಶ್ಯ ಮತ್ತೆ ಬದಲಾಯಿತು. ಈಗ ರಂಗದಲ್ಲಿ ಗಡಿಬಿಡಿ ಪ್ರಾರಂಭವಾಗಿತ್ತು. ಮೊದಲಿನ ಸಾವಧಾನ ಈಗ ಉಳಿದಿರಲಿಲ್ಲ. ಚೀರಿಚೀರಿ ಕತೆಗಾರ ದಣಿದಿದ್ದ. ಸೋತ ಕೈಗಳಿಂದ ತಾಳ ಕಟೆಯುತ್ತ ಹಾಡುತ್ತಿದ್ದ. ಪಾತ್ರಗಳು ಕಾಲಲ್ಲಿಯ ಕಸುವು ಕಳೆದುಕೊಂಡು ತಣಿಯುತ್ತಿದ್ದವು. ಚಳಿ ಹೆಚ್ಚಾಗುತ್ತಲೇ ನಡೆದಿತ್ತು. ಕರಿಯಪ್ಪ ಕಂಬಳಿಯನ್ನು ಇನ್ನೂ ಬಿಗಿಯಾಗಿ ಹೊದ್ದುಕೊಂಡ.

ಪ್ರೇಕ್ಷಕ ವರ್ಗದಿಂದ ಹೆಣ್ಣುಮಗಳೊಬ್ಬಳು ಎದ್ದು ತನ್ನ ಕಡೆಗೇ ಬರುತ್ತಿರುವಂತೆ ಕಂಡಿತು. ಕತ್ತಲೆಯಲ್ಲಿ ಯಾರೆಂಬುದು ಗೊತ್ತಾಗುತ್ತಿರಲಿಲ್ಲ. ಹತ್ತಿರ ಬಂದಂತೆ ನಡಿಗೆ ಪರಿಚಯದ್ದೆನಿಸಿತು. ಮೈಮಾಟವೂ ಪರಿಚಿತವಾದದ್ದೇ. ಅವಳು ಸನಿಹಕ್ಕೆ ಬಂದವಳು ಇನ್ನೊಮ್ಮೆ ದಿಟ್ಟಿಸಿ ನೋಡಿದಳು. ಇನ್ನೂ ಹತ್ತಿರ ಬಂದಳು. 'ಯಾಕ, ಗುರುತು ಹತ್ತಾಣೆಲ್ಲೇನು ?' ಎಂದು ಅವಳು ಕೇಳಿದಾಗ, ಅವಳು ಗಿರಿಯವ್ವನೆಂದು ಗೊತ್ತಾಯಿತು. ಅವನೇನೂ ಮಾತಾಡಲಿಲ್ಲ. ಏನು ಮಾತಾಡಬೇಕೆಂಬುದು ಗೊತ್ತಾಗಲಿಲ್ಲ. ಸ್ವಲ್ಪ ಹೊತ್ತು ತಡೆದು, 'ಆಟಾ ನೋಡಾಕ ಬಂದಿದ್ದೇನು ?' ಎಂದು ಕೇಳಿದ. ಅವಳು ಗೋಣು ಅಲ್ಲಾಡಿಸಿದಳು. ಯಾಕೆ ಅವಳಲ್ಲಿ ಬಂದಿರಬಹುದೆಂದು ಅವನಿಗೆ ತೊಡಕು ಬಿತ್ತು. ಆದರೆ ಹೇಗೆ ಕೇಳಬೇಕು ? ಅವಳೋ ಸುಮ್ಮನೆ ಇವನನ್ನು ನೋಡುತ್ತ ನಿಂತಿದ್ದಾಳೆ. 'ಎಲೆ ಅಡಿಕೆ ಐತೇನು ನಿನ್ನ ಹಂತ್ಯಾಕ ?' ಎಂದು ಅವನೇ ಕೇಳಿದ. ಎಲೆ ಅಡಿಕೆ ಹಾಕಿಕೊಂಡು ಎಷ್ಟೋ ದಿನಗಳಾದಂತಿತ್ತು. ಬಾಯಿ ಸವಳುಗಟ್ಟಿತು.

ಗಿರಿಯವ್ವ ಅವನೆದುರು ನೆಲದ ಮೇಲೆಯೇ ಕುಳಿತಳು. ಕುಪ್ಪುಸದೊಳಗಿಂದ ಚಂಚಿಯನ್ನು ಹೊರತೆಗೆದು ಎಲೆ ಅಡಿಕೆಯನ್ನು ನೀಡಿದಳು. ತಾನೂ ಮೆಲ್ಲ ಹತ್ತಿದಳು. ಮೆಲ್ಲನೆ

ಇನ್ನೂ ಹತ್ತಿರ ಸರಿದು, 'ಯಾಕ ನನ್ನ ಮ್ಯಾಗ ಸಿಟ್ಟು ಬಂದ್ಯೆತೇನು ?' ಎಂದು ಕೇಳಿದಳು. ಅವನು ಇಲ್ಲವೆಂದು ಗೋಣುಹಾಕಿದ. ಅವಳ ಹಾವಭಾವಗಳಲ್ಲಿ ಆಮಂತ್ರಣದ ದನಿ ಕೇಳುವಂತಿತ್ತು. ಬಾಯಿತುಂಬ ತುಂಬಿದ್ದ ಎಲೆ ಅಡಿಕೆಯ ರಸವನ್ನು ಕೂಡಲೆ ಉಗುಳಲು ಅವನಿಗೆ ಮನಸ್ಸಾಗಲಿಲ್ಲ. ಅದರ ರುಚಿ ಮತ್ತೇರಿಸುವಂತಿತ್ತು. ಅಂಥ ಚಳಿಯಲ್ಲಿಯೂ ಕಿವಿಗಲ್ಲಗಳಿಗೆ ಬಿಸಿ ಏರಿತ್ತು. ನರಗಳೆಲ್ಲ ಉದ್ವೇಗಗೊಂಡಿದ್ದವು. ಏನೇನೋ ಮಧುರವಾದ ಅನುಭವಗಳು ಮನಸ್ಸಿನೆದುರಿಗೆ ಸುಳಿದವು.

ಅದು ಅವಳಿಗೆ ತಿಳಿಯಿತೇನೋ ! 'ಅತ್ತಾಗ ಎತ್ತಾಗರ ಹೋಗೂನ ನಡಿ, ಕುಂತ ಕುಂತ ಬ್ಯಾಸರ ಬಂದ್ಯೆತಿ' ಎಂದು ಅವನ ಉತ್ತರಕ್ಕೆ ಕೂಡ ಕಾಯದೆ ಎದ್ದು ನಿಂತಳು. ಮೈಯಲ್ಲಿ ತುಂಬಿದ್ದ ಜಡತೆಯನ್ನು ಕಳೆಯಲು, ಒಮ್ಮೆ ಬೀಸಾಗಿ ಒಡಮುರಿದಳು.

ಕರಿಯಪ್ಪ ಆಕರ್ಷಿತನಾಗಿ ಅವಳ ಹಿಂದೆಯೇ ನಡೆದ. ಆಟ ನಡೆದಿತ್ತು. ಆದರೆ ಮೊದಲಿನ ರಂಗು ಈಗ ಇರಲಿಲ್ಲ. ಚಳಿಗೆ ಮದ್ದಳೆಯ ದನಿ ಕುಗ್ಗಿ ಹೋಗಿತ್ತು. ಪಿಟೀಲು ಅಪಶ್ರುತಿಯಲ್ಲಿ ಕುಂಯ್ಗುಡ ಹತ್ತಿತು. ಹಿಲಾಲುಗಳ ಬೆಳಕು ಮಬ್ಬಾಗಿತ್ತು. ಪಾತ್ರಗಳ ದನಿ ಭಾರವಾಗಿತ್ತು. ಗಲ್ಲಕ್ಕೆ ಹಚ್ಚಿದ್ದ 'ರಂಗು' ಉದುರಿ ಹೋಗಿ ಮುಖದ ಮೇಲೆ ಪ್ರೇತಕಳೆ ಬಂದಿತ್ತು. ಪ್ರೇಕ್ಷಕರೂ ಜಡರಾಗಿದ್ದರು. ಸಾರಥಿ ಅತ್ತರೂ ಈಗ ನಗುವವರಿರಲಿಲ್ಲ. ಎಲ್ಲರೂ ನಿದ್ದೆಯ ಭಾರದಿಂದ ತೂಕಡಿಸುತ್ತಿದ್ದರು.

ಮುಂದೆ ಗಿರಿಯವ್ವ, ಹಿಂದೆ ಕರಿಯಪ್ಪ ಎಲ್ಲಿಗೋ ಸಾಗಿದ್ದರು. ಹತ್ತಿರದಲ್ಲಿಯೇ ಐದಾರು ಗಿಡಗಳ ಗುಂಪು ಇತ್ತು. ಕತ್ತಲೆ ಅಲ್ಲಿ ಹೆಪ್ಪುಗಟ್ಟಿದಂತಿತ್ತು. ಇಬ್ಬರೂ ಆ ಕತ್ತಲೆಯಲ್ಲಿ ಕರಗಿಬಿಟ್ಟರು. ಕರಿಯಪ್ಪನಿಗೆ ಏನೇನೋ ಕೇಳಬೇಕೆನಿಸಿದರೂ ಮಾತಾಡುವದಾಗಲಿಲ್ಲ. ಇಡೀ ದಿನದ ಅನುಭವವೇ ಅವನಿಗೆ ವಿಚಿತ್ರವಾಗಿ ಕಾಣತೊಡಗಿತು. ವಿಲಕ್ಷಣವಾದ ದೈವಗತಿ ತನ್ನನ್ನು ಇಲ್ಲಿಗೆ ತಂದುಬಿಟ್ಟು, ಏನು ಆಟ ಹೂಡಿದೆಯೋ ಎಂದೆನಿಸಿತು. ಆದರೆ ಅಪ್ಪುಗೆಯ ಸುಖ ಮಾತಿಗೆ ಮೀರಿದ್ದಾಗಿತ್ತು. ಗಿರಿಯವ್ವ ತನ್ನ ಗಂಡನನ್ನು ಬಿಟ್ಟು ಈಗ ಬಂದದ್ದೇಕೆ ಎಂಬ ವಿಚಾರವೂ ಸುಳಿಯಲಿಲ್ಲ. ಅವಳು ಇಷ್ಟು ಬದಲಾದದ್ದು ಹೇಗೆ ಎಂಬ ಸಂಶಯವೂ ಬರಲಿಲ್ಲ. ಅವನಿಗೆ ಅಜ್ಞಾತವಾಗಿ ಹುದುಗಿಕೊಂಡಿದ್ದ ಕಾಮ ವರ್ಷ ವರ್ಷಗಳ ಹಸಿವೆಯಾಗಿ ಕೆರಳಿತ್ತು. ಈ ಒಂದು ಅನುಭವದಲ್ಲಿ, ಹಿಂದಕ್ಕೆ ಅವನು ಗುಪ್ತವಾಗಿ ಕಾಮಿಸಿದ್ದ ಹೆಣ್ಣುಗಳ ಸುಖಾನುಭವಗಳೆಲ್ಲ ಸಮಾವೇಶಗೊಂಡಿದ್ದವು. ಹಿಂದೆ, ಬಹಳ ಹಿಂದೆ ನಡೆದುಹೋಗಿದ್ದ ಒಂದು ಸಂಗತಿ. ತಟ್ಟನೆ ಅವನಿಗೆ ನೆನಪಾಯಿತು. ತುಂಬಿ ನಿಂತ ಜೋಳದ ಬೆಳೆಯ ನಿಲುವಿನಲ್ಲಿ ಕುರುಬರ ಮಲ್ಲಪ್ಪನ ಹೆಂಡತಿ ಕಲ್ಲವ್ವನನ್ನು ಹೀಗೆಯೇ ಸಂಧಿಸಿದ್ದ. ಅವಳು ನೋಡುವುದಕ್ಕೆ ಚೆಲುವೆಯಾಗಿದ್ದಳು. ಆದರೆ ಈಗಿನ ಧೈರ್ಯ ಆಗ ಇರಲಿಲ್ಲ. ಎಷ್ಟೋ ದಿನಗಳವರೆಗೆ ಅವಳ

ನೆನಪು ಇವನನ್ನು ಕಾಡಿತ್ತು. ಮುಂದೆ ಅವಳು ಬಾವಿ ಬಿದ್ದು ಸತ್ತು ಹೋದ ಮೇಲೆ ಆ ನೆನಪೂ ಮರೆಯಾಗಿತ್ತು.

ಈಗ ಆ ಸಂಗತಿ ನೆನಪಾಗಿತ್ತು. ನೆನಪು ತೀವ್ರ ಸಂವೇದನೆಯಾಗಿ ಪರಿಣಮಿಸಿತ್ತು. ಮನಸ್ಸಿಗೆ ಆಣೆಕಲ್ಲು ಸೋಕಿದಂತಾಯಿತು. ಆ ತಣ್ಣಗಿನ ಸ್ಪರ್ಶ ಹಿತಕರವಾಗಿರಲಿಲ್ಲ. ಚಳಿ ಒಳಗೇ ಹುಟ್ಟಿದಂತಾಗಿತ್ತು. ಅಪ್ಪುಗೆಯಲ್ಲಿ ಕಾವು ಬರಬರುತ್ತ ಕಡಿಮೆಯಾಗತೊಡಗಿತು. ಕಂಬಳಿಯ ಮುಸುಕು, ಎಲೆ ಅಡಿಕೆಯ ರುಚಿ, ಈ ಅಪ್ಪುಗೆ ಒಂದೂ ಏರುತ್ತಿರುವ ತಂಪನ್ನು ತಡೆಯದಾಗಿದ್ದವು. ನಂಜೇರಿದಂತೆ ತಂಪು ಏರತೊಡಗಿತ್ತು. ಮೈಯೊಳಗಿನ ತ್ರಾಣವೇ ಕುಂದಿದಂತಾಗಿತ್ತು. ಸಡಿಲಾದ ಮದ್ದಳೆಯ ಚರ್ಮದಂತೆ ದೇಹ ಜೋತುಬಿತ್ತು. ಮೈಕೈಯೆಲ್ಲ ಒರಟು ಬಂದಂತಾದವು. ನಿದ್ದೆಯ ಭಾರ ಕಣ್ಣಿನ ಮೇಲೆ ಸೀಸವಾಗಿ ಒರಗಿತು. ಮೈಮೇಲೆಲ್ಲ ತಣ್ಣನೆ ಬೆವರುಬಿಟ್ಟಿತು.

ಬೆಳಗಾದ ಮೇಲೆ ಕರಿಯಪ್ಪ ಕಣ್ಣು ತೆರೆದು ನೋಡಿದಾಗ ಗಿರಿಯವ್ವನಿರಲಿಲ್ಲ. ಹೊದ್ದುಕೊಂಡ ಕಂಬಳಿಯೂ ಮಾಯವಾಗಿತ್ತು. ಸುತ್ತಮುತ್ತಲೂ ನೋಡಿದಾಗ ತಾನಿದ್ದದ್ದು ಹಾಳುಬಾವಿಯ ಹತ್ತಿರ ಎಂದು ಗೊತ್ತಾಯಿತು. ಗಾಬರಿಯಿಂದ ಎದ್ದ. ತ್ರಾಣವಿರಲಿಲ್ಲ. ಅತ್ತಿತ್ತ ಹುಡುಕಾಡಿದ. ಆಟ ನಡೆದ ಸ್ಥಳವಾದರೂ ಎಲ್ಲಿ ? ಹತ್ತಿರ ಎಲ್ಲೋ ಇರಬೇಕಾಗಿತ್ತು. ಆದರೆ ಅಲ್ಲಿ ಹುಡುಕಿದರೆ ಅಟ್ಟವಾಗಲಿ, ಜನರಾಗಲಿ ಕಾಣಲಿಲ್ಲ.

ನೆಲವನ್ನೆಲ್ಲ ಪರೀಕ್ಷಿಸಿ ನೋಡಿದಾಗ ತಾನಿದ್ದದ್ದು ಸ್ಮಶಾನದಲ್ಲಿ ಎಂದು ಗೊತ್ತಾಯಿತು. ಅಲ್ಲಲ್ಲಿ ಎಲುಬುಗಳು ಬಿದ್ದಿದ್ದವು. ಸ್ವಲ್ಪ ದೂರದಲ್ಲಿ ಬೆಳ್ಳಿಕೊಪ್ಪದ ಹಾಳುಮನೆಗಳು ಕಂಡವು. ಹಾಗಾದರೆ ಇದು ಹೊಸಳ್ಳಿಯಲ್ಲ ! ಅಲ್ಲಿ ನಡೆದದ್ದು ಆಟವಲ್ಲ ! ತನ್ನ ಜೊತೆಗೆ ಬಂದು ಕೂಡಿದವಳು ಗಿರಿಯವ್ವನಲ್ಲ ! ಮೈ ಕೈ ಥರಥರ ನಡುಗ ಹತ್ತಿದವು. ಬೆಳಗಿನ ಚಳಿ ಗಾಳಿ ಬೀಸಿತು. ಗಿಡದ ಮೇಲಿನ ಹಾಲಕ್ಕಿಗಳೆರಡು ವಿಕಾರವಾಗಿ ಕೂಗಿಕೊಂಡವು. ಇದೆಲ್ಲ ಎಂಥ ಹುಡುಗಾಟಿಕೆ ಎನಿಸಿತು. ಕೊನೆಗೂ ಜೀವನ ತನಗೆ ಮೋಸ ಮಾಡಿತು !

ಹಿಂಡಿ ಒಗೆದ ಸಿಪ್ಪೆಯಂತೆ ಕರಿಯಪ್ಪ ನಿತ್ರಾಣನಾಗಿದ್ದ. ನಾಲಗೆಯ ದ್ರವ ಆರಿ ಹೋಗಿತ್ತು. ಎದೆ ಒಡೆದಿತ್ತು. ಮುಖ ಮುಚ್ಚಿಕೊಂಡು ಹೆದರಿಕೆಯನ್ನು ತಡೆಯಲಾರದೆ, ಹುದುಲಲ್ಲಿ ಮುಳುಗುವವನಂತೆ ಕರಿಯಪ್ಪ ನೆಲಕ್ಕೆ ಬಿದ್ದ.

●

(೧೯೫೮)

# ಕನ್ನಡಿಯ ಕಣ್ಣು

● ಆರ್ಯ

ಕನ್ನಡಿ, ಜೀವನಕ್ಕೆ ಒಂದು ಉಪಮೆಯಾದರೂ ಅದು ಪೂರ್ತಿ ಸ್ಪಷ್ಟವಾಗುವುದಿಲ್ಲ. ಅದಕ್ಕೆ ಹಿರೇರು ಹೇಳೂದು, ಜೀವನದ ಅರ್ಥ ಬಹಳ ಸೂಕ್ಷ್ಮ, ನೀರುಳ್ಳಿಯಂತೆ ಒಂದು ಪಕಳೆ ತೆಗೆದಾಗ ಇನ್ನೊಂದು ಪಕಳೆ, ಅದರೊಳಗೆ ಇನ್ನೊಂದು !...... ಆದರೂ ಸಂತ ಬುದ್ಧ ಮಾಯಾ ಎಂದರೆ, ಶಂಕರರು ಮಿಥ್ಯಾ ಎಂದರು. ಸಾಂಖ್ಯರು ಪ್ರಕೃತಿ ಹುಡುಗಿಯ ನಾಟಕ ಎಂದರು.

ಇಂಡಿಯಾ ಉರುಫ್ ಭಾರತ ಸ್ವತಂತ್ರವಾಗಿ ೩೩ ಕೋಟಿ ದೇವರ ಪ್ರತಿಬಿಂಬ ೩೩ ಕೋಟಿ ಜನಸಂಖ್ಯೆ ೧೦೦ ಪ್ಲಸ್ ಕೋಟಿಯ ಬಾಯ್ಲಿಂಗ್ ಪಾಯಿಂಟ್ ಮುಟ್ಟುತ್ತಿರುವಾಗ, ಬಡತನದ ಕೆಳರೇಖೆ, ಲಂಚದ ಮೇಲು ರೇಖೆ, ಜಾತಿ ಮತಗಳ ನಡುರೇಖೆ ಬೆಳೆ ಬೆಳೆಯುತ್ತಿರುವಾಗ, ದರ್ಶನದ ಗಂಭೀರ ಮಾತುಗಳು ಹಿನ್ನಡೆಯುತ್ತಿದ್ದವು. ಆಗ, ಕಾಮ್ರೇಡ್ ಡಾಂಗೆ ಶ್ರೀಪಾದರಂತೆ, ಸಾಂಖ್ಯ ಚಾರ್ವಾಕ ಮುಂತಾದ ಸಂಸ್ಕೃತ ದರ್ಶನದ ಆಳ ಪರಿಚಯದೊಡನೆ, ಹೆಗೆಲ್, ಮಾರ್ಕ್ಸ್, ಲುಕಾಕ್ಸ್ ಆದಿಗಳನ್ನು ಕರತಲಾಮಲಕ ಮಾಡಿಕೊಂಡಿದ್ದ, ಶಾಂತಿನಿಕೇತನದ ಪ್ರೊಫೆಸರ್ ಬಂದೋಪಾಧ್ಯಾಯರು, ಇಂಡಿಯಾದ ಸಾಮಾಜಿಕ ತುರಿಕೆಗೆ ಸೋಶಲಿಸಮ್ಮೇ ಝಂಡೂಬಾಮ್ ಎಂದು ಸಿದ್ಧಾಂತಗೊಂಡಿದ್ದರು. ಮಲ್ಟಿನ್ಯಾಶನಲ್ಸ್ ಉಪ್ಪಿನಕಾಯಿ, ಪಾಪಡ್ ಮಾರೂದು, ಮೊನೋಪೊಲಿಗಳು ದನಕುರಿ ಮೇವಿನ ಏಕಸ್ವಾಮ್ಯದಲ್ಲಿ ಬಡತನವನ್ನು ಬುಲ್‌ಡೋಸ್ ಮಾಡೂದನ್ನು ತಡೆಯಲು, ಮಬ್ಬು ಧರ್ಮದರ್ಶನಗಳ ಮೋಡಗಳಿಂದ ಮಣ್ಣಿನ ವಾಸನೆಗಿಳಿಯಬೇಕೆಂದು, ಶಾಂತಿನಿಕೇತನದ ದರ್ಶನ, ಕಲಾಶಾಸ್ತ್ರಗಳ ಕ್ಲಾಸುಗಳಲ್ಲಿ ವಚನಿಸುತ್ತಿದ್ದರು.

ಅದನ್ನು ಸಕಾರಣ ಅಂಕಿಸಂಖ್ಯೆಗಳೊಡನೆ ಕರಿಹಲಗೆಯಲ್ಲಿ ವಿವರಿಸುತ್ತಿದ್ದಾಗ, ಗೊಂಬೆಯಂಥ ಹುಡುಗಿಯೊಬ್ಬಳು ಬಂದು ಕ್ಲಾಸನ್ನು ತೂರಿಕೊಂಡಳು. ಬಂದವಳು ಬಂಗಾರಗೂದಲಿನ ಅಪ್ಪಟ ಬಿಳಿಹುಡುಗಿ. -ಇಟಲಿಯ ವೆನಿಸ್ ಎಂಬ ರಿಕ್ಷಾ, ಕಾರು, ಬಸ್ಸು, ಲಾರಿಗಳ ಬದಲು ನಾಲೆಗಳ ಜಾಲದ ಗೊಂಡೋಲಾ, ವಾಪೊರೆಟ್ಟೊ, ದೋಣಿ, ಬೋಟುಗಳಲ್ಲೇ ಊರೆಲ್ಲಾ ಮನುಷ್ಯ, ಮಾಲು, ಕಾಯಿಪಲ್ಲೆ, ಕಿರಾಣಿ ಇತ್ಯಾದಿ ಸಾಗಾಟ ಮಾಡುವ, ನೀರಿನ ಸುಂದರ ನಗರದಿಂದ ಭಾರತಕ್ಕೆ ಬಂದಿದ್ದ ೨೨ ವಯಸ್ಸಿನ ಹುಡುಗಿ.

ಕನ್ನಡಿ, ದರ್ಶನ ಶಾಸ್ತ್ರ, ಶಾಂತಿನಿಕೇತನ, ಸಾಂಖ್ಯ - ಚಾರ್ವಾಕ - ಮಾರ್ಕ್ಸ್ ತಳಿಯ ಪ್ರೊಫೆಸರ್ ಬಂದೋಪಾಧ್ಯಾಯ, ಇಟಲಿಯ ಬಿಳಿ ಹುಡುಗಿ, ನಾಲೆನಗರ ವೆನಿಸ್ ಇತ್ಯಾದಿತ್ಯಾದಿಯಾಗಿ ಈ ಮಾತಿನ ದಾರ ಕ್ಲಿಷ್ಟ ಬ್ರಹ್ಮಗಂಟುಗೊಂಡಾಗ, ಒಂದಿಷ್ಟು ಎಳೆ ಬಿಡಿಸಿ ಸಂಬಂಧಸೂತ್ರ ಸ್ಪಷ್ಟಗೊಳಿಸುವುದು ಪ್ರಶಸ್ತವಾದೀತು. ಕಾಕತಾಳೀಯಗಳ ಕೌತುಕದಿಂದ ಕತೆಗೆ ಕೌತುಕ ಬರುತ್ತದಾದರೂ, ಕಾಗೆ, ತಾಳೆ, ಬಿದ್ದ ಹಣ್ಣು ಇವುಗಳ ಒಂದಿಷ್ಟು ಜಾತಕ ಬಿಡಿಸಿದಾಗ, ಕ್ಯಾಲಿಡೋಸ್ಕೋಪ್‌ನ ಭ್ರಮಾಬಿಂಬದ ಜಾಗದಲ್ಲಿ ಒಂದಿಷ್ಟು ಕನ್ನಡಿಯ ರೂಪ ಮೂಡೀತು.

❖ ❖ ❖

ಮೊದಲು ಶಾಂತಿನಿಕೇತನ ಪುರಾತನ ವಂಗದೇಶದ ಈಗಿನ ಬಂಗಾಲ, ನೋಬೆಲ್ ಸಾಹಿತಿ ರವೀಂದ್ರನಾಥ ಠಾಗೋರ್, ಬಂಕಿಮ್‌ಚಂದ್ರ, ಚಿತ್ರಕಲೆಯ ಅವನೀಂದ್ರ ಠಾಗೋರ್, ನಂದಲಾಲ ಬಸು, ಪುನರುತ್ಥಾನದ ರಾಮ್‌ಮೋಹನ್‌ರಾಯ್, ಪರಮಹಂಸ, ವಿವೇಕಾನಂದ ಇತ್ಯಾದಿಗಳಿಂದ ಇಂಡಿಯಾ ಉರುಫ್ ಭಾರತದ ಸಂಸ್ಕೃತಿ, ಸಾಹಿತ್ಯ, ಕಲೆ, ರಾಜಕೀಯಗಳ ಪುನರುತ್ಥಾನದ ಕನ್ನಡಿಯಂತಿದೆ. ಈ ಪುನರುತ್ಥಾನದ ಇನ್ನೊಂದು ಅಡ್ಡ ಕವಲಾಗಿ ಮಾರ್ಕ್ಸಿಸಂ, ಸೋಶಲಿಸಂ, ರಿಯಲಿಸಂ, ಎಡ, ಎಡದ ಎಡ ಮುಂತಾಗಿ ಘನಗೊಂಡವು. ಇಂತಹ ಬಂಗಾಲದ ಬೀಜಪ್ರಾಯವಾಗಿರುವುದು ಶಾಂತಿನಿಕೇತನ. ಇಂದಿಗೂ ಜ್ಞಾನ, ಕಲೆಗಳ ದೇಗುಲ.

ಇಂತಹ ದೇವಾಲಯದಲ್ಲಿ ಒಬ್ಬ ಜ್ಞಾನಾರ್ಚಕರಾಗಿರುವವರು ಮಧ್ಯವಯಸ್ಸಿನ ಪ್ರೊಫೆಸರ್ ಬಂದೋಪಾಧ್ಯಾಯರು. ೧೯ ನೇ ಶತಮಾನದ ದೊಡ್ಡ ಸಂಸ್ಕೃತ ನೈಯಾಯಿಕಾದಿ ವಿದ್ವಾಂಸರಿದ್ದೂ ಕ್ರೈಸ್ತಮತಕ್ಕೆ ಮತಾಂತರಗೊಂಡ ಬ್ರಾಹ್ಮಣ ಮೈಕೆಲ್ ಮಧುಸೂದನ ದತ್ತರ ದೂರದ ಅಳಿಯ, ಕಾಲೀಘಾಟ್‌ನಲ್ಲಿ ವೇದಘನಪಾಠಿಯಿದ್ದೂ ಲಾರ್ಡ್ ಮೆಕಾಲೆಯ ಆಧುನಿಕ ಆಂಗ್ಲ ಎಜ್ಯುಕೇಶನ್ ಪದ್ಧತಿ ಮೆಚ್ಚಿ ಇಂಗ್ಲೀಷ್ ಕಲಿತಿದ್ದ ಆಚಾರ್ಯ ಬಂದೋಪಾಧ್ಯಾಯರ ಐದನೇ ತಲೆಮಾರು ಈ ಪ್ರಸ್ತುತ ಬಂದೋಪಾಧ್ಯಾಯರು. ಹಿಂದೆ ಹೇಳಿದ್ದಂತೆ, ಭಾರತೀಯ ಸೌಂದರ್ಯಶಾಸ್ತ್ರ, ಸಾಂಖ್ಯ, ಮಾರ್ಕ್ಸಿಸಂಗಳ ಗಟ್ಟಿ ತಳಿ. ಶಾಂತಿನಿಕೇತನಕ್ಕೆ ಬರುವ ಮೊದಲು ಬರೋಡಾ ಕಲಾ ಶಾಲೆಯಲ್ಲಿ ದರ್ಶನಶಾಸ್ತ್ರದೊಡನೆ, ಕಲಾ, ಇತಿಹಾಸ, ಪಾಶ್ಚಾತ್ಯ - ಪೌರ್ವಾತ್ಯ ವಿಮರ್ಶೆಗಳಲ್ಲೂ ಘನ ಹೆಸರು ಪಡೆದವರು.

ಆದರೆ ಮದುವೆಯಾಗಿ ೨೦ ವರ್ಷಗಳಲ್ಲೂ ಮಕ್ಕಳಾಗದೆ, ಮಧ್ಯಮ ವರ್ಗದ ಮಧ್ಯಮ ಸುಂದರಿ, ಹೆಂಡತಿ ಲಲಿತಾಬೆನ್ ಮೈಯಲ್ಲಿ ಲಾಲಿತ್ಯ, ಮನದಲ್ಲಿ ಲವಲವಿಕೆ ದಿನೇದಿನೇ ಕಳಕೊಂಡಾಗ, ಅದು ಪತಿ ಬಂದೋಪಾಧ್ಯಾಯರಲ್ಲೂ ಪ್ರತಿಬಂಧಿಸಿ, ಕೆಲವರ್ಷ ಶಾಂತಿನಿಕೇತನದಲ್ಲಿ ಅಧ್ಯಾಪನ ಕೈಗೊಂಡರೆ, ಶಾಂತಿಯೊಡನೆ, ಒಂಟಿತನ ವಿರಹಗಳಿಂದ ಪ್ರೇಮಕ್ಕೆ ಕುಮ್ಮಕ್ಕು ಬಂದು ದಾಂಪತ್ಯಕ್ಕೆ ಹೊಸ ಹುಮ್ಮಸ್ಸು ಮೂಡೀತೆಂದು ಶಾಂತಿನಿಕೇತನಕ್ಕೆ

ಬಂದವರು. ಪ್ರೊಫೆಸರಿಕೆಯೊಡನೆ ವೈಚಾರಿಕ, ವಿಮರ್ಶಕ, ರಾಜಕೀಯ ಸುತ್ತುಗಳಲ್ಲೂ ಹೆಸರು ಪಡೆದವರು.

ಪುರಾತನ ಗ್ರೀಕ್ ಅರಿಸ್ಟಾಟಲ್‌ರ ಕಲೆಯೆಂದರೆ ಅನುಕರಣೆ, ಮಿಮೇಸಿಸ್, ಪ್ರಕೃತಿಯ ಪ್ರತಿಬಿಂಬ. ಇದು ತುಂಬಾ ಅರ್ಥಪೂರ್ಣ. ಇಂದಿನ ತತ್ವಶಾಸ್ತ್ರಜ್ಞ ಹರ್ಬರ್ಟ್ ಮಾರ್ಕೋಸ್ 'ಬೂರ್ಜ್ವಾ ಕಲೆ, ಸತ್ಯ, ಜೀವನ ಕ್ರಿಯೆ ಸಂದರ್ಭಗಳ ಪರಿಧಿಯಿಂದ ಮಾರ್ಜಿನಲ್ ಆಗಿ ಉಳಿಯುತ್ತದೆ' ಎನ್ನುವದೂ ಅರ್ಥಪೂರ್ಣ. ಇದು ಇಂದಿನ ಇಂಡಿಯಾದ ಕಲಾನಿಟ್ಟಿನಲ್ಲೂ ಐತಿಹಾಸಿಕ ಅನಿವಾರ್ಯತೆ. ಕಲೆಯಲ್ಲಿ ಅಮೂರ್ತ ಕಲೆಯನ್ನು ಸಾರಾಸಗಟಾಗಿ ಅವಿಮರ್ಶಕನಾಗಿ ಒಪ್ಪಿಕೊಳ್ಳುವುದು ಒಂದು ಬೂರ್ಜ್ವಾ ವಲಯನೀಕರಣ, ಇತ್ಯಾದಿ 'ಅಮೃತ ಬಜಾರ್' ಪತ್ರಿಕೆಗಳಲ್ಲಿನ ಅವರ ಪ್ರಗತಿವಾದೀ ಪ್ರಬಂಧಗಳು, ಬಂದೋಪಾಧ್ಯಾಯರಿಗೆ ಎಡ, ಬಲ ಮಾರ್ಕ್ಸಿಸ್ಟ್ ಬುದ್ಧಿಜೀವಿಗಳ ಸ್ನೇಹಹಸ್ತವನ್ನು ಲಾಘಿಸಿದ್ದುವು. ಕಮ್ಯುನಿಸ್ಟ್ ಪಾರ್ಟಿಯ ಮುಖವಾಣಿಯಾದ 'ನ್ಯೂ ಲೆಫ್ಟ್' ಪತ್ರಿಕೆಯ ಕಲಾವಿಮರ್ಶಕ, ಬಂಗಾಲ ಕಲಾ ಅಕಾಡೆಮಿಯ ಗೌರವ ಸದಸ್ಯರು ಮಂಕಾಗಿ, ಎಡಪಂಥೀ ಕಲಾ ಬುದ್ಧಿ ಬಂಡಾಯಗಳಲ್ಲಿ ಬಂದೋಪಾಧ್ಯಾಯರು ಒಬ್ಬ ಪ್ರಮುಖ ನೇತಾರ ವಕ್ತಾರರಾದರು.

❖ ❖ ❖

ಅಟ್ಲಾಸ್‌ದಲ್ಲಿ ಇಂಡಿಯಾದಿಂದ ಎಡಕ್ಕೆ ತಲೆ ತಿರುಗಿಸಿದರೆ, ಬಂಗಾಲದ ಕಲಾಪರಿಮಳದ ಒಂದು ಸೊಗಡು, ಇಟಲಿಯ ವೆನಿಸ್‌ನಲ್ಲೂ ಸೂಸುತ್ತದೆ. ರಿನೈಸೆನ್ಸ್, ಪುನರುತ್ಥಾನ ಎನ್ನುವ ಶಬ್ದದ ತವರೂರು ಅದು. ಮೈಕೆಲೆಂಜಲೋ, ರೊಸೆಟ್ಟೀ, ಡವಿಂಚೀ, ಡಾಂಟೆ, ಮಜ್ಜನಿ ಮುಂತಾಗಿ ಪಾಶ್ಚಾತ್ಯ ಕಲೆ, ಮಾನವತಾ ಸಿದ್ಧಾಂತಗಳ ಪುನರುತ್ಥಾನದ ಗದ್ದೆಯಾದದ್ದು, ಅಲ್ಲಿನ ಚಿಗುರು ಅರಳಿ ಯುರೋಪೆಲ್ಲಾ ಅರಳೀಮರದಂತೆ ಹರಡಿಕೊಂಡ ಸಂವೇದನೆಯ ತಾಯಿ ಬೇರು ಈ ಇಟಲಿಯ ವೆನಿಸ್ ನಗರ. ಅಂಥಾ ನಗರದ ಸಂತ ಮಾರಿಯಾ ಬಡಾವಣೆಯ ಕ್ಯಾಥೋಲಿಕ್ ಚರ್ಚ್‌ನ ಪಾದ್ರಿಯ ಅಕ್ಕನ ಮಗಳಾಗಿ, ಪಾದ್ರಿಗಳ ಪ್ರಾಮಾಣಿಕ ಅಂಧಾಭಿಮಾನ, ಅವರಿಗೆ ಅರಿವಾಗದಂತೆ ಕಮ್ಯೂನಿಯನ್ ದೇಣಿಗೆ, ಚರ್ಚ್ ಪುನರ್‌ನಿರ್ಮಾಣಗಳ ಲೆಕ್ಕಪತ್ರ ಆಚೀಚೆ ಆಡತೊಡಗಿದಾಗ ಪ್ರತಿಭಟಿಸುತ್ತ, ಸ್ವಲ್ಪ ಧರ್ಮ ವಿಮೂಢಳಾಗುತ್ತಿದ್ದ ಹುಡುಗಿ ಸಿನ್ಯೊರೀನಾ ಲಾವುರಾ, ವೆನಿಸ್ ಕಲಾ ಅಕಾಡೆಮಿಯಲ್ಲಿ ಪ್ರತಿಭಾವಂತ ವಿದ್ಯಾರ್ಥಿನಿಯಾಗಿದ್ದಳು. ಕೊನೇ ವರ್ಷದಲ್ಲಿ ಮೊರ್‍ರಿಯಾನ್, ಕ್ಯಾಂಡಿಸ್ಕೀ, ಪೊಲ್ಲಾಕ್‌ರ ಅಮೂರ್ತ ಚಿತ್ರಶೈಲಿಯನ್ನು ತನ್ನ ವಿಶೇಷ ಅಧ್ಯಯನವಾಗಿ ಹಮ್ಮಿಕೊಂಡಿದ್ದಳು..

ಕಲಾಕಾರರು ಎಂದ ಮೇಲೆ ಏನಾದರೊಂದು ವಿಕ್ಷಿಪ್ತತೆ ಇರುತ್ತದೆ. ಲಾವುರಾಳ ಎರಡು, ಮೂರು ಬಾಯ್‌ಫ್ರೆಂಡ್‌ಗಳ ಗೆಳೆತನ ಮಣ್ಣುಚಿಟ್ಟಿಯ ನೈದಿಲೆಯಂತೆ ಅರಳದೇ ಇದ್ದಾಗ, ಅದು ಮನೆ, ಕಾಕಾ, ಚರ್ಚ್, ಧರ್ಮಗಳ ವಿರುದ್ಧ ಬಂಡೇಳುವ ಮುಖವಾಡವನ್ನು ಧರಿಸಿತು.

ಒಂದು ರವಿವಾರ ಮುಂಜಾನೆ ಸರ್ವಿಸ್‌ನಲ್ಲಿ ಕಾಕಾ ಜೋಸೆಫ್‌ರೊಡನೆ ಜಗಳಾಡಿ, ತಾನು ತಪ್ಪದೇ ಭಾಗವಹಿಸುತ್ತಿದ್ದ ಕ್ವಾಯರ್‌ಗಾನದಲ್ಲಿ ಭಾಗವಹಿಸುವುದಿಲ್ಲವೆಂದು ಸಿಡಿಮಿಡಿಗೊಂಡು ಹೊರಬಂದು ರಸ್ತೆಗೆ ನಡೆದಾಗ, ಪೀಟರ್ ವೃತ್ತದ ಸಿಯಾಸ್ಸಾ ಬಾಜೂಗಲ್ಲಿಯಲ್ಲಿ ಇಂಡಿಯಾದ ಖಡಿ ವ್ಯಾಪಾರಿಯೊಬ್ಬ ಕಾಶ್ಮೀರೀ ಕಾರ್ಪೆಟ್‌ನಲ್ಲಿ ಮಾರುತ್ತಿದ್ದ ಸಣ್ಣಸರಕುಗಳ ನಡುವೊಂದು ಗಾಜಿನ ಬುದ್ಧನ ಗೊಂಬೆಯೊಂದು ಮುಂಜಾನೆ ಬೆಳಕಲ್ಲಿ ಬಣ್ಣಗೊಂಡು ಮಿಂಚಿದಾಗ, ಲಾವುರಾಳ ಎದೆಯೊಳಗೆ ಏನೋ ಝಲ್ಲೆಂದಿತು. ಕ್ಷಣಕಾಲ ಗೊಂಬೆಯನ್ನು ದಿಟ್ಟಿಸುತ್ತಿದ್ದಾಗ, ಬುದ್ಧನ ಬಣ್ಣ ಕಣ್ಣು ರೆಪ್ಪೆ ಮಿಟುಕಿ ಅವಳೆದೆಯಲ್ಲಿ ಬೆಚ್ಚಗೆ ಅವಿತಂತಾಯಿತು. ಹಾಗೇ ಮುಂದೆ ಕೆಲ ದಿನ ಭಾರತೇತ್ಯಾದಿ ಓರಿಯಂಟಲ್‌ದ ಬಿಸಿಲು ಬಣ್ಣ, ಫೇರಿ ಟೇಲ್ಸ್, ಧ್ಯಾನ - ಯೋಗಗಳು ಆಕೆಯನ್ನು ಏನೋ ಮಾಯಗೊಳಿಸಿದಾಗ, ಮಿಲಾನ್‌ದ ವಿಮಾನದಲ್ಲಿ ಇಟಲಿಗೆ ವಿದಾಯ ಹೇಳಿ ಇಂಡಿಯಾಕ್ಕೆ ಹಾರಿದ್ದಳು ಸಿನ್ಯೋರೀನಾ ಲಾವುರಾ.

ಟಿಪಿಕಲ್ ಟೂರಿಸ್ಟ್‌ರಂತೆ ಇಂಡಿಯಾ ಗೈಡ್ ಕಂಠಗತಮಾಡಿ, ಸಿಂಹ ಹುಲಿ ಹಿಮಾಲಯ ಗಂಗೆ ಗಾಡ್‌ಮೆನ್ ಅಜಂತ ಸಾಧು ಸಂತ ಸಾಂಚೀಸ್ತೂಪಗಳಲ್ಲಿ ಮಾಯೆಗೊಂಡು ಅಡ್ಡಾಡಿದಾಗ ಅವಳ ಮೈ ಹಿತ್ತಾಳೆ ಬಣ್ಣಗೊಂಡಿತ್ತು. ಅಂತೆಯೇ ಗೌತಮಬುದ್ಧ ಅವಳ ಬೆನ್ನು ಹಿಡಿದಿದ್ದ. ವಾರಣಾಸಿಯ ಪಂಡಾ ಜಂಗುಳಿ ಸುಸ್ತಾಗಿ, ಬೋಧಗಯಾ ಸ್ಟೇಶನ್‌ನಲ್ಲಿ ಇಳಿದಾಗಲೇ ಅವಳ ಕೈಯಲ್ಲಿ ತೂರಿಕೊಂಡಿತ್ತು ಒಂದು ಕರಪತ್ರ. ರಿಟೈರ್ಡ್ ಕ್ಲಾರ್ಕುಗಳಿಂದ ಹಿಡಿದು ಮಲ್ಟೀನ್ಯಾಶನಲ್ ಮ್ಯಾನೇಜರ್‌ರಿಗೂ ಪ್ರಿಯ ಪ್ರಸಿದ್ಧವಾಗಿದ್ದ ಬೌದ್ಧ 'ಧರ್ಮಯೋಗ' ಸಾಧನೆಯ ಕೈಪಿಡಿ. ಖುಷಿಗೊಂಡು ಲಾವುರಾ, ಅದು ನಡೆಯುವ ಟಿಬೇಟಿನ ನಾಗಾರ್ಜುನ ಬೌದ್ಧಮಠಕ್ಕೆ ನಡೆದಳು. ಹತ್ತುದಿನಗಳ ಕಠಿಣ ಮೌನ, ಉಪವಾಸ, ಧ್ಯಾನ-ಧಾರಣಗಳ ಶೂನ್ಯ ಸಮಾಧಿಯಲ್ಲಿ, ತಾನೊಂದು ಬಿಂಬ, ಬಿಂಬ ಶೂನ್ಯದ ಪ್ರತಿಬಿಂಬ ಎಂಬ ಒಂದು ಅರಿವಿನ ಶಾಂತ ಸಾಕ್ಷಾತ್ಕಾರಕ್ಕೆ ಬಂದಿದ್ದಳು. ತಾನು ಕ್ಷೀಣವಾಗಿ ಪುದ್ಗಲ ಅಣುವಾಗಿ ಶೂನ್ಯದ ಆಳಕ್ಕೆ ಇಳಿಯುವುದನ್ನು, ಮೈತ್ರಿ ಕರುಣಾದಿ ಶುದ್ಧಿಯ ಕಡೆ ಮೇಲೇರುವುದನ್ನು, ಕರುಣಾಮಯಿ ಬುದ್ಧನ ತ್ರಿಕಾಯ ಅರಳುವುದನ್ನು ಕಂಡು ಬೆರಗಾದಳು. ಜ್ಞಾನದೇವತೆ ತಾರೆ ಬೋಧಿಸತ್ವನ ಜತೆ ತಾನು ನಾಚುತ್ತ ನಿಂತಂತೆ ಜನ್ಮಗಳ ಅರಿವಿನಲ್ಲಿ, ಒಂದೇ ಜನ್ಮವಿರುವ ಸರಿತಪ್ಪುಗಳ ಸತ್ಯದ ಈ ಲೋಕ ಈ ಜೀವನ ಕೇವಲ ಸತ್ಯವೆನ್ನುವ ಬೈಬಲ್ಲಿನ ಮಹಾವಾಕ್ಯ, ಹಿಮನ್ಸ್‌ಗಳು ಲಾವುರಾಳಿಗೆ ಮರವೆಯಲ್ಲಿ ಭೂತವಾದವು. ಹಗುರ ಮನದಿಂದ ಕೆಲದಿನ ಮತ್ತೂ ಅಲ್ಲೇ ಉಳಿದಳು.

ಇದರ ಜತೆಗೇ ಅಲ್ಲಿನ ಪುಸ್ತಕಾಲಯದಲ್ಲಿ ಬೌದ್ಧಕಲೆಯ ಅಭ್ಯಾಸ ಮಾಡಿದಳು. ಮಂಡಲ ಚಿತ್ರಕಲೆ ಆಕೆಯನ್ನು ಆಕರ್ಷಿಸಿತು. ಅವುಗಳ ವಿನ್ಯಾಸ, ವಿಭಿನ್ನ ಪಾತಳಿಗಳು, ವಿಶ್ವವನ್ನು ಸಂಕ್ಷಿಪ್ತ ಸಂಕೇತಗೊಳಿಸಿ, ಧ್ಯಾನಕ್ಕೆ ಕೇಂದ್ರ ಸಹಕಾರ ನೀಡುವ, ಕಮಲದಳ

ಸಿಂಹಾಸನಸ್ಥ ಹನ್ನೊಂದು ಶಿರ, ಆರು ಬಾಹುಗಳ ಕರುಣಾನೋಟದ ಅವಲೋಕಿತೇಶ್ವರ ಬುದ್ಧನ ಅನೇಕಾನೇಕ ಮಂಡಲಗಳು, ಲಾವುರಾಳನ್ನು ಚಿತ್ರದೊಳಗೇ ಸೆಳೆತಂದಂತೆ ಅನಿಸತೊಡಗಿತು. ಕಲೆ ಧ್ಯಾನಗಳ ವಿಶ್ರಾಂತಿ ಹೊಸ ಹುಮ್ಮಸ್ಸು ನೀಡಿದಾಗ, ಇತರ ಭಾರತೀಯ ಸಂಸ್ಕೃತಿ ಕಲೆಗಳ ಬಗ್ಗೆ ಬಾಯಾರಿಕೆಯಾಗಿ, ಅವಳ ಮುಂದಿನ ಸ್ಟೇಶನ್ ಭಾರತೀಯ ಪುನರುತ್ಥಾನದ ಕನ್ನಡಿಯಾದ ಶಾಂತಿನಿಕೇತನವೆನ್ನುವುದು ನಿಶ್ಚಿತವಾಗಿತ್ತು. ಹಾಗಾಗಿ ಲಾವುರಾ ಹೌರಾ ಸ್ಟೇಶನ್‌ದಿಂದ ನೇರ ಶಾಂತಿನಿಕೇತನಕ್ಕೆ ಬೆನ್ನಚೀಲ ಸಹಿತ ಪಾದಾರ್ಪಣೆ ಮಾಡಿದಾಗ, ಮೊದಲ ದರ್ಶನವಾದದ್ದು, ಬಂದೋಪಾಧ್ಯಾಯರ ವಿಶಾಲ ಅರಳೀಮರದ ನೆರಳಡಿಯ ಕಲಾ ಕ್ಲಾಸು.

'ವಿಷ್ಣುಧರ್ಮೋತ್ತರ ಪುರಾಣದ ಚಿತ್ರಸೂತ್ರದ ಆಯಾಮ, ಅಜಂತಾ ಫ್ರೆಸ್ಕೋಗಳ ಸೃಜನಶೀಲತೆ, ಗುಪ್ತ, ಗಾಂಧಾರ ಕಲೆಗಳಲ್ಲಿ ರೋಮನ್ ಪರ್ಷಿಯನ್ ಪ್ರಭಾವ ಸಮನ್ವಯಗೊಂಡದ್ದು, ಮೊಗಲ್ ಚಿತ್ರಪಂಥದಲ್ಲಿ ರಾಜಸ್ಥಾನೀ, ಕಾಂಗ್ರಾಗಳ ಅಂಥದ್ದೇ ಕಲಾಸಿಂಥೆಸಿಸ್, ಮುಂದೆ ವಸಾಹತು ಸಂದರ್ಭದಲ್ಲಿ ಅಗ್ಗದ ಪಾಶ್ಚಾತ್ಯ ಅನುಕರಣೆ, ಠಾಗೋರ್ ಬಂಧುಗಳಿಂದ ಭಾರತೀಯ ಪುನರುತ್ಥಾನ, ಅದು ಸ್ವಾತಂತ್ರ್ಯ ಆಂದೋಲನದಲ್ಲಿ ಆಡಿದ ಪಾತ್ರ, ಇಂದು ನಮ್ಮ ಆಧುನಿಕ ಕಲೆಯಲ್ಲಿ ಪಶ್ಚಿಮದ ಅನುಕರಣೆಯ ಬದಲು, ನಮ್ಮ ಸಾಮಾಜಿಕ ಸಂದರ್ಭದಲ್ಲಿ ನಮ್ಮದೇ ಬೇರಿನಿಂದ ಬರಬೇಕಾದ ನವ ವಾಸ್ತವವಾದದ ಅವಶ್ಯಕತೆ.....' ಮುಂತಾಗಿ ಪಾಂಡಿತ್ಯಪೂರ್ಣವಾಗಿ ವಿವರಿಸುತ್ತಿದ್ದರು, ಪ್ರೊ. ಬಂದೋಪಾಧ್ಯಾಯರು.

ಲಾವುರಾಳ ನಿರೀಕ್ಷೆ ಸುಳ್ಳಾಗಿರಲಿಲ್ಲ. ಆ ಘನ ಮಾತುಗಳನ್ನು ಕೇಳುತ್ತ ಒಂದು ಸಾರ್ಥಕ್ಯದ ಅನುಭವವಾಯ್ತು. ಶಾಂತಿನಿಕೇತನದಲ್ಲಿ ಹಗುರಾಗಿ ಸೂಸುವ ಒಂದು ರಸಾನುಭೂತಿಯ ಸೌಮ್ಯ ವಾತಾವರಣ, ಠಾಗೋರ್ ಬಂಧುಗಳು ಚಿಗುರಿಸಿದ್ದ ಸಂಸ್ಕೃತಿ, ಮಾನವತಾವಾದ, ಆಧುನಿಕತೆಯ ಸೊಗಡು ಅಲ್ಲಿನ ಕಲ್ಲು-ಮಣ್ಣು, ಮರ-ಗಿಡ, ಹಾತೆ-ಹಕ್ಕಿಗಳಲ್ಲೂ ಹರಿವುಗೊಂಡಂತೆ ಅವಳಿಗೆ ಅನಿಸತೊಡಗಿತು. ಅವೆಲ್ಲದರ ಜೀವನಂತ ಪ್ರತಿಮೆಯಾಗಿ ಬಂದೋಪಾಧ್ಯಾಯರು ಅವಳ ಚಿತ್ತವನ್ನು ಸೋಂಕಿದರು. ಒಂದೆರಡು ತಿಂಗಳನ್ನು ಇಲ್ಲೇ ಕಳೆದು ಅವರಿಂದ ಸಾಧ್ಯವಾದಷ್ಟು ಇಂಡಿಯಾ - ಸಂವೇದನೆಯನ್ನು ಹೀರಿ ಮುಂದೆ ನಡೆಯುವುದೆಂದು ನಿರ್ಧರಿಸಿದಳು. ಹೊರಗಿದ್ದು ವೇಳೆ ವ್ಯರ್ಥ ಮಾಡುವುದಕ್ಕಿಂತ, ಪ್ರೊಫೆಸರ್‌ರ ಮನೆಯಲ್ಲೇ ಮೊಕ್ಕಾಂ ಮಾಡಿದರೆ ಅವರ ವೈಚಾರಿಕತೆಯನ್ನು ಹತ್ತಿರದಿಂದ ನೋಡಬಹುದೆಂಬ ವಿಚಾರ ಮಿಂಚಿ, ಸ್ವಲ್ಪ ಗಲಿಬಿಲಿಗೊಂಡ ಬಂದೋರ ಕಡೆಯ ಸಲಹೆಯಂತೆ, ಅವರ ಮೇಲಾಧಿಕಾರಿ ಡೀನ್‌ರನ್ನು ಕಂಡಾಗ, ದೊಡ್ಡ ಕ್ವಾರ್ಟರ್ಸ್‌ನಲ್ಲಿ ಬಂದೋಪಾಧ್ಯಾಯರು ಒಬ್ಬರೇ ಇರೂದರಿಂದ, ಮೇಲೆ ಸಚ್ಚಾರಿತ್ರ್ಯದವರೆಂದು ಅವರಿಗೆ ಹೆಸರೂ ಇದ್ದದ್ದರಿಂದ, ಲಾವುರಾ ಅವರ ಮಗಳಂತೆ ಚಿಕ್ಕ ಪ್ರಾಯವಿದ್ದದ್ದರಿಂದ, ಅವಳಿಗೆ

ಬಂದೋರ ಬಂದೋಬಸ್ತಿನಲ್ಲಿ ನಾಲ್ಕು ವಾರ ವಾಸ್ತವ್ಯಕ್ಕೆ ಪರವಾನಿಗೆ ಸಿಕ್ಕಿತು. ಅವರ ಗೆಸ್ಟ್‌ರೂಂನಲ್ಲಿ ಸೂಟಕೇಸ್, ಬೆನ್ನುಚೀಲ ಜಮಾಯಿಸುತ್ತ "ಬುದ್ಧಂ ಶರಣಂ ಗಚ್ಛಾಮಿ" ಎಂದು ಮನದಲ್ಲೇ ಅಂದುಕೊಳ್ಳುತ್ತ ಪ್ರತಿಷ್ಠಾಪಿತಳಾದಳು ಹುಡುಗಿ ಲಾವುರಾ.

❖ ❖ ❖

ಎರಡು ವಾರ ಬಂದೋರ ಮನೆಯಲ್ಲಿ ಅವಳ ಜೀವನ ಬಲೂನಿನಂತೆ ಅರಳಿತು. ಶಾಂತಿನಿಕೇತನದ ಮರ-ಗಿಡ, ಕ್ಯಾಂಟೀನ್, ಅಡಿಗೆಯವರು, ಕಸಗುಡಿಸುವವರು, ಹುಡುಗಿಯರ ಹಾಸ್ಟೆಲ್, ಸತ್ಯಜೀತ್ ರೇಯ ಗುಡಿಸಲು, ಮೇಯುವ ದನ-ಆಡು-ಕುರಿ ಎಂದು ಎಲ್ಲರಲ್ಲೂ ಸ್ನೇಹ ಬೆಳೆಸಿದ್ದಳು. ಅಂತೆಯೇ ಮನೆಯಲ್ಲೂ ಕೂಡಾ. ಪೂರ್ವ-ಪಶ್ಚಿಮ ರೆಸಿಪಿ ಹೈಬ್ರಿಡ್‌ನಲ್ಲಿ ಏನೇನೋ ಅಡುಗೆ ಪ್ರಯೋಗಿಸುವಳು. ಬಟಾಟೆ ಫ್ರಿಟ್ಸ್, ನೂಡಲ್ಸ್, ಮಾಕ್ರೋನಿ ಮುಂತಾದ್ದು ಬಂದೋರಿಗೂ ಮೆಚ್ಚುಗೆಯಾಗಿತ್ತು. ಬರೋಡಾ ಹೆಂಡತಿಯ ಅಡಿಗೆ ಮರೆತಿದ್ದ ಅವರಿಗೆ ಈಗ ಇಲ್ಲಿನ ಗೋಡೆಗಳ ನಡುವೊಂದು ಒಂದು ಹೊಸ ಸಂಸಾರ ರೂಪುಗೊಳ್ಳುವಂತೆ ಅನಿಸಿತು. ಆಗೀಗ ಗುಂಗುಡುವ ಲಾವುರಾಳ ಹಾಡಿನ ಲಯ, ಆಕೆಯ ಸೆಂಟಿನ ಸೊಗಡು ಮನೆತುಂಬಿ ಹಿತವಾಗಿ ಅಲೆದಾಗ ಹಾಗೆ ಉಲ್ಲಸಿತರಾಗೋದೂ ಸಹಜವೇ. ಅಂತೆಯೇ ಲಾವುರಾಳೂ ಒಮ್ಮೆ 'ನನ್ನ ಜೀವನದಲ್ಲೇ ಇಂತಹ ಸುಂದರ ದಿನಗಳನ್ನು ನೋಡಿಲ್ಲ, ಬಂದೋ' ಎಂದು ತುಂಬು ಹೃದಯದಿಂದ ಅಂದಿದ್ದಳು.

ಅಂತೆಯೇ ಕಲೆ ಕುರಿತ ಅವರಿಬ್ಬರ ಬೌದ್ಧಿಕ ಚರ್ಚೆಗಳೂ ಪ್ರೌಢವಾಗಿದ್ದವು. ಕ್ಯೂಬಿಸಂ, ಕ್ಯಾಂಡಿನ್‌ಸ್ಕೀ, ಪೊಲ್ಲಾಕ್‌ರ ಅಮೂರ್ತ ಕೃತಿಗಳ ಹಿಂದಿನ ತಾತ್ವಿಕತೆಯಿಂದ ಪ್ರಭಾವಿತಳಾಗಿದ್ದ ಅವಳಿಗೂ, ಅದರ ವಿರುದ್ಧ ಧ್ರುವದಿಂದ ವಾಸ್ತವವಾದ, ನಿಯೋರಿಯಲಿಸಂ ಮುಂತಾಗಿ ಎತ್ತಿಕಟ್ಟುತ್ತಿದ್ದ ಬಂದೋರ ವಿಚಾರಗಳಿಂದ ಸಹಜವಾಗೇ ಸಂಘರ್ಷದ ಮಾತು ಕಾವೇರುತ್ತಿತ್ತು. ಲಾವುರಾ 'ಫೋಟೋ ರಿಯಲಿಸಂಗಿಂತಲೂ ಹೆಚ್ಚು ವಾಸ್ತವ ಜೀವಂತವಾದ "ಪರ್‌ಫಾರ್ಮೆನ್ಸ್ ಆರ್ಟ್" ಬಗ್ಗೆ ನೀ ಏನನ್ನುತ್ತೀ ? ಅಲ್ಲಿ ಜೀವಂತ ಮನುಷ್ಯರೇ ಕಲಾವಸ್ತುಗಳಾಗುತ್ತಾರಲ್ಲ !' ಎಂದಾಗ ಬಂದೋ 'ಯೋಚಿಸಬೇಕಾದ್ದು' ಎಂದು ವಿಷಯಾಂತರ ಮಾಡುವರು. ಕೊನೆಯಲ್ಲಿ ಆಕೆ ನಕ್ಕು ಬಂದೋರ ಬೆನ್ನು ಪೂಸಿ ಹಣೆಗೆ ಮುತ್ತಿಟ್ಟಾಗ ಮತ್ತೆ ಹಗುರ ವಾತಾವರಣ. ಬಂದೋಪಾಧ್ಯಾಯರಿಗೂ ಈ ಎರಡು ವಾರದಲ್ಲಿ ತನ್ನ ಒಣಜೀವನವೂ ಹೊಸದೊಂದು ಸೆಲೆಯಲ್ಲಿ ಹೊಸದಿಸೆಗೆ ಹರಿದಂತೆನಿಸಿ, ಜತೆಗೆ ಆಳದಲ್ಲಿ ಒಂದು ಮೂಕ ಭಯವೂ ಮೂಡತೊಡಗಿತು. ಸಾಂಖ್ಯಿಕ ಪ್ರಕೃತಿ, ಪುರುಷನನ್ನು ಕುಣಿಸುವುದು ನೆನಪಾಗುತ್ತಿತ್ತು. ಆ ವಾರ ಅವರು ಬರೋಡಕ್ಕೆ, ಹೆಂಡತಿ ಲಲಿತಗೆ ಪತ್ರ, ಮನಿಯಾರ್ಡರ್ ಮರೆತಿದ್ದರು, ಎಂದೂ ಮರೆಯದ ಬಂದೋ.

ಲಾವುರಾ ಮಾತ್ರ ತನ್ನ ವೈಯಕ್ತಿಕ ಜೀವನದ ಬಗ್ಗೆ ಹೆಚ್ಚಾಗಿ ಮೂಕಳಾಗುತ್ತಿದ್ದಳು. ಬಂದೋರು ತನ್ನ ಬರೋಡಾ ಮನೆ, ಒಂಟಿಯಿರುವ, ಮಕ್ಕಳಿಲ್ಲದ ಲಲಿತಾಬೆನ್ ಬಗ್ಗೆ, ತಮ್ಮಿಬ್ಬರ ದಾಂಪತ್ಯದಲ್ಲಿ ಸ್ವಲ್ಪ ಬಿರುಕು ಬಂದಿರುವ ಬಗ್ಗೆ ಒಂದಿಷ್ಟು ಪ್ರಸ್ತಾಪ ಮಾಡಿದಾಗ, ಲಾವುರಾ ಹೆಚ್ಚು ಆಸ್ಥೆ ತೋರಿಸುತ್ತಿರಲಿಲ್ಲ. ಅಂತೆಯೇ ಬಂದೋರು 'ಲಾವುರಾ, ನಿನ್ನ ಜೀವನ, ಮನೆ, ಗೆಳೆಯರ ಬಗ್ಗೆ ಏನೂ ಹೇಳಿಲ್ಲ' ಎಂದಾಗ, ಆಕೆ ವಿಷಾದದ ನಗೆ ನಕ್ಕು 'ಹೇಳುವಂಥದ್ದು ಅಂಥದ್ದೇನೂ ಇಲ್ಲ' ಎಂದು ಮಾತು ಹೊರಳಿಸುತ್ತಿದ್ದಳು.

ಎಂದಿನಂತೆ ಲಾವುರಾ ಕಲಾಸಾಧನೆಯನ್ನು ಮುಂದುವರಿಸಿದ್ದಳು. ಮುಂಜಾನೆ ಒಂದು ತಾಸು 'ಧರ್ಮಯೋಗ'ದಲ್ಲಿ ಕಲ್ಲುಗೊಂಬೆಯಂತೆ ಆಸನಸ್ಥಳಾಗಿ, ಮತ್ತೆ ಒಂದು ತಾಸು ತನ್ನ ಸ್ಕೆಚ್‌ಬುಕ್, ಕುಂಚ, ಬಣ್ಣ ಡಬ್ಬಿ ತೆರೆದು ಚಿತ್ರ ರೂಪಿಸತೊಡಗುವಳು. ಆದರೆ ಚಿತ್ರಗಳಲ್ಲಿ ಈಗೀಗ ಒಂದು ಸೂಕ್ಷ್ಮ ಬದಲಾವಣೆ ಬರತೊಡಗಿತ್ತು. ಅಮೂರ್ತ ಚಿತ್ರಗಳ ಬದಲು ಮಂಡಲಗಳು ಮೂಡತೊಡಗಿದ್ದವು. ಬೋಧಿಸತ್ತ್ವ, ಅವಲೋಕಿತೇಶ್ವರ, ತಾರೆಯರು ಮಂದಹಾಸ ಬೀರತೊಡಗಿದರು. ಚಿತ್ರಕಾಗದದ ಎರಡು ಪಾತಳಿಗಳಲ್ಲಿ ನೂರಾರು ಆಯಾಮಗಳ, ಭಿನ್ನ ಯುಗಗಳ ಬೋಧಿಸತ್ತ್ವ, ಅವಲೋಕಿತೇಶ್ವರರು ಮೈದಾಳಿದಾಗ, ಧ್ಯಾನದಂತೆ ಅವರನ್ನು ದಿಟ್ಟಿಸತೊಡಗಿದಳು. ಆ ನೋಟ ಘನಗೊಳ್ಳುತ್ತ ತಾನೇ ಅವಲೋಕಿತೇಶ್ವರನ ಪ್ರಿಯೆ ತಾರೆಯೆಂದು ಅನಿಸತೊಡಗಿದಾಗ ಒಂದು ದಿವ್ಯಾನಂದದಿಂದ ಕಂಪಿಸಿದ್ದಳು.

ಜೀವನ ಒಂದು ತಕ್ಕಡಿಯಂತೆ. ಒಂದೆಡೆ ಆನಂದ ಮೇಲೇರಿದಾಗ, ಇನ್ನೊಂದೆಡೆ ನೋವಿನ ತಟ್ಟೆ ಕೆಳಗಿಳಿಯುತ್ತದೆ. ಶೂನ್ಯದ ದರ್ಶನವಾದಾಗ, ಜೀವನ ತೋರಿಕೆಗಳಿಂದ ಕಟ್ಟಲ್ಪಟ್ಟ ಮಾಯಾ ಪುದ್ಗಲ ಬಂಧನ, ಮೃತ್ಯು, ನಿರ್ವಾಣ ಬಿಡುಗಡೆಯ ದ್ವಾರ ಎಂದು ಅನಿಸತೊಡಗಿದಾಗ, ಅವಳ ಊಟ - ತಿಂಡಿ ಕಡಿಮೆಯಾಗಿ ಕೃಶಳಾಗತೊಡಗಿದಳು. ಕ್ಷೀಣತೆ ಅಪಾಯಕ್ಕಿಳಿದಾಗ, ಅದನ್ನು ಗಮನಿಸಿ ಬಂದೋಪಾಧ್ಯಾಯರು ಭಯಗೊಂಡಾಗ, ಆಕೆ ನಕ್ಕು 'ನಿನಗೆ ತಿಳಿಯದು, ನನ್ನ ಮನದೊಳಗೆ ಶಕ್ತಿ ಶಾಂತಿ ಅಪಾರವಾಗಿ ಸ್ಥಿರಗೊಳ್ಳುತ್ತಿದೆ' ಎಂದು ನಕ್ಕು ಬಿಡುತ್ತಿದ್ದಳು. ಆದರೆ ಒಮ್ಮೊಮ್ಮೆ ಯಾಕೋ ವ್ಯಗ್ರಳಾದಂತೆ 'ಬಂದೋ, ನನ್ನ ಒಂದೇ ಹೋರಾಟ, ಸಾವನ್ನು ಗೆಲ್ಲೋದು... ಸಂಘರ್ಷ ನಡೆದಿದೆ. ಅಂತೂ ಗೆಲ್ಲುವೆ' ಎನ್ನುವಳು.

ಆ ಮೃತ್ಯು ಭಯ ಆಕೆಗೆ ಆರಂಭವಾದದ್ದು ಒಂದು ದಿನ ಆಕೆ ಮಂಡಲ ಚಿತ್ರಿಸತೊಡಗಿದಾಗ. ಸುಂದರ ರೇಖೆ ಬಣ್ಣಗಳಲ್ಲಿ ಅವಲೋಕಿತೇಶ್ವರನ ಮುಖದಲ್ಲಿ ದೃಷ್ಟಿ ಬಿಂದುವನ್ನು ಮೂಡಿಸಿದಾಗ, ಅವನ ಕರುಣೆಯ ಕಣ್ಣಿನಲ್ಲಿ ಬಂದೋರ ದೃಷ್ಟಿ ಕಾಣತೊಡಗಿತು. ಬುದ್ಧನ ಮುಖ ಸರಿದು ಬಂದೋರ ಮುಖ ಕಾಣತೊಡಗಿತು. ಕಣ್ಣು ಏನೋ ನುಡಿಯುವಂತೆ ಜೀವಂತಗೊಳ್ಳತೊಡಗಿತು. ಲಾವುರಾ ಬೆಚ್ಚಿಬಿದ್ದು ಹತ್ತು ನಿಮಿಷ ನಡುಗಿದಳು. ಮೈ

ಬೆಚ್ಚಗಾಗಿತ್ತು. ಲಾವುರಾಗೆ ಜ್ವರ ಬಡಿದಿತ್ತು. ಅಂದು ನಡುರಾತ್ರಿ ಕಳೆದಿತ್ತು. ಜ್ವರದೊಡನೆ ಭಯವೂ ಏರುತ್ತಿತ್ತು. ಆಕೆ ಬಂದೋರ ಬಾಗಿಲು ಬಡಿದು ಎಬ್ಬಿಸಿ ನಡುಗುತ್ತ ತನಗೆ ಭಯವಾದುದನ್ನು ಹೇಳಿ ಅವರ ಕೋಣೆಯಲ್ಲೇ ಮಲಗುವೆನೆಂದು ಹೇಳಿ, ಉತ್ತರಕ್ಕೂ ಕಾಯದೆ ತನ್ನ ಸ್ಲೀಪಿಂಗ್ ಬ್ಯಾಗ್ ಹಾಸಿ ನೆಲದಲ್ಲಿ ಮಲಗಿಯೇ ಬಿಟ್ಟಳು. 'ಪಾಪ' ಎಂದಂದು ಬಂದೋರು ಆಕೆಗೆ ಬ್ಲಾಂಕೆಟ್ ಒಂದನ್ನು ಹೊದೆಸಿ ಮಲಗಿದಾಗ ಕನಸಿಲ್ಲದ ಶಾಂತ ನಿದ್ದೆಗೊಂಡರು, ಲಾವುರಾ ಕೂಡಾ.

ಜ್ವರ ಇಳಿದರೂ ಲಾವುರಾಳ ಮೃತ್ಯುಭಯ ಇಳಿಯಲಿಲ್ಲ. ಆಕೆ ದಿನರಾತ್ರಿ ಬಂದೋರ ಬೆಡ್‌ರೂಂನಲ್ಲಿ ಮಗುವಿನಂತೆ ನಿದ್ದೆ ಮಾಡೂದು ರೂಢಿಯಾಯ್ತು. ದಿನೇ ದಿನೇ ಕೃಶಳಾಗತೊಡಗಿದಳು. ಊಟ ಬಹಳಷ್ಟು ನಿಂತಿತ್ತು. ಒಂದು ಸಂಜೆ ಇಬ್ಬರೂ ಹರಟುತ್ತ ಕುಳಿತಿದ್ದರು. ಲಾವುರಾ ಮುಗ್ಧ ಮಗಳಂತೆ ಬಂದೋರ ತೊಡೆಯಲ್ಲಿ ತಲೆಯಿಟ್ಟಿದ್ದಳು. ಅವರು ಆಕೆಯ ಕೂದಲು ಪೂಸುತ್ತ, 'ಹುಡುಗೀ ನೀ ಈ ರೀತಿ ಅನ್ನ ಬಿಟ್ಟರೆ ಆಸ್ಪತ್ರೆಯಲ್ಲಿ ಕೊನೆಗೊಳ್ಳುವೆ. ಕೆಲದಿನ ನಿನ್ನ ಈ ಧ್ಯಾನ, ಶೂನ್ಯ ಉಪಾಸನೆಯ ಹುಚ್ಚು ಬಿಟ್ಟು ಬಿಡು. ನನಗಿಲ್ಲವಾದರೂ, ನಿನಗೆ ಧರ್ಮದ ಬಗ್ಗೆ ನಂಬುಗೆ ಇದ್ದರೆ, ನಿನ್ನ ದೇವರ ಚರ್ಚ್‌ಗೆ ಹೋಗಿ ಪ್ರಾರ್ಥನೆ ಮಾಡು. ಇಂಥಾ ಶೂನ್ಯೋಪಾಸನೆಯ ಪಲಾಯನ ಬೇಡ' ಎಂದಾಗ ಅವಳು ಕ್ಷೀಣವಾಗಿ ನಕ್ಕಳು, 'ಬಂದೋ ನೀ ಕಾಳಜಿ ಮಾಡಬೇಡ. ನಾ ಬೇಗನೆ ಆರಾಮ ಆಗುವೆ. ನಿನ್ನ ಅನುಕಂಪಕ್ಕೆ ಕೃತಜ್ಞಳು' ಮತ್ತಷ್ಟು ಮೌನದ ನಂತರ 'ಬಂದೋ, ನಿನ್ನನ್ನು ಒಬ್ಬ ಆತ್ಮೀಯ ಗೆಳೆಯ ಅಂತ ತಿಳಿದಿದ್ದೇನೆ. ನಿನ್ನಂತೆ ಯಾರೂ ನನಗೆ ಪ್ರೀತಿ ಕೊಟ್ಟಿಲ್ಲ. ನಾ ಹೋದ ಮೇಲೆ ನೀನೂ ನಿನ್ನ ಕಾಳಜಿ ಮಾಡೋ. ಮತ್ತೆ ನಿನ್ನ ನಾಸ್ತಿಕತೆ, ರಾಜಕೀಯ ಸಿದ್ಧಾಂತ ಒಂದಿಷ್ಟು ಬದಿಗಿಟ್ಟು ಈ ಯೋಗದ ಉಪಾಸನೆ ಮಾಡು. ಅದು ನಿಶ್ಚಯವಾಗಿಯೂ ಒಂದು ಹೊಸ ಅರಿವು ಕೊಡುತ್ತದೆ. ನಿನ್ನ ಜೀವನ ಬರಡು ಮಾಡಬೇಡ..... ನನಗೆ ನಿನ್ನ ಬಗ್ಗೆ ಎಂದೂ ಕಾಳಜಿ' ಎಂದಳು. ಬಂದೋರಿಗೂ ಎಲ್ಲೋ ಒಂದಿಷ್ಟು ಹೃದಯ ತುಂಬಿದಂತೆ ಅನಿಸಿತು. ಇಬ್ಬರೂ ಕಣ್ಣಲ್ಲಿ ಕಣ್ಣಿಟ್ಟು ಮೌನ ನಕ್ಕರು.

ಲಾವುರಾ ಶಾಂತಿನಿಕೇತನದಿಂದ ಮರಳುವ ದಿನಗಳು ಹತ್ತಿರ ಬಂದಿದ್ದವು. ಜತೆಗೇ ಅವಳ ಮನಸ್ಸು ನಡವಳಿಕೆಯಲ್ಲಿ ಒಂದು ಅಸ್ಥಿರತೆ ಹೆಚ್ಚತೊಡಗಿತು. ಒಮ್ಮೊಮ್ಮೆ ಹುಮ್ಮಸ್ಸಿನ ಅತಿರೇಕಕ್ಕೆ ಹೋದರೆ ಇನ್ನೊಮ್ಮೆ ಮಂಕುಬಡಿದಂತೆ ಇರುತ್ತಿದ್ದಳು. ಒಮ್ಮೆ ಅಂತಸ್ಥಳಾದರೆ, ಇನ್ನೊಮ್ಮೆ ಕನ್ನಡಿಯಲ್ಲಿ ತನ್ನ ಬಿಂಬ ದಿಟ್ಟಿಸಿ ಧ್ಯಾನಗೊಳ್ಳುವಳು. ಒಮ್ಮೆ ತುಂಬು ಉತ್ಸಾಹದ ಒಂದು ಮುಂಜಾನೆ 'ಬಂದೋ, ಯಾಕೋ ಖುಷಿಯಾಗಿದೆ. ಇಬ್ಬರೂ ಒಂದೆರಡು ದಿನ ಆರಾಮ ಅಡ್ಡಾಡಿ ಬರೋಣ' ಎಂದು ಕುಣಿಯುತ್ತ ಹೇಳಿದಳು. 'ದಾರ್ಜಿಲಿಂಗ ನೋಡೋ ಆಸೆ. ಮರಳಿ ಹೋಗುವ ಮುನ್ನ ಮತ್ತೆ ಹಿಮಾಲಯ ನೋಡೋ ಆಸೆ. ಪ್ಲೀಸ್ ಹೋಗೋಣ' ಎಂದಳು. ಹಾಗೇ ಹೋದರು ಕೂಡಾ.

ಇಬ್ಬರ ಮನಸ್ಸು ತಿಳಿಯಾಗಿತ್ತು. ಹೊಟೇಲಿನಲ್ಲಿ ಇಬ್ಬರೂ ಒಂದೇ ರೂಂ ಹಿಡಿದು, ಜಾನಪದ ಬಣ್ಣದ ಹ್ಯಾಂಡೀಕ್ರಾಫ್ಟ್ ಅಂಗಡಿ ಅಡ್ಡಾಡಿ, ಟಾಯ್‌ಟ್ರೇನ್‌ನಲ್ಲಿ ಕುಲು ಕುಲುನಗುತ್ತ ಜಲಪೈಗುರಿಗೆ ನಡೆದು, ಬುದ್ಧವಿಹಾರಗಳನ್ನು ಸಂದರ್ಶಿಸಿದಾಗ ಲಾವುರಾಳ ಮನ ಮಲ್ಲಿಗೆಯಂತೆ ಅರಳಿತ್ತು. ಸಂಜೆ ಗುಡ್ಡದ ಅಂಚಿನಲ್ಲಿ ದೇವದಾರು, ಪೈನ್ ಮರಗಳ ಅಡಿ ದೂರದ ಹಿಮಾಚ್ಛಾದಿತ ಕಾಂಚನಗಂಗಾ ಶಿಖರ ನೋಡುತ್ತ, ಕೆಳಕಂದಕದಲ್ಲಿ ಸೊಕ್ಕಿಹರಿವ ನದಿಯನ್ನು ನೋಡುತ್ತ ಹಗುರ ಭಾವದಲ್ಲಿ ಮೌನವಾಗಿ ಕುಳಿತಾಗ, ಬಂದೋಪಾಧ್ಯಾಯರ ಮನದಲ್ಲೂ ಏನೋ ಒಂದು ದಿವ್ಯ ಮಿಂಚಿನ ಅನುಭವವಾಯ್ತು. 'ಹುಚ್ಚೀ ಲಾವುರಾ, ನೀ ನಿನ್ನ ನೋವಿನಿಂದ ಬೇಗನೆ ಹೊರಗೆ ಬಾ. ನಿನಗೆ ಬೇಕಾದ್ದು ನಗು, ಗಟ್ಟಿ ಜೀವನ, ಶೂನ್ಯವಲ್ಲ' ಎಂದಾಗ ಅವಳು ಸ್ವಲ್ಪ ಬೆಚ್ಚಿ ದಿಟ್ಟಿಸಿದಳು. ಒಮ್ಮೆಗೇ ಅವಳ ಬಿಳಚಿದ್ದ ಮುಖದಲ್ಲಿ ನೀಲಕಣ್ಣು ಗಾಜಿನಂತೆ ಶೂನ್ಯವಾಗಿ ಕಂಡಿತು. ಬಂದೋ ಮುಂದುವರಿಸಿ 'ಹುಚ್ಚೀ, ನಿನಗೆ ಬೇಕಾದ್ದು ಒಂದು ಮಗು, ಮುದ್ದು ಮಗು, ಅದು ಬಂದಾಗ ಶೂನ್ಯವೆಲ್ಲಾ ತುಂಬಿಕೊಳ್ಳುತ್ತದೆ' ಎಂದು ಗಹಗಹಿಸಿ ನಕ್ಕರು. ಅದೇನಾಯಿತೋ, ಲಾವುರಾ ಮತ್ತೆ ಬೆಚ್ಚಿದಳು. ಒಮ್ಮೆಗೇ ಅವಳ ಕಣ್ಣಲ್ಲಿ ಏನೋ ಬೆಂಕಿಯಂತೆ ಮಿಂಚಿದಂತಾಯ್ತು, ನಡುಗತೊಡಗಿದಳು. ಮೌನವಾಗಿ ಬಿಕ್ಕತೊಡಗಿದಳು. ಹೆದರಿದ ಬಂದೋ ಏನಾಯಿತೆಂದು ಅನುಕಂಪದಿಂದ ಅಂಗಲಾಚಿದರೂ, ಆಕೆಯ ಮಾತಿಲ್ಲ. ಅವಳು ಬುದ್ಧಿಸ್ಥಿಮಿತ ಕಳಕೊಂಡದ್ದನ್ನು ಆಕೆಯ ಕೊರಡುಗೊಂಡ ಮುಖ ಸ್ಪಷ್ಟವಾಗಿ ತೋರುತ್ತಿತ್ತು.

ಇಬ್ಬರೂ ಮಾತಿಲ್ಲದೆ ಹೊಟೇಲಿಗೆ ಮರಳಿದರು. ಸಿಟ್ಟುಗೊಂಡ ಬಂದೋರು ನಿಷ್ಠುರವಾಗಿ ಕೇಳಿದರು. 'ಲಾವುರಾ, ನೀನು ಏನಾಯಿತು ಹೇಳಲೇಬೇಕು. ನಾ ಬಿಡುವವನಲ್ಲ. ನಿನ್ನಾಣೆ' ಎಂದಾಗ ನಿರ್ಭಾವದಿಂದ ಮುಖವೆತ್ತಿ ಲಾವುರಾ, 'ಬಂದೋ, ನೀ ನನ್ನನ್ನು ಪ್ರೇಮಿಸಿರುವಿ. ನನ್ನನ್ನು ನಿನ್ನ ಜೀವನ ಸಂಗಾತಿಯಾಗಿಸೋದು ನಿನ್ನಾಸೆ. ನನಗೆ ಗೊತ್ತು' ಎಂದು ನಿರ್ಧಾರದಿಂದ ಅಂದಳು. ಬಂದೋರಿಗೆ ಗರಬಡಿದಂತಾಯ್ತು. ಅವರಿಗೆ ತಪ್ಪಿಯೂ ಅಂತಹ ಕಲ್ಪನೆಯಿದ್ದಿರಲಿಲ್ಲ. ಗಂಟಲು ತುಂಬಿ 'ಲಾವುರಾ ನೀ ಪೂರ್ತಿ ತಪ್ಪಿರುವಿ. ನೀ ಎಳೆಮಗಳಂತೆ. ನನ್ನಾಣೆ, ನೀ ತಪ್ಪಿರುವಿ' ಎಂದು ಅವರು ಅಂಗಲಾಚಿದರೂ, ಅವಳು ತನ್ನ ಒಂದು ಅಕ್ಷರವನ್ನು ಬದಲಿಸಲಿಲ್ಲ. 'ಬಂದೋ ನಿನ್ನ ಪ್ರಣಯದಾಸೆ ನಿನ್ನ ಕಣ್ಣೇ ಹೇಳುತ್ತಿದೆ. ಹ್ಹ, ನಾಳೆ ನಾ ಹೊರಟು ಹೋಗುವೆ' ಎಂದು ಒಣನಗೆ ನಕ್ಕಳು, ಮತ್ತೆ ಮಾತಿಲ್ಲ. ಉರಿದೆದ್ದ ಬಂದೋ ರಾತ್ರಿ ಬೇರೆ ರೂಂ ಮಾಡಿ ಮಲಗಲು ನಿಶ್ಚಯಿಸಿದಾಗ, ಲಾವುರಾ 'ಹೇ ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ನಾವಿಬ್ಬರೂ ಇದೇ ರೂಂನಲ್ಲೇ ಮಲಗೋದು' ಅಂತ ನಿರ್ಭಾವದ ನಗೆ ನಕ್ಕಳು. ಕ್ಷಣದಲ್ಲೇ ಮಗುವಿನಂತೆ ನಿದ್ದೆ ಹೋದಳು. ಬಿರುಗಾಳಿ ಕನಸಲ್ಲಿ ಬಂದೋ ಮಲಗಿದರು.

ಮರುದಿನ ಶಾಂತಿನಿಕೇತನಕ್ಕೆ ಮರಳಿದರು. ಲಾವುರಾ ಶಾಂತಳಾಗಿದ್ದಳು. ಆದರೆ ಬಂದೊಡನೆ ತನ್ನ ಸೂಟ್‌ಕೇಸ್ ತುಂಬಿದಳು. 'ಬಂದೋ, ಒಂದು ಕಾಫಿ ಮಾಡಿಕೊಡು ಕುಡಿದು ಹೋಗುತ್ತೇನೆ' ಎಂದಳು. ತುಂಬು ಗಂಟಲಿನಿಂದ ಬಂದೋ ಕಾಫಿ ಮಾಡಿದರು. ಲಾವುರಾ ಕಾಫಿ ಕುಡಿದು ಬಂದೋರ ಕೈಯನ್ನು ಬೆಚ್ಚಗೆ ಅದುಮುತ್ತ, ಅವರನ್ನು ಬರಸೆಳೆದು ಅಪ್ಪಿ ಮೊದಲ ಬಾರಿ ತುಟಿಗೆ ಮುತ್ತಿಟ್ಟು, ಬಾಗಿಲಿಗೆ ಹೊರಟಾಗ, ಬಂದೋರ ಕಣ್ಣು ಎಷ್ಟೋ ವರ್ಷಗಳ ನಂತರ ಹನಿಗೊಂಡಿತ್ತು. ಅವರು 'ಎಲ್ಲಿ ಹೋಗ್ತೀಯಾ ?' ಎಂದಾಗ, 'ಗೊತ್ತಿಲ್ಲ' ಎಂದಳು. 'ಇನ್ನೊಮ್ಮೆ ಬರುವಿಯಾ' ಎಂದಾಗ 'ಇಲ್ಲ' ಎಂದಳು. ಇಬ್ಬರೂ ಬಸ್‌ಸ್ಟ್ಯಾಂಡಿಗೆ ನಡೆದು, ಆಕೆ ಬಸ್ ಹತ್ತುತ್ತ ಎರಡು ನಿಮಿಷ ತನ್ನ ತುಟಿಗೆ ಕೈ ಹಚ್ಚಿ 'ನಿನ್ನ ಪ್ರೀತಿಸುತ್ತೇನೆ' ಎಂದು ಗಾಳಿಯಲ್ಲಿ ಮುತ್ತು ತೂರಿದಳು, ಬಸ್ಸು ಮರೆಯಾಗುವವರೆಗೂ 'ಜೀವನದ ಒಂದು ಸುಂದರ ಅಂಕ ಮುಗಿಯಿತು' ಎಂದಂದು ಬಂದೋರು ಭಾರವಾದ ಹೃದಯದಿಂದ ಮರಳಿದರು.

❖ ❖ ❖

ಮನೆಯಲ್ಲಿ ಹರಯಲ್ಲಿದ್ದ ಲಾವುರಾಳ ಸೆಂಟಿನ ಸೊಗಡು ದಿನೇದಿನೇ ತೆಳುವಾದಾಗ, ಆಕೆಯ ಕುಲು ಕುಲುದನಿ ನೆನಪಿನ ಆಳಕ್ಕಿಳಿದಾಗ, ಕನ್ನಡಿಯಲ್ಲಿ ಕುರುಚಲು ದಾಡಿ ಕಂಡಾಗ, ಲಾವುರಾಳಿಲ್ಲದ ವಾಸ್ತವತೆಗೆ ಒತ್ತಾಸೆಯಿಂದ ಹೊಂದಿಕೊಳ್ಳತೊಡಗಿದರು ಬಂದೋಪಾಧ್ಯಾಯರು. ಇಂಥಾ ಬೂರ್ಜ್ವಾ ರೋಮ್ಯಾಂಟಿಸಂಗೆ ತಾನೂ ಹೇಗೆ ಬಲಿಬಿದ್ದೆನೆಂದು ಅಚ್ಚರಿಗೊಳ್ಳುತ್ತ, ಮನಸ್ಸನ್ನು ಕಲ್ಲು ಮಾಡಿ ಅಧ್ಯಯನ, ಅಧ್ಯಾಪನ, ನವವಾಸ್ತವವಾದಿ ನಿಷ್ಠುರ ಕಲಾವಿಮರ್ಶೆಗಳಲ್ಲಿ ತನ್ನನ್ನು ಪೂರ್ತಿ ಹಮ್ಮಿಕೊಂಡು ಗಡುಸಾದರು. ವಿಚಾರವಾದಿಯೆಂದು ಎಡರಾಜಕೀಯ ವೃತ್ತದಲ್ಲಿ ಪ್ರತಿಷ್ಠೆ ಬೆಳೆದು 'ನ್ಯೂ ಲೆಫ್ಟ್'ನ ಉಪಸಂಪಾದಕ, 'ಅಮೃತ ಬಜಾರ್'ನ ಕಲಾ ವಿಮರ್ಶಕರ ಕಾಲಮಿಸ್ಟ್ ಆಗಿ ನೇಮಕಗೊಂಡದ್ದರಿಂದ, ನೆನಪಾದಾಗ ಬರೋಡಾ ಮನೆಗೆ ಮನಿಯಾರ್ಡರ್ ಮಾಡೋದು ಯಾಂತ್ರಿಕವಾಗೇ ನಡೆದು, ಹೆಂಡತಿಗೆ ಪತ್ರ ಬರೆಯುವ, ಫೋನ್ ಮಾಡುವ ಅಪರೂಪತೆ ಬೆಳೆಯತೊಡಗಿತ್ತು. ಬರೋಡಾದಲ್ಲಿ ಹೆಂಡತಿ ಲಲಿತಾಳ ತಮ್ಮನ ಮಗನು ಮನೆಯಲ್ಲಿ ಬಂದು ಕಾಲೇಜು ಕಲಿಯುತ್ತಿದ್ದರಿಂದ ಮನೆಯ ಬಗ್ಗೆ ಕಡಿಮೆ ಚಿಂತಿಸಲು ಕಾರಣವೂ ಸಿಕ್ಕಿತ್ತು. ಮುಂದೆ ಒಂದೂವರೆ ವರ್ಷದಲ್ಲಿ ಶಾಂತಿನಿಕೇತನದ ಅವರ ಕಾಂಟ್ರ್ಯಾಕ್ಟ್ ಮುಗಿಯಲಿದ್ದು, ಅದನ್ನು ರಿನ್ಯೂ ಮಾಡಿ, ಶಾಂತಿನಿಕೇತನವನ್ನು ತನ್ನ ಜೀವನದ ಖಾಯಂ ಕರ್ಮಭೂಮಿ ಮಾಡುವ ನಿರ್ಧಾರ ಕೈಗೊಂಡರು ಬಂದೋಪಾಧ್ಯಾಯರು. ಲಾವುರಾ ಹೋಗಿ ಆರು ತಿಂಗಳಾಗಿದ್ದರೂ ಒಂದು ಪೋಸ್ಟ್‌ಕಾರ್ಡು ಬರದಿದ್ದಾಗ, ಸಾಂಖ್ಯರ ನುಡಿ 'ನರ್ತಕೀ ಯಥಾ ನೃತ್ಯಾತ್ ಪ್ರಕೃತಿ ಪುರುಷನಿಗೆ ನಾಟ್ಯ ತೋರಿಸಿ ಮಾಯವಾಗುವಂತೆ' ನೆನಪಾಗಿ ನಿಟ್ಟುಸಿರು ಬಿಟ್ಟು ಆಕೆಯ ನೆನಪಿಗೆ ತೆರೆ ಬಿಟ್ಟಿದ್ದರು.

ಅಧ್ಯಯನ ಅಧ್ಯಾಪನದ ಶಾಂತಿ ಸ್ತಬ್ಧ ನಿಂತಿದ್ದಾಗ ನಿಂತ ನೀರಿಗೆ ಕಲ್ಲು ಸಿಡಿದಂತೆ ಧನ್ನೆಂಮ ಅವರಿಗೊಂದು ಪತ್ರ ಬಂತು. ಲಾವುರಾಳ ಪತ್ರ. ನಡುಗು ಕೈಯ ಅಕ್ಷರಗಳ ದೀರ್ಘ ಪತ್ರ. 'ನನ್ನ ಪ್ರೀತಿಯ ಬಂದೋ.... ಮುತ್ತುಗಳೊಡನೆ, ನಿನ್ನ ಪ್ರೀತಿಯ ಲಾವುರಾ', ಎರಡು ಪ್ರೀತಿ ಬ್ರಾಕೆಟ್‌ಗಳ ನಡುವೆ, ಅವಳು ಅನುಭವಿಸುತ್ತಿರುವ ಚಿತ್ರ ಹಿಂಸೆಯ ಕತೆ : 'ಶಾಂತಿನಿಕೇತನ ಬಿಟ್ಟವಳೇ ನೇರ ಇಟಲಿಗೆ ಮರಳಿದ್ದೆ. ಅಷ್ಟರಲ್ಲಿ ನಾನು ಪೂರ್ತಿ ಬುದ್ಧಿಭ್ರಮಣೆಗೊಂಡಿದ್ದು, ಮಿಲಾನ್‌ನಲ್ಲಿಳಿದಾಗ ನನಗೆ ಗುರುತು ಸಿಗದ ನನ್ನಪ್ಪ ಅಣ್ಣಂದಿರು ನನ್ನನ್ನು ನೇರ ಮಾನಸಿಕ ಆಸ್ಪತ್ರೆಗೆ ಒಯ್ದರಂತೆ. ನರಕಯಾತನೆಯನ್ನು ಅನುಭವಿಸುತ್ತಿದ್ದೇನೆ. ಒಂದೊಂದು ಅನ್ನದ ಅಗುಳಲ್ಲೂ ಸೈತಾನ, ಮೃತ್ಯು ಕಾಣುತ್ತಿದೆ. ಬಾತ್ ರೂಂ, ವಾಂತಿಗಳಲ್ಲಿ ಊಟ ಚೆಲ್ಲೊದು ನೋಡಿ ನನ್ನ ಕೈ-ಮೈಗೆ ಬೆಲ್ಟ್ ಬಿಗಿದು ಉಣ್ಣಿಸುತ್ತಿದ್ದಾರೆ. ಬರೇ ೩೫ ಕಿಲೋ ಭಾರಕ್ಕೆ ಇಳಿದಿರುವೆ. ಕೆಲವರು ಅನ್ನ ಹೇಸುವ ಅನೋರೆಕ್ಸಿಯಾ ಕಾಯಿಲೆ ಅನ್ನುತ್ತಾರೆ. ಹುಚ್ಚಿನ ಸ್ಕಿಜೋಫ್ರೆನಿಯಾ ಎನ್ನುತ್ತಾರೆ. ಏನೆಂದರೂ ನಾನೇ ಅನುಭವಿಸಬೇಕಾದ ನೋವು, ಹಿಂಸೆ..... ಹಗಲೂ ರಾತ್ರಿ ಡ್ರಿಪ್ಸ್, ಇಂಜಕ್ಷನ್ ಏನೇನೋ ಗುಳಿಗೆ ಕೊಡುತ್ತಾರೆ. ಸಹಿಸಲಾರೆ. ಸಾವಾದರೂ ಬರಲೆಂದರೆ ರಾಕ್ಷಸ ಡಾಕ್ಟರರು ಬಿಡುತ್ತಿಲ್ಲ. ಶಾಕ್ ಟ್ರೀಟ್‌ಮೆಂಟ್ ಕೊಡುವ ಬೆದರಿಕೆ ಹಾಕುತ್ತಾರೆ. ಓ ಜೀಸಸ್, ಅದೊಂದು ಬೇಡ. ಅದನ್ನು ತಡೆಯಲಾರೆ. ತಲೆಯ ಶೂನ್ಯದಲ್ಲಿ ಸೈತಾನ, ಮೃತ್ಯು ಕುಣಿಯುತ್ತಿದ್ದಾರೆ. ಓ ಜೀಸಸ್, ಓ ಬುದ್ಧದೇವಾ ಎಂದು ದಿನಾ ಬೇಡುತ್ತಿದ್ದೇನೆ. ಬಂದೋ, ನಾ ಹೇಗೆ ಬದುಕಲಿ ? ಹೇಗೆ ಸಾಯಲಿ ? ಅದು ಬೇಗ ಬರಲೆಂದು ಕಾಯುತ್ತಿದ್ದೇನೆ. ಆಗೀಗ ನಿನ್ನ ನೆನಪಾಗುತ್ತಿದೆ. ನಿನ್ನ ಬೆಚ್ಚಗಿನ ಮಡಿಲ ನೆನಪು ನನಗಾದರೂ ಇಲ್ಲವಾಗಿದೆ. ನೀನೊಂದೇ ಕೊಂಡಿ... ನನ್ನ ಮರೆಯಬೇಡ. ಬಂದೋ, ನಿನ್ನ ಬೇಡುವೆ. ನನಗಾಗಿ, ನನಗಾಗಿ ಪ್ರಾರ್ಥಿಸು. ನಾ ಉಳಿಯಲು, ಸಾಯಲು ಪ್ರಾರ್ಥಿಸು.....' ಮುಂತಾಗಿ ನೋವಿನ ಕತೆ ಬರೆದಿದ್ದಳು. ಬಂದೋಗೆ ಒಮ್ಮೆಗೇ ಕರುಳಲ್ಲಿ ಕೊಕ್ಕೆ ಎಳೆದಂತಾಯ್ತು. 'ಏನಿದು ಹುಡುಗಿ, ಅರ್ಥಾನೇ ಆಗ್ತಾ ಇಲ್ಲ ! ಮತ್ತೆ ಮತ್ತೆ ಓದಿದರು. ಓ ಗಾಡ್ ! ಪೂರ್ತಿ ಸ್ಕಿಜೋಫ್ರೆನಿಯಾದಂತಿದೆ. ಸಾವಿನಲ್ಲೆ ಬಹುಶಃ ಮುಕ್ತಾಯ, ಓ ಗಾಡ್ ! ಅಂತ ಮನದಲ್ಲಿ ಅಂದರು. ಕಣ್ಣು ತೊಯ್ದಿತ್ತು. 'ನನಗಾಗಿ, ನನಗಾಗಿ ಪ್ರಾರ್ಥಿಸು ಬಂದೋ.....' ಬಂದೋರಿಗೆ ಬಾಲ್ಯದ ಪ್ರಾರ್ಥನೆ ನೆನಪಾಯ್ತು, ಕಣ್ಣುಮುಚ್ಚಿ ಬೇಡಿದರು 'ತಮಸೋ ಮಾಂ ಜ್ಯೋತಿರ್ಗಮಯ – ಮನಸ್ಸಿಗೆ ಬೆಳಕು ತಾ ದೇವಾ' ಎಷ್ಟೋ ವರ್ಷಗಳ ನಂತರ.

ಬಂದೋ ರಾತ್ರಿ ಮೌನದಲ್ಲಿ ಉದ್ದ ಉತ್ತರ ಬರೆದರು. ಬರೆದದ್ದರಲ್ಲಿ ತನಗೇ ನಂಬುಗೆಯಿಲ್ಲದಿದ್ದರೂ, 'ನ ಬ್ರೂಯಾತ್ ಸತ್ಯಮ್‌ಪ್ರಿಯಂ' ಎಂದು ಜೀವನೋತ್ಸಾಹದ ಮಾತು ಬರೆದಿದ್ದರು : 'ಪ್ರಿಯ ಲಾವುರಾ, ನನಗೆ ಖಾತ್ರಿಯಿದೆ, ನೀ ಖಂಡಿತ ಗುಣಮುಖಳಾಗುವಿ. ಇದೊಂದು ಹರಿದು ಹೋಗುವ ಕ್ರೈಸಿಸ್. ಎಲ್ಲರ ಜೀವನದಲ್ಲೂ

ಒಮ್ಮೊಮ್ಮೆ ಬರುತ್ತದೆ. ನೀ ಸಂತ, ಸಂಸ್ಕೃತಿಗಳ ಸಂಘರ್ಷದಲ್ಲಿರುವಿ. ದಯವಿಟ್ಟು ಧರ್ಮಗೊಂದಲದಿಂದ ಹೊರಗೆ ಬಾ. ವಾಸ್ತವತೆಗೆ ಇಳಿದು ಬಾ. ಕಣ್ಣುತೆರೆದು ಹೊರಗಣ್ಣು ನೋಡು. ಪ್ರಕೃತಿಯಲ್ಲಿ ಬಾನು, ಹಕ್ಕಿ, ಬಣ್ಣ, ಹೂ, ಬೆಡಗು, ಉದಯ ಸೂರ್ಯ, ತಿಂಗಳ ಚಂದ್ರನ ಸೊಗಸು ನೋಡು..... ನಿನ್ನ ಪ್ರೀತಿಸುವವರನ್ನು ಪಕ್ಕಾ ನೆನಪಿಸಿ ಸುಪ್ತದಿಂದ ಎಚ್ಚರಕ್ಕೆ ಎತ್ತಿದಾಗ, ಅನೋರೆಕ್ಸಿಯಾ ಮಾಯವಾಗಿ ಹಸಿದ ಮಗುವಿನಂತೆ ಉಂಡು ಗಟ್ಟಿಯಾಗುವಿ. ಲಾವುರಾ, ನಿನಗೂ ತಿಳಿದಂತೆ ಸೈಕೋಥೆರಾಪಿ ಸಮೃದ್ಧವಾಗಿ ಬೆಳೆದಿದೆ. ಕಲೆಕ್ಟಿವ್, ಧನಾಮಿನಾಲಾಜಿಕಲ್ ಥೆರಪಿಗಳಲ್ಲಿ, ಸ್ಕಿಜೋಫ್ರೆನಿಯಾ, ಡಿಪ್ರೆಸಿವ್ ಮಾನಿಕ್ ಕಾಯಿಲೆಗಳೂ, ಸಾಂಘಿಕ ಪ್ರಕ್ರಿಯೆಯಲ್ಲಿ ವಾಸಿಯಾಗುತ್ತವೆ. ಮನುಷ್ಯ ಸಂಬಂಧಗಳನ್ನು ಗಟ್ಟಿ ಮಾಡಿಕೋ, ಧೈರ್ಯ ತಾಳು. ಹೇ ಲಾವುರಾ, ನನಗೆ ಖಾತ್ರಿಯಿದೆ, ನೀ ಹೊರಬಂದು ಚೆಂದ ಸಂಸಾರ ಮಾಡುವೆ, ಒಳ್ಳೆಯ ಕಲಾಕಾರಳಾಗುವೆ. ಐ ಸ್ವೇರ್.. ಹುಂ.... ನಗು.... ಕಚಗುಳಿ ಇಡಲೇನು ! ಹ್ಹ... ನಿನ್ನನ್ನು ಭೆಟ್ಟಿಯಾಗಲು ಮುನ್ನೋಡುವೆ... ಎಂದೂ ನಿನ್ನ ಪ್ರೀತಿಯ ಬಂದೋ' ಮುಂತಾಗಿ ನಡುಗುವ ಕೈಯಿಂದ ಬಂದೋ ಬರೆದಿದ್ದರು. ಮತ್ತೆ ಹಲವು ತಿಂಗಳು ಕಳೆದರೂ ಆಕೆಯಿಂದ ಮರು ಪತ್ರ ಬರಲಿಲ್ಲ. 'ಎಲ್ಲಾ ಮುಗಿದಿರಬೇಕು. ಇದೊಂದು ಕಹಿಕನಸು' ಎಂದು ಒತ್ತಾಯದಿಂದ ಬಂದೋ ಭೂತವನ್ನು ಮರೆಯತೊಡಗಿದರು.

❖ ❖ ❖

ಮುಂದಿನ ವರುಷ ವಿಶ್ವಪ್ರಸಿದ್ಧ ವೆನಿಸ್ ಬೈನಾಲೆ ಚಿತ್ರಪ್ರದರ್ಶನ ವೆನಿಸ್‌ನಲ್ಲಿ ನಡೆಯಲಿತ್ತು. ೧೮೯೫ ರಲ್ಲಿ ಆರಂಭವಾದ, ಪ್ರಪಂಚದಲ್ಲೇ ಅತಿ ಪ್ರಾಚೀನವಾದ ಈ ಪ್ರದರ್ಶನ ತುಂಬ ಪ್ರೆಸ್ಟೀಜ್‌ನದ್ದು. ಯುರೋಪಿನ ಪ್ರಸಿದ್ಧ ಚಿತ್ರಕಾರರೊಡನೆ, ಅಮೆರಿಕ, ಲ್ಯಾಟಿನ್ ಅಮೆರಿಕ, ಇಂಡಿಯಾ, ಆಫ್ರಿಕಾ ಮುಂತಾದ ದೇಶಗಳ ಕಲಾವಿದರೂ ಭಾಗವಹಿಸುತ್ತಿದ್ದರು. ಪ್ರದರ್ಶನದ ಕ್ಯೂರೇಟರ್ ತೀರ್ಪುಗಾರರಾಗಿ ಅಂತರ್‌ರಾಷ್ಟ್ರೀಯ ವಿಮರ್ಶಕ ಮಂಡಳಿಯಿರುತ್ತದೆ. ಯುರೋಪಿನ ಹೆಚ್ಚಿನ ಕೊಯಲೀಕನ್ ಸರಕಾರಗಳಲ್ಲಿ ಎಡ ಪಂಥೀಯರೂ ಸೇರಿದ್ದರಿಂದ, ಮಲ್ಟಿನ್ಯಾಶನಲ್‌ಗಳ ಕೇವಲ ಲಾಭ ಗುರಿ, ಪರಿಸರದ ಬಗ್ಗೆ ಬೃಹತ್ ರಾಷ್ಟ್ರಗಳ ದ್ವಿಮುಖ ಧೋರಣೆ, ಅಗ್ರಿಕಲ್ಚರಲ್ ಸಬ್ಸಿಡಿ ನಿಲ್ಲಿಸೋದು ಮುಂತಾಗಿ ಯುರೋಪ ರೈತರಿಂದ ಪ್ರತಿರೋಧ ಹೆಚ್ಚು ಕೇಳಿಬರತೊಡಗಿದ್ದರಿಂದ, ಈ ಪ್ರದರ್ಶನದ ಥೀಮ್ ಸ್ವಲ್ಪ ಎಡ ಧೋರಣೆಗೆ ವಾಲಿ, ಇಂಡಿಯಾ, ಆಫ್ರಿಕಾ, ಲ್ಯಾಟಿನ್ ಅಮೆರಿಕಾಗಳಿಗೆ ಸ್ವಲ್ಪ ಹೆಚ್ಚು ಪ್ರಾಶಸ್ತ್ಯ ಸಿಕ್ಕಿತ್ತು. ಹಾಗಾಗಿ ಕಲ್ಕತ್ತದ ಖ್ಯಾತ ವಿಮರ್ಶಕ ಹಾಗೂ ವಿಕ್ಟೋರಿಯಾ ಮ್ಯೂಸಿಯಂ ಕ್ಯುರೇಟರ್ ದೇಶಬಂಧು, ಪ್ರದರ್ಶನದ ತೀರ್ಪು ಮಂಡಳಿಯ ಒಬ್ಬ ಸದಸ್ಯರಾದರು. 'ನ್ಯೂ ಲೆಫ್ಟ್', ಪಿ.ಪಿ.ಯಂಗಳ ಲಾಬ್ಬಿಯಿಂಗೂ ಸೇರಿ, ಶಾಂತಿನಿಕೇತನ, ಕಲ್ಕತ್ತಗಳ ಪ್ರಸಿದ್ಧ ಚಿತ್ರಕಾರ ಚಟ್ಟೋಪಾಧ್ಯಾಯ, ಚಟರ್ಜಿಯವರ ಕೃತಿಗಳು ಪ್ರದರ್ಶನಕ್ಕೆ

ಆಯ್ಕೆಯಾಗಿದ್ದವು. ಆಯ್ಕೆ ಪ್ರಕ್ರಿಯೆಯಲ್ಲಿ ಬಂದೋಪಾಧ್ಯಾಯರೂ ಸಕ್ರಿಯ ಪಾಲ್ಗೊಂಡಿದ್ದರು. ಈ ನಿಟ್ಟಿನಲ್ಲಿ ಕಾರ್ಯ ನಡೆಯುತ್ತಿರುವಾಗ, ಏನೋ ಒಂದು ವಿಚಾರ ಬಂದೋರ ಆಳದಲ್ಲಿ ಮೂಡಿ ಮಾಯವಾಯಿತು. ಒಂದೆರಡು ಬಾರಿ ಅದು ಮತ್ತೆ ಮತ್ತೆ ತಲೆಯೆತ್ತತೊಡಗಿದಾಗ, 'ತಾನೂ ಯಾಕೆ ವೈನಾಲೆ ಪ್ರದರ್ಶನ ಸಂದರ್ಭದಲ್ಲಿ ವೆನಿಸ್‌ಗೆ ಹೋಗಬಾರದು' ಎಂದಂದು ಕೊಂಡರು. ಲಾವುರಾಳಿಂದ ವೆನಿಸ್ ನೆನಪಾಯ್ತೋ, ವೆನಿಸ್‌ನಿಂದ ಲಾವುರಾಳದ್ದೋ ಎಂದು ಸ್ಪಷ್ಟವಾಗಲಿಲ್ಲ. ಯಾಕೆಂದರೆ, ಇಷ್ಟು ಹೊತ್ತಿಗೆ ಆ ಪಾಪದ ಹುಡುಗಿ ಗೋರಿಗೊಂಡಿರಬೇಕು. ಅಂತೂ ವೆನಿಸ್ ವಿಸಿಟ್ ವಿಚಾರದ ಗರ್ಭ ಬೆಳೆದು ಗರಿಮೂಡಿ ಹಾರಾಡತೊಡಗಿದಾಗ, ಸರಿಯಾದ ಕಾಂಟಾಕ್ಟ್‌ಗಳು ಪಕ್ಕಾ ಲಾಬ್ಬೀ ಮಾಡಿದಾಗ, 'ಅವ್ಯೃತ ಬಜಾರ್' ನ ವಿಶೇಷ ಕಲಾವರದಿಗಾರರಾಗಿಯೂ, 'ನ್ಯೂ ಲೆಫ್ಟ್'ನ ಉಪಸಂಪಾದಕರಾಗಿಯೂ, ಅವರೊಡನೆ ಐಟಕ್‌ನವರೂ, ಕಲಾ ಅಕಾಡೆಮಿಯವರೂ ದೇಣಿಗೆ ಹಾಕಿ, ಪ್ರೊ. ಬಂದೋಪಾಧ್ಯಾಯರ ಇಟಲಿ ಟಿಕೆಟ್, ವೀಸಾಗಳು ತಯಾರಾದವು. ಆಗೊಮ್ಮೆ ಈಗೊಮ್ಮೆ ಲಾವುರಾಳ ನೆನಪು ಹೆಡೆಯಾಡಿಸಿದಾಗ, ಎಲ್ಲಾದರೂ ಒಂದು ಪರ್ಸೆಂಟ್ ಆಕೆ ಜೀವಂತವಿದ್ದರೆ ಸುದ್ದಿಯಿರಲೆಂದು, 'ಕಲ್ಕತ್ತಾ ಕಲಾಕಾರರೊಡನೆ ಒಂದು ವಾರ ವೆನಿಸ್ ವೈನಾಲೆಯಲ್ಲಿ ಬಂದಿರುತ್ತೇನೆ'ಂದು ಲಾವುರಾಳ ಆಸ್ಪತ್ರೆ ವಿಳಾಸಕ್ಕೆ ಬಂದೋರು ಪತ್ರ ಬರೆದರು. ಅಂತೆಯೇ ಸೆಪ್ಟೆಂಬರದ ಹಳದಿ ಬಿಸಿಲಲ್ಲಿ ಕಲ್ಕತ್ತಾ ಕಲಾಮಂಡಳಿಯೊಡನೆ ವೆನಿಸ್‌ನ ಧರೆಗಿಳಿದರು ಬಂದೋಪಾಧ್ಯಾಯರು.

❖ ❖ ❖

ಒಂದಿಡೀ ದಿನ ವೆನೆಸ್ಸಿಯಾ ಎನ್ನುವ ವೆನಿಸ್ ನಗರ ಅಡ್ಡಾಡಿ, ಸಂಭ್ರಮಗೊಂಡರು. ೧೫ ನೇ ಶತಮಾನದ ದುರಲ್ಲೋ ಪಲಾಸ್ಸೋ ಅರಮನೆ, ೯ ನೇ ಶತಮಾನದ ಸಾಂ ಮಾರ್ಕ್ ಚರ್ಚು, ವೆಚ್ಚಿಯಾ ಲೈಬ್ರರಿ, ವೆನಿಸ್ ಅಕಾಡೆಮಿ ಮುಂತಾದವುಗಳ ಐತಿಹಾಸಿಕ, ಕಲಾ ಸಂದರ್ಭಗಳ ನಿಟ್ಟಿನಲ್ಲಿ ಯುರೋಪಿನ ಸೌಂದರ್ಯ ಮೀಮಾಂಸೆಯ ಹೊಸ ಆಯಾಮವನ್ನು ಪ್ರತ್ಯಕ್ಷರದಲ್ಲಿ ಕಂಡು ನುಡಿದರು. ಗೋಥಿಕ್, ರೊಮಾನ್‌ಸ್ಕ್ ಶಿಲ್ಪಿ ಪ್ರಕರಣಗಳನ್ನು ಮೊದಲ ಬಾರಿ ಕಣ್ಣಾರೆ ಕಂಡ ಧನ್ಯತಾಭಾವ. ಮತ್ತೊಂದೆಡೆ ಪ್ರೊಕ್ಯುರಾಂತಿ ಅರಮನೆ, ಇನ್ನೊಂದೆಡೆ ಸಾಂ ಮಾರ್ಕ್ ಚರ್ಚ್‌ನಿಂದ ಆವೃತವಾದ ರಸ್ತೆ ವೃತ್ತ ನಡುವಿನ ಶಿಲ್ಪ, ಕಾರಂಜಿಯ ಪಿಯಾಸ್ಸಾ ನೋಡಿ ಒಂದು ವಿಶೇಷ ಕಲೆಕ್ಟಿವ್ ಅನುಭೂತಿಗೊಂಡರು. ಅಲ್ಲಿನ ಕಾರಂಜಿಭೂಷಿತ, ದೇವ ಗಂಧರ್ವ ಪ್ರಾಣಿ ಹಕ್ಕಿಗಳ ಸುಂದರ ಶಿಲ್ಪಕಟ್ಟೆಯ ಸುತ್ತೂ ಜಾತ್ರೆಯಂತೆ ಜನಸೇರಿ, ಟೂರಿಸ್ಟುಗಳು ಸಾಮೂಹಿಕವಾಗಿ ಖುಷಿಗೊಳ್ಳುವುದನ್ನು ಕಂಡು ಸಂಭ್ರಮಗೊಂಡರು, ಬಂದೋರು. ದರ್ಜೆ, ಅಂತಸ್ತು, ಕ್ಲಾಸ್, ಕಾಸ್ಟ್ ಮರೆತ ಇಂತಹ ಕಲೆಕ್ಟಿವ್ ಹಂಚಿಕೊಳ್ಳುವಿಕೆ ನಮ್ಮ ಇಂಡಿಯಾ ದೇಶದಲ್ಲಿ ಎಂದು ಬಂದೀತೆಂದು ಹಳಹಳಿಸಿದರು. ಇನ್ನೂ ಹೆಚ್ಚಿನ

ಪರಿಣಾಮ ಬೀರಿದ್ದು ವೆನಿಸ್‌ನ ಟ್ರಾಫಿಕ್. ರಸ್ತೆಗಳೇ ಇಲ್ಲದೆ ಬರೇ ಕಾಲುವೆ ಜಾಲಗಳಿಂದ ಸಂಪರ್ಕಗೊಳ್ಳುವ ಪ್ರಪಂಚದಲ್ಲೇ ವಿಶಿಷ್ಟ ನಗರ ವೆನಿಸ್. ಗ್ರ್ಯಾಂಡ್ ಕ್ಯಾನಲ್ ಮುಂತಾದ ೪೦೦ ಮೀರಿದ ಕಾಲುವೆಗಳಲ್ಲೇ ಗೊಂಡೊಲಾ, ದುರಿ, ದೋಣಿಗಳಲ್ಲಿ ಜನದನ, ಕಿರಾಣಿ, ಕಾಯಿಪಲ್ಲೆ ಮುಂತಾದವುಗಳ ಶಾಂತ ಸಾಗಾಟ. ಹಾಗಾಗಿ, ಕಾರು - ಬಸ್ಸು - ಟ್ರಕ್‌ಗಳ ದನಿಸಂದಣಿಯಿಲ್ಲದೆ ದೂರದ ಕಾಲುವೆಯಂಚಿನ ಪಾರಿವಾಳಗಳ ಕುಯಿಲೂ ಕೇಳುತ್ತಿದ್ದಾಗ, ಬಂದೋರಿಗೆ ಶಾಂತಿನಿಕೇತನದ ನಿಶ್ಯಬ್ದತೆ ನೆನಪಾಯಿತು. ತನ್ನ ಬಾಲ್ಯದ ಹಳ್ಳಿಯ ಗುಬ್ಬಿ ಕೆಂಬೂತಗಳ ನೆನಪಾಯ್ತು. ದೂರದ ಚರ್ಚ್ ಕಾಂಪನಿಲೆ ಗೋಪುರ ಗಂಟೆ ಬಡಿದಾಗ ಕಲ್ಕತ್ತ ಕಾಲೀಘಾಟ್ ಗುಡಿಗಂಟೆ ನೆನಪಾಯ್ತು. ಚಿಕ್ಕಂದಿನಲ್ಲಿ ಹಳ್ಳಿಗುಡಿಯಲ್ಲಿ ಗುರುಕುಲದ ಪೂಜಾರಿಗಳು ಶ್ರೀ ಗಣೇಶ ಬರೆಸಿದ ನೆನಪು ಬಂತು. ಹೀಗೆ ತಲೆಯೊಳಗೆ ಒಮ್ಮೆಗೇ ಭೂತ, ಇಂದು, ಪೂರ್ವ-ಪಶ್ಚಿಮ, ಸಾಂಖ್ಯ - ಮಾರ್ಕ್ಸಿಸಂಗಳು ಜತೆಗೂಡಿ ಆಟ ಆಡಲು ಶುರುವಾದದ್ದು ಕಂಡು ಪಿಯಾಸ್ಸಾ ಜನಸಂಕರಣೆ ನಗೆಯೊಡನೆ ತಾನೂ ಮುಗುಳ್ನಕ್ಕರು ಬಂದೋಪಾಧ್ಯಾಯರು.

ಬೈನಾಲೆ ಪ್ರದರ್ಶನ, ಪ್ರಾಚೀನ ಪ್ರಸಿದ್ಧ ಅಕಾಡೆಮಿ ದಿ ಬೆಲ್ಲೆ ಆರ್ಟ್ ವೆನಿಸ್ ಅಕಾಡೆಮಿ ಹಾಗೂ ಅದರ ಸುತ್ತಮುತ್ತ ಎಬ್ಬಿಸಿದ್ದ ಟೆಂಪರರೀ ಮಳಿಗೆಗಳಲ್ಲಿ ನಡೆದಿತ್ತು. ಶತಮಾನಗಳ ಹಿಂದಿನ ಜಿಯೋಜಿಯೋನೆ, ಯುರೋಪ್, ಜೆಂತೊಲೆ, ಬೆಲಿನೀ ಮುಂತಾದ ಕಲಾಕಾರರ ನೂರಾರು ಪ್ರಸಿದ್ಧ ಕೃತಿಗಳಿರುವ ಕಲಾದೇಗುಲ ಅದು. ಅದರೊಡನೆ ಅತ್ಯಾಧುನಿಕ, ಆಧುನಿಕೋತ್ತರ ಕಲಾ ಕೃತಿಗಳ ಸಂಗಮದ ಉತ್ಸವವಾಗಿತ್ತು. ಪರ್‌ಫಾರ್ಮೆನ್ಸ್, ವೀಡಿಯೊ ಇನ್‌ಸ್ಟಲೇಶನ್, ವೆಬ್‌ಸೈಟ್, ಮಾತನ್ನೇ ಕಲಾಕೃತಿಯೆನಿಸುವ, ವೈಯಕ್ತಿಕ ಹಾಗೂ ಪಬ್ಲಿಕ್ ಸ್ಪೇಸ್ ಸಂಗಮ ವಿಯೋಗಗೊಳಿಸುವ ಕಲಾಕುಣಿತದ ಆರ್ಭಟದಲ್ಲಿ, ಸಾಧಾರಣ ಮತಿಗಳು ಅಲ್ಲೊಂದು ಇಲ್ಲೊಂದೆಂದು ಗುರುತಿಸಬಹುದಾದ, ಮತ್ತೆ ತಲೆ ಎತ್ತತೊಡಗಿದ್ದ ಪಾಪ್ ಆರ್ಟ್, ಸಾಮಾಜಿಕ ಸಂಘರ್ಷದ ಹಿನ್ನೆಲೆ ಹೊತ್ತ ಚಿತ್ರವೆಂದು ಗುರುತಿಸಬಹುದಾದ ಲಾಟಿನ್ ಅಮೆರಿಕ, ಆಫ್ರಿಕಾದ ತಂತ್ರ, ಸಮಾಜವಾದದ ಸಿಂಥೆಸಿಸ್ ಮಾಡಿದ ಇಂಡಿಯಾದ ಕೃತಿಗಳು ಕೆಲವೊಂದು ಹಳಬರ ಗಮನ ಸೆಳೆಯುತ್ತಿದ್ದವು. ಭಾರತೀಯ ಕಲಾ ಮಳಿಗೆಯಲ್ಲಿ ಭಟ್ಟಾಚಾರ್ಯ, ಚಟ್ಟೋಪಾಧ್ಯಾಯರೊಡನೆ ಓಡಾಡುತ್ತ ತನ್ನ ನೋಟುಬುಕ್ಕಿನಲ್ಲಿ ಬಂದೋರು ವಿಮರ್ಶಾ ವಾಕ್ಯಗಳ ಸ್ಕೆಚ್ ಹಾಕುತ್ತಿದ್ದರು. 'ವೆಬ್‌ಸೈಟುಗಳು ಹೊಸ ವಸಾಹತುವಾದದ ವಾಕಿಂಗ್ ಸ್ಟಿಕ್, ವೀಡಿಯೋ, ಮಲ್ಟಿಮಿಡಿಯಾಗಳು, ಪೋಸ್ಟ್‌ಮಾಡರ್ನಿಸಂನ ವರ್ಚುವಲ್ ಮಾಯಾಲೋಕವನ್ನು ಸತ್ಯವೆಂದು ಭ್ರಾಂತಿಗೊಳಿಸುವ ಕಣ್ಣುಮುಚ್ಚಾಲೆ ಆಟ'ವೆಂದು ನೋಟು ಮಾಡಿದರು. ಹಿಂದೆ, ಧರ್ಮ ದೇವರು, ರಸಸೌಂದರ್ಯ ಮುಂತಾಗಿ ಆಡಳಿತಶಾಹೀ ಪೂಜಾರಿಗಳು ಜನತೆಯನ್ನು ಭ್ರಮೆಗೊಳಿಸಿದಂತೆ ಈ ಆಧುನಿಕೋತ್ತರ ಮಾತಿನ ಪೂಜಾರಿಗಳು ಅದನ್ನೇ ಇಲ್ಲಿ ಅಲ್ಲಗಳೆಯುತ್ತಲೇ, ಜಾಗತೀಕರಣ, ಓಪನ್ ಎಕಾನಾಮಿ, ಸ್ಟಾಕ್‌ಮಾರ್ಕೆಟ್,

ವಾಯದ ಪುಂಜೀಕರಣ ಮುಂತಾಗಿ ಹೊಸ ಧನದೇವರನ್ನು ಹಿಂಬಾಗಿಲಿನಿಂದ ಸ್ಮಗಲ್ ಮಾಡಿ ನಪ್ಪ ಮೋಸವನ್ನು ಪ್ರತಿಷ್ಠಾಪಿಸುತ್ತಿದ್ದಾರೆ. 'ಆರ್ಟ್ ಈಸ್ ಡೆಡ್' ಎನ್ನುವ ಕಲಾವಿದರು ಪ್ರದರ್ಶನವೆನ್ನುವ ಸಂವಹನ ಕ್ರಿಯೆಯನ್ನು ಹೇಗೆ ಒಪ್ಪಿಕೊಂಡಾರೆಂದು ಮುಂತಾಗಿ ಘನಾನುಘಟಿಗಳ ಟೀಕೆಗಳ ಬ್ಲೂಪ್ರಿಂಟ್ ಮಾಡಿದರು ಬಂದೋರು. 'ಜಾಗತಿಕ ಡಯಲೆಕ್ಟಿಸ್‌ನಲ್ಲಿ ಹೊಸ ಮೆಟೀರಿಯಲಿಸಂನ ಸಿಂಥೆಸಿಸ್ ಕಾಲ ಐತಿಹಾಸಿಕ ಅವಶ್ಯಕತೆಯಾಗಿ ಒದಗಿ ಬಂದಿದೆ' ಎನ್ನೋದು ಅದರ ಒಟ್ಟು ತಿರುಳು.

ಇಂಥ ಘನವಿಚಾರಗಳನ್ನು 'ನ್ಯೂ ಲೆಫ್ಟ್', 'ಅಮೃತ ಬಜಾರ್'ಗಳಿಗೆ ಯಾವ ಶಬ್ದಪುಂಜಗಳಿಂದ ಭಿನ್ನ ಶೈಲಿಗಳಲ್ಲಿ ಬರೆಯಬೇಕೆಂದು ಬಂದೋರು ತಲೆಕೆರೆಯುತ್ತಿದ್ದಾಗ ದೂರದಿಂದ 'ಬಂದೋ.... ಬಂದೋ.......' ಎಂದು ದನಿ ಕೇಳಿಬಂತು. ಒಮ್ಮೆಗೇ ಬಂದೋರು ಚಕಿತರಾಗಿ 'ಇಲ್ಲಾರಪಾ, ಈ ಹೆಸರು ತಿಳಿದವರು' ಎಂದು ಮುಖ ಹೊರಳಿಸಿದರು. ಕಾರಿಡಾರ್ ದೂರದಿಂದ ನಗುಮೊಗದ ಇಟಾಲಿಯನ್ ಮಹಿಳೆಯೊಬ್ಬಳು ಬಂದೋಪಾಧ್ಯಾಯರ ಬಳಿ ಕೈಬೀಸುತ್ತ ಬರುತ್ತಿದ್ದಳು. ಸ್ವಲ್ಪ ಲಟ್ಟವೇ ಆಗಿದ್ದ ಮಹಿಳೆ, ನಗು ಹಲ್ಲು, ಕೆನ್ನೆಗುಳಿ, ಪಾತಾಳ ಗರಡಿಯಂತೆ ಆಳದಿಂದ ಏನೋ ಪರಿಚಯ ಎತ್ತಿ ತರುತ್ತಿತ್ತು. ಆಕೆ ಹತ್ತಿರ ಬಂದವಳೇ ನಗುತ್ತ ಬಂದೋರ ಭುಜಕ್ಕೆ ತಟ್ಟಿ 'ಹೇ ಸ್ಟುಪಿಡ್, ನಾನು ಲಾವುರಾ ಹ್ಹ' ಎಂದು ಬಿಗಿ ತಬ್ಬಿ ಮುತ್ತಿಟ್ಟಳು. ಕಕ್ಕಾವಿಕ್ಕಿಯಾದ ಬಂದೋರು 'ಮೈಗಾಡ್' ಎಂದರು. ಅಂದು ೩೫ ಕಿಲೋ ಒಣಕಲಾಗಿದ್ದ ಹುಡುಗಿ ಲಾವುರಾ ಈಗ ೭೫ ಕಿಲೋ ದುಂಡು ಮಹಿಳೆಯಾಗಿದ್ದಳು ! ಅವರೂ ಆಕೆಯನ್ನು ತಬ್ಬಿ ಇಬ್ಬರೂ ನಕ್ಕರು.

ಲಾವುರಾ 'ನಡಿ, ನನ್ನದೂ ಒಂದು ಸ್ಟಾಲ್ ಇದೆ. ಒಂದು ಪರ್‌ಫಾರ್ಮೆನ್ಸ್ ಕೃತಿ ಕೊಟ್ಟಿದ್ದೇನೆ, ಬಾ' ಎಂದು ಬಂದೋರನ್ನು ಒಯ್ದಳು. ಸ್ಟಾಲಿನಲ್ಲಿ ಒಂದು ಪ್ರಾಂ. ಅದರೊಳಗೆ ೩ ತಿಂಗಳ ಬಿಳಿ ಗೊಂಬೆಯಂಥ ಮಗುವೊಂದು ಪಿಳಿ ಪಿಳಿ ನೋಡುತ್ತಿತ್ತು. ಮಗುವಿನ ಮೇಲೊಂದು ಗುಬ್ಬಿತಟ್ಟು. ದಾರ್ಜಿಲಿಂಗ್ ಹ್ಯಾಂಡೀಕ್ರಾಫ್ಟ್ ಅಂಗಡಿಯದ್ದು. ಸುತ್ತಮುತ್ತ ಅಸ್ತವ್ಯಸ್ತ ಟೆಡ್ಡಿಬೇರ್ ಗೊಂಬೆಗಳು, ಕಲ್ಕತ್ತಾ ಜಾತ್ರೆಯ ಪಟಚಿತ್ರಗಳು ವಿರಾಜಮಾನವಾಗಿದ್ದವು. ಅನೇಕ ಪ್ರೇಕ್ಷಕರು ಅರ್ಥವಾಗದ್ದನ್ನು ಪ್ರಾತ್ಯಕ್ಷಿಕೆಯಲ್ಲಿ ಸಾರ್ಥಕ ನೋಡಲು ಕುತೂಹಲ ನಿಂತಿದ್ದರು. ಹತ್ತಿರದ ಸ್ಟೂಲಿನಲ್ಲಿ ಲಾವುರಾ ಕುಳಿತು ಮಗುವನ್ನೆತ್ತಿ ಮಡಿಲಲ್ಲಿಟ್ಟು ಟವೆಲ್ ಮುಚ್ಚಿ ಎದೆಹಾಲುಣಿಸಿದಳು. ಹಲವು ಪ್ರೇಕ್ಷಕ ಮಹಿಳೆಯರು ಖುಷಿಯಲ್ಲಿ ಚಪ್ಪಾಳೆ ಬಡಿದರು. ಇದೆಲ್ಲಾ ಅರ್ಥವಾಗದೆ ಮಂಕಾಗಿ ಬಂದೋರು ನೋಡುತ್ತಿದ್ದರು. ಮಗು ನಿದ್ದೆಮಂಪರುಗೊಂಡಂತೆ, ಅದನ್ನು ಪ್ರಾಂನಲ್ಲಿರಿಸಿ, ಪ್ರೇಕ್ಷಕರಿಗೆ ಹಲ್ಲುಮಿಂಚಿ ಮಂದಹಾಸ ಬೀರಿ, ಬಂದೋರಿಗೆ 'ಬಾ' ಎನ್ನುತ್ತ ಪ್ರಾಂ ದೂಡುತ್ತ ಲಾವುರಾ ಹೊರ ನಡೆದಳು. ನಗುತ್ತ, 'ಬೈನಾಲೆಯಲ್ಲಿ ಇದು ನನ್ನ ಕೃತಿ. ಪರ್ಫಾರ್ಮೆನ್ಸ್ ಕಲೆ. ಮೊದಲು

ಭಾಗವಹಿಸಲು ನಿರಾಕರಿಸಿದ್ದೆ. ಅಷ್ಟರಲ್ಲಿ ನಿನ್ನ ಪತ್ರವೂ ಬಂತು. ಒಪ್ಪಿದೆ ಈಗ ಮೊದಲು ಕಾಫಿ ಕುಡಿಯೋಣ ಮತ್ತೆಲ್ಲಾ ಹೇಳುವೆ. ಹೆಂಗಿದೀಯಾ ಬಂದೋ ? ನನ್ನ ಮಗು ಮೈಕೆಲ್ ಮುದ್ದಿದ್ದಾನೆ ಅಲ್ಲ ?' ಎಂದು ಪ್ರಾಂ ಬಂದೋರ ಕೈಗಿತ್ತಳು ನಗುತ್ತ.

ಹೊರಗೆ ಹಗುರ ಬಿಸಿಲಿತ್ತು. ಕಾಲುವೆ ಕಾಣುವಂತೆ ಚಿಕ್ಕದೊಂದು ಪಿಜ್ಜೇರಿಯಾ ಹೊಟೇಲ್ ಟೆರಾಸ್ ಎಂಥ ರಸ್ತೆ ಬಳಿಯಲ್ಲೇ ಕುರ್ಚಿ ಹಾಕಿದ್ದರು. ಪ್ರಾಂನಲ್ಲಿ ನಿದ್ರಿಸಿತ್ತು ಮಗು. ಇಬ್ಬರೂ ಸ್ವಲ್ಪ ಹೊತ್ತು ಮೌನವಿದ್ದರು. ಕಾಲುವೆಯಲ್ಲಿ ಹಿಂದು ಮುಂದೋಡುವ ದೋಣಿಗಳನ್ನು ನೋಡುತ್ತ ಲಾವುರಾ, 'ನಾ ಇಲ್ಲಿ ಬಂದದ್ದು ಪ್ರದರ್ಶನ ನೋಡಲು ಅಲ್ಲ. ನಿನ್ನ ನೋಡಲು ಬಂದೆ' ಎಂದು ನಕ್ಕಳು. ಕರೇ ಕಾಪುಚಿನೋ ಕಾಫಿ ಕುಡಿದರು. ಪ್ಲಂಕೇಕ್ ತರಿಸಿ ಹಂಚಿ ತಿಂದಳು. ಲಾವುರಾ ನಗುತ್ತ, 'ಈಗೆಲ್ಲ ತಿಂಡಿಬಾಕಳಂತೆ ತಿನ್ನುತ್ತೇನೆ ಅಂತ ೭೫ ಕಿಲೋ ಆಗಿದ್ದೇನೆ. ನೀ ಸ್ವಲ್ಪ ಕ್ಷೀಣ ಆಗಿದ್ದೀಯಾ' ಎಂದು ಬಂದೋರ ಕೆನ್ನೆ ಕೈಯಾಡಿಸಿ ನಕ್ಕಳು. ಬಂದೋ ನಗುತ್ತ ಮೌನವಾಗಿ ಅವಳ ಮಾತನ್ನು ಕೇಳುತ್ತಿದ್ದರು. ಎಲ್ಲ ಒಂದು ವಿಸ್ಮಯದಂತಿತ್ತು. ಲಾವುರಾ 'ನಡೆ, ಗ್ರಾಂಡ್‌ಕೆನಾಲ್ ಒಂದಿಷ್ಟು ತೇಲಾಡಿ ಬರೋಣ. ನನ್ನ ಮರಿ ಮೊದಲ ಬಾರಿ ದೋಣಿ ನೋಡುತ್ತಿದ್ದಾನೆ'. ವೆಚ್ಚಿಯಾ ಲೈಬ್ರರಿ ಬಳಿ ಗೊಂಡೋಲಾ ಹತ್ತಿದರು. ದೋಣಿಯ ಚಾಲಕ ಹಳದಿ ಹಲ್ಲು ಮಿಂಚುತ್ತ 'ಬೆಲ್ಲೊ ಬಂದಿನೀ' ಎಂದು ಮಗುವನ್ನು ಕುಲುಕಿ, ಪ್ರಾಂ ಎತ್ತಿ ದೋಣಿಯಲ್ಲಿರಿಸಿದ. ಎಳೆ ಬಿಸಿಲಲ್ಲಿ ಅಲೆ ಅಲೆ ಮಾಡುತ್ತ ದೋಣಿ ತೇಲಿತು.

ಲಾವುರಾ 'ನೀ ಕುತೂಹಲದಿಂದ ಸಾಯುತ್ತಿರಬೇಕು ! ಈಕೆ ಜೀವಂತ ಇದ್ದಾಳೆ. ಏನು ಮಿರಾಕಲ್ ! ಅಂತ. ಚುಟುಕಾಗಿ ಹೇಳುವೆ.... ಮೂರು ತಿಂಗಳು ಹೇಗೆ ಅನುಭವಿಸಿದ್ದೆ ನಿನಗೆ ಬರೆದಿದ್ದೆನಲ್ಲ. ನರಕ ಕಂಡೆ. ಮುಖ್ಯ ಕಾಯಿಲೆ ಅನೋರೆಕ್ಸಿಯಾ ಅಂತ ಡೈಗ್ನಾಸ್ ಮಾಡಿದರು. ಗೊತ್ತಿರಬೇಕಲ್ಲ, ಪ್ರೀತಿ ಅರಸಿ ದೇಹ ದಂಡಿಸುವ ಆ ರೋಗ. ಕಟ್ಟಿಹಾಕಿ ತಿನ್ನಿಸಿದರು, ಆದರೆ ಪ್ರೀತಿಸಿದರು ಕೂಡಾ'. ಬಂದೋ ಮಧ್ಯೆ ಮಧ್ಯೆ 'ಹ್ಞೂಂ' ಅನ್ನುತ್ತಿದ್ದರು. 'ಆಸ್ಪತ್ರೆ ಕೋಮೋಲಾಗೋ ಕೆರೆ ದಂಡೆಯಲ್ಲಿತ್ತು. ವಿಶಾಲ ಸುಂದರ ಗಾರ್ಡನ್. ಎದುರಿನ ಪರ್ವತ ನಕ್ಕಂತೆ ಅನಿಸುತ್ತಿತ್ತು. ನಾನು ಆಡಿನೋಡಿಕೊಳ್ಳಲು ನಾಲ್ಕು ಆಡುಗಳನ್ನು ಒಂದು ಮರಿ ಇಲ್ಲಾಮಾ ಕೊಟ್ಟಿದ್ದರು. ಇಲ್ಲಾಮಾ ಹೊಳ್ಳೆ ಅರಳಿಸಿ ನಕ್ಕು ಮೇಯುವಾಗ ನನಗೂ ಮೇಯಬೇಕೆಂದು ಅನಿಸುತ್ತಿತ್ತು. ಚಿತ್ರ ಮಾಡಲು ಸ್ಟುಡಿಯೋ ಇರುತ್ತಿತ್ತು. ಕೆಲವೊಮ್ಮೆ ರಾತ್ರಿಯಿಡೀ ಬಣ್ಣ ಮಾಡುತ್ತಿದ್ದೆ'. ದೋಣಿ ಸಂತ ಮಾರ್ಕ್ ಬೆಸಿಕಿಲಾದ ದಂಡೆಯಲ್ಲಿ ನಡೆದಿತ್ತು. ನೀರಲ್ಲಿ ಕಂಡನಿಲೆ ಗಂಟೆಗೋಪುರ ತಲೆಕೆಳಗಾಗಿ ನಗುತ್ತಿತ್ತು.

ಲಾವುರಾ ಮುಂದುವರಿಸಿ 'ಆಸ್ಪತ್ರೆಯ ಇತರ ರೋಗಿಗಳ ಪರಿಚಯವೂ ಆಯ್ತು. ಒಬ್ಬ ರೋಗಿ ಗಟ್ಟಿಮುಟ್ಟು ಚಂದ ಯುವಕ. ಆದರೆ ಮೂಕನಾಗಿದ್ದ ಪೀಟರ್. ಫುಟ್‌ಬಾಲ್ ಕೋಚ್

ಆಗಿದ್ದನಂತೆ. ನಾ ಊಟ ಬಿಟ್ಟಿದ್ದ ದಿನಗಳು. ಒಮ್ಮೆ ಎಲ್ಲರೂ ರಾತ್ರಿಯೂಟ ಮಾಡುತ್ತಿದ್ದರೂ ನಾನು ಹಜಾರದಲ್ಲಿ ಕುಂತಿದ್ದು, ನಿದ್ದೆ ಹೋಗಿದ್ದೆ. ಅಶಕ್ತಿ ತುಂಬಾ. ಒಂದು ವಿಚಿತ್ರ ಕನಸು ಕಂಡೆ. ಬುದ್ಧ ಅವಲೋಕಿತೇಶ್ವರ ಒಂದಿಷ್ಟು ಹಣ್ಣು ತಂದು ಕರುಣೆಯಿಂದ 'ತಿನ್ನು ಮಗೂ' ಅಂದ. ನಾ ಮೆಲ್ಲನೆ ತೆಗೆದುಕೊಂಡು ಕಣ್ಣುಮುಚ್ಚಿ ತಿಂದೆ. ಮತ್ತೆ ತಲೆಯೆತ್ತಿದಾಗ ಬುದ್ಧನ ಜಾಗದಲ್ಲಿ ಜೀಸಸ್ ನಿಂತಿದ್ದ. ನಗುತ್ತ 'ತಿನ್ನು ಮಗೂ' ಎಂದ, ತಿಂದೆ. ಮತ್ತೆ ತಲೆಯೆತ್ತಿದಾಗ ಯಾರೂ ಇರಲಿಲ್ಲ. ಅಪಾರ ಕತ್ತಲು ತುಂಬಿತು. ಒಮ್ಮೆಲೇ ಅಸಹನೀಯ ಒಂಟಿತನ ಚೀರಿದೆ, 'ಬಿಟ್ಟು ಹೋಗಬೇಡಿ ಬೇಡುವೆ ಹೋಗಬೇಡಿ' ಗಟ್ಟಿಯಾಗಿ ಚೀರಿದೆ. ಯಾರೋ ಬೆನ್ನು ಕುಲುಕಿದಂತಾಗಿ ಬೆಚ್ಚಿ ಎಚ್ಚೆತ್ತೆ. ಕಣ್ಣು ತೆರೆದಾಗ ಪೀಟರ್ ನಿಂತಿದ್ದ, ಮುಗುಳ್ನಗುತ್ತ ಪ್ಲೇಟ್‌ನಲ್ಲಿ ಪ್ಲಂಕೇಕ್ ತಂದಿದ್ದ. ಮೆಲ್ಲಗೆ ತೆಗೆದು ತಿಂದೆ ರುಚಿಯಾಗಿತ್ತು. ಚಿಕ್ಕವಳಿದ್ದಾಗ ಮೆಚ್ಚಿದ್ದೆ. ಮೈಯಲ್ಲಿ ಏನೋ ಹುರುಪು ಬಂತು. ಹಾರಿ ಅವನನ್ನು ತಬ್ಬಿಕೊಂಡೆ. ತುಂಬ ಅತ್ತೆ. ನನ್ನ ತಲೆ ಪೂಸುತ್ತ 'ಅಳಬೇಡ' ಎಂದ ಮಾತು ಬರೆದ ಪೀಟರ್. ಅವನಿಗೆ ಮಾತು ಮೂಡಿತ್ತು. ಅಂದಿನಿಂದ ನಾವಿಬ್ಬರು ಗೆಳೆಯರಾದೆವು'.

ಮಾರುದಿನ ಮುಂಜಾನೆ ಮುದುಕಿ ನರ್ಸ 'ಮಕ್ಕಳೇ ನೀವಿಬ್ಬರೂ ಬೇಗನೆ ಆರಾಮವಾಗ್ತೀರಿ' ಎಂದು ನಕ್ಕು ಹರಸಿದಳು. ಅಂದಿನಿಂದ ಹೊಟ್ಟೆಬಾಕಳಂತೆ ತಿನ್ನತೊಡಗಿದೆ. ಪೀಟರ್ ಇತರ ರೋಗಿಗಳಿಗೆ ಫುಟ್‌ಬಾಲ್ ಕಲಿಸತೊಡಗಿದ. ಎರಡು ತಿಂಗಳಲ್ಲೇ ಮೈತುಂಬಿಕೊಂಡೆ. ಮುಂದಿನ ತಪಾಸಣೆಯಲ್ಲಿ ನಾವಿಬ್ಬರೂ ನಾರ್ಮಲ್ ಆಗಿದ್ದೇವೆಂದು ಕೆಲ ಗುಳಿಗೆ ಕೊಟ್ಟು ಡಿಸ್ಚಾರ್ಜ ಮಾಡಿದರು. ನಾವಿಬ್ಬರೂ ಫ್ಲೋರೆನ್ಸ್‌ಗೆ ಹೋಗಿ ಚಿಕ್ಕಮನೆ ಹಿಡಿದೆವು. ಅಪ್ಪ ಸಹಾಯ ಮಾಡಿದರು. ಪೀಟರ್, ನಾನು ಪಾರ್ಟನರ್ ಆದೆವು. ಮತ್ತೆ ಮಗು ಬಂತು. ಹ್ಹ' ಎಂದಳು. ಬಂದೋ ಮೌನಚಕಿತರಾಗಿ ಆಲಿಸುತ್ತಿದ್ದರು. ಅಪರಾಹ್ನದ ಎಳೆ ಸೂರ್ಯ ದಂಡೆಯ ಮರಗಳ ನಡುವೆ ಕಣ್ಣುಮುಚ್ಚಾಲೆ ಆಡುತ್ತಿದ್ದ. ಗೊಂಡೋಲಾ ಮಾರ್ಕೊ ವೃತ್ತದತ್ತ ತೇಲಿತ್ತು. ಪ್ರಾಂನಲ್ಲಿ ಬಾಗಿದಾಗ, ಮಗು ನಿದ್ದೆಯಲ್ಲಿ ಏನೋ ಕಂಡಂತೆ ನಕ್ಕಿತು. ಬಂದೋ ಲಾವುರಾಳ ಕೈ ಹಿಡಿದಿದ್ದರು.

ಬಂದೋ ಕೇಳಿದರು 'ಲಾವುರಾ ನಾ ಒಂದು ಮಾತು ಕೇಳಲೆ ? ಸಿಟ್ಟಾಗಬೇಡ. ಅಂದು ದಾರ್ಜಿಲಿಂಗ್‌ನಲ್ಲಿ ನೀ ನನಗೆ ಹಾಗೆ ಯಾಕಂದೆ ? ನಾ ನಿನ್ನನ್ನು ಬರೇ ಸ್ನೇಹಿತನಂತೆ ನೋಡಿದ್ದೆ, ಪ್ರೇಮಿಯಂತಲ್ಲ'. ಲಾವುರಾ ನಕ್ಕು, 'ಹುಚ್ಚ, ನಿನಗೆ ಯಾಕೆ ತಿಳಿಯಲಿಲ್ಲ, ನಾ ಹುಚ್ಚಿಯಾಗುತ್ತಿದ್ದೆ, ಭ್ರಮಣೆಗೊಂಡಿದ್ದೆ ಎಂದು ?' .... ಮತ್ತೆ ಗಂಭೀರವಾಗಿ 'ಬಂದೋ, ಆಗ ಬುದ್ಧಮಂಡಲದಲ್ಲಿ ನಿನ್ನ ಮುಖ ಮೂಡತೊಡಗಿತ್ತು. ನಾ ನಿನ್ನ ಮುಖ ನೋಡಿದಾಗ ಅದು ನಿನ್ನ ಮುಖವೋ, ನನ್ನದೋ ಎಂದು ಗುರುತು ತಿಳಿಯುತ್ತಿದ್ದಿಲ್ಲ'. ಬಂದೋ, 'ಧ್ಯಾನಯೋಗ ಈಗಲೂ ಮಾಡುತ್ತಿದ್ದೀ ?' ಎಂದಾಗ ಲಾವುರಾ 'ಮೈಕೆಲ್‌ನ ನ್ಯಾಪೀ ಚೇಂಜ್

ಮಾಡೋದರಲ್ಲೇ ದಿನ ಹಾರಿ ಬಿಡುತ್ತದೆ. ಇವನೇ ನನ್ನ ಬುದ್ಧ, ನನ್ನ ಜೀಸಸ್' ಎಂದು ನಕ್ಕಳು ಮಗುವಿಗೆ ಮುತ್ತಿಡುತ್ತಾ. ಬಂದೋ 'ಇನ್ನೊಂದು ಕೇಳುವೆ. ಅಂದು ದಾರ್ಜಿಲಿಂಗ್‌ನಲ್ಲಿ ನಾನು ತಮಾಷೆಯಲ್ಲಿ "ನಿನಗೆ ಮಗುಬೇಕು" ಅಂದಾಗ ಯಾಕೆ ಬೆಚ್ಚಿದೆ ? ಯಾಕೆ ನನ್ನ ಬಗ್ಗೆ ದ್ವೇಷಗೊಂಡಿಯಾ ?' ಎಂದಾಗ ಸ್ವಲ್ಪ ಗಂಭೀರಳಾಗಿ ಲಾವುರಾ ಹೇಳಿದಳು, 'ನನಗೆ ಎರಡು - ಮೂರು ಹುಡುಗರ ಗೆಳೆತನವಿತ್ತು. ಆದರೆ ಅವರ ಹೃದಯದ ಹತ್ತಿರ ಹೋಗಲಾಗಿರಲಿಲ್ಲ. ಕೊನೆಯವನನ್ನು ಸ್ವಲ್ಪ ಒಪ್ಪಿಕೊಂಡೆ. ಮಗು ಕೊಟ್ಟ. ಆದರೆ ಅದನ್ನು ಹೆರುವಾಗ ಪತ್ತೆಯಿಲ್ಲದೆ ಮಾಯವಾಗಿದ್ದ. ಮಗು ಹುಟ್ಟಿತು. ಆದರೆ ಆಗಲೇ ಸತ್ತಿತ್ತು.......' ಲಾವುರಾಳ ಕಣ್ಣಲ್ಲಿ ಕಂಬನಿ ಇಳಿಯುತ್ತಿತ್ತು. ಲಾವುರಾ ಬಂದೋರ ಬೆರಳು ತೀಡುತ್ತಿದ್ದಳು. ಒಂದಿಷ್ಟು ಮೌನದ ನಂತರ 'ಮೈಕೆಲ್‌ನನ್ನು ಒಮ್ಮೊಮ್ಮೆ ಬಂದೋ ಎಂದು ಕರೆಯುತ್ತೇನೆ' ಎಂದು ನಕ್ಕಳು. ಬಂದೋರ ಕಣ್ಣು ತೇವಗೊಂಡು ಬಿಸಿಲಿಗೆ ಮಿಂಚಿತು. ಬಾಗಿ ಲಾವುರಾ, ಮಗುವಿಗೆ ಮುತ್ತಿಟ್ಟಳು.

ಗೊಂಡೋಲಾ ಸಾಂ ಮಾರ್ಕೊ ದಂಡೆಯಲ್ಲಿ ನಿಂತಿತು. ಮೂವರೂ ದಂಡೆಗಿಳಿದು ಕೂಡು ರಸ್ತೆಯ ವಿಶಾಲ ವೃತ್ತದ ಪಿಯಾಸ್ಸಾ ಕಡೆ ನಡೆದರು. ಪ್ರಾಂ ಬಂದೋರ ಕೈಯಲ್ಲಿ. ಪಿಯಾಸ್ಸಾದ ತುಂಬು ಶಿಲ್ಪಗಳ ಕಾರಂಜಿ ನೀರ ಕಟ್ಟೆಯಲ್ಲಿ ಕುಳಿತರು. ಯಕ್ಷ-ಗಂಧರ್ವ, ಹಕ್ಕಿ-ಹೂಗಳ ಶಿಲ್ಪದಲ್ಲಿ ಬಿಸಿಲು ನೆರಳು ಆಟವಾಡುತ್ತಿದ್ದವು. ಅಲ್ಲಲ್ಲಿ ಟೂರಿಸ್ಟ್ ಮಕ್ಕಳು ಕಣ್ಣುಮುಚ್ಚಾಲೆ ಆಟ ಆಡುತ್ತಿದ್ದರು. ಕಾರಂಜಿ ಇನ್ನೂ ಚಿಮ್ಮಿಲ್ಲವಾದ್ದರಿಂದ, ಕಟ್ಟೆಯೊಳಗಿನ ನೀರು ಕನ್ನಡಿಯಂತೆ ಶುಭ್ರ ಮಿಂಚುತ್ತಿತ್ತು. ಒಂದಿಷ್ಟು ಮೌನದ ನಂತರ ಬಂದೋ 'ಲಾವುರಾ ನಾ ಇಲ್ಲಿಂದ ಇಂಡಿಯಾ ಮರಳಿದಾಗ ಶಾಂತಿನಿಕೇತನ ಬಿಡಬೇಕೆಂದಿದ್ದೇನೆ. ಮರಳಿ ಬರೋಡಾಕ್ಕೆ ಹೋಗುವೆ. ಲಲಿತಾ ಕಷ್ಟದಿಂದ ಮನೆ ಸಂಭಾಳಿಸುತ್ತಿರಬೇಕು. ತುಂಬಾ ಕರೆಯುತ್ತಿದ್ದಾಳೆ, ಎರಡು ವರ್ಷದಿಂದ ಕಂಡಿಲ್ಲ. ನೀನೊಮ್ಮೆ ಮೈಕೆಲ್‌ನ ಕರಕೊಂಡು ನಮ್ಮ ಮನೆಗೆ ಬರಬೇಕು. ತಿಂಗಳಾದರೂ ಉಳಿಯಬೇಕು. ಲಲಿತ ನಿನ್ನನ್ನು ಒಳ್ಳೆಯ ಜೋಪಾನ ಮಾಡುವಳು. ನನಗೆ ಖಾತ್ರಿಯಿದೆ. ಮಕ್ಕಳೆಂದರೆ ಆಕೆ ಹುಚ್ಚಾಗಿ ಕುಣಿದಾಡುತ್ತಾಳೆ ಹಾಂ !' ಎಂದು ನಕ್ಕರು.

ದೂರದ ಚರ್ಚಿನ ಶಿಖರ ತಲೆಕೆಳಗಾಗಿ ನೀರಲ್ಲಿ ಮಿಂಚುತ್ತಿತ್ತು. ಲಾವುರಾ, ಬಂದೋ ನೀರಕಡೆ ಬಾಗಿದರು. ನೀರಕನ್ನಡಿಯಲ್ಲಿ ಅವರ ಮುಖ ಸ್ವಚ್ಛ ನಗುತ್ತಿದ್ದವು. ಒಂದೆರಡು ಕ್ಷಣ ಹಾಗೆ ದಿಟ್ಟಿಸುತ್ತಿದ್ದಾಗ ಏನೋ ಟಳ್ಳೆಂದು ಬಿದ್ದು ನೀರು ವರ್ತುಲ ವರ್ತುಲ ಅಲೆಗಳಾಗಿ ಹರಡಿ, ಪ್ರತಿಬಿಂಬದ ಮುಖಗಳು ಒಂದೊಂದರೊಡನೆ ಬೆರೆತು ಅಲೆಗೊಂಡವು. ಹಿಂದಿರುಗಿ ನೋಡಿದಾಗ ಪುಟ್ಟ ಹುಡುಗಿಯೊಂದು ನಗುತ್ತಿತ್ತು. ನೀರಿಗೆ ಚಿಕ್ಕ ಲೀರೆ ನಾಣ್ಯ ಒಗೆದಿದ್ದಳು. ಲಾವುರಾ 'ಈ ನೀರಿಗೆ ನಾಣ್ಯ ಒಗೆದರೆ ಮತ್ತೆ ಇಲ್ಲಿ ಮರಳಿ ಬರುತ್ತಾರಂತೆ'

ಎಂದು ನಕ್ಕು, ಬಂದೋನ ಕೈಗೂ ಒಂದೆರಡು ನಾಣ್ಯ ಕೊಟ್ಟು, 'ಹ್ಞ... ನೀನೂ ಒಗಿ' ಎಂದಳು. ಇಬ್ಬರೂ ನಾಣ್ಯ ನೀರಿಗೆ ಚೆಲ್ಲಿದಾಗ ಇನ್ನೊಮ್ಮೆ ನೀರು ಅಲೆ ಅಲೆಗೊಂಡಿತ್ತು. ಮತ್ತೆ ನೀರು ಸ್ತಬ್ಧವಾಯ್ತು. ಬಾಗಿದಾಗ ಇಬ್ಬರ ಮುಖಗಳು ನಗುವಿನಲ್ಲಿ ಪ್ರತಿಬಿಂಬಗೊಂಡವು. ಮತ್ತೊಮ್ಮೆ ಆಳದಿಂದ ಎಂಬಂತೆ ಪಿಸು ಮಾತಲ್ಲಿ ಬಂದೋ 'ಯಥಾದರ್ಶೇ ತಥಾತ್ಮನಿ' ಎಂದು ಮಂದಹಾಸ ಬೀರಿದರು. ಲಾವುರಾ 'ಹೇ ಏನದು ?' ಎಂದು ಕಣ್ಣು ಬೆಳಗಿದಾಗ 'ಕನ್ನಡಿಯಲ್ಲಿನಂತೆ ಆತ್ಮನಲ್ಲಿ ಅಂತ ಉಪನಿಷತ್ತು ಹೇಳುತ್ತದೆ. ನನಗೂ ಪೂರ್ತಿ ಅರ್ಥವಾಗುತ್ತಿಲ್ಲ' ಎಂದು ನಕ್ಕರು ಪ್ರೊಫೆಸರ್ ಬಂದೋಪಾಧ್ಯಾಯರು.

●

(೨೦೦೩)

# ಒಂದು ಬೇವಿನಮರದ ಕಥೆ

● ಡಾ. ಗಿರಡ್ಡಿ ಗೋವಿಂದರಾಜ

ನಮ್ಮೂರ ಹೆಸರು ಅಬ್ಬಿಗೇರಿ. ಇದು ಧಾರವಾಡ ಜಿಲ್ಲೆಯಲ್ಲಿ ಪಾಲಾಬಾದಾಮಿಯ ಪ್ರಾಚೀನ ಹೆದ್ದಾರಿಯ ಮೇಲೆ ಗದಗ - ರೋಣಗಳ ನಡುವೆ ಹತ್ತುವ ಒಂದು ಹಳ್ಳಿ. ಹಳ್ಳಿ ಎಂದರೂ ಐದಾರು ಸಾವಿರ ಜನಸಂಖ್ಯೆ ಇದೆ. ರೋಣ ತಾಲೂಕಿಗೆ ಸೇರಿದ್ದಾದರೂ, ಇದರ ವ್ಯಾಪಾರೀ ಸಂಬಂಧಗಳೆಲ್ಲ ಗದಗಿನ ಶಹರದೊಂದಿಗೇ ಹೆಚ್ಚು. ಗದಗಿನಿಂದ ರೋಣದ ಮಾರ್ಗವಾಗಿ ಹೋಗುವ ಬಸ್ಸುಗಳೆಲ್ಲ ನಮ್ಮ ಊರಿನ ಮೇಲೆಯೇ ಹಾಯ್ದು ಹೋಗುತ್ತವೆ. ಹೀಗಾಗಿ ಇಲ್ಲಿ ವಾಹನಗಳ ಓಡಾಟ ಹೆಚ್ಚು. ಹಾಗೆಯೇ ಇಲ್ಲಿಂದ ಗದಗಿಗೆ ಹೋಗಿಬರುವವರ ಓಡಾಟವೂ ಹೆಚ್ಚು.

ನಮ್ಮೂರಿನ ಬಸ್‌ಸ್ಟ್ಯಾಂಡಿನಲ್ಲಿ ಇಳಿದ ಕೂಡಲೇ, ಎದುರಿಗೇ, ಊರ ಹೊರಗೆ, ರಸ್ತೆಗೆ ಹೊಂದಿ ಒಂದು ದೊಡ್ಡ ಕೆರೆ ಕಾಣುತ್ತದೆ. ಹಿಂದೆ 'ಡೋಗೀ ಬರ'ದ ಕಾಲಕ್ಕೆ ಜನರಿಗೆ ಕೂಲಿ ಸಿಗಲೆಂದು ಕಟ್ಟಿಸಿದ ಕೆರೆ ಇದು. ಮಸಾರಿಯ ಕೆಂಪು ನೆಲದಲ್ಲಿ ಕಟ್ಟಿಸಿರುವದರಿಂದ ಇದರ ಮಣ್ಣಿನ ಒಡ್ಡು, ನೀರು ಎಲ್ಲಾ ಕೆಂಪು. ಅದಕ್ಕೇ ಇದಕ್ಕೆ ಕೆಂಪು ಕೆರೆ ಎಂದು ಹೆಸರು. ನಮ್ಮೂರಿಗೆ ಈ ಕೆರೆಯಿಂದ ವಿಶೇಷ ಪ್ರಯೋಜನವಿಲ್ಲವೆಂದೇ ಹೇಳಬೇಕು. ಊರಿನಲ್ಲಿ ಓಣಿಗೊಂದು ಬಾವಿ, ಬಾವಿಯಲ್ಲಿ ಸಾಕಷ್ಟು ಮೇಲೇ ನೀರು ಇರುವದರಿಂದ ಇಷ್ಟು ದೂರ ನೀರಿಗಾಗಿ ಯಾರೂ ಬರುವುದಿಲ್ಲ. ಆ ಮಾರ್ಗವಾಗಿ ಹೋಗುವ ದನ-ಕರುಗಳಿಗೆ ನೀರು ಕುಡಿಸಲು ಮತ್ತು ಅರಿವೆ ಒಗೆಯಲು ಮಾತ್ರ ಇದರ ಉಪಯೋಗ.

ಊರನ್ನು ಪ್ರವೇಶಿಸುತ್ತಿದ್ದಂತೆ ಹಳೆಯ ಕಾಲದ ಅಗಸೀಬಾಗಿಲು ಕಾಣುತ್ತದೆ. ಇದು ಇತಿಹಾಸದ ಯಾವ ಕಾಲಕ್ಕೆ ಸೇರಿದ್ದೋ ಏನೋ ನಮಗೆ ತಿಳಿಯದು. ಕೋಟೆಯ ಗೋಡೆಯ ಗುರುತುಗಳೇನೂ ಈಗ ಉಳಿದಿಲ್ಲ. ಈ ಹೆಬ್ಬಾಗಿಲು ಮಾತ್ರ ಉಳಿದಿದೆ, ಅದೂ ಬಹಳಷ್ಟು ಶಿಥಿಲವಾಗಿ, ಬಾಗಿಲಿನ ಎಡಕ್ಕೆ, ಬಲಕ್ಕೆ ಎದರು-ಬದರಾಗಿ ಎರಡು ದೊಡ್ಡ ಪಡಸಾಲೆಗಳಿವೆ. ಇವೆರಡರ ನಡುವೆ ವಿಶಾಲವಾದ ಹಾದಿ. ಈ ಹಾದಿಯ ಮೇಲೆ ಅಡ್ಡಡ್ಡವಾಗಿ ಎರಡೂ ಪಡಸಾಲೆಗಳನ್ನು ಜೋಡಿಸಿರುವ ದೊಡ್ಡ ದೊಡ್ಡ ತೊಲೆಗಳಿವೆ. ಬಾಗಿಲು, ಕದ ಇತ್ಯಾದಿ ಏನೂ ಇಲ್ಲ. ಬೇಕಾದಂಥ ಟ್ರಕ್ಕುಗಳಿದ್ದರೂ ಸಲೀಸಾಗಿ ಹಾದು ಹೋಗಬಹುದು. ಹಾಗೆಯೇ

ಎತ್ತರವೂ ಯಾವುದಕ್ಕೂ ಆತಂಕವೆನಿಸಿದ್ದಿಲ್ಲ. ಕಾರಹುಣ್ಣಿವೆಯಲ್ಲಿ - ಹೋರಿಗಳು ಕರಿ ಹರಿಯುವಾಗ ಇದೇ ಪಾಜೇಗಟ್ಟಿ. ಅದರ ಹೊರತಾಗಿ ಇದರಿಂದಲೂ ಉಪಯೋಗವಿಲ್ಲ. ಆದರೂ ಇದು ಊರಿಗೆ ಪ್ರಾಚೀನತೆಯ ಕಳೆಯನ್ನು ತಂದುಕೊಟ್ಟಿದೆ; ಹೊಸದಾಗಿ ಊರನ್ನು ಪ್ರವೇಶಿಸುವವರಿಗೆ ಒಂದು ಬಗೆಯ ಭವ್ಯತೆಯ ಅನಿಸಿಕೆಯನ್ನು ಹುಟ್ಟಿಸುತ್ತದೆ.

ಈ ಅಗಸೀ ಬಾಗಿಲನ್ನು ದಾಟಿ ಎಡಕ್ಕೆ ತಿರುಗಿದರೆ ಊರಿನ ಮುಖ್ಯ ರಸ್ತೆ. ಇದನ್ನೇ ನಾವು ಬಾಜಾರ ಎಂದು ಕರೆಯುತ್ತೇವೆ. ಈ ರಸ್ತೆಯನ್ನು ಹಿಡಿದು ನಾಲ್ಕು ಹೆಜ್ಜೆ ಮುಂದಕ್ಕೆ ಬಂದರೆ ಬಲಗಡೆಗೆ ಒಂದು ಸಣ್ಣ ರಸ್ತೆ ಹತ್ತುತ್ತದೆ. ಇದು ನೀರ ಅಗಸಿಗೆ ಹೋಗುವ ದಾರಿ. ಈ ದಾರಿಯಲ್ಲಿ 'ಬಾವಾನ ಮಹಲು' ಎಂದು ಊರವರು ಕರೆಯುತ್ತಿರುವ, ಯಾರೂ ಉಪಯೋಗಿಸದ ಒಂದು ದೊಡ್ಡ ಗಚ್ಚಿನ ಮನೆ ಇದೆ. ಬಹಳ ದಿನಗಳ ಹಿಂದೆ ಕಟ್ಟಿಸಿದ್ದು. ಅಲ್ಲಲ್ಲಿ ಶಿಥಿಲವಾಗಿದೆ. ಗದಗಿನಲ್ಲಿಯ ಒಬ್ಬ ದೊಡ್ಡ ಸಾಹುಕಾರರಿಗೆ ಅದು ಸಾಲದಲ್ಲಿ ಒತ್ತೆಯಾಗಿ ಹೋಗಿದೆ. ಬಾವಾ ಇದ್ದ ಮನೆ ಎಂಬ ಕಾರಣದಿಂದ ಅಲ್ಲಿ ಯಾವ ಸಂಸಾರಸ್ಥರೂ ವಾಸವಾಗಿರಲು ತಯಾರಿಲ್ಲ. ಬಹಳ ದಿನಗಳ ಹಿಂದೆ ಇಲ್ಲೊಂದು ಸಂಸ್ಕೃತ ಪಾಠಶಾಲೆ ನಡೆಯುತ್ತಿತ್ತಂತೆ. ಈಗ ಅದೂ ಇಲ್ಲ. ಬಹಳ ದಿನಗಳಿಂದಲೂ ಹಾಳುಬಿದ್ದಿದೆ. ಜನರಿಲ್ಲದ ಮನೆಯಲ್ಲಿ ಕಣ್ಣಕಪ್ಪಡಿಗಳು ಸೇರಿಕೊಂಡಿವೆ. ಸಮೀಪ ಹಾಯ್ದುಹೋದರೂ ಕಮಟು ವಾಸನೆ ಬಂದೀತು. ಸಂಜೆಯಾದರೆ ಓಣಿಯ ತುಂಬಾ ಅವುಗಳ ಹಾವಳಿ. ಅದರಲ್ಲಿ 'ಏಳು ಮಕ್ಕಳ ತಾಯಿ' ಇದೆಯೆಂದು ಸಣ್ಣವರಿದ್ದಾಗ ನಮ್ಮನ್ನು ಹೆದರಿಸುತ್ತಿದ್ದರು. ರಾತ್ರಿಯ ಹೊತ್ತಿನಲ್ಲಿ ಆ ಮನೆಯ ಮುಂದೆ ಹಾದುಹೋಗಲು ಈಗಲೂ ಜನರಿಗೆ ಹೆದರಿಕೆ. ಆದರೆ ಮನೆ ದೊಡ್ಡ ವಾಡೆಯಂತೆ ಭವ್ಯವಾಗಿದೆ. ಅದಕ್ಕೆ ಬಳಸಿದ ತೇಗಿನ ಮಜಬೂತಾದ ಕಂಬ-ಜಂತಿಗಳನ್ನು ಮಾರಿದರೆ ಈಗ ಐವತ್ತು - ಅರವತ್ತು ಸಾವಿರ ಬೆಲೆ ಬಂದೀತು ಎನ್ನುತ್ತಾರೆ. ಅಂತೆಯೇ ಗದಗಿನ ಸಾಹುಕಾರರು ಅದನ್ನು ಕೆಡವಿಸಬೇಕೆಂದು ಬಹಳ ಪ್ರಯತ್ನ ಮಾಡಿದರು. ಆದರೆ ಊರಿನ ಹಿರಿಯರು ಅಡ್ಡಿಮಾಡಿ ಉಪಯೋಗವಿಲ್ಲದ ಈ ಮನೆಯನ್ನು ಉಳಿಸಿಕೊಂಡಿದ್ದಾರೆ.

ಪುನಃ ಮುಖ್ಯರಸ್ತೆಗೆ ಒಂದು 'ಬಾಜಾರಿ'ನಲ್ಲಿ ಅರ್ಧ ಫರ್ಲಾಂಗಿನಷ್ಟು ನಡೆದರೆ ಬಲಗಡೆಗೆ ಪೂರ್ವಕ್ಕೆ ಮುಖ ಮಾಡಿರುವ ವೆಂಕಟರಮಣನ ಗುಡಿ ಇದೆ. ಇದು ಊರಲ್ಲಿಯ ಬ್ರಾಹ್ಮಣರಿಗಾಗಿಯೇ ಪ್ರತ್ಯೇಕವಾಗಿರುವ ಗುಡಿ. ಒಳ್ಳೆಯ ಸ್ಥಿತಿಯಲ್ಲಿದೆ. ನಿತ್ಯ ಪೂಜೆಯೂ ನಡೆಯುತ್ತದೆ. ಎತ್ತರವಾದ ಕಟ್ಟೆಯ ಮೇಲೆ ಏಳು ಅಂಕಣದ ಪಡಸಾಲೆ, ಅದಕ್ಕಿಂತ ಸ್ವಲ್ಪ ಎತ್ತರದಲ್ಲಿ ಇದರ ಎರಡರಷ್ಟು ಅಗಲವಾದ ಇನ್ನೊಂದು ಪಡಸಾಲೆ. ಇಲ್ಲಿಯ ಸಾಲುಕಂಬಗಳನ್ನು ಬಳಸಿಕೊಂಡು ನಾವು ಸಣ್ಣವರಿದ್ದಾಗ 'ಕಂಬ - ಕಂಬದಾಟ' ಆಡುತ್ತಿದ್ದೆವು.

ಅಲ್ಲಿಯೇ ರಸ್ತೆಯ ಎಡಕ್ಕೆ ನಮಗೆ ಎದುರಾಗಿ ಚಾವಡಿ ಹತ್ತುತ್ತದೆ. ಇದು ಜೀರ್ಣ ಸ್ಥಿತಿಯಲ್ಲಿರುವ ಹಳೆಯ ಕಟ್ಟಡ. ಅದರ ಬೆನ್ನಿಗೆ ಹತ್ತಿಯೇ ಆಚೆಗೆ ಮುಖ ಮಾಡಿ

ಮಲ್ಲಿಕಾರ್ಜುನ ದೇವರ ಗುಡಿ. ಗುಡಿ ಎಂದರೆ ಈಗ ಅರ್ಧಮರ್ಧ ಬಿದ್ದುಹೋಗಿದ್ದು ಗರ್ಭಗುಡಿ ಮಾತ್ರ ಉಳಿದಿದೆ. ಮಾಳಿಗೆಯ ಮೇಲೆಲ್ಲಾ ಹುಲ್ಲು. ಹುಲ್ಲು ತೆಗೆಯಲು ಮೇಲೆ ಹತ್ತಿದರೆ ಇದ್ದಷ್ಟು ಮಾಳಿಗೆಯೂ ಕುಸಿದೀತೆಂಬ ಹೆದರಿಕೆಯಿಂದ ಅದನ್ನು ಯಾರೂ ತೆಗೆಯುವುದಿಲ್ಲ. ಅಲ್ಲದೆ, ಅದನ್ನ ತೆಗೆಯುವ ಆಸಕ್ತಿಯಾದರೂ ಯಾರಿಗೆ ? ಇದು ಲಿಂಗಾಯತರಿಗೆ ಸೇರಿದ ಗುಡಿ. ಅವರಿಗೆ ಮಲ್ಲಿಕಾರ್ಜುನನಿಗಿಂತ ಹೆಚ್ಚು ಜನಪ್ರಿಯವಾದ ಕಂಟೀಬಸಪ್ಪನ ಗುಡಿ ಇದ್ದುದರಿಂದ ಅವರು ಈ ಕಡೆಗೆ ಲಕ್ಷ್ಯವನ್ನೇ ಕೊಟ್ಟಿರಲಿಲ್ಲ. ಪೂಜೆ ನಿಂತು ಯಾವ ಕಾಲವಾಗಿದೆಯೋ ಏನೋ ! ಗುಡಿಗೆ ಆಸ್ತಿ ಇಲ್ಲದ್ದರಿಂದ ಪೂಜಾರಿಯೂ ಇಲ್ಲ. ಗರ್ಭಗುಡಿಯ ಮುಂದಿನ ಭಾಗವೆಲ್ಲಾ ಬಿದ್ದುಹೋಗಿ ಎರಡು ಮುಕ್ಕಾದ ಗೋಡೆ ಮಾತ್ರ ಉಳಿದಿವೆ. ಸಮೀಪದ ಮನೆಯ ಹೆಣ್ಣುಮಕ್ಕಳು ಕುಳ್ಳು ಹಚ್ಚಲು ಈ ಹಾಳುಗೋಡೆಗಳನ್ನು ಉಪಯೋಗಿಸುತ್ತಾರೆ. ಗುಡಿಯ ಆವಾರದಲ್ಲಿ ಹೆಣ್ಣು ಹುಡುಗರು ಅಡಿಗೆಯ ಆಟ, ಗೊಂಬೆಯ ಮದುವೆಗಳಂಥ ಆಟಗಳನ್ನು ಆಡಿಕೊಳ್ಳುವುದುಂಟು.

ಇನ್ನಷ್ಟು ಹಾಗೆಯೇ ಮುಂದೆ ಬಂದರೆ, ಎದುರಿಗೆ ಒಂದು ಹೊರವಾಗಿ ಬೆಳೆದ ದೊಡ್ಡ ಬೇವಿನಮರ ಕಾಣುತ್ತದೆ. ಈ ಬೇವಿನಮರವೇ ನಮ್ಮ ಕಥೆಯ ನಾಯಕ. ಈ ಮರದ ಸುತ್ತ ಒಂದು ಎತ್ತರವಾದ ಕಟ್ಟೆಯಿದೆ. ಕಟ್ಟೆಯ ಮೇಲೆ ಮಲ್ಲಿಕಾರ್ಜುನ ಗುಡಿಯ ಈಶ್ವರ ಲಿಂಗಕ್ಕೆ ಎದುರಾಗಿ ಒಂದು ಹಳೆಯ, ಮುಕ್ಕಾದ ಬಸವಣ್ಣನ ಮೂರ್ತಿ ಇದೆ. ಈ ಬೇವಿನಮರದ ಕಟ್ಟೆಯಿಂದ ರಸ್ತೆ ಎರಡು ಕವಲಾಗಿ ಒಡೆದು ಎಡಗಡೆಯ ರಸ್ತೆ ಗೌಡರ ಓಣಿಯ ಕಡೆ ಹೋಗುತ್ತದೆ. ಈ ಬಲಗಡೆಯ ರಸ್ತೆಗೆ ಹೊಂದಿ ಮರಕ್ಕೆ ಸಮೀಪದಲ್ಲಿಯೇ ತುಸು ಒಳಕ್ಕೆ ನಮ್ಮ ಮನೆ.

ಬೇವಿನಮರದ ಕಟ್ಟೆಗೆ ಹೊಂದಿ ಎರಡು ಮನೆಗಳಿವೆ. ಅವಕ್ಕೆ ಬೇವಿನಮರದವರ ಮನೆಗಳೆಂದೇ ಹೆಸರು ಬಿದ್ದಿದೆ. ಕಟ್ಟೆಗೆ ಹತ್ತಿಯೇ ಇರುವ ಮನೆ ಮಲ್ಲಯ್ಯನದು. ಆತ ಊರಿನಲ್ಲಿ ಇರುವುದಿಲ್ಲ. ಈ ಮನೆಯೊಂದನ್ನು ಬಿಟ್ಟು ಆತನಿಗೆ ಊರಲ್ಲಿ ಬೇರೆ ಆಸ್ತಿ ಇರಲಿಲ್ಲವಾದದ್ದರಿಂದ ಮನೆಗೆ ಕೀಲಿ ಹಾಕಿಕೊಂಡು ತನ್ನ ಹೆಂಡತಿಯ ಊರಿಗೆ ಹೋಗಿ ಅಲ್ಲಿಯೇ ನೆಲೆಸಿದ್ದಾನೆ. ಅವನ ಮನೆಗೆ ಹೊಂದಿ, ನಮ್ಮ ಮನೆಗೆ ಎದುರಾಗಿ ಇರುವ ಮನೆ ಬಸಯ್ಯನದು. ಎರಡೂ ಮನೆತನಗಳು ಅಣ್ಣ-ತಮ್ಮಂದಿರ ನಾತೆಯವು.

ಬಸಯ್ಯ ಗುರುಬಸಮ್ಮನ ಕೊನೆಯ ಮಗ. ಉಳಿದ ಮೂವರಲ್ಲಿ ಒಬ್ಬ ಚುಟ್ಟಾದ ಅಂಗಡಿಯನ್ನಿಟ್ಟುಕೊಂಡು ಮನೆತನದ ವಾರದ ಸಂತೆಯ ಖರ್ಚು ನೋಡಿಕೊಳ್ಳುತ್ತಿದ್ದ. ಇನ್ನೊಬ್ಬ ಟ್ರಕ್ಕಿನ ಡ್ರೈವರ್ ಆಗಿ ಹುಬ್ಬಳ್ಳಿಯಲ್ಲಿದ್ದ. ಮತ್ತೊಬ್ಬ ಕನ್ನಡ ಶಾಲೆಯ ಮಾಸ್ತರನಾಗಿ ತಾಲೂಕಿನ ಇನ್ನೊಂದು ಮೂಲೆಯಲ್ಲಿದ್ದ. ಮನೆಯಲ್ಲಿ ಗುರುಬಸಮ್ಮನದೇ ಹಿರೇತನ. ನೌಕರಿಯಲ್ಲಿದ್ದ ಇಬ್ಬರೂ ಮಕ್ಕಳು ಪ್ರತಿ ತಿಂಗಳು ಅಷ್ಟಿಷ್ಟು ಕಳುಹಿಸುತ್ತಿದ್ದರು.

ಗಂಪ ಜೋಳಿಗೆ ಹಾಕಿಕೊಂಡು ಹೋಗಿ ಊರಲ್ಲಿ ಭಿಕ್ಷೆ ಎತ್ತಿಕೊಂಡು ಬರುತ್ತಿದ್ದ. ಅಷ್ಟರ ಮೇಲೆ ಮನೆತನ ಸರಿಯಾಗೇ ನಡೆದಿತ್ತು. ಹೀಗಾಗಿ ಕಡೆಯ ಮಗ ಬಸಯ್ಯ ಅವರಿವರ ಹೊಲದ ಕೆಲಸಕ್ಕೆ ಹೋಗಿ ತಂದ ದಿನಗೂಲಿಯಲ್ಲಿ ಒಂದು ಬಿಲ್ಲಿಯನ್ನೂ ಕೊಡದೇ ಚೈನೀ ಹೊಡೆಯುತ್ತಿದ್ದರೂ ಗುರುಬಸಮ್ಮ ಹೆಚ್ಚಿನ ತಕರಾರು ಮಾಡಿರಲಿಲ್ಲ. ಅಲ್ಲದೆ ಅವನು ಸ್ವಲ್ಪ ಉಡಾಳ ಸ್ವಭಾವದವನೂ ಹೌದು. ಊರಲ್ಲಿಯ ಎರಡು ಮುಖ್ಯ ಪಾರ್ಟಿಗಳಲ್ಲಿ ಒಂದಾದ ಮಾಳಶೆಟ್ಟರ ಪಾರ್ಟಿಯಲ್ಲಿ ಅವನಿಗೂ ಒಂದಿಷ್ಟು ಸ್ಥಾನವಿದ್ದುದರಿಂದ ಅವನ ಹಿಂದೆ ನಾಲ್ಕು ಜನರ ಬಲವೂ ಇತ್ತು. ಆಗೀಗ ಒಂದಿಷ್ಟು ಕುಡಿದು ಬರುತ್ತಿದ್ದ. ಜೊತೆಗೆ ಹೆಣ್ಣಿನ ಸಂಪರ್ಕವೂ ಇತ್ತು. ಅಂಥವನೊಬ್ಬ ಕಂಬೀರ ತನ್ನ ಮಗನಾಗಿರುವುದು ಒಂದು ಹೆಮ್ಮೆಯ ವಿಷಯವೆಂದೇ ಗುರುಬಸಮ್ಮ ಭಾವಿಸಿದ್ದಳು. ಅವನಿಂದಾಗಿ ಊರವರು ತಮ್ಮ ಮನೆತನಕ್ಕೆ ಅಂಜುತ್ತಾರೆಂದು ಆಕೆಯ ಅಂದಾಜು. ಅಂತೆಯೇ ಅವನ ಉಡಾಳತನವನ್ನು ಅಪ್ರತ್ಯಕ್ಷವಾಗಿ ಪ್ರೋತ್ಸಾಹಿಸುತ್ತಿದ್ದಳು ಕೂಡ.

ತಮ್ಮ ಮನೆಗಳಿಗೆ ಹತ್ತಿದ ಕಟ್ಟೆಯ ಮೇಲೆ ಆ ಬೇವಿನಮರ ಇದ್ದದ್ದರಿಂದ ಅದು ತಮ್ಮದೆಂದೇ ಬೇವಿನಮರದವರ ಮನೆತನಗಳ ಜನ ಹೇಳಿಕೊಳ್ಳುತ್ತಿದ್ದರು. ಮಲ್ಲಿಕಾರ್ಜುನನ ಗುಡಿಯ ಈಶ್ವರ ಲಿಂಗಕ್ಕೆ ಸಂಬಂಧಿಸಿದ ಬಸವಣ್ಣ ಈ ಕಟ್ಟೆಯ ಮೇಲೆ ಇದ್ದುದರಿಂದ ಅದು ಆ ಗುಡಿಗೆ ಸೇರಿರಬಹುದಾದ ಸಾಧ್ಯತೆಯೂ ಇತ್ತು. ಆದರೆ ಬೇವಿನಮರ ಮಾವು, ಹುಣಸೆಗಳಂತೆ ಹಣ್ಣು ಕೊಡುವ ಉಪಯುಕ್ತ ಮರವೇನೂ ಅಲ್ಲವಾದ್ದರಿಂದ ಅದು ಯಾರಿಗೆ ಸೇರಿದ್ದರೂ ಅದರಿಂದಾಗುವ ಸಧ್ಯದ ಲಾಭ ಅಷ್ಟರಲ್ಲೇ ಇತ್ತು. ಹಾಗೆಂದೇ ಏನೋ, ಬೇವಿನಮರದವರು ಆ ಮರ ತಮ್ಮದೆಂದೇ ಹೇಳಿಕೊಂಡರೂ ಯಾರೂ ಅದನ್ನು ವಿಶೇಷವಾಗಿ ಮನಕ್ಕೆ ತೆಗೆದುಕೊಂಡಿರಲಿಲ್ಲ. ಅಲ್ಲದೆ, ಆ ಮರದಿಂದಲಾಗಿಯೇ ತಮ್ಮ ಮನೆತನಕ್ಕೆ 'ಬೇವಿನಮರದವರು' ಎಂದು ಹೆಸರು ಬಂದಿರುವುದರಿಂದ ತಾನೂ ಹಕ್ಕು ಸಾಧಿಸಬಹುದಾಗಿದ್ದ ಮಲ್ಲಯ್ಯ ಊರು ಬಿಟ್ಟುಹೋಗಿ ಬಹಳ ದಿನಗಳಾಗಿದ್ದರಿಂದ ಈಗ ಗುರುಬಸಮ್ಮನ ಮನೆಯವರೊಬ್ಬರೇ ಅದನ್ನು ತಮ್ಮದೆಂದುಕೊಳ್ಳುತ್ತಿದ್ದರು. ಒಂದು ರೀತಿ ಜನಗಳೂ ಸಹ ಬೇವಿನಮರವನ್ನೂ ಬೇವಿನಮರದವರ ಮನೆತನವನ್ನೂ ಒಂದಾಗಿಯೇ ಭಾವಿಸಿದ್ದರೆಂದು ಕಾಣುತ್ತದೆ.

ಅದೇನೇ ಇದ್ದರೂ, ಆ ಬೇವಿನಮರ ಇಡೀ ರಸ್ತೆಗೇ ಶೋಭೆ ತಂದಿತ್ತೆಂದು ಹೇಳಿದರೆ ಉತ್ಪ್ರೇಕ್ಷೆಯೇನೂ ಅಲ್ಲ. ಬೇವಿನಮರ ಮನುಷ್ಯರಿಗೆ ಹಣ್ಣು ಇತ್ಯಾದಿ ಪ್ರಯೋಜನ ಕೊಡಲಿಕ್ಕಿಲ್ಲ. ಆದರೆ ವರ್ಷದುದ್ದಕ್ಕೂ ಸೊಂಪಾದ ನೆರಳನ್ನು ಮಾತ್ರ ಧಾರಾಳವಾಗಿ ಕೊಡಬಲ್ಲದು. ಕೂಡುದಾರಿಯ ನಡುವೆ ಇದ್ದುದರಿಂದ ಈ ಮರದ ನೆರಳು ಎರಡೂ ಪಕ್ಕದ ದಾರಿಗಳನ್ನು ಪೂರ್ತಿಯಾಗಿ ಆವರಿಸಿತ್ತು. ಈ ಗಿಡ ಎಷ್ಟು ಎತ್ತರವಾಗಿ, ದಟ್ಟವಾಗಿ

ಬೆಳೆದಿತ್ತೆಂದರೆ, ಅದರ ಅನೇಕ ಟೊಂಗೆಗಳು ಹತ್ತಿರದ ಮನೆಗಳ ಮಾಳಿಗೆಯ ಮೇಲೂ ಚಾಚಿಕೊಂಡಿದ್ದವು. ನಮ್ಮ ಮನೆಗೆ ಹೋಗಬೇಕಾದರೆ ಅದರ ನೆರಳಲ್ಲಿ ಹಾಯ್ದೇ ಹೋಗಬೇಕು. ಹೀಗಾಗಿ ಈಗಲೂ ನಮ್ಮ ಮನೆಯ ನೆನಪಾದರೆ ಅದರ ಕೂಡ ಅನಿವಾರ್ಯವಾಗಿ ಈ ಮರದ ಚಿತ್ರವೂ ಕಣ್ಣು ಮುಂದೆ ಬರುತ್ತದೆ.

ನನ್ನ ಬಾಲ್ಯದ ಅನೇಕ ನೆನಪುಗಳು ಈ ಮರದ ಜೊತೆಗೆ ಹೆಣೆದುಕೊಂಡಿವೆ. ನಮ್ಮ ಮನೆಯ ಪಡಸಾಲೆಯ ಕಟಾಂಜನದ ಬಳಿಯಿಂದ ನೋಡಿದರೆ ಗಿಡದ ಮೇಲ್ಭಾಗದ ಹಸಿರೆಲ್ಲ ಒಟ್ಟಾಗಿ ಗೋಪುರದ ಹಾಗೆ ಕಾಣುತ್ತಿತ್ತು. ಗಾಳಿಗೆ ಟೊಂಗೆಗಳು ಅಲ್ಲಾಡಿದಾಗ ಆ ಗೋಪುರವೆಲ್ಲ ಇಡಿಯಾಗಿ ಗಂಭೀರವಾಗಿ ಕೋಲಾಟದ ಹೆಜ್ಜೆ ಹಾಕಿದಂತೆ ತೂಗುವುದು ಕಾಣುತ್ತಿತ್ತು. ಚೈತ್ರದಲ್ಲಿ ತಿಳಿಹಸಿರಿನ ಎಲೆಗಳ ನಡುವೆ ಕುಸುರೆಳ್ಳಿನಂಥ ಹೂವಾದರೆ ಓಣಿಯೆಲ್ಲಾ ಕಂಪು. ಸಂಜೆಯಾದೊಡನೆ ಆ ಗಿಡಕ್ಕೆ ನೂರಾರು ಕಾಗೆಗಳು ಹಾರಿ ಬಂದು ಕುಳಿತುಕೊಂಡರೆ ಹಸಿರಿನ ಗೋಪುರವೆಲ್ಲ ಕರ್ರಗಾಗಿ ಬಿಡುತ್ತಿತ್ತು. ಹಾಗೆ ಕಾಗೆಗಳು ಕುಳಿತರೆ ಕಾಗೆಗಳ ಶಾಲೆ ಆರಂಭವಾಯಿತು ಎಂದು ನಮ್ಮ ಲೆಕ್ಕ. ಆದರೆ ವಿಚಿತ್ರವೆಂದರೆ, ನಮ್ಮ ಶಾಲೆ ಬಿಟ್ಟ ಮೇಲೆ ಕಾಗೆಗಳ ಶಾಲೆ ಆರಂಭವಾಗುತ್ತಿತ್ತು. ನಾವು ಮಾಳಿಗೆಯ ಮೇಲೆ ನಿಂತು ಅವುಗಳಲ್ಲಿ ಶಿಕ್ಷಕರು ಯಾರು, ಹೆಡ್‌ಮಾಸ್ತರು ಯಾರು ಎಂದು ಗುರ್ತಿಸಲು ಯತ್ನಿಸುತ್ತಿದ್ದೆವು. ಬೆಳಿಗ್ಗೆ ನಸುಕಿನಲ್ಲಿಯೇ ಎಚ್ಚರವಾಗಿ ಕಾಗೆಗಳೆಲ್ಲ ಒಟ್ಟಿಗೆ ಕೂಗಲು ಆರಂಭಿಸುತ್ತಲೇ ಅವ್ವ ಏಳಬೇಕು. 'ಕಾಗೆ ಕೂಗಿದವು, ಇನ್ನೂ ಏಳುವುದಿಲ್ಲವೇನ್ರೊ ?' ಎಂದು ಆಳುಮಕ್ಕಳನ್ನು ಎಬ್ಬಿಸಬೇಕು. ಶಾಲೆಗೆ ಹೊತ್ತಾಗುತ್ತದೆಂದು ಏಳಲಿಕ್ಕೆ ನಮಗೂ ಸಹ ಅದೇ ಸೂಚನೆಯಾಗುತ್ತಿತ್ತು.

ಗಿಡದ ಕೆಳಗಿನ ನೆರಳಿನ ನೆಲ ದಿನವೆಲ್ಲ ನಮ್ಮ ಆಡುಂಬೊಲವಾಗುತ್ತಿತ್ತು. ಸರಗೆರೆ, ಖೋ ಮುಂತಾದ ಗುಂಪಿನ ಆಟಗಳಿಗೆ ಅಷ್ಟು ಜಾಗ ಸಾಕಾಗುತ್ತಿರಲಿಲ್ಲವಾದರೂ, ಕಣ್ಣುಮುಚ್ಚಾಟ, ಗುಡಮಿಂಚೋಟಗಳಿಗೆ ಆ ಕಟ್ಟೆ ಆದರ್ಶ ಪಾಜೇಗಟ್ಟೆಯಾಗಿತ್ತು. ಮಧ್ಯಾಹ್ನದ ಕಾಲಕ್ಕೆ, ಅದರಲ್ಲೂ ಸೂಟಿಯ ದಿನಗಳಲ್ಲಿ ಅಲ್ಲಿ ಗುಂಡಾ ಆಡುವುದೊಂದು ವಿಶೇಷ ಕಾರ್ಯಕ್ರಮ. ಗುಂಡಾ ಎಂದರೆ ಈಗಿನ ಕಾಲದ ಹುಡುಗರು ಬೆರಳಿನಿಂದ ಆಡುವ ಗಾಜಿನ ಗೋಲಿಗಳಲ್ಲ. ಬೆಲಪತ್ರಿ ಕಾಯಿಗಳನ್ನೇ ಗುಂಡಾ ಮಾಡಿಕೊಂಡು ಹತ್ತು - ಹದಿನೈದು ಜನ ಸೇರಿ ಒಮ್ಮೆಲೆ ಆಡುವುದು. ವಯಸ್ಸಾದವರೂ ಆಗಾಗ ಬಂದು ನಮ್ಮ ಆಟದಲ್ಲಿ ಸೇರಿಕೊಳ್ಳುತ್ತಿದ್ದರು. ಆಗ ಹಿರಿಯ-ಹಿರಿಯರಲ್ಲೇ ಹ್ಯಾಂವ್ ಬಿದ್ದು, ತಮ್ಮಲ್ಲೇ ಒಬ್ಬರನ್ನು ಸೋಲಿಸಿ, ಸಣ್ಣ ಹುಡುಗರನ್ನು ಗೆದಿಸಿ, ಹೆಣ್ಣಾದವರನ್ನು ನಮ್ಮ ಕೈಯಲ್ಲಿ ಡೀಕಿಸಿ, ಸೋತವರನ್ನು ಅವಮಾನಪಡಿಸುವದೇ ಒಂದು ಮೋಜು. ಹತ್ತು - ಹದಿನೈದು ಜನರ ಕೈಯಲ್ಲಿ ಡೀಕಿ ಮುಗಿಸುವದೆಂದರೆ ಸಾಕುಬೇಕಾಗಿ ಹೋಗಬೇಕು.

ನಾಗರ ಪಂಚಮಿಗೆ ಈ ಗಿಡದ ಟೊಂಗೆಗೇ ಜೋಕಾಲಿ ಕಟ್ಟುವುದು. ಜೋರಾಗಿ ಜೀಕ ಏರಿಸಿದರೆ, ಮೇಲೆ ಹೋದಾಗ ಗಾಳಿಯಲ್ಲಿ ಅಲ್ಲೇ ಉಳಿದುಬಿಡುವೆವೇನೋ ಎನ್ನುವಂತೆ ಮೈ ಜುಮ್ಮೆನ್ನುತ್ತಿತ್ತು.

ಒಂದು ಸಲ ನಮ್ಮ ಓಣಿಯ ಹಿರೇಹುದ್ದರಿ ಕಳಕ ಗುರುಬಸಮ್ಮನ ಕಣ್ಣು ತಪ್ಪಿಸಿ ಮರ ಹತ್ತಿ, ಅದರಲ್ಲಿ ಕಟ್ಟಿದ್ದ ಕಾಗೆ ಬಚ್ಚುಗಳಿಂದ ಹಲವಾರು ಸಣ್ಣ ಮರಿಗಳನ್ನು ತಂದು ನಮಗೆಲ್ಲ ತೋರಿಸಿದ. ಆ ದಿನ ಸಂಜೆಗೆ ತಿರುಗಿ ಬಚ್ಚಿಗೆ ಬಂದ ಕಾಗೆಗಳು ಮರಿಗಳಿಲ್ಲದ್ದನ್ನು ನೋಡಿ ಒದರಲು ಸುರು ಮಾಡಿಬಿಟ್ಟವು. ಈ ಕೂಗಾಟದಿಂದ ಆ ದಿನ ರಾತ್ರಿಯೆಲ್ಲ ಓಣಿಯವರಿಗೆ ಜಾಗರಣೆಯಾಗಿ, ಕಳಕನಿಗೆ ಎಲ್ಲರೂ ಥರಥರದ ಹೂ ಏರಿಸಿದರು. ಮರುದಿನ ಮಧ್ಯಾಹ್ನ ಕಾಗೆಗಳಿಲ್ಲದ ಹೊತ್ತಿನಲ್ಲಿ ಮರ ಹತ್ತಿಹೋಗಿ ಕಳಕ ಮತ್ತೆ ಮರಿಗಳನ್ನು ಬಚ್ಚುಗಳಲ್ಲಿ ಬಿಟ್ಟುಬಂದ. ಯಾವ ಯಾವ ಮರಿಗಳನ್ನು ಯಾವ ಯಾವ ಬಚ್ಚಿಗೆ ಹಾಕಿದನೋ ತಿಳಿಯದು. ಸಂಜೆಗೆ ಕಾಗೆಗಳು ತಿರುಗಿ ಬಂದಾಗ ಗೊಂದಲವೋ ಗೊಂದಲ, ಕೋಲಾಹಲವೋ ಕೋಲಾಹಲ. ಮರುದಿನ ಮುಂಜಾನೆ ಹಲವಾರು ಮರಿಗಳು ಸತ್ತು ನೆಲಕ್ಕೆ ಬಿದ್ದಿದ್ದವು.

ಇದನ್ನೆಲ್ಲ ಯಾಕೆ ಹೇಳಿದೆನೆಂದರೆ, ಆ ಬೇವಿನಮರ ನಮ್ಮ ಬದುಕಿನ ಒಂದು ಭಾಗವೇ ಆಗಿಬಿಟ್ಟಿತ್ತು. ಇಷ್ಟಾದರೂ, ಆ ಮರ ಬೇವಿನಮರದವರದು ಎಂಬ ಮಾತನ್ನು ಮರೆಯಲು ಮಾತ್ರ ಸಾಧ್ಯವಿರಲಿಲ್ಲ. ಯಾಕೆಂದರೆ, ಮಾಡಲು ಕೆಲಸವಿಲ್ಲದ ಗುರುಬಸಮ್ಮ ಯಾವಾಗಲೂ ಅದನ್ನು ದೆವ್ವದಂತೆ ಕಾಯುತ್ತಿದ್ದಳು. ಯಾರೂ ಆ ಮರದ ಒಂದು ಸಣ್ಣ ಟೊಂಗೆಯನ್ನೂ ಮುರಿಯಲು ಬಿಡುತ್ತಿರಲಿಲ್ಲ. ಯಾವ ಆಡೂ ಅದರ ತೊಪ್ಪಲನ್ನು ತಿಂದದ್ದಿಲ್ಲ. ನಾಗರ ಪಂಚಮಿಗೊಮ್ಮೆ ನಿರ್ವಾಹವಿಲ್ಲದೆ, ಆದರೂ ಗೊಣಗುತ್ತ, ಸುಮ್ಮನಿರುತ್ತಿದ್ದಳೇ ಹೊರತು, ಉಳಿದ ದಿನಗಳಲ್ಲಿ ಯಾರೂ ಮರವನ್ನೇರಲು ಬಿಡುತ್ತಿರಲಿಲ್ಲ. ಸಿಡಿ ಹಾಯ್ದು ಒಣಗಿ ತಾನಾಗಿ ನೆಲಕ್ಕೆ ಬಿದ್ದ ಮೇಲೆ ಅದರ ಕಟ್ಟಿಗೆ ಗುರುಬಸಮ್ಮನ ಮನೆಯ ಒಲೆಗೇ ಹೋಗಬೇಕು. ಹೀಗೆ ಗುರುಬಸಮ್ಮ ಹೆಜ್ಜೆಹೆಜ್ಜೆಗೂ ಆ ಮರ ತನ್ನದೆಂದು ಸಾಬೀತು ಮಾಡಿ, ಆ ಮಾತನ್ನು ನಮ್ಮ ತಲೆಯಲ್ಲಿ ಜಡಿದು ಬಿಟ್ಟಿದ್ದಳು. ಆ ಮರದ ನೆರಳಿನಲ್ಲಿ ಆಡಲು ನಮಗೆ ಅವಕಾಶ ಕೊಟ್ಟಿದ್ದೇ ಒಂದು ದೊಡ್ಡ ಉಪಕಾರವೆಂಬಂತೆ ವರ್ತಿಸುತ್ತಿದ್ದಳು.

ಹೀಗಿರುತ್ತಿರಲಾಗಿ ಒಂದು ಘಟನೆ ನಡೆಯಿತು. ಬೇವಿನಮರದ ಬಳಿಯಲ್ಲಿ ಮುಖ್ಯ ರಸ್ತೆ ಕವಲೊಡೆದು ಎಡಗಡೆಯ ರಸ್ತೆ ಗೌಡರ ಓಣಿಯ ಕಡೆಗೆ ಹೋಗುತ್ತದೆಂದು ಹೇಳಿದೆನಲ್ಲ ! ಗೌಡರ ಓಣಿಗೆ ಹತ್ತಿ, ರಸ್ತೆಯ ಬಲಬದಿಗೆ ದ್ಯಾಮವ್ವನ ಗುಡಿ ಇದೆ. ಈ ಗುಡಿಯ ಸುತ್ತಲೂ ಬಡಿಗೇರರ ಹತ್ತು - ಹನ್ನೆರಡು ಮನೆಗಳಿವೆ. ಇವರ ಮನೆಗಳಿಗೆ ಸಮೀಪದಲ್ಲೇ ಊರ ಅಂಚಿಗೆ ಒಂದು ಬನ್ನೀಗಿಡ. ಅದರ ಕೆಳಗೆ ಎಂಥೆಂಥವೋ ಕಲ್ಲುದೇವರುಗಳಿವೆ. ಈ ಗಿಡ ಮತ್ತು ಆ ದೇವರುಗಳನ್ನೆಲ್ಲಾ ಸೇರಿಸಿ ಅದಕ್ಕೆ ಬನ್ನಿಮಾಂಕಾಳಮ್ಮ ಎಂದು ಹೆಸರು. ಪಾಂಡವರು

ಹದಿನಾಲ್ಕು ವರ್ಷ ವನವಾಸವನ್ನು ಮುಗಿಸಿ, ಅಜ್ಞಾತವಾಸಕ್ಕಾಗಿ ವಿರಾಟ್‌ನಗರಕ್ಕೆ ಹೋಗುವ ಮೊದಲು ತಮ್ಮ ಶಸ್ತ್ರಾಸ್ತ್ರಗಳನ್ನೆಲ್ಲ ಬನ್ನೀಗಿಡದಲ್ಲಿ ಮುಚ್ಚಿ ಇಡಲಿಲ್ಲವೇ ? ಆ ಬನ್ನೀಗಿಡ ಇದೇ. ಇದಕ್ಕೆ ಪುರಾವೆಯಾಗಿ, ನಮ್ಮ ಊರಿನ ಪೌರಾಣಿಕತೆಯನ್ನು ಎತ್ತಿತೋರಿಸಲು ಪುರಾಣಗಳಲ್ಲಿ ಇದಕ್ಕೆ ಅಶ್ವತ್ಥಪುರವೆಂದೂ, ರೋಣ, ಗದಗಗಳಿಗೆ ಕ್ರಮವಾಗಿ, ದ್ರೋಣಪುರ, ಕೃತಪುರ ಎಂದೂ ಹೆಸರುಗಳಿರುವುದನ್ನು ಇಲ್ಲಿ ಎತ್ತಿತೋರಿಸಬಹುದು. ಅದೇನೇ ಇದ್ದರೂ, ಪಾಂಡವರು ಶಸ್ತ್ರಾಸ್ತ್ರಗಳನ್ನು ಬನ್ನೀಗಿಡದಿಂದ ತಿರುಗಿ ತೆಗೆದುಕೊಂಡ ನೆನಪಿಗಾಗಿ ಬಹುಕಾಲದಿಂದಲೂ ಇಲ್ಲಿ ವಿಜಯದಶಮಿಯನ್ನು ಪ್ರತಿವರ್ಷವೂ ಆಚರಿಸಲಾಗುತ್ತಿದೆ. ಬಡಿಗೇರರು ಈ ಹಬ್ಬದಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ದ್ಯಾಮವ್ವನ ಗುಡಿಯ ಪಲ್ಲಕ್ಕಿಯನ್ನು ಒಯ್ದು, ಬನ್ನೀಗಿಡದಿಂದ ಉತ್ಸವವನ್ನು ಹೊರಡಿಸಿ ಅಗಸಿಯ ಹತ್ತಿರವಿರುವ ಹನುಮಂತದೇವರ ಗುಡಿಯವರೆಗೆ ಹೋಗಿ ತಿರುಗಿ ಬರುತ್ತಾರೆ. ಬನ್ನಿಮಾಂಕಾಳಿಗೂ ಹನುಮಂತನಿಗೂ ಏನು ಸಂಬಂಧವೆಂದು ಕೇಳಬೇಡಿ. ಪಲ್ಲಕ್ಕಿ ಹೋಗಿ ಬರುವುದಕ್ಕೆ ಅದೊಂದು ಅನುಕೂಲಕರವಾದ ಪಾಜೇಗಟ್ಟಿ ಅಷ್ಟೇ. ಈ ಪಲ್ಲಕ್ಕಿ ತಿರುಗಿಬಂದ ಮೇಲೆಯೇ ಊರಿನಲ್ಲಿ ಬನ್ನೀ ಕೊಡುವ ಓಡಾಟ ಆರಂಭವಾಗುತ್ತದೆ.

ಈ ಬನ್ನೀಗಿಡದ ಎಡಕ್ಕೆ ತಿಪ್ಪೆಯೊಂದರ ದಂಡೆಯ ಮೇಲೆ, ಒಂದು ಕಾಲಕ್ಕೆ ತೇರಿನ ಗಾಲಿಗಳಾಗಿರಬಹುದಾಗಿದ್ದ, ಹಳಿಬಂಡಿಯ ಗಾಲಿಗಳಂಥ ನಾಲ್ಕು ಗಾಲಿಗಳ ಚಟ್ಟು ಇತ್ತು. ಈ ರಥ ವಿರಾಟಪರ್ವದ್ದೇನೂ ಆಗಿರಲಿಕ್ಕಿಲ್ಲ. ಆದರೂ ಅದು ನಮಗೆ ನೆನಪಿದ್ದಾಗಿನಿಂದಲೂ ಅಲ್ಲೇ ಇತ್ತು. ಒಂದು ಮಾತು ಮಾತ್ರ ನಿಜ, ಆ ಮೊದಲು ಅದು ತೇರಾಗಿ ನಮ್ಮೂರ ಕಂಟೀಬಸಪ್ಪನ ಜಾತ್ರೆಯಲ್ಲಿಯ ಹಾಗೆ ಎಳೆದದ್ದನ್ನು ನಾವು ಎಂದೂ ನೋಡಿರಲಿಲ್ಲ. ಮಕ್ಕಳ ಪಾರ್ಕಿನಲ್ಲಿಯ ಕಬ್ಬಿಣದ ಸಳಿಗಳ ಆಟದ ರಚನೆಯಂತೆ ಮಕ್ಕಳು ಅದನ್ನು ಏರಿ ಇಳಿದು ಆಡಲು ಉಪಯೋಗಿಸುತ್ತಿದ್ದರು. ಆ ವರ್ಷ ಹೊತ್ತಿಗೆ ಸರಿಯಾಗಿ ಮಳೆಯಾಗಿ ಒಳ್ಳೆಯ ಬೆಳೆ ಬಂದಿದ್ದರಿಂದ ಊರೆಲ್ಲ ಉತ್ಸಾಹದಿಂದಿತ್ತು. ಬಡಿಗರಲ್ಲಿ ಯಾರಿಗೋ ಅದನ್ನು ತೇರು ಮಾಡಿ ಎಳೆಸಿಬಿಡಬೇಕೆಂಬ ಹುರುಪು ಬಂತು. ಸರಿ, ಹೇಳಿಕೇಳಿ ಬಡಿಗೇರ ಮಂದಿ. ತಮ್ಮ ಒಕ್ಕಲುಗಳಲ್ಲಿ ಕಟ್ಟಿಗೆಗಳನ್ನು ಬೇಡಿ ತಂದು, ಕಸುಬು ಗೊತ್ತಿದ್ದವರೆಲ್ಲ ಕೂಡಿ, ಹಗಲು - ರಾತ್ರಿ ಕೆಲಸ ಮಾಡಿ ತೇರು ಕಟ್ಟಿದರು. ಬಡಿಗೇರರ ತೇರು ಎಂದು ಎಲ್ಲರಿಗೂ ಗೊತ್ತಾಗಬೇಕಲ್ಲ ! ಅಭ್ರ್ಯಾಟ ಕಾಣಲಿ ಎಂದು ಸಾಕಷ್ಟು ಎತ್ತರವಾಗೇ ಕಟ್ಟಿದರು. ಅದರ ಮೇಲೆ ಕಂಟೀಬಸಪ್ಪನ ತೇರಿನ ದೊಡ್ಡ ಹಿತ್ತಾಳಿಯ ಕಳಸವನ್ನು ಇಟ್ಟರು.

ವಿಜಯದಶಮಿಯ ದಿನ ಸಾಯಂಕಾಲ ನಮ್ಮ ಕೊರವರ ಅಣ್ಣಪ್ಪನ ಸನಾದಿ, ಗೌಡರ ಓಣಿಯ ಕರಡೀಮಜಲು, ಕಂಠೀಬಸವೇಶ್ವರ ಕೃಪಾಪೋಷಿತ ಭಜನಾ ಮಂಡಳಿಯ ಭಜನೆ ಮೊದಲಾದ ಸಕಲ ವೈಭವದೊಂದಿಗೆ ತೇರು ಹೊರಟಿತು. ಬನ್ನೀಮಾಂಕಾಳಮ್ಮನಿಂದ

ಹೊರಟದ್ದ ತೇರು ದ್ಯಾಮವ್ವನ ಗುಡಿಯ ಮುಂದೆ ಹಾದು ಹೋಗಬೇಕು. ಅಲ್ಲೇ ಆತಂಕಕ್ಕೆ ಆರಂಭವಾಯಿತು. ಗುಡಿಯ ಮುಂದಿನ ಬಂಗಾಳೀ ಗಿಡದ ಟೊಂಗೆ ತೇರಿಗೆ ಅಡ್ಡ ಬಂತು. ತೇರನ್ನು ಆದಷ್ಟು ಭವ್ಯವಾಗಿ ಕಟ್ಟುವ ಹುರುಪಿನಲ್ಲಿ ಯಾರೂ ದಾರಿಯಲ್ಲಿಯ ಗಿಡಗಳ ಬಗ್ಗೆ ಆಲೋಚನೆಯನ್ನೇ ಮಾಡಿರಲಿಲ್ಲ. ಆಯಿತು, ಈಗ ಏನೂ ಮಾಡುವ ಹಾಗಿರಲಿಲ್ಲ. ಗಿಡವಂತೂ ಬಡಿಗೇರ ಓಣೆಯವರದೇ ಆಗಿತ್ತು. ಯಾರೋ ಗಿಡ ಹತ್ತಿ ಅಡ್ಡಿಯಾದ ಒಂದೆರಡು ಟೊಂಗೆಗಳನ್ನು ಕಡಿದು ಚೆಲ್ಲಿದರು. ತೇರು ದಾಟಿ ಬಂತು.

ಅಲ್ಲಿಂದ ಮುಖ್ಯ ರಸ್ತೆಯಲ್ಲೇ ಹಾದು ಅಗಸಿಯ ಹತ್ತಿರದ ಹನುಮಂತದೇವರ ಗುಡಿಯ ಕಡೆಗೆ ಹೋಗಬೇಕು. ಅರ್ಥಾತ್ ನಮ್ಮ ಓಣೆಯ ಹತ್ತಿರದ ಬೇವಿನ ಮರದ ಕೆಳಗೆ ಹಾಯ್ದು ಹೋಗಬೇಕು. ತೇರು ಅಲ್ಲಿಗೆ ಬಂದಾಗ ಮತ್ತೆ ಆತಂಕ ಬಂತು. ನಮ್ಮ ನಾಗರಪಂಚಮಿಯ ಜೋಕಾಲಿ ಕಟ್ಟುವ ದೊಡ್ಡ ಟೊಂಗೆಯೇ ಅಡ್ಡಿಯಾಯಿತು. ಬಡಿಗರೇನೋ ಕೊಡಲೀ ಹಿಡಿದುಕೊಂಡು ತಯಾರಾಗೇ ಇದ್ದರು. ಆದರೆ ಗುರುಬಸಮ್ಮ ಕೇಳುತ್ತಾಳೆಯೇ ? ದೊಡ್ಡ ದನಿ ತೆಗೆದು ಎಲ್ಲರನ್ನೂ ಹೆದರಿಸಿಬಿಟ್ಟಳು. ಜೊತೆಗೆ ಬಸಯ್ಯನೂ ಬಂದು ಸೇರಿಕೊಂಡ. ಬಸಯ್ಯ ಮಾಳಶೆಟ್ಟರ ಪಾರ್ಟಿಯ ಬೆಂಬಲಿಗ. ಬಡಿಗೇರರು ಗೌಡರ ಪಾರ್ಟಿಯ ಬೆಂಬಲಿಗರು. ಈ ಪ್ರಸಂಗ ಆ ಎರಡೂ ಮುಖ್ಯ ಪಾರ್ಟಿಗಳನ್ನು ಕಣಕ್ಕೆ ತರುವ ಸಂಭವವಿತ್ತು. ಮೇಲಾಗಿ ನಮ್ಮ ಓಣೆಯ ಹಿರಿಯರಿಗೂ ಅಂಥ ದೊಡ್ಡ ಟೊಂಗೆಯನ್ನು ಕಡಿಯುವದು ಮನಸ್ಸಿಗೆ ಬರಲಿಲ್ಲ. ಅದನ್ನು ಕಡಿದು ತೆಗೆದಿದ್ದರೆ ಇಡೀ ಮರದ ಸಮತೂಕ, ಸೌಂದರ್ಯಗಳೇ ಹಾಳಾಗುವಂತಿತ್ತು. ಹೀಗಾಗಿ ಯಾರೂ ಅದನ್ನು ಕಡಿಯಗೊಡಲಿಲ್ಲ. ಬದಲಾಗಿ ಸಾರಾಸಾರ ವಿಚಾರ ಮಾಡದೆ, ಅಷ್ಟು ಎತ್ತರವಾಗಿ ತೇರು ಕಟ್ಟಿದ ಬಡಿಗೇರ ಜನರ ತಿಳಿಗೇಡಿತನಕ್ಕಾಗಿ ಎಲ್ಲರೂ ಅವರನ್ನೇ ಬೈದರು. ಜೋಕಾಲಿಯ ಟೊಂಗೆ ಉಳಿದದ್ದಕ್ಕೆ ನಮಗೆ ಎಷ್ಟೋ ಸಮಾಧಾನವಾಯಿತು.

ಆದರೆ ಈಗೇನು ಮಾಡುವುದು ? ತೇರನ್ನು ಅರ್ಧ ದಾರಿಗೆ ಹಿಂತಿರುಗಿಸುವುದು ಅಮಂಗಳ. ಕಳಸವನ್ನು ತೆಗೆದಿದ್ದರೆ ಗಿಡದ ಆತಂಕವನ್ನು ನಿವಾರಿಸಬಹುದಾಗಿದ್ದರೂ ಅದೂ ನಿಷಿದ್ಧ. ಹಿರಿಯರು ವಿಚಾರ ಮಾಡಿದರು. ಕೊನೆಗೆ ಗಾಲಿಗಳ ಕೆಳಗಿನ ನೆಲವನ್ನೇ ಕಡಿದು ತಗ್ಗುಮಾಡಿ ತೇರನ್ನು ಮುಂದಕ್ಕೆ ತರಬೇಕಾಯಿತು. ಇಷ್ಟಾಗುವುದರಲ್ಲಿ ಹೊತ್ತು ಬಹಳ ಕಳೆದರೂ, ಗುರುಬಸಮ್ಮನ ಬೇವಿನಮರ ಈ ಅಪಾಯದಿಂದ ಪಾರಾಗಿ ಮುಕ್ಕಾಗದೇ ಉಳಿಯಿತು.

ನಮಗೆ ಗೊತ್ತಿದ್ದ ಹಾಗೆ ಗುರುಬಸಮ್ಮ ಅದನ್ನು ಎಂದೂ ಮುಕ್ಕಾಗಗೊಡಲಿಲ್ಲ. ಮಳೆಗಾಲದಲ್ಲಿ ಬೇವಿನಮರದ ಎಲೆ ನೀರು ಹಿಡಿದು ತೊಟ್ಟಿಕ್ಕತೊಡಗುತ್ತಿದ್ದವು. ಹತ್ತಿರದ ಮನೆಗಳ ಮಾಳಿಗೆಯ ಮೇಲೆ ಚಾಚಿಕೊಂಡಿದ್ದ ಟೊಂಗೆಗಳಿಂದ ನೀರು ತೊಟ್ಟಿಕ್ಕಿ, ಮಾಳಿಗೆಯ

ಮಣ್ಣು ನೆನೆದು, ಮನೆ ಸೋರುತ್ತಿದ್ದುದೂ ಇತ್ತು. ಅಂಥ ಮನೆಯವರು ಸಿಟ್ಟಿಗೆದ್ದು ಒದರಾಡುತ್ತ ಗುರುಬಸಮ್ಮನ ಪ್ರತಿಭಟನೆಯನ್ನು ಲೆಕ್ಕಿಸದೆ, ಟೊಂಗೆಯ ತುದಿಗಳನ್ನು ಮುರಿದುಹಾಕಲು ಯತ್ನಿಸಿದ್ದರು. ಆದರೆ ಗುರುಬಸಮ್ಮನ ಜೊತೆಗೆ ಬಸಯ್ಯನೂ ಬಂದು ನಿಂತದ್ದರಿಂದ ಹೆಚ್ಚಿನ ಅನಾಹುತ ಆಗಿರಲಿಲ್ಲ. ಓಣಿಯ ಹಿರಿಯರು ಸಹ ಈ ವಿಷಯದಲ್ಲಿ ಗುರುಬಸಮ್ಮನ ಪರವಾಗಿಯೇ ಇದ್ದರು.

ಹೀಗೆ ನಮ್ಮ ಬೇವಿನಮರವು ಹಲವು ಅಪಾಯಗಳನ್ನು ಎದುರಿಸಿ ಉಳಿದುಕೊಂಡಿತ್ತು. ದಿನ ಹೋಗುತ್ತಲೇ ಇದ್ದವು. ನಾವು ಬೇವಿನಮರದ ಕೆಳಗೆ ಗುಂಡಾ, ಕಣ್ಣುಮುಚ್ಚಾಟ, ಗುಡಮಿಂಚೋಟ ಆಡುವ ವಯಸ್ಸು ಕಳೆಯುತ್ತಾ ಬಂದ ಹಾಗೆ ಬೇವಿನಮರದ ಒಡನಾಟ ಕಡಿಮೆಯಾಗುತ್ತ ಬಂತು. ಅದರ ನೆರಳಿನ ಉಪಯೋಗ ನನಗೆ ಮೊದಲಿದ್ದಷ್ಟು ಈಗ ಅನಿಸಲಿಲ್ಲ. ಕನ್ನಡ ಏಳನೆಯ ಈಯತ್ತೆ ಮುಗಿಸಿ ಮಗ್ಗಲಿನ ನರೇಗಲ್ಲ ಹೈಸ್ಕೂಲಿಗೆ ಸೇರಿದ ಮೇಲೆ ನಮ್ಮ ಆಸಕ್ತಿಗಳು ಬದಲಾದವು, ಗೆಳೆತನಗಳೂ ಬದಲಾದವು. ಮೊದಲಿನಂತೆ ಮಧ್ಯಾಹ್ನದ, ರಾತ್ರಿಯ ಊಟವಾದದ್ದೇ ತಡ, ಬೇವಿನಮರದ ಕಟ್ಟೆಗೆ ಹೋಗಿ ಹರಟೆ ಹೊಡೆಯುತ್ತ ಕೂಡ್ರಬೇಕೆನ್ನುವ ಉತ್ಸುಕತೆ ಕಡಿಮೆಯಾಗುತ್ತ ಬಂತು. ಆದರೂ ಬೇವಿನಮರ ಇದ್ದೇ ಇತ್ತು .. ಇತ್ತೋ ಇಲ್ಲವೋ ಎನ್ನುವ ಹಾಗೆ, ಇದ್ದೂ ನಮ್ಮ ಮನಸ್ಸಿನ ಹೊರಮೈಗೆ ಗೊತ್ತಾಗದ ಹಾಗೆ.

ಈ ನಡುವೆ ಗುರುಬಸಮ್ಮನ ಮನೆಯಲ್ಲಿ ಬಹಳಷ್ಟು ಬದಲಾವಣೆಗಳು ನಡೆದಿದ್ದವು. ಚುಟ್ಟಾದ ಅಂಗಡಿಯವನ ಮಗ ಮೊದಲಿನಿಂದಲೂ ಬೇನೆಕೊಳಕ. ಅದಕ್ಕಾಗಿ ಅವನು ಮದುವೆಯನ್ನೇ ಆಗಿರಲಿಲ್ಲ. ಈಗ ಅಶಕ್ತತೆ ತೀರಾ ಹೆಚ್ಚಾಗಿ ನೆಲಪಟ್ಟಾಗಿದ್ದ. ಅಂಗಡಿಯ ಆದಾಯ ಬಂದಾಯಿತು. ಗಂಡ ತೀರಿಕೊಂಡು ಭಿಕ್ಷದ ಜೋಳ, ರೊಟ್ಟಿ ನಿಂತಿದ್ದವು. ಹೀಗಾಗಿ ಹೊಟ್ಟೆಗೂ ತೊಂದರೆಯಾಯಿತು. ಹುಬ್ಬಳ್ಳಿಯಲ್ಲಿದ್ದ ಟ್ರಕ್ಕಿನ ಡ್ರೈವರ್‌ನೂ, ಪ್ರಾಥಮಿಕ ಶಾಲೆಯ ಮಾಸ್ತರನೂ ತಮ್ಮ ಕುಟುಂಬಗಳೇ ತಮಗೆ ದೊಡ್ಡವಾಗಿ ತಾವೇ ತೊಂದರೆಯಲ್ಲಿದ್ದುದರಿಂದ, ಬರಬರುತ್ತ ಮನೆಗೆ ಹಣ ಕಳಿಸುವುದನ್ನು ಕ್ರಮೇಣ ಕಡಿಮೆ ಮಾಡುತ್ತ, ಕೊನೆಗೆ ನಿಲ್ಲಿಸಿಯೇ ಬಿಟ್ಟಿದ್ದರು. ಗುರುಬಸಮ್ಮ ತಾನೇ ಹೋಗಿ ಅವರಿಂದ ಹಣ ವಸೂಲು ಮಾಡಲು ಯತ್ನಿಸಿದಳು. ಅವರು ಆಕೆಯನ್ನು ತಮ್ಮಲ್ಲಿಟ್ಟುಕೊಡು ಹೊಟ್ಟೆ-ಬಟ್ಟೆ ನೋಡಿಕೊಳ್ಳಲು ತಯಾರಿದ್ದರು. ಆದರೆ ಆಕೆಗೆ ನಮ್ಮ ಊರನ್ನು ಬಿಟ್ಟುಹೋಗುವ ಮನಸ್ಸಿರಲಿಲ್ಲ. ಸಣ್ಣ ಮಗ ಬಸಯ್ಯ ಮಾತ್ರ ಇಂಥ ತೊಂದರೆಯಲ್ಲೂ ಬದಲಾಗಿರಲಿಲ್ಲ. ದುಡಿದು ತಂದದ್ದರಲ್ಲಿ ಸ್ವಲ್ಪ ಹಣ ಮನೆಗೆ ಕೊಡತೊಡಗಿದ್ದನಾದರೂ ಅದು ಯಾತಕ್ಕೂ ಸಾಲುತ್ತಿರಲಿಲ್ಲ. ಅವನದೂ ಮದುವೆಯಾಗಿ ಹೆಂಡತಿ ಮನೆಗೆ ಬಂದ ಮೇಲೆ, ಗಂಡನ ವ್ಯವಹಾರ ಮತ್ತು ಮನೆತನದ ಸ್ಥಿತಿಗತಿಗಳನ್ನು ನೋಡಿ ಆಕೆಯೂ ಸ್ವತಃ ಅವರಿವರ ಹೊಲಕ್ಕೆ

ಹೋಗಿ ಕೂಲಿ ಮಾಡಿ ತಂದದ್ದರಲ್ಲಿ ಹೇಗೋ ಸಂಸಾರವನ್ನು ನಿಭಾಯಿಸಿದಳು. ಆಕೆಗೂ ಮಕ್ಕಳು ಮರಿ ಬೆಳೆಯುತ್ತ ಹೋದಂತೆ ಕಷ್ಟವಾಯಿತು. ಇದ್ದ ಒಂದು ತುಂಡು ಹೊಲವನ್ನು ಬಸಯ್ಯ ಎಂದೋ ಬಡ್ಡಿಯಲ್ಲಿ ಹಾಕಿದ್ದ. ಅಸಲು ಕೊಟ್ಟು ತಿರುಗಿ ಹೊಲ ಬಿಡಿಸಿಕೊಳ್ಳುವ ಸಂಭವವೇ ಇಲ್ಲದಷ್ಟು ಅವನು ಅಸಹಾಯಕನಾದ. ಮನೆಯ ಕಟ್ಟೆಯ ಮೇಲೆ ಹೊದಿಸಿದ್ದ ನಾಲ್ಕಾರು ತಗಡುಗಳಿದ್ದವು. ಗುರುಬಸಮ್ಮ ಉಳಿದ ಮಕ್ಕಳ ಮನೆಗೆ ಹೋದ ಹೊತ್ತು ಸಾಧಿಸಿ, ಅವನ್ನು ತೆಗೆಸಿ ಮಾರಿಕೊಂಡು, ಅದರ ಜಾಗೆಯಲ್ಲಿ ಮಣ್ಣಿನ ಮಾಳಿಗೆ ಹಾಕಿಸಿದ. ಕೊನೆಗೆ ಅದನ್ನೇ ಒಂದು ಕೋಣೆಯಾಗಿ ಮಾಡಿ ಬಾಡಿಗೆ ಕೊಟ್ಟ. ಏನಾದರೂ ಮನೆಯವರ ಕಷ್ಟ ಹಾಗೇ ಉಳಿಯಿತು.

ದುಡಿಯಲಾರದೆ, ಕುಳಿತು ಉಣ್ಣುವ ತನ್ನೊಬ್ಬಳ ಹೊಟ್ಟೆ-ಬಟ್ಟೆಯಾದರೂ ಹೊರಗೆ ಹೋದರೆ ಉಳಿದವರಿಗಾದರೂ ಅನುಕೂಲವಾದೀತೇನೋ ಎಂದುಕೊಂಡು ಗುರುಬಸಮ್ಮ ಗಟ್ಟಿಮನಸ್ಸು ಮಾಡಿ ಮಾಸ್ತರನ ಊರಿಗೆ ಹೋದಳು. ಆದರೆ ಅಲ್ಲಿ ಎರಡು ತಿಂಗಳು ಸಹ ಇರಲು ಆಗಲಿಲ್ಲ. ಸೊಸೆಯ ಕೂಡ ನಡೆಯಲಿಲ್ಲವಷ್ಟೇ ಅಲ್ಲ, ಅಲ್ಲಿ ಊರಲ್ಲಿ ಸಣ್ಣ ಮಗನ ಮಕ್ಕಳು ಉಪವಾಸ-ವನವಾಸ ಮಾಡುವಾಗ ನಾನಿಲ್ಲಿ ಹೇಗೆ ಹೊಟ್ಟೆ ತುಂಬ ಉಣ್ಣಲಿ ಎಂದು ರಂಪಾಟ ಮಾಡತೊಡಗಿದಳಂತೆ. ಇದು ಮಾಸ್ತರನಿಗೂ ಬೇಸರವಾಯಿತು. ಇಂಥದರಲ್ಲಿ ಬಸಯ್ಯನೂ ಅವ್ವನನ್ನು ಬಿಟ್ಟು ಇರಲಾರೆ ಎಂದು ಅಲ್ಲಿಗೇ ಹೋದ. ಕೊನೆಗೆ ಎರಡು ಸೀರೆ ಕೊಡಿಸಿಕೊಂಡು ಕೈಯಲ್ಲಿ ಒಂದಿಷ್ಟು ರೂಪಾಯಿ ತೆಗೆದುಕೊಂಡು ತಿರುಗಿ ಊರಿಗೆ ಬಂದಳು. ಬೇವಿನಮರದ ಋಣ ಇನ್ನೂ ಉಳಿದಿತ್ತೆಂದು ಕಾಣುತ್ತದೆ.

ನಾನು ಹೈಸ್ಕೂಲು ಮುಗಿಸಿ ಕಾಲೇಜಿಗೆಂದು ಧಾರವಾಡಕ್ಕೆ ಹೋದೆ. ಸೂಟಿಯ ಕಾಲಕ್ಕಷ್ಟೇ ಊರಿಗೆ ಬರುತ್ತಿದ್ದೆ. ಬರಬರುತ್ತ ಊರಿನ ಸಂಪರ್ಕ ಕಡಿಮೆಯಾಗುತ್ತ ಹೋಯಿತು. ಅತ್ಯಂತ ಆತ್ಮೀಯರಾಗಿದ್ದ ಅಲ್ಲಿಯ ಮೊದಲಿನ ಗೆಳೆಯರೂ ಅಪರಿಚಿತರಾಗುತ್ತ ಬಂದರು. ಊರಿಗೆ ಬಂದರೆ ಮನೆಯ ಒಕ್ಕಲುತನದ ವಾತಾವರಣ ಒಗ್ಗದೆ ಉಸಿರು ಕಟ್ಟಿದಂತಾಗತೊಡಗಿತು. ಬೇವಿನಮರ ಈಗಲೂ ಇತ್ತು. ಆದರೆ ಅದರ ಬಗ್ಗೆ ಈಗ ಏನೂ ಅನ್ನಿಸುತ್ತಿರಲಿಲ್ಲ. ಅಗಸಿಯಿಂದ ಮನೆಗೆ, ಮನೆಯಿಂದ ಅಗಸಿಗೆ ಹೋಗುವಾಗ ಬರುವಾಗ ಅನಿವಾರ್ಯವಾಗಿ ಅದರ ಕೆಳಗೆ ನಡೆದು ಹೋದದ್ದೆಷ್ಟು, ಅಷ್ಟೇ. ಬಹಳವಾದರೆ, ಅಪರಿಚಿತರಿಗೆ ನಮ್ಮ ಮನೆಯ ಗುರುತು ಹೇಳುವಾಗ ಬೇವಿನಮರ ಸಹಾಯಕ್ಕೆ ಬರುತ್ತಿತ್ತು.

ಬೇವಿನಮರವೂ ಮುದಿಯಾಗುತ್ತ ಬಂದಿತ್ತೋ ಏನೋ ! ಅದರ ನೆರಳಿನ ತಂಪು, ಹಸಿರು ಎಲೆಗಳ ಗೋಪುರ, ಕಾಗೆಗಳ ಶಾಲೆ, ಚೈತ್ರದ ಹೂವಿನ ವಾಸನೆ - ಒಂದೂ ಈಗ ಮನಸ್ಸಿಗೆ ಮುಟ್ಟುತ್ತಿರಲಿಲ್ಲ.

ಈ ನಡುವೆ ನಮ್ಮ ಊರಿಗೆ ಇಲೆಕ್ಟ್ರಿಸಿಟಿ ಬಂತು. ಊರಿನ ಓಣಿಗಳ ಸರ್ವೇ ಆಗಿ, ಎಲ್ಲೆಲ್ಲಿ ಕಂಬ ಹಾಕಬೇಕು, ಎಲ್ಲೆಲ್ಲಿ ದೀಪ ಹಚ್ಚಬೇಕು ಎಂಬುದು ನಿಗದಿಯಾಯಿತು. ಊರಿನ ಮುಖ್ಯ ರಸ್ತೆಯಗುಂಟ ಬರುವ ಮೇನ್ ಲೈನು ನಮ್ಮ ಬೇವಿನಮರದ ಹತ್ತಿರ ಹಾಯ್ದು, ನೆಟ್ಟಗೆ ಗೌಡರ ಓಣಿಯ ಕಡೆಗೆ ಹೋಗುವುದಿತ್ತು. ಬೇವಿನಮರವಿದ್ದ ಜಾಗೆ ಎರಡು ರಸ್ತೆಗಳು ಕವಲೊಡೆಯುವ ಸ್ಥಳವಾದದ್ದರಿಂದ ಕಟ್ಟೆಯ ಎದುರಿಗೆ ಒಂದು ಕಂಬ ಹಾಕಿ ದೀಪ ಹಚ್ಚಿದರೆ ಎರಡೂ ರಸ್ತೆಗಳಿಗೆ ಬೆಳಕು ಬೀಳುತ್ತಿತ್ತು. ಅಲ್ಲಿಂದಲೇ ನಮ್ಮ ಮನೆಯ ಮುಂದಿನ ಮಾಳಶೆಟ್ಟರ ಓಣಿಗೆ ಒಂದು ಲೈನು ಎಳೆಯಬಹುದಾಗಿತ್ತು. ಅದೇ ಕಂಬದಿಂದ ಸುತ್ತಲಿನ ಮನೆಗಳಿಗೆ ಕನೆಕ್ಷನ್ ಕೊಡಬಹುದಾಗಿತ್ತು. ಹೀಗೆ ಯೋಚಿಸಿ, ಮೊದಲು ಕಂಬ ಹಾಕಿದರು. ಊರಿಗೆ ವಿದ್ಯುದ್ದೀಪ ಬರುತ್ತದೆಂದು ಎಲ್ಲರಿಗೂ ಸಡಗರ. ಪಂಚಾಯತಿಯವರು ವಿದ್ಯುತ್ ಇಲಾಖೆಯ ಕೆಲಸಗಾರರಿಗೆ ಎಲ್ಲ ರೀತಿಯಿಂದ ಸಹಾಯ ಮಾಡಿದರು.

ಆದರೆ ಕಂಬಗಳಿಗೆ ತಂತಿಗಳನ್ನೆಳೆಯುವಾಗ ಬೇವಿನಮರ ಸುತ್ತೂ ಕಡೆಗೆ ಅಡ್ಡ ಬರತೊಡಗಿತು. ಹೀಗೆ ಅಡ್ಡಬಂದ ಟೊಂಗೆಗಳನ್ನು ಕಡಿದು ಬಯಲು ಮಾಡದೆ ನಿರ್ವಾಹವೇ ಇರಲಿಲ್ಲ. ಗುರುಬಸಮ್ಮ ಸಾಕಷ್ಟು ಜಗಳಾಡಿದಳು. ಬಸಯ್ಯನೂ ಬಾಯಿಹಾಕಿದ. ಆದರೆ ವಿದ್ಯುತ್ ಇಲಾಖೆಯವರು ಯಾವ ಮಾತನ್ನೂ ಕೇಳಲಿಲ್ಲ. ಹಸಿ ಗಿಡಕ್ಕೆ ತಂತಿ ತಾಕಿದರೆ ಇಡೀ ಗಿಡದ ತುಂಬ ವಿದ್ಯುತ್ತು ಹರಿಯುತ್ತದೆಂದೂ ಗಿಡವನ್ನು ಎಲ್ಲೇ ಮುಟ್ಟಿದರೂ ಸಾವು ಖಂಡಿತವೆಂದೂ ಅವರು ತಿಳಿಸಿಹೇಳಿದ ಮೇಲೆ ಪಂಚಾಯತಿಯವರೂ, ಓಣಿಯ ಹಿರಿಯರೂ ಕೂಡಿಯೇ ಅಡ್ಡಬರುವ ಟೊಂಗೆಗಳನ್ನೆಲ್ಲ ಕಡಿಯಲು ಒಪ್ಪಿದರು. ಗುರುಬಸಮ್ಮನ ಪ್ರತಿಭಟನೆಯ ನಡುವೆಯೇ ಗಿಡದ ಟೊಂಗೆಗಳು ಒಂದೊಂದಾಗಿ ಕಡಿದುಬಿದ್ದವು. ಗಾಳಿಬಿಟ್ಟು ಟೊಂಗೆಗಳು ಅಲ್ಲಾಡಿದಾಗಲೂ ತಂತಿಗೆ ತಾಕದಂತೆ ನೋಡಿಕೊಳ್ಳಲು ತಂತಿಯ ಸಮೀಪದ ದೊಡ್ಡ ದೊಡ್ಡ ಟೊಂಗೆಗಳನ್ನು ಸಹ ಅವಸರದಲ್ಲಿ ಕೈಗೆ ಸಿಕ್ಕಂತೆ ಕಡಿದುಬಿಟ್ಟರು. ಅದರಲ್ಲಿ ನಮ್ಮ ನಾಗರಪಂಚಮಿಯ ಜೋಕಾಲಿಯ ಟೊಂಗೆಯೂ ಹೋಯಿತು. ಮುಂದೆ ಅಲ್ಲಿಯ ಕಂಬದಿಂದ ಸುತ್ತಲಿನ ಮನೆಗಳಿಗೆ ಕನೆಕ್ಷನ್ ಕೊಡುವಾಗ ಇನ್ನಷ್ಟು ಟೊಂಗೆಗಳನ್ನು ಕಡಿಯಬೇಕಾಯಿತು. ಬರಿಯ ತುದಿಗಳನ್ನು ಕಡಿದರೆ ಪುನಃ ಚಿಗಿತು ಮತ್ತೆ ತಂತಿಗೆ ತಾಕಬಹುದೆಂದು ಟೊಂಗೆಗಳ ಬುಡವನ್ನೇ ಕಡಿದಿದ್ದರು. ಇದೇ ಹೊತ್ತು ಸಾಧಿಸಿ ಮನೆಯ ಮೇಲಿನ ಟೊಂಗೆಗಳಲ್ಲಿ ನೀರು ಹಿಡಿದು ಮನೆ ಸೋರುತ್ತವೆಂದು ಗೊಣಗುತ್ತಿದ್ದವರೂ ತಮಗೆ ಬೇಕಾದ ಟೊಂಗೆಗಳನ್ನು ಮುರಿದು ಬಯಲು ಮಾಡಿಕೊಂಡರು.

ಇದರಲ್ಲಿ ಲಾಭವಾದದ್ದು ಬಸಯ್ಯನಿಗೆ. ಸ್ವತಃ ಕಡಿಯುವ ಶ್ರಮವಿಲ್ಲದೆ, ಕಡಿಸುವ ಖರ್ಚಿಲ್ಲದೆ ಅವನಿಗೆ ಬೇವಿನಮರದ ದೊಡ್ಡ ದೊಡ್ಡ ಟೊಂಗೆಗಳು ಮನೆಗೆ ಬಂದುಬಿದ್ದವು. ಒಕ್ಕಲುತನದ ಉಪಕರಣಗಳಿಗೆ, ಮನೆಯ ತೊಲೆ-ಜಂತಿಗಳಿಗೆ ಬರುವಂಥವನ್ನು ಆರಿಸಿ

ಮಾರಿಕೊಂಡ. ಸಣ್ಣ-ಪುಟ್ಟ ತುಂಡುಗಳನ್ನು ಉರುವಲಿಗಾಗಿ ಕಟ್ಟಿಗೆಯ ಅಡ್ಡೆಯವರಿಗೆ ಮಾರಿದ. ಮತ್ತೆ ನಾಲ್ಕು ದಿನ ಅವನ ಚೈನಿ ರಂಗಾಯಿತು.

ಹೀಗೆ ನಮ್ಮೂರಿನ ರಸ್ತೆಗಳಿಗೆ, ಮನೆಗಳಿಗೆ ವಿದ್ಯುತ್ ಬಂತು. ಆದರೆ ಅದಕ್ಕೆ ನಮ್ಮ ಬೇವಿನಮರವನ್ನು ಬಲಿ ಕೊಡಬೇಕಾಯಿತು. ಅಷ್ಟು ಸೊಂಪಾಗಿ, ವಿಶಾಲವಾಗಿ, ಸುತ್ತಲೂ ಟೊಂಗೆ ಚಾಚಿ, ಸದಾ ಹಸಿರು ಮುರಿಯುತ್ತ, ನಮ್ಮ ಓಣಿಗೇ ಶೋಭೆಯಾಗಿ ಮೆರೆಯುತ್ತಿದ್ದ ಮರ ಈಗ ಹೇಗಾಗಿಬಿಟ್ಟಿತು ಎನ್ನುತ್ತೀರಿ ?

ಈಗ ಅದರ ಮಹತ್ವದ ಟೊಂಗೆಗಳೆಲ್ಲ ಹೋಗಿ, ನೆಟ್ಟಗೆ ಮೇಲಕ್ಕೆ ಚಾಚಿದ ನಾಲ್ಕಾರು ಟೊಂಗೆಗಳು ಮಾತ್ರ ಉಳಿದಿದ್ದವು. ಅವು ಸಹ ಟಿಸಿಲೊಡೆದ ಟೊಂಗೆಗಳಿಗೆ ಬಿದ್ದ ಕೊಡಲಿಯ ಕಚ್ಚುಗಳಿಂದಾಗಿ ಜೀವರಸ ಸರಿಯಾಗಿ ಆಡದೆ ಅಲ್ಲಲ್ಲಿ ಒಣಗತೊಡಗಿದ್ದವು. ಕಡಿದು ಮೊಂಡಾದ ಟೊಂಗೆಗಳ ಬುಡಗಳು ಎಲೆ ವಿರಳವಾಗಿದ್ದ ಗಿಡದಲ್ಲಿ ಅಸಹ್ಯವಾಗಿ ಎದ್ದುಕಾಣತೊಡಗಿದ್ದವು. ಸುತ್ತೆಲ್ಲ ಎಲೆ ತುಂಬಿದ ಟೊಂಗೆಗಳಿದ್ದಾಗ ಮೈತುಂಬಿಕೊಂಡು ಮಟ್ಟಸವಾಗಿ, ಆಕಾರಬದ್ಧವಾಗಿ, ಭವ್ಯವಾಗಿ ಕಾಣುತ್ತಿದ್ದ ಮರ ಈಗ ಬರೀ ಎತ್ತರವಾಗಿ ನಿಂತುಕೊಂಡಿತ್ತು. ಕಾಂಪೋಜಿಷನ್ ಇಲ್ಲದ ಚಿತ್ರದಂತೆ ಸಮತೋಲವನ್ನು ಕಳೆದುಕೊಂಡು ವಿಕಾರವಾಗಿಬಿಟ್ಟಿತ್ತು. ಅದರ ನೆರಳಂತೂ ಈಗ ತೀರಾ ವಿರಳವಾಗಿತ್ತು. ಮೊದಲು ಮುಂಜಾನೆಯಿಂದ ಸಂಜೆಯವರೆಗೆ ಸೂರ್ಯ ಯಾವ ದಿಕ್ಕಿನಲ್ಲಿದ್ದರೂ ಎರಡೂ ರಸ್ತೆಗಳನ್ನು ತುಂಬಿಕೊಂಡಿರುತ್ತಿದ್ದದ್ದು ಈಗ ಸೂರ್ಯನ ದಿಕ್ಕಿಗೆ ಅಧೀನವಾಯಿತು. ನೆರಳಿಲ್ಲದೆ, ಮಕ್ಕಳ ಆಟಗಳಿಗೆ ಆಶ್ರಯ ತಪ್ಪಿತು. ಕಾಗೆಗಳ ಶಾಲೆಯೂ ಬಂದಾಗಿ ಮರ ಒಂಟಿಯಾಗಿ ಭಣಗುಡತೊಡಗಿತು.

ಈಚೆಗೆ ನಾನು ಆ ಮರದ ಚೆಲುವಿನ ಬಗ್ಗೆ ಅಷ್ಟು ಎಚ್ಚರದಿಂದ ಯೋಚಿಸಿರಲಿಲ್ಲ, ನಿಜ. ಆದರೂ, ಅದು ಇರುವವರೆಗೂ, ಅದು ಎಷ್ಟು ಚೆಂದವಾಗಿತ್ತು ಎಂಬುದನ್ನು ನನ್ನ ಮನಸ್ಸಿನ ಯಾವುದೋ ಮೂಲೆಯಲ್ಲಿ ಸ್ಪಷ್ಟವಾಗಿ ಗುರುತಿಸಿದ್ದೆ. ಅದನ್ನು ಎಚ್ಚರದಿಂದ ನೋಡದೆಯೂ ಅದರ ಚೆಲುವು ನನಗೆ ಕಾಣುತ್ತಿತ್ತು. ನೋಡಿ ನೋಡಿ ಆ ಚೆಲುವೇ ಒಂದು ರೂಢಿಯಾಗಿ, ಚಟವಾಗಿ,ಕ್ಲೀಷೆಯಾಗಿ ಜಡ್ಡುಗಟ್ಟಿತ್ತು, ಅಷ್ಟೇ. ಈಗ ಅದು ಒಮ್ಮೆಲೇ ವಿರೂಪಗೊಂಡ ಮೇಲೆ ಮೊದಲಿನ ಅತಿಪರಿಚಯದ ಅವಜ್ಞೆಯ ಮಾಯೆ ಹರಿದುಹೋಗಿ, ಮತ್ತೆ ಅದರ ಚೆಲುವಿನ ನೈಜ ಸ್ವರೂಪ ಪ್ರತೀತಿಯಾಯಿತು. ಯಾರಿಗೆ ಗೊತ್ತು .. ಕೆಲವು ದಿನಗಳ ಬಳಕೆಯ ನಂತರ ಮನಸ್ಸು ಈ ಕುರೂಪಕ್ಕೂ ಒಗ್ಗಿಹೋಗಿ, ಆ ಚೆಲುವಿನ ನೆನಪೂ ಮಾಸಿಹೋಗುತ್ತದೋ ಏನೋ ! ಆದರೆ ಯಾವಾಗಾದರೊಮ್ಮೆ ಊರಿಗೆ ಬರುತ್ತಿದ್ದ ನನಗೆ, ಅದರ ಮೊದಲಿನ ಚೆಲುವಿಗೂ ಈಗಿನ ಕುರೂಪಕ್ಕೂ ತಕ್ಷಣ ಹೋಲಿಕೆ ಏರ್ಪಟ್ಟು, ಈ ವಿಕಾರವನ್ನು ನೋಡಲು, ನೋಡಿ ಸಹಿಸಲು ಸ್ವಲ್ಪ ಕಷ್ಟವೇ ಆಯಿತು.

ಇಷ್ಟರಲ್ಲಿ ನನ್ನ ಕಾಲೇಜಿನ ವಿದ್ಯಾಭ್ಯಾಸ ಮುಗಿದು, ನೌಕರಿಗೆ ಸೇರಿಕೊಂಡು, ಊರಿಗೆ ದೂರವಾಗುತ್ತ ಹೋದೆ. ಮದುವೆಯಾಗಿ ಹೆಂಡತಿ-ಮಕ್ಕಳು ಜೀವಕ್ಕೆ ಅಂಟಿಕೊಂಡ ಮೇಲೆ ನನ್ನದೇ ಸಂಸಾರದಲ್ಲಿ ನಾನು ಮುಳುಗಿಬಿಟ್ಟೆ. ತಂದೆ - ತಾಯಿಗಳು ಬದುಕಿರುವವರೆಗೆ ಊರಿನ ಬಂಧನ, ಮೋಹ ಇನ್ನೂ ಒಂದಿಷ್ಟು ಉಳಿದಿತ್ತು. ಆಗಾಗ ಹೋಗಿಬರುತ್ತಲೂ ಇದ್ದೆ. ಅವರು ತೀರಿಕೊಂಡ ಮೇಲೆ ನನ್ನ ಮನೆಗೇ ನಾನು ಪರಕೀಯನಾದೆ. ತಮ್ಮಂದಿರು ಹೊಲ - ಮನೆ ಮಾಡಿಕೊಂಡಿದ್ದರು. ಅವರ ಹೆಂಡಿರು - ಮಕ್ಕಳಿಂದ ತುಂಬಿ ಮನೆ ಗಿಜಿಗಿಜಿ ಎನ್ನುತ್ತಿತ್ತು. ನನಗೆ ಮೊದಲಿನಿಂದಲೂ ಹೊಲ - ಒಕ್ಕಲುತನ ಅಂದರೆ ಏನೇನೂ ಆಸಕ್ತಿ ಇರಲಿಲ್ಲ. ಈಗ ಇದ್ದ - ಬಿದ್ದ ಆಸ್ತಿಯನ್ನೆಲ್ಲ ತಮ್ಮಂದಿರಿಗೇ ಬಿಟ್ಟು ನನ್ನ ನೌಕರಿಯನ್ನೇ ನೆಚ್ಚಿಕೊಂಡಿದ್ದೆ. ಹೀಗಾಗಿ ಈಚೆಗೆ ಎಂಟು - ಹತ್ತು ವರ್ಷ ಊರಿನ ಕಡೆಗೆ ಹೋಗಿರಲೇ ಇಲ್ಲ.

ಮೊನ್ನೆ ಆಕಸ್ಮಿಕವಾಗಿ ಊರಿನವರಿಂದ ಪತ್ರ ಬಂತು. ಎರಡು ವರ್ಷದ ಹಿಂದೆ ನಮ್ಮೂರಿನಲ್ಲೂ ಹೈಸ್ಕೂಲು ಪ್ರಾರಂಭವಾಗಿತ್ತು. ಈ ವರ್ಷದ ಗ್ಯಾದರಿಂಗಿಗೆ ನನ್ನನ್ನು ಮುಖ್ಯ ಅತಿಥಿಯೆಂದು ಬಹಳ ಆಗ್ರಹದಿಂದ ಆಮಂತ್ರಿಸಿದ್ದರು. ಬಹಳ ದಿನಗಳ ನಂತರ ಊರಿಗೆ ಹೋಗಿ ಬರಲು ಇದೊಂದು ಅವಕಾಶ ಸಿಕ್ಕಿತೆಂದು ಕಾರ್ಯಕ್ರಮಕ್ಕಿಂತ ಎರಡು ದಿನ ಮುಂಚೆಯೇ ಊರಿಗೆ ಹೋದೆ.

ಬಸ್‌ಸ್ಟ್ಯಾಂಡಿನಲ್ಲಿ ಇಳಿದೊಡನೆ ಊರ ಹಿರಿಯರು ಎದುರುಗೊಂಡರು. ಇಳಿದು ನೋಡಿದರೆ ಎಷ್ಟೆಲ್ಲಾ ಬದಲಾವಣೆ ! ಅಗಸಿಯ ಹಳೆಯ ಬಾಗಿಲು ಹೋಗಿ, ಅದಿದ್ದ ಸ್ಥಳದಲ್ಲಿ ಎರಡು ಎತ್ತರವಾದ ಕಲ್ಲಿನ ಕಂಬಗಳನ್ನು ಕಟ್ಟಿಸಿದ್ದರು. ಅದಕ್ಕೆ ಹೊಂದಿ ಸಾಲಾಗಿ ನಾಲ್ಕು ಚಹದ ಅಂಗಡಿ, ಒಂದು ಸೋಡಾ ಅಂಗಡಿ, ಒಂದು ದವಾಖಾನೆ, ಕಿರಾಣಿ ಅಂಗಡಿ, ವೃತ್ತಪತ್ರಿಕೆಗಳನ್ನು ಮಾರುವ ಡಬ್ಬಿಯ ಅಂಗಡಿ, ಕ್ಷೌರ, ಇಸ್ತ್ರಿ, ಚಪ್ಪಲಿ ರಿಪೇರಿ ಮಾಡುವವರ ಸಣ್ಣ-ಸಣ್ಣ ಅಂಗಡಿಗಳು. ಅನೇಕ ಅಂಗಡಿಗಳಿಗೆ ಇಂಗ್ಲೀಷು, ಕನ್ನಡ ಭಾಷೆಗಳಲ್ಲಿ ಹೆಸರಿನ ಬೋರ್ಡುಗಳು. ಬಲಗಡೆಯ ಕೆಂಪು ಕೆರೆಯ ದಂಡೆ ಮೇಲೆ ಎತ್ತರವಾದ ಟ್ಯಾಂಕು. ಅದೇನೆಂದು ಕೇಳಿದೆ, ಊರಿಗೆ ನಳ ಬಂದಿದೆ ಎಂದರು. ನನಗೆ ಆಶ್ಚರ್ಯ. ಹತ್ತಿರದ ಗದಗಿನಂಥ ದೊಡ್ಡ ಶಹರಕ್ಕೆ ಇನ್ನೂ ನಳ ಇಲ್ಲ. ಅಲ್ಲದೆ, ನಮ್ಮ ಊರಲ್ಲಿ ಓಣಿಗೊಂದು ಭಾವಿ. ಊರ ಹೊರಗೆ ದೊಡ್ಡ ಕೆಂಪು ಕೆರೆ. ನನಗೆ ಗೊತ್ತಿದ್ದ ಹಾಗೆ ಎಂಥ ಬರಗಾಲದಲ್ಲೂ ನಮ್ಮ ಊರಿಗೆ ನೀರಿನ ಅರಬು ಬಂದಿರಲಿಲ್ಲ. ಅಂಥದರಲ್ಲಿ ನಳ ಬಂದಿದೆ ಎಂದರೆ ಊರು ಬಹಳ ಮುಂದುವರಿದಿದೆ ಎನಿಸಿತು.

ಅಗಸಿಯ ಬಾಗಿಲಿಗೆ ಏನಾಯಿತು ? ಎಂದೆ. ಅದನ್ನು ಕೆಡವಿಸಿ, ಮೊದಲಿನಂತೇ ನಡುವೆ ದಾರಿ ಬಿಟ್ಟು, ಪಂಚಾಯತಿಗೆ ಎರಡಂತಸ್ತಿನ ಹೊಸ ಕಟ್ಟಡ ಕಟ್ಟಿಸಬೇಕೆಂಬ ಯೋಜನೆ ಸರಕಾರದಿಂದ ಮಂಜೂರಾಗಿತ್ತು. ಹಾಗೆಂದು ಇನ್ನೂ ತಕ್ಕಮಟ್ಟಿಗೆ ಗಟ್ಟಿಯಾಗೇ ಇದ್ದ

ಅಗಸಿಯನ್ನು ಕೆಡವಿಸಿದರು. ಆದರೆ ನಂತರ ಸರಕಾರದ ವ್ಯವಹಾರದಲ್ಲಿ ಎಲ್ಲಿಯೋ ಅಡಚಣೆ ಬಂದು. ಆ ಯೋಜನೆಯನ್ನು ಕೈಬಿಡಬೇಕಾಯಿತಂತೆ. ಕೆಡವಿಸಿದ ಅಗಸಿಯ ಸ್ಮಾರಕವೆಂದು ಈ ಕಂಬಗಳನ್ನು ಕಟ್ಟಿಸಿದರಂತೆ. ಈಗ ಹಳೆಯ ಚಾವಡಿಯನ್ನೇ ಸರಿಯಾಗಿ ರಿಪೇರಿ ಮಾಡಿಸಿ, ನವೀಕರಿಸಿ ಪಂಚಾಯತಿಗೆ ಕೊಟ್ಟಿದ್ದರು.

ಬಸ್‌ಸ್ಟ್ಯಾಂಡಿನಿಂದ ನೆಟ್ಟಗೆ ಹೈಸ್ಕೂಲಿಗೆ ಹೋಗಿ, ಚಹ ತೆಗೆದುಕೊಂಡು, ನಂತರ ನಮ್ಮ ಮನೆಗೆ ಹೋಗುವುದಿತ್ತು. ಮೊದಲಿನ ಅಗಸಿ ಇದ್ದ ಜಾಗವನ್ನು ದಾಟಿ, ಮುಖ್ಯ ರಸ್ತೆಗೆ ಕಾಲಿಡುತ್ತಲೇ ನಮಗೆ ಎದುರಾದದ್ದು ರಜ್ಜು. ಆ ರಜ್ಜಿನಲ್ಲಿ ಸಣ್ಣಗೆ ಹರಿಯುತ್ತಿದ್ದ ನೀರು. ನೋಡುವಷ್ಟರಲ್ಲಿ ಈ ರಜ್ಜಿನ ಮೂಲ ಅಲ್ಲೇ ಕಾಣುತ್ತಿದ್ದ ಒಂದು ಸಾರ್ವಜನಿಕ ನಳದ ಬಳಿ ಇದೆಯೆಂದು ಅರ್ಥವಾಯಿತು. ಈ ರಜ್ಜಿನ ಧಾರೆಯನ್ನು ಕಿರಿದಾಗಿದ್ದಲ್ಲಿ ದಾಟುತ್ತ, ಅಗಲವಾಗಿದ್ದಲ್ಲಿ ಜಿಗಿಯುತ್ತ, ಇನ್ನೂ ಅಗಲವಾಗಿದ್ದಲ್ಲಿ ಅನಿವಾರ್ಯವಾಗಿ ತುದಿಗಾಲಿನಲ್ಲಿ ತುಳಿಯುತ್ತ ಮುಂದೆ ನಡೆದೆವು. ಈ ರಜ್ಜಿನಲ್ಲಿ ದಿನವೂ ಅಡ್ಡಾಡಿ ರೂಢಿಯಾಗಿದ್ದ ಊರ ಹಿರಿಯರು ಎಲ್ಲಿ ಜಿಗಿಯಬೇಕು, ಎಲ್ಲಿ ದಾಟಬೇಕು ಎಂಬ ಬಗ್ಗೆ ಆಗಾಗ ನನಗೆ ಅಮೂಲ್ಯ ಸಲಹೆಗಳನ್ನು ಕೊಟ್ಟು ಸಹಾಯ ಮಾಡಿದರು.

ಹೈಸ್ಕೂಲನ್ನು ನೀರ ಅಗಸಿಯ ರಸ್ತೆಯಲ್ಲಿದ್ದ ಬಾವಾನ ಮಹಲಿನಲ್ಲಿ ನಡೆಸುತ್ತಿದ್ದರು. ಹೊರಗೆ ದೊಡ್ಡ ಅಕ್ಷರಗಳಿಂದ ಬರೆಸಿದ್ದ ಬೋರ್ಡು ಇತ್ತು. ಮಹಲಿನ ಆಕಾರದಲ್ಲಿ ಕೆಲವು ಬದಲಾವಣೆಗಳಾಗಿದ್ದವು. ಮೊದಲು ಈ ಮನೆಗೆ ಸಾಕಷ್ಟು ಗಾಳಿ ಬೆಳಕು ಬರಲು ಕಿಡಕಿ, ಬೆಳಕಿಂಡಿಗಳಿರಲಿಲ್ಲ. ಈಗ ಹೈಸ್ಕೂಲಿಗೆ ಎಂದ ಮೇಲೆ ಗಾಳಿ, ಬೆಳಕು ಬೇಕೇ ಬೇಕಲ್ಲ ! ಅದಕ್ಕಾಗಿ ಮಹಲಿನ ಐದಾರು ಫೂಟು ಅಗಲದ ಗೋಡೆಗಳನ್ನು ಒಡೆದು ಅಲ್ಲಲ್ಲಿ ಕಿಡಕಿಗಳನ್ನು ಹಚ್ಚಿಸಿದ್ದರು. ಹಾಗೆ ಒಡೆಯುವಾಗ ಮೇಲಿನ ಭಾರದಿಂದ ಗೋಡೆಗಳಲ್ಲಿ ಉದ್ದುದ್ದ ಬಿರುಕುಗಳು ಕಾಣಿಸಿಕೊಂಡಿದ್ದವು. ಆ ಹಳೆಯ ಮನೆಯ ಶೈಲಿಗೂ ಹೊಸದಾಗಿ ಹಚ್ಚಿದ ಕಿಡಕಿಗಳಿಗೂ ಹೊಂದಾಣಿಕೆ ಆಗದೆ ವಿಚಿತ್ರವಾಗಿ ಕಾಣುತ್ತಿದ್ದವು. ಒಳಗಿನ ಕೋಣೆಗಳಲ್ಲಿ ಹೀಗೆ ಕಿಡಕಿಗಳ ಮೂಲಕ ಬಂದ ಹೊಸ ಬೆಳಕು ಸಹ ಅಲ್ಲಿಯ ವಾತಾವರಣಕ್ಕೆ ಪರಕೀಯವಾಗಿ ಕಾಣಿಸಿತು. ಆದರೂ ಊರಿಗೆ ಹೈಸ್ಕೂಲು ಆದದ್ದು ಒಳ್ಳೆಯದಾಯಿತೆಂದು ಹೇಳಿದೆ. ನಾವು ಸಣ್ಣವರಿದ್ದಾಗ ನರೇಗಲ್ಲಿನ ಹೈಸ್ಕೂಲಿಗೆ ದಿನವೂ ಮೂರು ಮೈಲು ನಡೆದು ಹೋಗಬೇಕಾಗಿದ್ದ ಕಷ್ಟವನ್ನು ನೆನಪಿಸಿಕೊಂಡೆ. ನಮ್ಮ ಕಾಲದಲ್ಲಿ ಇದ್ದಂತೆ ಈಗಿನ ಹುಡುಗರಲ್ಲಿ ಕಷ್ಟಪಟ್ಟು ಕಲಿತು ಮುಂದೆ ಬರಬೇಕೆನ್ನುವ ಪ್ರವೃತ್ತಿ ಇಲ್ಲ - ಎಂದು ಹಿರಿಯರು ಹೇಳಿದರು.

ಚಹಾ ಕುಡಿದು ಅಲ್ಲಿಂದ ಮತ್ತೆ ಮುಖ್ಯರಸ್ತೆಗೆ ಬಂದೆವು. ಮೊದಲಿನ ಚಾವಡಿ ಅಥವಾ ಈಗಿನ ಪಂಚಾಯತಿ ಇದ್ದಲ್ಲಿಗೆ ಬಂದಾಗ ರಜ್ಜು ಕ್ರಮೇಣ ಅಗಲವಾಗುತ್ತ ಬಂದು ಈಗ ರಸ್ತೆಯ ಒಂದು ಅಂಚಿನಿಂದ ಇನ್ನೊಂದು ಅಂಚಿನವರೆಗೆ ಏಕಾಗಿಬಿಟ್ಟಿತ್ತು. ರಸ್ತೆಗೆ ಅಡ್ಡವಾಗಿ

ಬಂದು ಕೂಡುವ ಸಂದಿಗಳೆಲ್ಲ ತಮ್ಮ ಪಾಲಿನ ರಜ್ಜುನೀರನ್ನು ತಂದು ಮುಖ್ಯ ರಸ್ತೆಗೆ ಕೂಡಿಸಿದ್ದವು. ಮುಖ್ಯ ರಸ್ತೆಯ ಪ್ರತಿಯೊಂದು ಮನೆಯ ಬಚ್ಚಲು ಹರಿಯೂ ಅಷ್ಟಿಷ್ಟು ನೀರು ತಂದು ಸೇರಿಸಿದ್ದವು. ರಸ್ತೆಯಲ್ಲಿ ಅಲ್ಲಲ್ಲಿ ತಗ್ಗುಗಳಿದ್ದಲ್ಲಿ ಅಲ್ಲಲ್ಲೇ ದೊಡ್ಡ ಮಡುವು ನಿಂತಿದ್ದವು. ಅನೇಕ ಕಡೆ ನೀರು ಪಾಚಿಗಟ್ಟಿ ನಾರುತ್ತಿತ್ತು. ನಿಂತ ನೀರಿನ ಮೇಲೆ ಗುಂಗಾಡುಗಳು ತೆಪ್ಪಗಟ್ಟಿ ತೇಲುವುದು ಸ್ಪಷ್ಟವಾಗಿ ಕಾಣುತ್ತಿತ್ತು.

ನಮ್ಮ ಊರಿನಲ್ಲಿ ಹಿಂದೆಂದೂ ಹೀಗೆ ರಸ್ತೆಯಲ್ಲಿ ನೀರು ನಿಲ್ಲುತ್ತಿರಲಿಲ್ಲ. ಊರನ್ನು ಮಸಾರಿಯ ಗಟ್ಟಿ ನೆಲದಲ್ಲಿ ಆರಿಸಿ ಕಟ್ಟಿದ್ದರಿಂದ ಮಳೆ ಬಂದರೂ ನೀರು ತಕ್ಷಣ ಹರಿದು ಹೋಗಿ ನೆಲ ಒಣಗಿಬಿಡುತ್ತಿತ್ತು. ಉದ್ದಕ್ಕೂ ಹಳಕು-ಹಳಕಾದ ಸಣ್ಣನೆಯ ಉಸುಕು ತುಂಬಿರುತ್ತಿತ್ತು. ಆ ಉಸುಕಿನಲ್ಲಿ ನಾವು ಸಣ್ಣವರಿದ್ದಾಗ ಕಾಲು ಹುಗಿದು ಮನೆ ಮಾಡಿದ್ದಿದೆ; ಪೆಟ್ಟಾಗದಂತೆ ಗೆಳೆಯರೊಂದಿಗೆ ಕುಸ್ತಿ ಆಡಿದ್ದಿದೆ; ಬೇವಿನಮರದ ಕಟ್ಟೆಯ ಕೆಳಗೆ ಉಸುಕಿನ ರಾಶಿ ಮಾಡಿ, ಕಟ್ಟೆಯ ಮೇಲಿಂದ ರಾಶಿಯಲ್ಲಿ ಜಿಗಿದಾಡಿದ್ದಿದೆ. ನೀರು ಮಾತ್ರ ಎಂದೂ ನಿಲ್ಲುತ್ತಿರಲಿಲ್ಲ.

ಇದೆಲ್ಲ ಹೀಗೇಕಾಯಿತೆಂದು ಜೊತೆಗಿದ್ದವರನ್ನು ವಿಚಾರಿಸಿದೆ. ಎಲ್ಲಾ ನಳದ ಪ್ರಭಾವ ಎಂದರು. 'ಊದುವುದನ್ನು ಕೊಟ್ಟು ಒದರುವುದನ್ನು ತೆಗೆದುಕೊಂಡಂತಾಗಿದೆ' ಎಂದರು. ಮುಂಚೆ ಭಾವಿಯಿಂದ ನೀರನ್ನು ಸೇದಿ ಹೊತ್ತು ತರಬೇಕಾಗುತ್ತಿತ್ತು. ಈಗ ಧಾರಾಳವಾಗಿ ಮನೆಗೇ ನೀರು ಬರುತ್ತಿರುವುದರಿಂದ ನೀರಿನ ಬಳಕೆ ಹೆಚ್ಚಾಗಿದೆ. ಮೊದಲು ಅರಿವೆ ಒಗೆಯಲು ಊರ ಹೊರಗಿನ ಕೆರೆ, ತೋಟದ ಭಾವಿಗಳಿಗೆ ಹೋಗುತ್ತಿದ್ದವರು ಈಗ ಮನೆಯ ಮುಂದೇ ಒಗೆದುಕೊಳ್ಳತೊಡಗಿದ್ದಾರೆ. ಬಸ್‌ಸ್ಟ್ಯಾಂಡಿನಲ್ಲಿಯಷ್ಟೇ ಅಲ್ಲದೆ, ಮುಖ್ಯ ರಸ್ತೆಯ ಗುಂಟ ಆರಂಭವಾಗಿದ್ದ ಚಹಾದ ಅಂಗಡಿಗಳಲ್ಲಿ ಕಪ್ಪು-ಬಸಿ ತೊಳೆದು ನೀರನ್ನು ರಸ್ತೆಗೇ ಬಿಡತೊಡಗಿದ್ದಾರೆ. ಸಾರ್ವಜನಿಕ ನಳಗಳಲ್ಲಿ ನೀರಿನ ಚೆಲ್ಲಾಟ ಯಾವಾಗಲೂ ಹೆಚ್ಚೇ. ಹೀಗಾಗಿ ರಸ್ತೆಗಳಲ್ಲಿ ಸತತವಾಗಿ ನೀರು ಹರಿಯತೊಡಗಿತು. ಹೇಗೂ ನೀರು ಹರಿಯುತ್ತದಲ್ಲ ಎಂದುಕೊಂಡು ಮೊದಲು ಇಂಗುಬಚ್ಚಲಗಳಿದ್ದ ಮನೆಯವರು ಸಹ ಬಚ್ಚಲ ನೀರನ್ನು ರಸ್ತೆಗೇ ಬಿಟ್ಟರು. ಇದೆಲ್ಲದರ ಒಟ್ಟು ಪರಿಣಾಮ ಈ ರಜ್ಜು. ಇದನ್ನು ತಡೆಯಲು ಪಂಚಾಯತಿಯವರಿಗೆ ಸಾಧ್ಯವಾಗಿರಲಿಲ್ಲ. ಯಾರಿಗೆಂದು ಹೇಳಬೇಕು ?

ಇದಕ್ಕೆ ಒಂದೇ ಉಪಾಯವೆಂದರೆ, ನೀರು ನಿಲ್ಲದಂತೆ ಸರಿಯಾಗಿ ಹರಿದು ಹೋಗಲು ಗಟಾರ ಮಾಡಿಸಬೇಕು. ಆದರೆ ಅದಕ್ಕೆ ಬೇಕಾದ ಹಣ ಇರಲಿಲ್ಲ. ಹಾಗೆ ನೋಡಿದರೆ ಊರಲ್ಲಿ ಬೇಕಾದಷ್ಟು ಭಾವಿಗಳಿದ್ದುದರಿಂದ ನಳದ ಅವಶ್ಯಕತೆಯೇ ಇರಲಿಲ್ಲ. ಈಗ ಐದಾರು ವರ್ಷಗಳ ಹಿಂದೆ ಪಂಚಾಯತಿಯದೊಂದು ನ್ಯಾಯ ನಡೆದು, ಮೂರು - ನಾಲ್ಕು ವರ್ಷ ಪಂಚಾಯತಿಯ ಎಲ್ಲ ಕೆಲಸಗಳೂ ಬಂದಾಗಿದ್ದವು. ಹೀಗಾಗಿ ಖರ್ಚಾಗದೆ ಒಂದಿಷ್ಟು ಹಣ ಕೂಡಿಬಿತ್ತು. ಅದೇ

ಹೊತ್ತಿಗೆ ಊರಿನ ಅಳಿಯರೊಬ್ಬರು ಜಿಲ್ಲೆಯ ಗ್ರಾಮೀಣ ನೀರು ಸರಬರಾಜು ಯೋಜನೆಯ ಅಧಿಕಾರಿಗಳಾಗಿ ಬಂದರು. ಅವರು ಊರವರನ್ನು ಒತ್ತಾಯಿಸಿ ಈ ಯೋಜನೆಯನ್ನು ಮಂಜೂರು ಮಾಡಿಸಿದರು. ಪರಿಣಾಮವಾಗಿ ಈಗ ಊರಿನ ತುಂಬ ಅಡ್ಡಾಡಲು ಬರದಷ್ಟು ರಜ್ಜು, ಗುಂಗಾಡುಗಳ ಕಾಟ. ನಳದ ಯೋಜನೆಗೂ ಗಟಾರದ ಯೋಜನೆಗೂ ಸರಕಾರಿ ಇಲಾಖೆಗಳಲ್ಲಿ ಸಂಬಂಧವಿಲ್ಲ. ನಳದ ಯೋಜನೆ ಅನಿವಾರ್ಯ ಸೇವೆಗಳಿಗೆ ಸಂಬಂಧಿಸಿದ್ದು. ಗಟಾರದ ಯೋಜನೆ ಹೊಟ್ಟೆ ತುಂಬಿದವರಿಗೆ. ಅಂತೂ ಇಂತೂ ನಳ ಬಂತು, ಗಟಾರ ಬರಲಿಲ್ಲ.

ಹಳೆಯ ಚಾವಡಿ ಈಗ ಗುರುತು ಸಿಗದಷ್ಟು ಬದಲಾಗಿದೆ. ಪಂಚಾಯತಿಯ ಆಫೀಸಿಗೆ ಕುರ್ಚಿ-ಮೇಜು ಬಂದಿವೆ.

ಅದರ ಹತ್ತಿರವೇ ಇದ್ದ ವೆಂಕಟರಮಣನ ಗುಡಿ ಈಗ ಇಲ್ಲ. ಪೂರ್ತಿ ಕುಸಿದು ಕೇವಲ ಕಲ್ಲು-ಮಣ್ಣುಗಳ ರಾಶಿ ಮಾತ್ರ ಬಿದ್ದಿದೆ. ದೇವರು ಎಲ್ಲಿದೆಯೋ ಪತ್ತೆಯೇ ಇಲ್ಲ.

ಪಂಚಾಯತಿಯನ್ನು ದಾಟಿ ಮುಂದಕ್ಕೆ ಬಂದರೆ, ಅದರ ಬೆನ್ನಿಗೆ ಹತ್ತಿಯೇ ಹಾಳುಬಿದ್ದ ಮಲ್ಲಿಕಾರ್ಜುನ ದೇವರ ಗುಡಿ ಬರಬೇಕಾಗಿತ್ತು. ಹಿಂದೆಯೇ ಬಿದ್ದು ಹೋಗಿದ್ದ ಆ ಗುಡಿ ಈಗ ವೆಂಕಟರಮಣನ ಗುಡಿಗಿಂತ ಹೀನಾವಸ್ಥೆಯಲ್ಲಿರಬೇಕು. ಆದರೆ ಅದರ ಜಾಗದಲ್ಲಿ ಈಗ ಕಾಂಕ್ರೀಟಿನ ಎರಡಂತಸ್ತಿನ ಹೊಸ ಕಟ್ಟಡ ಎದ್ದಿದೆ. ಅದು ಅಕ್ಕನ ಬಳಗದ ಕಟ್ಟಡ. ಹಿಂದಿನ ಮಲ್ಲಿಕಾರ್ಜುನ ಗುಡಿಯ ಈಶ್ವರಲಿಂಗವನ್ನು ಒಳಗೆ ಇಟ್ಟು, ಅದರ ಜೊತೆಗೆ ಅಕ್ಕಮಹಾದೇವಿಯ ಅಮೃತ ಶಿಲೆಯ ಮೂರ್ತಿಯೊಂದನ್ನು ನಿಲ್ಲಿಸಿದ್ದಾರೆ. ಇಲ್ಲಿ ಮುಂಜಾನೆ ಬಾಲವಾಡಿಯ ಶಾಲೆ ನಡೆಯುತ್ತದೆ; ಮಧ್ಯಾಹ್ನ ಹೆಣ್ಣುಮಕ್ಕಳ ಹೊಲಿಗೆಯ ಕ್ಲಾಸು ಇತ್ಯಾದಿ.

ಇದನ್ನು ದಾಟಿದ ಕೂಡಲೇ ಎದುರಿಗೆ ಬೇವಿನಮರ ಮತ್ತು ಅದರ ಕಟ್ಟೆ ಕಾಣಬೇಕು. ಆದರೆ ರಸ್ತೆಯ ಉದ್ದಗಲಕ್ಕೂ ತುಂಬಿದ ರಜ್ಜಿನಲ್ಲಿ ಪ್ಯಾಂಟಿನ ತೋಳುಗಳನ್ನು ಮೇಲಕ್ಕೆ ಎತ್ತಿ ಹಿಡಿದುಕೊಂಡು, ಹೆಜ್ಜೆ ಇಡಲು ಸ್ವಲ್ಪವಾದರೂ ಗಟ್ಟಿಯಾಗಿರಬಹುದಾದ ಜಾಗೆಗಳನ್ನು ಹುಡುಕುತ್ತ, ಕೆಲವು ಸಲ ಜಿಗಿಯುತ್ತ ಕೆಲವು ಸಲ ಒಂದು ಕಾಲನ್ನು ಊರಿ ಇನ್ನೊಂದನ್ನು ಎಲ್ಲಿಡಬೇಕೆಂದು ಯೋಚಿಸುತ್ತ ಜೋಲಿಯನ್ನು ಸಂಭಾಳಿಸಲು ಕಸರತ್ತು ಮಾಡುವ ಭರಾಟೆಯಲ್ಲಿ ಆ ಮರದ ಕಡೆಗೆ ಲಕ್ಷ್ಯವೇ ಹೋಗಿರಲಿಲ್ಲ. ಒಮ್ಮೆಲೆ ಕವಲು ದಾರಿಗೆ ಬಂದಾಗ ನೋಡಿದರೆ ಅಲ್ಲಿ ಬೇವಿನಮರವೂ ಇಲ್ಲ, ಕಟ್ಟೆಯೂ ಇಲ್ಲ. ಮೊದಲು ಕಟ್ಟೆ ಇದ್ದ ಜಾಗದಲ್ಲಿ ಈಗ ಒಂದು ಸಾರ್ವಜನಿಕ ನಳ ಮಾತ್ರ ಇದೆ.

ಬಹಳ ದಿನಗಳಿಂದಲೂ ಆ ಮರವನ್ನು ಆ ಕೂಡುದಾರಿಯಲ್ಲಿ ನೋಡುತ್ತ ಬಂದಿದ್ದ ನನ್ನ ಕಣ್ಣು - ಮನಸ್ಸುಗಳಿಗೆ ಆ ದೃಶ್ಯ ಒಂದು ಬಗೆಯ ಅಭ್ಯಾಸವಾಗಿ ಬಿಟ್ಟಿತ್ತು. ಆ ಮರವನ್ನು

ಎಚ್ಚರದಿಂದ ಗಮನಿಸಿ ನೋಡದಿದ್ದರೂ, ಅದು ಅಲ್ಲಿರುವವರೆಗೆ ಎಲ್ಲಾ ಸರಿಯಾಗಿಯೇ ಇದೆ ಎಂಬ ಭಾವನೆ ಇತ್ತು. ಆ ಬೇವಿನಮರ ಮತ್ತು ಕೂಡುದಾರಿಗಳ ನಡುವೆ ನನ್ನ ಮನಸ್ಸು ಒಂದಕ್ಕೊಂದು ಎಂಥ ಸಂಬಂಧವನ್ನು ಬೆಸೆದುಬಿಟ್ಟಿತ್ತೆಂದರೆ, ಈ ಮರವಿಲ್ಲದ ಕೂಡುದಾರಿಯನ್ನು ಒಪ್ಪಲಿಕ್ಕೆ ಅದು ಸಿದ್ಧವಾಗಿರಲಿಲ್ಲ. ಈ ಹಿಂದೆ ಊರಿಗೆ ವಿದ್ಯುತ್ ಬಂದಾಗ ಟೊಂಗೆಗಳನ್ನು ಕಳೆದುಕೊಂಡು ಮರ ವಿರೂಪವಾಗಿ, ನೋಡಿದಾಗಲೆಲ್ಲ ಕಣ್ಣಿಗೆ ಅಳುಕುತ್ತಿತ್ತು. ಆದರೂ ಅದು ಇನ್ನೂ ಅಲ್ಲಿ ಇತ್ತೆಂಬ ಸಂಗತಿಯಿಂದಾಗಿಯೋ ಏನೋ, ಒಮ್ಮೆಲೆ ಇಷ್ಟು ಭಣಭಣ ಅನಿಸಿರಲಿಲ್ಲ. ಆ ಮರಕ್ಕೆ ಕ್ರಮೇಣ ಒದಗಿದ ಅವಸ್ಥಾಂತರಗಳು ದೀರ್ಘಕಾಲಾವಧಿಯಲ್ಲಿ ಹಂಚಿ ಹೋಗಿರಬಹುದಾದ್ದರಿಂದ, ಅದನ್ನೆಲ್ಲ ನೋಡುತ್ತ ಬಂದಿದ್ದ ಊರಿನ ಜನರಿಗೆ ಆ ಮರವಿಲ್ಲದ್ದು ಒಂದು ವಿಶೇಷವೆಂದು ಬಹುಶಃ ಅನಿಸಿರಲಿಕ್ಕಿಲ್ಲ. ಈ ಬದಲಾವಣೆಗೆ ಅವರ ಮನಸ್ಸೂ ಒಗ್ಗಿಹೋಗಿರಲು ಸಾಧ್ಯ. ಆದರೆ ಅನೇಕ ವರ್ಷಗಳ ನೆಲ, ಒಮ್ಮಿಂದೊಮ್ಮೆಲೆ ಅದು ಇಲ್ಲದುದನ್ನು ನೋಡಿದ ನನಗೆ ನನ್ನ ಸುತ್ತಲಿನ ನೆಲ, ಆ ಕೂಡುದಾರಿ, ಅಲ್ಲಿಂದ ಕವಲೊಡೆದು ಬಲಕ್ಕೆ ತಿರುಗುವ ನಮ್ಮ ಮನೆಯ ಹಾದಿ, ಹುಟ್ಟಿ ಬೆಳೆದ ಮನೆ ಎಲ್ಲ ಅಪರಿಚಿತವೆನಿಸಿಬಿಟ್ಟವು.

ಅಲ್ಲಿದ್ದ ಬೇವಿನಮರಕ್ಕೆ ಏನಾಯಿತೆಂದು ಕೇಳಿದೆ. ನಳ ಬಂತಲ್ಲ, ಆಗ ಆಯಕಟ್ಟಿನ ಸ್ಥಳವೆಂದು ಒಂದು ಸಾರ್ವಜನಿಕ ನಳವನ್ನು ಆ ಬೇವಿನಮರದ ಕಟ್ಟೆಯ ಮುಂದೆಯೇ ಹಾಕಿದರು. ನೀರಿನ ಬಳಕೆಯಿಂದಾಗಿ ಈಗ ಆಗಿರುವಂತೆ ಸುತ್ತಲೂ ನೀರು ನಿಲ್ಲತೊಡಗಿ ರಜ್ಜಾಯಿತು. ಬಹಳ ಹಳೆಯದಾಗಿದ್ದ ಬೇವಿನಮರದ ಕಟ್ಟೆ ನೀರಿನಲ್ಲಿ ನೆನೆದು ಕುಸಿದು ಬಿತ್ತು. ಬೇವಿನಮರದ ಬಸಯ್ಯ ಆ ಕಲ್ಲುಗಳನ್ನೆಲ್ಲ ಹೊರಿಸಿಕೊಂಡು ಹೋದ. ಈಗ ಗುರುಬಸಮ್ಮನೂ ಸತ್ತಿದ್ದಳು. ಆದ್ದರಿಂದ ಮನೆಗೆ ಅವನೇ ಯಜಮಾನ. ಕಲ್ಲುಗಳನ್ನು ಮಾರಿಕೊಂಡ. ಇಲ್ಲಿಯವರೆಗೆ ಬೊಡ್ಡೆಯ ಸುತ್ತಲೂ ಆಧಾರವಾಗಿದ್ದ ಕಟ್ಟೆಯ ಸಹಾಯದಿಂದ ಭದ್ರವಾಗಿ ನಿಂತಿದ್ದ ಬೇವಿನಮರಕ್ಕೆ ಈಗ ಆಧಾರ ತಪ್ಪಿದಂತಾಯಿತು. ಅದರ ದೊಡ್ಡ ದೊಡ್ಡ ಬೇರುಗಳು ಹೊರಗೇ ಕಾಣತೊಡಗಿದವು. ಇದರಿಂದಾಗಿ ಮರ ಯಾವಾಗ ಉರುಳಿಕೊಂಡು ಬೀಳುತ್ತದೋ ಎನ್ನುವಂತಾಯಿತು. ಸುತ್ತಲಿನ ಮನೆಯವರು ಮರ ತಮ್ಮ ಮನೆಯ ಮೇಲೆ ಉರುಳಿದರೆ ಏನು ಗತಿಯೆಂದು ತಕರಾರು ಮಾಡಿದರು. ಓಣಿಯಲ್ಲಿ ಜನ ಅಡ್ಡಾಡುವಾಗ, ಚಿಕ್ಕಮಕ್ಕಳು ಆಡುವಾಗ ಮರ ಬಿದ್ದುಬಿಟ್ಟರೆ ಹೇಗೆಂದು ಓಣಿಯ ಹಿರಿಯರಿಗೂ ಆತಂಕವಾಯಿತು. ಮರವನ್ನು ಕಡಿಸಿಬಿಡಲು ಪಂಚಾಯತಿಯವರು ಬಸಯ್ಯನಿಗೆ ತಾಕೀತು ಮಾಡಿದರು. ಹಿಂದೆ ವಿದ್ಯುತ್ತು ಬಂದಾಗ ಕಡಿದಿದ್ದ ಗಿಡದ ಕೆಲಭಾಗಗಳನ್ನು ಮಾರಿ ಸವಿಗಂಡಿದ್ದ ಬಸಯ್ಯ ತಾನೇ ಕಡಿದು ಒಯ್ಯುವ ಕರಾರಿನ ಮೇಲೆ ಯಾರಿಗೋ ಗಿಡವನ್ನೇ ಮಾರಿಕೊಂಡುಬಿಟ್ಟ.

ಹೀಗೆ ಬೇವಿನಮರದ ಕಥೆ ಮುಗಿದಿತ್ತು. ಕಟ್ಟೆಯ ಮೇಲಿದ್ದ ಮುಕ್ಕಬಸವಣ್ಣ ಈಗ ಮಲ್ಲಿಕಾರ್ಜುನ ದೇವರ ಗುಡಿ ಸೇರಿದ್ದ.

ಹಿಂದೆ ನಾವು ಆಡುತ್ತಿದ್ದ ಜಾಗದಲ್ಲಿ ಈಗ ಬರಿ ರಜ್ಜು, ನೀರು. ಗೌಡರ ಓಣಿಯ ಇಳುಕಲದಿಂದ ಹರಿದು ಬರುವ ನೀರೂ, ನಮ್ಮ ಓಣಿಯ ಮೂಲಕ ಬಂದ ನೀರೂ ಅದೇ ಕೂಡುದಾರಿಗೆ ಬಂದು ಸೇರಿ ಅಲ್ಲೊಂದು ಸಂಗಮವೇ ಏರ್ಪಟ್ಟಿತ್ತು. ನಾವು ಆಡುತ್ತಿದ್ದ ಜಾಗೆಯ ಗುರುತು ಕೂಡ ಉಳಿದಿರಲಿಲ್ಲ. ಈಗ ಓಣಿಯ ಸಣ್ಣ ಹುಡುಗರು ಎಲ್ಲಿ ಆಟವಾಡಿಕೊಳ್ಳುತ್ತಾರೋ - ಎಂದು ಆಶ್ಚರ್ಯವಾಯಿತು.

ಈ ಸಂಗಮವನ್ನು ತಲುಪಿದ ಮೇಲೆ ಕೆಸರಿನಲ್ಲಿ ಕಾಲಿಡದಂತೆ ನಡೆಯುವ, ಜಿಗಿಯುವ ಪ್ರಯತ್ನಗಳೆಲ್ಲ ವ್ಯರ್ಥವೆಂದು ಖಾತ್ರಿಯಾಯಿತು. ಸರಳವಾಗಿ ನೀರಲ್ಲಿ ನಡೆದುಕೊಂಡೇ ಮನೆಗೆ ಹೋದೆ.

ಆದರೆ ಊರು ಬಿಡುವವರೆಗೂ ಈಗ ಇಲ್ಲದ ಆ ಬೇವಿನಮರ ವಿಚಿತ್ರವಾಗಿ ಮನಸ್ಸನ್ನು ಮುತ್ತಿಕೊಂಡುಬಿಟ್ಟಿತ್ತು.

# ತಿಮ್ಮಣ್ಣಭಾವ

● ವಿಷ್ಣು ನಾಯ್ಕ

'ತಿಮ್ಮಣ್ಣಭಾವ ಸತ್ತೋದ' ಎಂದು ಅವ್ವ ಬರೆಯಿಸಿ ಹಾಕಿದ ಪತ್ರ ಓದಿದ ನನಗೆ ಒಂದು ಗಳಿಗೆ ತಲೆಸುತ್ತಿ ಬಂದು, ಈಗೇನು ಕುಸಿದೇ ಬೀಳುತ್ತೇನೋ ಅನ್ನುವಂತಾಯಿತು. ದಾಂಡೇಲಿಗೆ ಬಂದ ಹನ್ನೆರಡು ವರ್ಷಗಳಲ್ಲಿ ಇಂಥ ಕೆಟ್ಟ ಪತ್ರ ಓದಿರಲಿಲ್ಲ. ಅಪ್ಪ ಸತ್ತ ಸುದ್ದಿ ಬಂದಾಗಲೂ ಇಷ್ಟೊಂದು ಸಂಕಟ ಆದದ್ದು ಸುಳ್ಳು. ಮನೆ ಮುಂದಿನ ಕೆಂದಾಳೆ ಮರದ ಚೆಂಡು ಕಳಚಿಬಿದ್ದಂತೆ ಮೊದಲ ದಿನದ ರಾತ್ರಿ ಕನಸು ಬಿದ್ದಿತ್ತು.

ತಿಮ್ಮಣ್ಣಭಾವ ನನ್ನ ಪಾಲಿಗೆ ಕೇವಲ ಒಬ್ಬ 'ಭಾವ' ಮಾತ್ರ ಆಗಿರಲಿಲ್ಲ. ಭಾಗವೇ ಆಗಿದ್ದ. ನನಗೆ ಮೊದಲು ಅಂಕೋಲೆಪೇಟೆ ತೋರಿಸಿದವನೇ ಈ ತಿಮ್ಮಣ್ಣಭಾವ. ದೇಶಕ್ಕೆ ಸ್ವಾತಂತ್ರ್ಯ ಬಂದ ದಿನ ಆಗಿತ್ತಂತೆ ಅದು. ಆಗ ನನಗೆ ಮೂರುವರುಷ ಇದ್ದಿರಬೇಕು. ತಿಮ್ಮಣ್ಣಭಾವನ ಹೆಗಲ ಮೇಲೆ ಕೂತು ಮೀನಪೇಟೆ ಓಣಿಯಿಂದ ಗಾಂಧೀಮೈದಾನಕ್ಕೆ ಹೋದದ್ದೇ ಮೊದಲ ನೆನಪು. ಜನರ ಗೋಲೆಯೇ ಸೇರಿತ್ತು 'ಜಯ್' 'ಜಯ್' ಅನ್ನುತ್ತಿದ್ದರು. ನಾನು 'ಗಾಂಧೀಜಿ' ಅನ್ನುವ ಒಂದು ಹೆಸರನ್ನು ಕೇಳಿಸಿಕೊಂಡದ್ದು ಅದೇ ಮೊದಲು. ತಿಮ್ಮಣ್ಣಭಾವ ನನಗೆ ಆ ದಿನ ಒಂದು ಗಿರಿಗಿರಿ ತೆಗೆಸಿಕೊಟ್ಟಿದ್ದ. ಹಾಗೇ ಒಂದು ಕರೆಲಾಡೂ ಕೂಡ. ಮನೆಗೆ ಬರುವವರೆಗೆ ಹೆಗಲಿಂದ ಕೆಳಗಿಳಿಸಿರಲಿಲ್ಲ. ತಿಮ್ಮಣ್ಣಭಾವನ ಮೋಟುಕ್ಕೆ ಅಂದರೆ ನನಗೆ ಬಹಳ ಪ್ರೀತಿ. ಮನೆಗೆ ಬರುವವರೆಗೂ ಅದನ್ನು ಗಟ್ಟಿಯಾಗಿ ಹಿಡಕೊಂಡೇ ಇದ್ದೆ.

ಅಪ್ಪ ಅವನಿಗೆ ಸಲಿಗೆಯಿಂದ 'ಮೋಟ್‌ತಿಮ್ಮಣ್ಣ' ಎಂದೇ ಕರೆಯುತ್ತಿದ್ದ. ಸಣ್ಣವನಿದ್ದಾಗ ದನ ಕಾಯುವುದಕ್ಕೆ ಹೋಗುತ್ತಿದ್ದ ದಿನಗಳಲ್ಲಿ ಒಂದು ದಿನ ನಿಂಗಳಿಬಾಗದ ಗೇರ್ಹಣ್ಣಿಗೆಂದು ತುದಿಹೆಣೆಗೆ ಹತ್ತಿದಾಗ ಹೆಂಗ ಮುರಿದು ಬಿದ್ದನಂತೆ. ಎಡಬದಿಯ ಮೊಣಕೈ ಸಮೀಪ ಜೋರುಹೊಡೆತ ಬಿದ್ದು ಬೀಗಿಕೊಂಡಿತ್ತು. 'ತೋಡೂರ ಔಷಧ ಮಾಡೂಕ್ ಹೇಳಿದ್ರೂ ಬಿಸಾತಿಲ್ಲದೆ ತಿರಗ್ತಾ, ಒಳ ಒಳಗೇ ರಶಕಿ ಆಯ್ತು. ಅಜ್ಜಿಕಟ್ಟೆ ಆಸ್ಪತ್ರೆಯಲ್ಲಿ ಥಾಮಸ್ ಡಾಕ್ಟರು ಆಪರೇಶನ್ ಮಾಡಿ ಸತ್ತವನ ಜೀವವೊಂದು ಉಳ್ಸಿದ್ರು' ಎಂದು ಆಗಾಗ ಅಪ್ಪ ಹೇಳುತ್ತಿದ್ದುದುಂಟು. ಹೆಬ್ಬೆರಳೊಂದನ್ನು ಬಿಟ್ಟು ಉಳಿದ ನಾಲ್ಕು ಬೆರಳು

ಕತ್ತರಿಸಲೇಬೇಕಾಯ್ತಂತೆ ! ಅವನ ನಿಷ್ಕಾಳಜಿತನದ ನೆನಪಾದಾಗಲೆಲ್ಲ ಅಪ್ಪ ಬೈತಾನೇ ಇರ್ತಿದ್ದ. ಅಪ್ಪನಿಗೆ ಬೈಯುವ ಅಧಿಕಾರವೂ ಕೆಲಮಟ್ಟಿಗೆ ಇತ್ತು. ಅವನ ಖಾಸಾ ಅಕ್ಕನ ಮಗ ಈತ. ಅಕ್ಕ - ಭಾವ ಸತ್ತು ವರ್ಷಗಳೇ ಕಳೆದಿದ್ದವು. ನನಗೆ ಮಾತ್ರ ತಿಮ್ಮಣ್ಣಭಾವನಿಗೆ ಯಾರೇನೇ ಹೇಳಿದ್ರೂ ಸಿಟ್ಟು ಬರುತ್ತಿತ್ತು. ನಮ್ಮ ಮನೆಗೆ ಅವ ಒಂದು ದಿನ ಬರದಿದ್ದರೂ ನನಗೆ ನನ್ನ ಪ್ರೀತಿಯ ಒಂದು ಭಾಗವೇ ಕಳೆದುಕೊಂಡಂತಾಗುತ್ತಿತ್ತು. 'ಈ ಅಪ್ಪ ಅವನನ್ನು ನಮ್ಮ ಮನೆಯಲ್ಲಿ ಯಾಕೆ ಇಟ್ಟುಕೊಳ್ಳುವುದಿಲ್ಲ ?' ಎಂಬುದಾಗಿ ನನ್ನೊಳಗೇ ಎಷ್ಟೋ ಸಲ ಪ್ರಶ್ನಿಸಿಕೊಂಡದ್ದುಂಟು. ಅವನು ದಿನಗೂಲಿ ಕೆಲಸಕ್ಕೆ ಹೋದರೆ ಮಾತ್ರ ಊಟಕ್ಕುಂಟು, ಇಲ್ಲದಿದ್ದರೆ ಇಲ್ಲ ಎನ್ನುವ ತಿಳುವಳಿಕೆ ಆಗ ನನಗೆ ಇರಲಿಲ್ಲ.

ಆದರೂ ಆತ ಬರುತ್ತಿದ್ದ. ಅವನ ಮನೆಯಿರುವುದು ಶಿರಕುಳಿಯಲ್ಲಿ. ಮಂಡದ ಮನೆಗೆ ಹೋಗುವ ದಾರಿಯಲ್ಲಿ ಸಿಗುತ್ತದೆ. ಹಸಿ ಹುಲ್ಲು ಕೊಯ್ಯಲಿಕ್ಕೆ ನಾನು ಅವ್ವಿಯೊಟ್ಟಿಗೆ ಅವನ ಮನೆಯಲ್ಲಿಗೆ ಬಹಳಷ್ಟು ಸಲ ಹೋದದ್ದುಂಟು. ಅಲ್ಲಿಂದ ನಮ್ಮ ಮನೆಗೆ ಬರುವುದಕ್ಕೆ ಆತ ಸುಮಾರು ದೂರ ನಡೆಯಬೇಕು. ಆದರೂ ಬೇಸರಿಸದೇ ಬರುತ್ತಿದ್ದ. ಅಪ್ಪಣ್ಣ ಗುನಗರ ಮನೆಮುಂದಿನ ಓಣಿಯಲ್ಲಿರುವಾಗಲೇ 'ಬುದ್ವಂತಿ, ನಾಪ್‌ಮಾವ' ಎಂದು ದನಿ ಮಾಡುತ್ತಿದ್ದ. ಆಗ ನನ್ನ ಎದೆ ಹಿಗ್ಗಿ ಹೀರೇಕಾಯಿ ಯಾಗುತ್ತಿತ್ತು. ಒಳಬಂದವನೇ ಜಗಲಿ ಮಧ್ಯದಲ್ಲಿ ಇರುವ ಸೀಸಂ ಕಂಬಕ್ಕೆ ಬೆನ್ನುಕೊಟ್ಟು ಕುಳಿತು ನನ್ನ ಕಡೆ ನೋಡಿ 'ಬಾ ಬಾ ಬಾ ತೆಗಿ ತೆಗಿ ತೆಗಿ' ಎಂದು ತಲೆ ಮುಂದೆ ಮಾಡುತ್ತಿದ್ದ. ಅದಕ್ಕೆಂದೇ ಕಾಯುತ್ತಿದ್ದ ನಾನು ಅವನ ಮೈಮೇಲೆ ನನ್ನ ಅರ್ಧದೇಹ ಚೆಲ್ಲಿಕೊಂಡು ಅವನ ತಲೆಗಾದ ಹಣ್ಣುಕೂದಲನ್ನು ಕೀಳುತ್ತಿದ್ದೆ. ರಾತ್ರಿ ಚಿಮಣಿ ಬೆಳಕಿನಲ್ಲಿ ಅಷ್ಟು ಮಜಾ ಆಗುತ್ತಿರಲಿಲ್ಲ. ಹಗಲೊತ್ತಿಗೆ ಬಂದಾಗ ಲೆಕ್ಕಾ ಮಾಡಿ ನೂರು, ನೂರಾ ಐವತ್ತು ಬಿಳಿ ಕೂದಲನ್ನು ತೆಗೆದು ಒಂದೇ ಕಡೆ ರಾಶಿ ಹಾಕಿ, ಅವನ ಮುಂದೇ 'ಫೂ' ಎಂದು ಊದಿ ಗಾಳಿಯಲ್ಲಿ ಅವು ತೇಲಿ ತೇಲಿ ಹೋಗುವುದನ್ನು ನೋಡಿ ಆನಂದಿಸುತ್ತಿದ್ದೆ. ಒಂದುನೂರು ಹಣ್ಣು ಕೂದಲು ತೆಗೆದರೆ ಒಂದು ಬಿಲ್ಲಿ ಕೊಡುವ ಮಾತಾಗಿತ್ತು. ನನ್ನ ಉಡಿದಾರಕ್ಕೆ ಸೇರಿಸಿಕೊಳ್ಳಲು ತೂತುಬಿಲ್ಲಿಯೇ ಬೇಕೆಂದು ಹಠಮಾಡಿ ಬೇಡಿಕೊಳ್ಳುತ್ತಿದ್ದೆ.

ನಾನು ಹಣ್ಣುಕೂದಲು ಕೀಳುವಾಗ ಒಂದೊಂದು ಸಲ ಅವನಿಗೆ ನಿದ್ದೆ ಬಂದು ಬಿಡುತ್ತಿತ್ತು. ನಾನು ಚಿವುಟುತ್ತಲೇ 'ಅಯ್ಯೋ' ಎಂದು ಎಚ್ಚರಾಗುತ್ತಿದ್ದ. 'ನಂಗೆ ಕತೆ ಹೇಳು, ನಿನ್ನ ನಿದ್ದೆ ಓಡಿ ಹೋಗ್ಲಿ' ಎಂದು ವರಾತ ಮಾಡುತ್ತಿದ್ದೆ.

ಕತೆಗಳಿಗೇನು ತಿಮ್ಮಣ್ಣಭಾವನಲ್ಲಿ ಕೊರತೆಯಿರಲಿಲ್ಲ. ಅಸ್ಲಹಳ್ಳದಲ್ಲಿ ಈಸಾಡುವಾಗ ಒಂದುಸಲ ನೀರಿನ ಫೋರ್ಸಿಗೆ ತನ್ನ ಕಚ್ಚೆಯೇ ಕಳೆದು ಹೋಗಿ ಫಜೀತಿಗೆ ಬಿದ್ದ ಕತೆ, ಕಬ್ಬಿನ ಗಾಣಕ್ಕೆ ಬಂದ ಶೆಟಗೋಳ್ ಗುಡುಗಿ ಕತ್ತಲಾದ್ರೂ ಮನೆಗೆ ಹೋಗದೇಯಿದ್ದಾಗ ಅವಳಮ್ಮ ಲೊಕ್ಕಿಸಳೆ ತಕೊಂಡು ತೊಡೆ ಚರ್ಮ ಒಡೆದು ಹೋಗುವವರೆಗೆ ಹೊಡೆದ ಕತೆ, ಚಿಕ್ಕನ

ಶಾಲೆಯಲ್ಲಿ ಹೂಸು ಹೊಡಕೊಂಡು ನಗೆಪಾಟಲಾದ 'ಪುರ್‌ಪುರ್ ಶಾಂತಿಯ' ಕತೆ, ಮದ್ರಾತ್ರಿ ಹೊತ್ತಿಗೆ ರಸ್ತೇಲಿ ನಿಂತು ಕವಳ ಬೇಡಿದ ದೆವ್ವದ ಕತೆ - ಹೀಗೆ ಅವನಲ್ಲಿ ಹೇಳಿ ಮುಗಿಸಲಿಕ್ಕಾಗದಷ್ಟು ಕತೆಗಳಿದ್ದವು. ದೆವ್ವದ ಪಾದ ಹಿಮ್ಮೊಗವಾಗಿರ್ತದೆಯೆಂದು ನನಗೆ ಹೇಳಿದವನೇ ತಿಮ್ಮಣ್ಣಭಾವ.

'ಕೂದ್ಲ ಹಣ್ಣಾದ್ರೂ ನೀ ಮದುವೆ ಯಾಕ ಆಗ್ಲಿಲ್ಲ ?' ಎಂಬುದನ್ನು ನಾನು ಒಮ್ಮೆ ಅವನಿಗೆ ಕೇಳಿ ಪೇಚಿಗೆ ಸಿಕ್ಕಿ ಹಾಕಿಕೊಂಡದ್ದು ಈಗಲೂ ನೆನಪಿದೆ. ನಾನು ಆರನೇ ಕ್ಲಾಸಿನಲ್ಲಿ ಇದ್ದ ವರ್ಷ ಅದು. ಆಗ್ಲೂ ಅವ ನನ್ನ ಕೈಯಿಂದ ಹಣ್ಣುಕೂದಲು ತೆಗೆಸಿಕೊಳ್ಳಲು ಬಂದು ಕುಳಿತುಬಿಟ್ಟಿದ್ದ. ತಲೆಗೆ ಅತ್ತರು ಹಾಕುತ್ತಿದ್ದುದರಿಂದ ಅವನ ಸಮೀಪ ನಿಂತಾಗ ಹಿತವಾದ ಪರಿಮಳವಿರುತ್ತಿತ್ತು. ನಾನು ಹಾಗೆ ಕೇಳುತ್ತಲೇ ಒಂದು ಕ್ಷಣ ತಬ್ಬಿಬ್ಬಾದವನಂತೆ ಕಂಡ ತಿಮ್ಮಣ್ಣಭಾವ, ಮರುಕ್ಷಣ ಮಕ್ಕಳಂತೆ ಅತ್ತುಬಿಟ್ಟ. ಆಗ ಅಪ್ಪ ಮನೆಯಲ್ಲಿರಲಿಲ್ಲ. 'ನಿಂಗೆ ದೊಡ್ಡ ದೊಡ್ಡ ಮಾತ ಬೇಕಾತಿದಲ್ಲೋ ಸುಣ್ತಮ್ಮ. ಬಾಳ ಜೋರಾಗ್ ಹೋಗಿ ನೀನು. ನಿಂಗ್ಯಾರ್ ಕೊಟ್ಟೋರೊ ದೊಡ್ಡೋರ ಪಂಚಾಯ್ತಿ ? ಒದ್ಕಂಬೂ ಕೆಲ್ಸ ಇಲ್ಲಾ ನಿಂಗೆ ? ಸಾಲೀಗೆ ಎಂತಕೆ ಹೋತಿ ಕತ್ತಿ ಕಾಯೂಕೆ !' ಎಂದು ಅವ್ವ ಕಣ್ಣುಗೆಂಪಿಸಿದಾಗ, ನನ್ನ ಪ್ರಶ್ನೆಯಿಂದ ಏನೋ ಆಗಬಾರದ್ದಾಗಿ ಹೋಯ್ತು ಎನ್ನುವ ಅನುಮಾನ ಜಾಸ್ತಿಯಾಗಿ ಹೆದರಿಕೆಯೂ ಆಗಿ ನಾನೂ ಅತ್ತುಬಿಟ್ಟಿದ್ದೆ. ನಾನಳುವುದನ್ನು ನೋಡಿದ ತಿಮ್ಮಣ್ಣಭಾವ ಮುಂದೆ ಇಳಿಬಿಟ್ಟ ತಮ್ಮ ಕಚ್ಚೆತುದಿಯಿಂದ ಮುಖ ಒರೆಸಿಕೊಂಡು ನನ್ನನ್ನು ಎಳೆದುಕೊಳ್ಳುತ್ತ 'ಬಾ ಮತ್ತೊಂದೇನಾಲ್ಕ್ ಕಿತ್ಯಾಕು. ಬಾ ಮಗ. ಅವಳ್ದೇನ್ ಕೇಳ್ತಿ ನೀನು ?' ಎಂದು ಮುದ್ದು ಮಾಡಿದ್ದ.

❖ ❖ ❖

ಇಷ್ಟೊಂದು ನನಗೆ ಪ್ರೀತಿ ತೋರಿಸುವ ತಿಮ್ಮಣ್ಣಭಾವ ಅವನ ಮದುವೆ ಬಗ್ಗೆ ನಾನು ಕೇಳಿದ ಒಂದೇ ಪ್ರಶ್ನೆಗೆ ಯಾಕೆ ಕಣ್ಣೀರು ತೆಗೆದಾ ?.... ಈ ಪ್ರಶ್ನೆಯಿಂದ ಬಿಡಿಸಿಕೊಳ್ಳಲು ಅದ್ಯಾಕೋ ನನಗೆ ಸಾಧ್ಯವಾಗಲೇ ಇಲ್ಲ. ಆದರೆ ಯಾರಲ್ಲಿ ಕೇಳುವುದು ? ಮತ್ತೆ ಅವನ ಕಣ್ಣಲ್ಲಿ ನೀರು ಬರಬಾರದು. ಆದರೆ ನನಗೆ ಹಕೀಕತ್ತು ತಿಳಿಯಬೇಕು. ಈ ಒಗಟನ್ನು ಭೇದಿಸುವ ದಾರಿ ತಿಳಿಯದೇ ಮನಸ್ಸು ಅಸ್ವಸ್ಥಗೊಂಡಿತ್ತು. 'ಹೊತ್ತು ಹೋದರೆ ಮತ್ತೆ ಬಾರದು' ಎಂಬ ಗಾದೆ ಮಾತನ್ನು ವಿಸ್ತರಿಸಿ ಬರೆಯಲು ಕುಳಿತೆ. ಪ್ರಾರ್ಥನೆಯ ನಂತರ ಮರುದಿನ ಅದನ್ನು ಓದಿ ಹೇಳುವ ಪಾಳಿ ನನ್ನದಾಗಿತ್ತು. ತಿಮ್ಮಣ್ಣಭಾವನ ಕಣ್ಣೀರೇ ಕಣ್ಮುಂದೆ ಬಂದಂತಾಯಿತು. ಎದ್ದುಹೋದವನೇ ಕೊತ್ತಲಚೀಲದಲ್ಲಿ ದೇಹವನ್ನು ತೂರಿಕೊಂಡೆ. ಒಂದು ಸುತ್ತು ನಿದ್ದೆ ಬಿದ್ದಿತ್ತೋ ಇಲ್ಲವೋ, ಅಪ್ಪನ ಚುರುಮುರಿ ಚಪ್ಪಲಿನ ಸಪ್ಪಳ ಕೇಳಿಸಿತು. ಅಪ್ಪನ ತಾಟಿಗೆ ಅನ್ನ, ಪಳದೆ ಹಾಕುವಾಗ ಅವ್ವ ನಾನು ತಿಮ್ಮಣ್ಣಭಾವನಿಗೆ ಕೇಳಿದ ಪ್ರಶ್ನೆಯನ್ನೂ, ಅವನು ಅತ್ತದ್ದನ್ನೂ ಬಣ್ಣಿಸುತ್ತಿದ್ದಳು.

'ಎಲ್ಲಾ ಮಾಡ್ಡವಳೇ ಆ ಬೋಳಿ' ಎಂದ ಅಪ್ಪನ ಮಾತು ನೇರ ನನ್ನ ಕಿವಿಗೇ ತಾಕಿತು. 'ನಮ್ಮ ತಿಮ್ಮಣ್ಣ ವೋಟಗ್ಯೆ ಪರದೇಶಿ ಅಂತಾ ತಿಳೀಬ್ಯಾಡಾ. ಪ್ರಾಯದಲ್ಲಿ ಅವನಂಥ ಲಕ್ಷಣದ ಹೊಂತಗಾರ ಪೋರಗಳು ನಮ್ಮ ಜಾತಿ ಯಾಕೆ, ನಮ್ಮೂರಲ್ಲೇ ಯಾರಿಲ್ಲ ಗೊತ್ತಿತ್ತೇ ನಿಂಗೆ ? ಬರಾ ಕಲಿಲಿಲ್ಲ ಅಂಬೂದೊಂದ್ ಬಿಟ್ರೆ ಅವನಂಥ ಬುದವಂತ ಮಕ್ಕಳ್ ನಿಂಗೆ ಬ್ಯಾರೇ ಎಲ್ಲೂ ಸಿಗುವಂಗಿಲ್ಲ' - ಅಪ್ಪನ ಮಾತು ಕೊತ್ತಲಚೀಲದ ಒಳಗಿದ್ದ ನನಗೆ ಇನ್ನಷ್ಟು ಹಿತಕೊಟ್ಟಿತ್ತು.

❖ ❖ ❖

'ಥೋ ! ಇಂದೇನಾಗಿದೆ ನಂಗೆ ?' ಅಂದುಕೊಂಡು ತಿಮ್ಮಣ್ಣ ಹೊರಳಿ ಇನ್ನೊಂದು ಮಗ್ಗುಲಾದ. 'ಅಟ್ಸಣ್ಣ ಕೋಸನ ಪ್ರಶ್ನೆಗೆ ಅದ್ಯಾಕೆ ಹಾಂಗೆಲ್ಲ ತೀಡಬಿಟ್ಟೆ ನಾನು ? ಪಾಪ, ಆ ಪೋರನೂ ಹೆದ್ರ್ಹೋದ. ತೀಡೂಕೇ ಸುರುಮಾಡ್ದ.....' 'ಸಾಯ್ಲಿ, ಹಾಳಾಗ್ ಹೋಗ್ಲಿ ಅವಳು' ಅಂದವನೇ ತಲೆವರೆಗೆ ಚಾದರ ಎಳಕೊಂಡು ನಿದ್ದೆಯನ್ನು ಕಟ್ಟಿಹಾಕುವುದಕ್ಕೆ ಹೊರಟವನಂತೆ ಗಟ್ಟಿಯಾಗಿ ಕಣ್ಣುಮುಚ್ಚಿದ. ನಿದ್ದೆ ಬರಲಿಲ್ಲ. ೪೦ ವರ್ಷಗಳಷ್ಟು ಹಿಂದಕ್ಕೆ ನೆಗೆಯತೊಡಗಿತ್ತು ಮನಸ್ಸು.

ಕಲ್ಯಾಣಿ ಮನೆಗೂ, ತಿಮ್ಮಣ್ಣನ ಮನೆಗೂ 'ಕೂsss' ಅಳತೆಯ ಅಂತರ. ಹೆಚ್ಚೂಕಡಿಮೆ ಇಬ್ಬರದೂ ಒಂದೇ ವಯಸ್ಸು. ಇಬ್ಬರೂ ಲಕ್ಷಣವಂತರೇ. ಅವಳು ಸ್ವಲ್ಪ ಬಿಳಿಯಾದರೆ ಇವ ಒಂದುಚೂರು ಕಪ್ಪು. ಸಣ್ಣವರಿದ್ದಾಗಿಂದ್ಲೇ ಸಂಗಡ ಗೋಟಿ ಆಡಿದವರು. ಮಳೆಗಾಲದಲ್ಲಿ ಮಣ್ಣಗುಂಪಿ ಮಾಡಿ ಹಕ್ಕಿಗೂಡು ಕಟ್ಟಿದವರು. ತಿಮ್ಮಣ್ಣನ ಜೊತೆಗೆ ಅವಳು 'ಹುತೂತು' ಆಡಿದ್ದೂ ಉಂಟು. ಹಾಗೆ ಆಡುವಾಗ ಒಂದುಸಲ ತನ್ನ ಒಂಟಿಕೈಯಲ್ಲೇ ಅವಳ ಬಲಗಾಲನ್ನು ಹಿಡಿದು ಮೇಲೆ ಎತ್ತಿದಾಗ ಒಳಗಿನ ಚಡ್ಡಿ ಅವನ ಕಣ್ಣಿಗೆ ಬಿದ್ದಿತ್ತು. ಆ ಗಳಿಗೆಯಲ್ಲಿ - ಆ ಹದಿಮೂರನೇ ವರ್ಷಕ್ಕೇ ಅವನಿಗೆ ಹೇಳಲಿಕ್ಕೂ ಆಗದ, ತಡೆಯಲಿಕ್ಕೂ ಆಗದ ಏನೇನೋ ಭಾವನೆಗಳು ಜಾಗೃತವಾಗಿದ್ದವು. ಕಲ್ಯಾಣಿಯೂ ಕೂಡ ಆ ನಂತರದ ದಿನಗಳಲ್ಲಿ 'ಹುತೂತು' ಆಡುವಾಗ ಇವನ ಸೈಡಿಗೇ ಬಂದು, 'ಮತ್ತೊಂದು ಸಲ ಹಿಡಿದು ಎತ್ತೋ' ಎಂಬ ಹಾಗೆ ಕಾಲುಮುಂದೆ ಚಾಚುತ್ತಿದ್ದಳು. ಉಳಿದವರು ಹಿಡಿಯಬಂದರೆ ಜಿಂಕೆಯಂತೆ ಹಾರಿ ತಪ್ಪಿಸಿಕೊಳ್ಳುತ್ತಿದ್ದ ಕಲ್ಯಾಣಿ, ತಿಮ್ಮಣ್ಣ ಹಿಡಿದಾಗ ಅಲ್ಲೇ ಕೊಸರಾಡಿದ ಹಾಗೆ ಮಾಡಿ ಬಿದ್ದುಕೊಳ್ಳುತ್ತಿದ್ದಳು. ಅವನ ಕೈಯಲ್ಲಿ ತನ್ನ ಕಾಲಿರುವಷ್ಟೂ ಹೊತ್ತು ಅವಳಿಗೆ ಕೂಡ ಏನೋ ಒಂಥರ ಬಾಯಿಂದ ಹೇಳಲಿಕ್ಕಾಗದ ಪುಳಕ ಇರುತ್ತಿತ್ತು. ಕಾಲಕ್ರಮೇಣ ಆಟಕ್ಕೆ ಸೇರುತ್ತಿದ್ದ ಊರ ಪೋರಗೊಳಿಗೆ, ಇವರಿಬ್ಬರೊಳಗೇನೋ ಅದೆ ಅನ್ನಿಸತೊಡಗಿತು. ಸುದ್ದಿ ಬೇರಮ್ಮಕ್ಕನ ಕಿವಿವರೆಗೂ ಹೋಗಿ ಬಿತ್ತು.

ಕಲ್ಯಾಣಿ ಬೇರಮ್ಮಕ್ಕನಿಗೆ ಮೊಮ್ಮಗಳಾಗಬೇಕು. ಬೇರಮ್ಮಕ್ಕನ ಮಗಳು ಸಾವಿತ್ರಿ ಕಲ್ಯಾಣಿಗೆ ಜನ್ಮಕೊಟ್ಟ ಮೂರನೇ ದಿನಕ್ಕೆ ಧನುರ್ವಾತ ಆಗಿ ಸತ್ತು ಹೋಗಿದ್ದಳು. 'ಬೆಜಿಗ್ತಿ ಕೈ ಉಗುರು ತಾಗಿ ಸೆಪ್ಟಿಕ್ ಆಯ್ತಕಂಡಾ' ಎಂದು ಜನ ಆಡಿಕೊಂಡರು. ಖರೆ - ಸುಳ್ಳು ಮಾಡುವವರಿಲ್ಲದೆ ಸುದ್ದಿ ಹಾಗೇ ಹಳ್ತಾಗ್ಹೋಯ್ತು. ಈ ಹಿಳ್ಳಿಯನ್ನ ನೋಡುವ ಗೋಜಿಗೇ ಆ ಅಪ್ಪ ಅನಿಸಿಕೊಂಡ ಬೋಳಿಮಗ ಬರಲಿಲ್ಲ. 'ಗಂಡುಮಗ ಆದ್ರೆ ಬತ್ತೀದಾ. ಹೆಣ್ಮಗು. ಹ್ಯಾಂಗ್ ಬರುವಾ ?' ಎಂದು ಜನರಾಡಿಕೊಂಡರು. ಹೀಗಾಗಿ ಕಲ್ಯಾಣಿ ಅಜ್ಜಿ ಕೈಯಲ್ಲೇ ದೊಡ್ಡವಳಾಗಬೇಕಾಯಿತು.

ಹಾಗೆ ನೋಡಿದ್ರೆ, ಸಾವಿತ್ರಿ ಮದುವೆ ಆದ್ಮೇಲೆ ಅವ್ವಿ ಮನೆಗೆ ಬಂದದ್ದೇ ಕಡಿಮೆ. 'ಚೊಚ್ಚಲು ಬಾಣಂತನ ನಿನ್ನವ್ವಿ ಅಲ್ದೇ ನಿನ್ನ ಗಂಡನೇ ಮಾಡುನೇನೇ ?' ಎಂದು ಚುಚ್ಚಿದ ಅತ್ತೆಯ ಮಾತು ಅವಳು ಮನಸ್ಸಿಲ್ಲದ ಮನಸ್ಸಿನಿಂದ ತೌರಿಗೆ ಬರುವಂತೆ ಮಾಡಿತ್ತು.

ಈ ಅವ್ವಿಯ ಸ್ವಭಾವ ಹಿಡಿಸದಿದ್ದುದೇ ಸಾವಿತ್ರಿ ಶಿರಕುಳಿಯ ಆಸೆ ಬಿಟ್ಟು ಗಂಡನ ಮನೆಯಲ್ಲಿ - ಅತ್ತೆಯ ಎಲ್ಲ ಭಂಗಗಳನ್ನು ನುಂಗಿಕೊಂಡಿದ್ದುದರ ಕಾರಣವಾಗಿತ್ತು. ಸಣ್ಣಪುಟ್ಟ ವಿಚಾರ ಆಗಿದ್ದರೆ 'ಹೆತ್ತವ್ವ' ಅನ್ನುವ ಕಾರಣಕ್ಕಾಗಿಯಾದರೂ ಅವಳು ಅವ್ವಿ ಮನೆಗೆ ಹೋಗಿ ಬರುವ ರೂಢಿ ಇಟ್ಟುಕೊಳ್ಳುತ್ತಿದ್ದಳು. ಆದರೆ ಮದುವೆಯ ಪೂರ್ವದ ಅನುಭವವೇ ಅವಳು ತನ್ನ ತಾಯಿ ಬಗೆಗಿನ ವ್ಯಾಮೋಹವನ್ನು ಸುಟ್ಟು ಹಾಕುವಂತೆ ಮಾಡಿತ್ತು. ಅರವತ್ತು ಆಗುತ್ತ ಬಂದರೂ ದಿನ ಎರಡು - ಮೂರು ಗಂಡಸರಿಗೆ ಒಳಗೆ ತೆಗೆದುಕೊಳ್ಳುವ, ಈ ಅವ್ವಿಯಿಂದ ಪಾರಾಗಿ ಯಾರ ಮನೆಗಾದ್ರೂ ಹೋಗಿಬಿದ್ದರೆ ಸಾಕಾಗಿತ್ತವಳಿಗೆ. ಒಂದು ಹಂತದಲ್ಲಿ ತನ್ನನ್ನೂ ಅಡ್ಡಕಸಬಿಗೆ ಎಳೆಯಲಿಕ್ಕೆ ಮಾಡಿದ ಅವ್ವಿಯ ಹುನ್ನಾರು ತಿಳಿದ ಮೇಲೆ ಹಾಳೋ ಧೂಳೋ ಯಾರಾದರೊಬ್ಬನ ಕೈಹಿಡಿದು ಗಂಡೋಳಗರತಿ ಅನ್ನಿಸಿಕೊಂಡರೆ ಸಾಕು ಎಂಬ ತೀರ್ಮಾನಕ್ಕೆ ಬಂದಿದ್ದಳು. ಚಮಡಿಹಣ್ಣಿನ ಮಾರಾಟಕ್ಕೆ ಅಂಕೋಲೆ ಪೇಟೆಗೆ ಹೋದಾಗ ಸಲಿಗೆ ಬೆಳೆಸಿದ ಗಂಗಾವಳಿಯ ಹನುಮಂತು ಬೆನ್ನತ್ತಿ ಹೋದವಳು ಮುರ್ಕುಂಡದ್ಯಾವರ ಮನೆಯಲ್ಲಿ ಮಾಲೆ ಹಾಕಿದ್ದಳು.

ಮೊದಮೊದಲು ಹೆಂಡತಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದ ಹನುಮಂತು ಬೇರಮ್ಮಕ್ಕನ ಕಸಬಿನ ಬಗ್ಗೆ ಸ್ಥಳೀಕರಿಂದ ಅದೂ ಇದೂ ಕೇಳಿದ ಮೇಲೆ ಬದಲಾಗಿದ್ದ. 'ನಿಮ್ಮವ್ವಿ ಹೆಸರು ಹೊಗಳ್ತಿದಲ್ಲೇ ಶಿರಕುಳಿ ಊರಾಗೆ. ಹೆಸರಿಗೆ ಬೇರಮ್ಮಕ್ಕ. ಒಳಗಿನ ದಂಧೆ ಲೆಕ್ಕಕ್ಕೆ ಸಿಕ್ಕ ಅಂತಾರಲ್ಲೇ' ಎಂದು ಗಂಡ ಹಂಗಿಸಿದಾಗ ಸಾವಿತ್ರಿಗೆ 'ಸತ್ತ್ಹಾಂಗ್' ಆಗಿತ್ತು. ಅಂದಿನಿಂದ ಆ ಬಡವಳು ಅವ್ವಿ ಮನೆ ಬದಿಗೆ ತಲೆ ಹಾಕಿಯೂ ಮಲಗಿರಲಿಲ್ಲ. ಆದರೆ ಅತ್ತೆ ಮಾತಿಗೆ 'ಬ' ಅನ್ನಲಾಗದೆ ಹೊತ್ನಾಗಿದ್ದ ಹೆಂಗಸು ಹೆರಿಗೆಗಾಗಿ ಅದೇ ಅವ್ವಿ ಮನೆಗೆ ಬರಬೇಕಾಗಿ ಬಂದು, ಬಂದವಳು ಕಲ್ಯಾಣಿಯನ್ನು ಮೂರೇ ದಿನಕ್ಕೆ ಬಿಟ್ಟು ತನ್ನ ಕತೆ ಮುಗಿಸಿದ್ದಳು.

ಕಲ್ಯಾಣಿಯನ್ನು ತನ್ನ ದಂಧೆಗೆ ಉತ್ತರಾಧಿಕಾರಿಯನ್ನಾಗಿ ಮಾಡುವ ಎಲ್ಲ ಅವಕಾಶಗಳೂ ಬೇರಮ್ಮಕ್ಕನಿಗೆ ಇದ್ದವು. ಅಂಥದ್ದರಲ್ಲಿ ಮೋಟುಗೈ ತಿಮ್ಮಣ್ಣನೊಂದಿಗೆ ತನ್ನ ಮೊಮ್ಮಗಳ 'ವಿಸೇಸ' ಅವಳಿಗೆ ಹಿತದ ಸುದ್ದಿಯಾಗಿರಲಿಲ್ಲ. 'ತನಗೂ ವಯಸ್ಸಾಯಿತು. ಮುದೀ ಕಾಲಕ್ಕೆ ಹೊಟ್ಟೆಗೆಲ್ಲಿಂವ ತರೂದು ? ಒಂದೂ ತನ್ನಂಗೇ ಆಗ್ಲಿ, ಇಲ್ಲ ಮನೆ ಅಳಿಯತನಕ್ಕೆ ಬಂದಿರುವಂಥವನಿಗೆ ಗಂಟು ಹಾಕಿಕೊಳ್ಳಲಿ' ಎಂಬುದು ಅವಳ ಆಲೋಚನೆಯಾಗಿತ್ತು.

ತಿಮ್ಮಣ್ಣ ವರ್ಷ ಕಳೆದಂತೆ ಕಲ್ಯಾಣಿಯನ್ನು ಬಿಟ್ಟಿರಲಾರದ ಸ್ಥಿತಿ ತಲುಪಿದ್ದ. ಒಂದು ಕೈ ಇಲ್ಲದ ತನಗೆ ಹೆಣ್ಣು ಕೊಡುವವರು ಯಾರು ?..... ಇವಳಾದರೆ ತಾಯಿಯಿಲ್ಲದ ಹುಡುಗಿ. ತಂದೆ ಇದ್ರೂ ಸತ್ತಂತೆ. ಇವಳೇನು ದುಡಿದು ಹಾಕಬೇಕಾಗಿಲ್ಲ. ನಾನು ದುಡಿದು ತಂದದ್ದನ್ನು ಬೇಯಿಸಿಹಾಕಿದ್ರೂ ಸಾಕು ಅಂದುಕೊಂಡಿದ್ದ.

ಮನಸ್ಸಲ್ಲೇ ಮಂಡಿಗೆ ತಿಂತಿರುದ್ಯಾಕೆ ? ಕೇಳೇ ಬಿಡುವಾ ಅನ್ನಿಸಿ ಅಸ್ಲಹಳ್ಳಕ್ಕೆ -ಅವಳು ವಸ್ತ್ರ ಸೆಳೆಯುವ ಜಾಗಕ್ಕೇ ಹೋದ. ಬಟ್ಟೆ ಒಗೆದು ಮುಗಿಸಿದ ಕಲ್ಯಾಣಿ ಹಾಸುಗಲ್ಲಿನ ಮೇಲೆ ಕಾಲುಬಿಟ್ಟುಕೊಂಡು ತಂಬಿಗೆಯಿಂದ ತಲೆಯ ಮೇಲೆ ನೀರು ಹೊಯ್ದುಕೊಳ್ತಾ ಇದ್ದಳು. ಸಾಬೂನು ನೊರೆ ಮುಖದ ಮೇಲೆ ಅರ್ಧಮರ್ಧ ಇನ್ನೂ ಇತ್ತು. ಕಣ್ಣು ತೆರೆಯುವಂತಿರಲಿಲ್ಲವಾದ ಕಾರಣ ತಿಮ್ಮಣ್ಣ ಬಂದುದನ್ನು ಅವಳು ಗಮನಿಸಲಿಲ್ಲ. ಮಧ್ಯಾಹ್ನದ ರಣಬಿಸಿಲು. ಆಚೆ ಈಚೆ ಯಾರೂ ಇಲ್ಲ. ತನ್ನ ಬೆನ್ನಿಗೆ ಬಂದ ಮೋತಿಗೆ 'ಮನೆಗೆ ಹೋಗೋ' ಅನ್ನುವ ಹಾಗೆ ಕಲ್ಲುಬೀಸಿದ. ಹುಂಬ ಧೈರ್ಯ ಮಾಡಿ ಅವಳ ಹಿಂಬದಿಯಿಂದ ಕೈ ಹಾಕಿದವನೇ ಎರಡನ್ನೂ ಮುಟ್ಟಿದ.

ಬೆಚ್ಚಿಬಿದ್ದ ಕಲ್ಯಾಣಿ ತಿಮ್ಮಣ್ಣನನ್ನು ಕಂಡು ಅಲ್ಲೇ ಸುಧಾರಿಸಿಕೊಂಡಳು. 'ನೀನೇನೋ ಮಾರಾಯಾ ? ನಾ ಹೆದರಬಿದ್ ಸತ್‌ನಲ್ಲೋ ! ಥೋ ! ಬಿಡೋ ಮಾರಾಯಾ. ಯಾರಾದ್ರೂ ನೋಡ್‌ಸಾಯುರೋ ! ಮೊದಲೇ ಹಲ್‌ಕಟ್ ಬಾಯವು. ಏನೇನೆಲ್ಲ ಬೊಗಳ್ತೇ ಬಿದ್ದೀವು' ಎಂದಳು. ಅವನ ಕೈ ಆಚೀಚೆ ಆಡುತ್ತಲೇ ಇತ್ತು. ತಣ್ಣೀರ ಸ್ನಾನದ ಮಧ್ಯೆಯೂ ಬಿಸಿಯಾದ ಅವಳ ಮೈ ತಿಮ್ಮಣ್ಣನಲ್ಲಿ ಇನ್ನಷ್ಟು ಹುರುಪು ತುಂಬಿತು. ಮನಸ್ವೇಚ್ಛೆ ಮುತ್ತುಕೊಟ್ಟ. ಇವ ಬಹಳ ಮುಂದಕ್ಕೆ ಹೋಗುತ್ತಿದ್ದಾನೆನಿಸಿ, 'ಸಾಕೀಗ ನಿಲ್ಲಿಸು' ಎಂದು ಅವನ ಕೈಯನ್ನು ತನ್ನ ಎರಡೂ ಕೈಯಿಂದ ಗಟ್ಟಿಯಾಗಿ ಹಿಡಕೊಂಡಳು ಮತ್ತು ಹಿಡಿದ ಕೈ ಬಿಡದೇ ಹೇಳಿದ್ದಳು : 'ಆದಷ್ಟು ಬೇಗ ಮದುವೆ ಆಗಿ ಬಿಡುವಾ. ಈ ಜನರ ಬಾಯಿ ಕಟ್ಟೋಕ್ ಆಗೂದಿಲ್ಲ.'

'ನಿಮ್ಮಜ್ಜಿಗೆ ಕೇಳಿದ್ದೀಯೋ ಹೆಂಗೆ ?'

'ಕೇಳಿದ್ದೂ ಆಯ್ತು. ಒಂದು ಸಣ್ಣ ಜಗಳಾನೂ ಆಯ್ತು.'

'ಮತ್ತೆ ಯಾವ ಧೈರ್ಯದಿಂದ ಮದುವೆ ಮಾತಾಡ್ತೀ ?'

'ನಿಂಗೆ ಪಕ್ಕಾ ಮನಸ್ಸೀತೋ ಹೆಂಗೆ ? ಅದ್ ಮುಂಚೆ ಹೇಳ್'

'ನನ್ ಇಸಿಯಾ ಬಿಡು. ಮದುವೆ ಆದ್ರೆ ನಿಂಗೆ. ಆಗದಿದ್ರೆ ಈ ಜನ್ಮಪೂರಾ ಕನ್ಯೆಪೋರನಾಗೇ ಇದ್ದುಕೊಂಡು ಸಾಯುವವ ನಾನು'

ಅಷ್ಟರಲ್ಲಿ ಹಸಿಸೌದೆ ಹೊರೆ ಹೊತ್ತುಕೊಂಡ ಮೂರ್ನಾಲ್ಕು ಜನ ಹಾಲಕ್ಕಿ ಹೆಂಗಸರು ತೊಡೆವರೆಗೂ ಕಪಡ ಎತ್ತಿಹಿಡಕೊಡು ಹಳ್ಳ ಹಾಯುತ್ತ ಬಂದರು. ಅವರನ್ನು ಕಂಡ ತಿಮ್ಮಣ್ಣ ಅವಳ ಬೊಗಸೆಯಲ್ಲಿದ್ದ ತನ್ನ ಕೈಯನ್ನು ತಟ್ಟನೆ ಎಳೆದುಕೊಂಡ. ಫಕ್ಕನೆ ನಕ್ಕ ಕಲ್ಯಾಣಿ, 'ಹೆದರ್‌ಪುಕ್ಕ' ಅಂದಳು.

ಆ ಸಂದರ್ಭದಲ್ಲಿ ಅವಳು ಯಾರನ್ನೇ ಆದರೂ ಎದುರಿಸಬಲ್ಲಷ್ಟು ಖುಷಿಯಲ್ಲೂ, ಧೈರ್ಯದಲ್ಲೂ ಇದ್ದಳು. 'ಬಾ' ಎಂದವಳೇ ಎದ್ದು ನಿಂತಳು. ಒಣ ಹಾಕಿದ ಬಟ್ಟೆ ಮಡಚಿಕೊಂಡು ಇಬ್ಬರೂ ಹೊರಟರು.

ಮುಂದೆ ತಿಮ್ಮಣ್ಣ ಹಿಂದೆ ಕಲ್ಯಾಣಿ.

'ಬೇರಮ್ಮಕ್ಕನ ಮೊಮ್ಮಗಳೂ, ಮೋಟ ತಿಮ್ಮಣ್ಣನೂ ಅಸ್ಲಳ್ಳದ ಹಿಂಡಿನಲ್ಲಿ ಗಂಟುಹಾಕ್ಕೊಂಡು ಬಿದ್ದೀರ ಕಂಡಾ' ಅನ್ನುವ ಸುದ್ದಿ ತಿರಕುಳಿ, ಅಂಬಾರಕೊಡ್ಲು, ಗಾಟಿ ಕಂತ್ರಿ, ಕಂಡೂಗದ್ದೆಯವರೆಗೂ ಹಬ್ಬಾ ಹೋಗಿತ್ತು. ಅಜ್ಜಿ - ಮೊಮ್ಮಗಳ ಮಧ್ಯೆ ದಿನಕ್ಕೊಂದು ಜಗಳ ಸುರುವಾಗಿತ್ತು. ಬೇರಮ್ಮಕ್ಕನ ಗವಲುಬಾಯಿಂದ ಪೂರಾ ಸೊಂಟದ ಕೆಳಗಿನದೇ ಮಾತು. ಮಂಡದ ಮನೆಗೆ 'ಇಚಾರ' ಹಾಕೂಕ್ ಹೋಗಿ ಬರುವ ಜನಕ್ಕೆ ಇದೊಂದು ಪುಕ್ಕಟೆ ಮನರಂಜನೆಯಾಗಿತ್ತು. ಇಷ್ಟೆಲ್ಲ ನಡೀವಾಗ್ಲೇ ಒಂದಿನ ಕಲ್ಯಾಣಿ ಮದ್ರಾತ್ರಿ ಹೊತ್ತಿಗೆ ಒಬ್ಬಳೇ ಬಂದು ತಿಮ್ಮಣ್ಣನ ಎಬ್ಬಿಸಿದ್ದಳು. 'ನೀ ನನ್ನ ಮದುವೆ ಆಗೂದೇ ಹೌದಾಗಿದ್ರೆ ಈ ರಾತ್ರಿ ಬೆಳಗಾಗೂದ್ರೊಳ್ಗೆ ಎಲ್ಲಾದ್ರೂ ಕರ್‍ಕೊಂಡ್ಹೋಗಿ ಬಿಡು. ಇಲ್ಲದಿದ್ರೆ ಆ ಬೇಬರ್ಸಿ ನನ್ನ ಸೂಳೆ ಮಾಡ್ದಾಕಿ ಬಿಡೂದೇ ಖರೆ' ಎಂದು ಅವನ ಎದೆಯಮೇಲೆ ತಲೆಯಿಟ್ಟು ಅತ್ತಿದ್ದಳು. 'ಓಡಿ ಹೋಗುವಂಥದ್ದು ನಮದೇನ್ ಆಗಿದೆ ಅಂತ್ಹೇಳಿ ನೀ ಹೀಂಗೆಲ್ಲ ಕಣ್ಣೀರ್ ಹಾಕ್ತಿ ? ಚೊಳಚಿ ಹಬ್ಬದವಾಡಿಕೆ ರಾಜಾರೂಢಿಯಿಂದ ನಮ್ಗೆ ಆಡಿಕೊಂಡೋರ ಎದೆಮ್ಯಾಗೆ ನಿನ್ನ ಮದುವೆ ಆಗ್ತೀನೋ ಇಲ್ವೋ ನೋಡು. ನಾ ಗಟ್ಟಿ ಇರುವಾಗ ನೀ ಯಾಕ್ ಹೆದರ್‍ತಿ ?' ಎಂದು ಧೈರ್ಯ ತುಂಬಿದ್ದ. ಚೊಳಚಿ ಹಬ್ಬಕ್ಕೆ ಇನ್ನೊಂದೇ ತಿಂಗಳಿರುವುದು ನೆನಪಾಗಿ ಕಲ್ಯಾಣಿ ಸಮಾಧಾನ ತಂದುಕೊಂಡು ಮರಳಿದ್ದಳು.

'ಥೋ' ಬೆಳಗಾಗೂಕಾಯ್ತಲ್ಲಪ್ಪ ! ಎಂದವನೇ ತಿಮ್ಮಣ್ಣ ಪುನಃ ಬಲಕ್ಕೆ ಹೊರಳಿದ. ನಿದ್ದೆಯ ಹಂಗನ್ನೇ ಹರಕೊಂಡಂತಿದ್ದ ಅವನ ಮನಸ್ಸು ಈಗ ನೇರ ಸಣ್ಣಮ್ಮದೇವಿ ಗುಡಿಗೇ ಹೋಗಿ ಗಿರಕಿ ಹೊಡೆಯತೊಡಗಿತು.

ಸಣ್ಣಮ್ಮದೇವಿ ಸಾಮಾನ್ಯಳಲ್ಲ. ಅಲಗೇರಿ ಬಂಡೀಹಬ್ಬಕ್ಕೆ ಕೋಳೀ ಕೊಯ್ಯುವ ಜನವೇ ಅದಕ್ಕೆ ಸಾಕ್ಷಿ. ಆ ತಾಯಿ ಸ್ಥಾನಕ್ಕೆ ಹೋಗಿ ತಾಳಿ ಕಟ್ಟೋದು ಎಂಬ ತೀರ್ಮಾನಕ್ಕೆ ಇಬ್ಬರೂ ಬಂದಿದ್ದರು. ರಾಜಾರೂಢಿ ಮದುವೆ ಮಾಡ್ಕೋಳ್ಳೋ ಹಂಬಲ ತಿಮ್ಮಣ್ಣನದಾಗಿದ್ದರೂ ಕಲ್ಯಾಣಿಯ ಕಡೆ ಪರಿಸ್ಥಿತಿ ಅನುಕೂಲವಾಗಿರಲಿಲ್ಲ. 'ಅಪ್ಪ - ಅವ್ವ ಇಲ್ಲದ ಆ ಕೈ ಕುಂಟನ ಕಟ್ಕಂಬೂ ಬದಲು ನಾ ಹೇಳ್ದೋರ್ ಕೂಡೆ ಮಲಗಿದ್ರೇನೇ ಸಾಯ್ಲಿ' ಎಂದು ಆರ್ಭಟಿಸಿದ ಸುದ್ದಿ ಕೇಳಿ ಹತ್‌ಮಂದಿ ಮುಂದ ಮದುವೆ ಮಾಡ್ಕಂಬೂ ಇಚಾರನೇ ಬಿಟ್ಟುಬಿಟ್ಟಿದ್ದ. ಆದ್ರೂ ತಿಮ್ಮಣ್ಣನ ಮನಸ್ಸು ತಡೀಲಿಲ್ಲ. ಯಾವುದೇ ಚಲೋ ಕೆಲ್ಸ ಇದ್ರೂ ತಮ್ಮಣ್ಣ ಭಟ್ಟರಿಗೆ ಕೇಳುವುದೊಂದು ರೂಢಿಯಿದೆಯಲ್ಲ - ಅಪ್ಪನ ಕಾಲದಿಂದಲೂ ನಡಕೊಂಡು ಬಂದ ರೂಢಿಯನ್ನು ಯಾಕೆ ಬಿಡಬೇಕು ಅಂದುಕೊಂಡವನೇ ಹೋಗಿ ಕೇಳಿಯೇಬಿಟ್ಟಿದ್ದ. 'ಸಣ್ಣಮ್ಮದೇವಿ ಗುಡಿಗೆ ಹೋಗಿ ತಾಳೀಕಟ್ಟೂಕೆ ಅಡ್ಡಿಯಿಲ್ಲ. ಆದ್ರೆ ಹೋಗುವ ಮೊದ್ಲು ನಿನ್ನ ಕುಲದೇವರಿಗೆ ಜೋಡು ತಪ್ಪುಗಾಯಿ ತೆಗೆದಿಟ್ಟು ಹೋಗು' ಎಂದಿದ್ದರು ತಮ್ಮಣ್ಣ ಭಟ್ಟರು. 'ಕಡಮೆ ಬೀರಾ, ಮದುವೆ ಮಾಡ್ಕೊಂಡು ವರ್ಷಾಗೂದ್ರೊಳಗೆ ನೀ ಇದ್ದಲ್ಲಿಗೆ ಅವಳ್ನ ಕರ್ಕೊಂಡ್ ಬಂದು ನಿನ್ನ ತಾನದಲ್ಲೊಂದು ಹೊಸ ಗಂಟಿ ತೂಗಸ್ತಿ' ಎಂಬುದಾಗಿ ಹರಕೆ ಹೊತ್ಕೊಂಡ ತಿಮ್ಮಣ್ಣ, ಜೋಡುಕಾಯಿ ತೆಗೆದು ಮನೆ ಚೊಳಚಿ ಮುಂದಿಟ್ಟು ಕೈ ಮುಗಿದ.

ಮೊದಲು ತಾನು ಕಂಡೂಗದ್ದೆಗೆ ಹೋಗಿ ಬೊಮ್ಮುಗೋಡನ ಮನೆಕೂಡೆ ನಿಲ್ಲುವುದೆಂದೂ, ಅವಳು ಅಲ್ಲಿಗೆ ಬಂದು ಕೂಡಿಕೊಳ್ಳುವುದೆಂದೂ ಮಾತಾಡಿಕೊಂಡಿದ್ದರು.

ಮುಂಜಾನೆ ಎದ್ದವನೇ ಹೊಸ ಹಮಾಮ್ ಸಾಬೂನು ಹಾಕಿ ತಲೆಸ್ನಾನ ಮಾಡಿ ಆತ್ಮಶೇಟ್ ಮಾಡಿಕೊಟ್ಟ ಬೆಳ್ಳಿ ಮಂಗಳಸೂತ್ರವನ್ನು ಬಲಬದಿಯ ಅಂಗಿಕಿಸೆಯಲ್ಲಿಟ್ಟು ಕೊಂಡು ತಿಮ್ಮಣ್ಣ ಕಂಡೂಗದ್ದೆಯ ಹಾದಿ ಸವೆಸಿದ.

ಹತ್ತು ಗಂಟೆಗೆ ಬರಬೇಕಾದ ಹೆಂಗಸು ಹನ್ನೊಂದು ಆದರೂ ಬರದಿದ್ದಾಗ ಗಾಬರಿಗೊಂಡ. ಹೊತ್ತು ನೆತ್ತಿಗೆ ಬಂತು. 'ನಾ ಹೇಳಿದ್ದನ್ನು ತಪ್ಪ ಸಮಜೂತಿ ಮಾಡಿಕೊಂಡಳೋ ಮತ್ತೆ ? ಹಳ್ಳದಾಚೆ ರಸ್ತೆ ಹಿಡಿದು ನೇರ ಸಣ್ಣಮ್ಮದೇವಿ ಗುಡಿಗೇ ಹೋದಳೋ ಹ್ಯಾಂಗ್ತೆ ?' ಅಂದುಕೊಳ್ಳುತ್ತ ನೇರವಾಗಿ ಅಲಗೇರಿ ಕಡೆಗೆ ಹೆಜ್ಜೆ ಹಾಕತೊಡಗಿದ. ಅಲ್ಲೂ ಬರಲಿಲ್ಲ. ಗೋಟೀ ಆಡುತ್ತಿರುವ ಮಕ್ಕಳಿಬ್ಬರ ಹೊರತೂ ಬೇರೆ ಯಾರೂ ಇಲ್ಲ. ಪಾಟೀಚೀಲ ಬದಿಗೆ ತೆಗೆದಿಟ್ಟು ಆಡುತ್ತಿದ್ದಾವೆ. ಬಾಳ್ಮಾಡಿ ಶಾಲೆಗೆ ಚಕ್ಕರ್ ಹೊಡೆದಿರಬೇಕು. 'ತಮ್ಮಾ, ಇಲ್ಲೊಂದು ಎಳೆ ಹೆಂಗ್ಸು ಬಂದೀತೋ ?' ಎಂದು ಕೇಳಲಾಗಿ ಇಬ್ಬರೂ ಏಕಕಾಲಕ್ಕೆ 'ಇಲ್ಲ' ಎಂದರು. ತಿಮ್ಮಣ್ಣನ ಮನಸ್ಸು ಮನಸ್ಸಾಗಿ ಉಳಿಯಲಿಲ್ಲ. ನಿಂತಲ್ಲಿ ನಿಲ್ಲಲೂ ಆಗಲಿಲ್ಲ. ಪುನಃ ಕಂಡೂಗದ್ದೆ ರಸ್ತೆ ಹಿಡಿದು ನಡೆಯತೊಡಗಿದ. ಕಣ್ಣುಮುಟ್ಟುವವರೆಗೂ ನೋಡಿ, ಎಲ್ಲೂ ಕಾಂಬೂದಿಲ್ಲ - ಏನೋ ಅವಘಡ ಆಗಿರಬೇಕು ಅನ್ನಿಸಿ, ನೇರ ಬೇರಮ್ಮಕ್ಕನ

ಮನೆಗೇ ಬಂದು, 'ಬೇಕಾದ್ದಾಗಲಿ' ಎಂಬಂತೆ ಅವಳ ಮನೆ ಜಗಲಿಗೇ ಹೋಗಿ ನಿಂತು, 'ಕಲ್ಯಾಣಿ ಎಲ್ಲಿ ?' ಎಂದು ಪ್ರಶ್ನೆಯಿಟ್ಟ.

ಮೈಮೇಲೆ ಹರಿಯುತ್ತಿದ್ದ ಕೋಳೀಪುಸ್ಕನ್ನು ಹೆಕ್ಕಿಹೆಕ್ಕಿ ಒರೆಯುತ್ತಲಿದ್ದ ಬೇರಮ್ಮಕ್ಕ ಒಂದುಕ್ಷಣ ತಬ್ಬಿಬ್ಬಾದವಳು ಮನಸಲ್ಲೇ, 'ಈ ಗುಲಾಮನ ಧೈರ್ಯ ನೋಡೊ !' ಅಂದುಕೊಂಡಳು. ಮರುಕ್ಷಣವೇ ಸುಧಾರಿಸಿಕೊಂಡು, 'ಕಲ್ಯಾಣಿಗೆ ಹಾರ್ಸಕಂಡ್ಹೋಗಿ ನಂಗೇ "ಕಲ್ಯಾಣಿಯೆಲ್ಲಿ" ಅಂತ ಕೇಳ್ತೀ ಬೇವರ್ಸಿ ? ನನ್ನ ಮೊಮ್ಮಗಳ್ನ ರಾತ್ರಿ ಬೆಳಗಾಗೂದ್ರೊಳಗೆ ತಂದ್ಕೊಡದಿದ್ರೆ ಇಮಾಮ್ ಫೌಜದಾರಗೆ ಹೇಳಿ ನಿನ್ನ ಬಾಯಿಗೆ ಬೂಟ ಹೆಟ್‌ಸ್ತೀನೋ ಇಲ್ವೋ ನೋಡ್' ಎಂದು ಆರ್ಭಟಿಸಿದ್ದಳು. ಇಮಾಮ್ ಫೌಜದಾರನ ಹೆಸರು ಇಷ್ಟು ಸಲೀಸಾಗಿ ಅವಳು ಎತ್ತಿದ್ದರ ಹಿಂದಿನ ಬಲ ಏನು ಅನ್ನುವುದು ತಿಮ್ಮಣ್ಣನಿಗೆ ಗೊತ್ತಿಲ್ಲದೇ ಇಲ್ಲ. ಪ್ರತಿ ಅಂಕೋಲೆ ಬಂಡೀಹಬ್ಬಕ್ಕೂ ಕೋಳೀ ಆಸೆ ತಿಂಬೂಕೆ ಇಮಾಮ್ ಫೌಜದಾರ ಬರಲೇಬೇಕು. ಅದು ಊರಿಗೇ ಗೊತ್ತಿರುವ ಸಂಗತಿ. 'ಕಳ್ಳ್ ಬೋಳಿಮಗನೆ, ನಿಂಗೆ ಒಳಗೆ ಹಾಕ್ಸದಿದ್ರೆ ನನ್ನ ಹೆಸರು ತೆಗೆದು ಹೇಲಲ್ಹಾಕು' ಎಂದೂ ಪಂಥ ಕಟ್ಟಿದ್ದಳು. 'ಎಲ್ಲಿ ಹುಗ್ಸಿಟ್ಟಿ ?' ಎಂದು ಆರ್ಭಟಿಸಿದ್ದಳು.

'ಇಮಾಮ್ ಫೌಜದಾರನ ತಾಕತ್ತು ಈ ಬೋಳಿ ಬಾಯಿಂದ ಮಾತಾಡ್ತದೆ' ಅಂದುಕೊಂಡ ತಿಮ್ಮಣ್ಣ ಕತ್ತಲಾಗುತ್ತಲೇ ಮನೆಗೆ ಹೋಗಿ ಮಲಗಿದ್ದ. ಅಂದಾಜು ಸುಳ್ಳಾಗಲಿಲ್ಲ. ರಾತ್ರಿ ಹತ್ತರ ಸುಮಾರಿಗೆ ರೊಂಯ್ಯನೇ ಬಂದ ಪೊಲೀಸ್‌ರ ಜೀಪು ತಿಮ್ಮಣ್ಣನನ್ನು ತುಂಬಿಕೊಂಡು ಹೋಗಿತ್ತು. ಅಯ್ಯಯ್ಯಪ್ಪೋ ತುಳೀಬ್ಯಾಡ್ರೋ....

❖ ❖ ❖

ಕುಟುಕ್ ಅನಿಸಿದ ಕಿವಿ ಸಂದಿಗೆ ಪಟ್ಟನೆ ಬಾರಿಸಿದ ತಿಮ್ಮಣ್ಣನ ಕೈಗೆ ಸತ್ತಸೊಳ್ಳೆಯ ರಕ್ತ ತಾಗಿತ್ತು. ಇನ್ನು ನಿದ್ದೆ ಬರುವುದು ಅಷ್ಟ್ರಾಗೇ ಇದೆ. ಕೋಳಿ ಸರಗೈಯುಕ್ ಸುರುಮಾಡದ್ದು ಅನ್ನುತ್ತ ಎದ್ದು ಕುಳಿತ. ಎಂದಿನ ಆಲಾಪದೊಂದಿಗೆ ಕುಂಯ್‌ನುಸಿಗಳು ಕಿವಿ, ಕಣ್ಣು, ಮುಖದ ತುಂಬೆಲ್ಲ ಓಡಾಡುತ್ತಲೇ ಇದ್ದವು. 'ಹನ್ನೆರಡು ವರ್ಷ ಜೈಲಿನಲ್ಲಿ ಎಂತೆಂಥ ಸೊಳ್ಳೆಗಳನ್ನು ನಿಭಾಯಿಸಿದ ನನಗೆ ನೀವು ಯಾವ ಮಹಾ ?' ಅನ್ನುವಂತೆ ಪಟಪಟ ಹೊಡೆದು ಉರುಳಿಸಿದವನೇ ಚಿಮಣಿ ಕಚ್ಚಿದ. ಬಾಯಿಗೆ ನೀರು ಹಾಕಿ ಮುಕ್ಕಳಿಸಿ ಉಗುಳಿ ಬಂದು ಕವಳದ ಸಂಚಿ ಬಿಚ್ಚುತ್ತಿದ್ದಂತೆ ಕಾಗೆಗಳು 'ಕಾ ಕಾ' ಅನ್ನಲು ಸುರುಮಾಡಿದ್ದವು.

❖ ❖ ❖

'ಎಲ್ಲ ಮಾಡಿದವಳೇ ಆ ಬೋಳಿ' ಎಂದ ಅಪ್ಪನ ಮಾತಿನ ಒಳಗಡೆ ತಿಮ್ಮಣ್ಣಭಾವನ ಸಮಗ್ರ ದುರಂತ ಕತೆಯೇ ಅಡಗಿದೆ ಅನ್ನಿಸಿತ್ತು ನನಗೆ. ಬೆಳಗಾದ ಕೂಡ್ಲೆ ಎದ್ದವನೇ ಭಾವನ

ಮನೆಗೆ ಹೋಗಬೇಕು. ನಾನು ಹಣ್ಣುಕೂದಲು ತೆಗೀವಾಗ ನಿನ್ನೆ ದಿನ ಹಾಗೆ ಹೇಳಿದ್ದು ತಪ್ಪಾಯಿತು ಅನ್ನಬೇಕು. ಕೊತ್ಲಚೀಲದ ಒಳಗೆ ನನ್ನ ತೀರ್ಮಾನವನ್ನು ಬಂದೋಬಸ್ತಾಗಿ ಇಟ್ಟುಕೊಂಡವನಂತೆ ಕಾಲನ್ನು ಇನ್ನಷ್ಟು ಮಡಚಿಕೊಂಡು ದೇಹವನ್ನು ಪೂರ್ತಿ ಒಳಗೆ ತೂರಿಕೊಂಡಿದ್ದೆ.

ಮರುದಿನ ಸಾಲೆಗೆ ಹೋಗುತ್ತೇನೆಂದು ಹೇಳಿ ಹೋದವನು ಸೀದಾ ಅವನ ಮನೆಗೇ ಹೋಗಿದ್ದೆ. ತನ್ನ ಜೀವನದಲ್ಲಿ ಏನೇನೂ ಘಟಿಸಿಲ್ಲ ಎಂಬಂತೆ ಕಾಣತೊಡಗಿದ ತಿಮ್ಮಣ್ಣಭಾವ. 'ಯಾಕೋ, ಯಾದು ಸಾಲಿಗ್ ಹೋಗಲಿಲ್ವೋ ?' ಎಂದು ಕೇಳಿದಾಗ ನನಗೆ ನಾಚಿಕೆಯಾಗಿತ್ತು. 'ಹೋತಿ ಹೋತಿ ಹಿಂಗೇ ನಿನ್ನ ಮನ್‌ಕೂಡಿಂದೇ - ನಿಂಗೆ ಮಾತಾಡ್ಸಕಂಡೆ ಹೋಗುವಾ ಅನ್ನಿಸ್ತು ಅದಕ್ಕೇ ಬಂದೆ' ಎಂದವನೇ ಆ ಮಾತನ್ನು ಸಾಬೀತು ಪಡಿಸುವವನೆಂಬಂತೆ ಹೆಜ್ಜೆ ಹಾಕತೊಡಗಿದ್ದೆ. 'ನಿಂತ್ಕಾ' ಎಂದ ಭಾವ ತನ್ನ ಹುಲ್ಲಿನ ಮನೆಗೆ ಹಬ್ಬಿದ ಬಳ್ಳಿಯಿಂದ ಎರಡು ಎಳೆ ಸವತೆಕಾಯಿ ತೆಗೆದುಕೊಟ್ಟಿದ್ದ. ಅವನ್ನು ತೆಗೆದುಕೊಳ್ಳುತ್ತಿದ್ದಂತೆ - 'ಭಾವ, ನಾ ನಿನ್ನೆ ಸಂಜೆ ಹೊತ್ತಿಗೆ ಹಣ್ಣುಕೂದ್ಲು ತೆಗೀವಾಗೆ ನಿಂಗೇನೋ ಕೇಳಿದ್ನಲ್ಲ. ಅದು ತಪ್ಪಾಯಿತ್, ಹಾಂ ?' ಎಂದವನೇ ಅವನ ಪ್ರತಿಕ್ರಿಯೆಗೂ ಕಾಯದೆ ಶಾಲೆಯ ಕಡೆ ಮುಖಮಾಡಿ ಓಡಿದ್ದೆ. ಚೀಲದಲ್ಲಿ ತುರುಕುವಾಗ ಒಂದು ಸವತೆಕಾಯಿ ಕೈ ತಪ್ಪಿ ಬಿತ್ತು. ಎತ್ತಿಕೊಳ್ಳಲು ಹಿಂತಿರುಗಿದಾಗ ತಿಮ್ಮಣ್ಣಭಾವ ಕವಳ ಹಾಕಿದ ತನ್ನ ಕೆಂಪುಬಾಯಿ ತುಂಬ ನಗ್ತಾ ನಿಂತಿದ್ದ.

●

# ಬಿಸಿಲು ಮತ್ತು ಬೇವಿನಮರ

● ಡಾ. ಕಮಲಾ ಹೆಮ್ಮಿಗೆ

ಸನ್ ೧೮೭೦ ರ ನಟ್ಟ ನಡು ಬೇಸಿಗೆಯ ಮಧ್ಯಾಹ್ನ, ಧಾರವಾಡ ನಗರದ ದೇಸಾಯಿ ಓಣಿಯ ಒಂದು ಮನೆಯ ಅಟ್ಟದಲ್ಲಿ ಧೂಳು ತಿನ್ನುತ್ತ ಕೂತವರು ವರ್ಧಮಾನಾಚಾರ್ಯರು, ಓದುತ್ತಿದ್ದುದು ರಾಯಣ್ಣ ಇಂಗ್ಲೀಷರನ್ನು ಪ್ರತಿಭಟಿಸಿದ ಲಾವಣಿ.

ಚಕ್ಕರ ಟೊಪ್ಪಿಗಿ ಫಿರಂಗೆರನಾ

ಲೆಕ್ಕವಿಲ್ಲದ ಕಡದ ದಂಡಿನ

ದಿಕ್ಕತಪ್ಪಿಸಿ ಬಿಟ್ಟಾರ್ರೆಲ್ಲಾ ವೀರರ.

ಓದುವುದೇನು ಸಣ್ಣಗೆ ರಾಗವಾಗಿ ಹಾಡುತ್ತಿದ್ದರೆಂದರೂ ನಡೆಯುತ್ತದೆ.

ಅಷ್ಟರಲ್ಲಿ ಬಡಬಡ ಮೆಟ್ಟಲು ಹತ್ತಿ ಬಂದವರು ಅವರ ಅಣ್ಣಾ ಪದ್ಮನಾಭಾಚಾರ್ಯರು. 'ಸುದ್ದಿ ಹತ್ತಿತ್ಽ' ಎಂದರು. ವರ್ಧಮಾನಾಚಾರ್ಯರು ಜಡ್ಡಿನ ಧ್ವನಿಯಲ್ಲಿ 'ಏನು' ಎಂದರು. 'ಅದ್ಽ ಹಳೀ ಸುದ್ದಿ. ನೀ ಸಿಂಧದೊಳಗಿದ್ದಾಗ...' ಆಚಾರ್ಯರು ಸಿಡುಕುತ್ತ 'ಹಿರೇರು ಬಹಿಷ್ಕಾರ ಹಾಕಬೇಕಂತಾರ ಹೌದಿಲ್ಲೊ' ಎಂದರು. ಪದ್ಮನಾಭಾಚಾರ್ಯರು 'ಅವರ ಸುದ್ದಿ ಹೋಗಲಿ. ನೀ ಮ್ಲೇಚ್ಛ ಸ್ತ್ರೀ ಸಹವಾಸ ಮಾಡಿದ್ದಕ್ಕ' ಎಂದು ವಾಕ್ಯ ಮುಂದುವರಿಸದೆ ಗೊಂದಲಕ್ಕೆ ಬಿದ್ದರು. ವರ್ಧಮಾನಾಚಾರ್ಯರು 'ಹಾಕಲಿ ಬಿಡು' ಎಂದು ಮತ್ತೆ ಪುಸ್ತಕ ಓದಲಾರಂಭಿಸಿದರು. 'ಆದರೆ ಅಣ್ಣಾ ನಿನಗನಕಾ ಒಬ್ಬಾಕೆ ಹುಡಿಗಿ. ಲಗ್ನಾ ಮಾಡಿ ಕೊಟ್ಟೇದಿ. ಇದು ನಿನ್ನೊಬ್ಬನ ಪ್ರಶ್ನಿ ಇದ್ದರ ಬ್ಯಾರೆ ಇತ್ತು. ಆದರ, ಇದು ನಮ್ಮ ಕುಟುಂಬದ್ದದ' ಎಂದು ಅತಿ ಗಂಭೀರ ಮುಖಭಾವದಿಂದ ಹೇಳಿದರು. ವರ್ಧಮಾನಾಚಾರ್ಯರು ಸಿಟ್ಟನ್ನು ಸಹಾನುಭೂತಿಯಾಗಿ ಪರಿವರ್ತಿಸುತ್ತ ಕೂತರು. ಕಡೆಗೆ ಅಣ್ಣಾ 'ಯಮುನಾ ಹೋದಿಂದ ಒಂದ ನಮೂನಿ ಬದಲಾಗಿ ವರ್ಧಮಾನಾ, ಇನ್ನಾ ಸಮಪಾಲು ಆಯುಷ್ಯ ತೆಗಿಯೋದದ ಹಂಚಿಗೊಳ್ಳೋ ಹೃದಯಾ ಬ್ಯಾಡೇನು' ಎಂದು ಕಕ್ಕುಲತೆಯಿಂದ ಕೇಳಿ ಉತ್ತರಕ್ಕೆ ಕಾಯದೆ ನಿಧಾನಕ್ಕೆ ಮೆಟ್ಟಿಲಿಳಿದು ಹೋದರು.

ಹಂಚಿಕೊಳ್ಳುವ ಹೃದಯ ? ... ವರ್ಧಮಾನಾಚಾರ್ಯರ ಮನಸ್ಸು, ಅವಕಾಶವಿದ್ದಾಗಲೂ ತೆರೆದುಕೊಳ್ಳದಿದ್ದ ತನ್ನ ವ್ಯಕ್ತಿತ್ವವನ್ನು ನಿಂದಿಸಿತು.

ಜೀವನವೆಂದರೆ ಬರೇ ಸವಾಲಲ್ಲ ಜಿದ್ದಲ್ಲ ಎಂದು ಮೊದಲಿಗೆ ತೋರಿಸಿಕೊಟ್ಟಾಕೆ ಅವಳು. ಬೊಗಸೆಯಲ್ಲಿ ತುಂಬಿದ ಹೂ ಭೋಗಿಸಲಿಲ್ಲ ತಾನು ಮುಡಿಗಿಟ್ಟುಕೊಳ್ಳುವುದನ್ನು ತನ್ನ ಕಪಟ ತೇಜಸ್ಸಿನೆದುರು ದ್ವೇಷಿಸಲಾರದೇ ಹೋದಳು.

ಸಖಿ ಬಾ ಬಾ ಮಾರನ ಕಿರಿಬೆರಳರಗಿಳಿಯೇ
ಮದನ ಮನೋಹರಳೇ

ಎಂದು ಹಾಡುತ್ತಿದ್ದರೆ, ತೇಲುಗಣ್ಣಿನಿಂದ ಮೆಚ್ಚುಗೆ ಸೂಚಿಸುತ್ತಿದ್ದಳು. 'ನಿನ್ನ ಆತ್ಮ ಪವಿತ್ರ' ಎಂದು ಪದೇ ಪದೇ ಅಂದಾಗ 'ಅಂದರೆ ದೇಹ ಅಪವಿತ್ರವೇ' ಎಂದು ನಕ್ಕು ತನ್ನನ್ನು ಗೊಂದಲಕ್ಕೆ ಹಾಕುತ್ತಿದ್ದಳು.

ನಿಜವಾಗಿ ವರ್ಧಮಾನಾಚಾರ್ಯರಿಗೆ ಸಿಟ್ಟಿರುವುದು ತನ್ನ ಮೃದುತ್ವದ ಬಗ್ಗೆ. ಫೌಜ್‌ದಾರನಾಗಿದ್ದ ಅಪ್ಪ ಸಿಟ್ಟಿನಲ್ಲೊಮ್ಮೆ ಸೂಪರಿಂಟೆಂಡೆಂಟ್ ಸಾಹೇಬರಿಗೆ ಮೆಟ್ಟಿನಿಂದ ಇಕ್ಕಿದ್ದು, ಹಗಲೆಲ್ಲ ನೆನಪಾಗುತ್ತದೆ. ತನ್ಮೂಲಕ ನೌಕರಿ ಕಳೆದುಕೊಂಡರೂ ದುಃಖಿಸದೇ ಭಂಡನಾಗಿದ್ದ ಆತನ ಧಾರ್ಷ್ಟ್ಯ, ತನಗಿದ್ದಿದ್ದರೆ ಎನ್ನಿಸುತ್ತದೆ.

ತಾನೆಂಥ ಆತ್ಮವಂಚಕನೆಂದರೆ, ಆಕೆಗೆ ಜಗನ್ನಾಥ ಲವಂಗಿಯವರ ಕತೆ ಹೇಳುತ್ತ ಆಕೆಗೆ ತಾನು ತಂಗಿ ನಾನು ಅಣ್ಣಾ ಎಂಬಂಥ ಭಾವನೆ ಬರಿಸುತ್ತಿದ್ದೆ. ಬಹುಶಃ ಬ್ರಾಹ್ಮಣ್ಯ ಕಾಪಾಡಿಕೊಳ್ಳುವ ಒಳಗಿನ ವಾಂಛೆ ಹಾಗೆ ಮಾಡಿಸಿದ್ದೀತು. ಇಂಥ ತನ್ನನ್ನು ಈ ಹಿರಿಯರೆಲ್ಲ ಕೂಡಿ ಖರೇ ಅಂದರೂ ಮೆಟ್ಟಿನಲ್ಲಿ ಹೊಡೆಯಬೇಕು. ಆದರೆ ಯಾವ ಭಾವನೆಯಿಂದ ತನ್ನ ಸುಖ ಗೋರಿಯಾಯಿತೋ ಅದೇ ಭಾವನೆಯನ್ನು ಇಲ್ಲಿಯವರು ಪೂಜಿಸಲು ಬಿಡಬಾರದು ತಾನು ಕ್ಷಮೆ ಕೇಳಿ, ಅವರು ಪ್ರಾಯಶ್ಚಿತ್ತ ಮಾಡಿಸಿ ಬೇರೆ ಲಗ್ನ...? ಆಚಾರ್ಯರು ಮುಂದೆ ಕಲ್ಪಿಸಲಾರದೇ ಹೋದರು.

ಅಷ್ಟರಲ್ಲಿ ಅವರ ಪರಮಾಪ್ತ ಶಿಷ್ಯನಾದ ಭೀಮ್ಯಾ, ಅಟ್ಟಾ ಹತ್ತಿಬಂದ. ಅವರು ಯಾವ ಪೀಠಿಕೆಯೂ ಇಲ್ಲದೆ ಥಟ್ಟನೆ ಇಲ್ಲಿಂದ 'ಹೊರಡೂ ಗಳಿಗಿ ನಿಶ್ಚಯ ಆಗೇದಲೇ ಭೀಮ್ಯಾ. ಆದಷ್ಟು ಸಾಮಾನ ಕಟ್ಟು. ಇದು ಬಾಡಿಗೀ ಮನಿ ನಾಳೆಗೆ ಸ್ವಂತ ಮನೀಗ ಹೋಗೂದದ' ಎಂದರು. ಅವನು ಪ್ರತ್ಯುತ್ತರ ಕೊಡದೆ ಪುಸ್ತಕಗಳ ರಾಶಿಗೆ ಕೈ ಹಾಕಿದ. ಜೊಂಡಿಗಗಳು ತೊಪತೊಪ ಉದುರತೊಡಗಲು ನಕ್ಕ. 'ನಗಲಿಕ್ಕೇನಾತು' ಎಂದವರು ಮುಖ ಗಂಟಿಕ್ಕಿದರು.

❖ ❖ ❖

ಮಂಗಳೂರು ಬಾಸೆಲ್ ಮಿಶನ್ನಿನಿಂದ ಧಾರವಾಡಕ್ಕೆ ಬರುವಾಗ ರೆಗೆಲ್ ಸಾಹೇಬರಿಗೆ ಖಂಡಿತ ಹೆಚ್ಚಿನ ನಿರೀಕ್ಷೆಗಳೇ ಇದ್ದುವು. ಜೀವನದಲ್ಲಿ ವ್ಯಾವಹಾರಿಕತೆ ಗೌಣವಾಗಿದ್ದು ಮಾನವೀಯತೆ ಮುಖ್ಯ ಎಂಬುದು ಅವರ ನಿಲುವು. ಆದರೆ ಈ ಊರಲ್ಲಿಯ ಉಸ್ತುವಾರಿ ಧರ್ಮಗುರು ಸೈಮನ್ನರು ಇದಕ್ಕೆ ತದ್ವಿರುದ್ಧ. ಸ್ಥಳೀಯ ವ್ಯಾಮೋಹ ಕೂಡದು, ವ್ಯವಹಾರ ಚತುರರಾಗಿರುವುದು ಮುಖ್ಯ ಎಂಬುದು ಅವನ ಧೋರಣೆ. ಹೀಗಾಗೇ ರೆಗೆಲ್ಲರು ತಮಗೆ ಕಲೆಕ್ಟರ್ ಬಂಗಲೆ ಬೇಡವೆಂದು ಊರೊಳಗೆ ಸಣ್ಣ ಮನೆ ಹಿಡಿದಾಗ ಅವರಿಗೆ ಕಸಿವಿಸಿಯಾದದ್ದು. ಜತೆಗೆ ಮಾಂಸಾಹಾರದ ಬದಲು ಅನ್ನ, ತಿಳಿ ಸಾರು ಉಣ್ಣುತ್ತೇನೆಂಬ ಅವರ ಹಠ ವಿಚಿತ್ರ ಸರಳತೆಯಾಗಿ ವ್ಯಂಗ್ಯದ ನಗೆ ಮೂಡಿಸಿತ್ತು. ಈ ಮಧ್ಯೆ ಅವರು ಕನ್ನಡ ಪಂಚಾಂಗ ಬೇರೆ ಹೊರತಂದುದು ಆಶ್ಚರ್ಯದ ಜತೆಗೇ ಅಸಮಾಧಾನಕ್ಕೂ ಕಾರಣವಾಯಿತು. ಕರ್ನಾಟಕದ ಕನ್ನಡಿಗರೇ ಈ ವಿಚಾರದಲ್ಲಿ ಅನಾಸಕ್ತರಿದ್ದಾಗ ಇವರಿಗೇಕೆ ಅಧಿಕಪ್ರಸಂಗತನ ಎನಿಸಿತ್ತು.

ಸನ್ನಿವೇಶಗಳೇ ವ್ಯಕ್ತಿತ್ವವನ್ನು ದೃಢವಾಗಿ ನಿರೂಪಿಸುತ್ತವೆಯೆಂದು ನಂಬಿದ್ದ ರೆಗೆಲ್ಲರೂ ಅಂಥ ಒಂದು ಪ್ರಸಂಗಕ್ಕೆ ಮುಖಾಮುಖಿಯಾಗಬೇಕಾದುದು ಆಕಸ್ಮಿಕವಾಗಿರಲಿಲ್ಲ.

ಇತ್ತ ಮನೆಬಿಟ್ಟ ವರ್ಧಮಾನಾಚಾರ್ಯರು ಭೀಮ್ಯಾನೊಂದಿಗೆ, ಕೋರ್ಟಿನ ಆವರಣದಲ್ಲಿದ್ದ ಒಂದು ಖೋಲಿ ಹಿಡಿದರು.

ಒಂದೆರಡು ದಿನಗಳಲ್ಲಿ ಆಚಾರ್ಯರಿಗೆ ಭಯಂಕರ ಜ್ವರ ಬಂದಿತು. ಪಂಡಿತರನ್ನು ಕರೆಯುವೆನೆಂಬ ಭೀಮ್ಯಾನ ಮಾತುಗಳನ್ನು ಕಡೆಗಣಿಸಿದರು. ಹೊರಗೆ ಪ್ರಕೃತಿಯಾದರೂ ಅಷ್ಟೇ ನಿಷ್ಠುರಿಯಾಗಿದ್ದಳು. ಕಣ್ಣು ಕುಕ್ಕುವ ನೀಲಿ ಆಕಾಶ, ಮೋಡದ ಸುಳಿವಿಲ್ಲ. ಬರದ ನೆಲ.

ವರ್ಧಮಾನಾಚಾರ್ಯರ ಜ್ವರ ಉಲ್ಬಣಗೊಳ್ಳುತ್ತ ಹೋಯಿತು, ಭೀಮ್ಯಾ ಹೆಂಡತಿಯಂತೆ ಅವರ ಶುಶ್ರೂಷೆ ಮಾಡುತ್ತಿದ್ದ. 'ಹಣ್ಣವ, ಸುಲೀಲೇನ್ರಿ' ಎಂದಾಗ ಬೇಡ ಎಂಬಂತೆ ಸನ್ನೆ ಮಾಡಿದರು. 'ರೆಗೆಲ್ ಸಾಹೇಬರಿಗೇನಾದ್ರೂ.....' ಎಂಬ ಭೀಮ್ಯಾನ ಮಾತುಗಳಿಂದ ಅವರು ಕ್ರುದ್ಧರಾದರು. 'ಅವ್ರು ಬಣ್ಣದ ಮಾತಾಡ್ತಾರ. ಬಣ್ಣಕ ನೀರು ಕುಡಿಸ್ತಾರ' ಎಂದರು. ಅವನು ದೀನನಂತೆ 'ಹಿಂಗ್ಯಾಕ ಮಕ್ಕಳಗತೀ ಮಾಡ್ತೀರ್ರಿ, ಬಣ್ಣದ ನೀರು ತಗೊಂಡ್ರ ಜಾತಿ ಬಿಟ್ಟ್ಯಾಂಗಲ್ಲ' ಎಂದನು. ವರ್ಧಮಾನಾಚಾರ್ಯರು ಗೋಡೆಯ ಕಡೆ ಮುಖ ಮಾಡಿ ಮಲಗಿದರು. ಅವನು ಏನನ್ನೋ ನಿರ್ಧರಿಸಿ ಕನ್ನಡ ಶಾಲೆಯ ಕಡೆಗೆ ಧಾವಿಸಿದನು.

❖ ❖ ❖

ಶಾಲೆಯಲ್ಲಿ 'ಅ ಬಾರದಿದ್ದರೇನು ಅಮರವಾದರೂ ಹೇಳು' ಎಂದು ಗಾದೆಯ ಮಾತು ಕಲಿಸುತ್ತಿದ್ದ ರೆಗೆಲ್ಲರು ಭೀಮ್ಯಾನ ಧಾವಂತ ಕಂಡು ಅಚ್ಚರಿಯಿಂದ ಹೊರಗೆ ಬಂದರು. ಅವನು ಅವರ ಕಾಲ ಬಳಿ ಕುಸಿದು 'ಹೆಂಗಾರಾ ಮಾಡಿ ಜೀವ ಉಳಿಸ್ರಿ' ಎಂದು ಬಿಕ್ಕಿದನು. ರೆಗೆಲ್ಲರು ಒಳಗೆ ಹೋಗಿ ಮಕ್ಕಳಿಗೆ ಹೇಳಿ, ಚಪ್ಪಲಿ ಹಾಕಿ ಹೊರಗೆ ಬಂದರು. ಕೈಯಲ್ಲಿ ಔಷಧಿಯ ಚೀಲವೂ ಇತ್ತು. ಅವರಿಬ್ಬರೂ ಬರುವ ವೇಳೆಗೆ ವರ್ಧಮಾನಾಚಾರ್ಯರು ಭಯಂಕರವಾಗಿ ಕೈಕಾಲು ಸೆಟೆಸಿದ್ದರು. ರೆಗೆಲ್ಲರು ನಾಡೀ ಪರೀಕ್ಷೆ ಮಾಡಿ 'ಇಷ್ಟು ದಿನ ಯಂತಾ ಮಾಡ್ತಿದ್ದಿರಿ ಮಾರಾಯ್ರ' ಎಂದರು. ಮಂಗಳೂರು ಕಡೆಯಿಂದ ಕಲಿತ ಕನ್ನಡ ಶೈಲಿ ಅದು. ಭೀಮ್ಯಾ ಅಪ್ರಿಯ ಸತ್ಯವನ್ನು ಹೇಳಲಾರದೆ ಕೈ ಕೈ ಹಿಸುಕಿಕೊಂಡ. 'ಇದು ವಿಷಮಶೀತ ಜ್ವರ ತುರ್ತು ಚಿಕಿತ್ಸೆ ಆಗಬೇಕು' ಎಂದ ಅವರು ಗುರುಗಳ ಬಾಯಿ ಅಗಲಿಸಿ ಹಿಡಿಯಲು ಹೇಳಿ ಸೀಸೆಯಿಂದ ಬಣ್ಣದ ನೀರು ತೆಗೆದು ಬಟ್ಟಲಿಗೆ ಹಾಕಿ ಕುಡಿಸತೊಡಗಿದರು. ಭೀಮ್ಯಾನು ಈ ಘಟನೆಯನ್ನು ಪವಾಡವೆಂಬಂತೆ ನೋಡುತ್ತಿದ್ದ. ಹೊರಗೆ ಬಿಸಿಲು ನಿಷ್ಕರುಣೆಯಿಂದ ರಾಚುತ್ತಿತ್ತು. ಬೇವಿನ ಮರದ ಎಸಳುಗಳು ಬಾಡಿದ್ದರೂ ಧೃತಿಗೆಟ್ಟಿರಲಿಲ್ಲ.

ರೆಗೆಲ್ಲರಿಗೆ ಕೈತುಂಬ ಕೆಲಸವಿತ್ತು. ಬರದ ಪರಿಹಾರ ಕಾರ್ಯ ಪ್ರಾರಂಭಿಸಬೇಕಿತ್ತು. ಇನ್ನೂ ಎಷ್ಟೋ ರೋಗಿಗಳ ಶುಶ್ರೂಷೆ ಮಾಡಬೇಕಿತ್ತು. ಇದು ನಿಜವಾಗಿ ಸತ್ತ್ವ ಪರೀಕ್ಷೆಯ ಕಾಲವೇ. ಅತ್ತ ಸೈಮನ್ನರು ಪ್ರಾರ್ಥನೆಯಿಂದ ಖಂಡಿತಾ ಮಳೆ ಬರುತ್ತದೆ ಎಂದು ಜನರನ್ನು ಹುರುಪುಗೊಳಿಸಲು ಯತ್ನಿಸುತ್ತಿದ್ದಾರೆ ! ಅಷ್ಟರಲ್ಲಿ ಭೀಮ್ಯಾ ದಿಗಿಲು - ಸಮಾಧಾನ ಮಿಶ್ರಭಾವನೆಯಿಂದ ತನ್ನತ್ತಲೇ ನೋಡುತ್ತಿರುವುದನ್ನು ಗಮನಿಸಿದ ರೆಗೆಲ್ಲರು 'ಪ್ರಭು ಇದ್ದಾನೆ, ಚಿಂತಿಸಬೇಡಿ' ಎಂದು ಎದ್ದರು.

❖ ❖ ❖

ಒಂದು ವಾರದ ಸತತ ಆರೈಕೆಯಿಂದ ವರ್ಧಮಾನಾಚಾರ್ಯರ ಆರೋಗ್ಯ ಸುಧಾರಿಸಿತು. ಆದರೆ ಈ ಅವಧಿಯಲ್ಲಿ ಹಣ್ಣಾದವನೆಂದರೆ ಭೀಮ್ಯಾ ಒಬ್ಬನೇ. ಗುರುಗಳ ನಂಬಿಕೆಗಳಿಗೆ ತಾನು ದ್ರೋಹ ಬಗೆದೆನೆಂಬುದೇ ಅದಕ್ಕೆ ಕಾರಣ. ಅವರನ್ನುಳಿಸಿಕೊಳ್ಳುವ ತವಕದಲ್ಲಿ ತಾನು ಇವೆಲ್ಲ ಮಾಡಬೇಕಾಯಿತು ಎಂದು ಮನಸ್ಸಿನ ಇನ್ನೊಂದು ಭಾಗ ವಕಾಲತ್ತು ಮಾಡುತ್ತದೆ.

ಗುರುಗಳಲ್ಲಿ ತೋಡಿಕೊಳ್ಳಲಾರದ್ದನ್ನು ರೆಗೆಲ್ಲ ಸಾಹೇಬರಲ್ಲಿ ಹೇಳಿಕೊಳ್ಳಲೂ ಆರ. ಏನೂ ಇರಲಿ ಗುರುಗಳು ಪೂರ್ಣ ಗುಣವಾದ ಮೇಲೆ ಪ್ರಾಯಶ್ಚಿತ್ತ ಮಾಡಿಕೊಳ್ಳುವ ಬಗ್ಗೆ ಅವನಿಗೆ ಸಂದೇಹವಿರಲಿಲ್ಲ. ಆದಕಾರಣ ಪ್ರಾಯಶ್ಚಿತ್ತಕ್ಕೆ ತಯಾರಿ ಮಾಡಬೇಕಾಯಿತು.

ಹೀಗಿರುವಾಗ್ಗೆ ಒಂದು ಸಂಜೆ ವರ್ಧಮಾನಾಚಾರ್ಯರು ಕಣ್ಣು ತೆರೆದರು. ಬಿಳಿಯ ಬಣ್ಣ ಸಂಪೂರ್ಣವಾಗಿ ತುಂಬಿಕೊಳ್ಳತೊಡಗಿ ರೆಗೆಲ್ಲರ ಶಾಂತ ಮುಖ ಕಾಣಿಸಿತು. ಭೀಮ್ಯಾ

ಕಾಲಬಳಿಯೇ ಕೂತಿದ್ದು ಆತಂಕಪೂರ್ಣ ದೃಷ್ಟಿ ಹರಿಸಿದ್ದ, ಗುರುಗಳ ಕಣ್ಣಲ್ಲಿ ನೀರು ತುಂಬಿತು ರೆಗೆಲ್ಲರು ನಿಧಾನವಾಗಿ 'ಯೇಸು ಇದ್ದಾನೆ ಹೆದರಬೇಡಿ' ಎಂದು. ಭೀಮ್ಯಾ, ಗುರುಗಳ ಪ್ರಾಯಶ್ಚಿತ್ತಕ್ಕೆ ತಾನು ಮಾಡಿರುವ ತಯಾರಿಯ ಬಗ್ಗೆ ಯಾವಾಗ ಹೇಳಿಯೇನು ಎಂಬ ತವಕದಲ್ಲಿದ್ದ. ಗುರುಗಳು, ಅವನಿಗೆ ಹತ್ತಿರ ಬರುವಂತೆ ಸನ್ನೆ ಮಾಡಿದರು. ವರ್ಧಮಾನಾಚಾರ್ಯರು ಅವನ ತಲೆ ನೇವರಿಸುತ್ತ 'ಜನ್ಮಾಂತರದ ಋಣಾ ತೀರಿಸಿದೆಯಲ್ಲಲೇ ಭೀಮ್ಯಾ' ಎಂದರು. ಹಾಗೂ ರೆಗೆಲ್ಲರಿಗೆ ಕೈ ಮುಗಿದು 'ನಾ ಎಲ್ಲಾ ಬಿಡಲಿಕ್ಕೆ ತಯಾರಿದ್ದೇನ್ರಿ ಸಾಹೇಬ್ರೆ' ಎಂದರು.

ರೆಗೆಲ್ಲರ ಮುಖದಲ್ಲಿ ಯಾವುದೋ ಅಪ್ರಸನ್ನ ಭಾವ ಒಂದು ಕ್ಷಣ ಸುಳಿಯಿತು. ಅವರ ದೃಷ್ಟಿ ಕಿಟಕಿಯಾಚೆ ನಿಂತ ಬೇವಿನ ಮರದಲ್ಲಿ ನೆಟ್ಟಿತು. ಕ್ಷಣದ ನಂತರ ಅವರು ಸ್ವಗತವೆಂಬಂತೆ ಪಿಸುಗುಟ್ಟಿದರು.

'ಮನುಷ್ಯ ಮನುಷ್ಯನಿಗೆ ಮಾಡುವುದನ್ನೇ ನಾನೂ ಮಾಡಿದೆ. ಮನುಷ್ಯ ಮನುಷ್ಯನನ್ನು ಗುರ್ತಿಸಿದ್ರೆ ಸಾಕು ! ಏನು ?' ಭೀಮ್ಯಾ ಅವಾಕ್ಕಾಗಿ ನೋಡತೊಡಗಿದ. ರೆಗೆಲ್ಲರು ಎದ್ದು ನಿಧಾನವಾಗಿ ಹೊರಟು ಹೋದರು. ಆಕಾಶದಲ್ಲಿ ಮೋಡಗಳು ಮೊಳಗುತ್ತ ಮಳೆಯ ಸೂಚನೆ ನೀಡಿದವು.

# ಭ್ರೂಣ ಸಂಭಾಷಣೆ

● ರವಿ ಬೆಳಗೆರೆ

ಅಮೀನಾಳ ಗರ್ಭದೊಳಗಿನ ಏಳು ತಿಂಗಳ ಭ್ರೂಣ ಅವಳೊಂದಿಗೆ ಮಾತನಾಡತೊಡಗಿತೆಂಬ ಸುದ್ದಿ ಪೊರೆಬಿಟ್ಟ ಹಾವಿನಂತೆ ಅಂಗಳಂಗಳ ಹರಿದು ವಸಂತಳ ಬಾಗಿಲ ತನಕ ಬಂದಿತ್ತು. ನಡುಮನೆಯ ತೂಗುಮಣೆಯ ಮೇಲೆ ಕುಳಿತ ವಸಂತ ಹೊಟ್ಟೆ ಸವರಿಕೊಂಡಳು. ಆಳದಲ್ಲೆಲ್ಲೋ ಭ್ರೂಣ ಕದಲಿದ ಭಾವ. ಅದು ಗೊತ್ತು. ಐದನೇ ತಿಂಗಳ ಹೊತ್ತಿಗೆ ತುಂಟ ಭ್ರೂಣ ಕದಲತೊಡಗುತ್ತದೆ. ತಾಯಗರ್ಭದ ಗಲ್ಲಿಗಳಲ್ಲಿ ಗಸ್ತು ತಿರುಗುತ್ತದೆ. ಆದರೆ ಇದೆಲ್ಲಿಯ ವಿಚಿತ್ರ ಸುದ್ದಿ ? ಭ್ರೂಣ ಮಾತನಾಡುವುದೆಂದರೇನು ?

ಮಟಮಟ ಮಧ್ಯಾಹ್ನದಲ್ಲಿ ಊರು ಮಲಗಿರುವಾಗ ಕೋಟೆಯಂಚಿನ ಸಾಬರ ಗುಡಿಸಲ ಹೆಂಗಸರು ಹಿತ್ತಾಳೆ, ಸಿಲ್ವಾರದ ತಂಬಿಗೆಗಳಲ್ಲಿ ನೀರು ತುಂಬಿಕೊಂಡು ಅಲ್ಲಿಗೆ ಬರುತ್ತಾರೆಂಬುದು ನೆನಪಾದ ತಕ್ಷಣ ತೂಗುಮಣೆಯಿಂದಿಳಿದ ವಸಂತ, ರಬ್ಬರು ಚಪ್ಪಲಿ ಮೆಟ್ಟಿಕೊಂಡು ತಲೆಬಾಗಿಲೂ ಹಾಕದೆ ರಸ್ತೆಗಿಳಿದಳು. ಅವಳಾದರೂ ಏನು, ಏಳು ತಿಂಗಳ ಬಸುರಿ ! ಮಧ್ಯಾಹ್ನ ಮಟಗುಡುತ್ತಿದ್ದರೆ ಮತ್ತೊಮ್ಮೆ ಹೊಕ್ಕಳು ಸವರಿಕೊಂಡು ಕೋಟೆಯ ದಿಕ್ಕಿಗೆ ಸರಭರನೆ ನಡೆಯತೊಡಗಿದಳು. ಬೆವರು ಎದೆಯ ಕವಲೊಳಗಿಳಿದು ರವಿಕೆಯಂಚಿನಲ್ಲಿ ಇಳಿಗುತ್ತಿತ್ತು.

'ಹೌದೇನೇ ಅಮೀನಾ ?'

'ಮ್... ನಾಲ್ಕು ತಿಂಗಳಿಂದ...'

'ಏನು ಮಾತಾಡುತ್ತೆ ?'

'ಎಲ್ಲಾ'

ಒಂದು ಪುಟ್ಟ ದಿನ್ನೆಯಿಳಿದು ಬರುತ್ತಿದ್ದ ಬಸುರಿಯರಿಬ್ಬರು ಆ ನಿರ್ಜನ ಮಧ್ಯಾಹ್ನದಂದು ರಹಸ್ಯವೊಂದನ್ನು ಉಸುರಿಕೊಳ್ಳುತ್ತಿದ್ದರು. ಬಿಸಿಲು ಪ್ರಖರವಾಗಿತ್ತು. ಎದುರಿಗೇ ಇದ್ದ ಮಾವಿನ ತೋಪಿನೆಡೆಗೆ ನಡೆದರು. ರಣರಂಗದಂತಹ ವಿಶಾಲ ಬಯಲಿನ

ಮಧ್ಯೆ ನೆರಳಿನಂಗಡಿ ಇಟ್ಟುಕೊಂಡು ನಿಂತ ಒಂದೇ ಮಾವಿನ ತೋಪು. ಅದರ ಮಧ್ಯದಲ್ಲೊಂದು ಪುಟ್ಟ ಬಾವಿ. ಪಕ್ಕದಲ್ಲೊಂದು ಹಳೆಯ ಗೋರಿ. ಎಪ್ಪತ್ತು ವರ್ಷಗಳ ಹಿಂದೆ ಆಡಾಡುತ್ತ ಸತ್ತ ಆರು ವರ್ಷದ ಕಂದ ಇರ್ಫಾನ್‌ನ ಗೋರಿಯದು. ಬದುಕಿದ್ದಿದ್ದರೆ ಇರ್ಫಾನಜ್ಜನಾಗಿ ಎಪ್ಪತ್ತಾರರ ಮುದಿ ಬೆನ್ನು ಬಾಗಿಸಿಕೊಂಡು ಓಡಾಡುತ್ತಿದ್ದ. ತಂಬಿಗೆಯನ್ನು ನೆಲಕ್ಕಿಟ್ಟು ಉಸ್ಸೆಂದು ನಿಟ್ಟುಸಿರಿಕ್ಕಿ ಗೋರಿಯ ಮೇಲೆ ಕುಳಿತಳು ಅಮೀನಾ ನೆರಳಿತ್ತು. ಪಕ್ಕದಲ್ಲೇ ವಸಂತ.

'ಹೇಳು... ನಂಗ್ಹೇಳು' ಗೊರಬಿದಳು ವಸಂತ.

ಇವಳಿಗೇನು ಹೇಳೋದು ? ತನ್ನ ಗರ್ಭದೊಳಗಿನ ಜೀವ ತನಗೆ ಹೇಳಿದ್ದನ್ನೆಲ್ಲ ಹೇಳಲು ಕೂತರೆ ಎಷ್ಟು ಹಗಲು ಸತ್ತು ರಾತ್ರಿಯಾಗಬೇಕು ? ಅದು ಮಾತನಾಡದ ವಿಷಯವೇನಿದೆ ? ಹೇಳದ ಸುದ್ದಿಯೆಲ್ಲಿದೆ ? ಎಲ್ಲ ವಟಗುಡುತ್ತದೆ ಧಗಡಿ. ತನಗಾದರೂ, ತನ್ನೊಳಗಿನ ಭ್ರೂಣಕ್ಕೆ ಮಾತು ಬರುತ್ತದೆಂಬ ವಿಷಯ ಅರಿವಾದಾಗ ಎಷ್ಟೊಂದು ಆಶ್ಚರ್ಯವಾಗಿತ್ತಲ್ಲ.

'ಅಮ್ಮೀಜಾನ್ ' ಅಂದಿತ್ತು ಮೊದಲ ದಿನ. ಅಲ್ಲಾಹ್ ! ಅದೆಂಥ ರೋಮಾಂಚನ. ಹೊತ್ತಲ್ಲದ ಹೊತ್ತಿನಲ್ಲಿ ಆ ಅಲ್ಲಾಹುವಿಗೆ ಮೊಳಕಾಲೂರಿ ಪ್ರಾರ್ಥನೆ ಸಲ್ಲಿಸುವ ಮನಸ್ಸಾಗಿತ್ತು. ಅದರ ದನಿಯೆಂಥ ಚೆಂದ. ಕೂಸು ಗಂಡೋ ಹೆಣ್ಣೋ ? ತಾನೇ ಕೇಳಿಕೊಂಡಿದ್ದಳು. ನಾನು ಯಾರಾದರೇನು ಅಮ್ಮೀಜಾನ್ ? ನೀನು ಬಯಸಿ ಬರೆಯಿಸಿಕೊಂಡ ಚಿತ್ತಾರವಲ್ಲವೆ ಕಿಸಿದು ಕೂತರೆ ಹೆಣ್ಣು... ಎದ್ದು ನಿಂತರೆ ಗಂಡು ! ನಿಮ್ಮ ಲೋಕಕ್ಕೆ ಅರ್ಥವಾಗುವ ಸಂಜ್ಞೆಗಳು ಇವೆರಡೇ. ನಾನು ದೇವಲೋಕದ ಹೂವು ಕಣೇ ಅಮ್ಮಿ. ನಿನ್ನ ಸತುವು ತುಂಬಿದ ನೆಲಕ್ಕೆ ಬಿದ್ದ ನಕ್ಷತ್ರ ಬೀಜ. ಗಂಡಾದರೇನು, ಹೆಣ್ಣಾದರೇನು ?

ಗಲ್ಲ ಗಲ್ಲ ಬಡಿದುಕೊಂಡಿದ್ದಳು ಅಮೀನಾ. ಹೌದಲ್ಲವೆ. ಅಂದು ತನ್ನ ಒಡಲ ಚೀಲಕ್ಕೊಂದು ಜೀವ ಕರುಣಿಸೆಂದು ಬೇಡಿಕೊಳ್ಳುವಾಗ ಈ ಗಂಡು - ಹೆಣ್ಣೆಂಬ ಜಿಜ್ಞಾಸೆಯೆಲ್ಲಿತ್ತು ? ಅವನು ನಿತ್ಯ ಬರುವವನಂತೆ ಬಂದ. ಇಂಥದೇ ನಡುಮಧ್ಯಾಹ್ನದ ಹೊತ್ತು. ಬಾಗಿಲ ತಟ್ಟುವುದಾಗಲೀ, ಮುಚ್ಚಿದ ಬಾಗಿಲ ಮುಂದೆ ನಿಂತು ಬೇಡುವುದಾಗಲೀ ಗೊತ್ತಿರದ ನಡು ಮಧ್ಯಾಹ್ನದ ಫಕೀರ. ಆರಡಿ ಉದ್ದದ ತನ್ನ ಪುಟ್ಟ ಗುಡಿಸಲಿನೊಳಕ್ಕೆ ಸಲಗದಂತೆ ನಡೆದು ಬರುತ್ತಿದ್ದರೆ ನೆಲದ ಸಮೇತ ಕಂಪಿಸುತ್ತಿದ್ದಳಲ್ಲವೇ ಅಮೀನಾ ಅವತ್ತೂ ಹಾಗೆಯೇ. ಬೆಳಿಗ್ಗೆ ಎದ್ದು, ರಾತ್ರಿ ಮಿಕ್ಕ ಶೇರುವಾಕ್ಕೆ ಅನ್ನ ಕೆದರಿಕೊಂಡು ಮೊಳಕೈ ತನಕ ನೆಕ್ಕಿ ತಿಂದ ಅವಳ ಗಂಡ 'ಮೈ ಜಾತೂಂ' ಎಂದು ಕಿರಲಿಕೊಂಡವನಂತೆ ಹೇಳಿ ಹೋದ ತುಂಬ ಹೊತ್ತಿನ ನಂತರ ಈ ಫಕೀರ ಮನೆಯೊಳಕ್ಕೆ ಬಂದಿದ್ದ. ಯಾವ ಸೀಮೆಯವನೋ ? ಎಲ್ಲಿ ತಂಗುತ್ತಾನೋ ? ಹತ್ತಿರ ಬಂದರೆ ಸಾಕು, ಹುಡಿಮಣ್ಣ ನೆಲಕ್ಕೆ ಮೊದಲ ಮಳೆ ಬಿದ್ದಾಗ ಏಳುವ ಘಮ್ಮೆಂಬ ವಾಸನೆ. ಕೂದಲಲ್ಲಿ ಕೈಯಿಟ್ಟರೆ ಕಾಮಕಸ್ತೂರಿ. ಎದೆಯ ಮೇಲೆ ವಾಲಿದರೆ

ಅರಬಸ್ತಾನದ ಅತ್ತರು ಕಂಪು. ಹಸಿದು ಬಂದವನಿಗೆ ಊಟವಿಕ್ಕಿದಳು. ಅದು ಬೇಕು ಅಂದ. ಅಮೀನಾ ಇಲ್ಲವೆನ್ನಲಿಲ್ಲ. ತೋಳಿಗೆ ಕಬ್ಬಿಣದ ಬಳೆ ತೊಟ್ಟ, ಫಕೀರ, ಅವಳ ಬಂದಿಯಾದಾಗ,

'ನಂಗೆ ಕಂದ ಬೇಕು !' ನಡುಗುವ ದನಿಯಲ್ಲಿ ಹೇಳಿದ್ದಳು ಅಮೀನಾ. ಅವನು ಉನ್ಮತ್ತನಾದ. ಕಣ್ಣು ಅರೆಬರೆಯಾಗಿ ಮುಚ್ಚಿಕೊಂಡವು. ಮಾತೇ ಆಡದಿದ್ದರೂ ದನಿ ಗದ್ಗದಿತವಾಯಿತು.

ಆಗ ಸೃಷ್ಟಿಯಾದ ಭ್ರೂಣವದು.

'ಮಾತಾಡಿದ್ದು ಯಾವಾಗ ?' ಹತ್ತಿಕ್ಕಲಾಗದವಳಂತೆ ಕೇಳಿದಳು ವಸಂತ.

ಅದು ನಾಲ್ಕನೇ ತಿಂಗಳ ಮಧ್ಯದ ದಿನ. ಹಸಿದು ಬಂದ ಫಕೀರ ಉಂಡು ಕೊನೆಯ ಗುಟುಕು ಗಂಟಲಿಗಿಳಿಯುವ ಮೊದಲೇ ಅಮೀನಾಳ ತೆಕ್ಕೆಗೆ ಬಿದ್ದಿದ್ದ. ತೇಕುವ ಎಳೆಯ ಬಸುರಿಗೆ ಘಾತವಾಗಬಾರದು. ಸರಪಳಿ ಬಿಚ್ಚಿಟ್ಟು ಆಟವಾಡಿದ. ಎದ್ದು ಹೋಗುತ್ತಿದ್ದವನ ತೋಳು ಹಿಡಿದಳು ಅಮೀನಾ...

'ನೀನು ಯಾಕೆ ಹೋಗಬೇಕು ? ನಾನೇಕೆ ಇಲ್ಲೇ ಇರಬೇಕು ? ನಿನ್ನ ಅರಮನೆಯೆಲ್ಲಿ ? ನನ್ನ ಗಂಡನೊಂದಿಗೇಕೆ ನಾನು ಬಾಳಬೇಕು ? ನಿನ್ನದ್ಯಾವ ಸೀಮೆಯೋ ಜೋಗಿ ? ನಿನ್ನೊಂದಿಗೇಕೆ ನಾನು ಬರಬಾರದು ?' ಕೇಳಿದಳು. ಅವನು ಎದೆಗೆ ಸರಪಳಿ ಸುತ್ತಿಕೊಂಡು ತೋಳಿಗೆ ಕಬ್ಬಿಣದ ಬಳೆಯೇರಿಸಿಕೊಂಡ. ಮತ್ತೆ ತಡೆದಳು ಅಮೀನಾ.

'ನಾನು ಯಾರೊಂದಿಗೆ ಮಾತನಾಡಲಿ ನೀನು ಹೋದ ಮೇಲೆ ?'

'ಅದು ಮಾತಾಡ್ತದಲ್ಲ ? ನಿನ್ನ ಕೂಸು. ಅದರ ಕೂಡೆ ಮಾತಾಡು !' ಎಂದವನೇ ಅಂಗಳಕ್ಕಿಳಿದು ನಡೆದೇ ಬಿಟ್ಟ ಫಕೀರ.

'ಅಮ್ಮೀಜಾನ್ !' ಅಂದಿತ್ತು ಒಡಲೊಳಗಿನ ಕಂದ. ಅದೇ ಮೊದಲು.

ಕುಳಿತಲ್ಲೇ ನಡುಗಿದಳು ವಸಂತ. ಏಕೋ ಅವಳಿಗೆ ಅಳು ಒತ್ತರಿಸಿಕೊಂಡು ಬಂತು. ಅವಡುಗಚ್ಚಿ ಕೂತಳು. ನಾಲ್ಕನೇ ತಿಂಗಳ ಮಧ್ಯದ ದಿನವಂತೆ.... ಫಕೀರನಂತೆ. ಗಂಡನ ಬಿಟ್ಟು ಹೊರಟು ನಿಂತವಳು ಕೈ ಜಗ್ಗಿ ಬೇಡಿಕೊಂಡಿದ್ದಕ್ಕೆ ಭ್ರೂಣದೊಂದಿಗೆ ಮಾತಾಡೆಂದು ವರ ಕೊಟ್ಟು ಹೋದನಂತೆ. ನಾನೇನು ತಪ್ಪು ಮಾಡಿದೆ ? ಇದೇಕೆ ಏಳು ತಿಂಗಳಾದರೂ ಮಾತಾಡಲೊಲ್ಲದು ? ಒಂದು ಮಂದ್ರ ಕದಲಿಕೆಯ ಹೊರತಾಗಿ ಇದಕ್ಕೆ ಮತ್ತೇನೂ ಬಾರದೆ ? ಅಮೀನಾಳನ್ನೇ ಕೇಳೋಣವೆಂದು ಬಾಯ್ತೆರೆದಳು ವಸಂತ.

'ಅದನ್ನೇನು ನೀನು ಕೈ ಹಿಡಿದು ಕರೆದಿದ್ದೆಯಾ ?'

ಇದ್ದಕ್ಕಿದ್ದಂತೆ ಬಸುರಿಯರಿಬ್ಬರೂ ಬೆಚ್ಚಿದರು. ಇಬ್ಬರದೂ ಅಲ್ಲದ ಮೂರನೆಯ ದನಿಯೊಂದು ಆ ಮಾವಿನ ತೋಪಿನ ಮೌನ ಮುರಿದಿತ್ತು. ತಕ್ಷಣ ಅಮೀನಾಳಿಗೆ ತನ್ನ ಭ್ರೂಣ ಮಾತಾಡಿತೆಂಬುದು ಅರಿವಾಯಿತು. ವಸಂತ ಇನ್ನೂ ಚೇತರಿಸಿಕೊಂಡಿರಲಿಲ್ಲ.

'ನಾನು... ಕೈ ಹಿಡಿದು ಕಂದನ್ನ ಕರೆಯಲಿಲ್ಲವಾ ?' ತನಗೇ ತಾನೆಂಬಂತೆ ಕೇಳಿಕೊಂಡಳು ವಸಂತ.

ಅಮೀನಾ ಮಾತಾಡತೊಡಗಿದಳು.

'ಅದೇ ಹಿಂಚುಮುಂಚಿನ ದಿನಗಳಲ್ಲಲ್ಲವೇ ನೀನು ಧಾರಣೆಗೆ ಸಿದ್ಧವಾದದ್ದು ವಸಂತ ?' 'ಆಗ ನಿನ್ನ ಮನಸ್ಸಿತ್ತಾದರೂ ಹೇಗೆ ? ನಿಮ್ಮತ್ತೆ ನಡುಮನೆಯಲ್ಲಿ ಪಹರೆ ಮಲಗಿರುತ್ತಿದ್ದ ರಾತ್ರಿಗಳವು. ಅಂದು ನೀನು ಎಷ್ಟೊತ್ತಾದರೂ ಅಡಿಗೆ ಮನೆಯಲ್ಲೇ ಇದ್ದೆ. ಅವನು ನಿನ್ನ ಗಂಡ, ಅವರಮ್ಮನನ್ನು ದಾಟಿಕೊಂಡು ಒಳಬಂದು 'ಏ' ಅಂದ. ನೀನು 'ಓ' ಅಂದೆ. ಕರೆ ಯಾತರದೆಂದು ನಿನಗೆ ಗೊತ್ತು. ಹಿತ್ತಲಲ್ಲಿದ್ದ ಕತ್ತಲ ಮನೆಗೆ ಬರುತ್ತೀಯೆಂದು ಅವನಿಗೂ ಗೊತ್ತು. ಅಲ್ಲೇ ಅಲ್ಲವೆ.... ? ಅವನಿಗೆ ಆತುರ. ನಿನಗೆ ರಗಳೆ ಮುಗಿದು ಬಚ್ಚಲಿಗೋಡಿದರೆ ಸಾಕೆಂಬ ಅವಸರ. ನೀವು ಬಯಸಲಿಲ್ಲ. ಅವನು ಮೈ ತುಂಬಿ ನೀಡಲಿಲ್ಲ. ಒಂದು ಕ್ಷಣದ ಮೈಮರೆವು. ಸದ್ದಿಲ್ಲದ ಅಪಘಾತ. ನೀವಿಬ್ಬರೂ ಬೇಡದ ಕೂಸೊಂದು ನಿನ್ನೊಳಗೆ ಚಿತ್ತಾರವಾಗಿ ಅರಳಿನಿಂತದ್ದು ಆ ಹಿತ್ತಲ ಮನೆಯ ಕತ್ತಲಲ್ಲಿ. ನಿಮ್ಮಲ್ಲಿ ಆ ಮಗುವನ್ನು ಕರೆದುಕೊಳ್ಳಲು ಇನಿತಾದರೂ ಬೆಳಕಿತ್ತೇ ವಸಂತಾ ?'

'ಇದೆಲ್ಲ ನಿನಗೆ ಹ್ಯಾಗೆ ಗೊತ್ತಾಯ್ತು ಅಮೀನಾ ?' ಕೇಳಿದಳು ವಸಂತ. ಅಮೀನಾ ಬಸಿರು ಮುಟ್ಟಿಕೊಂಡಳು. ಅವಳ ಭ್ರೂಣ ತಟಪಟನೆ ಕುಣಿದು, ಕುಪ್ಪಳಿಸಿ, ಹೊಕ್ಕಳ ಬಳ್ಳಿ ಹಿಡಿದುಕೊಂಡು ಜೀಕಿ, ಜೀರುಂಡೆಯಾಡಿ, ಲಗಾಟಿ ಹೊಡೆದು, ಚಳ್ಳಂತ ಉಚ್ಚೆ ಮಾಡಿ ಆನಂದದಿಂದ ಬೆಟ್ಟು ಚೀಪತೊಡಗಿತ್ತು.

'ಹ್ಯಾಗೆ ಗೊತ್ತಾಯ್ತು ಹೇಳು ?' ಕೇಳಿದಳು.

'ಎಲ್ಲ ಗೊತ್ತಾಗುತ್ತೆ. ನನ್ನ ಭ್ರೂಣ ಹೇಳುತ್ತೆ.'

'ಮತ್ತೇನು ಹೇಳಿದೆ ನನ್ನ ಬಗ್ಗೆ ?' ಕೇಳಿದಳು ವಸಂತ.

'ನೀನು ಒಳ್ಳೆಯವಳಂತೆ. ನಿನಗೆ ನೂರೆಂಟು ಬಯಕೆಯಂತೆ. ಚಕ್ಕುಲಿ, ಹಲಸಿನಹಣ್ಣು, ಮೆಂತ್ಯದ ಗೊಜ್ಜು, ಪಕ್ಕದ ಮನೆಯ ಗಂಡಸು...'

'ಮುಚ್ಚುಬಾಯಿ !' ಕೆರಳಿದಳು ವಸಂತ.

'ಹುಚ್ಚೀ ಸುಮ್ಮನೆ ಕೂಡು. ನನಗೆಲ್ಲ ಗೊತ್ತಿದೆ. ಕಟ್ಟಿಕೊಂಡ ಗಂಡನೊಬ್ಬನೇ ಅಲ್ಲ. ಮದನ ಮಸ್ತಿ ಹೆಣ್ಣು ಮನಸ್ಸಿಗೆ ಐವರು ಬೇಕು ! ಐವತ್ತಾದರೂ ಬೇಕು. ಎತ್ತಿನಂಥ ಗಂಡ. ಎಷ್ಟು ತಿರುಗಿ ಗಾಣ ಹಿಂಡಿದರೂ ಅದು ಸಾಲದು. ಅವನಲ್ಲಿ ನಲುಗಬೇಕು. ಇವನಲ್ಲಿ ನಲಿಯಬೇಕು. ಯಾವನಲ್ಲೋ ಕರಗಬೇಕು. ಮತ್ತೊಬ್ಬನಿಗಾಗಿ ಕನಲಬೇಕು. ಇಲ್ಲದವನಿಗಾಗಿ ಕಾಯಬೇಕು. ಬಯಕೆ ಅಂದರೆ ಮತ್ತೇನೆಂದುಕೊಂಡೆಯೇ ? ಹುಡುಗಿ ಹುತ್ತದ ಮಣ್ಣು, ಅತ್ತೆಯ ಬೈಗಳು - ಎರಡೇ ಸಾಕಾ ? ಬಿಡುಬಿಡು. ನಿನ್ನನ್ನೇನು ಈ ಕ್ಷಣದಲ್ಲಿ ಎದ್ಹೋಗಿ ಪಕ್ಕದ ಗಂಡಸಿನ ಚಿಲುಕ ತಟ್ಟು ಅನ್ನುತ್ತಿಲ್ಲ. ಬಯಕೆಯ ಮಾತು ಬಂತಲ್ಲ ? ಹೇಳಿದೆ. ನಿನ್ನ ಕರ್ಮ ನನಗಿಲ್ಲ. ನನಗೆ ಬಸಿರಾಗಬೇಕೆಂಬುದೊಂದೇ ಬಯಕೆಯಿತ್ತು. ಈಗ ಮತ್ತೆ ಬಯಕೆಗಳಿಲ್ಲ. ಬಯಕೆಯೇ ಇಲ್ಲದೆ ಗರ್ಭ ಕಟ್ಟಿಸಿ ಕೊಂಡೋಳಿಗೆ ಮೈ ತುಂಬ ಬಯಕೆ !'

'ಮುಚ್ಚುಬಾಯಿ' ಮತ್ತೆ ಕೂಗಿದಳು ವಸಂತ. ಬಿಕ್ಕಿ ಬಿಕ್ಕಿ ಅಳತೊಡಗಿದಳು. ಮಾವಿನ ತೋಪು ಮಂಕಾಯಿತು. ಅವರು ಕುಳಿತಿದ್ದ ಗೋರಿಯ ಕಟ್ಟೆ ಬಿರಿದಂತಾಗಿ ಎಪ್ಪತ್ತಾರರ ಕೂಸು ಇರ್ಫಾನನ ಹೆಣ ತೊಟ್ಟಿಲೊಳಗಿನ ಮಗುವಿನಂತೆ ಹೊರಳಿ ಮಲಗಿತು. ಅಳುವ ಬಸುರಿಯ ಬೆನ್ನಮೇಲೆ ಸಮಾಧಾನದಿಂದ ಕೈಯಾಡಿಸಿದಳು ಅಮೀನಾ.

ಅತ್ತತ್ತು ದುಃಖ ಕಡಿಮೆಯಾದ ನಂತರ,

'ಅಮೀನಾ... ಎಲ್ಲ ಗೊತ್ತಿರುವ ನಿನ್ನ ಭ್ರೂಣವನ್ನು ಕೇಳು.... ನನ್ನ ಕಂದ ಹೇಗಿದೆಯಂತೆ ? ಕೇಳು ಅಮೀನಾ...' ಅಂದಳು ವಸಂತ.

'ಪಾಪ ನಿದ್ರೆಯಂತೆ. ಸಣ್ಣ ಪಾಪಚ್ಚಿ. ಕಾಲು ಕೈ ಮುದುಡಿಕೊಂಡು ಕತ್ತು ಎದೆಗೊತ್ತಿಕೊಂಡು ಕುನ್ನೆಮ್ಮನಂತೆ ಮಲಗಿದೆಯಂತೆ' ಹೇಳಿದಳು.

'ಹೌದೇನೇ ಅಮೀನಾ.... ಮುದ್ದಾಗಿದೆಯಂತಾ ? ಅದು ಹೆಚ್ಚು ಕದಲುವುದೇ ಇಲ್ಲ ಕಣೇ. ಓ ಅಮೀನಾ.... ನನಗೊಂದು ಉಪಕಾರ ಮಾಡೇ. ನನ್ನೊಳಗಿರುವ ಕಂದ ಗಂಡೋ, ಹೆಣ್ಣೋ ನಿನ್ನ ಭ್ರೂಣವನ್ನು ಕೇಳಿ ಹೇಳೇ....' ಅಂಗಲಾಚಿದಳು ವಸಂತ.

ಅಮೀನಾಳ ಮುಖ ಬಿರುಸಾಯಿತು. ಕಣ್ಣು ಕಲ್ಲಾದವು. ಮೈ ಬಿಗಿಯಿತು.

'ವಸಂತಾ, ಈ ಪ್ರಶ್ನೆ ಇನ್ನೊಮ್ಮೆ ಕೇಳಬೇಡ. ಭ್ರೂಣಕ್ಕೆ ಭ್ರೂಣಗಳ ಲಿಂಗ ಗೊತ್ತಾಗುವುದಿಲ್ಲ. ಅದೆಲ್ಲ ರಗಳೆ ಶುರುವಾಗೋದು ನೆಲಕ್ಕೆ ಬಿದ್ದ ನಂತರವೇ. ಭ್ರೂಣಗಳಿಗೆ ಲಿಂಗ ಭೇದವಿಲ್ಲ !' ಕಂಪಿಸುವ ಸ್ವರದಲ್ಲಿ ಹೇಳಿದಳು ಅಮೀನಾ.

'ಆಹಾಹಾ... ಎಲ್ಲಾ ಗೊತ್ತಾಗೋ ನಿನ್ನ ಭ್ರೂಣಕ್ಕೆ ಇದೊಂದು ಮಾತ್ರ ಗೊತ್ತಾಗೋದಿಲ್ವಾ ? ಪೇಟೆ ಕಡೆ ಡಾಕ್ಟ್ರು ಪರೀಕ್ಷೆ ಮಾಡಿ ಮೂರ್ತಿಂಗಳಲ್ಲೇ ಗಂಡೋ ಹೆಣ್ಣೋ ಹೇಳ್ತಾರಂತೆ. ನಿಂದೇನು ?' ಸಿಟ್ರನೆ ಸಿಡುಕಿದಳು ವಸಂತ.

'ಅದಕ್ಕೇ ಕಣೇ. ಆ ಡಾಕ್ಟ್ರಿಗೆ ಭ್ರೂಣ ಮಾತಾಡೋದು ಕೇಳ್ಸಲ್ಲ. ಹೆಂಗಸಿನ ಕಾಯಿಗರ್ಭ ಸೀಳಿ ಇಕ್ಕಳ ಹಾಕಿ ಫಲ ಕಿತ್ತಿ ಚೆಲ್ಲೋ ಜನಕ್ಕೆ ಭ್ರೂಣ ಭಾಷೆ ಹ್ಯಾಗೆ ತಿಳಿಯುತ್ತೆ ? ಆಡಿಕೊಂಡಿರುವ ಕಂದನನ್ನ ತಿಂಗಳು ತುಂಬುವ ಮೊದಲೇ ಆಟ ಕೆಡಿಸಿ ಅಂಗಳಕ್ಕೆ ಕರೆಯೋ ಡಾಕ್ಟ್ರುಗಳು ಆಮೇಲೆ ಅದನ್ನ ಬದುಕಿಸ್ತೀವಿ ಅಂತ ಬಡಿದಾಡ್ತಾರೆ. ಅದರ ಮೈಗೆಲ್ಲ ಸೂಜಿ ಚುಚ್ಚಿ ವ್ರಣ ಮಾಡ್ತಾರೆ. ಹಾಲು ಹುಯ್ಯೋ ಎಳೇ ಹೊಟ್ಟೆಗೆ ಔಷ್ಧಿ ಹುಯ್ದು ಕಂಗಾಲು ಮಾಡ್ತಾರೆ.'

'ನನ್ಮಾತು ಕೇಳು ವಸಂತಾ. ತಿಂಗಳುಗಟ್ಲೆ ತೆಪ್ಪಗೆ ಮುದುರಿ ಮಲಗೋ ಕಂದ ದಿನ ತುಂಬಿದ ಹಾಗೆಲ್ಲ ಪ್ರಯಾಣಕ್ಕೆ ಸಿದ್ಧವಾಗುತ್ತೆ. ನೀನು ಬಾಗಿಲು ತೆರೆದುಕೊಂಡು ಒಳಕ್ಕೆ ಕರಕೊಂಡಿರೋ ಕಂದನಿಗೆ ಹೊರಬರಲು ನೀನೇ ಬಾಗ್ಲು ತೆಗೀಬೇಕು. ಬಾ ನನ್ನ ಬದುಕೇ ಅಂತ ಕರಕೋಬೇಕು. ಅದು ಬಿಟ್ಟು, ಪ್ಯಾಟಿ ಡಾಕ್ಟ್ರು ಇಕ್ಕಳ ಹಾಕಿ ಕಿತ್ತಿ ಮಗೂನ ತಲೆಕೆಳಗು ಮಾಡಿಹಿಡಿದು ಪತಪತಾಂತ ನೀರು ತಟ್ಟಿದರೆ ಆ ಕಂದ ನಿನ್ನನ್ನ ಕ್ಷಮಿಸುತ್ತಾ ? ಹೇಳು. ಒಂಬತ್ತು ತಿಂಗಳು ಅದು ಬೆಚ್ಚಗಿದ್ದ ಮನೇನ ಕರಕರಾಂತ ಕುಯ್ದು, ಬಾವೀಲಿ ಅಂಗಾತ ಬಿದ್ದಿರೋ ಆಮೇನ ಎತ್ತಿ ಈಚೆಗ್ಹಾಕಿದ ಹಾಗೆ ಮಗೀನ ಹೊರಕ್ಕೆಳೆದರೆ ಅದು ಶಪಿಸ್ದೆ ಇರುತ್ತಾ ವಸಂತಾ ?'

'ಎಷ್ಟು ಜನ ಬಸುರಿಯರಿಗೆ ಗೊತ್ತೇ ವಸಂತಾ.... ತಮ್ಮ ಭ್ರೂಣ ಮಾತಾಡ್ತವೆ ಅನ್ನೋ ಸತ್ಯ ? ನೀನೇ ಹೇಳು.... ಯಾವೊತ್ತಾದರೂ ಒಬ್ಬಳೇ ಕೂತು ನಿನ್ ಕಂದನ್ನ ಮಾತಾಡಿಸಿದೀಯಾ ? ಹ್ಯಾಗಿದ್ದೀಯಾಂತ ಕೇಳಿದೀಯಾ ? ಅದಕ್ಕೊಂದು ಜೋಗುಳ ಹೆಣದಿಟ್ಟಿದ್ದೀಯಾ ? ನಿನ್ ಜೊತೆ ಆ ಕಂದ ಯಾಕೆ ಮಾತಾಡಬೇಕು ಹೇಳು ? ತಾನಾಗೇ ಬಂದು ಈ ದಿಕ್ಕಿಲ್ಲದ ಪ್ರಪಂಚದಲ್ಲಿ ಯಾರದೋ ಮನೆಯ ಬಾಗಿಲ ಮುಂದೆ ನಿಂತು "ಅಮ್ಮಾ" ಅನ್ನೋ ಕರ್ಮ ಅದಕ್ಕೇನಿದೆ ?' ಅಮೀನಾ ತಟ್ಟನೆ ಮಾತು ನಿಲ್ಲಿಸಿದಳು. ಮಾವಿನ ತೋಪು ಗಂವ್ವೆನ್ನುತ್ತಿತ್ತು. ಎಲ್ಲಿಂದಲೋ ತೇಲಿಬಂದ ಕಪ್ಪು ಮೋಡದ ತುಂಡೊಂದು ಮಟಮಧ್ಯಾಹ್ನದ ಸೂರ್ಯನಿಗೆ ಅಂಗ್ಯೆ ಒಡ್ಡಿ ಅಂಧಕಾರ ತರಲು ಹೆಣಗತೊಡಗಿತ್ತು.

ವಸಂತ ಕುಳಿತಲ್ಲೇ ಗುಬ್ಬಿಯಂತಾದಳು. ಮುಖ ಕಪ್ಪಿಟ್ಟಿತು. ಈ ಸಲ ಅಮೀನಾಳನ್ನು 'ಮುಚ್ಚುಬಾಯಿ' ಎಂದು ಗದರಿಸುವ ಧೈರ್ಯವಾಗಲಿಲ್ಲ. ಬಾಯಲ್ಲಿ ಪಸೆಯಾರಿತ್ತು. ಇರ್ಫಾನನ ಗೋರಿಯ ಬೆನ್ನು ತಟ್ಟುತ್ತ ಅಮೀನಾಳ ಮುಖ ನೋಡಿದಳು.

'ನೀನಂದದ್ದು ನಿಜ. ಆದರೆ ನನ್ನ ಮಗು ನನಗೆ ಬೇಕು. ನಾನೆತ್ತಿಕೊಳ್ಳಬೇಕು. ಜೋಗುಳ ಹಾಡಬೇಕು. ಅದರ ಮುದ್ದು ಮಾತು ಕೇಳಬೇಕು. ಅದಕ್ಕೇಂತ ನೋಡು, ಪುಟ್ಟ ಪುಟಾಣಿ ಅಂಗಿ ಹೊಲ್ದಿದೀನಿ. ನೋಡು ಬಾ ಮನೇಲಿವೆ. ಪುಟಾಣಿ ಸಾಕ್ಸು.... ಕಾಲುಚೀಲ, ತಲೆಗೆ

ಕುಲಾವಿ, ಪ್ರೀತಿಯಿಲ್ದೆ ಇದನ್ನೆಲ್ಲ ಮಾಡಿದ್ನಾ ಅಮೀನಾ ? ನಂಗೆ ಕೂಸು ಬೇಡವಾಗಿದ್ರೆ ಇದೆಲ್ಲಾ ಮಾಡ್ತಿದ್ನೇನೇ ?' ಆರ್ದ್ರಗೊಂಡ ದನಿಯಲ್ಲಿ ಕೇಳಿದಳು.

ಖಿಲ್ಲನೆ ನಕ್ಕಿತು ಭ್ರೂಣ.

ಅಮೀನಾ ಬೆಚ್ಚಿಬಿದ್ದಳು.

'ಆಹಾಹಾ... ಎತ್ತಿಕೋತಾಳಂತೆ ! ಜೋಗುಳವಂತೆ, ಮುದ್ದು ಮಾತು, ಅಂಗಿ, ಕಾಲುಚೀಲ, ಜೋಗುಳ, ಕುಲಾವಿ ! ಆಹಾ ಹೆಂಗಸೇ ! ಇದನ್ನೆಲ್ಲಾ ತನ್ನ ಸಂತೋಷಕ್ಕಲ್ವೇ ಇವಳು ಮಾಡಿಕೊಂಡಿದ್ದು, ತೋಳಿಲ್ಲದ ಪುಟ್ಟಪುಟಾಣಿ ಅಂಗಿ ತೊಡೆ ಮೇಲೆ ಹಾಸಿಕೊಂಡು ಹಗಲೂ ರಾತ್ರಿ ಗಂಡು ಮಗೀನ ಗಮನದಲ್ಲಿಟ್ಕೊಂಡು ತೊಡೇ ಕುಣ್ಸೋದೆಲ್ಲಾ ಈಗ ಏಳು ತಿಂಗಳಾದ ಮೇಲಲ್ವೆ ? ಇವಳ ಬಸುರಿಗೆ ಕೂಸುಬಿದ್ದ ಮೊದಲೆರಡು ತಿಂಗಳು ಅಬ್ಬಾ ! ಅದೇನು ವಾಂತಿ, ಎಂಥಾ ಸುಸ್ತು, ಕಾಲು ಸೆಲೆತ, ಹಾಳಾದ ಪಿಂಡ ಉದುರಿ ಹೋಗಬಾರ್ದೆ ? ಇನ್ನೂ ಸರಿಯಾಗಿ ಎರಡು ತಿಂಗಳಾಗಿಲ್ಲ. ಈಗಲೇ ಈ ಪರಿ. ಮುಂದಿನ್ನೇನೇನು ಕಾಡುತ್ತೋ... ಅಂತ ಕಳವಳಿಸಲಿಲ್ವೆ ? ಉಂಡದ್ದು, ತಿಂದದ್ದು ಮೈ ಸೇರಿ ಪಿಂಡ ಬಲಿಯುತ್ತದೆ ಅಂತಾರೆ. ಇವಳು ತಿಂದದ್ದು ಮಾತ್ರ ತನ್ನ ಮೈಗೆ, ತನ್ನ ರುಚೀಗೆ, ತನ್ನಿಷ್ಟಕ್ಕೆ, ತನ್ನ ಬಯಕೆಗೆ ಅಂತಲೇ ಅಲ್ವೆ ? ಈಗ ಏಳನೇ ತಿಂಗಳಲ್ಲಿ ನಾನು ಮಾತಾಡಲ್ಲ ಹೋಗ್ ಅಂತ ಪಿಂಡ ಮುರಾಡಾ ಹಾಕ್ಕೊಂಡು ಕೂತಿರುವಾಗ ಜೋಗುಳ, ಜಾಬಿಲ್ಲಿ, ಅಂಗಿ ಅಂತ ಆಸೆ ತೋರಿಸಿ ಈಚೆಗೆ ಕರೀತಾಳೆ. ಮಾತು ಕೇಳದಿದ್ರೆ ಪ್ಯಾಟಿ ಡಾಕ್ಟ್ರು... ಗಂಡೋ ಹೆಣ್ಣೋ... ಹಸೀ ಬಸುರಿಗೇನೇ ಇಕ್ಕಳ ತೋರಿಸ್ತೀನ್ನೋಡು ಅಂತ ಹೆದರಿಸ್ತಾಳೆ. ಮಿಟುಕಲಾಡಿ ! ಬಾಯ್ಮುಚ್ಕೊಂಡಿರೂಂತ ಹೇಳು !' ಭ್ರೂಣ ಗದರಿಸಿತು.

ಅಮೀನಾಳಿಗೆ ದಿಕ್ಕು ತೋಚದಂತಾಯಿತು.

ಎಲ್ಲ ಅರ್ಥವಾದವಳಂತೆ ಸುಮ್ಮನೆ ಕುಳಿತಿದ್ದಳು ವಸಂತ. ಗೋರಿ ಕೆಳಗಿನ ಇರ್ಫಾನ್ ಆಕಳಿಸಿ ಮೈ ಮುರಿದ. ಅವನಿಗೇ ನನ್ನಿಸಿತೋ ?

'ಹೊತ್ತಿರೋಳು ಅರಿವುಗೆಟ್ಟು "ಹಾಳಾದ ಭ್ರೂಣ ಉದುರಿ ಹೋಗಬಾರ್ದೆ ?" ಅಂತ ಶಪಿಸಿದರೆ ಏನಾಗುತ್ತೆ ?' ಗೋರಿಯಾಳದಿಂದಲೇ ಕೇಳಿದ. ಅಮೀನಾಳ ಭ್ರೂಣ ಅಮ್ಮನ ಹೊಕ್ಕಳು ಬಳ್ಳಿ ಹಿಡಿದು ಪೂರ್ವದಿಂದ ಪಶ್ಚಿಮಕ್ಕೆ ಜುಯ್ಯಂತ ಜೀಕಿ, ಚಪ್ಪಾಳೆ ತಟ್ಟಿ ಕಿಲಕಿಲಾಂತ ನಕ್ಕಿತು.

'ಬಿದ್ಹೋಗ್ತವೆ ಕಣೋ ಇರ್ಫಾನ್ ! ಅದಕ್ಕೇ ಅಲ್ವಾ ನೆಟ್ಟ ಹತ್ತು ಬೀಜದಲ್ಲಿ ಒಂದೋ ಎರಡೋ ಮಾತ್ರ ಫಲವಾಗಿ ಕೈಗೆಟುಕೋದು ? ಆಕಸ್ಮಾತ್ ದಿಕ್ಕು ತಪ್ಪಿ ಅಂಥ ಪಾಪಿ ಗರ್ಭ

ಸೇರಿದ ಪಿಂಡ. ಭ್ರೂಣವಾಗಿ ಮೈ ಅರಳಿಸೋ ಮೊದಲೇ ಆ ಮನೆಬಿಟ್ಟು ಹೊರಟುಬಿಡುತ್ತೆ. ಸೃಷ್ಟಿರಹಸ್ಯ ಅರ್ಥವಾಗದಿರೋ ಪೆದ್ದ ಮುದಕೀರು ಬಚ್ಚಲಲ್ಲಿ ಮಗಳ ರಕ್ತಾ ನೋಡಿ.... ಅಯ್ಯೋ ಮೈ ಇಳೀತು ಅಂತ ಪೇಚಾಡ್ತಾರೆ. ಮಗಳ ನಸೀಬೆಷ್ಟು ಖೊಟ್ಟಿಯೆಂಬುದು ಅರ್ಥವಾಗದ ಮೂರ್ಖ ಮುತ್ತೈದೇರು !

'ಲೋ ಇರ್ಫಾನ್, ಆರೇ ಆರು ವರ್ಷಕ್ಕೆ ಗೋರಿಯಾಗಿ ಹೋದೋನೇ.... ಕೇಳು. ತಾಯಿಗರ್ಭದಲ್ಲಿ ಚಿಕ್ಕೆಯಾಗಿ ಮೂಡಿದ ನಿಮಿಷದಿಂದಲೂ ಭ್ರೂಣಕ್ಕೆ ಮಾತು ಬರುತ್ತೆ. ಅದು ಪ್ರತಿ ನಿಮಿಷ, ಪ್ರತಿ ಕ್ಷಣ ತನ್ನ ತಾಯಿ "ಕಂದಾ" ಅಂತ ಕೂಗಲೀಂತ ಕಾತರಿಸುತ್ತೆ. ಬಸುರಿ ಉಸ್ಸಂತ ಹೊಟ್ಟೆ ಸವರಿಕೊಳ್ಳೋವಾಗ ತನ್ನ ಎಳೇ ಕೆನ್ನೇನ ಹೊಕ್ಕಳಿಗಾನಿಸುತ್ತೆ. ಅಮ್ಮ ತಿಂದ ಒಂದೊಂದು ತುತ್ತು ತನಗೋಸ್ಕರವೇನೇನೋ ಅಂತ ಅಂಗೈ ಚಾಚುತ್ತೆ. ಆದರೆ ಇದೆಲ್ಲ ಎಲ್ಲಿ ಧ್ಯಾಸ ಬಸುರೀರಿಗೆ ? ವಾಂತಿ, ಸುಸ್ತು, ಬಯಕೆ ಅಂತ ಪರದಾಡ್ತಾರೆ. ಆಸೆಬುರುಕ ಗಂಡಸರು ಮೊಣಕಾಲು ತರಚಿಕೊಂಡಿದ್ದೇ ಘನವೆಂಬಂತೆ ಹೊಟ್ಟೆಗೆ ಕಿವಿಯಿಟ್ಟು ಕೂಸು ಕದಲುವ ಸದ್ದು ಕೇಳುತ್ತಾರೆ. ಎಲ್ಲ ನಾಟಕವಯ್ಯ. ಹೆತ್ತ ಕೂಸಿನ ಮೇಲೆ ತಾಯಿಗೆ ಪ್ರೀತಿ ಉಕ್ಕೋದು, ಇದು ನಾನು ಕರೆತಂದ ಜೀವ ಅನ್ನೋ ಕಾರಣಕ್ಕಲ್ಲ. ನಾನು ಹೆತ್ತೆ ! ನನ್ನ ರಕ್ತ ! ನನ್ನ ಹೆಸರುಳಿಸೋ ಜೀವ ! ಅಂತೆಲ್ಲಾ ಬೀಗ್ತಾಳೆ. ಎದುರಿಗೆ ಅಂಗಾತ ಬಿದ್ದು ಅಳತಿದ್ರೆ, ಬಾಯಿ ಕಿಸಿದು ನಗತಿದ್ರೆ, ಜ್ವರಾಂತ ಸುಡ್ತಿದ್ರೆ... ಅದನ್ನೆತ್ತಿಕೋತಾಳೆ. ಎಲ್ಲ ಎದುರಿಗಿದ್ದಾಗಿನ ಮಾತೇ ! ಬಸಿರ ಮನೆಯಲ್ಲಿ ಬಂಧಿಯಾಗಿದ್ದಷ್ಟು ದಿನ ಇವಳೆಲ್ಲಿದ್ದಳು ಎತ್ತಿಕೊಳ್ಳೋಕೆ, ಮಾತಾಡಿಸೋಕೆ, ಅಪ್ಪೀ ಅನ್ನೋಕೆ ? ಸತ್ತು ಸೊಡರಾರಿದ ಕೂಡಲೆ ನಿನ್ನ ಗೋರಿಗಿಟ್ಟು ನಿಮ್ಮಮ್ಮ ಕೈಗೆ ಹತ್ತಿದ ಮಣ್ಣು ಝಾಡಿಸಿಕೊಳ್ಳಲಿಲ್ಲಾ ಇರ್ಫಾನ್ ? ಆಮ್ಯಾಲೆ ಯಾರಯ್ಯ ನಿನ್ನ ನೋಡಿ ಕೊಂಡರು ? ಮಾವಿನ ತೋಪಲ್ಲಿ ಕತ್ತಲೆಗಂಜಿ 'ಅಬ್ಬೂ...' ಅಂತ ಅರಚಿಕೊಂಡ್ಯಲ್ಲ ? ಅವತ್ಯಾರಿದ್ರು ಕೈ ಹಿಡಿದು ಜೋಗುಳ ಹಾಡೋಕೆ. ಎಲ್ಲಾ ಅಷ್ಟೇ ಕಣೋ, ಭೂಮಿಗೆ ಬಾರದ ಜೀವ, ಭೂಮಿಗಿಳಿದು ಹೋದ ಜೀವ ಎರಡೂ ಒಂದೇ ಈ ಭೂಮಿ ಮೇಲಿನ ಪಾಪಿಗಳಿಗೆ !' ಭ್ರೂಣ ಮಾತಾಡುತ್ತಲೇ ಇತ್ತು. ಇರ್ಫಾನ್ ಹ್ಞೂಂಗುಡುತ್ತಲೆ ಇದ್ದ.

ಒಂಟಿಯಾಗಿ ಬಂದಿದ್ದ ತುಂಡು ಮೋಡ ಕಾವ್‌ಕಾವ್ ಎಂದು ಕೂಗಿ ಹಿಂದಿದ್ದ ಹತ್ತಾರು ಮೋಡಗಳ ಹಿಂಡನ್ನು ಕರೆಯಿತು. ನೋಡನೋಡುತ್ತಲೇ ಮೋಡಗಳ ತೆಕ್ಕೆಯಲ್ಲಿ ಸೂರ್ಯ ಲಗಾಟಿ ಹೊಡೆದ. ಮೋಡ ಕಠ್ರಗಾದವು.

'ಅಮ್ಮೀ..... ಮನೆಗೆ ಹೋಗೋಣ' ಭ್ರೂಣ ಆಕಳಿಸಿತು.

ಎದ್ದು ನಿಂತಳು ಅಮೀನಾ. ವಸಂತಳ ಕಣ್ಣಿಂದ ಜಾರಿದ ಹನಿಯೊಂದು ಕೆನ್ನೆಯ ಮೇಲೆ ಘನೀಭವಿಸಿದ ಕಾಲದಂತೆ ನಿಂತಿತ್ತು. ಇನ್ನಿಲ್ಲದ ಮಮತೆಯಿಂದ ಅವಳ ಕೆನ್ನೆಯೊರೆಸಿದಳು

ಅಮೀನಾ. ತಲೆ ಸವರಿದಳು. ಸಾವಿರ ಸಾಂತ್ವನದ ತಾಕತ್ತು ಅವಳ ಸ್ಪರ್ಷಕ್ಕಿತ್ತು. ಭ್ರೂಣ ಸಂದೇಶ ತಲುಪಿಸಿಯಾಗಿತ್ತು.

'ಮೆಲ್ಲಕ್ಕೆ ಹೋಗು ವಸಂತಾ.... ಮಳೆ ಬರುವ ಹಾಗಿದೆ. ತೊಯ್ದರೆ ಮೈ ತೊಯ್ಯಲಿ. ಒಳಗಿನ ಕಂದ ಬೆಚ್ಚಗಿರಬೇಕು. ಅದು ಮುಖ್ಯ. ಹೋಗುವ ದಾರಿಯಲ್ಲಿ ಒಬ್ಬಳೇ ನಿಂತು ನಿನ್ನೊಳಗಿನ ಜೀವಕ್ಕೆ ಹಾಯೆನ್ನುವಂತೆ ಒಂದು ಹಾಡು ಕೇಳಿಸು. ಪ್ರೀತಿಯಿಂದ ಒಂದು ಮಾತನಾಡಿಸು. ನಿನ್ನೊಳಗೊಂದು ಜೋಗುಳ ಮೂಡಲಿ. ಎರಡು ತಿಂಗಳಾಚೆಗೆ ನಿನ್ನ ತೊಟ್ಟಿಲು ತುಂಬುತ್ತದೆ. ಹೋಗಿ ಬಾ ಬೆಹನ್ !'

ಮತ್ತೊಮ್ಮೆ ಬೆನ್ನಡವಿ ವಸಂತಳನ್ನು ಕಳಿಸಿಕೊಟ್ಟಳು ಅಮೀನಾ. ಅವಳು ದಿನ್ನೆಯೇರಿ ಮಾರುದೂರ ನಡೆದು ತಿರುವೊಂದರಲ್ಲಿ ಮರೆಯಾಗುವ ತನಕ ಅಲ್ಲೇ ನಿಂತು ನೋಡುತ್ತಿದ್ದಳು.

ಭೋರೆಂಬ ಮಳೆಯ ಮೊದಲ ಹನಿ ಅಮೀನಾಳ ಕೆನ್ನೆಯ ಮೇಲೆ ಬಿತ್ತು, ದೇವಲೋಕದಿಂದೆಂಬಂತೆ.

'ಮನೆಗೆ ಹೋಗೋಣ ಬಾ !'

ಅಂದದ್ದು ಭ್ರೂಣವಲ್ಲ. ಅಮೀನಾಳ ನೆತ್ತಿಗೆ ನೆರಳು ಹಿಡಿದ ಫಕೀರ !

●

# ಮಣ್ಣಿನ ಗುಣ

● ಪ್ರೊ. ಕೊರಗಲ್ ವಿರುಪಾಕ್ಷಪ್ಪ

ಕೊಪ್ಪಳದ ಬಸ್ ಸ್ಟ್ಯಾಂಡ್‌ನ್ನು ದಾಟಿ ಹೊರಗೆ ಬರುತ್ತಿರುವಂತೆಯೇ 'ಎಲ್ಲೀಗ್ರಿ ಸಾಹೇಬ್ರ !' 'ಬಜಾರ್ ಮೇ ಜಾನಾ ಹೈ ಕ್ಯಾ ಸಾಬ್ ?' 'ಬರ್‍ರೀ ಸಾರ್ ಒಂದ್ ಸೀಟೈತಿ' ಎಂಬ ಟಾಂಗಾವಾಲಾಗಳ ಆಮಂತ್ರಣ ಕೇಳಿ ಬಂತು. 'ಒಂದs ಸೀಟೈತಿ ಬರ್‍ರೀ' ಎಂದವನ ಟಾಂಗಾ ಏರಿ ಕುಳಿತೆ. ಆದರೆ ಮೊದಲು ಟಾಂಗಾ ಏರಿ ಕುಳಿತವರೊಬ್ಬರು ಕೆಳಗೆ ಇಳಿದು 'ಇಲ್ಲೇ ಕಾಲು ಮಡ್ದು ಬರ್ತೀನಿ ಸಾಬು' ಎಂದು ಹೇಳಿ ಹೋದವರು ಬಹಳ ಹೊತ್ತಾದರೂ ಬರಲೇ ಇಲ್ಲ. ಬೇಜಾರಾಗಿ ಇಳಿದು ನಡೆದುಕೊಂಡೆ ಹೊರಟೆ. 'ಚಲೇಂಗೆ ಬೈಠೋ ಸಾಬ್' ಎಂದ ಮಾತನ್ನು ಕಿವಿಗೆ ಹಾಕಿಕೊಳ್ಳಲಿಲ್ಲ.

ಕೊಪ್ಪಳ ಮೊಘಲಾಯಿ ಸಾಮ್ರಾಜ್ಯದ ಗುರುತನ್ನು ಇನ್ನೂ ಸ್ವಲ್ಪ ಉಳಿಸಿಕೊಂಡಿದೆ. ಹಳೇ ಬಸ್ ಸ್ಟ್ಯಾಂಡಿನಿಂದ ಶಿರ್‍ಸಪ್ಪಯ್ಯನ ಮಠದವರೆಗೆ ಬೈತಲೆ ತೆಗೆದಂತೆ ಉದ್ದಕ್ಕೆ ಒಂದೇ ರೋಡು. ರೋಡಿನಲ್ಲಿ ಗತವೈಭವವನ್ನು ಸಾರುವ ದೊಡ್ಡ ದೊಡ್ಡ ಕಲ್ಲಿನ ಕಮಾನುಗಳು. ರಿಕ್ಷಾ, ಟ್ಯಾಕ್ಸಿಗಳು ರೋಡಿಗೆ ಬರದಂತೆ ನೋಡಿಕೊಳ್ಳುವುದಕ್ಕಾಗಿ, ವ್ಯವಸ್ಥಿತವಾಗಿ, ಅಗ್ಗದ ದರದಲ್ಲಿ ಓಡಾಡುತ್ತಿರುವ ಮಜಬೂತ ಕುದುರೆಗಳುಳ್ಳ ಟಾಂಗಾಗಳು, ಅಲ್ಲಲ್ಲಿ ಕೇಳಿಬರುವ ಗಂಭೀರ ಪದ ಪ್ರಯೋಗಗಳ ಸ್ವಚ್ಛ ಉರ್ದುಭಾಷೆ, ಇವೆಲ್ಲವುಗಳಿಂದ ನಾನು ಹಳೆಯ ಮೊಘಲಾಯಿಗೆ ಬಂದಿದ್ದೇನೆಯೆಂದೆನಿಸದಿರುವುದಿಲ್ಲ.

ಗಡಿಯಾರದ ಕಂಭದ ಹತ್ತಿರ ಹೊರಳಿ ಮಹೇಶ್ವರ ಗುಡಿಯನ್ನು ದಾಟಿ ಮುಂದಕ್ಕೆ ಬಂದು 'ಇಲ್ಲಿ ಹಾಲು ಮಾರುವ ಗಂಗವ್ವನ ಮನಿ ಎಲ್ಲಿ ಐತ್ರಿ ?' ಎಂದು ಒಂದು ಬೀಡಿ ಅಂಗಡಿಯಲ್ಲಿ ವಿಚಾರಿಸಿದೆ. 'ಸೀದಾ ಜಾವ್ ಸಾಬ್, ವಂಹಾ ಏಕ್ ಗಾಡಿ ಹೈ, ದೂಧ್ ಬೇಚನೆಕಾ. ವಂಹಾ ಜಾಕರ್ ಪೂಛಿಯೇಗಾ ತೋ ಕೋಯಿ ಭಿ ಬತಾತಾ ಹೈ' (ಸೀದಾ ಹೋಗ್ರಿ ಸಾಹೇಬ್ರ ಅಲ್ಲಿ ಒಂದು ಹಾಲು ಮಾರುವ ಗಾಡಿ ಇದೆ. ಅಲ್ಲಿ ಹೋಗಿ ಕೇಳಿದರೆ ಯಾರಾದರೂ ತೋರಿಸುತ್ತಾರೆ.) ಎಂದು ಹೇಳುವ ಮೂಲಕ ನನ್ನ ಉರ್ದು ಭಾಷೆಯ ಜ್ಞಾನದ ಪರೀಕ್ಷೆ ಮಾಡಿದ. ಅವನು ಹೇಳಿದಂತೆ ಸೀದಾ ಎಷ್ಟು ದೂರ ಹೋದರೂ ಹಾಲಿನ ಗಾಡಿ ಕಾಣಿಸಲೇ

ಇಲ್ಲ. ಅಲ್ಲಿ ಮತ್ತೊಬ್ಬರನ್ನು ವಿಚಾರಿಸಿದಾಗ 'ಇಷ್ಟೊತ್ತಿನಾಗ ಆಕಿ ಹಾಲು ಮಾರಾಕ ಹೋಗಿರ್ತಾಳ. ಈ ಸಂದ್ಯಾಗ ಹೋಗ್ರಿ, ಅಲ್ಲಿ ದಾನಪ್ಪನ ಅಂಗಡಿ ಮುಂದ ಹಾಲು ಮಾರಿಕೊಂತಾ ಕುಂತಿರ್ತಾಳ' ಎಂದು ಒಂದು ಸಂದಿಯನ್ನು ತೋರಿಸಿದ.

ಅವರು ಹೇಳಿದ ಆ ಸಂದಿಯನ್ನು ಹಿಡಿದು ಹೋದಾಗ ಒಂದು ದೊಡ್ಡ ವೃತ್ತದಲ್ಲಿ ಕಿರು ಚಹದ ಅಂಗಡಿಯ ಮುಂದೆ ಅವಳ ಹಾಲಿನ ಗಾಡಿ ನಿಂತಿತ್ತು. ಸೊಂಟಕ್ಕೆ ಸೆರಗು ಸುತ್ತಿ ಗಾಡಿಯ ಪಕ್ಕದಲ್ಲಿ ಹಾಕಿದ್ದ ಒಂದು ಸಣ್ಣ ಸ್ಟೂಲಿನ ಮೇಲೆ ಕುಳಿತಿದ್ದಳು.

ಮುಖದ ಮೇಲೆ ಮೂಡಿದ ನೆರಿಗೆಗಳು ಅವಳ ಹರೆಯದ ಎಣ್ಣೆಯನ್ನು ಕುಡಿದು ಬಿಟ್ಟಿದ್ದವು. ಧೂಳು ತುಂಬಿದ ಕೂದಲಿನಲ್ಲಿ ಬಿಳಿಯ ಪಾಚೆಗಳು ಕಂಡು ನಮ್ಮ ಹರೆಯ ನೆರೆದಿದೆಯೆಂದು ಸಾರುತ್ತಿದ್ದವು. ಪ್ರಯತ್ನಪಟ್ಟು ಎದೆಯನ್ನು ಮೇಲಕ್ಕೆ ಎತ್ತಿಕಟ್ಟಿದ್ದರೂ, 'ನನ್ನ ಯೌವ್ವನದ ಸೊಗಡನ್ನು ಈ ನೆಲ ಈ ಕಾಲ ಕಸಿದುಕೊಂಡವು' ಎಂದು ಹೇಳುತ್ತವೆಯೇನೋ ಎನ್ನುವಂತೆ ಅವಳ ಮೊಲೆಗಳೆರಡೂ ಅವನತ ಮುಖಿಗಳಾಗಿ ನೆಲ ನೋಡುತ್ತಿದ್ದವು. ಅಂತರಂಗದ ನೋವನ್ನು ಹತ್ತಿಡುವುದಕ್ಕಾಗಿಯೋ ಎನ್ನುವಂತೆ ಕಣ್ಣಾಲಿಗಳು ಕೆಳಕ್ಕೆ ಇಳಿದಿದ್ದವು. ಒಂದು ಮೊಣಕಾಲಿನ ಮೇಲೆ ಇನ್ನೊಂದು ಕಾಲನ್ನು ಹೇರಿಕೊಂಡು, ಮೊಳಕಾಲಿನವರೆಗೆ ಸೀರೆಯನ್ನೆತ್ತಿ ಅಷ್ಟು ಹಣ್ಣಾಗದಿರುವ ತೊಡೆಯನ್ನು ಕೆರೆದುಕೊಳ್ಳುತ್ತಿದ್ದಳು. ಗಾಡಿಯ ಮುಂದೆ ಹೋಗಿ ನಿಂತ ನನ್ನನ್ನು ನೋಡಿ, ಮೇಲಕ್ಕೇರಿಸಿದ ಸೀರೆಯನ್ನು ಕೆಳಕ್ಕೆ ಜಗ್ಗಿ ಏನು ಬೇಕು ಅಥವಾ ಹಾಲು ಎಷ್ಟು ಬೇಕು ಎನ್ನುವಂತೆ ಹುಬ್ಬನ್ನು ಮೇಲಕ್ಕೇರಿಸಿ ಕೆಳಗಿಳಿಸಿದಳು. ಅವಳಿಗೆ ನನ್ನ ಗುರುತು ಹತ್ತಲಿಲ್ಲವೆನ್ನುವುದು ಖಚಿತವಾಯಿತು.

'ಗಂಗವ್ವ ನಾನು ಹಾಲಿಗೆ ಬಂದಿಲ್ಲ. ನಿನ್ನ ಸುಖ ದುಃಖದ ಪಾಲಿಗೆ ಬಂದೀನಿ. ನಿನಗ ನನ್ನ ಗುರ್ತು ಹತ್ಲಿಲ್ಲ ಅಲ್ಲ ?' ಎಂದೆ. ಬಹಳ ದಿವಸಕ್ಕೆ ನನ್ನನ್ನು ನೋಡಿದ್ದರಿಂದ ನನ್ನ ಚಹರೆಯ ಗುರುತು ಹತ್ತದಿದ್ದರೂ ನನ್ನನ್ನು ಧ್ವನಿಯಿಂದ ಗುರುತು ಹಿಡಿದು, 'ಅಯ್ಯ ಮ್ಹಾರಾಯ ನಿನ್ನ ಗುರ್ತು ಹತ್ತೂದಿಲ್ಲ ಅಂದ್ರ ನನ್ನ ಬಾಯಾಗ ಹುಳಾ ಬಿದ್ದಾವು. ಯಾವಾಗ ಬಂದಿ ? ಎಲ್ಲಿಂದ ಬಂದಿ ? ಎಲ್ಲಾರೂ ಬೇಶದಾರ' ಎಂದು ಮುಂತಾಗಿ ಪ್ರಶ್ನೆಗಳ ಸರಬಿಚ್ಚಿ ಉತ್ತರಕ್ಕೆ ಹುಡುಕುವಂತೆ ಮಾಡಿದಳು.

'ಇನ್ನೂ ಸ್ವಲ್ಪ ಹಾಲದಾವು. ಇವನ್ನ ಮಾರಿ ಬರ್ತೀನಿ. ಖೋಲ್ಯಾಗ ಕುಂದರ್ತಿಯೇನು ? ಇಲ್ಲಂದ್ರ ಈ ಕೊಪ್ಪಳದ ಕ್ಯಾಟಿ ಹತ್ತಿ ಕೆಳಗಿಳದು ಬಾ ಅಷ್ಟೊತ್ತಿಗ ಮಾರಿರ್ತೀನಿ' ಎಂದು ಒಮ್ಮೆ ಹೇಳಿದರೂ ಹಿಂದೆಯೇ 'ಬ್ಯಾಡ ತಡಿ ದಾನಪ್ಪನ ಚಾದ ಅಂಗಡ್ಯಾಗ ಕೊಟ್ಟುಬಿಡ್ತೀನಿ' ಎಂದು ಹಾಲಿನ ಕ್ಯಾನ್‌ನ್ನು ಎತ್ತಿ ಅಂಗಡಿಯವರು ಬೇಡವೆಂದರೂ ಕೇಳದೇ ಸುರುವಿ ಬಂದಳು.

ಅವಳ ಬಿಡಾರ ಒಂದು ಸಣ್ಣ ಕೋಣೆ. ನಾಲ್ಕೆಂಟು ಕ್ಯಾನುಗಳೇ ಅವಳ ಆಸ್ತಿಯೆನ್ನುವಂತೆ ಅಲ್ಲಲ್ಲಿ ಅಸ್ತವ್ಯಸ್ತವಾಗಿ ಬಿದ್ದುಕೊಂಡಿದ್ದವು. ಬಾಗಿಲ ಪಕ್ಕದಲ್ಲಿ ಒಂದು ಜಿಡ್ಡುಗಟ್ಟಿದ ಜಮಖಾನಿ ಹಾಸಿ 'ಇದರ ಮ್ಯಾಲ ಕುಂತ್ರ ನಿನ್ನ ಚಣ್ಣ (ಪ್ಯಾಂಟು) ಹೊಲಸ ಆಗುತ್ತೋ ಏನೋ' ಎಂದಳು.

'ಈಗ ಹೇಳು ಹ್ಯಾಂಗ ಅದೀದಿ' ಎಂದು ಕೇಳಿದೆ.

'ನಾನು ಹೇಳಮು ಏನೈತಿ ? ನಾನು ಹ್ಯಾಂಗ್ ಬದಕ್ತೀನಿ ಅನ್ನೋದನ್ನ ಇಷ್ಟೊತ್ತು ನೋಡಿ ಬಂದೀದಿ. ವಸ್ತಾ ವಡವಿ ತುಂಬಿದ ಹತ್ತು ರೂಪಾಯಿಯ ಬಾಡಿಗಿ ಮನಿಗೆ ಕರ್‍ಕಂಬಂದು ಕುಂದರ್‍ಸೀನಿ. ಇನ್ನು ನಾ ಹ್ಯಾಂಗದೀನಿ ಅಂದ್ರ ಏನು ಹೇಳಲಿ ?' ಎಂದು ಉತ್ತರಿಸುವ ಮೂಲಕ ಕ್ಷಣಕಾಲ ಗಲಿಬಿಲಿಯಾಗುವಂತೆ ಮಾಡಿದಳು.

ಒಲೆ ಹಚ್ಚಿ ಅನ್ನಕ್ಕಿಟ್ಟಳು. 'ಶ್ಯಾವಿಗಿ ಮಾಡ್ಲೇನು ?' ಎಂದಾಗ ನಾನು ಬೇಡವೆಂದೆ. 'ಎಂಥಾ ಮಾತು, ಪಾಪಿಯ ಮನೆಗೆ ಪುಣ್ಯ ಬಂದ್ರ ಬಾಯಿ ಸವಿ ಮಾಡಲ್ದ ಕಳಿಸಬಾರ್‍ದು' ಎಂದು ಶ್ಯಾವ್ಗಿ ಬಸಿದಳು.

ಶ್ಯಾವಿಗೆ, ಬೆಲ್ಲ, ಅನ್ನ, ಹಾಲು, ಮೊಸರು ಊಟ ಗಡದ್ದಾಯಿತು. ಮುಂದೆ ಕುಳಿತು ಒತ್ತಾಯಿಸಿ ಉಣಿಸಿದಳು. 'ನೀನೂ ಉಣ್ಣು' ಎಂದಾಗ 'ನಿನ್ನನ್ನು ನೋಡಿದ ಕೂಡ್ಲೇ ಹೊಟ್ಟಿ ತುಂಬಿದ ಹಾಂಗ ಆಗೇತಿ. ಉಣ್ಣಂದ್ರ ಹ್ಯಾಂಗ ಉಣ್ಲಿ, ಉಣ್ಣು ಅಂತ ನಿನ್ನ ಬಾಯಾಗ ಬಂದ ಮ್ಯಾಲ ಉಣ್ಣದ ಇರ್‍ಲಿಕ್ಕ ಆದೀತ. ಅದಕ್ಕ ಉಣ್ತೇನಿ' ಎಂದು ಎರಡು ತುತ್ತು ಹಾಲು ಅನ್ನ ಕಲಿಸಿಕೊಂಡು ಗಬಗಬ ತಿಂದು ಮುಗಿಸಿದಳು.

'ಎದ್ದೇಳು ಈ ಜಮಖಾನಿ ಬಿಚ್ಚಿ ಹಾಸ್ತೀನಿ. ಒಂಚೂರು ಅಡ್ಡ ಆಗುವಂತಿ' ಎಂದು ಜಮಖಾನಿಯನ್ನು ಬಿಚ್ಚಿ ಉದ್ದಕ್ಕೆ ಹಾಸಿ, ತಲೆಗಿಂಬಿಗೆ ಒಂದು ಗೋಣಿ ಚೀಲ ಮಡಚಿ ಇಟ್ಟಳು. ಸ್ವಲ್ಪ ಮಲಗಬೇಕೆಂದು ಕಣ್ಣು ಮುಚ್ಚಿದೆ. ಆ ಕೋಣೆಯಲ್ಲಿ ನೊಣಗಳ ಸಾಮ್ರಾಜ್ಯವೇ ಇತ್ತು. 'ನನ್ನ ಮನಿ ಹಾಲಿನ ಮನಿ ಅದಕ್ಕ ನೊಣಾ ಬಾಳ' ಎನ್ನುತ್ತಾ ಸೀರೆಯ ಸೆರಗಿನಿಂದ ಗಾಳಿ ಹಾಕಿ ನೊಣ ಓಡಿಸಲಿಕ್ಕೆ ಕುಳಿತಳು. ನನಗೆ ಮುಜುಗರವಾಗಿ 'ಬೇಡ ಬಿಡು' ಎಂದು ಏಳಲಿಕ್ಕೆ ಪ್ರಯತ್ನಿಸುವವನ್ನು ಒತ್ತಾಯದಿಂದ ನೆಲಕ್ಕೆ ಕುಕ್ಕಿ ಮಲಗಿಸಿದಳು. ಅಂಗಾತ ಮಲಗಿ ಅವಳು ಗಾಳಿ ಬೀಸುವುದನ್ನು ನೆಟ್ಟ ದೃಷ್ಟಿಯಿಂದ ನೋಡಿದೆ.

❖ ❖ ❖

ಕಂಠಿ ಮಲ್ಲಪ್ಪನ ಹಳ್ಳದಲ್ಲಿ ಅವಳನ್ನು ಹೀಗೆಯೇ ಮಲಗಿಸಿಕೊಂಡು ಕುಳಿತಿದ್ದೆ. ಅಂದು ನಾನು, ಬೆಂಚಳ್ಳಿ ಕಳಕ ಹುಲಗೇರಿಗೆ ಹೊರಟಾಗ, ಗಂಗವ್ವ ಬಾಯಿಬಾಯಿ ಬಡಿದು ಕೊಳ್ಳುತ್ತ ನಮ್ಮತ್ತ ಓಡಿ ಬಂದಿದ್ದಳು. ಜೇನು ನೊಣದ ಹಿಂಡೇ ಅವಳನ್ನು ಬೆನ್ನುಹತ್ತಿತ್ತು. ಹಳ್ಳದ

ತೆಗ್ಗಿನಲ್ಲಿ ಈಚಲು ಪರಕೆಯಿಂದ ಬೆಂಕಿ ಹಚ್ಚಿ ಅವಳನ್ನು ಕೂಡ್ರಿಸಿದ ಮೇಲೆ ಜೇನು ನೊಣಗಳು ಚದುರಿದ್ದವು. ಮೈ ಮುಖ ಊದಿಕೊಂಡಿತ್ತು. ಬೆಂಚಳ್ಳಿ ಕಳಕ ಚಕ್ಕಡಿ ತರಲಿಕ್ಕೆ ಊರ ಕಡೆಗೆ ಹೋದ ಮೇಲೆ ಅವಳನ್ನು ಮಲಗಿಸಿ, ಮೈ ತುಂಬ ಚುಚ್ಚಿಕೊಂಡಿದ್ದ ಜೇನುಮುಳ್ಳುಗಳನ್ನು ಒಂದೊಂದೇ ಕಿತ್ತಿದ್ದೆ. ಗುತ್ತಿಕೊಡ್ಲೆಪ್ಪನ ತೋಪಿನಲ್ಲಿ ಚಕ್ಕಡಿಯ ಶಬ್ದ ಕೇಳಿ ಬಂದಾಗ, 'ಚಕ್ಕಡಿ ಬಂತೇಳು ಹೋಗುವಂತಿ' ಎಂದಾಗ 'ನೀನು ಎಷ್ಟು ಒಳ್ಳೇವದೀದಿ. ಈಗ ನನ್ನ ಏನು ಬೇಕಾದರೂ ಮಾಡಬಹುದಿತ್ತು. ಆದರ ಹಂಗ ಮಾಡ್ಲಿಲ್ಲ'' ಎಂದು ತೆಕ್ಕೆಬಿದ್ದು ಅಪ್ಪಿಕೊಂಡು ಅಳುವವಳಿಂದ ಬಿಡಿಸಿಕೊಂಡಿದ್ದೆ.

❖ ❖ ❖

ನನ್ನ ನೆಟ್ಟ ದೃಷ್ಟಿಯಿಂದ ಅವಳಿಗೂ ಕಸವಿಸಿಯಾಯಿತೇನೋ.

'ಈಗೇನೈತಿ ನನ್ನ ಹಂತೇಲಿ ನೋಡಾಕ. ನೋಡುವ ಹಂಗ ಇದ್ದ ಕಾಲದೊಳಗ ನೋಡು ಬಾ ನನ್ನ, ಬೇಡು ಬಾ ನನ್ನ, ಈಡು ಮಾಡು ಬಾ ನನ್ನ ಅಂತ ಕರದರ ಮಾರಿ ತಿರುಗಿಸಿಕೊಂಡು ಹೋಗ್ತಿದ್ದಿ' ಎಂದು ಕೈಯ್ಯಲ್ಲಿಯ ಸೆರಗನ್ನು ಹುರಿಗೊಳಿಸಿ ತಲೆಗೆ ಮೆತ್ತಗೆ ಹೊಡೆದುಬಿಟ್ಟಳು. ತಲೆಗೆ ಏಟು ಕೊಟ್ಟ ಸೆರಗನ್ನು ಹಿಡಿದುಕೊಂಡೆ.

'ಕೈ ಹಿಡಕೊಂಡು ಸಣ್ಣಾತ ಇದ್ದಾಗ ಕೈಯಾಗಿನ ಗೆರಿ ನೋಡಿ ಭವಿಷ್ಯ ಹೇಳ್ತಿದ್ದೆಲ್ಲಾ. ಹಂಗ ಹೇಳಬೇಕಂತೀಯೇನು ? ಈಗ ಕಾಲನs ಹಣ್ಣಾಗಿ ನನ್ನ ಭವಿಷ್ಯ ನನಗ ಗೊತ್ತಾಗಿ ಬಿಟ್ಟೈತಿ. ನೀನು ಹಿಂದೆ ಹೇಳಿದ ಭವಿಷ್ಯಯೆಲ್ಲಾ ಸುಳ್ಳಾಗ್ಯಾವು'ಯೆಂದು ಹಿಡಿದ ಸೆರಗನ್ನು ಬಿಡಿಸಿಕೊಂಡಳು.

❖ ❖ ❖

ಹುಡುಗರಿದ್ದಾಗ ಹಂಬ್ಯಾಳಪ್ಪನ ಬಂಕದಲ್ಲಿ ಭವಿಷ್ಯ ಹೇಳುವ ಆಟ ಆಡುತ್ತಿದ್ದೆವು. ಗಂಗವ್ವನ ಕೈಯಲ್ಲಿಯ ಗೆರೆ ನೋಡಿ,

'ನೀನು ಚಂದನ್ನ ಗಂಡನ್ನ ಮದುವಿ ಆಗ್ತೀದಿ. ಆರು ಗಂಡು, ಐದು ಹೆಣ್ಣು ಹನ್ನೊಂದು ಮಂದಿ ಮಕ್ಕಳಾಗ್ತಾರ. ನಿನ್ನ ಕೈಯ್ಯಾಗ ಅನ್ನದ ಗೆರಿ ಐತಿ. ನೀನು ಹೊಕ್ಕ ಮನಿಯೊಳಗ ಹಾಲು ಬಾನದ ಹೊಳಿ ಹರಿತೈತಿ' ಎಂದು ಹೇಳಿ ನಗುತ್ತಿದ್ದೆವು. ಆ ಭವಿಷ್ಯದ ಆಟದಲ್ಲಿ ಎಲ್ಲರೂ ಒಂದು ರೀತಿಯ ಖುಷಿ ಕಾಣುತ್ತಿದ್ದರು.

ಗಂಗವ್ವ ಹುಟ್ಟಿ ಬೆಳೆದದ್ದು ಮದುವೆಯಾದದ್ದು ನಮ್ಮೂರಲ್ಲಿಯೇ. ನನ್ನ ಜೊತೆಯಲ್ಲಿ ಆಡಿ, ಹಾಡಿ, ಕುಣಿದು ದೊಡ್ಡವಳಾಗಿದ್ದವಳು. ಅಲ್ಲದೆ ನಮ್ಮ ಸೋದರಮಾವನ ಮಗಳಾಗಿದ್ದುದರಿಂದ 'ಮಾವ' ಎಂದೇ ಕರೆಯುತ್ತಿದ್ದಳು. ನನ್ನೊಡನೆ ಎಲ್ಲಿಲ್ಲದ ಸಲುಗೆಯಿತ್ತು. ಅವಳ ಮದುವೆಯಲ್ಲಿಯೂ ನಾನು ಪ್ರಮುಖ ಪಾತ್ರವಹಿಸಿದ್ದೆ.

ಅವಳ ಮದುವೆ ಕಡೇಮನಿ ಗಂಗಪ್ಪನೊಡನೆ ಆಗಬೇಕಾಗಿತ್ತು. ಇನ್ನೇನು ಗಂಗಪ್ಪ ಅವಳ ಕೊರಳಿಗೆ ತಾಳಿ ಕಟ್ಟಬೇಕು. ಆ ಮದುವೆಯ ಹಂದರಕ್ಕೆ ಕುಡಿದು ಬಂದ ಅವನ ತಂದೆ ಜುಂಜಪ್ಪ ವರದಕ್ಷಿಣೆ ಕಡಿಮೆಯಾಯಿತೆಂದು ಜಗಳ ತೆಗೆದು, ಗಂಗಪ್ಪನನ್ನು ರಟ್ಟೆ ಹಿಡಿದು ಎಳೆದುಕೊಂಡು ಹೋಗಿಬಿಟ್ಟ. ಯಾರು ಏನು ಹೇಳಿದರೂ ಪಟ್ಟು ಬಿಡಲಿಲ್ಲ. ಮದುವೆ ಮುರಿದುಬಿತ್ತು. ಹೆಂಗಸರ ಗುಂಪಿನಲ್ಲಿ ಕೆಂಪು ಶಾಲು ಹೊದೆದುಕೊಂಡು ಮನೆಗೆ ಹೋದ ಗಂಗವ್ವ ನಾಲ್ಕೆಂಟು ದಿವಸ ಹೊರಗೆ ಬರಲೇ ಇಲ್ಲ. ಮೈಗೆಲ್ಲ ಅರಿಷಿಣ ಬಳಿದುಕೊಂಡು ಮದುವೆಯ ಮಂಟಪದಿಂದ ಬರೀ ಕೊರಳಿನಲ್ಲಿ ಮಗಳು ಮರಳಿ ಬಂದದ್ದು ಅವಳ ತಂದೆಗೆ ಸಹಿಸಲಾಗದ ಆಘಾತವಾಯಿತು. ತಿಂಗಳೊಪ್ಪತ್ತಿನಲ್ಲಿ ಎದೆಯೊಡೆದುಕೊಂಡು ಸತ್ತುಹೋದ.

ಆದರೆ ನಮ್ಮತ್ತೆ ಅಳ್ಳೆದೆಯವಳಾಗಿರಲಿಲ್ಲ. ಗಂಡ ಸತ್ತ ನೋವನ್ನು ನುಂಗಿಕೊಂಡೂ ಮಗಳ ಮದುವೆಗೆ ಪ್ರಯತ್ನಿಸಿದಳು. ನಾನಾಗ ಕಾಲೇಜಿನಲ್ಲಿ ಓದುತ್ತಿದ್ದೆ. ಅತ್ತೆ ಗಂಗವ್ವನೊಡನೆ ನಮ್ಮ ಮನೆಗೆ ಬಂದು ಮದುವೆಯ ಬಗ್ಗೆ ಚರ್ಚಿಸುತ್ತಿದ್ದಳು. 'ಗಂಗವ್ವ ಏನು ಕುಡ್ಡಿ ಅಲ್ಲ, ಕುಂಟಿ ಅಲ್ಲ ಬಿಡು, ಇವತ್ತಿಲ್ಲ ನಾಳೆ ಯಾರಾರ ಲಗ್ನ ಆಗ್ತಾರ' ಎಂದು ನಮ್ಮ ತಾಯಿ ಸಮಾಧಾನ ಪಡಿಸುತ್ತಿದ್ದಳು. 'ಯಾರಾರ ಯಾಕ ನಿನ್ನ ಮಗ ಬೆಳೆದು ನಿಂತಾನ. ಸ್ವಾದರ ಮಾವನ ಮಗಳು ಚೆಂದನ್ನ ಚೆಲುವಿ. ಅವ್ಗ ಕಟ್ಟಿಬಿಡು ಅಲ್ಲ' ಎಂದು ಪಕ್ಕದ ಮನೆಯ ನೀಲವ್ವ ದನಿ ಕೂಡಿಸಿದಾಗ ಗಂಗವ್ವನ ಕಣ್ಣಲ್ಲಿ ನಾನು, ನನ್ನ ಕಣ್ಣಲ್ಲಿ ಗಂಗವ್ವ ಸೇರಿಕೊಳ್ಳುತ್ತಿದ್ದೆವು.

'ಆತ ಇನ್ನೂ ಓದತಾನಂತ' ಎಂದು ತಾಯಿ ಹೇಳಿ ಅತ್ತೆಯನ್ನು ನಿರಾಶೆ ಗೊಳಿಸುತ್ತಿದ್ದಳು. ನಮ್ಮ ಅತ್ತೆ ಮತ್ತು ನಮ್ಮ ತಾಯಿಯ ಪ್ರಯತ್ನ ಹುಸಿಯಾಗಲಿಲ್ಲ. ಗಂಗವ್ವನ ಮದುವೆ ಮುರಿದುಬಿದ್ದ ಆರು ತಿಂಗಳಲ್ಲಿಯೇ ನನ್ನ ಸೋದರ ಸಂಬಂಧಿಯಾದ ಮಹದೇವಪ್ಪನೊಡನೆ ಗಂಗವ್ವನ ಮದುವೆ ನಿಶ್ಚಯವಾಯಿತು. ಮಹದೇವಪ್ಪ ಕಟ್ಟುಮಸ್ತಾದ ಆಳು. ಅಂತೂ ಗಂಗವ್ವನ ಮದುವೆಯನ್ನು ಅದ್ದೂರಿಯಿಂದ ಮಾಡಿದ್ದೆವು. ಸಿಂಗರಿಸಿದ ಎತ್ತಿನ ಬಂಡಿಯಲ್ಲಿ ವಧೂವರರನ್ನು ಕೂಡ್ರಿಸಿ ಮೆರವಣಿಗೆ ಮಾಡುವಾಗ ಕಡೇಮನಿ ಗಂಗಪ್ಪನ ಮನೆಯ ಮುಂದೆ ಚಕ್ಕಡಿ ನಿಲ್ಲಿಸಿ ಮಜಲುಮಾಡಿ, ಅವರ ಹೊಟ್ಟೆ ಉರಿಸಿದ್ದೆವು. ಮೆರವಣಿಗೆ ಕಡೇಮನಿಯವರ ಮನೆಯ ಮುಂದೆ ನಿಂತಾಗ, 'ಈ ಗಂಗ್ಯಾ ಮದುವಿ ಆಗ್ದ ಬಕ್ಕ ಬಾರ್ಲ ಬಿದ್ದು ಬರೂಹಂಗ ಆಗ್ಲಿ' ಎಂದು ಅತ್ತೆ ಅವರ ಮನೆಯ ಕಡೆಗೆ ನೆಟಿಗೆ ಮುರಿದಿದ್ದಳು. ಅತ್ತೆಯ ಶಾಪ ಸತ್ಯವಾಗಿದೆ. ಕಡೇಮನಿ ಗಂಗಪ್ಪನ ಮದುವೆ ಇನ್ನೂ ಆಗಿಯೇ ಇಲ್ಲ. ಒಂದು ವೇಳೆ ಅವನು ಬ್ರಹ್ಮಚಾರಿಯಾಗಿ ಸತ್ತರೆ ಅವನನ್ನು ಬೋರಲು ಹೂಳುವುದು ಅನಿವಾರ್ಯವಾದೀತು.

ಆದರೆ ಗಂಗವ್ವನ ದಾಂಪತ್ಯ ಜೀವನವೂ ಸುಖಕರವಾಗಲಿಲ್ಲ. ಮದುವೆಯಾಗದ ಹೆಣ್ಣುಗಳಾಗಿ ತವರು ಮನೆಯಲ್ಲಿ ಠಿಕಾಣಿ ಹೂಡಿದ್ದ ಮಹದೇವಪ್ಪನ ಇಬ್ಬರೂ ಸಹೋದರಿಯರು, ಅವಳ ಬಾಳಿಗೆ ಬೆಂಕಿಯಾಗಿದ್ದರು. ತಾವೂ ಹೆಣ್ಣು ಎನ್ನುವುದನ್ನು ಮರೆತ

ಆ ಇಬ್ಬರೂ ಹೆಂಗಸರು ಗಂಗವ್ವನನ್ನು ಹೀನಾಯಮಾನವಾಗಿ ನಡೆಸಿಕೊಂಡರು. 'ಆ ಕಡೇಮನಿ ಗಂಗಪ್ಪ ನಿನ್ನ ಯಾಕೆ ಮಾಡಿಕೊಳ್ಳಲಿಲ್ಲ ಗೊತ್ತೈತೇನು ? ನೀನು ಗಯ್ಯಾಳಿ ಅದೀದಿ ಅನ್ನೋದು ಗೊತ್ತಾಗಿ, ಹಂದರದಾಗಿಂದ ಎದ್ದುಹೋದ' ಎಂದು ಮಾತಿಗೊಮ್ಮೆ ಹಂಗಿಸುವುದು ಸಾಮಾನ್ಯವಾಗಿತ್ತು. ಬೆಂಕಿಯಲ್ಲಿ ಸರ್ಕಸ್ಸು ಮಾಡುತ್ತಾ ಹತ್ತು ವರ್ಷದ ದಾಂಪತ್ಯದಲ್ಲಿ ಮೂರು ಮಕ್ಕಳ ತಾಯಿಯಾದರೂ ಕಷ್ಟದಿಂದ ಹೊರಬರಲಿಲ್ಲ. ದುಡಿದು ಬಂದ ಹೊಟ್ಟೆಯನ್ನು ನೆಲಕ್ಕಿಟ್ಟು ಮಲಗಿದ ದಿನಗಳಿಗೆ ಲೆಕ್ಕವಿಲ್ಲ. 'ಕಿಮಕ್' ಎಂದರೆ, ಒದೆತ, ತಿವಿತ, ಬೈಗಳು. ನನ್ನ ನೆನಪಿನ ಅಂಗಳದ ತುಂಬ ಅವಳ ನೋವಿನ ಸರಪಳಿಯೇ ಬಿಚ್ಚಿಕೊಂಡಿತು.

❖ ❖ ❖

'ಏನು ಹಂಗ ನೋಡಾಕ ಹತ್ತೀದಿ. ಮತ್ತೇನು ಹೊಸಾ ಲೆಕ್ಕಾ ಹಾಕಾಕ ಹತ್ತೀದಿ. ನನ್ನ ಕಷ್ಟಕ್ಕ ನೀ ಯಾಕ ಮರುಗ್ತೀದಿ ಬಿಡು. ಯಾರ ಹೊಟ್ಟೆ ನೋಯತೈತಿ ಅವರ ಅಜವಾನ ತಿನ್ನಬೇಕು. ನೀನು ಎಷ್ಟೋ ಸರ್ತಿ ಗಂಡನ ಮನಿ ಬಿಟ್ಟು ಬಂದ ನನ್ನ, ರಾಜಿ ಮಾಡಾಕ ಪ್ರಯತ್ನ ಮಾಡಿದ್ದಿ. ಪಾಲಿಗೆ ಬಂದದ್ದು ಬಿಡುಗಡಿಯಿಲ್ಲ' ಎಂದಳು.

'ನೀನು ಗಂಡನ ಮನಿ ಬಿಟ್ಟು ಬಂದು ಒಂದು ಪಟ್ಟಮುಗ್ದು ಹೋತು. ಈಗ ರಾಜಿ ಮಾಡ್ಸಿದರ ಊರಿಗೆ ಬರಾಕ ತಯಾರ ಅದೀಯೇನು ?' ಎಂದೆ.

'ಬ್ಯಾಡ ಮಾರಾಯ ಮಕ್ಕಳ ಮ್ಯಾಲಿನ ಕಕ್ಕಲಾತಿ, ಗಂಡನ ಮ್ಯಾಲಿನ ಪಿರೂತಿ ಎಲ್ಲಾ ಕತ್ತರಿಸಿ ಬಂದೀನಿ. ಈಗ ಮತ್ತೆ ಅವನ್ನೆಲ್ಲ ಬೆಸಿಯಾಕ ಆದೀತಾ ?' ಎಂದು ಶುಷ್ಕ ನಗೆ ನಕ್ಕಳು. ಏನು ಹೇಳುವುದಕ್ಕೂ ತಿಳಿಯದೇ ನಾನು ರೆಪ್ಪೆ ಬಡಿದೆ.

'ಹಳೇದನ್ನ ನೆನಪು ಮಾಡಿಕೊಂಡು ಹೊಟ್ಟಿ ಯಾಕ ಉರಿಸಿಕೊಳ್ಳೋದು, ನಾನು ಅಂದ್ರ ಈಗ ಜೇನಿಲ್ದ ಜೇನುಗೂಡಿದ್ದ ಹಂಗ, ಇಂಥ ಜೇನಿಲ್ದ ಜೇನುಗೂಡಿಗೆ ನೀನು ಬಂದೀಯಲ್ಲ ಅದ ನನಗ ದೊಡ್ಡದು. ಚಾ ಕುಡಿ ಹಿಡಿ' ಎಂದು ಸ್ಟೀಲಿನ ಲೋಟೆಯನ್ನು ಎಡಗೈಯಲ್ಲಿ ಮುಂಚಾಚಿದಳು. ಚಹ ತೆಗೆದುಕೊಳ್ಳುವುದಕ್ಕಾಗಿ ನಾನು ಎದ್ದುಕುಳಿತು, ಕೈ ಚಾಚಿದಾಗ, ವ್ಯವಸ್ಥೆಯ ಅಪರಾಧೀಭಾವ ನನ್ನ ಕೈಯಲ್ಲೆಲ್ಲ ತುಂಬಿ, ಚಹ ಹಿಡಿದ ಕಪ್ಪು ಗಡಗಡ ನಡುಗಿತು. ಚಹದ ಕಪ್ಪು ನನ್ನ ಪ್ಯಾಂಟಿನ ಮೇಲೆ ಬಿದ್ದು ಪ್ಯಾಂಟಿಗೆ ಅಭಿಷೇಕಾಯಿತು.

'ನೀನೇನು ತಪ್ಪು ಮಾಡೀದೆಂತ ನಿನ್ನ ಕೈ ನಡುಗ್ತಾವು. ಆ ಹೊತ್ತು ರಾಜಿ ಮಾಡ್ಸಾಕಂತ ನೀನು ನನ್ನ ಕರ್ಕೊಂಡು ಹೋದಾಗ ಇದ ರೀತಿ ನನ್ನ ಮಾರಿಗೆ ಬಿಸಿನೀರು ಉಗ್ಗಿ ಹೊರಗ ದಬ್ಬಿದ್ದರು. ನೀನು ಮನುಷ್ಯ ಅದೀದಿ ಅಂತ ಇನ್ನೊಬ್ಬರ ಕಷ್ಟದ ಅರುವು ಮೂಡತೈತಿ. ನೀನು ಧೈರ್ಯ ಹೇಳದ ಹೋಗಿದ್ದರ ನಾನು ಎದಿಗಾರ್ತಿಯಾಗಿ ಉಳಿತಿದ್ದಿಲ್ಲ' ಅಂದಳು.

❖ ❖ ❖

ಹೌದು ಅವಳುಎದೆಗಾರ್ತಿಯಾಗಲಿಕ್ಕೆ ಸ್ವಲ್ಪ ಮಟ್ಟಿಗೆ ನಾನೂ ಸಹ ಕಾರಣನಾಗಿದ್ದೆ. ಗಂಗವ್ವನನ್ನು ಹೊಡೆದು ಬಡಿದು ಮನೆಬಿಟ್ಟು ಹೊರದಬ್ಬಿದ ಮೇಲೆ, 'ಅಕಿ ಕೆರಿನೋ ಭಾವಿನೋ ಬೀಳ್ತೀನಿ ಅಂತಾಳೋ' ಎಂದು ಅತ್ತೆ ಹೇಳಿದಾಗ ನಾನೇ ಅವಳಿಗೆ ಧೈರ್ಯ ಹೇಳಿದ್ದೆ. ರಾತ್ರಿ ಅತ್ತೆಯ ಮನೆಯ ಕಟ್ಟೆಯ ಮೇಲೆ ಮಲಗಿ, ಕಾವಲು ಕಾಯ್ದು ಆತ್ಮಹತ್ಯೆ ಮಾಡಿಕೊಳ್ಳಬಹುದಾಗಿದ್ದ ಗಂಗವ್ವನನ್ನು ಉಳಿಸಿಕೊಳ್ಳಲು ನನ್ನ ಪಾಲಿನ ಕರ್ತವ್ಯ ನಿರ್ವಹಿಸಿದ್ದೆ. ಗಂಡೆದೆಯವಳಾಗಿ ಬದುಕುವಂತೆ, ಒತ್ತಾಯಿಸಿದ್ದೆ. ನನ್ನ ಆಶೆ ಫಲಿಸಿತ್ತು. ಸಂಸ್ಕೃತಿಯ ಹೆಸರಿನಲ್ಲಿ, ಪರಂಪರೆಯ ಪಡಿನೆಳಲಿನಲ್ಲಿ ಅಬಲೆಯೆಂದು, ಅಸಹಾಯಕಳೆಂದು, ಕೋಮಲೆಯೆಂದು ಕರೆದು ಮೂಲೆಗುಂಪು ಮಾಡಬಯಸಿದ್ದ ಸಮಾಜದ ಎದುರು ಎದೆಸೆಟೆಸಿ ನಿಂತಳು. ಗಂಡಸರಲ್ಲಿ ಗಂಡಸಾಗಿ ನಿಂತು ಬದುಕು ರೂಪಿಸಿಕೊಂಡಳು. ತವರು ಮನೆ ಸೇರಿದ ಮೇಲೆ ಸ್ವಾವಲಂಬಿಯಾಗಿ ಬದುಕಲೆತ್ನಿಸಿದಳು. ಅತ್ತೆಯ ಪ್ರೋತ್ಸಾಹವೂ ಇತ್ತು. ಗಂಗವ್ವನ ದುಡಿಮೆಯಿಂದಾಗಿ ಆ ಮನೆಯಲ್ಲಿ ಹಾಲು ಹೈನದ ಹೊಳೆ ಹರಿಯಿತು. ಪ್ರತಿ ಗುರುವಾರ ಬೆಣ್ಣೆಯ ಬುಟ್ಟಿಯನ್ನು ಹೊತ್ತು ಹೋಗಿ ಕೊಪ್ಪಳ ಸಂತೆ ಮಾಡಿಬರುತ್ತಿದ್ದಳು. ಮನೆಯ ಬೆಣ್ಣೆಯನ್ನು ಮಾರುತ್ತಿದ್ದವಳು ಬರಬರುತ್ತ ಬೆಣ್ಣೆಯನ್ನು ಕೊಂಡುಕೊಂಡು ಹೋಗಿ ಮಾರಲಾರಂಭಿಸಿದಳು.

ನಾನು ಓದು ಮುಗಿಸಿ ನೌಕರಿ ಹಿಡಿದ ಮೇಲೆ, ಹೆಂಡತಿ ಮಕ್ಕಳೊಡನೆ ಊರಿಗೆ ಬಂದಾಗ, ಕೊಪ್ಪಳದ ಬಸ್ ನಿಲ್ದಾಣದಲ್ಲಿ ಸಿಕ್ಕರೆ, ನನ್ನ ಮಕ್ಕಳನ್ನು ಎತ್ತಿ ಮುದ್ದಾಡಿ, 'ನಾನಿದ್ದೂ ನನ್ನ ಮಕ್ಕಳು ಪರದೇಶಿ ಆಗ್ಯಾವು' ಎಂದು ಕಣ್ಣೀರು ಸುರಿಸಿ ಬಿಡಲಾರದ ಗಂಡನ ಮನೆಯ ನೆಂಟನ್ನು ನೆನಪಿಸಿಕೊಳ್ಳುತ್ತಿದ್ದಳು.

'ಈಗ ಹ್ಯಾಂಗ ನಡ್ದೈತಿ, ನಿನ್ನ ಹಾಲು, ಮೊಸರು, ಬೆಣ್ಣಿ ವ್ಯಾಪಾರ' ಎಂದು ನಾನು ಕೇಳಿದಾಗ ನನ್ನ ನಸೀಬದಾಗ ಒಂದು ಠಿಕಾಣಿ ಹಿಡ್ದು ಬದುಕೋ ಭಾಗ್ಯ ಇಲ್ಲಂತ ಕಾಣುತ್ತ, ಎಂಥ ವ್ಯಾಪಾರ ಮಾಡಿದರೇನು ಮನಸ್ಸಿಗೆ ಸುಖ ಇಲ್ಲಂದ್ರ ? ಅವ್ವ ಸತ್ತ ಮ್ಯಾಲೆ, ನಮ್ಮಣ್ಣನ ಹೆಣ್ತಿಗೂ ನನಗೂ ನಡೀವಲ್ದು. ಅದಕ್ಕ ಕೊಪ್ಪಳದಾಗ ಒಂದು ಕ್ವಾಣಿ ಹುಡುಕಾಕ ಹತ್ತೀನಿ ಎಂದೊಮ್ಮೆ ಹೇಳಿದ್ದಳು. ನಾನು ಮತ್ತೊಮ್ಮೆ ಊರಿಗೆ ಹೋದಾಗ ಅವಳು ಊರು ಬಿಟ್ಟ ವಿಷಯ ತಿಳಿದು ಬಂತು.

ನಮ್ಮ ಅಣ್ಣ ಕೊಪ್ಪಳ ಸಂತೆಗೆ ಹೋದಾಗ, ಸಿಕ್ಕಿದ್ದಳಂತೆ, 'ಇರಪಣ್ಣ ಬೇಶದಾನನ. ಆತನ ಅಡ್ರೆಸ್ ಕೊಡು ಪತ್ರ ಬರಸ್ತೀನಿ' ಎಂದು ಅಣ್ಣನ ಕಡೆಯಿಂದ ನನ್ನ ಅಡ್ರೆಸ್ ಪಡೆದಿದ್ದಳಂತೆ. ಅಣ್ಣ ನಾನು ಊರಿಗೆ ಹೋದಾಗ 'ಗಂಗವ್ವ ನಿನ್ನ ಭಾಳ ಕೇಳ್ತಾಳೋ. ಒಮ್ಮೆ ಹೋಗಿಬಾ. ಹಾಲಿನ ಯಾಪಾರಕ್ಕ ನಿಂತಾಳ. ದಿವಸಾ ಇಪ್ಪತ್ತು ಕೊಡಾ ಹಾಲು ಮಾರ್ತಾಳಂತ. ಗುರಣ್ಣವರ ಶಿದ್ಲಿಂಗಮ್ಮನ್ನ ಮನೀಗೆ ಕರ್‍ಕೊಂಡು ಹೋಗಿದ್ಲಂತ. ಟ್ರಂಕಿನ ತುಂಬಾ ರೂಪಾಯಿ ತುಂಬಿದ್ದವು ಅಂತ ಶಿದ್ಲಿಂಗಮ್ಮ ಹೇಳಿದ್ಲು. ನೀನಂದ್ರ ಜೀವಬಿಡ್ತಾಳ ಹೋಗಿ ಭೆಟ್ಟಿಯಾಗಿ

ಬಾ. ರೊಕ್ಕಾ ಕೊಟ್ರ ಹೊಡ್ಕಂಬಾ' ಎಂದು ನಗೆಯಾಡಿದ್ದ. ಅಣ್ಣನ ಹತ್ತಿರ ಅಡ್ರೆಸ್ ಪಡೆದ ಮೇಲೆ.

'ನಿನ್ನ ನೋಡ್ದ ಭಾಳ ದಿವ್ಸಾತು ಜೀವ ನೆನಸತೈತಿ. ಒಮ್ಮೆ ಬಂದು ಹೋಗು, ನನ್ನ ಕಣ್ಣೀರಿಗೆ ಮಿಡ್ವ ಜೀವಂದ್ರ ನಿಂದಷ್ಟ. ಹಿಂದಿನ ಜಲ್ಮದಾಗ ನನ್ನ ನಿನ್ನ ಸಂಬಂಧ ಏನಿತ್ತೋ ಏನೋ ಗೊತ್ತಿಲ್ಲ. ಆದರ ಈ ಜಲ್ಮದಾಗ ನೀನು ಎನ್ನ ಎದಿಯಾಗಿನ ಉಸುರು. ಗಂಡ ಮೂರು ಮಂದಿ ಮಕ್ಕಳು ನನ್ನ ಪಾಲಿಗೆ ಇದ್ದೂ ಇಲ್ಲದ ಹಂಗ ಆಗೇತಿ. ಕೊಪ್ಪಳಕ್ಕ ಇಳ್ದ, ಊರಿಗೆ ಹೋಗೋ ಮುಂದ ಮಕ್ಕಳನ್ನೂ ನನ್ನ ಮನೀಗೆ ಒಮ್ಮೆ ಕರ್ಕೊಡು ಬಂದರ ಭಾಳ ಚಲೋ ಆಗುತ್ತ' ಎಂದು ಪತ್ರ ಬರೆಯಿಸಿದ್ದಳು. ಪತ್ರ ಬಂದು ಬಹಳ ದಿವಸದ ಮೇಲೆ ನಾನು ಅವಳ ಮನೆಗೆ ಬಂದಿದ್ದೆ. ಆದರೆ ಅವಳು ಬಯಸಿದಂತೆ ಮಕ್ಕಳನ್ನು ಕರೆದುಕೊಂಡು ಹೋಗಿರಲಿಲ್ಲ.

❖ ❖ ❖

'ತಗಾಕುಡಿ ಚಾ, ಮತ್ತೆ ಮಾಡಿಕೊಂಡು ಬಂದೀನಿ. ಆ ಪ್ಯಾಂಟ್ ಬಿಚ್ಚಿಕೊಡು, ಇಲ್ಲೇ ಬಚ್ಚಲದಾಗ ತೊಳ್ದು ಕೊಡ್ತೀನಿ. ಇಲ್ಲಂದ್ರ ಕಲಿ ಬೀಳ್ತೈತಿ' ಎಂದು ಚಹದ ವಾಟೆ ತಂದಿಟ್ಟಳು.

'ಪ್ಯಾಂಟು ಇರ್ಲಿ ಬಿಡು ಅದೇನು ಮಾಡುತ್ತ, ಅದನ್ನು ಬಿಚ್ಚಿಕೊಟ್ಟರ ಉಟ್ಟುಗೊಳ್ಳಾಕ ಲುಂಗಿ ಇಲ್ಲ' ಎಂದೆ. ಚಹ ಕುಡಿಯುತ್ತಾ,

'ಅಂಡರ್‌ವೇರ್ ಮ್ಯಾಲ ಇದ್ರ ಏನೂ ಆಗಂಗಿಲ್ಲ ಬಿಚ್ಚು. ನಂದೂ ಹರೇವು ಹಳೆತಾಗೇತಿ. ನಿನ್ನ ಕಸುವೂ ಕುಸಿದು ಹೋಗೇತಿ. ನಾವು ಮುದುಕರು ಅಲ್ಲ ಅಂದ್ರೂ ಒಬ್ಬರನ್ನು ಒಬ್ಬರು ನೋಡಿದ ಕೂಡ್ಲೆ ಎದಿಯಾಗ ಕಚಗುಳಿ ಆಗೋ ದಿನ ಈಗಿಲ್ಲ' ಎಂದು ನನ್ನನ್ನು ಒಳ ಚಡ್ಡಿಯ ಮೇಲೆ ಕೂಡ್ರಿಸಿ ಪ್ಯಾಂಟನ್ನು ಬಚ್ಚಲಕ್ಕೆ ಒಯ್ದು ಚಹದ ಕಲೆಯನ್ನು ತೊಳೆದಳು. ಪ್ಯಾಂಟ್ ಕೂಡಲೇ ಒಣಗಲೆಂದು ಸೀರೆಯ ಸೆರಗಿನಿಂದ ನೀರು ಒರೆಯಿಸಿ ತೆಗೆದಳು.

'ಈಗ ನನ್ನ ಮಕ್ಕಳ ಹ್ಯಾಂಗದಾರ ? ಹಿರೇಮಗ ರಾಮ ದೊಡ್ಡಾವ ಆಗಿರಬೇಕಲ್ಲ ? ಮಕ್ಕಳ ಸುದ್ದಿ ಗಂಡನ ಸುದ್ದಿ ಸಂತಿಗೆ ಬಂದ ನಮ್ಮೂರ ಮಂದಿ ಹೇಳ್ತಿರ್ತಾರ. ಆದರ ನಿನ್ನ ಬಾಯಿಂದ ಕೇಳಿದರ ಅವರು ಕಣ್ಣುಮುಂದೆ ಬರೂಹಂಗ ಹೇಳ್ತೀದಿ. ಯಾಕಂದರ ನೀನು ಕಥಿಗಾರ ನೋಡು. ಅಂದ್ರ ಒಬ್ಬ ಮನಸ್ಯಾನ ಒಳಗುಣ, ಹೊರಗುಣ ಬಿಚ್ಚಿ ಇಡತೀದಿ' ಎಂದು ಗಲ್ಲಕ್ಕೆ ಕೈ ಕೊಟ್ಟು ಚಿಕ್ಕಮಕ್ಕಳು ಕಥೆ ಕೇಳಲಿಕ್ಕೆ ಕುಳಿತಂತೆ ನನ್ನ ಮುಂದೆ ಕುಳಿತು ತನ್ನ ಸಂಸಾರದ ಕಥೆ ಕೇಳಿದಳು.

'ಮಕ್ಕಳ ಮ್ಯಾಲಿನ ಕಕ್ಕಲಾತಿ, ಗಂಡನ ಮ್ಯಾಲಿನ ಪಿರೂತಿ ಎಲ್ಲಾ ಕಳಕೊಂಡೀನಿ ಅಂತೀದಿ. ಮತ್ತ ಮಕ್ಕಳ ಸುದ್ದಿ ಯಾಕ ನಿನಗ' ಎಂದಾಗ

'ಈ ಮಣ್ಣಾಗ ಅಂಥ ಗುಣ ಐತಿ. ಎಲ್ಲಾ ಕಳಕೊಂಡೀನಿ ಅಂದ್ರೂ ಒಳಗೊಳಗ ಬೆಂಕಿ ಆಗಿ ಸುಡತಿರತ್ತೈತಿ. ಅವರು ನನ್ನ ಪಾಲಿಗೆ ಇಲ್ಲ ಅಂದ್ರೂ ಅವರ ಬಗ್ಗೆ ಕೇಳಬೇಕು ಅನಸ್ತೈತಿ' ಎಂದಳು.

'ನಿನ್ನ ಮಕ್ಕಳೂ ಹೀಂಗ ಅಂತಾರ. ನಿನಗ ಗೊತ್ತಾಗದ ಹಂಗ ದೂರ ನಿಂತುಗೊಂಡು ನಿನ್ನ ನೋಡಿ ಹೋಗ್ಯಾರ. ಆ ಮನಿ ಈಗ ಮೊದಲಿನ ಹಂಗ ಇಲ್ಲ. ನಿನ್ನನ್ನು ಕಾಡಿ ಮನೆ ಬಿಡಿಸಿದ ನಿನ್ನ ನಾದಿನಿಯರ ಪೈಕಿ ಪರವ್ವ ಹೋದ ವರ್ಷ ಹೋಗಿ ಬಿಟ್ಳು. ಅವರ ತಂಗಿ ಸಕ್ರವ್ವಗ ಕಣ್ಣು ಕಾಣಿಸೋದಿಲ್ಲ. ಮಹದೇವಪ್ಪನೂ ಭಾಳ ಮೆತ್ತಗ ಆಗ್ಯಾನ. ನಿನ್ನ ಬಗ್ಗೆ ಭಾಳ ಅನುಕಂಪ ಐತಿ' ಎಂದೆ.

'ಈಗ ಅನುಕಂಪ ಐತಿ ಅಂದ್ರ ಯಾತಕ ಬಂದಾಂಗ ಆತು. ನನ್ನ ಮೈ-ಮೋತಿ ಚಂದ ಇದ್ದಾಗ ಗೋಳು ಹೊಯ್ಕೊಂಡು, ಹಿಂಡಿ ಹಿಪ್ಪಿ ಮಾಡಿದರು. ನನಗೆ ಹನ್ನೆರಡು ಬಾವಿ ನೀರು ಕುಡ್ಸಿದರು. ಓಡಿ ಹೋದಾಕಿ ಅಂತ ಹಾದಿ ಹಾದಿಗೆ ಹೇಳಿ ಅಗ್ಗ ಮಾಡಿದರು. ಈಗ ನನ್ನ ಬಗ್ಗೆ ಕಾಳಜಿ ಐತಿ, ಅನುಕಂಪ ಐತಿ ಅನ್ನೋದರ ಹಿಂದೆ ಏನೋ ಇರಬೇಕು' ಎಂದಳು.

'ನಿನ್ನ ಮಗಳು ಬೆಳೆದು ನಿಂತು ಮದುವಿಗೆ ಬಂದಾಳ. ಮನಿಯೊಳಗ ಇಂಥಾ ವ್ಯಾಳ್ಯಾದೊಳಗ ಒಂದು ಹೆಣ್ಣು ಜೀವ ಇದ್ದರ ಆಸರೆಯಾದೀತು. ಅದಕ್ಕ ಹಳೇದೆಲ್ಲ ಮರೆತು ನೀನು ಊರಿಗೆ ಬಂದು ಬಿಡು. ನೀನು ಹೂಂ ಅಂದ್ರ ನಾನು ಹೋಗಿ ಮಹದೇವಪ್ಪನ ಕರಕೊಂಡು ಬರ್ತೀನಿ. ನಾಳೆ ಮುಪ್ಪಿನ ಕಾಲದೊಳಗ ನಿನ್ನ ಯಾರು ನೋಡ್ತಾರ ?' ಎಂದೆ.

'ಈಗ ಯಾವ ಮಾರಿ ಇಟಗೊಂಡು ಕರೀತಾನ. ಮತ್ತು ನಾನು ಯಾವ ಮಾರಿ ಇಟಗೊಂಡು ಆ ಮನಿಯೊಳಗ ಬಾಳೇವು ಮಾಡ್ಲಿ, ಆ ಮಾತು ಬ್ಯಾಡ ಬಿಡು' ಎಂದಳು.

'ನಾನು ಹೇಳಿದ್ದನ್ನು ಇನ್ನೊಮ್ಮೆ ಸರಿಯಾಗಿ ವಿಚಾರಾ ಮಾಡು. ನೀನು ಊರಿಗೆ ಬರ್ಲಿಕ್ಕೆ ಹೂಂ ಅಂದ್ರ ನನಗ ಖುಷಿ ಆಗತ್ತ' ಎಂದು ಹೇಳಿ ಎದ್ದು ಬಂದಿದ್ದೆ.

ಊರಿಗೆ ಬಂದ ಮೇಲೆ ಗಂಗವ್ವನ ಗಂಡ ಮಹದೇವಪ್ಪನನ್ನು ವಿಚಾರಿಸಿದಾಗ 'ಯಾವ ಮಾರಿ ಇಟಗೊಂಡು ಹೋಗಿ ಆಕೀನ ಬಾ ಅಂತ ಕರೀಲೋ ಮಾರಾಯ ನೀನು ಹ್ಯಾಂಗ ತಿಳೀತೈತಿ ಹಂಗ ಮಾಡು' ಎಂದ. ಗಂಗವ್ವ ಮನೆ ಬಿಡಲಿಕ್ಕೆ ಕಾರಣಳಾಗಿದ್ದ ಸಕ್ರವ್ವನನ್ನು ಕೇಳಿದಾಗ 'ಪ್ಯಾಟ್ಯಾಗ ಹಾಲು ಮಾರಿ, ಬಾಯಿಗೆ ಸವಿ ಬಂದದ್ದು ತಿಂದು ಅಡ್ಡ್ಯಾಡ್ಯಾಳ ಈಗ ಈ ಮನಿಯೊಳಗ ಏನು ಸುಖ ಸಿಗುತ್ತಪ್ಪ ಆಕೀಗೆ. ಹಾಲು ಮೊಸರು ಮಾರಿ ಜಗ್ಗ ರೊಕ್ಕಾ ಮಾಡ್ಯಾಳಂತ. ಸಾಟಿ ಅಂದವ್ವ ಹೇಳ್ತಿರ್ತಾಳ. ಬಂದ್ರ ಕರ್ಕೊಂಡು ಬಾರಪ್ಪಾ ನನ್ನವೂ ಕಣ್ಣು ಕಾಣಂಗಿಲ್ಲ' ಎಂದಳು.

ಗಂಗವ್ವನ ಹಿರಿಯ ಮಗ ರಾಮನನ್ನು ಕೇಳಿದಾಗ,

'ನೀ ಹ್ಯಾಂಗಾರು ಮಾಡಿ ನಮ್ಮವ್ವನ ನಮ್ಮ ಮನೀಗೆ ಕರ್‍ಕೊಂಡು ಬಾ ಚಿಗಪ್ಪ. ನಿನಗ ಪುಣ್ಯ ಬರುತ್ತ' ಎಂದ.

'ಕರಕೊಂಡು ಬಂದ ಮ್ಯಾಲ ಆಕೀನ ಚಲೋತ್ನಾಗ ನೋಡಿಕೊಂತೀರಿ ಹೌದಲ್ಲ. ಮೊದಲಿನಹಂಗ ಕಾಡೋದಿಲ್ಲ ಅನ್ನೋದು ಏನು ಗ್ಯಾರಂಟಿ' ಅಂದೆ.

'ಈಗ ಆಕೀನ ಯಾರು ಕಾಡಿಸಬೇಕು ಚಿಗಪ್ಪ, ನಮ್ಮತ್ತಿಗೆ ಕಣ್ಣು ಕಾಣ್ಸೋದಿಲ್ಲ. ನಮ್ಮಪ್ಪಗ ದಮ್ಮು ಸೇರಿಬಿಟ್ಟೇತಿ. ಬಂದ್ರ ಈ ಮನಿ ಮೇಟಿ ಆಕೀನ ಆಗ್ತಾಳ. ಅಲ್ಲ ! ಚಿಗಪ್ಪ. ನಮ್ಮವ್ವ ಟ್ರಂಕಿನ ತುಂಬಾ ರೂಪಾಯಿ ತುಂಬಿಟ್ಟಾಳ ಅಂತ ಅಯ್ನೋರ ಸಾಂತ್ರವ್ವ ಹೇಳ್ತಿರ್‍ತಾಳ. ಆಕಿ ಟ್ರಂಕ್ ಯಾರನ್ನೂ ಮುಟ್ಟಗೊಡೋದಿಲ್ಲಂತೆ, ಹೌದೇನ ಚಿಗಪ್ಪ ?' ಎಂದು ತನ್ನ ತಾಯಿಯ ವಿಷಯ ಮಾತಾಡುವುದರಲ್ಲಿಯೇ ಒಂದು ರೀತಿಯ ಖುಷಿಪಟ್ಟ.

'ಆಕಿ ಟ್ರಂಕಿನ ತುಂಬಾ ರೂಪಾಯಿ ಇಟ್ಟಿದ್ದರೂ ನಿಮಗ ಬರ್‍ತಾವು. ಸಾಲಾ ಮಾಡಿದ್ದರೂ ನಿಮಗ ಬರ್‍ತೈತಿ. ನೀನು ನಿಮ್ಮಪ್ಪ ಇಬ್ರೂ ಬಂದು ಬಾ ಅಂತ ಕರೆದರೆ ಆಕಿ ಬಂದಾಳು. ನಿಮ್ಮಪ್ಪನ ಕೇಳು' ಎಂದು ಹೇಳಿದಾಗ ರಾಮ ಖುಷಿಯಿಂದ ಒಪ್ಪಿಕೊಂಡು, ತಂದೆಯನ್ನು ಒಪ್ಪಿಸಿದ.

❖ ❖ ❖

ರಾಮ, ಮಹದೇವಪ್ಪ ಮತ್ತು ನಾನೂ ಮೂರು ಜನ ಒಂದು ಸಾಯಂಕಾಲ ಗಂಗವ್ವನ ಮನೆಗೆ ಹೋದೆವು. ಮಹದೇವಪ್ಪ ಅವಳ ಮನೆಯ ಒಳಗೆ ಬರಲು ನಾಚಿ ಹೊರಗಡೆಯೇ ನಿಂತ. ರಾಮ ಮತ್ತು ನಾನು ಬಾಗಿಲಲ್ಲಿ ನಿಂತು 'ಗಂಗವ್ವ ಏನು ಮಾಡ್ತೀದಿ ನಾವು ಒಳಗ ಬರಾನೇನು ?' ಎಂದು ಕೇಳಿದಾಗ ಬಚ್ಚಲ ಕಟ್ಟೆಯ ಮೇಲೆ ಕುಳಿತು ಹಾಲಿನ ಕ್ಯಾನು ತೊಳೆಯುತ್ತಿದ್ದವಳು, ನನ್ನ ಧ್ವನಿ ಕೇಳಿ ಖುಷಿಯಿಂದ ಉಬ್ಬಿಹೋದಳು.

'ನೀನು ಬಂದೀ ಅಂದ್ರ ನಮ್ಮ ಮನೀಗ ಬೆಳದಿಂಗಳು ಬಿದ್ಹಾಂಗ ಆಗತ್ತ' ಎನ್ನುತ್ತಾ ಸಂಭ್ರಮದಿಂದ ಕುಣಿದಾಡಿದಳು. ನನ್ನ ಹಿಂದೆ ಬಂದ ಅಪರಿಚಿತ ಯುವಕನನ್ನು ನೋಡಿ ತುಟಿ ಕಚ್ಚಿ ಮಾತುಗಳನ್ನು ನುಂಗಿಗೊಂಡು ಕ್ಷಣಕಾಲ ಎವೆಯಿಕ್ಕದೇ ಹುಡುಗನನ್ನು ನೋಡಿ 'ನಮ್ಮ ರಾಮಣ್ಣ ಅಲ್ಲ' ಎಂದಳು.

ಕಂಠ ತುಂಬಿ ಬಂದು ಕ್ಷಣಕಾಲ ಏನೂ ಹೇಳದೇ ಮೌನವಹಿಸಿ, 'ಕುಂಡರ್‍ರಿ' ಎಂದು ಅದೇ ಜಮಖಾನೆಯನ್ನು ಗೋಡೆಯ ಪಕ್ಕಕ್ಕೆ ಬಿಚ್ಚಿ ಚೆಲ್ಲಿದಳು. ನಾವು ಕುಳಿತ ಮೇಲೆ ಒಂದು ಕಾಲನ್ನು ಗೋಡೆಗೆ ಆನಿಸಿಟ್ಟು, ನಿಂತುಕೊಂಡಳು. ಮಹದೇವಪ್ಪ ಒಳಗೆ ಬರಲಾಗದೇ ಹೊರಗೆ ನಿಂತಿದ್ದ.

'ನಿನ್ನ ಕರಕೊಂಡು ಹೋಗಾಕ ಬಂದೀವಿ. ಮಕ್ಕಳ ಮ್ಯಾಲಿನ ಕಕ್ಲಾತಿ, ಗಂಡನ ಮ್ಯಾಲಿನ ಪಿರೂತಿ ಎಲ್ಲಾ ಕಳಕೊಂಡೀನಿ ಅಂದಿದ್ದೆಲ್ಲಾ ? ಆದ್ರ ಅವರು ನಿನ್ನ ಮ್ಯಾಲಿನ ಪ್ರೀತಿ ಕಳಕೊಂಡಿಲ್ಲ. ಅದಕ್ಕ ಅವರನ್ನು ಕರಕೊಂಡು ಬಂದೀನಿ. ನಮ್ಮೂರ ಮಂದಿ ನಿನ್ನ ಮನಿಗೆ ಬಂದ್ರ ನಿನ್ನ ಟ್ರಂಕ್ ಮುಟ್ಟುಗೊಡೊದಿಲ್ಲಂತ, ಅಂತಾರ. ನಿನ್ನ ಟ್ರಂಕಿನೊಳಗ ಭಾಳ ಭಾಳ ರೊಕ್ಕದಾವು ಅಂತ ಅಂತಾರ. ಅದಕ್ಕ ಹಣ ತುಂಬಿದ ಟ್ರಂಕ್ ಹೊರಾಕ ಹರೆಯದ ಹುಡುಗನ್ನೂ ಕರಕೊಂಡು ಬಂದೀನಿ, ನಿನ್ನ ಟ್ರಂಕ್ ತಗಿ. ಅದರಾಗ ಎಷ್ಟು ರೂಪಾಯಿ ಅದಾವು ನೋಡೋಣ' ಎಂದು ರೂಮಿನ ಒಂದು ಮೂಲೆಯಲ್ಲಿದ್ದ ಸಣ್ಣ ಹಿತ್ತಾಳೆಯ ಕೀಲಿ ಹಾಕಿದ ಟ್ರಂಕಿಗೆ ಕೈ ಹಾಕಿದೆ. ಓಡಿಬಂದು ನನ್ನ ಕೈಯಿಂದ ಟ್ರಂಕನ್ನು ಕಿತ್ತುಕೊಂಡಳು.

'ಈ ಟ್ರಂಕಿನೊಳಗ ರೂಪಾಯಿ ಗಿಪಾಯಿ ಏನೂ ಇಲ್ಲ' ಎಂದು ಟ್ರಂಕನ್ನು ಕಂಕುಳಲ್ಲಿಟ್ಟುಕೊಂಡು ನಿಂತಳು. 'ರೂಪಾಯಿ ಇದ್ರ ನಾನೇನು ಕಸಗೊಳ್ಳೋದಿಲ್ಲ. ನನಗ ತೋರಿಸದೇ ಇರುವಂಥ ಗುಟ್ಟು ಏನಾರಾ ಇದ್ರ ಬ್ಯಾಡ ಬಿಡು ಹೋಗ್ಲಿ' ಎಂದು ಸ್ವಲ್ಪ ಗಂಭೀರತೆಯನ್ನು ಪ್ರಕಟಿಸಿದೆ.

'ಹಂಗನ್ನಬ್ಯಾಡ. ನಿನ್ನ ಮುಂದ ಹೇಳಲಾರದಂಥ ಗುಟ್ಟು ನನ್ನ ಎದಿಯಾಗ ಏನೂ ಇಲ್ಲ. ಬಾ ನನ್ನ ಖಜಾ'ನಿ ತೋರಸ್ತೀನಿ. ಈ ಮಣ್ಣಿನ ಗುಣ ತೋರಸ್ತೀನಿ. ಈ ಗಾಳಿಯ ಪರಿಚಯ ಮಾಡಸ್ತೀನಿ. ನಾನುಂಡ ನನ್ನ ತಾಯಿಯ ಹಾಲಿನ ಪರಿಚಯ ಮಾಡಸ್ತೀನಿ, ಕಷ್ಟದೊಳಗೂ ನಾನು ತುಳ್ದ ದಾರಿ ತೋರಸ್ತೀನಿ' ಎಂದು ಟ್ರಂಕ್‌ನ್ನು ನನ್ನ ಮುಂದಿಟ್ಟು ಕೊರಳ ಸರದಲ್ಲಿ ಕಟ್ಟಿಕೊಂಡಿದ್ದ ಕೀಲಿಕೈಯಿಂದ ಕೀಲಿಯನ್ನು ತೆಗೆದು ತೋರಿಸಿದಳು. ಅಲ್ಲಿದ್ದದ್ದೇನು ? ಒಂದು ಸೀರೆಯ ಕೆಳಗೆ ಅಡಗಿಸಿಟ್ಟಿದ್ದ ಒಂದು ಫೋಟೋ ಅದು ಮಹದೇವಪ್ಪ - ಗಂಗವ್ವ ಯಾವುದೋ ಜಾತ್ರೆಯಲ್ಲಿ ತೆಗೆಯಿಸಿಕೊಂಡ ಫೋಟೋ ಆಗಿತ್ತು. ನಮ್ಮ ಸ್ತ್ರೀ ಸಮಾಜದ ಬಗ್ಗೆ ಅಯ್ಯೋ ! ಎನಿಸದಿರಲಿಲ್ಲ.

ನಾನು ಒಂದು ಪಕ್ಕಕ್ಕೆ ಗೋಣು ಚೆಲ್ಲಿ ಶುಷ್ಕನಗೆ ನಕ್ಕೆ. ನನ್ನ ಪಕ್ಕದಲ್ಲಿ ಕುಳಿತಿದ್ದ ರಾಮನ ಕಣ್ಣಲ್ಲಿ ದಳ - ದಳ ನೀರು ಸುರಿದವು. ಫೋಟೋ ಮೇಲಕ್ಕೆತ್ತಿ ನನ್ನ ಮುಖಕ್ಕೆ ಹಿಡಿದು 'ಇದ ನನ್ನ ಸಂಪತ್ತು' ಎಂದಾಗ ಎದುರಿನ ಕಿಡಿಕಿಯಲ್ಲಿ ನೆರಳು ಬೆಳಕಿನ ತುಯ್ದಾಟವಾಗಿ ಗೋಣು ಮೇಲಕ್ಕೆತ್ತಿ ನೋಡಿದಳು. ಕಿಡಿಕಿಯಲ್ಲಿ ಮಹದೇವಪ್ಪ ನಿಂತಿದ್ದ. ನಾನು ರಾಮನ ಮುಖ ನೋಡಿದಾಗ, ಅವನು ಎದ್ದು ಸಾಮಾನು ಕಟ್ಟುವುದಕ್ಕೆ ಪ್ರಾರಂಭಿಸಿದ. ಗಂಗವ್ವ ಗೋಡೆಗೆ ಒರಗಿ ನಿಂತಿದ್ದರೆ, ಮಹದೇವಪ್ಪ ಕಿಡಿಕಿಗೆ ಭುಜ ಕೊಟ್ಟು ನಿಂತಿದ್ದ. ಬಹಳ ದಿವಸದ ಮೌನ ಮುರಿಯಲಾರದಾಗಿತ್ತು.

●

# ಬೆಳಕು ಮಬ್ಬಿನ ಹೆಜ್ಜೆಯಾಟ

● ಡಾ. ಬಸವರಾಜ ಸಾದರ

ಸಮುದ್ರ ದಂಡೆಯ ದೊಡ್ಡ ಮರ ಅದು. ಮೌನದ ಬೇರುಗಳ ಆಳಕ್ಕಿಳಿಸಿ, ಮೇಲಿನ ಎಲೆಗಳ ಮೂಲಕ ಆಗಾಗ ಅದು ಏನೇನೊ ಮಾತಾಡುತ್ತದೆ. ಈ ಏನೇನೊ ಮಾತುಗಳಲ್ಲಿ ಏನೆಲ್ಲ ಅರ್ಥವಿರೋದು ಅದರ ಭಾಷೆಯರಿಯದ ನಮಗೆ ತಿಳಿಯೋದಿಲ್ಲ. ಪಕ್ಷಿಗಳ ಜೀವನಕ್ರಮ, ಪ್ರಣಯಿಗಳ ಮಿಲನ, ಭಾವುಕ ಗಾಳಿ ಕೊಡುವ ನೋವು-ಮುದ, ನೆಲದಾಳದ ಸುಖ - ದುಃಖ, ಅಷ್ಟೇ ಏಕೆ, ತನ್ನ ಮುಂದೆ ಹರಡಿಕೊಂಡಿರುವ ವಿಶಾಲ ಸಾಗರವನ್ನು ಹಗಲು ಸೂರ್ಯ ಆಳಿ, ರಾತ್ರಿ ಆಳಲು ಚಂದ್ರನಿಗೆ ಬಿಟ್ಟುಕೊಡುವ ಸತ್ಯ-ಎಲ್ಲಕ್ಕೂ: ಇನ್ನೂ ಏನೇನಕ್ಕೊ ಸಾಕ್ಷಿ ಅದು. ದೊಡ್ಡ ದಿಬ್ಬದಲ್ಲಿ ಬೊಡ್ಡೆ ಹೂತು, ನಿಂತಲ್ಲೇ ಬೆಳೆದು ಆಕಾಶಕ್ಕೆ ಆವರಿಸಿದ್ದ ಮರ ನೆಲದ ತತ್ವದ ಪ್ರಕಾರ ಸ್ಥಾವರ. ಅದು ನೆಲದ ಮೇಲೆ ನಡೆದು ಹೆಜ್ಜೆ ಮೂಡಿಸೋದಿಲ್ಲ. ಹೀಗಾಗಿ ಅದರ ಹೆಜ್ಜೆಗಳನ್ನು ಬೇರೆ ಯಾರೂ ತುಳಿಯಲು ಸಾಧ್ಯವಿಲ್ಲ. ಅದರ ನಡೆ ಏನಿದ್ದರೂ ಹೆಜ್ಜೆ ಮೂಡದ ಆಕಾಶದೆಡೆ. ನಿಶ್ಚಿತ ನೆಲದಲ್ಲಿ, ನಿಂತಲ್ಲೇ ನಿಂತು ಎತ್ತರದ ಕಣ್ಣುಗಳ ಮೂಲಕ ಏನೆಲ್ಲವನ್ನೂ ನಿರುಕಿಸಿ ತನ್ನ ಮೌನದ ಗರ್ಭದಲ್ಲಿ ಅಡಗಿಸಿಟ್ಟುಕೊಳ್ಳುವ ಅದ್ಭುತ ಶಕ್ತಿ ಅದಕ್ಕಿದೆ. ಈ ಕಾರಣಕ್ಕೆ, ಹಾಗೂ ಮೇಲೆ ರೆಕ್ಕೆಪುಕ್ಕದ ಪಕ್ಷಿಗಳಿಗೆ, ಕೆಳಗೆ ಪ್ರೀತಿ ಮಾಡಲೆಂದೇ ಬರುವ ಪ್ರೇಮಿಗಳಿಗೆ ಆಶ್ರಯ ಕೊಡುವ ಕಾರಣಕ್ಕೆ ಅದು ಕ್ರಿಯೆಯಲ್ಲಿ ಜಂಗಮ.

ಅಂಥ ಗಿಡದ ಕೆಳಗಿನ ದಿಬ್ಬಕ್ಕೆ ಆತು ಆಕೆ-ಆತ ಕುಳಿತಿದ್ದಾರೆ. ಆತ ಸಂಜೆಯ ಸೂರ್ಯಪುರುಷನಂತೆ ಮೌನವಾಗಿದ್ದೂ ಕಂಗೊಳಿಸುತ್ತಿದ್ದಾನೆ. ಆಕೆ ಸಮುದ್ರದಂತೆ ಹೊಯ್ದಾಡುತ್ತಿದ್ದಾಳೆ, ಉಕ್ಕುತ್ತಿದ್ದಾಳೆ. ಸಂಜೆಯ ಹೊತ್ತು. ಇಷ್ಟೊತ್ತು ತೀರದಗುಂಟ ಓಡಾಡಿ ಮೂಡಿಸಿದ ಅವರಿಬ್ಬರ ಹೆಜ್ಜೆಗಳನ್ನು, ಪ್ರೀತಿ ಸೂಚಿಸಲು ಬರೆದುಕೊಂಡ ಪರಸ್ಪರರ ಹೆಸರುಗಳನ್ನು, ಸೂರ್ಯನ ಬೆರಕೆಯ ಅಂತಿಮ ಕ್ಷಣದ ಸಂಭ್ರಮದ ಸಮುದ್ರದ ತೆರೆಗಳು ಸವರಿ ಹಾಕುತ್ತಿವೆ. ಉಕ್ಕಿದಾಗ ಮೇರೆ ಮೀರುವುದು, ಸಿಕ್ಕದ್ದನ್ನೆಲ್ಲ ತನ್ನ ಆಳಕ್ಕೆಳೆದುಕೊಂಡು ಹಿಂಡಿ ಹಿಪ್ಪೆಮಾಡಿ ಬಿಸಾಡುವುದು, ಆಸೆ-ಆಕಾಂಕ್ಷೆ ಪೂರೈಸಿಕೊಳ್ಳುವುದು -- ಅಷ್ಟಲ್ಲದೆ ಇನ್ನೇನು ಕೆಲಸ ಅದಕ್ಕೆ! ಏನೇ ಅನ್ನಿ ಆ ಪ್ರಕೃತಿ ಬಲು ಕಿಲಾಡಿ. ಸಂಕೋಚವೆಂಬುದೇ ಇಲ್ಲ ಅದಕ್ಕೆ.

ವಾತಾವರಣದಿಂದ ಉತ್ತೇಜಿತಳಾದ ಆಕೆ, ಆತನ ಪೊದೆಗೂದಲೆದೆಯ ಕಾಡಲ್ಲಿ ಕೈ ಸೇರಿಸಿ ಸವರುತ್ತ, ಅರೆಗಣ್ಣು ತೆರೆದು 'ರಾಜಾ.... ರಾಜಾ... ಈ ಕಾಡಲ್ಲಿ ನಾನು ಕಳೆದು ಹೋಗ್ತಿದೀನಿ. ಈ ಕಾಡಿನಾಚೆಯ ಸುಂದರ ನಾಡಿನ ಸಮೀಪ ಕರೆದೊಯ್ದು, ಮೋಡದ ತೊಲೆಗೆ ಗಾಳಿಯ ಜೋಕಾಲಿ ಕಟ್ಟಿ, ನನ್ನ ಭಾವನೆಗಳನ್ನು ಅದರಲ್ಲಿಟ್ಟು ತೂಗಿ ತಣಿಸು. ಈ ಏಕಾಂತದಲ್ಲಿ ನನ್ನನ್ನು ನಾನು ನಿನ್ನಲ್ಲಿ ಲೀನಗೊಳಿಸುವಾಸೆ. ರಾಜಾ ಇನ್ನೆಂದೂ ನಿನ್ನನ್ನು ಅಗಲಿರಲು ಸಾಧ್ಯವಿಲ್ಲ, ನನಗಾಗೋದಿಲ್ಲ ಅದು. ನಿನ್ನ ಹೆಜ್ಜೆಯಲ್ಲಿ ಹೆಜ್ಜೆಯಿಟ್ಟು ಜೀವನಪರ್ಯಂತ ನಿನ್ನ ನೆರಳಾಗಿ ಬಾಳುತ್ತೇನೆ' ಎಂದೆನ್ನುತ್ತ ಬಾಯಲ್ಲಿ ಅರೆಪ್ರಜ್ಞೆಯ ಮಾತುಗಳನ್ನು ಹೊರಡಿಸುತ್ತಲೆ ಇದ್ದಾಳೆ. ಮತ್ತೊಂದು ಕೈಯ ಬೆರಳುಗಳು ಆತನ ಕೈ ಬೆರಳುಗಳ ಸಂದಿಯಲ್ಲಿ ಸೇರಿ ಒಡಮುರಿಗೆಯಾಡುತ್ತಿವೆ.

ಬಣ್ಣಗಳ ಸವಿಯದ ಕಣ್ಣು ಕುರುಡು. ಅವಳ ಪ್ರಚೋದಕ ಸ್ಥಿತಿ ಹಾಗೂ ಮಾದಕ ಮಾತುಗಳಿಂದ ತುಸು ಭಾವಾವೇಶಕ್ಕೊಳಗಾಗಿಯೂ ಎಚ್ಚರ ಉಳಿಸಿಕೊಂಡಿದ್ದ ಆತ, ಮಾತಿಗೆ ಪ್ರತಿಮಾತು ಸೇರಿಸದೆ, ಹಾಗೇ ನಯವಾಗಿ ತಬ್ಬಿ, ಅವಳ ತುಟಿಗೆ ತುಟಿಯೊತ್ತಿ ಒಂದು ಮಧುರ ಮುತ್ತುಕೊಟ್ಟು --ಇಷ್ಟೊತ್ತು ನೀ ಹೇಳಿದ್ದೆಲ್ಲ ಬರಿ ಮಾತು. ಈಗ ನಾ ಮಾಡಿದ್ದು ಪ್ರೀತಿಯ ಕೃತಿ. ಎಚ್ಚರಾಯ್ತೋ ಅಮ್ಮಾವ್ರೇ-- ಎಂದ. ಸಹಜ ಸ್ಥಿತಿಯ ಪ್ರತಿಕ್ರಿಯೆ ಕೊಡುವ ಸ್ಥಿತಿಯಲ್ಲಿರಲಿಲ್ಲ ಆಕೆ. ಆತನೇ ಮುಂದುವರೆಸಿ 'ನೀ ಹೇಳಿದ್ದೆಲ್ಲಾ ಅಷ್ಟೊಂದು ಬೇಡ. ನಂಬಿಗಸ್ಥ ಸಂಗಾತಿಗಳಾಗಿ ಇರೋಣ. ಕ್ಷಣಿಕವಾದ ಯಾವುದೇ ಆಸೆ ಮತ್ತು ಭಯ ನಮ್ಮನ್ನು ಕೊಚ್ಚಿಕೊಂಡು ಹೋಗದಿದ್ರೆ ಅಷ್ಟು ಸಾಕು' ಎಂದು ಬದುಕಿನ ವಾಸ್ತವ ದಾರಿಯ ಮಾತು ಹೇಳಿದ. 'ನೀನೊಂದು ಒಣ ತರ್ಕದ ಮರ. ಭಾವನೆ, ಕನಸು, ಕಲ್ಪನೆಗಳಿರದ ಗುಗ್ಗೂ. ಇಂಥಾ ಮಾತು ಹೇಳೋದಕ್ಕೆ ಯಾರೂ ಬರಲಾರದ ಇಷ್ಟು ದೂರದ ತೀರಕ್ಕೆ ಬರಬೇಕಿತ್ತೆ ? ಒಂದು ಫೋನ್ ಕಾಲ್ ಸಾಕಾಗ್ತಿರ್ಲಿಲ್ವಾ ? ಸಮುದ್ರ - ಸೂರ್ಯ ಒಂದಾಗ್ತಿರೊ ಈ ಸುಂದರ ಏಕಾಂತದ ವಾತಾವರಣದಲ್ಲೂ ನಿನ್ನ ಭಾವನೆಗಳು ಕುಣಿಯೋದಿಲ್ಲ ಅಂದ್ರೆ ನಿನಗೆ ಏನನ್ನಬೇಕು ?' ನೋವು, ನಿರಾಸೆ, ಸಿಟ್ಟುಗಳನ್ನು ಒಟ್ಟುಗೂಡಿಸಿ ಆಕೆ ಆತನನ್ನು ನೇರವಾಗಿಯೇ ಇರಿದಳು.

'ನೋಡು ಇವೆಲ್ಲ ಕ್ಷಣದ ಭಾವವಿರೇಚನೆಗಳು. ಭಾವನೆಗೂ, ವಿಚಾರದ ವಾಸ್ತವಕ್ಕೂ ಇರುವ ಸಂಬಂಧ ಮತ್ತು ವ್ಯತ್ಯಾಸಗಳನ್ನು ತಿಳಿದುಕೊಂಡ್ರೆ, ಆಳವಾಗಿ ತಿಳಿದುಕೊಂಡ್ರೆ ನೀನು ನನ್ನನ್ನು, ನಾನು ನಿನ್ನನ್ನು ಪ್ರೀತಿಸೋದಕ್ಕಿಂತ ಹೆಚ್ಚಾಗಿ ಪ್ರೀತಿಸ್ತೀ' ಆತನ ಮಾತು ಅವಳಿಗೆ ಅರ್ಥವಾಗಲಿಲ್ಲ. 'ಅಂದ್ರೆ' ಪ್ರಶ್ನೆ ಹಾಕುತ್ತಾಳೆ. 'ಅಂದ್ರೆ ಉದಾಹರಣೆಗೆ ನೋಡು, ಸೂರ್ಯ-ಸಮುದ್ರ ಒಂದಾಗ್ತಿವೆ ಅಂದೆಯಲ್ಲ, ನೀ ಅನ್ನೋವಷ್ಟರಲ್ಲೇ ಈ ಒಂದಾಗುವ ಕ್ರಿಯೆ ಅರ್ಧ ಮುಗೀತಿತ್ತು, ಈಗ ಪೂರ್ತಿ ಮುಗೀತಿದೆ. ಆಮೇಲೆ ಸಮುದ್ರ ಇಲ್ಲೆ, ಸೂರ್ಯ ಅಲ್ಲೆ ! ಇದು ನಂತರದ ಸ್ಥಿತಿ. ಸೂರ್ಯನೇನೋ ಆ ಕಡೆ ಹೋಗಿಬಿಡ್ತಾನೆ. ಇಲ್ಲಿರೋ ಸಮುದ್ರದ ಗತಿ ! ಆಮೇಲೆ ಅದು ನಕ್ಷತ್ರಗಳ ವ್ಯಂಗ್ಯ ನಗುವನ್ನು ಸಹಿಸ್ಕೋಬೇಕು, ಸೂರ್ಯನಷ್ಟು

ಸಮರ್ಥನಲ್ಲದ ಚಂದ್ರನನ್ನು ಅನಿವಾರ್ಯ ಸಂತೋಷಕ್ಕಾಗಿ ಬರಮಾಡಿಕೋಬೇಕು. ಇಷ್ಟವೋ - ಅನಿಷ್ಟವೋ, ನೀತಿಯೋ - ಅನೀತಿಯೋ ಇದು ಅಸಾಧ್ಯ ನೋವಿನ ಸ್ಥಿತಿ. ಈ ನೋವು ಕೇವಲ ಭಾವನೆಗಳಿಗೆ ಜೋತುಬೀಳುವುದರ ಪರಿಣಾಮ ಅಲ್ವೆ ? ಮನುಷ್ಯ ಯಾವಾಗ್ಲೂ ಭಾವನೆಗಳ ಜೋಕಾಲಿಯಲ್ಲೇ ಜೀಕೋದು ಸರಿಯಲ್ಲ. ವಿಚಾರದ ನೆಲದ ಮೇಲೂ ಕಾಲು ಹಾಕಿ ನಡೀಬೇಕಾಗ್ತದೆ. ಇದರ ಅರಿವಿರಲಿ ಅಂತ'.

'ಪ್ರೀತಿ ಮಾಡಬೇಕಾದ ಹೊತ್ನಲ್ಲಿ ಅದರ ಬಗ್ಗೆ ತತ್ವ ಹೇಳೋದು ನಿಮ್ಮಂಥ ವೈಚಾರಿಕರೆಂದುಕೊಂಡವರ ಹಣೇಬರಹ. ಸುಖಗಳು ಬಾಗಿಲು ತಟ್ಟಿದಾಗ ಸವೀಬೇಕು. ನಾಳಿನ ದಿನಗಳು ಯಾರಿಗೆ ಗೊತ್ತು. ಇಷ್ಟು ಸಿಹಿಯಾಗದಿದ್ರೆ....?' ಆಕೆ ಹೀಗನ್ನುತ್ತಿರುವಾಗಲೇ ಆತ ನಡುವೆಯೇ ತಡೆದು, 'ಹಾಂ... ಅದನ್ನೇ ನಾನೂ ಹೇಳ್ತಿರೋದು. ನಾಳಿನ ದಿನಗಳೂ ಸಿಹಿ ಆಗಿರೋ ಸಾಧ್ಯತೆ ಇದ್ದೇ ಇದೆ. ಆದ್ರೆ ಅದಕ್ಕೆ ಇವತ್ತು ತಾಳ್ಮೆ ಅಗತ್ಯ. ಹೊಳೆಯಂತೆ ಹರಿದು ಬರೋ ಸುಖಗಳನ್ನ ಒಂದೇ ಏಟಿಗೆ, ಒಂದೇ ದಿನಕ್ಕೆ ಸವಿದುಬಿಡೋಕಾಗೋದಿಲ್ಲ. ನಾಳೆ, ನಾಡದ್ದು, ಆಚೆನಾಡದ್ದಿಗೂ ಅವನ್ನ ಉಳಿಸ್ಕೋಬೇಕಂದ್ರೆ ಭಾವುಕತೆಯಿಂದ ಒಂದಿಷ್ಟಾದ್ರೂ ಹೊರಗೆ ಬರಲೇಬೇಕು. ಇದರರ್ಥ ಭಾವುಕತೆ ಬೇಡವೇ ಬೇಡ ಎಂದಲ್ಲ; ಅದೂ ಅಗತ್ಯ. ಯಾಕಂದ್ರೆ ವಿಚಾರದ ಕ್ರಿಯೆ ನಡೆಯೋದೂ ಭಾವನೆಗಳ ಆಧಾರದಲ್ಲೆ. ಆದ್ರೆ ಅದರ ಪ್ರಮಾಣದ ಬಗ್ಗೆ ಎಚ್ಚರಿರಬೇಕು ಅಷ್ಟೆ' ಆತ ಔಚಿತ್ಯದ ಮಾತು ಆಡಿದ.

ನಾಗಾಲೋಟದಲ್ಲಿ ಓಡುತ್ತಿದ್ದ ಕುದುರೆಯ ಲಗಾಮು ಜಗ್ಗಿದಂತಾದ ಅವಳಿಗೆ ಎಲ್ಲಿಲ್ಲದ ಸಿಟ್ಟು. ದೂರ ಸರಿದವಳಂತೆ ಮಾಡಿ ಮತ್ತೆ ಹತ್ತಿರ ಬಂದವಳೇ ಅವನ ಎದೆಗೆ ಎರಡೂ ಕೈಗಳ ಮುಟ್ಟಿಗೆ ಮಾಡಿ ಗುದ್ದತೊಡಗಿದಳು. 'ಏ ಮಾರಾಯ್ತಿ ಯಾಕಳ್ತೀ ? ನಿನ್ನ ಪ್ರಕಾರ ನಾನೂ ಭಾವುಕನಾಗಬೇಕಲ್ವೆ ? ಇದೋ ಆದೆ. ಓ ನನ್ನ ಹೃದಯದ ರಾಣಿ, ಏನಿದು ನಿನ್ನ ಕಣ್ಣೀರು ? ಕೋಡಿಯಾಗಿ ಹರೀತಿದೆಯಲ್ಲೇ ? ಈ ಕೋಡಿ ಹೀಗೇ ಹರಿದು ಹಳ್ಳವಾಗಿ, ಹೊಳೆಯಾಗಿ ಸಮುದ್ರ ಸೇರಿ, ಅದು ಉಕ್ಕೇರಿ ತೆರೆಗಳು ಇಲ್ಲೀವರೆಗೂ ಬಂದು ನಮ್ಮಿಬ್ಬರನ್ನೂ ಕೊಚ್ಚಿಕೊಂಡು ಹೋಗೋದು ಗ್ಯಾರಂಟಿ. ಹಾಗೆ ಕೊಚ್ಕೊಂಡು ಹೋದ್ರೆ ಏನ್ಮಾಡ್ತಿ ?

'ಕೊಚ್ಕೊಂಡ್ ಹೋದ್ರೆ ಹೋಗ್ಲಿ ಬಿಡು. ಪ್ರೀತಿ ಮಾಡೂವಾಗ ಸತ್ರು ಅಂತ ಬರಕೊಂತಾರೆ. ಓದಿದವ್ರು 'ಪಾಪ' ಅಂತಾದ್ರೂ ಅಂತಾರೆ. ಅಷ್ಟಾದ್ರೂ ಸಾಕು.'

'ಆಮೇಲೆ ?'

'ಮರೀತಾರೆ'

'ಆಮೇಲೆ?'

'ಆಮೇಲೆ ನಿನ್ನ ತಲೆ !' -- ಎನ್ನುತ್ತಲೇ ಸಿಟ್ಟಿನಿಂದ ಎದ್ದು ನಿಂತ ಆಕೆ ಬಿರುಬಿರನೆ ಹೆಜ್ಜೆ ಹಾಕತೊಡಗಿದಳು.

'ಏ, ನಿಲ್ಲು ನಿಲ್ಲು, ಎಲ್ಲಿ ಹೋಗ್ತಿ ?'

'ಸಮುದ್ರಕ್ಕೆ ಹಾರಿ ಸಾಯ್ಲಿಕ್ಕೆ'

'ಇದೇ, ಇದೇ ನಾ ಹೇಳೋದು, ತಾಳ್ಮೆ ಎಲ್ಲಕ್ಕೂ ಅಗತ್ಯ ಅಂತ. ನಾಲ್ಕೈದು ನಿಮಿಷಗಳ ಹಿಂದೆ ಜಗತ್ತಿನಲ್ಲಿ ಬೇರೆ ಏನೂ ಇಲ್ವೇನೋ ಅನ್ನುವಷ್ಟು ಪ್ರೀತಿ ಮಾಡ್ತಿದ್ದವ್ಳು, ಅದರ ಬಗ್ಗೇನೇ ಮಾತಾಡ್ತಿದ್ದವ್ಳು, ಈಗ ಸಾಯ್ಲಿಕ್ಕೆ ಹೊಂಟಿದ್ದೀಯಾ !! ಎಷ್ಟು ತೀವ್ರ ಬದಲಾಯ್ತು ನಿನ್ನ ಭಾವನೆ ! ಇದರಲ್ಲಿ ನಿನಗೆ ಯಾವುದು ಹೆಚ್ಚು ಇಷ್ಟ ಹೇಳು ?' 'ನಿನಗೆ ಎಲ್ಲಾ ಹುಡುಗಾಟಾನೆ. ಏಳು ಏಳು ಮನೆಕಡೆ ಹೋಗೋಣ. ಸಾಕು, ಈಚಲಗಿಡದ ಕೆಳಗಡೆ ಕುಳಿತು ಹಾಲು ಕುಡಧಂಗಾತು ಇದು. ನಿನ್ನ ವಿಚಾರದ ಜಗತ್ತಿನಲ್ಲಿ ಯಾವಾಗ ಪ್ರೀತಿಯ ಭಾವನೆ ಹುಟ್ತದೆಯೋ ಆವಾಗ ಮತ್ತೆ ಬರೋಣ ಈ ಕಡೆ' ಒಂದಿಷ್ಟು ನಿರ್ಧಾರದ ದನಿಯಲ್ಲೆ ಆಕೆ ಆತನಿಗೆ ವ್ಯಂಗ್ಯ ಮಾಡಿದಳು.

'ಅಷ್ಟೊಂದು ಸಿಟ್ಟು ಬೇಡ ಮೇಡಂ, ಸಿಟ್ಟು ನನ್ನನ್ನು ಸುಟ್ಟು ಹಾಕ್ಬಿಟ್ರೆ, ಆಮೇಲೆ ಏನು ಮಾಡೋದು !'

ಎದ್ದು ನಿಂತಿದ್ದ ಆತನನ್ನು ಹೊಡೆಯುವವಳಂತೆ ಕೈ ಮಾಡುತ್ತ ಆಕೆ ಆತನತ್ತ ಧಾವಿಸಿ ಬಂದಳು. ಆತ ತಪ್ಪಿಸಿಕೊಳ್ಳುವ ಹಾಗೆ ನಿಂತಲ್ಲೇ ಓಡಿದಂತೆ ಮಾಡಿದ. ಆಕೆ ಮುಗ್ಗರಿಸಿದಳು. ಬೀಳದ ಹಾಗೆ ಆಕೆಯ ಕೈ ಹಿಡಿದೆತ್ತಿ, ಎದೆಗೆ ಗಟ್ಟಿಯಾಗಿ ಅಪ್ಪಿಕೊಂಡು, ಬೆನ್ನು ಸವರುತ್ತ ಆತ ಒಂದೇ ಮಾತು ಹೇಳಿದ - 'ನಾನು ನಿನ್ನನ್ನು ಪ್ರೀತಿಸುತ್ತೇನೆ' ಎಂದು. ಅರ್ಥ ತುಂಬಿ ತುಳುಕುತ್ತಿತ್ತು ಆ ಮಾತಲ್ಲಿ. ಏನೋ ಒಂದಿಷ್ಟು ಸಮಾಧಾನದ ನಿಟ್ಟುಸಿರು ಹೊರಟಿತು ಅವಳ ಮೂಗಿನ ಅಗಲವಾದ ಹೊರಳೆಗಳಲ್ಲಿ.

ಸೂರ್ಯ ಮುಳುಗಿದ್ದ. ಪುರುಷನೊಡನೆ ಒಂದಾದ ಪ್ರಕೃತಿ ಲಜ್ಜೆಪಟ್ಟಂತೆ ಎಲ್ಲೆಡೆ ಕೆಂಪೇರಿತ್ತು. ಭಾವೋತ್ಸಾಹ ತಾಮಣಿಗೊಂಡಂತೆ ಸಮುದ್ರದ ತೆರೆಗಳು ಪ್ರಶಾಂತವಾಗ ತೊಡಗಿದ್ದವು. ಒಂದಿಷ್ಟು ಹೊತ್ತು ಹಾಗೇ ನಿಂತವರು ನಿಧಾನವಾಗಿ ಅಪ್ಪುಗೆಯನ್ನು ಸಡಿಲಗೊಳಿಸಿದರು. 'ಈಗ ಇಷ್ಟು ಸಾಕು, ಮತ್ತೊಂದು ದಿನ ಬರೋಣ. ಸಮಯ ಇದೆ' ಎಂದ ಆತ. ಮತ್ತೆ ಉಕ್ಕೇರತೊಡಗಿದ್ದ ಅವಳಿಗೆ ಆತನ ಮಾತು ಕೇಳಲಿಲ್ಲವೊ, ಇಲ್ಲ ಅರ್ಥವಾಗಲಿಲ್ಲವೊ, ಆಕೆ ಪ್ರತಿಕ್ರಿಯಿಸಲಿಲ್ಲ. ಅವಳನ್ನು ವಾಸ್ತವದ ನೆಲಕ್ಕೆ ತರಲು ಆತ ನೆಪ ಹೂಡಿ 'ಒಂದು ಆಟ' ಎಂದ. 'ನಿನ್ನ ಆಟ ನಿನಗೇ ಇರ್ಲಿ, ಅದು ನನಗೇನೂ ಬೇಡ' ಎಂದವಳೆ ಆಕೆ ಮತ್ತೆ ಹೆಜ್ಜೆ ಹಾಕತೊಡಗಿದಳು. ಅವಳನ್ನು ತಡೆಯುವಂತೆ 'ಏ ನಿನಗೆ ಇಷ್ಟವಾದ ಆಟಾನೇ ಅದು' ಎಂದು ಆತ ಕೂಗಿದ. ಇಷ್ಟವಾದ ಆಟಾ ಎಂದಕೂಡಲೆ ಮತ್ತೆ ಏನೋ ಉತ್ಸಾಹ ಉಕ್ಕಿತು ಆಕೆಯಲ್ಲಿ. 'ನನಗಿಷ್ಟವಾದದ್ದೇ ? ಯಾವ ಆಟ ಅದು ?' ಆಕೆಯ, ತಕ್ಷಣದ ಕುತೂಹಲದ ಪ್ರಶ್ನೆ. 'ನೀ ಆಗ್ಲೇ ಅಂತಿದ್ದಿಯಲ್ಲ; ನಿನ್ನ ಹೆಜ್ಜೆಯಲ್ಲಿ ಹೆಜ್ಜೆಯಿಟ್ಟು ಜೀವನ

ಪರ್ಯಂತ ಬದುಕ್ತೀನಿ ಅಂತ, ಅದಕ್ಕೊಂದಿಷ್ಟು ಟ್ರೇನಿಂಗ್ ಕೊಡೋ ಆಟ' ಎನ್ನುತ್ತ ಆತ ನಸುನಕ್ಕ.

'ನಿನಗೆ ಎಲ್ಲಾನೂ ನಗೆಯಾಟಾನೆ. ನೀನೊಬ್ನೇ ಹಾಯಾಗಿ ಆಡ್ಕೊಂಡು ಬಾ. ನಾ ಮನೆಗೆ ಹೋಗಿರ್ತೇನೆ' -- ಮತ್ತೆ ಸಿಡಿಮಿಡಿಗೊಂಡಳು ಆಕೆ.

'ನಗೆಯಾಟ ಅಲ್ವೆ, ನಿಜವಾಗ್ಲೂ ಹೇಳ್ತೆ. ಮತ್ತೆ, ನಾನೊಬ್ನೇ ಆಡೋ ಆಟ ಅಲ್ಲ ಅದು'.

'ಓಹೋ ಹಂಗಾ, ಯಾವ್ದು ಸರ್, ಇಬ್ರೂ ಸೇರಿ ಆಡೋ ಆ ಘನಂದಾರಿ ಆಟ?'

'ಹೇಳ್ತಾ; ನೋಡು ಸಮುದ್ರದ ತೆರೆಗಳು ಸಾಫು ಮಾಡಿದ ಈ ಹಸಿ ತೀರದಲ್ಲಿ ನಾನು ಮುಂದೆ ಮುಂದೆ ನಡಿಯೋದು' ನೀನು, ನಾನಿಟ್ಟ ಹೆಜ್ಜೆಗಳಲ್ಲಿ ಹೆಜ್ಜೆ ಇಟ್ಟು ಬರೋದು. ಆತ ಆಟದ ಬಗ್ಗೆ ವಿವರಿಸಿದ.

'ಇಷ್ಟೇನಾ ! ಇದೇನ್ ಮಹಾ ಕಷ್ಟದ ಆಟ' ಎಂದಳಾಕೆ.

'ಹಾಂ, ಹಾಂ, ನೀ ತಿಳಕೊಂಡಷ್ಟು ಸರಳ ಅಲ್ಲ ಇದು. ಒಂದೂ ಹೆಜ್ಜೆ ತಪ್ಪೋ ಹಾಗಿಲ್ಲ, ಹೆಚ್ಚೂ ಕಡಿಮೆ ಆಗೋ ಹಾಗಿಲ್ಲ. ಪಕ್ಕಾ ಟ್ರೇನಿಂಗ್ ಆಗಬೇಕಲ್ಲಾ ಅಮ್ಮಾವ್ರಿಗೆ?' ಆತ ಒಂದಿಷ್ಟು ಕೀಟಲೆ ಮಾಡಿದ.

'ನೋಡ್ ನೋಡು, ನೀ ಮತ್ತೆ ಮತ್ತೆ ಹಿಂಗೆ ಹಂಗಿಸೋ ಮಾತಾಡಿದ್ರೆ ಈ ಆಟ ನನಗೇನೂ ಬೇಡ' ಎಂದವಳೇ ಹೊರಡತೊಡಗಿದ ಆಕೆಯನ್ನು ತಡೆದು ನಿಲ್ಲಿಸಿದ ಆತ ಮತ್ತೆ ಸಂಭಾಳಿಸುತ್ತ, 'ಈ ಆಟದಲ್ಲಿ ಗೆದ್ರೆ ನಿಂಗೊಂದು ಪ್ರೈಜು' ಎಂದು ಮತ್ತೊಂದು ಆಕರ್ಷಣೆ ಒಡ್ಡಿದ. ಮತ್ತೆ ಕುತೂಹಲಕ್ಕೆ ಬಿದ್ದ ಆಕೆ 'ಏನ್ ಕೊಡ್ತಿಯಾ?' ಎಂದು ಥಟ್ಟನೆ ಪ್ರಶ್ನೆ ಹಾಕುತ್ತಾಳೆ.

'ನಿನಗೇನು ಬೇಕು ?'

'ನೀ ಏನ್ ಕೊಡ್ತೀ ಹೇಳು ?'

'ನೀ ಏನ್ ಬೇಡ್ತೀ ಕೇಳು ?'

ಮಾತು ಅನಾವಶ್ಯಕವಾಗಿ ಬೆಳೀತಿದೆ ಅನ್ನಿಸ್ತು ಆಕೆಗೆ. ಸಂದರ್ಭಕ್ಕೆ ಅದು ಅನಗತ್ಯವೂ ಅನ್ನಿಸ್ತು. ಕೈಗೆ ಸಿಕ್ಕ ವರ್ತಮಾನವನ್ನು ಹಿಂದೆ ಮುಂದೆ ನೋಡದೆ, ಸಾಧ್ಯವಿದ್ದಷ್ಟು ಅನುಭವಿಸಿ ಆನಂದಪಡುವುದೇ ಜೀವನವೆಂದು ಭಾವಿಸಿದ್ದ ಆಕೆ, ಈವರೆಗಿನ ಮಾತಿಗೆ ಅಂತಿಮ ತೆರೆ ಎಳೆಯುವ ಹಾಗೆ ನೇರವಾಗಿಯೇ ಹೇಳುತ್ತಾಳೆ - 'ನನಗೆ ನೀನು ಬೇಕು. ನಿನ್ನೊಳಗೆ ನಾನು, ನನ್ನೊಳಗೆ ನೀನು ಒಂದಾಗಬೇಕು. ಸಧ್ಯ ಇಷ್ಟೇ' ಎಂದು. ತಾಮಣಿಗಾಗಿ ಭಾವಾತುರ ಪ್ರಕೃತಿ, ಪುರುಷನಿಗೆ ನೇರ ಆಹ್ವಾನವೊಡ್ಡುವಂಥ ಮಾತಾಗಿತ್ತು ಅದು. ಸಹಜವಾಗಿಯೇ ಬಿರುಗಾಳಿಯ

ರಭಸವೂ ಅದಕ್ಕಿತ್ತು. ಏನೆಲ್ಲ, ಎಷ್ಟೆಲ್ಲ ವೈಚಾರಿಕನಾಗಿದ್ದ ಆತನೂ ಆ ಬಿರುಗಾಳಿಯಂಥ ಮಾತಿನ ರಭಸಕ್ಕೆ ಸಿಕ್ಕು ಭಾವುಕನಾಗಿ 'ಆಯ್ತು' ಎಂದು ಎರಡಕ್ಷರದ ಉತ್ತರ ಕೊಟ್ಟ. ಸಮಯ ಪಕ್ವವಾಗಿದೆ ಎನಿಸಿತು ಆಕೆಗೆ. ಅದರ ಸದುಪಯೋಗ ಪಡೆಯಲೆಂದೇ ಆಕೆ ಇನ್ನೂ ಒಂದು ಸವಾಲೆಸೆಯುತ್ತಾಳೆ. 'ನನ್ನದು ಇನ್ನೂ ಒಂದು ಕರಾರು !'

'ಏನದು ಕರಾರು ?' ಆತ ಕೇಳಿದ.

'ನಾ ಗೆದ್ರೆ, ನಾ ಬೇಡಿದ್ದನ್ನ ಕೊಡುವಾಗ, ನೀನು ನಿನ್ನ ತರ್ಕ, ತಾಳ್ಮೆ, ನೀತಿ, ನಿಯತ್ತು, ವೈಚಾರಿಕತೆ, ಅದೂ ಇದೂ ಅಂತ ಹಾಳು ಪುರಾಣ ಬಿಚ್ಚಬಾರ್ದು. ಮೌನ ನನ್ನ ಕರಾರು. ಆಗಬಹುದಲ್ಲ?' ಪುರುಷನನ್ನು ಸಂಪೂರ್ಣ ಬಂಧಿಸಿಕೊಳ್ಳುವ ಪ್ರಕೃತಿಯ ತಂತ್ರದಂತಿತ್ತು ಆಕೆಯ ಸವಾಲು. ಆತ 'ಹೂಂ' ಎಂದು ಒಪ್ಪಿದ.

'ಹಾಗಿದ್ರೆ ಆಟಾ ಸುರೂ ಮಾಡೋಣಲ್ಲ ?' ಆಕೆ ಉತ್ಸಾಹ ತುಂಬಿಕೊಂಡಿದ್ದಳು. ಆ ಉತ್ಸಾಹ ಅವಳಿಂದ ಇಂಥ ಮಾತಾಡಿಸಿತ್ತು. ಆತನೂ 'ಓಹೋ ಸುರೂ ಮಾಡೋಣ' ಎಂದ. ಇಬ್ಬರೂ ಹಸಿಯಾದ ತೀರದ ಕಡೆ ನಡೆಯತೊಡಗಿದರು.

ಇಷ್ಟೊತ್ತಿನ ಆಕೆ ಮತ್ತು ಆತನ ಈ ಪ್ರೇಮ ವ್ಯವಹಾರದ ಕಥೆಯನ್ನು ದಿಬ್ಬದ ಮತ್ತೊಂದು ಬದಿಯಲ್ಲಿ ಕುಳಿತಿದ್ದ ಏಕಾಂಗಿ ತರುಣ ಅತ್ಯಾಸಕ್ತಿಯಿಂದ ಕೇಳುತ್ತಿದ್ದ. ಪ್ರೀತಿಯ ಬಗೆಗೆ ಅವರಲ್ಲಿದ್ದ ಭಿನ್ನಾಭಿಪ್ರಾಯಗಳು, ಹುಡುಗಿಯ ಅತ್ಯಾಸಕ್ತಿ, ಅವರು ಆಡಹೊರಟಿದ್ದ ಹೆಜ್ಜೆಯಾಟ, ಅದರಲ್ಲಿ ಗೆದ್ದರೆ ಆಕೆ ಪಡೆಯಲಿದ್ದ ಪ್ರೈಜು - ಎಲ್ಲಾ ಅವನಲ್ಲಿ ವಿಚಿತ್ರ ಕುತೂಹಲ ಹುಟ್ಟಿಸಿದ್ದವು. ಆಕೆ ಅಕಸ್ಮಾತ್ ಸೋತರೆ ? ಅವರು ವಿಚಾರಿಸದೇ ಇದ್ದ ಪ್ರಶ್ನೆಯನ್ನು ಸುಮ್ಮನೆ ತಾನೇ ಹಾಕಿಕೊಂಡು ಅವನು ಮುಗುಳ್ನಕ್ಕ. ಅವರು ಹಿಂದೆ ನೋಡದೆ ಮುಂದೆ ಸಾಗುತ್ತಿದ್ದುದನ್ನು ಅರೆಮುಖ ಎತ್ತಿ ಕಳ್ಳಗತ್ತಿನಲ್ಲಿ ನೋಡುತ್ತಿದ್ದ ಅವನ ಕಣ್ಣುಗಳು ಸಂಜೆಗೆಂಪಿನ ಕಾಂತಿಯಲ್ಲಿ ಉರಿಯುತ್ತಿರುವಂತೆ ಕಾಣುತ್ತಿದ್ದವು. ಎಲ್ಲ ವಿದ್ಯಮಾನ ಗಮನಿಸುತ್ತಿದ್ದ ದೊಡ್ಡ ಮರದ ಟೊಂಗೆಗಳು ಮುಗುಳ್ನಗುವಂತೆ ನಿಧಾನವಾಗಿ ಗಾಳಿಗೆ ತೂರಾಡುತ್ತಿದ್ದವು.

❖ ❖ ❖

ತೀರದ ಹಸಿ ಮರಳಲ್ಲಿ ಮೂಡುವ ಹೆಜ್ಜೆಗಳು ಸ್ಪಷ್ಟವಾಗಿ ಕಾಣುವಷ್ಟು ಬೆಳಕಿದೆ. 'ಓಕೆ. ಸ್ಟಾರ್ಟ್' ಎಂದವನೇ ಆತ ನಡೆಹೆಜ್ಜೆ ಹಾಕತೊಡಗಿದ. ಎಡಗೈಯಲ್ಲಿ ಸೀರೆ ನಿರಿಗೆ ಹಿಡಿದೆತ್ತಿಕೊಂಡು, ಆಕೆ ಯಾವ ಶ್ರಮವೂ ಇಲ್ಲದೆ ಆತನ ಹೆಜ್ಜೆಯಲ್ಲಿ ಹೆಜ್ಜೆ ಹಾಕತೊಡಗಿದಳು. ಸಹಜ ನಡೆಗೆ ನಿಲುಕುವ ಹೆಜ್ಜೆಗಳವು. ಅಂತೆಯೇ ಇವುಗಳಲ್ಲಿ ಹೆಜ್ಜೆ ಇಡೋದು ಏನ್ ಮಹಾ ? ಎಂಬ ಜಂಭದ ನಡೆ ಆಕೆಯದಾಗಿತ್ತು. ಆತ ನಿಧಾನವಾಗಿ ಹೆಜ್ಜೆಯ ವೇಗ ಹೆಚ್ಚಿಸತೊಡಗಿದ. ಬಲಗೈಯನ್ನು ಜೋಲಿಯಾಸರೆಗೆ ತೂಗುತ್ತ ಆಕೆಯೂ

ಚಿಗರೆಯಂತೆ ಟಣ್ ಟಣ್ ಜಿಗಿದು ಹೆಜ್ಜೆ ಹಾಕತೊಡಗಿದಳು. ಮೊದಲು ನಡಿಗೆಯ ವೇಗ ಹೆಚ್ಚಿಸಿದ್ದ ಆತ, ಈಗ ಕ್ರಮೇಣ ಹೆಜ್ಜೆಗಳ ಅಂತರವನ್ನು ಇಂಬು ಮಾಡತೊಡಗಿದ. ಒಂದಷ್ಟು ಪ್ರಯತ್ನಪಟ್ಟು ಆಕೆ ಆ ಅಂತರದ ಹೆಜ್ಜೆಗಳನ್ನೂ ಸರಿಯಾಗಿಯೇ ತುಳಿಯತೊಡಗಿದಳು. ಆದರೂ ಆಕೆಗದು ಮೊದಲಿನಷ್ಟು ಸಲೀಸು ಎನಿಸಲಿಲ್ಲ. ಪ್ರಯತ್ನವನ್ನು ಮಾತ್ರ ಮುಂದುವರೆಸುತ್ತಲೇ ಇದ್ದಳು. ನಸುಗತ್ತಲು ಆವರಿಸತೊಡಗಿತ್ತು.

ಹತ್ತಾರು ಹೆಜ್ಜೆ ಹಾಗೇ ಇಟ್ಟ ಆತ, ಮುಂದೆ ಹೋದ ಹೋದಂತೆ ಹೆಜ್ಜೆಗಳನ್ನು ಇನ್ನೂ ದೂರ ದೂರಕ್ಕೆ ಹಾಕತೊಡಗಿದ. ಕಾಲಿಗೆ ಆ ಹೆಜ್ಜೆಗಳು ನಿಲುಕದಾದಾಗ ಆಕೆ ಕುಂಟಲಪಿ ಆಡುವವರ ಹಾಗೆ ಜಿಗಿ ಜಿಗಿದು ಹೆಜ್ಜೆ ಹಾಕತೊಡಗಿದಳು. ಆ ಪ್ರಯತ್ನಕ್ಕೂ ಸಿಗದಂತೆ ಆತನ ಹೆಜ್ಜೆಗಳು ಮತ್ತೂ ದೂರವಾಗತೊಡಗಿದವು. ಕತ್ತಲು ಕವಿಯತೊಡಗಿತ್ತು. ಅಲ್ಲೊಂದು ಇಲ್ಲೊಂದು ನಕ್ಷತ್ರಗಳು ಪಿಳಿ ಪಿಳಿ ಕಣ್ಣು ಬಿಡುತ್ತ ಅವರ ಈ ಆಟ ನೋಡಿ ನಗುತ್ತಿದ್ದವು. ಈಗ ಆತನ ಹೆಜ್ಜೆಗಳು ಕಾಣದಾಗಿ ಕೇವಲ ಅವುಗಳ ಮಾಗು ಕಾಣುತ್ತಿತ್ತು. ಛಲ ಬಿಡದ ಆಕೆ ಆ ಮಾಗು ಹಿಡಿದೇ ಹೆಜ್ಜೆ ಹಾಕುತ್ತಿದ್ದಳು. ಸಾಕಷ್ಟು ದೂರ ಹೋಗಿದ್ದ ಆತ 'ಬೇಗ ಬಾ, ಎಷ್ಟು ದೂರ ಉಳದೀಯಲ್ಲ ?' ಎಂದು ಕೂಗುತ್ತಾನೆ. 'ಹೆಜ್ಜೆಗಳನ್ನ ಇಷ್ಟೊಂದ್ ದೂರ ಇಟ್ರೆ ಅವನ್ನ ಹೆಂಗ್ ತುಳಿಯೋದು ? ನಿನ್ನ ಹಿಂದಿಂದ ಹೆಂಗ ಬರೂದು ? ಸಣ್ಣ ಹೆಜ್ಜೀ ಹಾಕು' ಎಂದು ಆಕೆ ಪ್ರತಿಯಾಗಿ ಕೂಗುತ್ತಾಳೆ. 'ನಮ್ಮ ಕರಾರಿನೊಳಗೆ ಹಂಗೇನೂ ಇಲ್ಲವಲ್ಲ ? ಪ್ರಯತ್ನ ಮಾಡಿ ಬನ್ನಿ ಮೇಡಂ, ಆಟ ಅಂದ್ರೆ ಅಷ್ಟು ಸುಲಭನಾ ?' ವ್ಯಂಗ್ಯ ಸೇರಿದ ದನಿಯೊಂದಿಗೆ ಆತ ಮತ್ತೆ ಕೂಗುತ್ತಾನೆ. ಈ ಸಲ ಆಕೆಗೆ ಆತನ ದನಿ ಕೇಳಿಸಿತೇ ಹೊರತು, ಆತ ಮಾತ್ರ ಕಾಣಲಿಲ್ಲ. ಜಿಗಿದರೂ ನಿಲುಕದ ಹೆಜ್ಜೆಗಳನ್ನು ಆಕೆ ಸೋಲೊಪ್ಪಲೇಬಾರದೆಂಬ ಹಟದಿಂದ ನಿಂತು, ಜಿಗಿದು, ನಿಂತು, ಜಿಗಿದು ತುಳಿಯಲು ಪ್ರಯತ್ನಿಸತೊಡಗಿದ್ದಳು. ಆದರೆ ಅಷ್ಟೊತ್ತಿಗಾಗಲೇ ಆಕೆಯ ಹೆಜ್ಜೆಗಳು ತಪ್ಪಿದ್ದವು. ಹೆಜ್ಜೆಯಲ್ಲಿ ಹೆಜ್ಜೆಯಿಡುವುದು ಸುತರಾಂ ಸಾಧ್ಯವಾಗದಾದಾಗ ಕೊನೇಪಕ್ಷ ಆತನ ಹೆಜ್ಜೆಯ ಹತ್ತಿರ ಹೆಜ್ಜೆ ಇಡುವ ಪ್ರಯತ್ನಕ್ಕೀಗ ಆಕೆ ತೊಡಗುತ್ತಾಳೆ. ಕ್ರಮೇಣ ಅದೂ ದುಸ್ತರವಾಗುತ್ತದೆ.

ಈಗ ಆತ ಕೂಗು ಕೇಳದಷ್ಟು ದೂರ ಸಾಗಿದ್ದಾನೆ. ಯಾರೂ ಇರದ ತೀರದಲ್ಲಿ ಆಕೆ ಏಕಾಂಗಿಯಾಗುತ್ತಿದ್ದಾಳೆ. ಹೆಜ್ಜೆಗಳ ಅಸ್ಪಷ್ಟ ಮಾಗು, ಆವರಿಸಿದ ಕತ್ತಲು, ಇಷ್ಟೊತ್ತು ಸುಂದರವಾಗಿದ್ದು ಈಗ ಭಯಾನಕವಾಗುತ್ತಿದ್ದ ಸಾಗರ, ಮನಸ್ಸಿನಿಂದ ಒಪ್ಪದಿದ್ದರೂ ಆಟದಲ್ಲಿ ತಾನು ಕಾಣುತ್ತಿದ್ದ ಸೋಲು - ಎಲ್ಲ ಕೂಡಿ ಆಕೆಯಲ್ಲಿ ದುಃಖ ಒತ್ತರಿಸಿ ಬಂತು. 'ಏ ನಿಲ್ಲೋ, ನೀ ಎಲ್ಲಿದ್ದೀ ? ನನಗ ಕಾಣಿಸ್ತಾನೇ ಇಲ್ಲ. ನಿನ್ನ ದನೀನೂ ಕೇಳಿಸ್ತಿಲ್ಲ. ನಾ ಇಲ್ಲೆ ಒಬ್ಬೇ ಆಗ್ತಿದೀನಿ. ನಿಲ್ಲು ನನಗ ಭಾಳ ಹೆದ್ರಿಕೆ ಆಗ್ತಿದೆ. ನಿಲ್ಲು ನಿಲ್ಲು' ಎಂದು ಆಕೆ ಆರ್ತವಾಗಿ ಕೂಗುತ್ತಾಳೆ. ಪ್ರಶಾಂತ ಸಾಗರದಂಚಲ್ಲಿ ಮೂಡಿಬರುತ್ತಿದ್ದ ಆ ಆರ್ತನಾದ, ಕೇಳಿದವರ ಕರುಳು ಕರಗಿಸುವಂತಿತ್ತು. ಹರಿಯುವ ಕಣ್ಣೀರು, ಜಾರಿಬಿದ್ದ ಸೆರಗು, ನೆಲ ನೋಡದೆ ಎಲ್ಲೆಲ್ಲೋ

ಹಾಕುತ್ತಿದ್ದ ಹೆಜ್ಜೆಗಳು ! ನೋವು, ಸಿಟ್ಟು, ಯಾತನೆ ತೋಡಿಕೊಳ್ಳಲು ಕುಳಿತು ಮರಳು ಕೆಬರಿ, ಎದ್ದು ತೂರಾಡುತ್ತ ಮತ್ತೆ ಅರಚುತ್ತಾಳೆ - 'ನೀ ಮೋಸಗಾರ, ದುಷ್ಟ, ನನಗೆ ವಂಚನೆ ಮಾಡಿದೆ, ನಿನ್ನ ನಂಬಿ ನಾ ಕೆಟ್ಟೆ, ನನ್ನನ್ನ ನೀ ನಡುನೀರಲ್ಲೇ ಕೈಬಿಟ್ಟೆ' - ಆಕೆಯ ಯಾವ ಅರಚುವಿಕೆಗೂ ಉತ್ತರವಿಲ್ಲ. ಕೂಗಿದರೂ ಕೇಳಲಾರದಷ್ಟು ದೂರ ಹೋಗಿ ಆಕೆಯ ಬರವಿಗಾಗಿ ಆತ ಕಾಯ್ದು ಕೂತನೋ, ಅಥವಾ ಇನ್ನೂ ಮುಂದೆ ನಡೆಯುತ್ತಲೇ ಇದ್ದನೋ ! ಹ್ಯಾಗೆ ಹೇಳೋದು ? ಆಕೆಗಂತೂ ಆತ ಈಗ ಕಾಣದ, ಕೇಳದ ವಸ್ತುವಾದ, ಇನ್ನಾವ ಅಸ್ತ್ರವೂ ಇಲ್ಲದಾದಾಗ ಆಕೆ ಅನಿವಾರ್ಯವಾಗಿ 'ನಾ ಸೋತಿದ್ದೇನೋ, ನೀ ಇಟ್ಟ ಈ ಆಟದೊಳಗ ನಾ ಸೋತಿದ್ದೀನಿ, ನಿಲ್ಲು ನನಗೆ ಭಯ ಆಗ್ತಿದೆ. ನಾ ಸೋತೆ, ನಾ ಸೋತೆ' ಎಂದು ಅರಿವಿನ ವಾಸ್ತವಕೆ ಬಂದು ಅಂಗಲಾಚತೊಡಗುತ್ತಾಳೆ. ಸೋತೆ, ಸೋತೆ ಎನ್ನುತ್ತಿದ್ದ ಮಾತು ಮುಗಿಯುವ ಮೊದಲೇ ಆಕೆಯಿಂದ ಎರಡೇ ಎರಡು ಹೆಜ್ಜೆಗಳ ಅಂತರದಲ್ಲಿ ಅವನು ಧುತ್ತೆಂದು ಪ್ರತ್ಯಕ್ಷನಾಗಿದ್ದ !

ಉಮ್ಮಳಿಸಿ ಬರುತ್ತಿದ್ದ ದುಃಖ, ಏಕಾಏಕಿ ಅವನು ಪ್ರತ್ಯಕ್ಷನಾದ ಆಶ್ಚರ್ಯ, ಈವರೆಗಿನ ಸ್ಥಿತಿಯಿಂದ ಉಂಟಾದ ಭಯ - ಎಲ್ಲ ಸೇರಿದ ಆಕೆ ತನ್ನ ಕಣ್ಣು ಮುಚ್ಚಿಕೊಂಡು ಚಿಟಾರನೇ ಚೀರುತ್ತಾಳೆ. ಕಣ್ಣಿಗೆ ಕಾಣದಂತೆ, ಕೂಗಿದರೂ ಕೇಳದಂತೆ ದೂರ ದೂರ ಹೋಗಿದ್ದ ಆತ, ತಾನು ಹೀಗೆ ಸೋಲೊಪ್ಪಿಕೊಂಡ ಕೂಡಲೇ ಧುತ್ತೆಂದು ಬಂದು ಪ್ರತ್ಯಕ್ಷನಾಗುತ್ತಾನೆಂಬುದನ್ನಾಕೆ ಕಲ್ಪನೆಯಲ್ಲೂ ಊಹಿಸಿರಲಿಲ್ಲ. ನಂಬಲೂ ಆಗದ ಸ್ಥಿತಿಯಲ್ಲಿದ್ದ ಆಕೆಯ ಹತ್ತಿರ ಬಂದ ಅವನು ಮೃದುವಾದ ಮಾತಲ್ಲಿ 'ಯಾಕೆ ಹೆದರ್ಕೆ. ನಿನ್ನ ಬಿಟ್ಟು ನಾ ಎಲ್ಲಿ ಹೋಗ್ತೇನಿ?' ಎನ್ನುತ್ತ ಆಕೆಯನ್ನು ಬರಸೆಳೆದು ತಬ್ಬಿಕೊಳ್ಳುತ್ತಾನೆ. ಆತನ ಬಾಯಲ್ಲಿ ಒಮ್ಮೆಯಾದರೂ ಇಂಥ ಮೃದುಭಾವದ ಮಾತನ್ನಾಕೆ ಕೇಳಿರಲಿಲ್ಲ. ಅವನ ಮಾತು ಮತ್ತು ಪ್ರೀತಿಯಪ್ಪುಗೆಯಿಂದ, ಹೋದ ಸತಾಯಿಸಿ, ನೋಯಿಸಿ, ಪರೀಕ್ಷಿಸಿ, ಕೊನೆಗೂ ತನ್ನ ಕೈ ಬಿಡಲಿಲ್ಲವಲ್ಲ ! ಎಂಬ ಕೃತಜ್ಞತಾ ಭಾವ ಆಕೆಯಲ್ಲಿ ಉಕ್ಕತೊಡಗಿತ್ತು. ಪರಸ್ಪರರ ಮುಖಗಳು ಕಾಣದಷ್ಟು ಕತ್ತಲೆ ದಟ್ಟವಾಗಿತ್ತು. ಗಾಢವಾಗಿ ಬಿಗಿದಪ್ಪಿಕೊಂಡಿದ್ದ ಆ ಎರಡೂ ಜೀವಗಳು ಹಾಗೆ ನೆಲಕ್ಕೊರಗಿದವು. ಎಷ್ಟೊತ್ತಿನವರೆಗೆ ಅವು ಹಾಗೆ ಇದ್ದವೋ... ! ಹಿಂದಿನ ಎಲ್ಲ ಕಥೆಯನ್ನೂ ತನ್ನ ಮೌನದಲ್ಲಿ ಬರೆದುಕೊಂಡಿದ್ದ ತೀರದಡಿಯ ಆ ದೊಡ್ಡ ಮರ, ಅವರು ಹೆಜ್ಜೆಯಾಟ ಆಡುತ್ತ ಮುಂದೆ ಮುಂದೆ ಬಂದಂತೆ, ದೂರ ದೂರ ಬಲುದೂರ ಉಳಿದ ಕಾರಣದಿಂದ ಮುಂದಿನ ಆ ಎಲ್ಲ ವಿದ್ಯಮಾನವನ್ನು ಮೌನದ ಭಾಷೆಯಲ್ಲಿ ದಾಖಲಿಸಿಕೊಳ್ಳಲು ಅದಕ್ಕೂ ಸಾಧ್ಯವಾಗಲಿಲ್ಲ.

ಹುಣ್ಣಿಮೆ ಕಳೆದು ಎರಡು ದಿನಗಳಾಗಿರಬೇಕು. ತಾಸಿನ ಹಿಂದೆ ಸೂರ್ಯನೊಡನೆ ಸರಸವಾಡುತ್ತಿದ್ದ ಸಮುದ್ರ, ಅನಂತರ ಒಂದಿಷ್ಟು ಹೊತ್ತು ಕತ್ತಲಲ್ಲಿ ವಿಲವಿಲಗುಟ್ಟಿ, ಇದೀಗ ಮುಕ್ಕಾದ ಸ್ಥಿತಿಯಲ್ಲಿ ಮೂಡಿ ಬರುತ್ತಿದ್ದ ಚಂದ್ರನೊಡನೆ ಚೆಲ್ಲಾಟವಾಡಲು ಸಿದ್ಧವಾಗತೊಡಗಿತ್ತು.

# ನಾ, ಇನ್ನೂ ಸತ್ತಿಲ್ಲ

● ಸಿದ್ಧಲಿಂಗ ದೇಸಾಯಿ

ಇಂದ ರವಿವಾರಿದ್ರೂ ಇನವರ್ಸಿಟಿಗ್ಹೊಂಟಬಿಟ್ನಿ. ಹೌದ ಮತ್ತ ಮನ್ಯಾಗಿದ್ದಾರ ಏನ್ಮಾಡೂದು ? ದಿನದಂಗ ಇವತ್ತಷ್ಟೇನೂ ಇನವರ್ಸಿಟಿ ಬಸ್ಸಿಗೆ ನೂಕ ನುಗ್ಗಲಿದ್ದಿದ್ದಿಲ್ಲ; ಅದs ಒಂದ ಸಮಾಧಾನ. ವ್ಹಾಯಾ ಕರ್ನಾಟಕ ಕಾಲೇಜೋ, ಎಮ್ಮಿಕೇರಿನೋ ಬಂದ ನಿಂತ ಬಸ್ಸಿಗೆ ಹತ್ತಿಬಿಟ್ನಿ. ಬಸ್ಸಿನಾಗ ಹತ್ತೆಂಟs ಮಂದಿ, ತಲ್ಯಾಗ ಮಾತ್ರ ನೂರಾಎಂಟ ವಿಚಾರ, ಒಂದ ಮೈಲ ದೂರ ಹ್ವಾದವ್ಯಾಗ ಒಮ್ಮಿಂದೊಮ್ಮೆಗೆ ಇಡೀ ಬಸ್ಸೆಲ್ಲ ಖೊಳ್ಳಂತ ನಕ್ಕಾಂಗಾತು. ಗಡಬಡಿಸಿ ಸುತ್ತೂ ಕಡೆ ನೋಡಿದ್ಯಾ; ಬಸ್ಸು ಸಪ್ತಾಪೂರ ಬಾವಿ ಸ್ಟಾಪಿಗೆ ನಿಂತಿತ್ತು. ಕಂಡಕ್ಟರ್ ಏನಾರ ಒಂದ ಸಿಲ್ಲಿ ಜೋಕ್ ಹೊಡದಿರಬೇಕು ಅದಕ ಈ ಜನಾ ಎಲ್ಲಾ ಹಿಂಗ ನಕ್ಕಿರಬೇಕು. ಎಂಥಾ ಜನಾಪಾ ಲಾಯಿಫನ್ಯಾಗ ಇವರ್‍ಗೆ ಸೀರಿಯಸ್‌ನೆಸ್ಸ್ ಇಲ್ಲಲ್ಲಾ ಅನಿಸ್ತು. ಇನವರ್ಸಿಟಿ ಗೇಟಿಗೆ ಬಂದಾಗ ಗೇಟ್ ಮುಚ್ಚಿತ್ತು. ನಿರ್ವಾಇಲ್ದs ಬಸ್ಸು ನಿಲ್ಲಬೇಕಾತು. ಹತ್ತ್ ಮಿನಟಾತು, ಹದನೈದ ಮಿನಟಾತು, ಅರ್ಧಾ ತಾಸಾದ್ರೂ ಟ್ರೇನೇನ ದಾಟಿ ಹೋಗಲಿಲ್ಲ. ಗೇಟೂನು ತಗೀಲಿಲ್ಲ. ನಮ್ಮ ಬಸ್ಸಿನ ಜನಾ ಅಲ್ದ, ಆಚಿ-ಈಚಿನ, ಹಿಂದ-ಮುಂದಿನ ಬಸ್ಸಿನಾನ್ನ ಜನಾ ಎಲ್ಲಾ ಇಳ್ದ, ಟ್ರೇನು ಇಷ್ಟೊತ್ತಾದ್ರೂ ಯಾಕ ಬರಲಿಲ್ಲ ಅನ್ನೂ ತಜವಿಜ್ಯಾಗಿದ್ರು. ಅಷ್ಟರಾಗ ಒಬ್ಬ ಸುಟಿಯಾದ ಹುಡುಗ ಹಳಿಗುಂಟ ಒಂದಷ್ಟ ದೂರ ಸ್ಟೇಷನ್ ದಿಕ್ಕಿನ ಕಡೆ ಹೋಗಿ ಬಂದು ಆಶ್ಚರ್ಯ ಅಲ್ದ ಇದ್ರೂ ಒಂದ ಆಘಾತದ ಸುದ್ದಿ ತಂದಿದ್ದ. ಎಲ್ಲಾರು ಉತ್ಸುಕರಾಗಿ ಕ್ರಿಕೆಟ್ ಕಾಮೆಂಟ್ರಿ ಕೇಳಾಕ ರೆಡಿಯೋಕ ಮುಗಬಿಧ್ಧಾಂಗ ಅವನ ಸುತ್ತಾರದ ನಿಂತಿದ್ರು; ಯಾವನೋ ಇಪ್ಪತ್ತ ಇಪ್ಪತ್ತೈದ ವರ್ಷದ ತರುಣ ಟ್ರೇನಿಗೆ ಸಿಕ್ಕ ಸತ್ತದ್ದರ ಸುದ್ಯದು. ಹಳದಿ ಬುಶ್‌ಷರ್ಟು ಕಂದ ಬಣ್ಣದ ಉಲನ್‌ಪ್ಯಾಂಟು, ಅವನ ಮೂಗಿನ ಉದ್ದ, ಮುಖದ ಮಾಟ, ವಾಚ್ - ಬೆಲ್ಟಿನ ಗುರ್ತು, ಹಿಂಗ್ ಏನೇನೋ ಆ ಹೆಣದ ವಿವರ ಹೇಳಿ ಒಂದ ರೀತಿ ಚಿಂತಾಜನಕ ವಾತಾವರಣ ಹುಟ್ಟಿಸಿ ಬಿಟ್ಟಿದ್ದ ಆ ಪ್ರತ್ಯಕ್ಷದರ್ಶಿ. ನಾನೂ ನನ್ನ ಶರ್ಟ ನೋಡಿಕೊಂಡ್ನಿ, ಕಂದು ಬಣ್ಣದ ಉಲನ್ ಪ್ಯಾಂಟ್, ಹೆಚ್ಚು ಕಡಮೀ ನನಗೂ ಆ ಸತ್ತ ಮನಶ್ಯಾನ ಲಕ್ಷಣಾ ಇದ್ರೂ ನಾ ಮಾತ್ರ ಜೀವಂತ ಅದೇನಲ್ಲಾ ಅನಸ್ತಿ. ಹೌದು ನಾ, ಇನ್ನೂ ಸತ್ತಿಲ್ಲ ನಾ, ಹಂಗ ಸಾಯಾಕ ಸಾಧ್ಯ ಐತಿ ? ಸಾಧ್ಯನs ಇಲ್ಲಾ ಮೂಗಿನ ಹೊಳ್ಳೆಗೆ

ಕೈ ಇಟ್ಟು ಉಸರಾಡಿಸಿ, ನಾ ಜೀವಂತ ಇರೋದು ಖಾತ್ರಿ ಮಾಡಿಕೊಂಡ್ನಿ. ನಾ ಅಂವಾ ಆಗಾಕ್ ಹೆಂಗ ಸಾಧ್ಯ ಐತಿ ಸಾಧ್ಯನ ಇಲ್ಲಾ. ನಮ್ಮ ಗೆಳೆಯಾರೊಳಗನ ಗುರ್ತಿದ್ದವನ ಆಗಿರಬೇಕಂತ ಏನೈತಿ ? ಅದ ಹೋಗ್ಲಿ ಟ್ರೇನಿನ ಬುಡಕ್ಕ ಬಿದ್ದ ಸಾಯೂ ಗಂಡಾಂತರ ಏನ ಬಂದಿರಬೇಕಂವಗ ? ಹಂತಾದೇನಾರ ಗಂಡಾಂತ್ರ ಬಂದಿರಾಕಬೇಕು. ಇಲ್ದ ಇದ್ರ ಯಾರ ಸಾಯತಾರು ? ಪಾಪ ! ಅಂವಂದ ಮದವ್ಯಾಗಿತ್ತೋ ಇಲ್ಲೋ, ಮದವ್ಯಾಗಿದ್ರಂತೂ ಅಂವಾ ಹೆಂಡತಿ ಕಾಟಾ ತಡೀಲಾರದ್ಕ್ಯನ ಸತ್ತಿರಬೇಕು. ಮದವ್ಯಾಗದ ಇದ್ರ ಇನ್ನೇನಾರ ಬ್ಯಾರೆ ಕಾರಣ ಇರಬೇಕು. ಅಂತೂ ಒಬ್ಬ ಮನಶ್ಯಾ ಟ್ರೇನಿನ ಬುಡಕ್ಕ ಸಿಕ್ಕ ಸತ್ತದ್ದಂತೂ ಖರೇವಾದಾಂಗಾತು. ಆದರ ಎಲ್ಲಾ ಬಿಟ್ಟ, ಈ ಟ್ರೇನಿನ ಬಾಯಾಗ ಯಾಕ ಬಿದ್ದ ಸತ್ತೋ ಮಾರಾಯ. ಎಲ್ಲಾರೂ ಒಂದ ದೊಡ್ಡ ದಿರ್ಬೆ ನೋಡಿ ಬರಾವರಂಗ ನೋಡಿ ಬಂದ್ರು. ನಾ, ಮಾತ್ರ ಸೀಟ್‌ಬಿಟ್ಟ ಕೆಳಗಿಳಿಲಿಲ್ಲ. ಸತ್ತ ಹೆಣಾ ಅಲ್ಲೇ ಬಿಟ್ಟ; ಜೀವ ತುಂಬಿದ ಮಂದಿ ಹೊತ್ತ ಟ್ರೇನು ಗೇಟ್ ದಾಟಿ ಸಿಳ್ ಹಕ್ಕೋಂತ ಹೋತು. ನಮ್ಮ ಸಿಟಿ ಬಸ್ಸೂನು ಇನವರ್ಸಿಟಿ ಕ್ಯಾಂಪಸ್ಸಿನಾಗ ಗಾಲಿ ಉಳ್ಳೀಸ್ತಿ. ಬಸ್ ಇಳದ ಮೇನ್ ಬಿಲ್ಡಿಂಗಿನ ಎದುರಿನ ಗಾರ್ಡನ್ನಿಗ್ಹಾಯ್ದೆ. ವಾಟರ್ ಫೌಂಟಿನಾಗ ನೀರ ಇದ್ದಿದ್ದಿಲ್ಲ. ಹಂಗ ಹೇಳಿ ಕೊಳುವಂಗ ಹೂವನೂ ಇದ್ದಿದ್ದಿಲ್ಲ, ಇದ್ರೂ ಬಾಡಿದ್ದುವು. ಮಧ್ಯಾಹ್ನ ಹನ್ನೆರಡಕ್ಕ ಹೂವಿನ ಕಂಟಿ ನೆಳ್ಳಾರ ಎಷ್ಟ ಇದ್ದೀತು ? ಹಂತಾದರಾಗs ಒಬ್ಬ ಹುಡುಗ, ಹುಡುಗಿ ಚಕ್ಕಂದ ಹೊಡಕೊಂತ ಕುಂತಿದ್ರು. ನನಗ ಮಾತ್ರ ಆ ಬಿಸಿಲಿನಾಗ ಕುಂದರಾಕಾಗಲಿಲ್ಲ. ಎದ್ದ ಲಾಯಬ್ರಿ ಕಡೆ ನಡೆದೆ. ಫಸ್ಟ ಟರ್ಮಿನಾಗ ಲಾಯಬ್ರ್ಯಾಗರ ಯಾರ ಇರತಾರು ? ಆದರೂ ಅಲ್ಲೊಬ್ಬರ ಇಲ್ಲೊಬ್ಬರ ಕುಂತಿದ್ರು. ನಮ್ಮ ಡಿಪಾರ್ಟಮೆಂಟಿನ ಕಲೀಗ್ ಪ್ರೊ. ಸುಂಕದ ಮಾತ್ರ ಯಥಾ ಪ್ರಕಾರ ದಿನಾ ಕುಂಡ್ರೂ ಕಾರ್ನರಿನಾಗ ಟೇಬಲ್ ಮ್ಯಾಲ ಪುಸ್ತಕಗೋಳ ಗುಡ್ಡಾ ಒಟಗೊಂಡ ಕುಂತs ಇದ್ದ. ಅದೇನ್ ರಿಸರ್ಚ ಮಾಡತಾನೋ ಏನೋ ಮಾರಾಯಾ, ಇನವರ್ಸಿಟ್ಯಾಗ ರಗಡ ಮಂದಿ ರಿಸರ್ಚ್ ಸ್ಕಾಲರಶಿಪ್ ತೊಗೊಂಡ ಚಹಾದಂಗಡ್ಯಾಗ ಕಾಲ ಕಳ್ಯೂವಾಗ ಇಂವ ಇಷ್ಟ್ಯಾಕ ತ್ರಾಸ ತೊಗೊಂತಾನೇನೊ. ಮುವತ್ತೈದ ವಯಸ್ಸಾದ್ರೂ ಇನ್ನs ಮದವೀ ಆಗೂ ವಿಚಾರ್‍ಯಾನ ಇಲ್ಲ. ಇವಾ ರಿಸರ್ಚ ಮಾಡಿ ಕನ್ಯಾ ಸರ್ಚ ಮಾಡುದರಾಗ ನಾಲವತ್ತ ನಾಲವತ್ತೈದ ವಯಸ್ಸಾಗಿರತಾವು. ನಮ್ಮ ಸ್ಟಾಫ್‌ನ್ಯಾಗ ಡ್ರಾಯ್‌ಫೆಲೊ ಅಂದ್ರ ಈ ಸುಂಕದ್ನs ಒಂದ ಹುಡಿಗ್ಯೂ ಒಮ್ಮ್ಯಾರ ಅವನ ಚೇಂಬರಿನೊಳಗ ಹೋಗಿದ್ದ ನೋಡಿಲ್ಲ ನಾ. ಅವನು ಗೈಡ್ ಅಂದ್ರ ಗಾಡ್ ಅಂತ ತಿಳಕೊಂಡ ಬಿಟ್ಟಾನೋ ಏನೋ ! ಇಷ್ಟ ಇದ್ರೂ ಅಂವಗ ಪ್ಯಾಟ್ಯಾನ ಕಿರಾಣಿ ಸಾಮಾನದಿಂದ ಹಿಡದ ಕಾಳು ಕಡಿ ಧಾರಣಿ ಎಲ್ಲಾ ಅಪ್ ಟು ಡೇಟ್ ಹೆಂಗ ಗುರ್ತಇರ್ತಾವೊ ಏನೋ. ಬಹುತೇಕ ಗೈಡ್‌ನ ಮನಿಸಂತಿ ಮಾಡವ ಇಂವ್ನ ಅಲ್ಲ ! ಅದರಾಗ ಏನು ಸುಖಾಪಡೀತಾನೋ ಏನೋ ! ಅವನ್ನೇನ ಮಾತಾಡಿಸೂದು ಇಂಗ್ಲೀಷ್ ಲಿಟರೆಚರ್ ಸೆಕ್ಷನ್ನಿಗ್ಹೋಗಿ ಹಾಂಗ ನೋಡೂದರಾಗ Hotchner ಬರೆದ Hemingway ನ biography ಕಣ್ಣಿಗಿ ಬಿತ್ತು. ತೊಗೊಂಡ ಕುಂತ

ಒಂದೊಂದ ಪುಟ ತಿರವಿದ್ಯಾ, ಕಡೀ ಪುಟದಾಗ ಕಡೀಕ "Earnest had has it right; Man is not made for defeat. Man can be destroyed but not defeated" ಅಂತ ಬರೆದಿತ್ತು. ಇದು Hemingway ನ ಫಿಲಾಸಫಿ ಇರಬೇಕು. ಆದರ ತಾನs ಗುಂಡ ಹಕ್ಕೊಂಡ ಸತ್ತಿದ್ದು defeat ಅನಬೇಕೊ, destruction ಅನಬೇಕೊ ? ಮಾರಾಯಾ ಏನೇನೊ ಬರದ. ಕಡೀಕ ತಾನs ಗುಂಡ ಹಕ್ಕೊಂಡ ಸತ್ತ. ಬದುಕಿ ತೋರಸಲಿಲ್ಲ ಅನಿಸ್ತು. ಸುಮ್ಮನ ಟೇಬಲ್ ಮ್ಯಾಲ ಸರಿಸಿಬಿಟ್ನಿ ಆ ಪುಸ್ತಕ. ಏನ ಓದಬೇಕಲ್ಲೆ ? ಸುಮ್ಮನ ಕುಂತ್ಯಾ ಗಲ್ಲಕ ಕೈ ಹಚಗೊಂಡ. ಎಲ್ಲಾರು ಓದೂದು ಬರ್ಯೂದನ್ನ ನೋಡಕೊಂತ. ನಮ್ಮೂರ ಕನ್ನಡ ಸಾಲ್ಯಾಗ ಏಳನೇಯತ್ತಾದಾಗಿನ ನೆನಪಾತು ನನಗೆ : ಮಾಸ್ತರು ಹುಡುಗರ್ನೆಲ್ಲಾ ಓದಾಕ ಕುಂದರಿಸಿ ತಾವು ಮಕಾ ಮಕಾ ಹುಡುಗರು ಓದತಾರಿಲ್ಲೊ ಅಂತ ನೋಡಿಕೊಂತ ಕುಂದರೂದ. ಹಿಂದೀ ಡಿಪಾರ್ಟಮೆಂಟಿನ ಸಿಂಗರ್ ಆಶಾ ಎದ್ದಹ್ವಾದ ಕೂಡಲೆ ಒಬ್ಬೊಬ್ಬರ ನಾಲ್ಕ ಹುಡುಗ್ರ ಅಕಿ ಹಿಂದ ಹೊಂಟಹ್ವಾದ್ರು. ಛೇ ! This world moves with woman ಅನ್ನ್ಯಾ ? ಅಥವಾ moves after woman ಅನ್ನ್ಯೊ ? ನಾನು ಎದ್ದ್ಯಾ, psychology section ಗ ಹ್ವಾದ್ನಿ. Brain Disorder ಮ್ಯಾಲ ಒಂದೆರಡ ಪುಸ್ತಕ ನೋಡಿದ್ಯಾ ಹಾಳಾದದ್ದ ಏನೂ ತಿಳೀಲಿಲ್ಲ. ಹಂಗs ಬುಕ್ಸ ರ್‍ಯಾಕ್‌ನ್ಯಾಗ ಒಂದೊಂದ ಪುಸ್ತಕಾ ತಿರತಿರವಿ ನೋಡಿಕೊಂತ ನಡದ್ಯಾ; ಮೆಥ್‌ಮೆಟಿಕ್ಸ್ ಪುಸ್ತಾಕಗೋಳು ಸಿಗಾಕ್ಹತ್ತಿದುವು. ಏಕ್‌ದಂ ನನಗೆ ನಾಲ್ಕನೇಯತ್ತಾದಾಗ ಗಣೀತದಾಗ ಡಲ್ ಇದ್ದದ್ದಕ್ಕ ಲೆಕ್ಕ ತಪ್ಪಿದಾಗೊಮ್ಮೆ ಶಾನಭೋಗರ ಪದ್ದೀ ಕಡಿಂದ ಲೆಕ್ಕಿಲ್ಲದಷ್ಟು ಸಲ ಕಪಾಳಕ್ಹೊಡಿಸಿಕೊಂಡ ನೆನಪಾಗಿ, ಆ ಫ್ಲೋರ್‌ದಿಂದ ಸೀದಾ ಸೆಕೆಂಡ್ ಫ್ಲೋರ್‌ದಾಗಿನ ಜರ್ನಲ್ ಸೆಕ್ಸನ್ನಿಗ್ಹ್ವಾದ್ನಿ, ನ್ಯೂಜ್‌ಪೇಪರಿನಾಗ ಬರೇ ಸಿನಿಮಾ ಸುದ್ದಿ, ವಾಂಟೆಡ್ ಕಾಲಂ, ಸೋಡಚೀಟಿ ನೋಟೀಸು. ಈ ಇಂಡಿಯಾದಾಗ ಡೈವ್ಹೋರ್ಸ ತೊಗೋಳಾಕ ಜಾತಿಗೊಂದ ಕಾಯ್ದೆ. ಮುಸಲ್ಮಾನ್ರು ತಲಾಕ್, ತಲಾಕ್ ಅಂತ ಮೂರಸರೆ ಬಾಯಲೆ ಅಂದರೂ ಸಹಿತ ಬಿಡಗಡಿ ಆಕೈತಂತ, ಆದ್ರ ಹಿಂದೂಗೋಳು ಡೈವ್ಹೋರ್ಸ್ ಕೊಡಬೇಕಂದ್ರ ಇನ್ನೊಂದ ಜನ್ಮದಾಗ ಸಾಧ್ಯ ಆಗೂ ಹಂಗ ಮಾಡಿಟ್ಟಾರು. ಹೆಣ್ಣು ಅಬಲೆ ಅಂತಕಿಗೆ ಎಷ್ಟ ಸವಲತ್ತ ಕೊಟ್ಟೈತಂದ್ರ ಗಂಡ ಷಂಡಾಗಿರಬೇಕು. ಇಂಥಾ ರಿಸ್ಟ್ರಿಕ್ಷನ್ ತಗದ ಯಾವಾಗ ಸರಳ ಡೈವ್ಹೋರ್ಸ್ ಪದ್ಧತಿ ತರತಾರೇನೊ ಅನಸ್ತಿ.

"When, in 1949, my wife decided that she wanted no more of me, our marriage came to an end". Russell ತನ್ನ ಆತ್ಮಕತಿಯೊಳಗ ತನ್ನ ವೈವಾಹಿಕ ಸಂಬಂಧಾನ ಇಷ್ಟ ಸರಳ ಹೇಳಿ ಬಿಡ್ತಾನಲ್ಲ. ಹಂತಾ ಕಾಲ, ವಿಚಾರ ಇಲ್ಲ್ಯೊ ಯಾವಾಗ ಬರತೈತೋ ಏನೋ ? ಥೂ ! ಈ ಇಂಡಿಯಾದಾಗ ಮದವಿ, ಹೆಂಡರು, ಮಕ್ಳು, ಅಂದ್ರ ಏನ ಬಿಗಿಬಂಧ ಏನತಾನ, ಸ್ವಲ್ಪ ಆಡಮೇಡಾಗಿ ಗಂಡಾ ಹೆಂಡತಿ ಹೊಂದಿಕ್ಯಾಗದ

ಇದ್ರೂ ಸಾಯೂತನ ಹೆಂಗ ಅದs ಇದರಾಗನ ಕೊರಗಿಕೊಂತ ಹೋಗಬೇಕವರು ! ಸೋಡಚೀಟಿಗಿಂತ ತಲಾಕ್ ಪದ್ಧತೀನ ಬರಬೇಕನಸ್ತೈತಿ.

ಜಯಾ ಎಲ್ಲಿ ನೋಡಿದ್ಲೋ ಏನೋ ಸೀದಾ ನನ್ನ ಹಿಂದ ಬಂದ ನಿಂತಿದ್ಲು. ಬಾಟನಿ ಡಿಪಾರ್ಟ್‌ಮೆಂಟ್‌ನಾಗ ರಿಸರ್ಚ ಮಾಡತಿದ್ರೂ ಸಾಹಿತ್ಯದ ಹುಚ್ಚಾಕಿಗೆ. ದಿನ ಇಬ್ರೂ ಕೂಡುದೆಲ್ಲೆ ? ಲೈಬ್ರ್ಯಾಗ ಅಲ್ಲ. ಅಲ್ಲೇನ ಮಾತಾಡುದೈತಿ ? ಚಾ ಕುಡ್ಯಾಕ ಕರಕೊಂಡು ಹ್ವಾದ್ಲು. ಕರಕೊಂಡು ಹ್ವಾದ್ಲು ಅಂದ್ರೇನು ? ಬಿಲ್ ನಾನ ಕೊಟ್ಟ್ಯಾ ಮಾಮೂಲಿನಂಗ. ಕಾಲೇಜ್‌ನಾಗಿಂದನೂ ಚಾದ ಬಿಲ್ಲು ನಾನೇ ಕೊಟಗೊಂತ ಬಂದೇನಿ. ಈಗೂ ಕೊಟ್ನಿ ಅಷ್ಟ. ಆಯ್‌ತಾರ ಇರೂದರಿಂದ ಕುಂತ ಏನೇನೊ ಮಾತಾಡಿದ್ವಿ. ಬೆಳಿಗ್ಗೆ ಟ್ರೇನಿನ ಬುಡಕ್ಕ ಸಿಕ್ಕ ಸತ್ತವನ ಸುದ್ದಿ ಹೇಳಿದ್ಯಾ. ಅದನ್ನ ಕೇಳಿ ಆಕಿಗೇನೂ ಕೆಡಕಾದಂಗನಸಲಿಲ್ಲ. ಆಕ್ಕೂ ಇದs ಧಾರವಾಡದಾಗಿನ ಯಾವುದೋ ಒಂದ ಕಾಲೇಜದಾಗಿನ ಲೆಕ್ಚರರು ಒಂದ ಹತ್ತ ಹದಿನೈದ ದಿನದ ಹಿಂದೆ ಒಬ್ಬನs ಇದ್ದಾಗ ಮನೀ ಒಳಚಿಲಕ ಹಕ್ಕೊಂಡ, ಬಚ್ಚಲ ಮನ್ಯಾಗ ಒಂದ ಕಡೆ ಕಟಗಿ ಒಟ್ಟಿ ಅದರ ಮ್ಯಾಲ ಪೆಟ್ರೋಲು ಚಿಮಣಿ ಎಣ್ಣೆ ಉಗ್ಗಿ, ಅದರ ಮ್ಯಾಲ ತಾ ಮಕ್ಕೊಂಡು, ಕಡ್ಡಿ ಗೀರಿ ಬೆಂಕಿ ಹಚ್ಚಿಕೊಂಡ ಸತ್ತ ಸುದ್ದಿ ಹೇಳಿದ್ಲು. 'ಅಂವ್ಯಾಕ ಸತ್ತಾ ಅವಂಗೇನ ಆಗಿತ್ತು !' ಅಂದ್ಯಾ. 'ಏನೋ ಅವನ ಹೆಣ್ತಿಗೆ ಅಂವಗ ಅಷ್ಟ ಸರಿ ಹೊಂದಾಣಿಕ್ಯಾಗಿದ್ದಿಲ್ಲಂತ. ಅದಕ್ಕ ಸತ್ತಂತ' ಹೇಳಿದ್ಲು. ಆದರೇನಾತು ಆಕಿನ ಬಿಟ್ಟ ಬ್ಯಾರೆದಕಿನ್ನ ಆಗಬಹುದಾಗಿತ್ತಲ್ಲ, ಅದಕ್ಯಾಕ ಆತ್ಮಹತ್ಯೆ ಮಾಡಿಕೋಬೇಕಾಗಿತ್ತು ? ಅನ್ನಿ. ಅಧ್ಯಾಂಗ ಸಾಧ್ಯ ಐತಿ, ಹಂಗ ಹೆಣ್ತಿ ಬಿಡೂದು ಅಷ್ಟು ಸುಲಭ ಇಲ್ಲದು ಅಂದ್ಲು. ಹೌದು ಹೆಣ್ತಿ ಬಿಡೂ ಸ್ವಾತಂತ್ರ್ಯ ಇಲ್ಲ. ಆದರೆ ಹೆಣ್ತಿಗೆ ಗಂಡ ಬ್ಯಾಡಾದ್ರ ಬೇಕಾದ್ದ ಮಾಡೂ ವಿಚಿತ್ರ ಸ್ವಾತಂತ್ರ್ಯ ಐತಿ ! ಭಾಳ ಮಜಾ ಅನಿಸ್ತಿ ನನಗ. ಅಲ್ಲಾ ಸಾಯಾಕ ಇಷ್ಟೆಲ್ಲಾ ಕಟಗಿ ಒಟ್ಟಿ, ಅದರ ಮ್ಯಾಲ ಪೆಟ್ರೋಲ್ ಉಗ್ಗಿ ಜೀವಂತ ಸುಟ್ಟಕೊಳ್ಳಾಕಿಂತ ಬದುಕಾಕ ತ್ರಾಸ ತೊಗಂಡಿದ್ರ ಬೇಕಾಧಂಗ ಬದುಕಬಹುದಿತ್ತಲ್ಲಾ ಅಂದ್ಯಾ. ಹೌದು ಒಂದಷ್ಟ ಗಂಡಸೂರು ಅಷ್ಟ ಹೇಡಿಗೋಳ್ಳು ಇರತಾವು ಏನ್ಮಾಡಾಕಾಕೈತಿ ಅಂದ್ಲು.

ಬಾಟ್ಯಾನಿಕಲ್ ಗಾರ್ಡನ್ನಿಗ್ಹ್ವಾದವಿ. ಏನೇನೋ ತೋಡಿಕೊಂಡ್ವಿ. ಅಕ್ಕೂ ಏನೇನೋ ಹೇಳಿದ್ಲು, ಕೇಳಿದ್ಲು, ಸಂಜೆ ಐದಾತು, ಆರ ಆತು. ಎದ್ದ ಹೊಂಟೇವಿ. ಆಕಿ ತನ್ನ ಹಾಸ್ಟೇಲಿಗೆ, ನಾ ನಮ್ಮನಿಗೆ ಅಂದ್ರ ನಮ್ಮೂರಿಗೆ. ನಮ್ಮೂರಂದ್ರೇನು ? ಧಾರವಾಡದಿಂದ ಆರೇ ಮೈಲಿ ದೂರ. ಇನವರ್ಸಿಟಿಯಿಂದ ಸಿಟಿಬಸ್ ಹತ್ತಿ ಬಸ್ ಸ್ಟ್ಯಾಂಡಿಗಿ ಬಂದ್ಯಾ. ದಿನದಕಿಂತ ಬೆಳಗಾಂವಿ ಬಸ್ಸಿಗೆ rush ಇತ್ತು. ಪಾಪ ! ಹೆಣ್ಣು, ಗಂಡು, ಮಕ್ಕು, ಮುದುಕರು, ಯಾರೂ ಯಾರ್ಗೂದರಕಾರ ಮಾಡುವಂಗಿಲ್ಲ. ಶಕ್ತಿ ಇದ್ದವರs ದೂಡಿ ಹೋಗಿ ಮುಂದ ಕುಂದರಬೇಕು. ನನ್ನ ಹಿಂದ ಒಬ್ಬ ಹೊಟ್ಟೀಲೆ ಇದ್ದ ಹೆಣ್ಮಗಳ ಇದ್ದಳು. ಆಕಿನ ಮುಂದ ಕಳಸಿ ನಾ ಹಿಂದ

ಉಳದೆ. ಅಕಿಗೆ ಜಗಾ ಕೊಟ್ಟಿದ್ದಕ್ಕ ಅಕೀ ಗಂಡಗೂ ಜಗಾ ಬಿಡಬೇಕಾತು. ನನಕಿಂತ ಮುಂದೆ ಹತ್ತಿದವರೂ ಅವರಿಬ್ಬರ್‍ನಾಗ ಒಬ್ಬರಿಗೂ ಕುಂದ್ರಾಕ ಜಗಾ ಸಿಗಲಿಲ್ಲ. ಹೆಣ್ತಿ ಒಂದಿಷ್ಟ ಗೊಣಗಾಡಿದ್ಲಂತ ಕಾಣಸ್ತೈತಿ. ಅಕೀ ಗಂಡ ಎಲ್ಲಿತ್ತೋ ಸಿಟ್ಟು, ಯಾತರ ಸಮಯೋ ಏನೋ ಬಾಯಮಾಡೇ ಬೇಯಾಕ್ಹತ್ತಿದ. ಅಕಿ ಕಣ್ಣೀರ ಒರಸಕೊಳಾಕ್ಹತ್ತಿದ್ಲು. ಅಕೀ ಹೊಟ್ಟೀ ಭಾರನೋಡಲಾರ್ದ ಒಬ್ಬ್ಯಾರೋ ಎದ್ದ ಜಗಾ ಕೊಟ್ರು. ಅಕೀ ಬರೇ ಕುಂದ್ರಾಕ ಜಗಾ ಸಿಗದಕ್ಕ ಅತ್ತಿರಾಕಿಲ್ಲ. ಅಂವ ಬರೆ ಅಕಿ ಅತ್ತಿದ್ದಕ್ಕ ಬಸ್ಸನ್ಯಾಗ ಬಾಯಮಾಡಿ ಬೇದಿರಾಕಿಲ್ಲ. ಆದರ ಅಲ್ಲಿ ಕುಂತವರ್‍ಗೆಲ್ಲಾ ಅಂವಂದs ತಪ್ಪು ಕಾಣಸ್ತಿ. ಎಲ್ಲಾರೂ ಅವನ ಮ್ಯಾಲ ಸಿಟ್ಟಾಧಾಂಗ ಆದ್ರು. ಒಬ್ಬ ವಯಸ್ಸಾದ ಯಜಮಾನ ಅಕೀ ಗಂಡನ್ನ ತರಾಟೆಗೆ ತೊಗೊಂಡ ಬಿಟ್ಟ. 'ಏನ್ರೀ ಮಿಸ್ಟರ್, ಪಾಪ ಅಕಿ ಹೊಟ್ಟೀಲೆ ಅದಾಳ, ಕುಂದ್ರಾಕ ಜಗಾ ಸಿಗದ್ದಕ್ಕ ಒಂದಿಷ್ಟ uneasy ಅನಿಸಿ ಕಣ್ಣೀರ ಹಾಕಿರಬೇಕು. Educated ಆಗಿ ಹಿಂಗ್ ಮಂದ್ಯಾಗ ಬೈದಾಡತೀರಲ್ಲ ಅಂದ. ಇಲ್ರೀ ನಿಮಗೇನ ಗೊತ್ತು She is halfmad. ಇದೇನು ಹೊಸಾದಲ್ಲ, ಈಕಿ ಹಿಂಗs ಅಟೀಟಕ ನನ್ನ ಕಾಡಸ್ತಾನs ಇರತಾಳು ನಿಮಗ ತಿಳ್ಯೂದುಲ್ಲ ಸುಮ್ನ ಕುಂದರ್‍ರಿ' ಎಂದು ತನ್ನ ವೈಯಕ್ತಿಕ ವಿಷಯದಾಗ ತಲೀ ಹಾಕಾಕ ನಿಮಗೇನು ಹಕ್ಕಿಲ್ಲ ಅನ್ನೂ ಧಾಟಿಯೊಳಗ ಮಾತಾಡಿದ. ಅಷ್ಟರಾಗ ನಮ್ಮೂರ ಪಟಕಾದ ಹಿರಿಯಾ 'ನೋಡ್ರಿ ಸಾಹೇಬ್ರ, ಹೆಂಡರ್‍ನ ಹಿಂಗ ಮಂದ್ಯಾಗ ಬೇಯೂದಕಿಂತ ಮನ್ಯಾಗನ ಕಲಿಸಿ ತಿದ್ದಬೇಕೆನ್ರಿಪಾ' ಎಂದು ಬುದ್ಧಿವಾದ ಹೇಳಿದ. ಇದಕ್ಕ ಆ ಗಂಡ ಅನ್ನೂ ಪ್ರಾಣಿ ಸುಮ್ನ ಇರಲೇ ಇಲ್ಲಾ.

'ಅದೆಲ್ಲಾ ನನಗೊತ್ತೈತೆಜಮಾನ್ರ, ಆದರೆ ಏನ್ಮಾಡೂದು, ಎಲ್ಲಾ ಹೆಣ್ಣಿನಾಂಗಿಲ್ಲಿದು ಭಾಳ ಎಡವಟ್ಟೈತಿ. ಆರ್ ವರ್ಷಾತು, ಹಿಂತಾದ್ನ ಕಟಗೊಂಡ ಬಾಳೆ ಮಾಡಾಕ್ಹತ್ತಿ. ಎರಡೇ ವರ್ಷದ ನಂತ್ರ ನೋಡ್ರಿ ನಾ ಹಿಂಗ impatient ಆಗಿದ್ದು......' ಏನೇನೊ ತೋಡಿಕೊಳ್ಳಾಕ್ಹತ್ತಿದ್ದ. ಅಷ್ಟರಾಗ ನನ್ನ ಬಾಜೂ ಕುಂತ ಧಡೂತಿ ಫ್ಯಾಷನ್ ಹೆಣ್ಮಗಳು - 'ಏನ್ ಕೇಳತಿರೀ ಆ heartless fellow ನ ಮಾತು, ಹೆಣ್ಮಕ್ಳಂದ್ರ ಕಿಮ್ಮತ್ತಿಲ್ಲಧವರಂಗ ಮಾತಾಡತಾನು, ಪಾಪ ! ಆ ಹುಡಗಿ ಎಷ್ಟ mild ಆಗಿ ಕುಂತಾಳ ಕಣ್ಣೀರ ಹಕ್ಕೊಂತ. ಅಕಿ ಹುಚ್ಚದಾಳ ಅಂತಾನ, ಹೊಟ್ಟೀಲಿ ಅದಾಳ ತಿಳಿಲಿಲ್ಲೇನ್ರಿ ಇಂವಗ ಹುಚ್ಚಿ ಕೂಡ ಬಾಳೆ ಮಾಡಾಕ ? ಹಿಂತಾ ಗಂಡ್ಸೂರ್‍ನ ಕಟ್ಟಿ ಬಡೀಬೇಕರೀ.....' ಇನ್ನೂ ಏನೇನ ಮಾತಾಡತಿದ್ಲೋ, ಏನ ಕಾವ ಏರತಿತ್ತೋ ಅಷ್ಟರಾಗ ಗಂಟಿ ಬಾರಿಸ್ತು. ನಮ್ಮೂರ ಸ್ಟ್ಯಾಂಡಿಗಿ ಇಳದ ಮನೀಗಿ ಬಂದ್ಯಾ.

ಬಂದ್ಯಾ, ಕುಂತ್ಯಾ, ಓಡಿ ಹೋಗಬೇಕನಿಸ್ತಿ. ಸುಮ್ನ ಕುಂತ್ಯಾ. ಮತ್ತೂ ಅದs ಅದs 'Any how you must adjust with her ನೀಲಕಂಠ there is no other go ಅಲ್ರೀ ನೀವು ಮೊದಲs ಅನ್‌ಎಜುಕೇಟೆಡ್ ಹುಡಗೀನ ಮದುವೆ ಯಾಗಬಾರದಾಗಿತ್ತು.

ಮಾಡಕೊಂಡೀರಿ ಅಂದಮ್ಯಾಗ ಅಕಿ ಹೆಂಗಿದ್ರೂನು ನೀವು adjust ಮಾಡಿಕೊಂಡ ಹೋಗಾಕ್ಽನ ಬೇಕು.'

'ಇಲ್ಲ ಜಯಾ ಅಕಿ ಹೆಂಗದಾಳ ನಿನಗ್ಗೊತ್ತಿಲ್ಲ, ನನ್ನ ಏನಂತ ತಿಳಕೊಂಡಾಳೂ ಅದ್ಽ ತಿಳೀವಲ್ಲು. ನನ್ನ ಅರ್ಥಾನ ಮಾಡಿಕೊಂಡಿಲ್ಲಾಕಿ. ಹಂತಾಕಿ ಕೂಡ ಹೆಂಗಾರ ಬದಕಾಕ ಸಾಧ್ಯ ಐತಿ ಹೇಳು ?'

'ನಿಮ್ಮನ್ನು ಆಕೆ ಅರ್ಥಾ ಮಾಡಿಕೊಳ್ಳ ಇದ್ರೇನಾತು ? ನೀವ್ಽ ಆಕಿನ ಅರ್ಥಾ ಮಾಡಕೋಬೇಕಲ್ಲ. ಒಮ್ಮ್ಯಾರ ಅಕಿನ್ನ ಈ ಬಾಟ್ಯಾನಿಕಲ್ ಗಾರ್ಡನ್ನಿಗೆ ಕರಕೊಂಡು ಬಂದ ಹಿಂಗ ಮಾತಾಡಕೊಂತ ಕುಂತೀರೇನು ? ಒಮ್ಮ್ಯಾರೆ ಸಿನಿಮಾಕ್ಕ ಕರಕೊಂಡ ಹೋಗೀರೇನು ? ಏನೂ ಇಲ್ಲಾ. ಅದನ್ನ ಬಿಟ್ಟ. ನೀವು ಬರೆದ ಕವಿತಾ, ಕತೀನ ಆಕೆ ಓದಿ ನಿಮ್ಮನ್ನು ಹೊಗಳಬೇಕಂತ expect ಮಾಡತೀರಿ. ನಾನು ನೀವು discussion ಮಾಡೂ ವಿಷಯಾ ಆಕ್ಯೂ ಮಾಡಬೇಕಂತಂದ್ರ ಹೆಂಗ ಸಾಧ್ಯ ಐತಿ ನೀವ್ಽ ಹೇಳ್ರೀ ?'

'ಇಲ್ಲ ಜಯಾ ನೀ ಏನೋ ಒಂದ್ ಫಾರ್ಮುಲಾ ಹೇಳಾಕತ್ತೀ. ಇದು ಸಿನಿಮಾ ನೋಡೂ ಹೆಣ್ಣಲ್ಲ. ಹಿಂಗ ಬಾಟ್ಯಾನಿಕಲ್ ಗಾರ್ಡನ್ನಿಗಿ ಬಂದ ತಿರಗೂ ಹೆಣ್ಣಲ್ಲ. ಕವಿತಾ ಓದೂದ ಬೇಕಾಗಿಲ್ಲ. ಅಕಿಗಿ ಬೇಕಾಗಿರೂದು ಬಂಗಾರ, ಸೀರಿ, ಏನ ತಂದರೂ ಸಾಕಿಲ್ಲ. ಅಕಿ ನಿನ್ನಂದ್ರ ಒಂದ ಕುರಿ, ಒಂದು ಆಕಳಾ ಅಂತ ತಿಳಕೊಂಡಾಳಾಕಿ' 'ನೀಲಕಂಠ ನಿಮಗೆ ಭಾಳ feel ಆಗ್ಯೆತಿ ಅನ್ನೂದ ನನಗ ತಿಳದೈತಿ, ಆದ್ರೂ ನೀವು ಈ ನಿರ್ಧಾರ ಮಾಡಬಾರ್ದು...'

ಜಯಾನ ಕೂಡ ಬಿಚ್ಚಿ ಮಾತಾಡಿದ್ದು ಇದ ಮದಲ್ನೇಸಲ ಏನ ಅಲ್ಲಾ. ಆದ್ರೂ ಇವತ್ತಾಕಿ ನನಗ ಬ್ಯಾರೆ ಕಂಡ್ಲು. ಏನ್ಮಾಡೂದು ಮನೀಗಿ ಬಂದ ಕೂಡಲೇ ವ್ಹೋಲ್ಯ್ಕಾನೋದ ಮ್ಯಾಲ ಕುಂತಾಂಗಾಕ್ಕೇತಿ, ಮತ್ತ ಅದ್ಽ ಬೆಳಿಗ್ಗೆ ಟ್ರೇನಿನ ಬುಡಕ್ಕ ಸಿಕ್ಕ ಸತ್ತಂವ, ಪೆಟ್ರೋಲು ಉಗ್ಗಿಕೊಂಡು ಸುಟಗೊಂಡಂವ, ಬಸ್ಸಿನಾಗ ಹೆಂಡತಿ ಬೇದು ಛೀಮಾರಿ ಆದಂವ, ಎಲ್ಲಾ ತಲ್ಯಾಗ ಹೊಕ್ಕ ಗಡಬಡಿಸಿಧಂಗ ಆಕ್ಕಾವು. ಪ್ರೊ. ಸುಂಕದ ಲಾಯಬ್ರಿ ಬಿಟ್ಟ ಎದ್ದ ಇನ್ನ್ಽ ಹೋಗ್ಯಾನೋ ಇಲ್ಲೋ ? ತನ್ನ ರೂಮಿನಾಗ ಜಯಾ, ನನ್ನ ಬಗ್ಗೆ ಏನ್ ವಿಚಾರ ಮಾಡತಾಳೋ ಏನೋ.....

(೧೯೭೫)

# ತಾಯವ್ವ

● ಬಸು ಬೇವಿನಗಿಡದ

ಈ ಕತೆಯನ್ನು ಅಕ್ಷರಗಳನ್ನು ಓದಲಾಗದ ತಾಯವ್ವನಿಗೆ ಮತ್ತು ಅವಳ ಜಗತ್ತಿನ ಸೋದರಿಯರಿಗೆ ಅರ್ಪಿಸಲಾಗಿದೆ. ಇದ್ದಾಗ ಹಾಗೂ ಸತ್ತುಹೋದ ಮೇಲೆ ಕೊಡುವ ಯಾವುದೇ ಬಹುಮಾನಗಳಿಗೆ ಅವಳು ಅರ್ಹವಾಗಿಲ್ಲವೆಂದು ಅನೇಕ ಜನರು ತೀರ್ಮಾನಿಸಿದ್ದರಿಂದ ಯಾವುದೇ ರಸ್ತೆ, ಕಟ್ಟಡ, ಪಂದ್ಯಾಟಗಳ ಮೂಲಕ ಅವಳು ನೆನಪಾಗುವುದಿಲ್ಲ. ಅವಳಿಗಾಗಿ ಒಂದು ಕತೆ ಬರೆದರೆ ಅದಾದರೂ ಅವಳ ನೆನಪನ್ನು ತಂದೀತು. ಅವಳ ಕಾಲವನ್ನು ಹಿಡಿದು ಇಟ್ಟೀತು ಎಂದು ಭಾವಿಸಲಾಗಿದೆ. ಮುಂದೊಂದು ದಿನ ಈ ಭೂಮಿಯಲ್ಲಿ ಅಲ್ಲೋಲ - ಕಲ್ಲೋಲವಾಗಿ ಪಾತಾಳ - ಆಕಾಶಗಳು ಡಿಕ್ಕಿ ಹೊಡೆದು ಪತನವಾದ ನಾಗರೀಕತೆಯ ಬಗ್ಗೆ ಶೂನ್ಯದಲ್ಲಿ ಆಧಾರಗಳನ್ನು ಹುಡುಕುವಾಗ ಈ ಕತೆಯ ಅರ್ಥಗಳು ಸಹಾಯಕವಾದವು ಎಂದು ಆಶಿಸಲಾಗಿದೆ. ಈಗ ಓದಲಾಗದ ಕತೆ ಆಗಲಾದರೂ ಓದಲ್ಪಟ್ಟೀತು. ಅಲ್ಲಿಯವರೆಗೆ ಈ ಕತೆ ಅವಳನ್ನು ಹುಗಿದಿರುವ ಮಣ್ಣಲ್ಲಿ ಮಣ್ಣಾಗಿರಲಿ. ಆ ಮಣ್ಣಿನ ಅಣುಗಳು ಈ ಕತೆಯ ಭಾವನೆಗಳನ್ನು ರಿಯಾಕ್ಟರ್ ತಂತ್ರಜ್ಞಾನದಲ್ಲಿ ವೃದ್ಧಿಸುತ್ತಿರಲಿ. ಅವಳ ಆತ್ಮವಿರುವ ವಾತಾವರಣದಲ್ಲಿ ಆಮ್ಲಜನಕವಿರಲಿ.

❖ ❖ ❖

ತಾಯವ್ವ 'ನನಗೇನ ಧಾಡಿ. ಗುಂಡಕಲ್ಲ ಇದ್ದಂಗ ಇರತೇನಿ' ಅಂತ ಅನ್ನುತ್ತಿದ್ದಳು. ಅವಳಲ್ಲಿ ಅಷ್ಟು ಆತ್ಮವಿಶ್ವಾಸವಿತ್ತು. ಮುಂದಿನ ಜೀವನದ ಬಗ್ಗೆ ಲವಲವಿಕೆ ಅಷ್ಟು ಹರಿದಾಡುತ್ತಿತ್ತು. ಅವಳು ಖರೇನ ಗುಂಡಕಲ್ಲಿನಷ್ಟೇ ಗಟ್ಟಿಯಾಗಿದ್ದಳು. ಹೊಲಕ್ಕೆ ಹೋಗಿ ದನಗಳಿಗೆ ಮೇವನ್ನು ಯಾವ ಗಂಡಸೂ ಹೊರಲಾರದಷ್ಟು ತಂದು ಒಗೆಯುತ್ತಿದ್ದಳು. ಒಬ್ಬಳೇ ಕುಡುಗೋಲಿನಿಂದ ಮೇವನ್ನು ಕೊರೆದು ಗೊಂದಲಿಯಲ್ಲಿ ಹಾಕಿದಾಗ ದನ ಕಡರುಂ.... ಕಡರುಂ..... ಎಂದು ಬಿಸಿ ಬಿಸಿ ಶೇಂಗಾ ತಿಂದ ಹಾಗೆ ತಿನ್ನುತ್ತಿದ್ದವು. ಅವಳು ಅಲ್ಲಿಯೇ ಮುಸುರಿದೋಣಿಯ ಹತ್ತಿರ ಕುಳಿತು ಸೀರೆಯ ಸೆರಗಿನಿಂದ ಬೆವರಿಗೆ ಗಾಳಿ ಹೊಡೆದುಕೊಳ್ಳುತ್ತಿದ್ದಳು. ಜನ-ಪನ ಎನ್ನದೇ ಅವಳು ಹೀಗೆ ಎದೆ ತೆರೆದು ಕೂಡ್ರುವುದನ್ನು

ಕಂಡು ಅವಳ ಮಾವ ಅವಳಿಗೆ ಅನೇಕ ಸಲ ಎಚ್ಚರಿಕೆ ಕೊಟ್ಟಿದ್ದ. ಹಿರಿಯರು ಕೂಡ್ರುವ ಜಾಗದಲ್ಲಿ ಬಂದು ಕೂಡುವುದು, ಕಿಲಕಿಲ ಅಂತ ನಗುವುದು, ಗಂಡಸರ ಎದುರಲ್ಲಿ ತಲೆ ಬಾಚಿಕೊಳ್ಳುವುದು ಮುಂತಾದವುಗಳನ್ನು ಮಾಡಿದರೆ ಚರ್ಮ ಸುಲಿಯುವಂತೆ ಬರೆ ಕೊಡುತ್ತಾರೆ ಎಂಬುದು ತಾಯವ್ವನಿಗೂ ಗೊತ್ತಿತ್ತು. ಅಂತಹ ಮಾಯಲಾರದ ಗುರುತುಗಳು ಆ ಮನೆಯ ಕೆಲವು ಹೆಂಗಸರಿಗೆ ಈಗಾಗಲೇ ಇದ್ದವು. ಮನೆಯ ಯಜಮಾನಿಯಾದಂಥ ಮುದುಕಿ ತನ್ನ ಐದಾರು ನೋವಿನ ಬರೆಗಳನ್ನು ಸೊಸೆಯರಿಗೆ ತೋರಿಸುತ್ತಾ ಮನೆಯ ಮಾನವನ್ನು ಗರುಡನ ದೃಷ್ಟಿಯಿಟ್ಟು ಕಾಯುತ್ತಿದ್ದಳು. ಮುದುಕಿಗೆ ಅವರಿಗೆ ಆಗಿಂದಾಗ್ಗೆ ಸತ್ಯವಾನ-ಸಾವಿತ್ರಿ ಕತೆ, ಸತಿ ಸಕ್ಕೂಬಾಯಿ ಕತೆ, ಗಂಡ ಸತ್ತ ಮೇಲೆ ತಾವು ಇದ್ದು ಏನು ಪ್ರಯೋಜನವೆಂದು ಆತ್ಮಹತ್ಯೆ ಮಾಡಿಕೊಂಡವರ ಕತೆ ಹೇಳುತ್ತಿದ್ದಳು.

ಮುದುಕಿ ಮನೆಯ ದೈಹಿಕ ಮರ್ಯಾದೆಯ ಜವಾಬ್ದಾರಿ ಹೊತ್ತಿದ್ದರೆ, ಮುದುಕ ಮಾವ ಮನೆಯ ಆಸ್ತಿಯ ಜವಾಬ್ದಾರಿ ಹೊತ್ತಿದ್ದ. ಮುದುಕ ತಾನು ಕೂಡುವ ಪಡಸಾಲೆಯ ಕಟ್ಟೆಯ ಹತ್ತಿರವೇ ಇದ್ದ ಕಪಾಟಿನೊಳಗಡೆ ಆ ಮನೆಯ ಸರ್ವಸ್ವವೂ ಎನ್ನಬಹುದಾದ ವಸ್ತುಗಳನ್ನಿಟ್ಟಿದ್ದ. ಅದಕ್ಕಾಗಿಯೇ ಆ ಪಡಸಾಲೆಯ ಕಟ್ಟೆ ಮನೆಯ ಅಧಿಕಾರದ ಕೇಂದ್ರವಾಗಿತ್ತು. ರಾಜನು ಸಿಂಹಾಸನದ ಮೇಲೆ ಕೂಡ್ರುವಂತೆ ಮುದುಕನು ತನ್ನ ಜಾಗೆಗೆ ಒಳ್ಳೇ ಠೀವಿಯಿಂದ ಬಂದು ಕುಳಿತುಕೊಳ್ಳುತ್ತಿದ್ದ. ಅಲ್ಲಿಯೇ ಮಲಗುತ್ತಿದ್ದ. ಆ ಕಪಾಟಿನೊಳಗಡೆ ಆ ಮನೆಯ ಮತ್ತು ಆ ಹಳ್ಳಿಯದೇ ಎನ್ನಬಹುದಾದ ಇತಿಹಾಸವಿತ್ತು. ಮುದುಕ ಹುಡುಗನಾಗಿದ್ದಾಗ ಅಪ್ಪನ ಜತೆ ನಿಂತಿದ್ದ ಫೋಟೋ, ಅವರ ಅಪ್ಪ ಕುದುರೆ ಮೇಲೆ ಹತ್ತಿದ್ದ ಫೋಟೋ, ಅವರ ದೊಡ್ಡಪ್ಪ ಸತ್ತಾಗಿನ-ಕೊನೆಗೂ ಅವನದೊಂದು ಫೋಟೋ ಇರಲಿ ಅಂತ ತೆಗೆಸಿದ್ದ-ಫೋಟೋ, ಮುದುಕನ ಮಕ್ಕಳ ಮದುವೇಲಿ ತೆಗೆದ ಫೋಟೋ-ಅದರಲ್ಲಿ ತಾಯವ್ವ ಇದ್ದಿರಲಿಲ್ಲ. ಆ ಫೋಟೋ ತೆಗೆಯುವಾಗ ಅವರ ದಿಬ್ಬಣ ಇನ್ನೂ ಬಂದಿರಲಿಲ್ಲ - ಹೀಗೆ ಕೆಲವೊಂದು ಫೋಟೋಗಳನ್ನು ಕಪಾಟಿನ ಮೇಲುಗಡೆಯ ಕ್ಯಾಣೆಯಲ್ಲಿಟ್ಟು ದೊಡ್ಡ ವ್ಯಕ್ತಿಗಳು ಬಂದಾಗ ಅವನ್ನು ತೋರಿಸಲಾಗುತ್ತಿತ್ತು. ಮನೆಯ ಮಂದಿಯೆಲ್ಲ ತಮ್ಮ ಮನೆಯಲ್ಲಿಯೂ ಹಿಂದೆ ಕುದುರೆಗಳಿದ್ದವು. ಬಂದೂಕುಗಳಿದ್ದವು ಎಂಬ ವೈಭವವನ್ನು ನೆನೆಸಿಕೊಂಡು ಪುನೀತರಾಗುತ್ತಿದ್ದರು. ಅವರ ಕಣ್ಣುಗಳಲ್ಲಿ ಆಗ ರಾಜಕುಮಾರರ ಮಿಂಚಿರುತ್ತಿತ್ತು. ಮನೆಯ ಹೊಲದ ಉತಾರ, ಹಪ್ತೆ ತುಂಬಿದ ರಸೀತಿ. ಮನೆಯ ಕರ ತುಂಬಿದ ಪಂಚಾಯತಿ ಚೀಟಿ, ಸೊಸಾಯಿಟಿಗೆ ತುಂಬಬೇಕಾಗಿದ್ದ ಸಾಲದ ನೋಟೀಸುಗಳು, ಊರಗೌಡನ ಮಗಳ ಮದುವೆ ಸಂದರ್ಭದಲ್ಲಿ ಛಾಪಿಸಿದ್ದ ಬಂಗಾರದ ಅಕ್ಷರದ ಲಗ್ನಪತ್ರ ಹೀಗೆ ಹತ್ತು ಹಲವಾರು. ವಿವಿಧ ನಮೂನೆಯ ವಸ್ತುಗಳ ಸಂಗ್ರಹಾಲಯವಾಗಿದ್ದ ಆ ಕಪಾಟು ನೆನಪುಗಳನ್ನು ತನ್ನ ಮಿದುಳಿನಲ್ಲಿ ಹಿಡಿದುಕೊಂಡಿತ್ತು. ಆದರೆ ಬೇಕೆಂದ ಸಾಮಾನುಗಳು ಒಮ್ಮೆಗೇ ಸಿಗುತ್ತಿರಲಿಲ್ಲ. ಹೋದ ವರ್ಷದ ಹೊಲದ ಹಪ್ತೆ ಚೀಟಿ ಹುಡುಕುವಾಗ ಬ್ರಿಟಿಷ್‌ರ ಕಾಲದ ರಸೀತಿಗಳು ಕೈಗೆ

ಬರುತ್ತಿದ್ದವು. ಹಾಗಾಗಿ ಅವುಗಳನ್ನು ಹುಡುಕುವುದು ಕೂಡ ಒಂದು ದೊಡ್ಡ ಸಂಶೋಧನೆಯಾದಂತಾಗಿತ್ತು. ಮುದುಕ ಈ ಕಾಲದ ಕುದುರೆಯ ಕಡಿವಾಣ ಹಿಡಿದುಕೊಂಡು ಪ್ರಾಚೀನ ಇತಿಹಾಸದ ಪರಿವೀಕ್ಷಕನಾಗಿದ್ದ. ಅವನು ತಪ್ಪು ಹೇಳಿದಾಗಲೂ, ಅಥವಾ ಅದು ತಪ್ಪೇ ಇದ್ದಾಗಲೂ ಅದನ್ನು ಯಾರೂ ಎದುರಿಸುವ ಗೋಜಿಗೆ ಹೋಗುತ್ತಿರಲಿಲ್ಲ. ಮನೆಯ ಆತಿಥ್ಯದ ಕೆಲವು ಸಾಮಾನುಗಳು ಕೂಡ ಮುದುಕನ ಆಡಳಿತದಲ್ಲಿ ಬರುತ್ತಿದ್ದವು.

ಅವಲಕ್ಕಿ, ಗೋಧಿ, ರವಾ, ಬೆಲ್ಲ, ಸಕ್ಕರಿ, ಚಹಾಪುಡಿ, ಪಾರ್ಲೆ ಬಿಸ್ಕೀಟು, ವಾಷಿಂಗ್ ಪೌಡರ್, ಮೈಗೆ ಹಚ್ಚಿಕೊಳ್ಳುವ ಸಾಬೂನು, ನೆಗಡಿ ಉಪಶಮನದ ಬಿಳಿ ಪೌಡರ್ ಚೀಟಿ- ಇಂತಹ ಸಾಮಾನುಗಳನ್ನು ಅಜ್ಜ ಅಗತ್ಯಕ್ಕೆ ತಕ್ಕಂತೆ ತೆಗೆದುಕೊಡುತ್ತಿದ್ದ. ಊರಿನಿಂದ ಯಾರಾದರೂ ಅತಿಥಿಗಳು ಬಂದಾಗ ಮಾತ್ರ ಅವಲಕ್ಕಿ, ಉಪ್ಪಿಟ್ಟಿನಂತಹ ತಿನಿಸು ಮಾಡಿ ಸಕ್ಕರೆ ಚಹಾ - ಕೊಡುವ ಪದ್ಧತಿ ಇತ್ತು. ಊರಿನ ಹಿರಿಯರಾದ ಬಸವಂತಪ್ಪ, ಸಂಗಪ್ಪ, ರಡ್ಡೇರ ಗೋವಿಂದ, ಶೆಟ್ಟರ ಶಿವಪುತ್ರಪ್ಪ ಮುಂತಾದವರು ಬಂದಾಗ ಎರಡೆರಡು ಪಾರ್ಲೆ ಬಿಸ್ಕೀಟು ಮತ್ತು ಮೂರ್ನಾಲ್ಕು ಅಂಶ ಸಕ್ಕರೆ - ಒಂದ್ನಾಲ್ಕು ಅಂಶ ಬೆಲ್ಲ ಕೂಡಿಸಿದ ಚಹಾ ಕೊಡಲಾಗುತ್ತಿತ್ತು. ಹೀಗೆ ಕಪಾಟಿನೊಳಗಿನ ಸಾಮಾನುಗಳನ್ನು ಒಮ್ಮೊಮ್ಮೆ ಬಂದ ಜನರೆದುರೇ ತೆಗೆದುಕೊಳ್ಳಬೇಕಾಗುತ್ತಿತ್ತು. ಇಂತಹ ವೇಳೆಯಲ್ಲಿ ಮುದುಕಿ ಬಂದವರ ಎದುರು ಜೋರಾಗಿ ಧ್ವನಿ ಮಾಡಲು ಅಸಹಾಯಕಳಾಗಿ ಮುದುಕನ ಕಿವಿಯಲ್ಲಿ ಸಾವಕಾಶ ಹೇಳುತ್ತಿದ್ದಳು. ಆಗ ಮುದುಕ - ಮುದುಕಿಯರ ಗಲ್ಲ, ಮೂಗು, ಬಾಯಿ, ತಲೆಗಳು ಸ್ಪರ್ಶಿಸಿ ಒಬ್ಬರಿಗೊಬ್ಬರು ಮುತ್ತು ಕೊಡುತ್ತಿರುವ ಪ್ರೇಮಿಗಳಂತೆ ಕಾಣುತ್ತಿದ್ದರು. ಅಡುಗೆ ಮನೆಯಲ್ಲಿ ಕುಳಿತು ಇದನ್ನು ನೋಡುತ್ತಿರುವ ಸೊಸೆಯಂದಿರು ಒಬ್ಬರಿಗೊಬ್ಬರು ತಿವಿದು ಸೆರಗು ಮುಚ್ಚಿಕೊಂಡು ಕಿಸಿಕಿಸಿ ನಗುತ್ತಿದ್ದರು. ಹಿರಿಸೊಸೆ ಸಣ್ಣಧ್ವನಿಯಲ್ಲಿ 'ಈ ಮುದುಕೀದು ಬರೀ ಇಷ್ಟs ಆತು. ಮುದುಕಗ ಮೊದಲು ಇಬ್ಬರು ಹೆಂಡ್ರು ಇದ್ರು. ಇದನ್ನs ಹೀಂಗs ಬೇಕಾಬಿಟ್ಟಿ ಮಾಡಿಕೊಂಡ. ಅವರಿಬ್ಬರೂ ಸಾಯಲಿಲ್ಲಂದ್ರ ಈಕಿ ಎಲ್ಲಿ ಇರತಿದ್ಲೋ ಏನೋ.....' ಸೊಸೆಯ ಮಾತು ಪೂರ್ಣ ಮುಗಿಯುವುದರೊಳಗಾಗಿ ಮುದುಕಿ ಬಂದು ರಮ್ಯ ಕತೆಯನ್ನು ಅರ್ಧದಲ್ಲೇ ಕತ್ತರಿಸುತ್ತಾಳೆ. 'ತಗೋರಿ ಅರ್ಧ ತಿಂದು ಅರ್ಧ ಹಾಕಬ್ಯಾಡ್ರಿ ಬೋಗುಣ್ಯಾಗ' ಎಂದು ಉಡಿಯಿಂದ ಬೆಲ್ಲ, ಚಹಾಪುಡಿ ಮರದಲ್ಲಿ ಸುರುವುತ್ತಾಳೆ. ಪೀಕಜಾಲಿ ಮುಳ್ಳಿನ ಉರಿಗೆ ಒಲೆಯ ಬೋಗುಣಿಯಲ್ಲಿನ ನೀರು ಚಳ್ಳ - ಚಳ್ಳ ಅಂತ ಕುದಿಯುತ್ತದೆ. ಅದಕ್ಕೆ ಬೆಲ್ಲ - ಚಹಾಪುಡಿ ಹಾಕುವಾಗ ತಾಯವ್ವ ಮರದಲ್ಲಿ ಕೈಹಾಕಿ ಒಂಚೂರು ಬೆಲ್ಲ ಚಿವುಟುತ್ತಾಳೆ. ಬೆಲ್ಲಕ್ಕೆ ಹತ್ತಿದ ಚಾಪುಡಿಯನ್ನು ಸೀರೆಗೆ ಒರೆಸಿ ಬಾಯಿಗೆ ಹಾಕಿಕೊಳ್ಳುತ್ತಾಳೆ. ಅವಳ ತೊಡೆ ಮೇಲೆ ಕುಂತಿರುವ ಹುಡುಗ ನನಗೂ ಬೆಲ್ಲ ಅಂತ ಅಳಲು ಪ್ರಾರಂಭಿಸಿದೊಡನೆ 'ಇದರದೊಂದು ಕಾಟ' ಎಂದು ಬೈಯುತ್ತ ಜೊಲ್ಲು ಸೋರುತ್ತಿರುವ ಹಳಕು ಬೆಲ್ಲವನ್ನು ಅದರ ಬಾಯಿಗಿಡುತ್ತಾಳೆ. ಬೆಲ್ಲದ ರುಚಿ ಅವಳ ಗಂಟಲಲ್ಲಿ ಇಳಿಯುತ್ತಿರುವಂತೆ ಅವಳ ಮೈಯೆಲ್ಲ

ಹೂವಾಗಿ ತೇಲಿದಂತಾಗುತ್ತದೆ. ಬೆಲ್ಲವೆಂದರೆ, ಬೆಲ್ಲದ ಶೇಂಗಾ ಉಂಡಿಯೆಂದರೆ ಅವಳಿಗೆ ಪ್ರಾಣ. ಅಂತಹ ಸಿಹಿ ಅವಳ ಬದುಕನ್ನೆಲ್ಲ ಕಹಿಯಾಗಿಸುತ್ತದೆಂದು ಅವಳೇನೂ ಕನಸು ಕಂಡಿರಲಿಲ್ಲ.

❖ ❖ ❖

ತಾಯವ್ವ ಸಿಹಿಯ ಸುಖಕ್ಕಾಗಿ ಏನೆಲ್ಲವನ್ನೂ ಕಳೆದುಕೊಂಡಳು. ತಾಯವ್ವನಿಗೆ ತನ್ನ ಅಕ್ಕನಂತೆ ತಾನೂ ಸಾಲಿಗೆ ಹೋಗಬೇಕೆಂದು ಒಳಗಿಂದೊಳಗೆ ಅನಿಸಿದರೂ ಅಪ್ಪ - ಅವ್ವರ ಮಾತಿಗೆ ಕಟ್ಟುಬಿದ್ದು ಅವ್ವನಂತೆ ಹೊಲಕ್ಕೆ ದುಡಿಯಲು ಹೊರಟಳು. ಅಕ್ಕ 'ಏ ತಾಯಿ ಸಾಲಿಯೊಳಗೆ ಏನಿಲ್ಲ ಬಿಡು. ಅಲ್ಲಿ ಸಾಲಿ ಸಾರಿಸುವುದು, ಮಾಸ್ತರರ ಮನೆಗೆ ಹೋಗಿ ಕಸ ಹೊಡೆದು, ಅವರ ಮನೆ ಪಾತ್ರೆಗಳನ್ನು ತೊಳೆದು, ಕಾಯಿಪಲ್ಲೆ ಹೆಚ್ಚಿ, ರೇಷನ್ ಅಂಗಡಿಗೆ ಹೋಗಿ ಕ್ಯೂ ನಿಂತು ಸಾಮಾನು ತಂದುಕೊಟ್ಟು ಬರಬೇಕಂದ್ರ ಈ ಸಾಲಿ ಯಾರಿಗೆ ಬೇಕಾಗೇತಿ' ಅಂತ ಅನ್ನುವಾಗ ತಾಯಿಗೆ ಮನೆಯೇ ವಾಸಿಯೇನೋ ಅಂತ ಜಂತಿ ನೋಡುತ್ತ ನಿದ್ದೆಯ ಲೋಕದಲ್ಲಿ ಸರಿದುಬಿಡುತ್ತಿದ್ದಳು. ಅವಳ ಅಣ್ಣನದು ಕೂಡ ಅವರ ಮನೆಗೆ ಹೊಸದೇ ಅನ್ನಬಹುದಾದ ವ್ಯಕ್ತಿತ್ವ. ತನ್ನ ಗೆಳೆಯರನ್ನು ಹೊಡೆಯುವುದು, ಮಾಸ್ತರರ ದುಡ್ಡು ಕದಿಯುವುದು, ಬೀಡಿ ಸಿಗರೇಟು ಸೇದಲು ಹೇಳಿಕೊಡುವುದು, ಕುರ್ಚಿಯ ಮೇಲೆ ಮುಳ್ಳು ಇಡುವುದು ಮಾಡಿ ಮಾಸ್ತರರ ದೂರದೃಷ್ಟಿಯಲ್ಲಿ ಮುಂದೆ ದೊಡ್ಡ ದರೋಡೆಕಾರನಾಗುವನೆಂಬ ಖ್ಯಾತಿಯನ್ನು ಪಡೆದುಕೊಂಡಿದ್ದ. ಆದರೆ ಮುಂದೆ ಅವನು ಹಾಗಾಗದೇ ಮನೆಯಲ್ಲಿ ಬಿಟ್ಟಿ ಊಟ ಮಾಡಿ, ಊರ ಬಸ್‌ಸ್ಟ್ಯಾಂಡಿನಲ್ಲಿ ಇಸ್ಪೀಟು ಆಡುವವರನ್ನು ನೋಡುತ್ತ, ಅವರು ಚಾ - ಚುರಮರಿಗೆ ಎದ್ದು ಹೋಗುವಾಗ ಅವರ ಹಿಂದೆ ಹೋಗುತ್ತ ರಾಜಕಾರಣಿಗಳ - ಸಾಹುಕಾರರ - ತಹಶೀಲ್ದಾರರ ಕಾರು - ಜೀಪುಗಳು ಬಂದರೆ ಅವುಗಳನ್ನು ನೋಡುತ್ತ ತಾಸುಗಟ್ಟಲೇ ನಿಂತುಬಿಡುತ್ತಿದ್ದ. ಮನೆಯಲ್ಲಿ ಅಪ್ಪ, ಅವ್ವರು ಬೈಯ್ದು ಕೂಡಲೇ ಅವರು ತಿರುಗಿ ಅನ್ನದ ರೀತಿಯಲ್ಲಿ ಬೈಯ್ದು ಕೊನೆಗೆ ತನ್ನನ್ನು ಹುಟ್ಟಿಸಿದ್ದೇಕೆ ಎಂಬ ಮೂಲಭೂತ ಪ್ರಶ್ನೆ ಕೇಳತೊಡಗಿದನು. ತಾಯವ್ವ ಮಾತ್ರ ಕೆಟ್ಟ ಕಾಲವನ್ನು ಶಪಿಸುತ್ತ ಒಳ್ಳೆಯ ದಿನಕ್ಕಾಗಿ, ಅಣ್ಣನ ಬುದ್ಧಿಗಾಗಿ, ಅವ್ವನ ಆರೋಗ್ಯಕ್ಕಾಗಿ ಮತ್ತು ತನಗೊಂದು ಒಳ್ಳೆಯ ಗಂಡನಿಗಾಗಿ ಊರ ಹೆಣ್ಣು ದೇವರುಗಳಾದ ದ್ಯಾಮವ್ವ, ದುರ್ಗವ್ವರಿಗೆ ಬೇಡಿಕೊಳ್ಳುತ್ತಿದ್ದಳು. ಸಾಯಬೇಕೆನ್ನುವ ಮನಸ್ಸನ್ನು ತಡೆಯುತ್ತಿದ್ದಳು.

❖ ❖ ❖

ಈಗಲೂ ಅವಳಿಗೆ ಜೀವವನ್ನು ಕಳೆದುಕೊಳ್ಳಬೇಕೆನಿಸಿತ್ತು. ಬಾವಿಗೆ ಹಾರಬೇಕು, ರಕ್ತದಿಂದ ಕೆಂಪಾದ ನೀರಿನಲ್ಲಿ ಒದ್ದಾಡುವಾಗ ಚೀರದಂತೆ ಬಾಯಿ ಬಿಗಿ ಹಿಡಿದುಕೊಳ್ಳಬೇಕು, ಹತ್ತಿಯ ವಿಷದ ಔಷಧಿಯನ್ನು ಕುಡಿದು ಹೊಲದಲ್ಲಿಯೇ ಭೂಮಿತಾಯಿಯ ಮುಂದೆ ತನ್ನ

ಶಾಪ ಹೇಳುತ್ತ ಬೀಳಬೇಕು ಅಥವಾ ದನಕಟ್ಟುವ ಮನೆಗೆ ಹೋಗಿ ಮಧ್ಯಾಹ್ನದ ಉರಿಬಿಸಿಲಿನ ರಭಸ ಬಡಿಯುವ ಮಾಳಿಗೆಯ ಜಂತಿಗೆ ಉರುಲು ಹಾಕಿಕೊಳ್ಳಬೇಕು, ಹಗ್ಗದ ಹಿಡಿತದ ನರಕದಲ್ಲಿ ಉಸಿರು ಬಿಡುವಾಗ ತನ್ನ ಆಸೆಗೆ, ತನ್ನ ಬದುಕಿನ ನಸೀಬಕ್ಕೆ ಕ್ಷಮೆ ಇರಲಿ ಎನ್ನಬೇಕು. ಅವಳು ಯಾವುದನ್ನೂ ಮಾಡಲಿಲ್ಲ. ಅವಳು ಸಾಯಲಿಲ್ಲ. ಅದು ಯಾವ ಬದುಕಿನ ಹಂಗು ? ಅವಳ ದೇಹವನ್ನು ಸುತ್ತಿಕೊಂಡ ಮೋಹ ಯಾವುದು ?

ತಾಯವ್ವ ಕನಸಿನಲ್ಲಿ ಹಾಡುತ್ತಿದ್ದಳು : ಹಾವು ತುಳಿದೇನ ಮಾನಿನಿ ಹಾವು ತುಳಿದೇನ. ಅವಳು ನೀರು ತುಂಬಿಕೊಂಡು ಇನ್ನೇನು ಕೊಡ ಹೊತ್ತುಕೊಳ್ಳಬೇಕೆನ್ನುವಾಗ ತಲೆಯ ಮೇಲಿನ ಸಿಂಬೆ ಹಾವಾಗಿ ಹರಿದು ಮೈಯನ್ನೆಲ್ಲ ಸುತ್ತಿಕೊಳ್ಳುವ ಕನಸು. ಒದ್ದೆ ಮೈಯಲ್ಲಿ ಬಿಸಿ ನಿಟ್ಟುಸಿರು ಹೊರಬರುವ ಕನಸು. ಅಹಲ್ಯೆಯ ಗಂಡನಿಗೆ ಅಹಲ್ಯೆಯ ತಪ್ಪು ಮಾತ್ರ ಕಂಡಿತು. ಆದರೆ ಇಂದ್ರನ ಮೋಸ ಗೊತ್ತಾಗಲಿಲ್ಲ. ಜಮದಗ್ನಿಗೆ ರೇಣುಕೆಯ ಮನಸ್ಸಿನ ಉದ್ವಿಗ್ನತೆ ಕಂಡಿತೆ ಹೊರತು ಅವಳನ್ನು ಸುತ್ತುವರಿದಿದ್ದ ಮೋಹದ ಜಗತ್ತು ಕಾಣಲಿಲ್ಲ. ಕತ್ತಲಲ್ಲಿ ಬಂದು ಸುತ್ತಿಕೊಳ್ಳುವ ಸರ್ಪದ ಹಿಡಿತ ಎಷ್ಟು ಜನಕ್ಕೆ ಗೊತ್ತಾಗುತ್ತದೆ. ಎಷ್ಟು ಜನ ಅದನ್ನು ತಡೆಯುವ ಶಕ್ತಿ ಹೊಂದಿದ್ದಾರೆ. ಶರೀಫರು ಸಂಸಾರದ ಅರ್ಥ ತಿಳಿದ ಮೇಲೆಯೇ ಮೋಕ್ಷದ ಹಾಡು ಹಾಡತೊಡಗಿದರು. ಶರೀಫರ ಗುರು ಸುರೆ ಕುಡಿದರೂ ಲೌಕಿಕ ಮತ್ತಿನಿಂದ ಎಷ್ಟೋ ದೂರವಿದ್ದರು. ತಾಯವ್ವನಿಗೆ ಏನೇನೋ ಯೋಚನೆ. ಮನಸ್ಸಿನಲ್ಲಿ ಕೊಳೆಯನ್ನಿಟ್ಟುಕೊಂಡು ಮುಖದಲ್ಲಿ ಮಲ್ಲಿಗೆಯ ಶುಭ್ರತೆ ತೋರುವುದು ಲಂಪಟತನ..... ಹಾವು ತುಳಿಯುತ್ತೇನೆ ಎನ್ನುವ ಭಯ. ಗಂಡನ ಅಲಕ್ಷ್ಯತನ. ಗಂಡನ ತಂಗಿಯ ಗಂಡ ಸಿಹಿ ಕೊಡುತ್ತ ಕೈಚಾಚುತ್ತಾನೆ. ಹೊಳೆಯಲ್ಲಿ ಕಾರ್ತವೀರ್ಯಾರ್ಜುನನನ್ನು ತೋರಿಸುತ್ತಾನೆ. ಇಂದ್ರನ ಸೊಬಗು ಹೇಳುತ್ತಾನೆ. ಕಾಮನಂತೆ ಮೈ ಕುಣಿಸುತ್ತಾನೆ. ಎಲ್ಲ ಹಂಗು ತೊರೆ ಎನ್ನುತ್ತಾನೆ. ಹರೆಯದ ಮೈಯೊಳಗೆ ಸಿಟ್ಟ್ಯಾಕ, ಸೆಡುವ್ಯಾಕ, ಅಳುಕ್ಯಾಕ ಬಾರೇ.... ತಾಯವ್ವ ರೊಂಯ್ಯನೆ ಅತ್ತಳು. ದುಃಖಿಸಿ ದುಃಖಿಸಿ ಅತ್ತಳು. ಕೌದಿಯನ್ನು ಬಾಯಿಗೆ ತುರುಕಿಕೊಂಡು ಕಣ್ಣೀರು ರಾತ್ರಿಯೆಲ್ಲ ಹರಿಸಿದಳು. ಕನಸಿನಂತೆ ಇದ್ದದ್ದು ಎಲ್ಲ ಖರೇವು ಹೇಗಾಯಿತು !

❖ ❖ ❖

ಕನಸನ್ನು ಕನಸಿನಂತೆ ಯಾಕೆ ಇಡಲಾಗಲಿಲ್ಲ ! ಯಾಕೆ ಅದಕ್ಕೆ ಅರ್ಥ ಹಚ್ಚಲು ಹೋದೆ ! ಅದೂ ಎಲ್ಲ ಸಂಸಾರದ ಅರ್ಥ ತಿಳಿದ ಮೇಲೆ. ಮನೆಯ ಪರಿಸ್ಥಿತಿಯನ್ನು ತಿಳಿದ ಮೇಲೆ. ಮೂರು ಮಕ್ಕಳಾದ ಮೇಲೆ.

ಗಂಡನ ಮೇಲೆ ಸೇಡು ! ಆದರೆ ಸೇಡನ್ನು ಯಾರು ತೀರಿಸಿಕೊಂಡರು ? ತಾನು ಅವರ ಮೇಲೋ ಇಲ್ಲವೇ ಅವರು ನನ್ನ ಮೇಲೋ. ಮೊದಲಿಗೆ ತಾಯವ್ವನಿಗೆ ಅನಿಸುತ್ತಿತ್ತು. ಇಷ್ಟು

ಹೊಲ ಇದ್ದು, ಇಷ್ಟು ಮನೆ ಇದ್ದು ಯಾಕೆ ಈ ಮನೆ ನರಕವಾಗಿದೆ. ಯಾಕೆ ಇಲ್ಲಿ ಪ್ರೀತಿಯನ್ನು ಕತ್ತಲಲ್ಲಿ ಮಾತ್ರ ಅರಸುತ್ತಾರೆ. ಯಾಕೆ ಹಳ್ಳಿಯ ಈ ಕತ್ತಲೆಯ ಸಣ್ಣ ಕೋಣೆಯೊಳಗೆ ಪ್ರೀತಿ ಕಾಮದ ಹಿಡಿತದಲ್ಲಿ ಕರಗುತ್ತದೆ. ಗಂಡ ಮನೆಗೆ ಬಂದಾಗ ರಾತ್ರಿ ಅರ್ಧ ಸರಿದಿರುತ್ತಿತ್ತು. ಏನೋ ಸೆರೆಯಂಥ, ಗಾಂಜಾದಂಥ ವಾಸನೆ. ಮುತ್ತು ಕೊಡಬೇಕೆಂದರೆ ಅವನು ಅವಳನ್ನು ದೂಡಿ ಕೆಡವುತ್ತಿದ್ದ. ರೊಪ್ಪನೆ ಮೈಮೇಲೆ ಬೀಳುತ್ತಿದ್ದ. ಅವಳು ಅಯ್ಯೋ ಎಂದು ಚೀರಿ ಸತ್ತವರಂತೆ ಬಿದ್ದಿರುತ್ತಿದ್ದಳು. ಆ ಬಾಯಿಗೆ ಪಡಸಾಲೆಯಲ್ಲಿ ಮಲಗಿಕೊಂಡಿರುತ್ತಿದ್ದ ಅತ್ತೆ ಮುದುಕಿ 'ಏಯ್ ಸುಮ್ಮನ ಮಲಕ್ಕೋರ. ಇಲ್ಲಾದ್ರ ಮದುವಿ ಯಾಕ್ ಆದಿ' ಎಂದು ವಟಗುಟ್ಟುತ್ತಿದ್ದಳು. ಮತ್ತು ಮುಂಜಾನೆ ಅದನ್ನೇ ದೊಡ್ಡ ವಿಷಯವನ್ನಾಗಿ ಮಾಡಿ ಓಣಿಗೆಲ್ಲ ತಿಳಿಯುವಂತೆ ಜಾಹೀರು ಮಾಡುತ್ತಿದ್ದಳು. ತಾನು ಅಕ್ಕನ ಮನೆಗೆ ಹೋದಾಗ ಒಮ್ಮೆ ನೋಡಿದ ಸಿನಿಮಾದಂತೆ ಎಲ್ಲ ಸುಸೂತ್ರವಾಗಿ ಮುಗಿಯುತ್ತದೆ ಎಂಬ ಭರವಸೆಯನ್ನು ಮಾತ್ರ ಕಳೆದುಕೊಳ್ಳದೇ ಕನಸು ಹೆಣೆಯುತ್ತಿದ್ದಳು. ಅಕ್ಕ ಅನ್ನುತ್ತಿದ್ದಳು - 'ನಿನಗೆ ಎಷ್ಟೊಂದು ದೊಡ್ಡ ಮನೆತನ ಅದ. ಹೊಲ, ಮನಿ, ಎತ್ತು, ಕೂರಿಗಿ, ಕಾಳು ಕಡಿ, ಎಷ್ಟೊಂದು ಪುಣ್ಯ ಮಾಡಿರಬೇಕು ! ನಾವು ಬಡವರು ಈ ಮನಿತನ ಪಡೀಲಿಕ್ಕೆ'. ಹೌದು, ಎಷ್ಟೊಂದು ಹೊಲ ಎಷ್ಟೊಂದು ಮನಿ. ಆದರೂ ಗೆಬರುತ್ತ, ಕಡಿದಾಡುತ್ತ ತಿನ್ನಬೇಕು. ಪ್ರೀತಿ ಉಕ್ಕುವಂತಹ ನಗೆಗಾಗಿ, ಅಂತಹ ಮಾತಿಗಾಗಿ ಮರ್ಯಾದೆ ಕಳೆದುಕೊಳ್ಳಬೇಕು. ಮನೆಯಲ್ಲಿ ಹೆಂಡತಿ ಇದ್ದರೂ ಗಂಡ ಜೀತದಾಳಿನ ಹೆಂಡತಿಗಾಗಿ ಹೊಲದ ಜೋಳ, ಗೋಧಿ ಕೊಟ್ಟು ಅಣ್ಣ-ತಮ್ಮಂದಿರ ಜತೆ ಹೊಡೆದಾಡಬೇಕು. ಹೊಟ್ಟೆಯ ಕೂಳು ಮತ್ತು ಸೆರೆಗಾಗಿ ಆಳುಗಳು ಅವಮಾನ, ಸ್ವಾಭಿಮಾನಗಳನ್ನು ಬಿಟ್ಟು ಬರಬೇಕು. ತಾನು ಕಣ್ಣೀರು ಹಾಕಿ ಗಂಡನ ಕತೆ ಹೇಳುವಾಗ, ಮುದುಕಿ ಅನ್ನುತ್ತಿದ್ದಳು : 'ಅವನೇನು ಗಂಡಸು. ಬೇಕಾದ್ದ ಮಾಡ್ತಾನ'. ಅಂತಹದರಲ್ಲಿಯೇ ಊರಲ್ಲಿ ಹೊಟೇಲು ಇಟ್ಟುಕೊಂಡಿದ್ದ ನಾದಿನಿಯ ಗಂಡ ಕನಸು ಹೆಣೆಯುತ್ತಿದ್ದ.

❖ ❖ ❖

ಎಷ್ಟೊಂದು ಬಲದಿಂದ, ಎಷ್ಟೊಂದು ದೈನ್ಯದಿಂದ ಅವಳು ಅವನನ್ನು ತಡೆದಿದ್ದಳು. ಎಷ್ಟೊದು ಪರಿಶ್ರಮದಿಂದ ಮೋಹಕ್ಕೆ ಅಡ್ಡನಿಂತಿದ್ದಳು. ಹೇಳಲುಹೋದರೆ ಯಾರದು ಗೈರಾಗುತ್ತದೆ. ಯಾರ ಮನೆಯ ಮರ್ಯಾದೆ ಹೋಗುತ್ತದೆ. ತನ್ನ ದೈವವೇ ಹಾಗಿದೆಯೆಂದು, ತನ್ನ ನಸೀಬವೇ ಹಾಗಿದೆಯೆಂದು ತಿಳಿದು ಸುಮ್ಮನಿದ್ದರಾಯಿತು ಎಂದುಕೊಂಡಳು.

ಆದರೆ ಮನೆಮಂದಿ ಅವಳ ಮುಖಕ್ಕೆ ಮಸಿ ಹಚ್ಚಿ, ಓಣಿಯ ಜನರೆದುರು ದರದರ ಎಳೆದರು.

ತಾಯವ್ವ 'ಅಯ್ಯೋ' ಎಂದು ಚೀರಿದಳು. ಎದೆಯನ್ನು ದಬದಬ ಅಂತ ಅದು ಒಡೆದುಹೋಗುವಂತೆ ಬಡಿದುಕೊಂಡಳು. ಅಲ್ಲಿಗೆ ಮುಖ ಗೀಚಿದಳು. ನೆಲಕ್ಕೆ ಬಿದ್ದು ಮಣ್ಣು ಗೆಬರಿದಳು.

ಅವಳ ಮನಸ್ಸು ಅವಳ ಕಷ್ಟ ನೋಡಲಾರದೆ ಆಕಾಶಕ್ಕೆ ಹೋಗಿ ಏಸು ಪ್ರಭುವಿನಲ್ಲಿ ಮೊರೆಯಿಟ್ಟಿತು. ಯಾರು ಪಾಪವನ್ನು ಮಾಡಿಲ್ಲವೋ ಇಲ್ಲವೇ ಯಾರಿಗೆ ಪುಣ್ಯದ ಹೊರತು ಪಾಪದ ಯೋಚನೆಯೇ ಬಂದಿಲ್ಲವೋ ಅಂತಹವರು ಮಾತ್ರ ಅವಳನ್ನು ಹೊಡೆಯಲು, ಅವಳಿಗೆ ಬುದ್ಧಿ ಹೇಳಲು ಯೋಗ್ಯರು ಎಂದು ಆಕಾಶದಲ್ಲಿ ಧ್ವನಿಯಾಯಿತು. ಆದರೆ ತಮಗೆ ಆ ಭಾಷೆ ಅರ್ಥವಾಗಲಿಲ್ಲವೆಂದು ಕೆಲವರು, ತಮಗೆ ಬೇಕಾದ ಮಾತುಗಳು ಅಲ್ಲಿ ಬರಲಿಲ್ಲವೆಂದು ಕೆಲವರು, ತಾವು ಹಾಗೆ ಕೇಳಿಸಿಕೊಂಡಿದ್ದು ನಿಜವೋ, ಸುಳ್ಳೋ ಎಂದು ಪರೀಕ್ಷೆ ಮಾಡುವುದಾಗಿ ಇನ್ನು ಕೆಲವರು ಹೇಳಿದ್ದರಿಂದ ಮನಸ್ಸು ಹೋಗಿ ಮತ್ತೆ ಅವಳ ದೇಹದಲ್ಲಿ ಸೇರ್ಪಡೆಯಾಯಿತು.

ನಾಲ್ಕು ಮಂದಿ ಕೂಡಿ ಅವಳನ್ನು ಅವಳ ಅಪ್ಪನ ಹತ್ತಿರ ಕರೆದೊಯ್ದರು. ಅವನು ಏನು ಹೇಳಬೇಕು ? 'ಬಾ ತಾಯಿ' ಎಂದು ಮನೆಯ ಒಳಗೆ ಕರೆದ. ಕಟಕಟ ಹಲ್ಲು ಕಡಿದು ಕಣ್ಣಿನಿಂದ ಬೆಂಕಿ ಉಗುಳುವವನಂತೆ ಅವಳನ್ನು ನೋಡಿದ. ಜೋರಾಗಿ ಕೈಬೀಸಿ ಕಪಾಳಕ್ಕೆ ಹೊಡೆದ. ಅವಳು ನೋವಿಗೆ 'ಯಪ್ಪಾ', ಅಂತ ಬಾಯಿ ತೆಗೆದಾಗ ಅವಳ ಹಲ್ಲಿನಗುಂಟ ರಕ್ತ ಸುರಿಯುತ್ತಿತ್ತು. 'ತಾಯಿ' ಅಂತ ಮರುಕ್ಷಣ ಅವಳ ಕಣ್ಣೀರು ಒರೆಸತೊಡಗಿದ.

ಒಂದು ದಿನ ಚೆಂದ ಆಯಿತು. ಎರಡು ದಿನ ಚೆಂದ ಆಯಿತು. ಮೂರನೆಯ ದಿನ ಆ ಚೆಂದ ಇರಲಿಲ್ಲ. ಜನ ಎಲ್ಲಿ ಆದರೂ ಕೆಟ್ಟವರೆ ಇರುತ್ತಾರೆ ಎನಿಸಿತು ಅವಳಿಗೆ. ಎರಡು ವರ್ಷಗಳು ಎಷ್ಟೋ ವರ್ಷಗಳಂತೆ ಕಂಡವು. ಅವಳು ಅಲ್ಲಿ ಸಾಯಬಾರದೆಂದು ಇಲ್ಲಿ ಬಂದಿದ್ದಳು ಅಥವಾ ಅವಳು ಇಲ್ಲೇ ಸಾಯಲಿ ಎಂದು ಅಲ್ಲಿಯವರು ಬಿಟ್ಟಿರಬೇಕು. ತಾಯವ್ವ ಅಪ್ಪನಿಗೆ ಅಂದಳು : 'ನಡೀ ಅಪ್ಪ, ನಾನು ಅಲ್ಲೇ ಸಾಯ್ತೀನಿ. ಕೊಲ್ಲುವ ಮನಸ್ಸಿದ್ದವರು ನನ್ನನ್ನು ಕೊಲ್ಲಲಿ'.

ಮಧ್ಯಾಹ್ನದ ಹೊತ್ತು. ಅಪ್ಪ ಬಂದು ಮುದುಕನ ಕಾಲಿಗೆ ಬಿದ್ದ. ತಾಯವ್ವ ಹೊರಗೆ ಅಂಗಳದಲ್ಲಿ ಕೂತಿದ್ದಳು. ಜನ ಪಿಕಿ ಪಿಕಿ ನೋಡುತ್ತಿದ್ದರು. ಅಪ್ಪನ ಮಾತು ಕೇಳುತ್ತಿದ್ದವು. 'ಈಕಿ ನಿಮ್ಮ ಸೊಸಿ ಅಲ್ಲ. ಮನಿ ಆಳು ಅಂತ ತಿಳ್ಕೊಳ್ರಿ. ನಮ್ಮ ತಪ್ಪು ಹೊಟ್ಟ್ಯಾಗ ಹಾಕ್ಕೊಳ್ರಿ'.

ಮನೆಯ ಆಳೊಬ್ಬ ಬಿಟ್ಟುಹೋಗಿದ್ದ. ಮುದುಕನಿಗೆ ಕರುಣೆ ಬಂದಿತೋ ಅಥವಾ ಒಳ್ಳೆಯ ವಿಚಾರ ಹೊಳೆಯಿತೋ ಸ್ವಲ್ಪ ಹೊತ್ತು ಸುಮ್ಮನಿದ್ದು ಅಂದ : 'ದನದ ಕಟ್ಟೀ ಬಿಟ್ಟು ಆಕಿ ಮ್ಯಾಲ ಏರಬಾರದು'. ಅಪ್ಪ ಹೊರಟು ಹೋದ.

ಅವಳಿಗೆ ಇಲ್ಲಿಗೆ ಬಂದ ಮೇಲೆ ಬರಬಾರದಾಗಿತ್ತು ಎನಿಸಿತು. ಅವಮಾನದಲ್ಲಿ ಕುದಿಯುತ್ತಿರುವಂತೆ ಭಾಸವಾಯಿತು. ಮಧ್ಯಾಹ್ನದ ಬಿಸಿಲಿಗೆ ಮೈ ಕಾಸಿದಳು. ಒಂದು ತಾಸು - ಎರಡು ತಾಸು - ಮೂರು ತಾಸು ಅಲ್ಲಿಯೇ ಕೂತಳು. ಕಣ್ಣೀರು ತೋಯಿಸಿದ್ದ ಮುಖವನ್ನು, ನಿರಾಳ ಕಣ್ಣುಗಳನ್ನು ಸೂರ್ಯನಿಗೆ ಎದುರು ಹಿಡಿದಳು. ಅವಳ ಕಣ್ಣುಗಳು ಸೂರ್ಯನನ್ನು ಕುಕ್ಕಿದವು. ಅವಳ ರೋಷದ ಎದುರು ಅವನ ಉಷ್ಣತೆ ಕಡಿಮೆಯಾಯಿತು. ಸೂರ್ಯ ಮುಳುಗಿದ ಮೇಲೆ ಅವಳು ಎದ್ದು ಒಳಗೆ ಹೋದಳು.

❖ ❖ ❖

ದನದ ಕಟ್ಟೆಯನ್ನು ಬಿಟ್ಟು ಮೇಲೆ ಹತ್ತದ ತಾಯವ್ವ ಈಗ ದನಗಳ ಜತೆ ದನದಂತಾದಳು. ಮನೆಯವರನ್ನೆಲ್ಲ ಸುಮ್ಮನೆ ದಿಟ್ಟಿಸುತ್ತಿದ್ದಳು. ದಿನಾಲೂ ತಾನು ಬಳಿಯುವ ಸಗಣಿಯನ್ನು ನೋಡುವ ಹಾಗೆ. ಮುಸುರಿದೋಣಿಯಲ್ಲಿ ತನ್ನ ಪ್ರತಿಬಿಂಬವನ್ನು ನೋಡುವ ಹಾಗೆ. ಮನೆಯಲ್ಲಿ ಈಗ ಎಷ್ಟೊಂದು ಬದಲಾಗಿದೆ. ತಾನು ಪರಿಚಯವೇ ಇಲ್ಲವೆಂಬಂತೆ ನೋಡುತ್ತಾರೆ. ತನ್ನ ಗಂಡನಿಗೆ ಈಗ ಮತ್ತೊಂದು ಮದುವೆ ಮಾಡಿದ್ದಾರೆ. ತನ್ನ ಪ್ರೀತಿಯ ಮಗ ಈಗ ಅವಳ ಪಾಲು. ಈ ಮನೆಯ ಪಾಲು, ತನ್ನ ಎರಡು ಹೆಣ್ಣು ಮಕ್ಕಳನ್ನು ಹೊಸದಾಗಿ ಮದುವೆಯಾಗಿ ಬಂದವಳ ತವರು ಮನೆಯಲ್ಲಿ ಬಿಟ್ಟಿದ್ದಾರಂತೆ. ಇಲ್ಲಿ ಅವಳ ಅವ್ವನ ನೆನಪು ಬಂದೀತೆಂದು, ತಮ್ಮ ಅವ್ವನಂಗೆ ಆದಗೀದಾರೆಂದು.

ಅವನೂ ಈಗ ಈ ಮನೆಗೆ ಬರುತ್ತಾನೆ. ತಾನು ಪರಿಚಯವೇ ಇಲ್ಲವೆಂಬಂತೆ ಕೆಲಸ ಹೇಳುತ್ತಾನೆ. ಅವನೂ, ಅವನ ಹೆಂಡತಿಯೂ, ತನ್ನ ಗಂಡ, ಅತ್ತೆ, ಮಾವ, ವಾರಗಿತ್ತಿಯರು, ಮನೆಯ ಎಲ್ಲ ಹುಡುಗರು ಎಲ್ಲರೂ ಎಷ್ಟೊಂದು ನಿರುಮ್ಮಳವಾಗಿದ್ದಾರೆ. ಆ ಘಟನೆ ನಡೆದೇ ಇಲ್ಲ ಎನ್ನುವ ರೀತಿಯಲ್ಲಿ. ಮತ್ತೆ ಹೊರಗಿನ ಜನ ಬರುತ್ತಾರೆ, ಹೋಗುತ್ತಾರೆ. ಚಹಾ - ಫಳಾರ ನಡೆಯುತ್ತದೆ. ಕುಶಲ ಮಾತುಕತೆ ನಡೆಯುತ್ತದೆ. ಕೊಡು - ಕೊಳ್ಳುವ ವ್ಯವಹಾರಗಳು ನಡೆಯುತ್ತವೆ. ಗುಗ್ಗುಳ - ಮದುವೆಗಳು ಜರುಗುತ್ತವೆ. ನಾಗರೀಕತೆ ಎಷ್ಟೊಂದು ಮಧುರವಾಗಿ ಮುಂದುವರಿದಿದೆ.

ಆವಾಗಿನ ಮನೆಯ ಮರ್ಯಾದೆ, ಪ್ರತಿಷ್ಠೆಯ ಪ್ರಶ್ನೆಗಳು ಈಗ ತಾನು ಆಳಾದ ತತ್‌ಕ್ಷಣ ಹೇಗೆ ಹೊರಟು ಹೋದವು ? ತಾಯವ್ವನಿಗೆ ಅನಿಸುತ್ತಿತ್ತು. ತಾನು ಹೊಸದಾಗಿ ಬಂದಾಗ ತನ್ನ ಮಾನರಕ್ಷಣೆಗಾಗಿ ತನ್ನ ಮಾವ, ಗಂಡ, ಮೈದುನರು ಏನು ಮಾಡಿದರು ? ಊರ ಪ್ರಮುಖರು ಮನೆಗೆ ಬಂದು ಮಾವನ ಜತೆ ಮಾತುಕತೆ ಆಡುವ ಮುಂದೆ ಕಣ್ಣಿನಿಂದ, ಸಾಧ್ಯವಾದಷ್ಟು ಮಟ್ಟಿಗೆ ಆಕಸ್ಮಿಕವೆಂಬಂತೆ ಮೈ ಕೈ ಸೋಕಿಸಿ ತನ್ನ ಅತ್ಯಾಚಾರ ಮಾಡುವಾಗ ಯಾಕೆ ಅದು ನನ್ನ ಮತ್ತು ಅವರ ಹಾದರವಾಗಲಿಲ್ಲ ? ಅಂತಹ ದೊಡ್ಡವರ ಎದುರು ಸೆಟೆದು

ನಿಲ್ಲಲು ಮಾವನಿಗೆ ಏಕೆ ಸಾಧ್ಯವಾಗಲಿಲ್ಲ ? ಮಾವನ ಬಂಧು - ಬಳಗದವರಿಗೆ, ಮಾವನ ಜಾತಿಯವರಿಗೆ ಏಕೆ ಸಾಧ್ಯವಾಗಲಿಲ್ಲ ? ತನ್ನ ಪಾಪದ ಪ್ರಜ್ಞೆಯನ್ನು ನಿರ್ಧರಿಸುವಾಗ ಮನೆಯ ಒತ್ತಡಗಳು ಯಾಕೆ ಗಣನೆಗೆ ಬರಲಿಲ್ಲ ? ಸಂಬಂಧಿಕರ ಹಿಂಸೆಗಳು ಯಾಕೆ ಗೌಣವಾದವು ? ಸುತ್ತಮುತ್ತಲಿನವರು ಕೂಡಿ ತನ್ನ ತಪ್ಪನ್ನು ನಿರ್ಧರಿಸುವಾಗ ಈ ಮನೆಯ ಮಕ್ಕಳು ಯಾಕೆ ಭೋಳೆ ಮಕ್ಕಳಂತೆ ನಿಂತಿದ್ದರು ?

❖ ❖ ❖

ದನದಕಟ್ಟೆಯ ತನ್ನ ಐಸಿರಿಯಲ್ಲೂ ಅವಳು ಕನಸು ಹಿಡಿದಿದ್ದಳು. ಈಗ ಅವಳ ಮಕ್ಕಳದು. ಮಕ್ಕಳಾದರೂ ಬಂದಾರು 'ಅವ್ವ' ಎಂದು. ಮೊದಮೊದಲು ಅವಳನ್ನು ನೋಡಿ ನಕ್ಕಂತೆ ಕಾಣುತ್ತಿದ್ದ ಹುಡುಗ, ಈಗ ಹಿಂಸೆಯ ಪಾಠಗಳಿಂದ ಅವಳನ್ನು ನೋಡಿ ಕನಿಕರ ನೀಡುತ್ತಿರುವವನಂತೆ ತೋರುತ್ತಿದ್ದ. ಬೈಯುತ್ತಿರುವಂತೆ ಕಾಣುತ್ತಿದ್ದ.

ತನ್ನ ಹೆಣ್ಣುಮಕ್ಕಳ ಬಗ್ಗೆ ನಿಜಸಂಗತಿ ತಿಳಿದಾಗ ಮಾತ್ರ ಅವಳು ಲಬೋ ಲಬೋ ಅಂತ ಹೊಯ್ಕೊಂಡಳು. ಮುದುಕನ ಕಣ್ಣಿಗೆ ತಿವಿದಳು. ಎರಡೂ ಕೈ ಬೀಸುತ್ತ ಹೊರಗೆ ಬಂದು ಅಂಗಳದ ಮಣ್ಣು ಮನೆಗೆ ತೂರಿ ಈ ಮನಿ ದೀಪ ಆರಲಿ. ಇಲ್ಲಿ ಸುಡುಗಾಡ ಆಗಲಿ ಎಂದು ಒದರಿದಳು. ಅವಳು ಕಲ್ಪಿಸಿಕೊಳ್ಳುವುದು ಕೂಡ ಆಗಲಿಲ್ಲ. ತನ್ನ ಮುದ್ದು ಹೆಣ್ಣುಮಕ್ಕಳನ್ನು ಜಾತ್ರೆಯಲ್ಲಿ ತಪ್ಪಿಸಿ ಬರುವುದು. ಅಯ್ಯೋ ದೇವರೆ ಗಂಡುಮಗ ಮಾತ್ರ ತನ್ನ ಗಂಡನಿಂದ. ಹೆಣ್ಣುಮಕ್ಕಳು ಮಾತ್ರ ತನ್ನ ಅನೈತಿಕತೆಯಿಂದ ಹುಟ್ಟಿದರು ಅಂತ ಯಾವ ಮನಸ್ಸಿನಿಂದ ಅಂದುಕೊಂಡರು ? ನನ್ನ ಆ ಸಂಬಂಧಕ್ಕೆ ಎಷ್ಟೋ ವರ್ಷಗಳ ಇತಿಹಾಸವನ್ನು ಒಮ್ಮೆಲೇ ಕುಟ್ಟಿಬಿಟ್ಟರಲ್ಲ !

ಎಷ್ಟೆಲ್ಲ ಜನ ತನ್ನ ಬೆನ್ನುಹತ್ತಿ ಬರುತ್ತಿದ್ದಾರೆ. ಎಲ್ಲರ ಕೈಯಲ್ಲೂ ಬಡಿಗೆ, ಕಲ್ಲು, ಹಾರೆ, ಒನಕೆ. ಎಲ್ಲರಿಗಿಂತ ತನ್ನ ಮಗ ಮುಂದೆ. ಅವನ ಕೈಯಲ್ಲಿ ಕೊಡಲಿ......

ತಾನು ಬಗ್ಗಿ ಕಲ್ಲು ಎತ್ತಿಕೊಳ್ಳುತ್ತೇನೆ. ದೊಡ್ಡ ದೊಡ್ಡ ಬಂಡೆಗಲ್ಲುಗಳು ಎಷ್ಟು ಸಲೀಸಾಗಿ ತನ್ನ ಕೈಗೆ ಬಂದು ಅವರ ಮೇಲೆ ಹಾರುತ್ತವೆ. ಇಡೀ ಭೂಮಿಯೇ ಅವಳ ಕೈಯಲ್ಲಿ ಬಂದಂತಾಗುತ್ತದೆ.

●

# ಸತ್ಯಲಿಂಗನ ಸಾವು

● ಮೋಹನ ನಾಗಮ್ಮನವರ

ಗೊತ್ತು ಗುರಿಯಿಲ್ಲದೆ ಬೀಸುತ್ತಿದ್ದ ಗಾಳಿ ತಹಬಂದಿಗೆ ಬಂದು ಇನ್ನೇನು ಹೊರ ಹೊರಡಬೇಕೆನ್ನುವಷ್ಟರಲ್ಲಿ ದೊಡ್ಡ ಹನಿಗಳ ಮಳೆ ಸಳಪಳ ಸಪ್ಪಳ ಮಾಡುತ್ತಾ ಬೀಳತೊಡಗಿತು. ಮುಸ್ಸಂಜೆಯಲ್ಲಿ ಗಾಳಿ ಧೂಳು ಮತ್ತು ಮೋಡದೊಂದಿಗೆ ಮಳೆ ಸೇರಿದರೆ ಯಾವ ಹೌದಪ್ಪನೂ ಹೊರಬೀಳಲಾರ ಎಂದುಕೊಳ್ಳುತ್ತಾ ಕಿಟಕಿಯಿಂದಲೇ ದೂರ ನೋಟ ದಿಟ್ಟಿಸುತ್ತಾ ಕುಳಿತೆ. ಹನಿ ಹನಿ ಮಳೆ ಜಡಿ ಮಳೆಯಾಗಿ ರೂಪುಗೊಂಡು ನೆಲಮುಗಿಲ ನಡುವೆ ಮಂಪರನ್ನು ಸೃಷ್ಟಿಸಿ ರಸ್ತೆಗಳೆಲ್ಲ ಕೆನ್ನೀರ ಹೊಳೆಯಾಗಿ ಮಾರ್ಪಟ್ಟವು.

ಎದುರಿನ ರಸ್ತೆಯಂಚಿನಲ್ಲಿ ಮೋಟಾರ್ ಸೈಕಲ್ಲೊಂದು ಕಾಣಿಸಿಕೊಂಡು ನೇರ ರೂಮಿನ ಎದುರಿಗೇ ಬಂದಿತು. ಅದು ದೇಶಪಾಂಡೆಯದ್ದೇ ಎಂದುಕೊಳ್ಳುವಷ್ಟರಲ್ಲಿ ದೇಶಪಾಂಡೆ ಬೈಕ್‌ಸ್ಟ್ಯಾಂಡ್ ಹಾಕುತ್ತಿದ್ದ. ಗಡಬಡಿಸಿ ಮೆಟ್ಟಿಲೇರಿ ಬಂದವನ ಮುಖದಲ್ಲಿ ಅವಸರವಿತ್ತು, ಆತಂಕವಿತ್ತು, ಮಳೆಯಲ್ಲಿ ನೆಂದ ಬಟ್ಟೆಗಳಿಂದ ನೀರಿಳಿಯುತ್ತಿತ್ತು.

'ಯಾಕೋ ಏನಾಗಿದೆ.....' ಕೇಳಿದೆ. ಉತ್ತರ ಬರಲಿಲ್ಲ. ಬದಲಿಗೆ ಮುಖ ಇನ್ನೂ ಮುದುಡಿತು. ಏನೋ ಹತ್ತಿಕ್ಕುವಂತೆ ಮುಖ ಕಿವುಚಿದ. ಕಣ್ಣು ಕಿರಿದುಗೊಳಿಸಿ ಬಾಗಿಕೊಂಡು ಹೊಟ್ಟೆಯನ್ನು ಎರಡೂ ಕೈಗಳಲ್ಲಿ ಬಿಗಿದ. ನಾನು ಟವೆಲ್ ಕೊಟ್ಟೆ. ಆತ ತಲೆಯೊರೆಸಿಕೊಳ್ಳದೇ ಅದರಿಂದಲೇ ಮುಖ ಮುಚ್ಚಿಕೊಂಡು ಬಿಕ್ಕಿದ. ಆ ಬಿಕ್ಕುವಿಕೆಯಲ್ಲಿ ಅದುವರೆಗೂ ಮಡುಗಟ್ಟಿ ನಿಂತಿದ್ದ ದುಃಖದ ಮಡುವಿದ್ದಿರಬೇಕು. ಅಳತೊಡಗಿದ, ಅಂತಹುದೇನಾಯಿತೋ ತಿಳಿಯಲಿಲ್ಲ. ನಮ್ಮೊಳಗೆ ತುಸು ಗಟ್ಟಿಗನೆಂದು ಬಿರುದು ಪಡೆದ ದೇಶಪಾಂಡೆಯಂಥವನೇ ಅಳುತ್ತಿರಬೇಕಾದರೆ ! ನಾನು ಕುಳಿತಲ್ಲಿಂದ ಮೇಲೆದ್ದು ತಾಯಿ ಮಗುವನ್ನು ಸಂತೈಸುವಂತೆ ಆತನ ತಲೆಯ ಮೇಲೆ ಕೈಯಾಡಿಸಿದೆ. ಅವನ ಅಳುವಿನ ನಡುವೆ ಮಾತುಗಳ ಮೂಲಕ ಮಧ್ಯ ಪ್ರವೇಶಿಸಬಾರದೆಂದುಕೊಂಡು.

ದೇಶಪಾಂಡೆಯ ಆಳು ಕ್ರಮೇಣ ಸಣ್ಣದಾಗಿ ನಿಂತಿತು.

ಕೇಳಿದೆ.

'ಯಾಕೆ ದೇಶಪಾಂಡೆ ...... ಏನಾಯ್ತು ?'

ಏನೋ ಹೇಳಲು ಹೊರಟ. ಹೇಳಲಾಗದೆ ಬಿಕ್ಕಳಿಸಿದ ಮತ್ತೆ ಅಳು. ಅಳುವಿನಲ್ಲೆ ಒಂದೊಂದೇ ಅಕ್ಷರ ಜೋಡಿಸಿ ಹೇಳಿದ.

'ಸತ್ಯ.... ಸತ್ಯ..... ಹೋಗ್ಬಿಟ್ಟ......'

ಈಗ ಅಳುವ ಪರಿಸ್ಥಿತಿ ನನ್ನದು. ನನಗದನ್ನು ನಂಬಲಾಗಲಿಲ್ಲ. ಇನ್ನೊಮ್ಮೆ ಕೇಳೋಣವೆಂದು ಚೀತ್ಕರಿಸಿದೆ.

'ಏನಂದೇ......'

'ನಿಜ ಕಣೋ .... ಇವತ್ತು ಬೆಳಿಗ್ಗೆ ಸತ್ಯ ಆತ್ಮಹತ್ಯೆ ಮಾಡ್ಕೊಂಡ.'

ನನಗೆ ಇನ್ನೂ ಹೆಚ್ಚಿನ ದುಃಖ ಸತ್ಯ ಸತ್ತದರ ಜೊತೆಗೆ, ಸತ್ಯನಂಥವ ಆತ್ಮಹತ್ಯೆ ಮಾಡಿಕೊಂಡಿದ್ದು, ತೀರ ಸಂಕಟವಾಗಿ ನನ್ನ ಹೊಟ್ಟೆಯೊಳಗೆ ಎಂತಹುದೋ ಬೆಂಕಿ ಉರಿಯತೊಡಗಿದಂತೆನ್ನಿಸಿ ಸಣ್ಣಗೆ ನರಳಿದೆ. ಸತ್ಯ ಮತ್ತು ಆತ್ಮಹತ್ಯೆ ಯಾಕೋ ಕಲ್ಪಿಸಲಾಗದ ಸಂಗತಿ. ಧೈರ್ಯ, ಹಠ, ಛಲಗಳಿಗೆ ಮನುಷ್ಯರೂಪ ಬಂದಂತೆ ಸತ್ಯ. ಸಿದ್ಧವನಹಳ್ಳಿಯ ಸತ್ಯಲಿಂಗ ಎಂದರೇ ನಮ್ಮ ವರ್ತುಲದ ಯಾರಿಗೇ ಆದರೂ ಹೆಮ್ಮೆಯಿಂದ ನಾಲ್ಕಿಂಚು ಎದೆಯುಬ್ಬಿ ಬರಬೇಕು. ಅಂತಹ ಸತ್ಯ ಆತ್ಮಹತ್ಯೆ ಮಾಡಿಕೊಳ್ಳುವುದೆಂದರೆ ! ನನಗೆ ಅಳಲಾಗಲಿಲ್ಲ. ಅಳುವುದನ್ನು ನುಂಗಿಕೊಂಡು ಹನಿ ನೀರೂ ಕಣ್ಣಿಂದ ಹೊರ ಬರದ ಹತಾಶ ಸ್ಥಿತಿ.

'ಇವತ್ತು ಬೆಳಿಗ್ಗೆ ಊರಿನಲ್ಲಿ ಎಲೆಕ್ಟ್ರಿಕ್ ವೈರ್ ಹಿಡಿದು ತೀರಿಬಿಟ್ಟ... ಅವನ ತಮ್ಮ ಸಂಜೆ ಬ್ಯಾಂಕಿಗೆ ಫೋನ್ ಮಾಡಿ ಹೇಳಿದ. ಬಾಡಿ ಪೋಸ್ಟ್‌ಮಾರ್ಟಮ್‌ಗೆ ಹೋಗಿದೆಯಂತೆ. ನನಗೇನೂ ತೋಚಲಿಲ್ಲ. ನೇರ ನಿನ್ಹತ್ರಕ್ಕೆ ಬಂದೆ.......'

ದುಃಖ ನಿಂತ ದೇಶಪಾಂಡೆ ಹೇಳಿದ. ನಾನೀಗ ಅತ್ಯಂತ ಸಂಕಟದ ಸುಳಿಗೆ ಸಿಲುಕಿ ಶಬ್ದಗಳಿಗಾಗಿ ತಡಕುತ್ತಿದ್ದೆ. ಹೊರಬರದ ಮಾತುಗಳು ಹೃದಯದೊಳಗೆ ಮುಳ್ಳಾಗಿ ಮುತ್ತತೊಡಗಿ ಗಳಿಗೆಗೊಮ್ಮೆ ಬರುವ ಬಿಕ್ಕು ಮೈ ತುಂಬ ಕಂಪನಗಳ ತುಂಬುತಿತ್ತು.

'ಇನ್ನು ಮಾಡೋದೇನಿದೆ...... ಸಿದ್ಧವನಹಳ್ಳಿಗೇ ಹೋಗೋಣ. ಕೊನೇಬಾರಿ ಸತ್ಯನ ನೋಡೋದಕ್ಕೆ.....' ವಿಷಾದ ಭಾವದ ನನ್ನ ಮಾತುಗಳು ನನಗೇ ಕೇಳದಂತಿದ್ದವು.

ಅದಕ್ಕೆ ಕಾದಿದ್ದವನಂತೆ ದೇಶಪಾಂಡೆ ಹೊರಬಂದ. ನಾನು ರೂಮಿಗೆ ಬೀಗ ಜಡಿದೆ. ಮೋಟಾರ್ ಬೈಕ್ ಜೀವ ತುಂಬಿಕೊಂಡು ನಮ್ಮಿಬ್ಬರನ್ನು ಹೊತ್ತು ಮುನ್ನಡೆಯಿತು. ಕವಿದ

ಕತ್ತಲಿನಲ್ಲಿ ಜಡಿ ಮಳೆ ಕೂಡ ನಮ್ಮೆದೆಯಲ್ಲಿನ ಧಗೆಯನ್ನು ಕಡಿಮೆ ಮಾಡಲಿಲ್ಲ. ಬಹುಶಃ ಮುಗಿಲೇ ಸತ್ಯನ ಸಾವಿಗೆ ಅಳುತ್ತಿದೆಯೆನ್ನಿಸಿತು. ಬೈಕ್ ನಡೆಸುತ್ತಿದ್ದ ದೇಶಪಾಂಡೆ ಹೇಳಿದ.

'ಯಾಕೋ ಸಂಕಟವಾಗುತ್ತಿದೆ. ಒಂದು ರೌಂಡ್ ಮುಗಿಸೋಣ್ವಾ.....'

ಬೈಕ್ ನಿಂತಿತು. ನಗರದ ಹೊರವಲಯದ ಬಾರ್ ಸೇರಿಕೊಂಡೆವು. ಮಳೆಯಲ್ಲಿ ಸ್ನಾನ ಮಾಡಿದಂತಿರುವ ನಮ್ಮನ್ನು ಕಂಡ ವೇಟರ್‌ಗೆ ಹುಚ್ಚರೆನ್ನಿಸಿರಬೇಕು. ಟೇಬಲ್‌ಗೆ ಬಂದದಾಗ 'ಡಿಪ್ಲೋಮ್ಯಾಟ್' ಎಂದೆ. ಸತ್ಯನ ಫೇವರಿಟ್ ಬ್ರ್ಯಾಂಡ್ ಅದು. ಲೇಬಲ್ ಓದಿದವನೇ ದೇಶಪಾಂಡೆ ಮತ್ತೆ ಸತ್ಯನ ನೆನಪು ಮಾಡಿಕೊಂಡು ಅಳಲು ಶುರುಮಾಡಿದ. ನಾನೇ ಸಂತೈಸಿದೆ. ನಿಧಾನಕ್ಕೆ ದ್ರವ ಗಂಟಲಲ್ಲಿಳಿಯತೊಡಗಿದಂತೆ ಸುಡತೊಡಗಿದ ಸಿಗರೇಟಿನ ಹೊಗೆ ಹರಿದು ಬರತೊಡಗಿತ್ತು. ಹೊಗೆಯ ವರ್ತುಲಗಳಲ್ಲಿ ಸತ್ಯ ಕಂಡು, ಸತ್ಯನ ಕುರಿತಾದ ನೆನಪು ಮನದ ಸುತ್ತ ಹೆಣೆದುಕೊಳ್ಳತೊಡಗಿತು.

ಸತ್ಯನ ಕುರಿತು ಸಂಕಟ ಪಡುತ್ತಿರುವ ನಾವು ಅವನ ಬಾಲ್ಯದಿಂದ ಹಿಡಿದು ಮೂವತ್ತಾಗುವವರೆಗೂ ಜೊತೆಯಾಗೇ ಬೆಳೆದವರು. ಎಂತಹುದೇ ಸಂದಿಗ್ಧ ಪರಿಸ್ಥಿತಿಯಲ್ಲೂ ಹತಾಶನಾಗದ ಆತನೇ ಬಹುಶಃ ಇಂತಹ ನೋವನ್ನನುಭವಿಸುತ್ತಿರುವ ತುಮುಲದ ಸ್ಥಿತಿಯಲ್ಲಿ ಇದ್ದರೆ ನಮ್ಮಂತೆ ಕಂಗೆಡುತ್ತಿರಲಿಲ್ಲ. ಕಿರಿದುಗೊಳಿಸುವ ಆ ಸಣ್ಣ ಹೊಳಪುಗಣ್ಣುಗಳಲ್ಲಿ ಜಗತ್ತಿನೆಲ್ಲ ಯಾತನೆಗಳನ್ನು ಮೆಟ್ಟಿ ನಿಲ್ಲುವ ಧೋರಣೆ ಇತ್ತು. ನಾವಂತೂ ಆತ ಅತ್ತುದನ್ನೇ ಕಂಡಿರಲಿಲ್ಲ. ದೊಡ್ಡವರಾದ ಮೇಲೆಯೇ ಏಕೆ ಸಣ್ಣವನಿರುವಾಗಲೂ ಕೂಡ, ಬಿದ್ದು ಕೈಕಾಲಿನಲ್ಲಿ ರಕ್ತ ಇಳಿಯುತ್ತಿದ್ದಾಗಲೂ ಕೂಡ ಆತನಲ್ಲಿ ಅಳು ಹುಟ್ಟುತ್ತಿರಲಿಲ್ಲ. ಬದಲಿಗೆ ಅಲ್ಲೊಂದು ಬಗೆಯ ಮಿಂಚು ಮಿಂಚುತ್ತಿತ್ತು. ಆತನ ನಗೆಯೇ ವಿಚಿತ್ರ. ಅದು ಎಂಥವರ ಎದೆಯನ್ನೂ ಹೆಪ್ಪುಗಟ್ಟಿಸುವ ನಗು.

ಎಲ್ಲೆಲ್ಲಿಂದಲೋ ಬಂದು ಕೂಡಿದ ನಾವು ಓದುವಾಗ ಸತ್ಯ ಜಗಮೊಂಡ. 'ಆ ಪ್ರೊಫೆಸರ್‌ಗೇನೋ ಹೇಳೋಕೆ ಬರೋದು.... ಅದನ್ನೇ ನಾನು ಬೇಕಾದರೆ ಹೇಳ್ತೀನಿ ನೋಡು' ಅವನ ಜಾಣತನದ ಕುರಿತೇ ಅವನಿಗೆ ಅಹಂಭಾವ. ಕಾಲೇಜಿನಲ್ಲಿ ಅಟೆಂಡೆನ್ಸ್ ಮಾತ್ರ ಬೇಕಿದ್ದುದು.

'ಅವರು ಹೇಳೋದನ್ನ ಕೇಳೋದ್ರಲ್ಲೇನಿದೆ, ಒಂದೊಂದು ಪುಸ್ತಕ ಮುಗಿಸೋದಿಕ್ಕೊ ಒಂದೊಂದು ವರ್ಷ ತಗೋತಾರೆ. ಲೈಬ್ರರೀಲಿ ಒಂದು ವಾರ ಓದಿದ್ರೆ ಸಾಕು. ನೀವೇ ನೋಡ್ತಾ ಇರಿ. ಮುಂದೆ ನಾನೊಂದು ದಿನ ಪುಸ್ತಕ ಬರೀತೇನೆ. ಅವುಗಳೇ ಟೆಕ್ಸ್ಟ್ ಆಗೋದು.'

ಮಾತುಗಳಿಗೋಸುಗವಾದ ಮಾತಾಗಿರಲಿಲ್ಲ ಅದು. ಜಿದ್ದಿಯೂ ಆಗಿದ್ದ ಸತ್ಯನಿಗೆ ಎದುರಾಡುವ ಗೋಜಿಗೆ ನಾವ್ಯಾರೂ ಹೋಗಿರಲಿಲ್ಲ. ಸತ್ಯನಿಗೆ ಪ್ರೈಮರಿ ಸ್ಕೂಲಲ್ಲಿ ಓದಿಸಿದ ಗುರುಗಳೇ ಹೇಳುತ್ತಿದ್ದರು.

'ನಾವೆಲ್ಲಾ ಹುಡುಗರಿಗೆ ಅ ಆ ಕಲಿಸೋವಾಗ ಈತ ಒಂದನೇ ಕ್ಲಾಸಿನಲ್ಲಿಯೇ ಚಂದಮಾಮ ಓದುತ್ತಿದ್ದ.'

ಆಗಾಗ ಸ್ಫೂರ್ತಿಗೊಂಡು ನಾನು ಬರೆಯುತ್ತಿದ್ದ ಕಥೆಗಳನ್ನೋ ಕವನಗಳನ್ನೋ ಓದಿ ನನ್ನ ಜನ್ಮ ಜಾಲಾಡಿಬಿಡುತ್ತಿದ್ದ. 'ಬರೆಯೋದಕ್ಕೆ ಮೊದಲು ಓದೋ, ಓದಿದ ಮೇಲೆ ನೀನು ಪೂರ್ಣ ಎನಿಸಿದ ಮೇಲೆ ಬರಿ.' ನನ್ನ ಬರಹಗಳನ್ನೆಲ್ಲ ಬಾಲಿಶವಾಗಿ ಕಾಣುತ್ತಿದ್ದ ಆತನಿಗೆ ಸಾಹಿತ್ಯ ಗೊತ್ತಿಲ್ಲವೆಂದಲ್ಲ. 'ಮೂಕಜ್ಜಿಯ ಕನಸುಗಳು' ಓದಿ ಕಾರಂತರಿನ್ನೂ ಹೀಗೆ ಬರೀಬಹುದಿತ್ತು ಎನ್ನುವುದರಿಂದ ಹಿಡಿದು ಕಾಫ್ಕಾನಂಥವನ ಸಂಕೀರ್ಣ ಬರಹಗಳೂ ಕೂಡ ಸತ್ಯನಿಗೆ ಹೊರತಾಗಿರಲಿಲ್ಲ. ಬಹುಶಃ ಸತ್ಯ ಬರವಣಿಗೆಯನ್ನು ಕೈಗೆತ್ತಿಕೊಂಡಿದ್ದರೆ ಅವನೇ ಒಂದು ಅಲೆಯನ್ನು ಹುಟ್ಟು ಹಾಕಬಹುದಿತ್ತೇನೋ ?

ಸುತ್ತಲಿನ ಜಗತ್ತು ಮಂದಗತಿಯಲ್ಲಿರುವಂತೆ, ಸುತ್ತಲಿನವರನ್ನೆಲ್ಲ ಧಡ್ಡರಂತೆ ಕಾಣುತ್ತಿದ್ದ ಸತ್ಯನಿಗೆ, ಜಗತ್ತು 'abnormal' ಆಗಿ ಕಂಡರೆ ನಮಗೆ ಸತ್ಯ 'abnormal'. ಆದರೆ ಆತನ ನೇರ ನಡೆ, ನುಡಿ, ಬಿಚ್ಚುಮಾತು, ಯಾವುದನ್ನೂ ಮುಚ್ಚಿಟ್ಟುಕೊಳ್ಳದ ಮನಸ್ಸು, ಆತನ ಧೈರ್ಯ, ಒಂಥರಾ ಸೆಳೆತ ಮೂಡಿಸಿ ಅವನನ್ನು ಬಿಟ್ಟಿರಲು ಆಗುತ್ತಿರಲೇ ಇಲ್ಲ.

ಎಲ್ಲದರಲ್ಲೂ ವೇಗ ಆತನದು. ವೇಗ ಆತನ ದೌರ್ಬಲ್ಯ ಎನ್ನುವಷ್ಟರ ಮಟ್ಟಿಗೆ ವೇಗ ಅವನಲ್ಲಿ ಮನೆ ಮಾಡಿತ್ತು. ಹೈವೇಗಳಲ್ಲಿ ನೂರು ಕಿಲೋಮೀಟರ್ ಆಸುಪಾಸಿನಲ್ಲಿ ಹೋಗುವ ಆತನ ಸಾವಿನ ಭವಿಷ್ಯ ನಾವೇ ಹೇಳುತ್ತಿದ್ದೆವು. ಈತ ಒಂದಿಲ್ಲೊಂದು ದಿನ ಇದರಲ್ಲೇ ಸಾಯೋದು ?

ಆತ ಬದುಕುತ್ತಿದ್ದ ಪರಿಯೇ ವಿಚಿತ್ರದ್ದು. ಹಾಸ್ಟೆಲ್ ಜವಾನನಿಗೆ ನೌಕರಿ ಖಾಯಂ ಮಾಡಿಲ್ಲವೆಂದರೆ ಈತ ಮರುದಿನವೇ ಯೂನಿವರ್ಸಿಟಿಯ ಕಛೇರಿಯಲ್ಲಿ. ಮಾಡುವ ಕೆಲಸದ ಕುರಿತು ಎಂದೂ ಪ್ರಚಾರ ಕೇಳಿದವನಲ್ಲ. ಜವಾನನೇ ಯಾರಿಗೋ ಹೇಳುತ್ತಿದ್ದಾಗ ಈತನೇ ಅವನನ್ನು ಕರೆದು ಹೇಳಿದ್ದ.

'ಇನ್ನೆಂದೂ ಬೇರೆಯವರ ಹತ್ತಿರ ಸತ್ಯ ನಿನ್ನ ಕೆಲಸ ಖಾಯಂ ಮಾಡಿಸಿಕೊಟ್ಟ ಅಂತಾ ಹೇಳಬೇಡ.'

ಮಂತ್ರದಂಡ ಬೀಸಿದಂತೆ ಸದಾ ಜನ ಮುತ್ತಿಕೊಂಡಿರುತ್ತಿದ್ದ ಸತ್ಯ ಹುಡುಗಿಯರೆಂದರೆ ಕೊಂಚ ಲೂಜು. ಅದರಲ್ಲೂ ಆತ ಅಬ್ನಾರ್ಮಲ್ಲೇ ! ಹಿಂದೆ ಬಂದವರಿಗಿಂತ ಈತನನ್ನು ಕಂಡರೆ ಮುನಿಸಿಕೊಳ್ಳುತ್ತಿದ್ದವರ ಹಿಂದೆ ಬೀಳುತ್ತಿದ್ದ. ಈತನಿಗೆ ನಿರಾಶೆ ಎಂಬುದಿರಲಿಲ್ಲ. ಒಂದು ಕ್ಯಾನ್ಸಲ್ ಆದರೆ ಮತ್ತೊಂದು ಪ್ರಪೋಜಲ್ ಎಂಬಷ್ಟು ಸ್ಪೋರ್ಟಿವ್ !

ಗಂಟಲಲ್ಲಿ ಸಿಕ್ಕಿಹಾಕಿಕೊಂಡಂತೆ ಚಡಪಡಿಸುತ್ತಿದ್ದ ದೇಶಪಾಂಡೆ ಕೇಳಿದ.

'ಸತ್ಯ ಯಾಕೆ ಆತ್ಮಹತ್ಯೆ ಮಾಡ್ಕೊಂಡಿರಬಹುದು ?'

'ಯಾವುದೂಂತ ಹೇಳೋದು. ಸತ್ಯನಂತಹವರಿಗೇ ಈ ಸ್ಥಿತಿ ಆದ್ರೆ ಪುಕ್ಕಲಾಗಿದ್ದವರ ಗತಿ ಏನು ?'

ನನಗೂ ಪ್ರಶ್ನೆ ಕಗ್ಗಂಟಾಗಿತ್ತು. ಅವನ ವ್ಯವಹಾರದ ಸೋಲು ಆಗಿರಬಹುದೇ ? ಅಥವಾ ಮತ್ತಾವುದಾದರೂ ಕಾರಣವಿದೆಯೇ ? ನಿರಾಶೆಯೆನ್ನುವುದೇ ಇರದ ಆತನನ್ನು ಯಾವುದು ಸಾವಿಗೆಳೆಯಿತು ? ಪ್ರಶ್ನೆಗಳು ಮೂಡಿದರೂ ಉತ್ತರಗಳೇ ಹೊಳೆಯಲಿಲ್ಲ. ಯಾವುದೂ ಖಚಿತತೆ ಇರದ ನಾವು ಮೇಲೆದ್ದೆವು. ಒಳಗೆ ತುಂಬಿಕೊಂಡಿದ್ದ ದ್ರವರೂಪಿ ರಸಾಯನ ಭಾವಗಳ ರಾಗಕ್ಕೆ ತಾಳ ಹಾಕುತ್ತಿತ್ತು. ಬೈಕು ನೇರ ಸಿದ್ಧವನಹಳ್ಳಿಗೆ ನಡೆಯಿತು.

ದಾರಿಯಲ್ಲಿ ದೇಶಪಾಂಡೆ ಏನೇನೋ ಹೇಳುತ್ತಲೇ ಇದ್ದ. ಬೈಕಿನ ಸದ್ದಿಗರ್ಧ, ಮನದಲ್ಲಿ ಮನೆಮಾಡಿಕೊಂಡಿದ್ದ ಸತ್ಯನ ಸಾವಿನ ತುಮುಲದಿಂದಾಗಿ ಯಾವುದೂ ಅರ್ಥವಾಗುತ್ತಿರಲಿಲ್ಲ. ಬೀಳುತ್ತಿದ್ದ ಮಳೆ ನಿಂತಿರಲಿಲ್ಲ. ಗಾಳಿಗೆದುರಾಗಿ ನಡೆಯುತ್ತಿದ್ದ ನಮಗೆ ಮಳೆಹನಿ ಬೀಸುಗಲ್ಲುಗಳನ್ನೆಸೆದಂತೆ ನೋವು ಮಾಡುತ್ತಿತ್ತಾದರೂ ನಾವು ನಿಲ್ಲುವಂತಿರಲಿಲ್ಲ. ಬಹುಶಃ ಬೇರೊಂದು ಸನ್ನಿವೇಶವೇ ಆಗಿದ್ದರೆ ನಾವು ಇಂತಹ ಸ್ಥಿತಿಯಲ್ಲಿ ಹೊರಬೀಳುತ್ತಿರಲಿಲ್ಲವೇನೋ.

'ನನಗ್ಯಾತಕೋ ಜಾಸ್ತಿ ಮಾರ್ಕ್ಸ್, ಅದನ್ನು ತೋರಿಸಿ ನೌಕರಿ ಮಾಡ್ಬೇಕಾ ? ಏನಿದ್ರೂ ಸ್ವತಂತ್ರವಾಗಿರೋನು.'

ಪರೀಕ್ಷೆ ನಂತರ ಬಂದ ಫಲಿತಾಂಶದ ಅಂಕಪಟ್ಟಿ ಹಿಡಿದು ಇಡೀ ಪರೀಕ್ಷಾ ಪದ್ಧತಿಯನ್ನೇ ಛೇಡಿಸುವವನಂತೆ ಸತ್ಯ ಹೇಳುತ್ತಿದ್ದ.

'ನೋಡೋ, ನನ್ನ ಮೆದುಳಿನಲ್ಲಿರೋ ಬುದ್ಧಿಮತ್ತೇನಾ ಅಳೆಯೋ ವಿಧಾನ ಇದು' ಎಂದು ಹೇಳಿ ಕರ್ಚೀಫ್ ಬದಲಿಗೆ ಅಂಕಪಟ್ಟಿಯಿಂದಲೇ ಬೆಂಚಿನ ಧೂಳೊರೆಸಿಕೊಂಡು ಕೂಡುತ್ತಿದ್ದ. ಸರ್ಟಿಫಿಕೇಟ್‌ಗಳೆಂದರೆ ಜೀವಕ್ಕಿಂತ ಜೋಪಾನವಾಗಿ ಕಾಯ್ದಿಡುತ್ತಿದ್ದ ನಮ್ಮ ಜೀವ ಚುರ್ರೆನ್ನುತ್ತಿತ್ತು.

ಪದವಿ ದಾಟುವ ಹೊತ್ತಿಗೆ ಓದು ಬೇಸರವಾಗಿ ಆತ ಊರಿಗೆ ವಾಪಸ್ ಹೋದರೆ ಉಳಿದ ನಾವೆಲ್ಲ LL.B. ಗೋ, M.B.A. ಗೋ ಕವಲೊಡೆದಿದ್ದೆವು. ನಮ್ಮ ನಮ್ಮ ಸಾಧನೆ ಏನೇ ಇರಲಿ, ತಿಂಗಳು ಎರಡು ತಿಂಗಳಿಗೊಮ್ಮೆ ಬರುತ್ತಿದ್ದ ಸತ್ಯನ ಕುರಿತಾಗಿ ಕೇಳುವುದೇ ನಮಗೆ ತವಕ. ಇನ್ನೂ ಕಲಿಯುತ್ತಲೇ ಊರಿನಿಂದ ಮನಿಯಾರ್ಡರ್ ದಾರಿ ಕಾಯುವ ನಮ್ಮೆದುರು ಅದಾಗಲೇ ಊರು ಸೇರಿ ಸ್ವತಂತ್ರವಾಗಿ ಬಿಸಿನೆಸ್ ಶುರು ಮಾಡಿದ ಸತ್ಯಲಿಂಗ ನಮಗೆ ಕೌತುಕ !

ಬಂದಾಗೊಮ್ಮೆ ಪಾರ್ಟಿ ಕೊಡುತ್ತಿದ್ದ. ಆತನ ಪಾರ್ಟಿಗಳೇ ನಮಗೆ ಮುಖ್ಯ ಆಕರ್ಷಣೆ. ಜೊತೆಗೆ ಆತನ ವಗ್ಗರಣೆ ಬೇರೆ.

'ಯಾಕ್ರೋ ಒಳ್ಳೇ ಚೈತನ್ಯದ ದಿನಗಳನ್ನು ಹಾಳು ಮಾಡಿಕೊಳ್ತಾ ಇದ್ದೀರ್‍ರೋ ! ಏನಾದ್ರೂ ಮಾಡಿ. ಜೀವಂತವಾಗಿರೋ ವಯಸ್ಸಿನಲ್ಲಿ ಓದೋದೇ ಆಗೋಯ್ತು ನಿಮ್ದು. ಈ ಸೊಸಾಯಿಟಿಯಲ್ಲಿರೋ ನಾಲ್ಕು ಜನಕ್ಕೆ ನೀವು ಏನಾದ್ರೂ ಮಾಡಬೇಕು. ವಯಸ್ಸಾಯ್ತು ಅಂದ್ರೆ ಮಕ್ಳು ಮರಿ ನೌಕರಿ ಅನ್ಕೊಂಡು ಇನ್‌ಕ್ರಿಮೆಂಟ್ ಪ್ರಮೋಷನ್‌ನಲ್ಲೇ ಬದುಕು ಕಳೆದು ಹೋಗುತ್ತೆ' ಎಂದು ಹೇಳುತ್ತಿದ್ದ ಸತ್ಯನಿಗೆ ಅಂಬೇಡ್ಕರ್‌ರಿಂದ ಗಾಂಧೀ, ಮಾರ್ಕ್ಸ್, ಲೋಹಿಯಾ ಕರತಲಾಮಲಕ.

'ಜೀವನಕ್ಕೊಂದು ಸಂವಿಧಾನ ಇರಬೇಕ್ರೋ. ನಾವು ನಮ್ಮ ಸುತ್ತಲಿನ ಜನರಿಗೇನಾದ್ರೂ ಮಾಡಬೇಕು.'

ಆರಡಿಯೆತ್ತರದ ಮೈ ತುಂಬ ಚಟುವಟಿಕೆ ತುಂಬಿಕೊಂಡವನಂತೆ ಸದಾ ಯಾವುದಾದರೊಂದರಲ್ಲಿ ತೊಡಗಿಕೊಂಡಿರುತ್ತಿದ್ದ ಸತ್ಯನದ್ದು ಯಾವಾಗಲೂ ಎದೆ ಸೆಟೆಸಿಕೊಂಡು ಮಾತನಾಡುತ್ತಾ ಹಾದಿಯಲ್ಲಿ ಹೋಗುವವರನ್ನು ಸೇರಿಸಿಕೊಂಡು ಸೆಳೆದುಕೊಳ್ಳುವ ಒಂದು ರೀತಿಯ ಆಕರ್ಷಣೆಯ ಗತ್ತು ! ಮುಖವೆತ್ತಿ ನೋಡುವವರ ಗುಂಪಲ್ಲಿ ದನಿಯೆತ್ತಿ ಮಾತನಾಡುತ್ತ, ಮಾತೊಳಗೆ ಮೋಡಿ ತುಂಬಿಕೊಂಡದ್ದನ್ನು ಕೇಳುವುದೇ ಒಂದು ಸವಿ. ನಾವೂ ಆತನ ಹಾಗೆ ಲಕ್ಷದ ಬಿಸಿನೆಸ್ ಮಾಡುತ್ತಾ ನಾವೂ ಅವನಂತೆ ನಾಲ್ಕು ಜನರಿಗೆ ಸಹಾಯ ಮಾಡುತ್ತಾ ಇರಬೇಕೆನ್ನಿಸುತ್ತಿತ್ತು. ಜೊತೆಗೆ ಸಿದ್ಧಾಂತಗಳೂ ಕಲ್ಪನೆಗಳೂ ಮೈಯೊಳಗೆ ಹೊಕ್ಕು ದೆವ್ವ ಕುಣಿಯುತ್ತಿತ್ತು. ಇಷ್ಟೆಲ್ಲದರ ನಡುವೆ ಆತ ಕನಸುಗಾರನಾಗುತ್ತಿದ್ದುದರ ಕುರಿತು ನನಗೆ ಶಂಕೆ ಮೂಡುತ್ತಿತ್ತು.

ನಮ್ಮದಾಗಲೇ ಓದು ಮುಗಿದು, ಬಗಲಿಗೆರಡು ಪದವಿಯೇರಿಸಿ ಉದ್ಯೋಗ ಹುಡುಕುತ್ತಿದ್ದ ಹೊತ್ತು. ಒಂದು ರಾತ್ರಿ ಬಂದವನೇ ಏಕಾಏಕಿ ಸಿಗರೇಟುಗಳ ಮೇಲೆ ಸಿಗರೇಟು ಸೇದುತ್ತ, 'ಬಿಸಿನೆಸ್‌ನಲ್ಲಿ ತುಂಬಾ ತೊಂದರೆ ಆಗಿದೆ. ಎಲ್ಲಾ ಬಾಕಿಯಾಗಿ ಬಿಟ್ಟಿದೆ. ಹಣವೇ ಹಿಂದಕ್ಕೆ ಬರ್‍ತಾ ಇಲ್ಲ. ನಾನು ಸಾಲಗಾರನಾಗಿದ್ದೇನೆ.....' ದುಗುಡ ತುಂಬಿಕೊಂಡು ಹೇಳಿದ್ದ ಮಾತಿಗೆ ನಾನು ಕೊಂಚ ಧೈರ್ಯ ತಂದುಕೊಂಡು ಹೇಳಿದ್ದೆ.

'ನಿನಗ್ಗೊತ್ತಾ ಸತ್ಯ, ನಾವು ಕಾಲೇಜಿನ ಮೆಟ್ಟಿಲೇರುತ್ತಿದ್ದ ಮೊದಲ ಹೊತ್ತು. ನಾಲ್ಕು ಸಾಲು ಗೋಡೆ ಮೇಲೆ ಬರೆದು ಒಂದಿಷ್ಟು ಜನ ಸ್ಟೇರಿ ಸ್ಲೋಗನ್ ಹಾಕುತ್ತಾ ಬೀದಿಗಿಳಿದ್ರೆ ಮೂರನೇ ದಿನಾನೇ ಕ್ರಾಂತಿ ಬಂದುಬಿಡುತ್ತೆ ಅಂತಾ ತಿಳಿದ್ವಿ...... ಅದೊಂಥರಾ ಪ್ರಿಮೆಚೂರ್ಡ್ ಮನಸ್ಸು. ಭ್ರಮೆಗಳೇ ನಮ್ಮಲ್ಲಿ ಬಿತ್ತಿ ಬೆಳೆದ್ವು..... ಈಗ ನೀನು ವ್ಯವಹರಿಸುತ್ತಿರೋ ರೀತಿನಲ್ಲಿ ನೀನಿನ್ನೂ ಭ್ರಮೇಲೇ ಇದ್ದೀಯಾ, ನಾಲ್ಕಾರು ಹಳ್ಳಿಯ ರೈತರಿಗೆ ಗೊಬ್ಬರವೋ, ಪಂಪ್‌ಸೆಟ್ಟನ್ನೋ ಉದ್ರಿಯಾಗಿ ಕೊಟ್ಟುಬಿಟ್ಟರೆ ಸಮಾನತೆ ಬಂದು ಬಿಡುತ್ತದೆ ಅಂತ ತಿಳಿದಿದೀಯಾ........'

'ನಾನು ಅಂತಹ ಚೈಲ್ಡಿಶ್ ಅಲ್ವೋ. ಪಾಪ, ಅವರಾದ್ರೂ ಏನು ಮಾಡಿಯಾರು ಹೇಳು. ಇರೋ ವ್ಯವಸ್ಥೇನೇ ಹಾಗಿದೆ. ಇಲ್ಲಿ ಯಾರೂ ಅಪ್ರಾಮಾಣಿಕರಲ್ಲ. ಭ್ರಷ್ಟಗೊಂಡಿರೋ ಬದುಕು ಅಪ್ರಾಮಾಣಿಕ ಮನಸ್ಸುಗಳನ್ನು ಹುಟ್ಟಿಸುತ್ತೆ. ಈ ಅಪ್ರಾಮಾಣಿಕ ಮನಸ್ಸುಗಳೇ ರೋಗಗ್ರಸ್ತ ಸಮಾಜ ನಿರ್ಮಿಸುತ್ತವೆ....' ಮುಂತಾಗಿ ರಾತ್ರಿಯೆಲ್ಲ ಹೇಳಿದ ಸತ್ಯ ನಿಜಕ್ಕೂ ಗೊಂದಲದಲ್ಲಿದ್ದ. ಬಹುಶಃ ಅವನ ಜೀವನ ಶೈಲಿಗೂ, ಉದಾತ್ತತೆಗೂ, ಸುತ್ತಲಿನ ವ್ಯವಹಾರಿಕತೆಗೂ ತಾಳೆಯಾಗದೆ ಸೋತಂತಿದ್ದ.

ಸತ್ಯ ಮತ್ತೊಮ್ಮೆ ಬಂದಿದ್ದ. ಹಾಗೂ ಹೀಗೂ ಶುರು ಮಾಡಿಕೊಂಡು ಮತ್ತೆ ವ್ಯವಹಾರ ಆರಂಭಿಸಿಕೊಂಡಿದ್ದ. ಹೀಗೆ ಆತನ ಏಳು ಬೀಳು, ಸೋಲು ಗೆಲುವುಗಳು ಸಹಜವೆಂಬಂತೆ ನಮಗನ್ನಿಸಿ ಆತನೂ ಹಠ ಬಿಡದ ತ್ರಿವಿಕ್ರಮನಾಗಿ ನಾವು ಅವನ ವ್ಯವಹಾರಗಳನ್ನು ಮರೆಯತೊಡಗಿ ಸತ್ಯನೇ ಮುಖ್ಯವಾಗಿ, ನಾವೆಲ್ಲ ಮತ್ತೊಂದು ವೃತ್ತಿ ಹಿಡಿದು, ನಾನು ಕಾಲೇಜು ಮಾಸ್ತರಿಕೆಯನ್ನು ನೆಚ್ಚಿ, ದೇಶಪಾಂಡೆ ಬ್ಯಾಂಕ್ ಸೇರಿ, ಸೂರ್ಯ ವಕೀಲನಾಗಿ ಉಳಿದ ನಾಲ್ಕಾರು ಜನ ಎಲ್ಲೋ ಬೇರೆ ಬೇರೆಡೆಗೆ ಸೇರಿ ಹೋಗಿದ್ದೆವು.

ಬೈಕು ಹೈವೇ ಬಿಟ್ಟು ಮಣ್ಣು ರಸ್ತೆಗಿಳಿಯಿತು. ಹೆಡ್‌ಲೈಟಿನಲ್ಲಿ ಫಲಕ ಓದಿದೆ. ಸಿದ್ದವನಹಳ್ಳಿ ಇನ್ನೂ ಆರು ಮೈಲಿಯಿತ್ತು. ದೇಶಪಾಂಡೆ ಹಿಂದೆ ಕುಳಿತ. ನಾನು ಬೈಕು ನಡೆಸತೊಡಗಿದೆ. ಮಣ್ಣು ರಸ್ತೆಯಲ್ಲೆಲ್ಲ ಕೊರಕಲು, ಬೆಣಚುಕಲ್ಲುಗಳು. ಸಾಲು ಮಳೆಯಿಂದಾಗಿ ಕೆಸರು ಮೂಡಿ ಅಲ್ಲಲ್ಲಿ ನೀರು ತುಂಬಿದ ಗುಂಡಿಗಳು. ಕತ್ತಲಲ್ಲಿ ಬೈಕು ನಡೆಸುವುದೇ ಸರ್ಕಸ್ಸಾಯಿತು. ಇದೇ ರಸ್ತೆಯ ಕುರಿತಾಗಿಯೇ ಸತ್ಯ ಮೊದಲಿಂದಲೂ ಹೇಳುತ್ತಿದ್ದ.

'ಹೈವೇನಿಂದ ನಮ್ಮೂರಿಗೆ ಇರೋ ರಸ್ತೆ ಡಾಂಬರಾಗಬೇಕೂಂತ ಮೊದಲಿನಿಂದಲೂ ಪ್ರಯತ್ನ ಮಾಡ್ತೀದ್ದೀನಿ. ಆದ್ರೇನು, ನಮ್ಮೂರಲ್ಲಿ ಯಾವತ್ತೂ ಎರಡು ಪಕ್ಷ. ಎರಡರ ಪೈಕಿ ಒಂದು ಅಧಿಕಾರದಲ್ಲಿ ಇರುತ್ತೆ. ಅಧಿಕಾರದಲ್ಲಿದ್ದೋರ ಸಮಯದಲ್ಲಿ ಆ ರಸ್ತೆ ಆದ್ರೆ ಅದರ ಕೀರ್ತಿ ಅವರಿಗೆ ಹೋಗುತ್ತದೆ ಅಂತ ವಿರೋಧವಾಗಿದ್ದೋರು ಅಡ್ಡಗಾಲಾಕುತ್ತಾರೆ. ವಿರೋಧವಾಗಿದ್ದೋರು ಅಧಿಕಾರಕ್ಕೆ ಬಂದಾಗ ಇವರ ವಿರೋಧವಾಗಿರೋರು ಅಡ್ಡಿಯಾಗುತ್ತಾರೆ. ಹೀಗಾಗಿ ಅದು ಎಂದಿನಿಂದ ಉಳಿದುಕೊಂಡು ಬಂದಿರೋದು ಇದೇ ಸ್ಥಿತಿಯಲ್ಲಿ. ಜಗತ್ತಿನೆಲ್ಲ ನಿಯಮಗಳು ಗೊತ್ತಿರೋ ನನಗೆ ಈ ದರಿದ್ರ ವ್ಯವಹಾರಕ್ಕಂಟಿಕೊಂಡು ಏನೂ ಮಾಡೋಕ್ಕಾಗ್ತಾ ಇಲ್ಲ' ಎಂದು ಕೊರಗುತ್ತಿದ್ದ.

ಜೀವನ ನಿರ್ವಹಣೆಗೋಸುಗ ವ್ಯವಹಾರವಾಗಿ, ಉಳಿದೆಲ್ಲ ಸಮಯ ನಾಲ್ಕು ಜನರಿಗಾಗಿ ಎಂದುಕೊಂಡು ಆರಂಭಿಸಿದ್ದ ಆತನ 'ಜನರಿಗಾಗಿ' ಎಂಬ ಐದಕ್ಷರಗಳ ಶಬ್ದವೇ ಕೊರಳ

ಕುಣಿಕೆಯಾಗಿ ಅದು ಎಳೆದತ್ತ ಇವ ಹೋಗಲಾರದವನಾಗಿ, ಇವನತ್ತ ಅದು ಬರದೇ ಸ್ವಷ್ಟ ಇಬ್ಬಂದಿತನದಲ್ಲಿ ಸಿಲುಕಿ ನಿಜಕ್ಕೂ ಸತ್ಯ ಸತ್ತಂತೆ ಕಾಣುತ್ತಿದ್ದ.

ಮಳೆ ಕಡಿಮೆಯಾಗಿ ಸಂಪೂರ್ಣ ನಿಂತರೂ ಕೂಡ, ಕತ್ತಲೆಯಿಂದ ಹಾದು ಬರುತ್ತಿರುವ ತಂಪುಗಾಳಿ ಎಲುಬು ಕೊರೆಯುವ ಚಳಿ ಮೂಡಿಸಿತ್ತೆನ್ನುವಾಗ ಸತ್ಯನ ಮನೆಯೆದುರು ನಮ್ಮ ಬೈಕ್ ನಿಂತಿತು.

ಶವ ಮಲಗಿಸಿದ ಚಟ್ಟ ಮನೆಯೆದುರಿನ ಅಂಗಳದಲ್ಲಿತ್ತು. ಸುತ್ತ 'ಝುಗ್' ಎನ್ನಿಸುವ ಬೆಳಕು. ಬೆಳಕು ಗ್ಯಾಸ್ ಲೈಟನಿಂದ ಬರುತ್ತಿರಬೇಕೆನಿಸಿತು. ಕಟ್ಟೆಯ ಮೇಲೆ ಜನ, ಎದುರಿನ ಬಯಲಿನಲ್ಲಿ ಜನ, ನಿಲ್ಲುವಂತೆ ಇರುವಲ್ಲೆಲ್ಲ ಜನ....ಜನ..... ಬಹುಶಃ ಇದೇ ಜನ ಸತ್ಯ ಜೀವಂತವಿದ್ದ ಹೊತ್ತಲ್ಲಿ ನೂರೆಂಟು ಪೆಟ್ಟ ಬಿಗಿದ ಜನವಾಗಿರಬೇಕು. ದಿವಾಳಿಖೋರನೆಂದವರು, ಹುಚ್ಚನೆಂದವರು, ಸಾಲಗಾರನೆಂದವರು ಈಗ ಕಥೆ ಕಟ್ಟುತ್ತಿರಬೇಕು. ಅಲ್ಲಲ್ಲಿ ಜನ ಗುಂಪು ಗುಂಪಾಗಿ ನಿಲ್ಲುವಂತೆ ಇದ್ದಲ್ಲೆಲ್ಲ ಜನವಾಗಿ, ಜಾತ್ರೆಯೇ ಅಲ್ಲಿದ್ದಾಗಲೂ ಕೂಡ ಎಂಥದೋ ಭೀಕರ ಮೌನವಲ್ಲಿ ಮನೆ ಮಾಡಿತ್ತು. ಇಡೀ ದೃಶ್ಯ ಅಸಂಗತ ನಾಟಕವೊಂದರಲ್ಲಿ ಫ್ರೀಝ್ ಆದ ದೃಶ್ಯದಂತಿತ್ತು. ಸ್ತಬ್ಧ ಚಿತ್ರವೊಂದರ ನೆರಳಾಗಿತ್ತು.

ದೂರವೇ ನಿಂತ ನಾವು ಶವದ ಬಳಿ ಹೋದೆವು. ಆಗಲೇ ಪೋಸ್ಟ್‌ಮಾರ್ಟಮ್ ಹೆಸರಿನಲ್ಲಿ ಚಿಂದಿಯಾಗಿರಬಹುದಾದ ಶವದ ಮುಖವನ್ನು ಬಿಳಿ ಬಟ್ಟೆ ಮುಚ್ಚಿತ್ತು. ಬಾಗಿಕೊಂಡು ಶವದ ಮುಖದ ಮೇಲಿನ ಬಟ್ಟೆ ಸರಿಸಿದೆ. ನನ್ನ ಕೈಗೆ ಇನ್ನೊಂದು ಕೈ ಸೇರಿಕೊಂಡಿತು. ನೋಡಿದೆ, ಬಾಯಿಂದ ಮಾತು ಜಾರಿತು. 'ಅಡ್ವೋಕೇಟ್ ಜನರಲ್' ಸೂರ್ಯನಿಗೆ ಸತ್ಯ ಇಟ್ಟಿದ್ದ ಅಡ್ಡನಾಮ. ಶವದ ಮುಖ ನೋಡಿದೆ. ಕರಕಲಾದ ಮುಖ. ಸಾವಿನಲ್ಲೂ ಕೂಡ ಸತ್ಯ ಹಲ್ಲಿನಿಂದ ಕೆಳದುಟಿ ಕಚ್ಚಿ ಹಿಡಿದಿದ್ದ. ತುಟಿ ಕಚ್ಚುವುದು ಆತನ ಹುಟ್ಟುಗುಣ ! ಒಮ್ಮೆಲೇ ಸಾವು ಭಯಾನಕವೆನ್ನಿಸಿ ಅದುವರೆಗೂ ಅದುಮಿಟ್ಟಿದ್ದ ಅಳು ಹೊರಬಂತು.

ಸೂರ್ಯ ನನ್ನನ್ನೂ, ದೇಶಪಾಂಡೆಯನ್ನೂ ಬದಿಗೆ ಕರೆದೊಯ್ದ. ಈ ಸಾವಿನಾಚೆಗೆ ಏನಿದೆ ? ಸ್ವರ್ಗ, ನರಕ ನಿಜವೇ ? ಹಾಗೊಂದು ವೇಳೆ ಆ ಲೋಕಗಳು ನಿಜವಾದರೆ ಅಲ್ಲೂ ಕೂಡ ಸತ್ಯ ಸಮಾಜವಾದ ಹೇಳೋಕೆ ಶುರು ಮಾಡಿರಬಹುದೇ ?

'ಕೇವಲ ಬರೆಯೋದೇ ಕಥೆಯಾಗಬಾರ್ದೋ, ಕಥೆಯೊಳಗಿನ ಪಾತ್ರಗಳೂ ನಾವಾಗಬೇಕು. ಕನಸುಗಳನ್ನು ಕಥೆಯಾಗಿಸೋದಕ್ಕಿಂತ ಕಥೆಗಳ ಪಾತ್ರಗಳಾಗಿ ಜೀವನದಲ್ಲಿ ಕನಸುಗಳ ನನಸುಗೊಳಿಸೋ ಪ್ರಯತ್ನ ಮಾಡಬೇಕು' ಎಂದು ನನ್ನ ಕಥೆಗಳ ಕುರಿತಾಗಿ ಹೇಳುತ್ತಿದ್ದ ನನ್ನ ಮಿತ್ರನ ಶವ ಯಾವುದೋ ದುರಂತ ಕಥೆಯ ಪಾತ್ರವೆಂಬಂತೆ ಉದ್ದಕ್ಕೂ ಮಲಗಿದಂತೆನ್ನಿಸಿತು.

'ಮಳೆಯಲ್ಲೇ ನೆಂದ್ಕೊಂಡು ಬಂದೀರಲ್ಲೋ, ರೈನ್‌ಕೋಟಾದ್ರೂ ತರಬಾರದಾಗಿತ್ತಾ' ಸೂರ್ಯ ಆಕ್ಷೇಪಿಸಿದ.

'ಹೊರಡುವಾಗ ನೆನಪಾಗಲಿಲ್ಲ. ಅಥವಾ ಬೇಕೂ ಅನ್ನಿಸಲಿಲ್ಲ. ಮಳೆಯಲ್ಲಿ ನೆನೆಯೋದೇ ಈ ಸ್ಥಿತಿಯಲ್ಲಿ ಉತ್ತಮ ಎಂದುಕೊಂಡು ಬಂದೆವು. ನೀನು ಹೇಳದೇ ಕೇಳದೇ ಬಂದೀದಿಯಲ್ಲಯ್ಯ.'

'ಅದೆಲ್ಲ ಹೊರಡುವಾಗ ಅವಸರವಾಯ್ತು. ಮನೇಲಿ ಹೇಳಿಯೇ ಬಂದಿದ್ದೆ. ನೀವು ಬಂದ್ರೆ ಸಿದ್ಧವನಹಳ್ಳಿಗೆ ಕಳಿಸಿಕೊಡೀಂತ. ಈ ಪುಣ್ಯಾತ್ಮ ಹೀಗೆ ಏನಾದ್ರೂ ಮಾಡ್ಕೋತಾನೆ ಅಂತ ಮೊದಲೇ ಅನ್ನಿಸಿತ್ತು' ಸೂರ್ಯ ನಮ್ಮ ಕುತೂಹಲದ ಹುಲ್ಲುರಾಶಿಗೆ ಕಿಡಿ ಹಾಕಿದ.

'ಯಾಕೆ ಹೀಗೆ ಮಾಡ್ಕೊಂಡ ಸತ್ಯ...... ಈ ರೀತಿ ಸಾಯೋ ಅಂಥಾದ್ದು ಏನಾಗಿತ್ತು......' ಕೇಳಿದೆ.

'ಬಹುಶಃ ಆತನ ಮೋಟಾರ್ ಸೈಕಲ್‌ನ ವೇಗ ಆತನ ಬದುಕನ್ನೂ ಸೇರಿಕೊಂಡ ಕಾರಣವೇ ಆತನಿಗೆ ಮುಳುವಾಗಿರಬೇಕು. ಏನೆಲ್ಲ ಕಲ್ಪನೆ ಇಟ್ಕೊಂಡು ಜೀವನ ಶುರು ಮಾಡಿದ. ಅವನ ಎಣಿಕೆಯಂತೆ ಯಾವುದೂ ನಡೆಯಲಿಲ್ಲ. ಬದುಕಿನ ಕುರಿತ ಅವನ ಕಲ್ಪನೆ ಅಷ್ಟಾಗಿ ವಾಸ್ತವಿಕವಲ್ಲದುದಾಗಿಯೂ ಮತ್ತು ಬಂಡೆಗಲ್ಲಿಗೆ ತಲೆ ಜಜ್ಜೋ ಆತನ ಮೊಂಡುತನದ ಜೊತೆ ಜೊತೆಗೆ ಆತ ಸಾಲು ಸಾಲಾಗಿ ಎದುರ್ಗೊಳ್ಳುತ್ತಲೇ ಬಂದ ಸೋಲುಗಳೂ ಕಾರಣವಾಗಿರಬೇಕು.'

ಸೂರ್ಯ ಹೇಳುತ್ತಿದ್ದ ಮಾತಿನಲ್ಲಿ ಕೊಂಚ ಭಿನ್ನತೆ ಗಮನಿಸಿದೆ. ಸತ್ಯನಿಂದ ಏನಾದರೂ ಸಾಧ್ಯವಾಗಿದ್ದರೆ ಆತನ ಮೊಂಡುತನವೇ ಹಟವಾದಿತ್ವ ಎನ್ನಿಸಿಕೊಳ್ಳುತ್ತಿತ್ತೇನೋ ! ಸೋತು ಮಲಗಿದ ಆತನ ಸಾವಿನ ಸಾಕ್ಷಿ ಹಟವಾದಿತ್ವವನ್ನೇ ಮೊಂಡುತನವನ್ನಾಗಿಸಿತ್ತು.

'ಸೋಲು ಅವನಿಗೆ ಒಗ್ಗಿ ಹೋಗಿತ್ತು. ಎಂದೂ ಆತ ಕಂಗೆಟ್ಟವನಲ್ಲ. ಆದ್ರೆ ಏಕಾಏಕಿ ಸಾವಿನಂತಹ ಎಸ್ಕೇಪಿಸಮ್‌ಗೆ ಶರಣಾಗೋ ಯಾವ ಸಮಸ್ಯೆ ಅವನಿಗೆ ಎದುರಾದದ್ದು' ದೇಶಪಾಂಡೆ ಮಧ್ಯೆ ಮಾತು ತುಂಡರಿಸಿದ.

'ಒಂದು ಸಮಸ್ಯೆಯೇ - ಅವನ ಹಿಂದೆ ಸಮಸ್ಯೆಗಳೇ ಸಾಲು ತೋರಣಗಟ್ಟಿ ನಿಂತಿದ್ದವು. ಸುಂದರ ಕೊಳದಂತಹ ಜೀವನಾನ ತಾನೇ ರಾಡಿ ಮಾಡಿಕೊಂಡ. ವಾಸ್ತವಿಕತೆ, ಮತ್ತದಕ್ಕೆ ಹೊಂದಿಕೊಳ್ಳದ ಆತನ ಪರ್ಸನಾಲಿಟಿಯೇ ಮೊದಲ ಸಮಸ್ಯೆ. ಲೈಫ್‌ನಲ್ಲಿ ಬಾರ್ಗೇನಿಂಗ್ ಅವನಿಗೆ ಗೊತ್ತಿರಲಿಲ್ಲ. ಬದುಕಿನ ಮೇಲೆ ಪ್ರಭುತ್ವ ಸಾಧಿಸೋ ಅವನ ಗತ್ತು ಬದುಕಿಗೆ ವಿರುದ್ಧವಾದದ್ದು. ಇಲ್ಲಿ ಬದುಕು ಒತ್ತಾಯಿಕೆಗಳಿಗೆ ಮಣಿಯೋದಿಲ್ಲ. ಬದುಕೇ ಬದುಕುವವನ ಮೇಲೆ ತನ್ನ ಪ್ರಭುತ್ವದ ಛಾಪು ಒತ್ತಿಕೊಳ್ಳುತ್ತದೆ. ಜೀವನ ಪರೀಕ್ಷಾ ಬೋರ್ಡ್ ಆಗಿಲ್ಲ

ಎನ್ನುವುದು ಗೊತ್ತಾಗಿದ್ದವನ ಎರಡನೇ ಸಮಸ್ಯೆ. ಸಾಲು ಸಾಲಾಗಿ ಬಂದ ಸೋಲುಗಳು, ತಾನೇ ಮಾಡಿಕೊಂಡ ಸಾಲಗಳು. ಇವುಗಳ ನಡುವೆ ಏನೆಲ್ಲ ಕಲ್ಪನೆಯಿಟ್ಟುಕೊಂಡು ಏನೂ ಸಾಧಿಸಲಾಗದ ಆತನ ಸಾಧನಾಶೂನ್ಯತೆ, ಅಭದ್ರ ಜೀವನ, ಮಣ್ಣುಪಾಲಾದ ಪ್ರತಿಷ್ಠೆ - ಕಾರಣಗಳ ಪಟ್ಟಿಯೇ ಆತನ ಹಿಂದೆ ಇದೆ.'

ಸೂರ್ಯನ ಮಾತಲ್ಲಿ ಕಹಿ ಇದ್ದರೂ ಸತ್ಯವಿತ್ತು.

'ಏನೇ ಆದ್ರೂ ಆತ ಮತ್ತೆ ಹೊಸದಾಗಿ ಜೀವನ ಆರಂಭಿಸೋ ಪ್ರಯತ್ನ ಮಾಡಬಹುದಾಗಿತ್ತು.'

'ಏನೂಂತ ಹೊಸದಾಗಿ ಪ್ರಯತ್ನ ಮಾಡ್ತಾನೆ ? ತಲೆ ತಪ್ಪಿಸುವ ಸ್ಥಿತಿ ಒಂದೆಡೆಯಾದರೆ, ಮನೆಯಲ್ಲಿ ಒಂದಕ್ಕೆರಡಾಗಿ ಹೆಗಲ ಮೇಲೇರಿದ ಜವಾಬ್ದಾರಿಗಳು, ಇವೆಲ್ಲಕ್ಕಿಂತ ಮುಖ್ಯವಾಗಿ ಆತನೊಳಗಿದ್ದ ಅವನ ಕುರಿತ ಅವನ ಆತ್ಮವಿಶ್ವಾಸವೇ ಛಿದ್ರಗೊಂಡದ್ದು.'

ನಾವೆಲ್ಲ ಸತ್ಯನನ್ನು ನೋಡಿದ್ದಕ್ಕಿಂತ ಭಿನ್ನವಾಗಿ ಇನ್ನೊಂದು ರೂಪದಲ್ಲಿ ಸೂರ್ಯ ಅವನನ್ನು ನೋಡಿದ್ದ. ಆತನ ಹಣಕಾಸಿನಿಂದ ಹಿಡಿದು ಕೋರ್ಟ್ ಜಗಳಗಳವರೆಗೆ ಆತ ಸತ್ಯನನ್ನರಿತಿದ್ದ.

ಸತ್ಯನ ತಮ್ಮ ನಮ್ಮ ಬಳಿ ಬಂದ. ಅವನದ್ದೇ ಪಡಿಯಚ್ಚು. ಸತ್ಯ ಕಾಲೇಜಿನಲ್ಲಿದ್ದಾಗ ಕಾಣುತ್ತಿದ್ದಂತೆ ಕಾಣುತ್ತಿದ್ದ. ನಮ್ಮ ಮಾತು ನಿಂತಿತು. ಸತ್ಯನ ತಂದೆ - ತಾಯಿ ಮೂಕರಂತೆ ಕುಳಿತಿದ್ದರು. ನಾವು ಸತ್ಯನ ತಂದೆಯ ಮುಖದ ಮೇಲೆ ಸದಾ ಕಾಣುತ್ತಿದ್ದ ಮಂದಹಾಸ ಕಾಣೆಯಾಗಿತ್ತು. ಒಳಗೆ ಪಡಸಾಲೆಯಲ್ಲಿ ಕುಳಿತ ಭಜನೆಯವರ ಭಜನೆ ಒಮ್ಮಿಂದೊಮ್ಮೆಲೇ ಶುರುವಾಯಿತು.

'ಮಣ್ಣಿನಿಂದ ಮಾಡಿ ಮತ್ತೆ ಮಣ್ಣಾಗೋ ಮಣ್ಣಿನ ಗಡಿಗೆ......' ಭಜನೆ ಪದ ಕೇಳುತ್ತಾ ನಾನು ವೇದಾಂತಿಯಂತೆ ನಿಡಿದಾದ ನಿಟ್ಟುಸಿರುಬಿಟ್ಟೆ.

ಗ್ಯಾಸ್ ಲೈಟಿನ ಬೆಳಕಿನಾಚೆ ಕವಿದ ಕತ್ತಲಿನಲ್ಲಿ ನೂರೊಂದು ಬಗೆಯ ಆಕಾರ ಪಡೆದ ಕಪ್ಪಿನಾಕೃತಿಯ ಗಿಡಮರಗಳು ಈ ಸಾವಿನ ನಾಟಕ ನೋಡುತ್ತಿರುವ ಮೌನ ಪ್ರೇಕ್ಷಕರದ್ದಾಗಿರಬಹುದೆನ್ನಿಸಿತು. ಆ ಕಪ್ಪುಗಳಲ್ಲಿ ಇನ್ನೂ ಹಲವಾರು ಸತ್ಯಗಳು ಅಡಗಿ ಆ ಸತ್ಯಗಳ ಮೇಲೆ ಸತ್ತು ಹೋದ ನಮ್ಮ ಸತ್ಯ ಸವಾರಿ ಮಾಡುತ್ತ ದೂರದಿಂದಲೇ ನಮ್ಮನ್ನೆಲ್ಲ ನೋಡುತ್ತಾ ನಿಂತಿರಬಹುದಾಗಿ ಯೋಚಿಸಿದೆ. ಯಾಕೋ ಆ ಕಡೆಗೆ ನೋಡುವುದೇ ಭಯವಾಗಿ ಮುಖ ಇತ್ತ ಹೊರಳಿಸಲಾಗಿ ನಿಂತು ಹೋಗಿದ್ದ ಕರೆಂಟೊಮ್ಮೆಲೇ ಬಂದಿತು.

ಮಧ್ಯರಾತ್ರಿ ಮುಗಿದು ನಸುಕಾಗತೊಡಗಿತ್ತು. ಸ್ಮಶಾನಕ್ಕೆ ಕಟ್ಟಿಗೆ ಒಟ್ಟಲು ಹೋದವರು ಬಂದರು. ಬೆಂಕಿ ಕಾಯಿಸುತ್ತಾ ಕುಳಿತಲ್ಲಿಯೇ ಚಿಂತಿಸಿದೆ. ಸತ್ಯ ನಮ್ಮೆದುರೇ ಇದ್ದ,

ತನ್ನತನದಿಂದಲೇ ತನ್ನದೇ ಆದ ಡಿಫರೆಂಟ್ ಛಾಪು ಒತ್ತಿಕೊಂಡಿದ್ದ ಸತ್ಯ ನಮ್ಮನ್ನೆಲ್ಲ ಅಬ್ನಾರ್ಮಲ್ ಮಾಡುತ್ತಾ ತಾನೂ ಅಬ್ನಾರ್ಮಲ್ ಆಗಿ ಜೀವಿಸಿಕೊಂಡಿದ್ದು, ನಮ್ಮೊಳಗೆಲ್ಲ ಮುಪ್ಪಾಗುವವರೆಗೂ ಮರೆಯಲಾಗದ ನೂರೆಂಟು ಬಗೆಯ ನೆನಪುಗಳ ಮೂಡಿಸಿದ್ದ ಸತ್ಯನ ಆರಡಿ ದೇಹ ಬೆಂಕಿಯೊಡಲಲ್ಲೊಂದಾಗಿ ಕೇವಲ ಸ್ಮೃತಿಯಾಗುಳಿಯುವುದು. ಹೀಗೆ ಅತ್ಯಾತ್ಮೀಯನೊಬ್ಬನ ಸಾವು ನನ್ನೆದೆಯ ಕಡಲಿಗೆ ದುಃಖದ ಕಡಗೋಲಿಟ್ಟು ಮೀಟತೊಡಗಿ ಮತ್ತೆ ಕಣ್ಣಂಚಿನಲಿ ಹಸಿಯಾಡತೊಡಗಿದಾಗ ದೇಶಪಾಂಡೆ ನುಡಿದ.

'ಬದುಕಿನೆಲ್ಲ ಉತ್ತರಗಳು ಗೊತ್ತಿದ್ದ ಸತ್ಯನಿಗೆ ಪ್ರಶ್ನೆಗಳೇ ಅರ್ಥವಾಗಲಿಲ್ಲ. ಜೊತೆಗೆ ಅವನಿಗೆ ಜೀವನದಿಂದ ಏನು ಬೇಕೂಂತ ಸ್ಪಷ್ಟ ಕಲ್ಪನೆಯೇ ಇದ್ದಿರಲಿಲ್ಲ. ಬಹುಶಃ ನಾವು ನಮ್ಮ ಸಮಕಾಲೀನನಾದ ಅತ್ಯಂತ ಪ್ರತಿಭಾವಂತನನ್ನು ಕಳಕೊಂಡ್ವಿ.'

ಸರಿಯೆನ್ನಿಸಿತಾದರೂ, ಎಲ್ಲ ಗೊತ್ತಿದ್ದ ಸತ್ಯನಿಗೆ ಜೀವನವೇ ಗೊತ್ತಾಗದೇ ಹೋದದ್ದು ಹೇಗೆಂಬ ಪ್ರಶ್ನೆಯೇ ದೊಡ್ಡದಾದ ಹೊತ್ತಿನಲ್ಲಿ ಮುಂಜಾವಿನ ಮಬ್ಬನ್ನು ಸೀಳಿ ಬಿಳಿ ಬಣ್ಣದ ಫಿಯೆಟ್ ಕಾರೊಂದು ಬಂದು ನಿಂತು, ಅದರಿಂದ ಬಂದಿಳಿದವಳನ್ನು ಕಂಡು ನನಗೆಲ್ಲೋ ನೋಡಿದ ನೆನಪಾಯಿತು. ಸೂರ್ಯ ತಲೆ ಕೆರೆದುಕೊಂಡ. ದೇಶಪಾಂಡೆ ಗೊಂದಲದಲ್ಲಿ ಬಿದ್ದ.

ತುಂಬಾ ಅತ್ತು ಬಳಲಿದಂತಿದ್ದ ಆಕೆ ಶವದೆದುರು ಬಂದವಳೇ ಬಿಕ್ಕಳಿಸಿದಳು. ಅಲ್ಲಿದ್ದ ಎಲ್ಲರಿಗೂ ಅವಳು ಅಪರಿಚಿತಳೇ ಎನ್ನಿಸಿತು. ಅವಳನ್ನು ಗುರ್ತು ಹಿಡಿದವ ಸತ್ಯನ ತಮ್ಮನೊಬ್ಬನೇ. ಆಕೆ ಆತನ ತಲೆ ನೇವರಿಸಿದಳು. ಎಲ್ಲರ ಮುಖದಲ್ಲಿ ಅವಳಾರೆಂದು ಅರ್ಥವಾಗದ ಪ್ರಶ್ನೆ. ಅಲ್ಲಿ ಸತ್ಯನೇ ನಡೆದಾಡಿಕೊಂಡಿರುವಂತೆ ಕಾಣುತ್ತಿದ್ದ. ಸತ್ಯನ ತಮ್ಮನೇ ಹಿರಿಯನಾಗಿದ್ದು ಆತ ಹೇಳಿದ ಕೂಡಲೇ ಸತ್ಯ ಮಲಗಿದ್ದ ಚಟ್ಟ ಮೇಲೆತ್ತಿದರು. ಹಾಗೆ ಮೇಲೆತ್ತಿದ ಕೂಡಲೇ ಅಳುವವರ ಅಳು ಮುಗಿಲು ಮುಟ್ಟಿತು. ಅದರಲ್ಲಿ ಸತ್ಯನ ತಾಯಿಯ ಅಳು ಅಲ್ಲಿದ್ದ ನಮಗ್ಯಾರಿಗೂ ನೋಡಲಾಗಲಿಲ್ಲ.

ನಾಲ್ವರ ಹೆಗಲಿನ ಮೇಲಿನ ಸತ್ಯನ ಶವ ಸುತ್ತಲಿನ ಕ್ಲೀಷೆಗಳನ್ನು, ಗೋಜಲುಗಳನ್ನು ಮರೆತು ನಿದ್ರಿಸುತ್ತಿರಬಹುದೆ ? ಕೊನೆಗೊಮ್ಮೆ ಶಾಂತನಾಗಿ ನಿದ್ರಿಸಿದನಲ್ಲ ಪುಣ್ಯಾತ್ಮ ! ಮಧ್ಯರಾತ್ರಿಯಲ್ಲೂ ಬುದ್ಧನಂತೆ ಧಿಗ್ಗನೆಂದೆದ್ದು ಕುಳಿತು, ಉಳಿದವರ ನಿದ್ರೆಗೆಡಿಸುತ್ತಿದ್ದವನಿಗೆ ನಿದ್ರೆಯೇ ಗೊತ್ತಿರಲಿಲ್ಲ. ನಾವು ಕೊಂಚ ದೂರ ಶವಕ್ಕೆ ಹೆಗಲು ಕೊಟ್ಟೆವು. ಜೀವನದಲ್ಲಿ ಭಾರವೆನಿಸುತ್ತಿದ್ದ ಸತ್ಯ ಸತ್ತ ಮೇಲೆ ಏಕೋ ಹಗುರಾಗಿ ಹತ್ತಿಯಂತಹುದೇನನ್ನೋ ನಾವು ಹೊತ್ತು ನಡೆದಿದ್ದೇವೆಂಬ ಭಾವ ಮೂಡಿ ಬೇರೆಯವರು ಹೆಗಲು ಕೊಡಲು ಬಂದಾಗ ಮನಸಿರದ ಮನಸಿನಿಂದ ಹೆಗಲು ದಾಟಿಸಿದೆವು.

ಶವದ ಹಿಂದೆ ನಡೆಯುತ್ತಿದ್ದವರನ್ನು ಬಿಟ್ಟು ನಾವು ಎಲ್ಲರಿಗಿಂತ ಹಿಂದುಳಿದು ನಿಂತೆವು. ತಲೆಗಳೇ ತಲೆಗಳು. ಆ ತಲೆಗಳ ಮೇಲೆ ದೂರದಲ್ಲಿ ಹೂವಿನ ಹೊದಿಕೆಯ ಸತ್ಯನ ಶವ.

ತಲೆಗಳ ಸಾಗರದ ಮೇಲೆ ತೇಲುತ್ತಿದ್ದ ಹರಿಗೋಲಿನಂತೆನ್ನಿಸಿತು. ಅಕ್ಕಪಕ್ಕ ನೋಡಿದರೆ ಕಂಡ ಸೃಷ್ಟಿ ನಮಗೆ ಹೊಸತಾಗಿರಲಿಲ್ಲ. ಅಲ್ಲೆಲ್ಲ ನಾವು ಸತ್ಯನೊಂದಿಗೆ ಸುತ್ತಿದ ನೆನಪು. ದೂರದ ಬೆಟ್ಟವಗುಂಟ ಹಸಿರು ಹೊಲಗಳು, ಹಾದಾಡಿದ ಹಾದಿ, ಅದೇ ಬಿಳಲು ಬಿಟ್ಟು ಹರಡಿಕೊಂಡ ಆಲದ ಮರ. ಸಾವಿರ ವರ್ಷದ ಮುದುಕನ ಗಡ್ಡಗಳಂತೆ ಬಿಳಲು ಬಿಟ್ಟು ಮೈ ಚಾಚಿದ ಆಲದ ಮರದ ಹತ್ತಿರ ರಜೆಯಲ್ಲಾಗಾಗ ಸತ್ಯ ಕರೆದುಕೊಂಡು ಬಂದಾಗ, ಸತ್ಯ ಅದೇ ಜಾಗೆಯಲ್ಲಿ ಕುಳ್ಳಿರಿಸಿಕೊಂಡು ಭಾಷಣ ಬಿಗಿಯುತ್ತಿದ್ದ. ಬುದ್ಧನ ಬೋಧಿ ವೃಕ್ಷಕ್ಕೂ, ಆಲದ ಮರಕ್ಕೂ ತಾಳೆ ಹಾಕಿ ಮುಂದೊಂದು ದಿನ ಈ ಮರಕ್ಕೆ ಮಾತು ಕಲಿಸುತ್ತೇನೆಂದು ಚೇಷ್ಟೆ ಮಾಡುತ್ತಿದ್ದ. ಆ ಅದೇ ಆಲದ ಮರ ಮೌನವಾಗಿ ನಿಂತಿತ್ತು.

ಒಟ್ಟಿದ ಕಟ್ಟಿಗೆಯ ಮೇಲೆ ಸತ್ಯನನ್ನುದ್ದಕ್ಕೂ ಮಲಗಿಸಿ ಮುಗಿಲ ಮುಖ ಮಾಡಿ ಮತ್ತೆ ಎದೆ ತುಂಬ ಕಟ್ಟಿಗೆಯಿಟ್ಟರೆ ನಿಜಕ್ಕೂ ನಮ್ಮ ಒಳಮನಗಳು ಸತ್ಯ ಸತ್ತಿದ್ದನ್ನು ಒಪ್ಪಿಕೊಳ್ಳಲು ಒದ್ದಾಡಿದವು. ಮುಗಿಲ ಮುಟ್ಟುವ ಚಿಂತನೆಯನ್ನು ನೆಲದ ಹಸಿರಲ್ಲಿ ಬಿತ್ತ ಹೊರಟವ ಶಾಂತವಾಗಿ ಮಲಗಿದ್ದ. ಸುತ್ತ ನೆರೆದ ಜನರನ್ನು ಕಂಡು ಸತ್ಯನ ಕುರಿತು ಯಾರಿಗಾದರೂ ಹೆಮ್ಮೆ ಮೂಡಬೇಕು. ಸಾಧಾರಣ ಜಾತ್ರೆಯೊಂದು ನೆರೆದಂತೆ. ಇದೇ ಜನ ಸತ್ಯ ಜೀವಂತವಿದ್ದಾಗ ಬೆಂಗಾವಲಾಗಿದ್ದರೆ ಸತ್ಯ ಸಾಯುತ್ತಿರಲಿಲ್ಲವೇನೋ ?

ಸತ್ಯನ ತಮ್ಮ ಚಿತೆಯ ಸುತ್ತ ಸುತ್ತಿ ಬೆಂಕಿಯಿಟ್ಟು ಧಗ ಧಗಿಸಿ ಉರಿಯುತ್ತಿದ್ದ ಚಿತೆಯ ಉರಿ ಮೂಡಿಸಿದ ಮರೀಚಿಕೆಯಿಂದಾಗಿ ಸುತ್ತಲಿನ ಜಗವೆಲ್ಲ ಜಲದಂತೆ ಏರಿಳಿಯುತ್ತಿದ್ದುದ ಕಂಡು ಸತ್ಯ ನೆಲದಾಳಕ್ಕಿಳಿದು ಹೋಗುತ್ತಿದ್ದಾನೆನ್ನಿಸಿ ಕೆಳಗೆ ನೋಡಲಾಗದೇ ಮುಖವೆತ್ತಿ ಮುಗಿಲ ನೋಡಿದರೆ ಕವಿದುಕೊಂಡ ಹೊಗೆಯಲ್ಲಿ ಸತ್ಯನ ಮುಖ. ಬಹುಶಃ ಅಲ್ಲಿ ಮೋಡಗಳಿಗೆ ಸತ್ಯ, ಆಲ್ತೂಜರ ಬಗ್ಗೆಯೂ, ಮಾರ್ಕ್ಸ್‌ನ ವಿಚಾರಗಳು ಒಂದು ಜೀವನ ಪ್ರಕ್ರಿಯೆಯೆಂದೂ ಹೇಳುತ್ತಿರಬಹುದೇ ಎಂಬ ಪ್ರಶ್ನೆ ಮೂಡಿತು.

ಸ್ಮಶಾನದಿಂದತ್ತ ದೂರದಲ್ಲಿ ಕಾರುಗಳ ಸಾಲಿನೊಂದಿಗೆ ಮುಂಭಾಗದಲ್ಲಿ ಕೆಂಪು ಲೈಟಿನ ಕಾರೊಂದು ಹತ್ತಿರ ಹತ್ತಿರವೇ ಬಂದು, ಬಂದಂತಹ ಎಲ್ಲ ಕಾರುಗಳನ್ನೂ ಸ್ಮಶಾನದ ಹೊರಭಾಗದಲ್ಲಿಯೇ ನಿಲ್ಲಿಸಿ, ಇಳಿದವರು ದಡಬಡಿಸಿ ಚಿತೆಯ ಬಳಿ ಬಂದರೆ ಅಲ್ಲಿದ್ದವರು ಸರಿದು ಜಾಗ ಮಾಡಿಕೊಟ್ಟರು. ದೇಶಪಾಂಡೆ 'ಇವನೇ ನೋಡು ಸಿದ್ರಾಮಗೌಡ' ಎಂದ. ನಾನು ದಿಟ್ಟಿಸಿದೆ. ಕುರುಚಲು ಕೂದಲು ತಲೆಯ ಭರ್ಜರಿ ಆರಡಿ ಎತ್ತರದ ಆಸಾಮಿಯ ಅಕ್ಕಪಕ್ಕ ಅವನವರೇ ಆದ ಇನ್ನೂ ಇಪ್ಪತ್ತು ಜನ ಇರಬಹುದು. ಇದೇ ಸಿದ್ರಾಮ ಚುನಾವಣೆ ಸಮಯದಿಂದ ಹಿಡಿದು ಮೊನ್ನೆ, ಮೊನ್ನೆಯವರೆಗೆ ವಿಷಕಾರುತ್ತಲೇ ಬಂದಿದ್ದ. ಆಗಾಗ ಚರ್ಮ ಸುಲಿಸುವ ಬೆದರಿಕೆಗೂ ಸತ್ಯ ಕೇರ್ ಮಾಡಿರಲಿಲ್ಲ. ಆಗಾಗ ಪತ್ರಿಕೆಗಳಿಗೂ ಬರೆದು ಸುದ್ದಿ ಮಾಡಿದ್ದ ಸತ್ಯ, ನಿಷ್ಠುರ ಸತ್ಯ, ಸಿದ್ರಾಮನ ಕುತ್ತಿಗೆಯಲ್ಲಿ ಸಿಕ್ಕ ಮುಳ್ಳಿನಂತಾಗಿದ್ದ. ಇದೇ

ಸಿದ್ರಾಮಗೌಡ ಮೊನ್ನೆ ಮೊನ್ನೆ ಮಂತ್ರಿಯಾಗಿ ಆರ್ಭಟಿಸತೊಡಗಿದ್ದು ಸುದ್ದಿಯಾದರೆ ಸತ್ಯ ಕೂಡ ಮತ್ತೆ ಮೂಲ ಕೆದಕುವ ಪ್ರಯತ್ನ ಮಾಡಿದ್ದ. ಸಿದ್ರಾಮಗೌಡನ ಮುಖದ ಮೇಲೆ ದುಃಖವೋ ಅಥವಾ ವೈರಿ ಸತ್ತು ತಾನಿನ್ನು ನಿಶ್ಚಿಂತ ಎನ್ನುವ ಸಂತೃಪ್ತಿಯೋ ಅರ್ಥೈಸಲಾಗಲಿಲ್ಲ. ಎರಡು ನಿಮಿಷ ನಿಂತಿದ್ದು ಕಂಡವರ ಭುಜ ಚಪ್ಪರಿಸುತ್ತ ಕಾರಿನೆಡೆಗೆ ಸಿದ್ರಾಮಗೌಡ ಹೊರಳಿದರೆ ಗುಂಪು ಅವನನ್ನು ಹಿಂಬಾಲಿಸಿತು. ಸಿದ್ರಾಮಗೌಡನ ಖಾಸಾಬಂಟ ಶಿವನಿಂಗ ಕೈಯಲ್ಲಿದ್ದುದೇನೋ ಚಿತೆಯಲ್ಲೊಗೆದು ಮರಳಿ ನೋಡದೇ ನಡೆದು ಕಾರೇರಿದ. ಕದಲಿದ ಕಾರುಗಳ ದಂಡು ನಿಂತವರ ಮುಖಕ್ಕೆ ಹೊಗೆ ರಾಚಿ ನಡೆದವು.

ಪಕ್ಕದಲ್ಲಿಯೇ ನಿಂತಿದ್ದ ಸತ್ಯನ ತಮ್ಮ ಯಾವ ಮಾಯೆಯಿಂದಲೋ ಉರಿಯುತ್ತಿದ್ದ ಚಿತೆಯ ಕೆಂಡಗಳ ನಡುವೆ ಕೈಯಿಟ್ಟು ಶಿವನಿಂಗ ಒಗೆದ ವಸ್ತುವನ್ನೆತ್ತಿಕೊಂಡಿದ್ದ. ಝಳ ತಗುಲಿ ಬೆಂದಂತಾಗಿದ್ದ ಕೈಯೊಳಗೆ ಚೈನೊಂದು ಕಂಡು ನಮ್ಮ ಕಣ್ಣುಗಳರಳಿದವು. ಅದು ಅಲ್ಲಿದ್ದ ನಮ್ಮೆಲ್ಲರಿಗೂ ಪರಿಚಯವಿದ್ದ ಸತ್ಯನ ಕೊರಳಲ್ಲಿದ್ದ ಚೈನಾಗಿತ್ತು. ಕಡಿಮೆ ಕಿಮ್ಮತ್ತಿನ ಮಿಶ್ರಲೋಹದ ಇಂಗ್ಲೀಷ್ ಅಕ್ಷರದೊಳಗಿನ 'ರೆಡ್ಸ್' ಎಂದು ಕೆತ್ತಿದ ಚೈನನ್ನು ಸತ್ಯನಿಗೆ ದೆಹಲಿಯ ಸಭೆಯಲ್ಲಾರೋ ಕೊಟ್ಟಿದ್ದಾಗಿತ್ತು. ಅದನ್ನೆಂದೂ ಆತ ತೆಗೆಯುತ್ತಿರಲಿಲ್ಲ.

ಗುಂಪುಗೂಡಿದ ನಾವೆಲ್ಲ ಸತ್ಯನ ತಮ್ಮನ ಕೈಗೆ ತೇವದ ಬಟ್ಟೆ ತಗುಲಿಸಿ ಸುತ್ತಿದೆವು. ಆತ ಮಾತ್ರ ಬಿಗಿದ ತುಟಿ ಬಿಚ್ಚಲಿಲ್ಲ. ಅಲ್ಲಿ ಯಾವುದೋ ಹಠವಿತ್ತು. ಅಲ್ಲಿದ್ದವರೆಲ್ಲ ಶಿವನಿಂಗ ಸತ್ಯ ತೀರಿಕೊಂಡ ಸಂದರ್ಭದಲ್ಲಿ ಅದೇ ಕಬ್ಬಿನ ಗದ್ದೆಯ ಬಯಲಿನಲ್ಲಿಯೇ ಇದ್ದನೆಂದೂ, ಗದ್ದೆಯ ಗೇಟಿಗೆ ಕರೆಂಟ್ ತಂತಿ ಜೋಡಿಸಿ ಕರೆಂಟ್ ಕೊಡಲಾಗಿತ್ತೆಂದೂ, ಗೇಟು ತೆಗೆಯಲು ಕೈಯಿಟ್ಟು ಸತ್ಯ ಶಾಕ್ ತಗುಲಿ ಅಲ್ಲಿಯೇ ಮೃತಪಟ್ಟನೆಂದೂ ಪಿಸು ಪಿಸು ಮಾತಾಡಿಕೊಳ್ಳತೊಡಗಿದ್ದರು. ನಮಗೆ ಸಾವಿನ ಹಿಂದಿರಬಹುದಾದ ಇನ್ನೊಂದು ನಿಗೂಢವನ್ನು ಅರಿತಂತಾಗಿ ಆಕ್ರೋಶವುಕ್ಕಿತು.

ಜ್ವಾಲೆಗಳೆಲ್ಲ ಕೆಂಡದುಂಡೆಗಳಾಗಿ ಶವ ಕರಗಿಸಿದಾಗಲೂ ಕೂಡ ನಿಂತೇ ಇದ್ದವರು ಇನ್ನೂ ತಲೆ ಸಿಡಿದಿಲ್ಲ ಎನ್ನುತ್ತಿದ್ದರು. ಯಾವ ತಲೆ, ಹುಗಿದು ಹೋಗಿದ್ದ ಗಂಟಲಿನಿಂದ ದೇಶಪಾಂಡೆ ಮತ್ತೆ ಮಾತು ಹೊರತೆಗೆದ.

'ಸತ್ಯನ ತಲೆ ಸಿಡೀಬೇಕು ಅಂತಾರಲ್ವ ! ಎಂಥ ಮೆದುಳು ಇರೋ ತಲೆ ಅದು. ಒಂದು ನಿಮಿಷಕ್ಕೆ ಅರವತ್ತು ಸೆಕೆಂಡ್ ಆದ್ರೆ ವರ್ಷಕ್ಕೆಷ್ಟು ಸೆಕೆಂಡ್ ಆಗುತ್ತೇಂತ ಕೇಳಿದ್ರೆ ಕಾಲು ನಿಮಿಷದಲ್ಲಿ ಹೇಳುವಂತಹ ಮೆದುಳು....' ಗೊಣಗಿಕೊಂಡಿದ್ದು ಕೇಳಿಸಿತು.

ನಾನು ಚಿಂತಿಸಿದೆ. ಸತ್ಯನ ಅದೇ ಮೆದುಳಿನಲ್ಲಿ ಅಡಕವಾಗಿರಬಹುದಾದ ಸಮಾಜವಾದ, ಕ್ವಿಟ್ ಇಂಡಿಯಾ ಮೂವ್‌ಮೆಂಟ್, ಗಾಂಧೀ, ಕಾರಂತರ ಮೂಕಜ್ಜಿ, ಕಾಫ್ಕಾನ

ಮೆಟಾಮಾರ್ಫಾಸಿಸ್, ರಸೆಲ್, ತನಗೆ ಬರಲಿರುವ ಹಣದ ಪಟ್ಟಿ, ಕೊಡಬೇಕಾದ ಸಾಲದ ಪಟ್ಟಿ ಎಲ್ಲಾ ಏನಾಗಬಹುದೆಂಬ ಜಿಜ್ಞಾಸೆಗುತ್ತರವೆಂಬಂತೆ ಚಿತೆಯಿಂದ 'ಢಬ್' ಎಂಬ ಸಪ್ಪಳ ಕೇಳಿದರೆ ಚಿತೆಯಿಂದ ಸಿಡಿದ ಕೆಂಡಗಳು ! ಅವುಗಳೇ ಸತ್ಯನ ಮೆದುಳ ಚೂರಾಗಿರಬೇಕೆಂದುಕೊಂಡೆ. ಜನ ಹೇಳಿಕೊಂಡರು 'ತಲೇ ಸಿಡೀತು ತಲೇ ಸಿಡೀತು.'

ಅರ್ಧ ಜನ ಕರಗಿದಾಗಲೂ ಇನ್ನೂ ನಿಂತೇ ಇದ್ದ ಆಕೆ ಪ್ರಶ್ನೆಯಾದಳು. ಕಣ್ಣುಗಳಲ್ಲಿ ಚಿತೆಯನ್ನೇ ತುಂಬಿಕೊಳ್ಳುವಂತೆ ನೋಡುತ್ತಿದ್ದ ಆಕೆ ನೆನಪಿನೆಳೆಯ ಗಾಳಕ್ಕೆ ಸಿಕ್ಕಳು. ಆಕೆಯೇ ಮೇಘಮಾಲೆ. ಪಿ.ಯು.ಸಿ.ಯಲ್ಲೋದುತ್ತಿದ್ದಾಗಲೇ ನಮ್ಮಿಂದ ಬೀಳ್ಕೊಂಡು ದೂರಾಗಿ ಮೆಡಿಕಲ್ ಸೇರಿಕೊಂಡು ಮರೆಯಾದ ಮೇಘ ಹದಿನಾಲ್ಕು ವರ್ಷಗಳ ನಂತರ ಇಲ್ಲಿ ಧುತ್ತೆಂದು ಅವತರಿಸಿದ್ದು ವಿಸ್ಮಯವಾಯಿತು. ಮೂರೂ ಜನರಿಗೂ ಸತ್ಯ ಈ ಕುರಿತು ಏನು ಹೇಳದಿದ್ದುದು ಅಚ್ಚರಿ ಹುಟ್ಟಿಸಿತ್ತು.

ಅವಳೆಲ್ಲಿ ಎಂದು ನೋಡುತ್ತಿರುವಾಗಲೇ ಆಕೆ ಊರಿನತ್ತ ನಡೆದಿದ್ದಳು. ನಾವು ಜನರನ್ನು ಹಿಂಬಾಲಿಸಿದೆವು. ಹಾದಿಗೆದುರಾದ ಹಳ್ಳದಲ್ಲಿ ಮುಖ ತೊಳೆಯುತ್ತಾ ನಿಂತು ಕೊಂಚ ತಡವಾಗಿರಬೇಕು. ನಾವು ನಿಧಾನಕ್ಕೆ ನಡೆಯುತ್ತಾ ಸತ್ಯನ ಕುರಿತಾಗಿ ಮಾತನಾಡುತ್ತ ಸತ್ಯನ ಮನೆಯೆದುರು ಬರುವಷ್ಟರಲ್ಲಿ ನಮಗೆದುರಾದ ಅದೇ ಬಿಳಿಯ ಫಿಯೆಟ್ ಕಾರ್‌ನಲ್ಲಾಕೆ ಎದುರಿಗೆ ಬಂದು ಕ್ಷಣ ಗೊಂದಲ ಮೂಡಿಸಿ ಸಾಗಿಹೋದಳು. ಕಾರೆರಚಿದ ನಸುನೀಲಿ ಹೊಗೆಯ ತೆರೆಯಲ್ಲಿ ಮುಂದಿನ ತಿರುವಿನಲ್ಲಿ ವೇಗದಿಂದ ಸಾಗಿ ಮರೆಯಾಯಿತು. ಇಂಥದೇ ವೇಗ, ಹೆಚ್ಚೆನ್ನಿಸಬಹುದಾದ, ಎದೆಗಾರಿಕೆ ಎನಿಸಬಹುದಾದ ಸತ್ಯನ ವೇಗ ನೆನೆದೆವು. ನಿಗೂಢವಾಗಿ ಉಳಿದ ಈ ಸಂಗತಿ ಮನವನ್ನು ಕಾಡಿದರೂ, ಆ ಗಳಿಗೆಯಲ್ಲಿ ಸತ್ಯನ ತಂದೆ - ತಾಯಿಗಳನ್ನು ಸಂತೈಸಿ ಸತ್ಯನ ತಮ್ಮನಿಗಷ್ಟು ಧೈರ್ಯ ಹೇಳಿ ನಮ್ಮನ್ನೂ ಸತ್ಯನಂತೆಯೇ ತಿಳಿದುಕೊಳ್ಳಿ, ತೊಂದರೆಯಿದ್ದರೆ ನಾವಿದ್ದೇವೆ ಎನ್ನುವಾಗ ಮಾತುಗಳು ಕೃತಕವಾದಂತೆನ್ನಿಸಿ ಮರಳಿದೆವು.

ನಾನು ಸತ್ಯನ ಸಾವನ್ನು ಶಬ್ದಗಳಲ್ಲಿ ಹಿಡಿಯುವ ಯತ್ನ ಮಾಡತೊಡಗಿದೆ. ಸೂರ್ಯ ಸತ್ಯನ ಸಾವಿನ ಹಿನ್ನೆಲೆಯನ್ನು ಹುಡುಕತೊಡಗಿದ.

●

(೧೯೯೩)

# ದನ ಕಾಯದವನು

● ಸುಬ್ಬು ಹೊಲೆಯಾರ್

ಬೆಳಿಗ್ಗೆ, ನಾನು ಏಳುವುದರೊಳಗೆ ಅವ್ವ ಕಸ ಹಾಕುವುದಕ್ಕೆ ಕೊಟ್ಟಿಗೆಗೆ ಹೋಗಿದ್ದರಿಂದ ಇಂಕ್ ಹಾಕಿಸಿಕೊಳ್ಳುವುದಕ್ಕೆ ಕಾಸಿರಲಿಲ್ಲ. ಪುಟ್ಟನ ಹತ್ತಿರ ಎರಡು ದಿನಗಳಿಂದ ಮೂರು ಮೂರು ತೊಟ್ಟು ಇಂಕ್ ಹಾಕಿಸಿಕೊಂಡಿದ್ದ ಸಾಲ ಇವತ್ತು ಕೊಡುತ್ತೀನೆಂದು ಹೇಳಿದ್ದರಿಂದ ಕಾಸಿಗಾಗಿ ಅವ್ವ ಇದ್ದಲ್ಲಿಗೆ ಹೋದೆ ! ಗೌಡ್ರ ಮನೆಗೆ ನಾನು ಅದೇ ಮೊದಲು ಹೋಗಿದ್ದು, ಗೌಡಮ್ಮ ನನ್ನ ನೋಡಿದ್ದೇ 'ಏ.... ತಿಪ್ಪಿ ಇವ್ನೇ ಏನೇ ನಿನ್ಮಗ ಎಷ್ಟು ಉದ್ದ ಬೆಳದ್ಬಿಟ್ಟಿದ್ದಾನೆ. ನಮ್ಮನೆ ದನಿಗಾರು ಹಾಕೆ'. ಅವ್ವ 'ಇಲ್ಲ ಕನಿಯಮ್ಮ, ಅವನ್ನ ಇಸ್ಕೂಲಿಗೆ ಕಳಸ್ತ ಇದೀವಿ'. 'ಓಹೋsss... ಇವೆಲ್ಲ ಓದಿ ನಿಂಗೆ ಅನ್ನ ಹಾಕ್ತವೇನೋ'. 'ಅಯ್ಯೋ.... ತಗಳಿ ಅನ್ನ ಹಾಕ್ತವೇ ಅಂತಲೇ ಸಾಕ್ತೀವ, ಓದಿಸ್ತೀವ, ಓದಗಂಟ ಓದ್ಲಿ ಆಮೇಲೆ ಕೂಲಿ ಮಾಡ್ಕೊಂಡು ತಿನ್ಲಿ'. ಗೌಡಮ್ಮ ಅಸೂಯೆಯಿಂದಲೇ 'ನಿಮ್ಮಗೇನ್ ಬಿಡೇ ಏಳನೇ ಕ್ಲಾಸ್ ಓದಿದರೆ ಸಾಕು, ಬೀದಿ ಗುಡಿಸೋಕೆ ಕಸ ಗುಡಿಸೋದಕ್ಕೆ ಸೇರಿಸ್ಕೋತಾರೆ'. ಅವ್ವನಿಗೆ ಕೇಳಿಸಿದರೂ ಕೇಳಿಸದಂತೆ ಅವಳ ಕೆಲಸದಲ್ಲಿ ಮಗ್ನಳಾಗಿದ್ದಳು. 'ಹುಡುಗ ನೋಡೊಕ್ಕೊಳ್ಳೇ ಚೂಟಿಯಾಗೈತಿ. ನಮ್ಮ ಊರಟ್ಟಿ ದನಕಾಯಕ್ಕೆ ಒಳ್ಳೇ ಲಾಯಕ್ಕಾಗಿದ್ದಾನೆ. ಹುಡುಗ ಕಾಪಿ ಕುಡೀತಿಯೇನ ತೆಂಗಿನ ಚಿಪ್ಪುನಾಗ' ಅಂತ ಒಳಗೆ ಹೋದರು. ಅವ್ವನತ್ತಿರ ಓಡಿ 'ಅವ್ವ, ನಂಗೆ ಕಾಪಿ ಬೇಡ, ಇಂಕ್ ಹಾಕಿಸ್ಕೊಳ್ಳಕೆ ಐದ್ ಪೈಸೆ ಕೊಡವ್ವ' ಅಂತ ಗೋಗರೆದೆ. 'ತಗೋ ಚಿಪ್ಪ ಕಾಪಿ ಕುಡೀತಿರು ನಾನು ಸಗಣಿ ಹಾಕ್ಬತ್ತೀನಿ ಬೇಡ ಅಂನ್ಬೇಡ, ಹೊಲೇರ್ಗೆಷ್ಟು ಅಂಕಾರ ಅಂತಾರೆ' ಅಂತ ಚಿಪ್ಪು ಕೈಗೆ ಕೊಟ್ಟಳು. ಬೇಡವಾದರೂ ಕುಡಿಯಬೇಕಿತ್ತು. 'ಅವ್ವ..... ಅವ್ವ..... ಈ ಚಿಪ್ಪು ತೂತಾಗೇತಿ' ಅಂದೆ. 'ಬೆರಳಿಟ್ಕೊಂಡು ಕುಡೀ' ಎಂದು ಗೊಬ್ಬರ ಹೊತ್ಕಂಡು ಹೋದಳು. ಇತ್ತ ಗೌಡಮ್ಮ ಸ್ಟೀಲ್ ಲೋಟದಲ್ಲಿ ಬಿಸಿ ಕಾಪಿಯ ತಂದು ಸುರಿದದ್ದಕ್ಕೆ ಬೆರಳು ಸುಟ್ಟಂತಾಗಿ ಬೆರಳು ತೆಗೆದ್ಬಿಟ್ಟೆ.

ಕಾಪಿ ಕಾಲು ಮೇಲೆಲ್ಲ ಚೆಲ್ಲಿಹೋಯಿತು. ಕೈ ಸುಟ್ಟುಕೊಂಡದ್ದಕ್ಕೆ ಕಣ್ಣಲ್ಲಿ ನೀರು ಬರುತ್ತಿತ್ತು. ಗೌಡಮ್ಮ ಮುಖ ಊದಿಸ್ಕಂಡು 'ಇಡೀ ಒಂದ್ ಗ್ಲಾಸ್ ಕಾಪಿಯನ್ನ ಎಲ್ಲವನ್ನೂ ಚೆಲ್ಲಿಬಿಟ್ಟನೇ ನಿನ್ನ ಮಗ. ಏನು ಗರ್ವ ಹೊಲೇರ್ ಮಕ್ಕಳ್ಗೆ. ಇಂತ ಮಕ್ಕಳ್ನ ದನಕಾಯಕ್ಕ ಹಾಕ್ಕಂಡರೆ ಅಷ್ಟೇ........' ಅವ್ವನ ಜೊತೆ ಇನ್ನೂ ಏನೇನೋ ಹೇಳುತ್ತಿದ್ದರು. ನಾನು ಇಂಕಿಗೂ ಕಾಸು ಕೇಳಧಂಗೆ ಓಡಿಹೋಗಿದ್ದೆ.

# ಋಣ

**• ಲೋಹಿತ್ ನಾಯ್ಕರ್**

'ಊರಿನಿಂದ ಸತ್ಯವ್ವ ಬಂದಾಳ. ಏನೋ ಕೆಲಸ ಅದ ಅಂತ, ಮನಿಗೆ ಬಂದು ಹೋಗು' ಅಂತ ಅವ್ವ ನನ್ನ ಮೊಬೈಲಿಗೆ ಫೋನ್ ಮಾಡಿದಾಗ ನಾನು ನಮ್ಮ ಬ್ಯಾಂಕ್ ಮ್ಯಾನೇಜರ್‌ರ ಜೊತೆಗೆ ಶೆಟ್ಟಿ ಎಂಬುವವರ ಒಂದು ದೊಡ್ಡ ವಸೂಲಿ ದಾವೆ ಬಗ್ಗೆ ಮಾತನಾಡುತ್ತಿದ್ದೆ. ಸತ್ಯವ್ವ ಏಕೆ ಬಂದಿರಬಹುದೆಂಬ ಆತಂಕ ಕಳವಳ ಒಂದು ಕಡೆ ಇದ್ದರೆ ಶೆಟ್ಟಿಯವರ ದಾವೆ ಇನ್ನೊಂದು ಕಡೆ. ನನ್ನ ಕಳವಳ, ಅಸಮಾಧಾನ ಮ್ಯಾನೇಜರ್‌ರಿಗೆ ಕಂಡಿತೋ ಇಲ್ಲವೋ, ಅವರು ಮಾತು ಮುಂದುವರೆಸಿ 'ಈ ಶೆಟ್ಟಿಯನ್ನು ನಂಬೋಹಾಗಿಲ್ಲ ನೋಡಿ, ದುಡ್ಡು ಉಳಿಸಲು ಏನು ಕುತಂತ್ರ ಬೇಕಾದ್ರೂ ಮಾಡ್ತಾನೆ. ನಮ್ಮ ಡೈರೆಕ್ಟರ್‌ಗಳೂ ಹಾಗೇ ಇಂಥವರ ಬುಟ್ಟಿಗೆ ಬಿದ್ದು ಏನು ಮಾಡಬಾರದೋ ಅದನೆಲ್ಲ ಮಾಡಿಬಿಡ್ತಾರೆ. ಸಾಯುವವರು ನಾವು, ಇಲ್ಲಿ ಬ್ರ್ಯಾಂಚ್ ಲೆವಲ್‌ನಲ್ಲಿರುವವರು. ರಾಸ್ಕಲ್ಸ್. ಅಂದಹಾಗೆ ಈ ಕೇಸ್‌ನ್ನು ಬಹಳ ಸೀರಿಯಸ್ ತಗೋಬೇಕು. ಬಹಳ ಕಷ್ಟಪಟ್ಟು ನಾನೇ ಸ್ವತಃ ಟೇಬಲ್‌ನಿಂದ ಟೇಬಲ್‌ಗೆ ಹೋಗಿ ಸ್ಯಾಂಕ್ಷನ್ ತಂದೀದೀನಿ, ನಿಮ್ಮ ಮೇಲೆ ಬಹಳ ನಂಬಿಕೆ ಇಟ್ಟು ಈ ಕೇಸ್ ಕೊಡ್ತಾ ಇದ್ದೀನಿ. ಆದಷ್ಟು ಬೇಗ ಫೈಲ್ ಮಾಡಿಬಿಡಿ, ಬೆಸ್ಟ್ ಆಫ್ ಲಕ್' ಅಂತ ಕೈಕುಲುಕಿ ಕಾಗದ ಪತ್ರಗಳ ಫೈಲನ್ನು ಕೊಟ್ಟರು. ಇಷ್ಟು ದೊಡ್ಡ ದಾವೆ ಹದಿಮೂರು ಕೋಟಿ ರೂಪಾಯಿ ದಾವೆ. ಗೆಲುವಿನ ಮತ್ತು ಅಹಂಕಾರ ಭಾವನೆಯಿಂದಲೇ ಹೊರಬಂದೆ. ಆ ಅಹಂಕಾರ ಮತ್ತು ಗೆಲುವಿನ ಭಾವನೆಗಳ ನಡುವೆ ಸತ್ಯವ್ವ ಬಂದಳು. ಏಕೆ ಬಂದಿರಬಹುದೆಂಬ ಪ್ರಶ್ನೆ ಕಾಡಿತು. ಆ ಪ್ರಶ್ನೆ ಕ್ಷಣ ಮಾತ್ರ ಇದ್ದು, ಮಾಯವಾಯಿತು. ಮತ್ತೆ ಅಹಂಕಾರ ಮೂಡಿತು. ಅದೇ ಅಹಂಕಾರ ಭಾವನೆಯಿಂದ ಮನೆಗೆ ಹೊರಟೆ. ಆ ಅಹಂಕಾರ ದಾರಿಯಲ್ಲಿ ಮತ್ತೆ ಉಳಿಯಲಿಲ್ಲ. ಕಾರಣ ಶೆಟ್ಟಿಯವರು ಬಹಳ ದೊಡ್ಡ ಉದ್ಯಮಿಗಳು. ಕಟ್ಟಡ ನಿರ್ಮಾಣದಿಂದ ಆರಂಭಿಸಿ, ಹಲವಾರು ಡ್ಯಾಮ್‌ಗಳನ್ನು, ಹೊಟೇಲ್‌ಗಳನ್ನು ಕಟ್ಟಿ, ಟೈಲ್ ನಿರ್ಮಾಣ, ಕಾರುಗಳ ವಿತರಣೆ ಇತ್ಯಾದಿಗಳ ಜೊತೆ ಈಗ ಹೆದ್ದಾರಿ ಕೆಲಸಗಳಲ್ಲಿ ತೊಡಗಿದವರು. ಮೇಲಾಗಿ ರಾಜ್ಯದ ಕೈಗಾರಿಕಾ ಸಚಿವರಿಗೂ, ನಮ್ಮ ಕ್ಷೇತ್ರದ ಸಂಸದ ಸದಸ್ಯರ ಜೊತೆ ನಿಕಟ ಸಂಪರ್ಕ ಹೊಂದಿದವರು. ದಾನ ಧರ್ಮಗಳಿಗೂ ಎತ್ತಿದ ಕೈ. ಅಂಥವರ ಮೇಲೆ ವಸೂಲಿ ದಾವೆ.... ಅಂತ..... ಮನಸ್ಸು

ಕಸಿವಿಸಿಯಾಯಿತು. ಯಾರಿಂದ ಒತ್ತಾಯ ತರುತ್ತಾರೋ ? ಏನೇನು ಮಾಡುತ್ತಾರೋ ? ಅಂತ ಸಣ್ಣಾಗೆ ಹೆದರಿಕೆ ಕೂಡ ಆಯಿತು. ಸೋತಂತೆ ಭಾಸ. ಇಂತಹದರಲ್ಲಿ ಸತ್ಯವ್ವ ಏಕೆ ಬಂದಿರಬಹುದು ? ಅವಳ ಮಗ ಬಸೂ ಮತ್ತೆ ಏನಾದರೂ ಕಿತಾಪತಿ ಮಾಡಿದನೋ ?' ದಾರಿಯುದ್ದಕ್ಕೂ ಸತ್ಯವ್ವನನ್ನು ನೆನೆದೆ.

ನನಗೆ ಗೊತ್ತಿದ್ದ ಸತ್ಯವ್ವ ಇಷ್ಟು : ಸತ್ಯವ್ವ ನನಗಿಂತ ಒಂದು ವರುಷ ಹಿರಿಯಳು. ಅವ್ವ ಹೇಳುವ ಪ್ರಕಾರ ನಾನು ಹುಟ್ಟಿದಾಗ ಸತ್ಯವ್ವ ಒಂದು ವರುಷದ ಮಗು. ಈಗ ಅವಳಿಗೆ ಮೂವತ್ತೆಂಟು. ಸತ್ಯವ್ವ ತಳವಾರ ಸಿದ್ದಪ್ಪ ಮತ್ತು ಫಕ್ಕೀರಮ್ಮನ ಮಗಳು. ತಳವಾರ ಸಿದ್ದಪ್ಪ ಮತ್ತು ಅವರ ಪೂರ್ವಿಕರು ನಮ್ಮಜ್ಜನ ಮನೆತನದ ತಲೆತಲಾಂತರದಿಂದ ದುಡಿಯುತ್ತಾ ಬಂದ ಆಳುಗಳು. ಬಹಳ ಶ್ರದ್ಧೆಯಿಂದ ಭಕ್ತಿಯಿಂದ ದುಡಿದಿದ್ದಾರೆಂದು ಅವ್ವ ಹೇಳುತ್ತಾಳೆ. ಸತ್ಯವ್ವ ಒಂದು ವರುಷದ ಮಗು ಇದ್ದಾಗ ಅವಳಪ್ಪ ಸಿದ್ದಪ್ಪ ಏಕಾಏಕಿ ಮನೆ ಊರು ಬಿಟ್ಟು ಹೋದವನು ಮರಳಿ ಬಂದಿಲ್ಲ. ಅವನ ಇರುವು ಅಥವಾ ಸಾವಿನ ಸುದ್ದಿಯೂ ಇಲ್ಲ. ಎಲ್ಲರೂ ಅವನನ್ನು ಮರೆತಿದ್ದಾರೆ, ಸತ್ಯವ್ವನೂ ಸಹ. ತಾಯಿ ಫಕ್ಕೀರವ್ವ ಸತ್ಯವ್ವನನ್ನು ಸಾಕಿ ದೊಡ್ಡವಳನ್ನು ಮಾಡಿ ಪಕ್ಕದ ಹಳ್ಳಿಯ ದ್ಯಾಮಪ್ಪ ಅನ್ನುವವನ ಜೊತೆ ಲಗ್ನ ಮಾಡಿಕೊಟ್ಟು ಮರುವರುಷವೇ ತೀರಿಕೊಂಡಳು. ಸತ್ಯವ್ವ ತನ್ನ ಗಂಡ ದ್ಯಾಮಪ್ಪನ ಜೊತೆ ಸಂಸಾರ ಮಾಡಿ, ವರುಷದಲ್ಲೇ ಗಂಡು ಮಗುವನ್ನು ಹೆತ್ತು, ಮಗು ಐದು ವರುಷದವನಿದ್ದಾಗ ಏಕಾಏಕಿ ತನ್ನ ಗಂಡನನ್ನು ಬಿಟ್ಟು ಊರಿಗೆ ಬಂದಳು. ತಾನು ಹುಟ್ಟಿ ಬೆಳೆದ, ತಾಯಿ ಇರುತ್ತಿದ್ದ ತೋಟದ ಮನೆಯಲ್ಲಿ ಇರಹತ್ತಿದ್ದಳು. ಈಗಲೂ ಅಲ್ಲೇ ಇರುತ್ತಾಳೆ. ಆ ತೋಟ ಒಂದು ಕಾಲದಲ್ಲಿ ನನ್ನಜ್ಜನದಾಗಿದ್ದು, ಅದನ್ನು ಸತ್ಯವ್ವನ ತಂದಿ ಸಿದ್ದಪ್ಪನಿಗೆ ದಾನವಾಗಿ ನನ್ನಜ್ಜ ಕೊಟ್ಟಿದ್ದು ಅಂತ ಊರಿನವರಿಂದ ಮತ್ತು ಅವ್ವ ಹೇಳಿದ್ದರಿಂದ ತಿಳಿದುಕೊಂಡಿದ್ದೇನೆ.

ಮೂವತ್ತೆಂಟರ ಸತ್ಯವ್ವ ಇನ್ನೂ ಹುಡುಗಿಯಂತೆ ಕಾಣುತ್ತಾಳೆ. ಸತ್ಯವ್ವ ನನಗಿಂತ ಹಿರಿಯಳಾದರೂ ನಾನು ಅವಳನ್ನು 'ಸತ್ತೀ' ಅಂತ ಕರೆಯುತ್ತಾ ಬಂದಿದ್ದೇನೆ. ಹಲವಾರು ಸಲ ಅವ್ವ ಅವಳನ್ನು ಹಾಗೆ ಕರೆಯಬೇಡ ಅಂದರೂ ನಾನು ಲೆಕ್ಕಿಸಿಲ್ಲ. ಸತ್ಯವ್ವ ಇತ್ತೀಚೆಗೆ ಬಹಳ ದಿವಸಗಳಿಂದ ಬಂದಿರಲಿಲ್ಲ. ಅವಳು ಹೋದ ಸಲ ಬಂದಿದ್ದು ಅವಳ ಮಗ ಬಸೂನ ಪ್ರೇಮ ಪ್ರಸಂಗ ನಡೆದಾಗ. ಈ ಸತ್ಯವ್ವನನ್ನು ನೆನೆದೇ ಮನೆ ತಲುಪಿದೆ.

ಬಹಳ ದಿವಸಗಳನಂತರ ನೋಡಿದ ಸತ್ಯವ್ವನನ್ನು 'ಏನ್ ಸತ್ತೀ, ಆರಾಮಾಗಿದ್ದೀಯಾ' ಅಂತ ಕೇಳಲು, 'ಹ್ಞೂಂ' ಅಂತ ಹೇಳುತ್ತ, ಒಂದು ಲಕೋಟೆಯನ್ನು ಒಡ್ಡಿದಳು. ಅದನ್ನು ತೆಗೆದುಕೊಳ್ಳುತ್ತಾ, 'ಬಸು ಹೆಂಗದಾನ ? ಮತ್ತ ಏನರೇ ಗದ್ಲ ಮಾಡ್ಯಾನೇನು ?' ಅಂತ ಕೇಳಿದೆ. 'ಇಲ್ಲ' ಅಂದಳು. ಲಕೋಟೆಯಲ್ಲಿ ಬ್ಯಾಂಕಿನ ಪರವಾಗಿ, ಪಡೆದ ಸಾಲ ತುಂಬುವ ಇಲ್ಲ ದಾವೆ ಹಾಕುವ ನೋಟೀಸು. ಸಾಲದ ಮೊತ್ತ ಮತ್ತು ಬಡ್ಡಿ ಸೇರಿ ಎರಡು ಲಕ್ಷ ಎಪ್ಪತ್ತುಸಾವಿರವಿತ್ತು.

ಸಾಲ ಮತ್ತು ಮೊತ್ತ ಎರಡೂ ನನಗೆ ಆಶ್ಚರ್ಯ ತಂದಿತು. 'ನೀ ಯಾವಾಗ ಸಾಲ ಮಾಡಿದ್ದಿ ಸತ್ತೀ' ಅಂತ ಕೇಳಿದೆ. 'ಅದೆಲ್ಲ ಆಮ್ಯಾಲ ಹೇಳ್ತೀನಿ, ಈಗ ಏನ್ ಮಾಡಬೇಕು' ಅಂತ ಕೇಳಿದಳು. 'ರೊಕ್ಕ ತುಂಬಬೇಕು ಇಲ್ಲಾದರ ಕೋರ್ಟಿಗೆ ಹೋಗತಾರ; ರೊಕ್ಕ ಅದಾವೇನು ?' ಅಂತ ಕೇಳಿದೆ, 'ಇಲ್ಲ'ವೆಂದು ತಲೆಯಾಡಿಸಿದಳು. ಅಷ್ಟರಲ್ಲಿ ನನ್ನವ್ವ ನಡುವೆ ಬಾಯಿ ಹಾಕಿ 'ರೊಕ್ಕ ಎಷ್ಟು ತುಂಬಬೇಕು' ಅಂತ ಕೇಳಿದಳು. ಹೇಳಿದೆ. ಅವ್ವ ಮೌನವಾದಳು. 'ಬಸು ವಿಚಾರ ಏನೈತಿ' ಅಂತ ಕೇಳಿದಾಗ, 'ಎಲ್ಲಾ ನೀ ಹೇಳಿದ್ಹಂಗ ಅಂತ ಹೇಳ್ಯಾನ, ಅವಗೇನ ತಿಳೀತೇತಿ. ಎಲ್ಲಾ ನನ್ನ ಮ್ಯಾಲೆ ಬಿಟ್ಟಾನ' ಅಂತ ಹೇಳಿದಳು. ಅವ್ವ ಮೌನವಾಗೇ ಇದ್ದಳು. ಜವಾಬ್ದಾರಿ ನನ್ನ ಮೇಲೇ ಬಿತ್ತೇನೋ ಅನ್ನಿಸತೊಡಗಿದಾಗ, 'ನೋಡು, ನಾನೂ ಆ ಬ್ಯಾಂಕಿನ ವಕೀಲ, ನಿನ್ನ ಪರ ಕೇಸ್ ನಡೆಸಾಕ ಬರೋದಿಲ್ಲ, ನನ್ನ ಗೆಳೆಯರಿಗೆ ಕೊಟ್ಟು ಕೇಸ್ ನಡಸಿಸ್ತೀನಿ. ಆದರ ಒಂದು ಮಾತ್ರ ನೆನಪಿರಲಿ, ಬಹಳಾದರ ರೊಕ್ಕಾ ತುಂಬಾಕ ವ್ಯಾಳ್ಯಾ ಸಿಗಬಹುದು, ಇನ್ನ ಮುಂದೆ ಹಾಕುವ ಬಡ್ಡೀನೂ ಕಡಿಮೆ ಆಗಬಹುದು. ಆದರೆ, ಈಗ ಕಾಣಿಸಿದ್ದ ರೊಕ್ಕ ಮುಂದಾದರೂ ತುಂಬಬೇಕು. ಒಂದು ಕೆಲಸ ಮಾಡಬಹುದು, ನಿಂತ ಕಾಲವ್ಯಾಲ ಬಗೀಹರಿಸುವಂಥ "ಒನ್ ಟೈಮ್ ಸೆಟಲ್‌ಮೆಂಟ್" ಅಂತ ಯೋಜನೆ ಬಂದಾವು ಬ್ಯಾಂಕಿನ್ಯಾಗ. ನೀ ಹೇಳಿದರ, ಎರಡು ಲಕ್ಷಕ್ಕೋ, ಸ್ವಲ್ಪ ಹೆಚ್ಚು ಕಡಿಮೆ ಮುಗಿಸಬಹುದು. ಅದು ಬ್ಯಾಂಕಿನವರ ಮ್ಯಾಲೆ ಅದ, ನೀ ಹೇಳಿದರ ಪ್ರಯತ್ನ ಮಾಡ್ತೇನಿ. ಆದರ ಒಂದೇ ಸಲಕ್ಕ ರೊಕ್ಕ ತುಂಬಬೇಕು ನೋಡು' ಅಂದೆ. 'ನೀ ಹೆಂಗ ಮಾಡಂತಿ ಹಂಗ ಮಾಡತೇವಿ' ಅಂತ ಹೇಳಿದಳು. ಅವ್ವ ಮಾತನಾಡಲಿಲ್ಲ. ಸಂಜೆತನಕ ಅವ್ವನ ಜೊತೆ ಅದು ಇದು ಕೆಲಸ ಮಾಡಿ ಆರೂವರಿ ಬಸ್ಸಿಗೆ ಊರಿಗೆ ಹೋದಳು.

❖ ❖ ❖

ಅಂದು ಸಾಯಂಕಾಲ ಕ್ಲಬ್ಬಿನಲ್ಲಿ ನನ್ನ ವಕೀಲ ಮಿತ್ರರ ಒತ್ತಾಯಕ್ಕೆ, ಶೆಟ್ಟಿ ಕೇಸ್ ನನಗೆ ಬಂದಿದ್ದರ ಸಲುವಾಗಿ ಪಾರ್ಟಿಯಾಯಿತು. ನಾನು ನನ್ನ ಪರಿಮಿತಿ ದಾಟದಿದ್ದರೂ, ಬಹುಶಃ ಸಂತೋಷದ ಲಹರಿಯಿಂದಲೋ ಅಥವಾ ಸೇರಿದ ಆತ್ಮೀಯ ಗೆಳೆಯರಿಂದಲೋ ನಶೆ ಸ್ವಲ್ಪ ಹೆಚ್ಚೇ ಆಗಿತ್ತು. ಅದೇ ಗುಂಗಿನಲ್ಲಿ ಮನೆಗೆ ಸ್ವಲ್ಪ ತಡವಾಗಿ ತಲುಪಿದೆ. ಅವ್ವ ನನ್ನ ಬರುವಿಕೆಗೆ ಕಾಯುತ್ತಾ ಕುಳಿತಿದ್ದಳು. ನಾನು ಬರುತ್ತಲೇ ಏನೋ ಹೇಳಬೇಕೆಂದು ಹೊರಟ ಅವಳು, ನನ್ನ ಸ್ಥಿತಿ ಸರಿಯಿಲ್ಲ ಅಂತ ಅರಿತಳೋ ಅಥವಾ ವೇಳೆ ನಿಜವಾಗಲೂ ಆಗಿದ್ದರಿಂದಲೋ 'ಟೈಮ್ ಭಾಳಾಗೇತಿ ಹೋಗಿ ಮಲಕೊ' ಅಂತ ಹೇಳಿ, ತಾನೂ ಮಲಗಲು ಹೋದಳು. ನಿದ್ದೆ ಬಂದಂಗಾಗಿತ್ತಾದರೂ ಅದು ಹತ್ತಲಿಲ್ಲ. ಸತ್ಯವ್ವ ಮತ್ತು ಬಸು ವ್ಯಾಪಿಸಿದರು. ಬಸೂನ ಪ್ರೇಮ ಪ್ರಸಂಗ ಸುತ್ತಿಟ್ಟ ಚಾಪೆ ಹರಡಿದಂತೆ ಬಿಚ್ಚತೊಡಗಿತು.

ಅದು ಕಳೆದ ವರ್ಷ ನಡೆದ ಪ್ರಸಂಗ. ಬಸೂ ಇಪ್ಪತ್ತರ ಹರೆಯದ ಹುಡುಗ, ನೋಡಲು ಚಂದವಾಗೇ ಇದ್ದಾನೆ. ಬಣ್ಣದಲ್ಲಿ ಅವರವ್ವನ ಹಾಲ್ಗೋದಿ ಬಣ್ಣ. ಎಸ್.ಎಸ್.ಎಲ್.ಸಿ. ವರೆಗೆ ಓದಿ, ಮುಂದೆ ಓದಲು ಮನಸ್ಸಿಲ್ಲವೆಂದು ಹೇಳಿ ಊರಲ್ಲೆ ಇದ್ದಾನೆ. ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ಸಕ್ರಿಯವಾಗಿ ಪಾತ್ರವಹಿಸಿ ದೊಡ್ಡ ಗುಂಪೊಂದನ್ನು ಕಟ್ಟಿ, ತನ್ನ ಜನಾಂಗದ ಸಮವಯಸ್ಕ ಹುಡುಗರ ಸಂಘವನ್ನು ಸಹ ಕಟ್ಟಿ, ಆಗಾಗ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿರುತ್ತಾನೆ. ಹರಿಜನರಿಗೆ ಮತ್ತು ಗಿರಿಜನರಿಗೆ ಸರಕಾರ ಕೊಡುವ ಸೌಲತ್ತನ್ನು ಕೊಡಿಸಲು ಜಿಲ್ಲಾ ಪರಿಷತ್ತು, ತಾಲೂಕು ಪಂಚಾಯತಿ ಇಂದ ಹಿಡಿದು ತಹಶೀಲ್ದಾರ್ ಮತ್ತು ಎ.ಸಿ. ಕಛೇರಿಗೆ ಕೂಡ ಹೋಗಿ ಬರುತ್ತಾನೆ. ಸ್ಥಳೀಯ ಎಂ.ಎಲ್.ಎ. ಮತ್ತು ಜಿಲ್ಲಾ ಪಂಚಾಯತ್ ಸದಸ್ಯರುಗಳ ಜೊತೆ ನಿಕಟ ಸಂಪರ್ಕವಿದೆಯೆಂದು ಊರಿನವರು ಯಾರಾದರು ಬಂದಾಗ ಹೇಳುತ್ತಿರುತ್ತಾರೆ. ಒಂದು ತರಹ ಮಿನಿ ಲೀಡರಾಗಿ, ಸಣ್ಣಪುಟ್ಟ ದುಡ್ಡುಗಳನ್ನು ಹೊಡೆಯುತ್ತಾನೆಂದೂ ಕೆಲವರು ಹೇಳಿದರೆ, ಎಂ.ಎಲ್.ಎ. ಮತ್ತು ಅವನ ಸಂಗಡಿಗರು ಇವನು S/C ಆದುದರಿಂದ ಇವನನ್ನು ಉಪಯೋಗಿಸಿಕೊಳ್ಳುತ್ತಾರೆ ಅಂತಲೂ ಕೆಲವರು ಹೇಳಿದ್ದುಂಟು. ಆದರೆ, ಕಳೆದ ವರ್ಷ ನಡೆದ ಘಟನೆಗೆ ಅವನ ಪಕ್ಷದವರಾಗ್ಲಿ, ಎಂ.ಎಲ್.ಎ. ಆಗಲಿ ಅಥವಾ ಅವರ ಶಿಷ್ಯರಾಗಲಿ ಯಾರೂ ಬಂದಿರಲಿಲ್ಲ. ಅದು ಸೂಕ್ಷ್ಮವಾದ ಪ್ರಸಂಗ ಕೂಡ. ನಾನು, ನನ್ನ ಅವ್ವ ಮತ್ತು ಸತ್ಯವ್ವ ಸೇರಿ ಬಗೆಹರಿಸಿದ್ದೆವು. ನಡೆದಿದ್ದು ಇಷ್ಟೇ : ಬಸೂ ಊರಿನ ಗೌಡರ ಎರಡನೇ ಮಗಳಾದ ಗಿರಿಜಳನ್ನು ಪ್ರೇಮಿಸಿದ್ದ. ಹದಿನಾರು ವಯಸ್ಸಿನ ಗಿರಿಜ ಸಹ ಪ್ರೇಮಿಸಿದ್ದಳು. ಒಬ್ಬರನ್ನೊಬ್ಬರು ಬಿಟ್ಟು ಇರದ ಪ್ರಮಾಣ, ಊರಿನ ಕಲ್ಮೇಶ್ವರ ದೇವಸ್ಥಾನದಲ್ಲಿ ಮಾಡಿದ್ದರಂತೆ. ಮದುವೆ ಮಾಡಿಕೊಳ್ಳುವ ವಚನ ಸಹ ಒಬ್ಬರಿಗೊಬ್ಬರು ಕೊಟ್ಟಿದ್ದರಂತೆ. ಗೌಡರಾದ ಬಸನಗೌಡರಿಗೆ ಗೊತ್ತಾಗಿ ಗಿರಿಜೆಯನ್ನು ಮುಚ್ಚಿಟ್ಟು, ಬಸೂನ ಮನೆಗೆ ಬಂದು ಧಮಕಿ ಹಾಕಿದರು. ಬಸೂ ಕೋಪಿಸಿಕೊಂಡರೂ, ಮೊದಮೊದಲು ಗಿರಿಜೆಯ ಸಲುವಾಗಿ ಸಹಿಸಿ, ಅವಳನ್ನು ಹುಡುಕಾಡಿದ. ಅವಳು ಸಿಕ್ಕಲಿಲ್ಲ. ಒಂದು ವಾರದ ನಂತರ ಗಿರಿಜೆಯನ್ನು ಗೌಡರು ತನ್ನ ತಂಗಿಯನ್ನು ಕೊಟ್ಟ ಹಾವೇರಿ ಹತ್ತಿರದ ಹಂದಿಗನೂರಿನಲ್ಲಿ ಇಟ್ಟಿದ್ದು ತಿಳಿದು ಅಲ್ಲಿಗೆ ಹೋಗಿ ಭೇಟಿಯಾಗಿ ಬಂದ. ಗೌಡರು ಮತ್ತು ಗೌಡಶಾನಿ ಬಹಳ ಹೊಡದಿದ್ದರು. ಮೂಡಿದ ಕಲೆ ಇನ್ನೂ ಹೋಗಿರಲಿಲ್ಲ. ಬಸೂ ಅವಳ ಪರಿಸ್ಥಿತಿಯನ್ನು ನೋಡಿ ಮರುಗಿ ಗೌಡರ ಮೇಲೆ ಸಿಟ್ಟಿಗೆದ್ದು, ನೇರವಾಗಿ ಅವರ ಮನೆಗೆ ಹೋಗಿ, 'ಗೌಡರೇ ನಿಮ್ಮ ಮಗಳನ್ನು ನನಗ ಕೊಟ್ಟು ಮದುವಿ ಮಾಡಿರಿ. ಇಬ್ಬರೂ ಬಹಳ ಪ್ರೀತಿಸತೀವಿ, ಇಲ್ಲಾಂದ್ರ ಮೊನ್ನೆ ನೀವು ಕೊಟ್ಟ ಧಮಕಿ ಮ್ಯಾಲ Atrocity case (ಅಟ್ರಾಸಿಟಿ) ಹಾಕ್ತೀನಿ ನೋಡ್ರಿ' ಅಂತ ಹೆದರಿಸಿದ್ದ. Atrocity ಕೇಸ್ ಬಗ್ಗೆ ತಿಳಿದಿದ್ದ ಗೌಡರು ನೇರವಾಗಿ ನನ್ನಲ್ಲಿ ಬಂದು ತಮ್ಮ ದುಃಖ ತೋಡಿಕೊಂಡಿದ್ದರು.

ತಮ್ಮ ಮಾನ, ಮರ್ಯಾದೆ, ಅಂತಸ್ತುಗಳ ಬಗ್ಗೆ ಹೇಳಿದ್ದರು. ಗಿರಿಜೆಯ ಮದುವೆ ನಡೆದರೆ ತಮ್ಮ ಮೂರನೆ ಮಗಳು ಶಾಂತವ್ವನ ಪರಿಸ್ಥಿತಿಯ ಬಗ್ಗೆ ಆತಂಕ ವ್ಯಕ್ತಪಡಿಸಿದರು. ಮೇಲಾಗಿ 'ನಾನು ಜಾತಿ, ಧರ್ಮ, ಅಂತಸ್ತು ಬಿಟ್ಟರೂ ಸಹ, ಬಸೂನಂತಹ ಲಫಂಗಗ ಯಾರ ಹೆಣ್ಣು ಕೊಡ್ತಾರ್ರೀ ? ಹೆಂಗ ಕೊಡೋದ್ರಿ ? ನೀವು ಕಲಿತವರು. ನೀವೇ ಹೇಳ್ರಿ. ನಿಮ್ಮ ತಂಗಿ, ಮಗಳೋ ಇದ್ದರ ಇಂತಹವನಿಗೆ ಕೊಟ್ಟ ಮದವಿ ಮಾಡತಿದ್ರೀ ?' ಅಂತ ಪ್ರಶ್ನೆಗಳ ರೂಪದಲ್ಲೇ ನನ್ನ ಕೇಳಿದ್ದರು. ಮುಂದುವರೆದು 'ಬಸೂ ನಿಮ್ಮ ಮಾತು ಮೀರಾಂಗಿಲ್ಲ. ಹೆಂಗಾದರೂ ಮಾಡಿ ನಮ್ಮನ್ನು ಈ ಸಮಸ್ಯೆಯಿಂದ ದೂರ ಮಾಡ್ರಿ. ಕೈ ಮುಗಿತೇನಿ. ಈ ಉಪಕಾರ ಮಾಡಿ ನಮ್ಮ ಮ್ಯಾಲೆ ಋಣ ಹೇರ್ರಿ, ಇದss ಜನುಮದಾಗ ತೀರಸ್ತೀವಿ' ಅಂತ ಬೇಡಿಕೊಂಡರು.

ಅವರ ಮಾತುಗಳು, ವಿಚಾರಗಳು ಸಮಂಜಸವೆನಿಸಿದವು. ಒಂದು ವಿಚಾರ ಹೊಳೆದು 'ಹೆಂಗೂ ನಿಮ್ಮ ಮಗಳಿಗೆ ಹದಿನಾರು ವಯಸ್ಸಂತೀರಿ, ಕಾನೂನು ಪ್ರಕಾರ ಇನ್ನೂ ಬಾಲಿಕೆ, ಮದುವಿ ನಡೆಸಲು ಬರುವದಿಲ್ಲ. ಅವಳಿಗೆ ಹದಿನೆಂಟಾಗಲಿ ನೋಡೋಣ ಅಂತ ಹೇಳಿ ಹೆಂಗಾದರೂ ಮದುವಿ ವಿಷಯ ಮುಂದೆ ಹಾಕೋಣ. ಅಷ್ಟರಾಗ ನೀವ ಅವಳ ಮದುವಿ ಮಾಡಿ ಕಳಿಸಿಬಿಡ್ರಿ' ಅಂತ ಹೇಳಿದೆ. ಅದಕ್ಕವರು 'ವರ ಮನ್ಯಾಗ ಐತರಿ, ನನ್ನ ತಂಗಿ ಮಗ, ಹಂಗ ಮಾಡೋಣ' ಅಂತ ಜವಾಬ್ದಾರಿಯನ್ನು ನನ್ನ ಮೇಲೆ ಹೇರಿ ಮತ್ತೊಮ್ಮೆ ಕೈ ಮುಗಿದು ಹೋದರು.

ಗೌಡರು ಬಂದ ಹೋದ ಮಾರನೇ ದಿವಸ ಸತ್ಯವ್ವ ಹಾಗೂ ಬಸೂನ ಕರೆಸಿ, ಬಾಲಿಕೆ ಕನ್ಯೆಯನ್ನು ಮದುವೆಯಾದರೆ ಅದರ ಪರಿಣಾಮದ ಬಗ್ಗೆ ಹೆದರಿಸಿ, ಎರಡು ವರುಷ ಕಾಯುವಂತೆ ಹೇಳಿ, ಗೌಡರ ವಿಷಯದಲ್ಲಿ ತಲೆ ಹಾಕಬಾರದೆಂದು ಉಪದೇಶಿಸಿ, ಉಳಿದಿದ್ದು ನನ್ನ ಜವಾಬ್ದಾರಿ ಎಂದು ಮದುವೆ ಮಾಡಿಸುವ ಆಶ್ವಾಸನೆ ಕೊಟ್ಟು ಕಳಿಸಿದೆ. ಬಸೂ ನನ್ನ ಮಾತಿಗೆ ಬೆಲೆ ಕೊಟ್ಟಿದ್ದ. ಗೌಡರ ತಂಟೆಗಾಗಲಿ, ಗಿರಿಜೆಯ ಬಳಿ ಹೋಗುವುದಾಗಲಿ ನಿಲ್ಲಿಸಿದ್ದ.

ಈ ಪ್ರಸಂಗ ನೆನಪಿಸಿಕೊಂಡು ಸುಮಾರು ಹೊತ್ತಿನ ಮೇಲೆ ನಿದ್ದೆ ಹತ್ತಿದಂತಾಯಿತು.

❖ ❖ ❖

ಮಾರನೇ ದಿನ ಬೆಳಿಗ್ಗೆ ಸ್ವಲ್ಪ ತಡವಾಗಿಯೇ ಎದ್ದೆ. ಅವ್ವ ನನ್ನನ್ನು ಮಾತನಾಡಿಸುವ ತವಕದಲ್ಲಿದ್ದಳು. ಏಳುತ್ತಲೆ ಮಾತು ಪ್ರಾರಂಭಿಸಿದಳು, 'ನೋಡು, ಸತ್ಯವ್ವ ಅಷ್ಟು ರೊಕ್ಕ ಎಲ್ಲಿಂದ ತರತಾಳ, ಏನೈತಿ ಅಕಿ ಹತ್ರ, ಮಗ ನೋಡಿದರ ಹಂಗ, ನೀನೆ ಏನಾದರೂ ಮಾಡಿ ರೊಕ್ಕ ತುಂಬಿ ಬಿಡು' ಅಂದಳು. ಸಿಟ್ಟು ಬಂತು. ಏರು ದನಿಯಲ್ಲೆ 'ಏನವ್ವಾ ನೀ ಹೇಳೋದು, ನಾ ಎಲ್ಲಿಂದ ತರಲಿ ಅಷ್ಟೊಂದು ರೊಕ್ಕ ? ಮತ್ತ ನಾ ಯಾಕ ಅಕೀ ಸಾಲ ಹರೀಬೇಕು, ಹಂಗ ನೋಡಿದರ.........' ಅಂತ ಹೇಳಲು ಹೊರಟ ಮಾತು ಬಾಯಿಗೆ ಬರಲಿಲ್ಲ. ಅವ್ವ,

'ಹಂಗ ನೋಡಿದರ..... ಯಾಕ ಮಾತ ನಿಲ್ಲಿಸಿದಿ, ಏನೈತಿ ನಿನ್ನ ಮನಸ್ಸಿನಾಗ ಹೇಳಿ ಬಿಡು' ಅಂದಳು. ಹೇಳಲಿಲ್ಲ. 'ಏನೂ ಇಲ್ಲ' ಅಂತ ಅಂದೆ. ಸ್ವಲ್ಪ ಮೌನ ತಾಳಿದ ನಂತರ ಅವ್ವ, 'ನೋಡು, ಸತ್ಯವ್ವನ ಮನಿಯವರ ಋಣ ನಮ್ಮ ಮ್ಯಾಲ ಭಾಳ ಐತಿ. ಏಳು ಜನಮಕ್ಕೂ ನಮಗ ತೀರಿಸಾಕ ಆಗೋದಿಲ್ಲ. ನನ್ನ ಎಫ್.ಡಿ.ಗಳನ್ನು ಮುರಿಸು, ಸ್ವಲ್ಪ ಬಂಗಾರ ಮಾರು, ಅಕಿ ಸಾಲಾ ಹರಿದು ಬಾ' ಅಂದಳು. 'ಏನ್ ಅಕಿ ಋಣ ನಮ್ಮ ಮ್ಯಾಲ, ಹಗಲೆಲ್ಲ ಹೇಳತಿರತಿ' ಅಂತ ಕೋಪಿಸಿಕೊಂಡೇ ಕೇಳಿದೆ. ಸುಮ್ಮನಿದ್ದಳು. ಇನ್ನಷ್ಟು ಸಿಟ್ಟು ಏರಿತು. ತಡೆಯಲಾರದಷ್ಟು, ಹೇಳೇ ಬಿಟ್ಟೆ, 'ಹಂಗ ನೋಡಿದರ, ಅಕಿ ಹೊಲ ನಿನಗ ಬರಬೇಕಾದದ್ದು, ಅದರ ವಾರಸಾ ನೀನು, ನಿನ್ನ ವಾರಸಾ ನಾ. ಆ ಹೊಲ ನನಗ ಬರಬೇಕು ನ್ಯಾಯವಾಗಿ. ಅದರಾಗ ನಿನ್ನ ಮತ್ತು ನನ್ನ ಹಕ್ಕೈತಿ'. ಅವ್ವ, ನಾನು ಈ ಮಟ್ಟಕ್ಕೆ ಮಾತನಾಡುತ್ತೇನೆ ಅಂತ ಭಾವಿಸಿರಲಿಕ್ಕಿಲ್ಲ. ಅವ್ವನ ಮುಖದ ಮೇಲೆ ಅರಳಿದ ನೋವು ಮತ್ತು ಆಶ್ಚರ್ಯ ಏಕಕಾಲದಲ್ಲಿ ಕಾಣುತ್ತಿತ್ತು. ಮತ್ತೆ ನಾನೇ ಮುಂದುವರಿದು, 'ಋಣದ ಬಗ್ಗೆ ಮಾತಾಡಿದ್ದಕ್ಕ ಹಾಂಗ ಅಂದೆ' ಅಂದು ಸಮಾಧಾನ ಪಡಿಸಲು ಯತ್ನಿಸಿದೆ. ಅವ್ವ ಸಮಾಧಾನಗೊಳ್ಳಲಿಲ್ಲ. ಕೆಲ ಕ್ಷಣ ಮೌನ ತಾಳಿ, ಯೋಚಿಸಿ, ಉಸಿರೆಳೆದು ಲೊಚಗುಟ್ಟಿ ಏರುದನಿಯಲ್ಲಿ 'ಆ ಹೊಲದಾಗ ನಿನಗ ಹಕ್ಕೈತಿ ಅಂತ ಹಕ್ಕುಗಳ ಬಗ್ಗೆ ಮಾತನಾಡ್ತಿ ಅಲ್ಲ, ಕೇಳು, ನೀನಾಗಲಿ, ನಾನಾಗಲಿ ಯಾರೇ ಆಗಲಿ ಹುಟ್ಟಿದ ಮಾತ್ರಕ್ಕೆ ಆಸ್ತಿ ಒಳಗ ಹಕ್ಕು ಬರಬೇಕಂತ ನಿಮ್ಮ ಕಾಯಿದೆ ಹೇಳ್ತದಲ್ಲ, ಹುಟ್ಟಿಸಿದ ತಂದೆ ತಾಯಿ ಸೇವೆ ಮಾಡಬೇಕು, ಅವರ ಕೊನೇ ಗಳಿಗ್ಯಾಗ ಅವರ ಚಾಕರಿ ಮಾಡಬೇಕು, ಅವರ ವಿರುದ್ಧ ನಡಕೋಬಾರದು, ಅವರ ಮನಸ್ಸು ನೋಯಿಸಬಾರದು ಅಂತ ಹೇಳ್ತದ ಏನು ? ಹೇಳೂದಿಲ್ಲ. ಕರ್ತವ್ಯ ನಿಭಾಯಿಸಿದರ, ಧರ್ಮದ ಪ್ರಕಾರ ನಡೆದುಕೊಂಡರ ಕೇಳಬೇಕು. ನಮ್ಮಪ್ಪನ ಮುಪ್ಪಿನ್ಯಾಗ ಅವರ ಏಕೈಕ ಮಗಳಾದ ನಾನು ನನ್ನ ಕರ್ತವ್ಯ ನಿಭಾಯಿಸಲಿಲ್ಲ, ಸೇವಾ ಮಾಡಲಿಲ್ಲ, ಚಾಕರಿ ಮಾಡಲಿಲ್ಲ. ನಿಮ್ಮಪ್ಪ ನನ್ನ ಗಂಡ, ಅಳಿಯ ಆದಾವ ಒಂದು ದಿನಾ ಬಾಯಾಗ ಮಾವಾ ಹೆಂಗದೀರಿ ಅನ್ನಲಿಲ್ಲ, ಅನ್ನೋದು ಬಿಡು, ಸುಡಗಾಡು ಮಾರಿ ನೋಡಲಿಲ್ಲ, ಸತ್ತಾಗ ಮಣ್ಣಿಗೆ ಹೋಗಲಿಲ್ಲ. ನನಗೂ ಬಿಡಲಿಲ್ಲ. ನಾ ಮಗಳಾಗಿ ಏನೇನು ಮಾಡಬೇಕು ಅದನ್ನ ಮಾಡಲಿಲ್ಲ, ನನಗ ಆ ಆಸ್ತಿಯಾಗ ಹಕ್ಕಿಲ್ಲ ಅಂದರ ನಿನಗೆಲ್ಲಿಂದ ಬರ್ತದ ? ಒಮ್ಮೆ ಕೊಟ್ಟಮ್ಯಾಲೆ ಮುಗೀತು, ಕೇಳೂದ ? ಥೂ, ಯಾವ ಬಾಯಿಲೇ ಕೇಳತಿ, ನಾಚಿಗೆ ಆಗೋದಿಲ್ಲ ನಿನಗ ಹಂಗ ಮಾತಾಡಾಕ. ನೀ ಎಂಥ ಗಂಡಮಗನೋ ?

'ನಿನಗ ತಿಳಿಲಾರದ ವಿಷಯ ಹೇಳ್ತೇನಿ ಕೇಳು. ನಮ್ಮಪ್ಪ ಅವನ ಕಾಲಕ್ಕ ಶ್ರೀಮಂತನ. ಇಪ್ಪತ್ತು ಕೂರಿಗಿ ಹೊಲ, ಹನ್ನೆರಡೆತ್ತಿನ ಕಮತ, ಮನಿತುಂಬ ಆಳು ಕಾಳು, ಸುತ್ತಮುತ್ತಿನ ಐದೂರಿನ ಪಂಚಾಯತಿ ಹಿರೇತನ ಮಾಡತಿದ್ದ. ಊರಾಗ ಬಹಳ ಮರ್ಯಾದಿಯಿಂದ ಬಾಳಿದವ. ಅಹಂಕಾರ ಸೊಕ್ಕು ಮಾಡಿದವ ಅಲ್ಲ. ಊರಾಗ ಏನಾದರೂ ಆದ್ರ ನಮ್ಮಪ್ಪ ಬೇಕ. ಕೂಸ ಹುಟ್ಟಿದರೂ ಬೇಕ, ಸತ್ತರೂ ಬೇಕ, ಮುಂಜವಿ-ಲಗ್ನ ಯಾವ ಕಾರ್ಯ ಅಂವಾ

ಇಲ್ದ ನಡೀತಿರಲಿಲ್ಲ. ಊರಾಗ ಅಷ್ಟು ಬೇಕಾದವ. ನಾ ಹುಟ್ಟಿದ ಮ್ಯಾಲ ಅವ್ವ ಹಗಲೆಲ್ಲ ಸೀಕ ಬೀಳ್ತಿದ್ಲು. ಹೊಟ್ಟಿ ನೋವು ಅಂತ ಹಾಸಿಗಿ ಹಿಡೀತಿದ್ಲು. ಅಪ್ಪ ಗದಗ ಶಾರಕ್ಕ ಕರಕೊಂಡು ಹೋಗಿ ಡಾಕ್ಟರಗೆ ತೋರ್ಸಿ ಬಂದ. ಔಷಧ ನಡೀತು, ಆದರ ಅಕಿ ಸುಧಾರಿಸಲಿಲ್ಲ. ಆಗ ನನ್ನ ಸಾಕಿ ಸಲಹಿದ್ದು ಫಕ್ಕೀರವ್ವ, ಸತ್ಯವ್ವನ ಅವ್ವ. ಅಕೀನ ನನಗ ತಾಯಿ ಆದಳು. ಉಣ್ಣಿಸುವುದರಿಂದ ಹಿಡಿದ ಎಲ್ಲಾ ಮಾಡಿದಳು. ನಾ ಮಲಗತಿದ್ದದ್ದು ಅಕಿನ ಹತ್ರ. ನಾ ಎಂಟು ವರ್ಷದವಳಾದಾಗ ಅವ್ವಗ ಗರ್ಭಕೋಶ ಕ್ಯಾನ್ಸರ್ ಅಂತ ಗೊತ್ತಾತು. ಮಿರಜ ಊರಿಗೆ ಹೋಗಿ ಆಪರೇಶನ್ ಮಾಡಿಸಿದರು. ಗರ್ಭಕೋಶ ಕಿತ್ತರು. ಆದರ ಅದು ಮತ್ತ ಬಾಜು ಕಡೆ ಹರಡಿತಂತ. ಅಕೀ ಬದುಕಲಿಲ್ಲ. ನಮ್ಮಪ್ಪಗ ಆಗ ಮದುವಿ ಮಾಡಿಕೋ ಅಂತ ಬಹಳ ಜನ ಗಂಟು ಬಿದ್ದರು. ಒಲ್ಲೆಂದ. ಮಾಡಕೋಲಿಲ್ಲ.

ಆಗ ಅಪ್ಪ ಹಗಲೆಲ್ಲ ಗದಗಕ್ಕ ಹೋಗಿ ಬರುವುದು ಮಾಡತಿದ್ದ. ಮನ್ಯಾಗಿನ ಆಳ ಹೆಂಗಸರು ಮಾತಾಡ್ತಿದ್ದ ಪ್ರಕಾರ ಅಪ್ಪಗ ಯಾರೋ ಒಬ್ಬಾಕಿ ಹೆಂಗಸ ಅದಾಳಂತ ತಿಳೀತು. ಅಕೀ ನಾಟಕದವಳು,, ಬಹಳ ಚಂದ ಅದಾಳ ಮತ್ತು ಚೆಂದ ಪಾತ್ರ ಮಾಡ್ತಾಳಂತ. ಈ ಗುಸು ಗುಸು ನಡದೇ ಇತ್ತು. ಒಮ್ಮೆ ಅಪ್ಪ ನನ್ನ ಗದುಗಿಗೆ ಈ ಹೆಂಗಸಿನ ಮನಿಗೆ ಕರೆದುಕೊಂಡ ಹೋದ. ಅಕಿ ಬಹಳ ಚಂದ ಇದ್ದಳು. ನನ್ನ ಬಹಳ ಹಚ್ಚಿಕೊಂಡು ಮುದ್ದು ಮಾಡಿದಳು. ಆ ರಾತ್ರಿ ಶಾವಿಗೆ ಬಸಿದು ಊಟ ಮಾಡಿಸಿದಳು. ರಾತ್ರಿ ೧೦ ರ ನಾಟಕ ನೋಡಿಕೊಂಡು ಹೋಗು ಅಂತ ಅಪ್ಪಗ ಹೇಳಿದಳು. ಅಪ್ಪ ನನ್ನ ಸಲುವಾಗಿ ಬ್ಯಾಡ ಅಂದ. ನಾನು ನೋಡಿ ಹೋಗೋಣ ಅಂದೆ. ನಾಟಕಕ್ಕೆ ಹೋದಿವಿ. ಅವಾಗ ಹೂಡಿದ್ದ ನಾಟಕ "ಕಿತ್ತೂರ ಚೆನ್ನಮ್ಮ". ಪೇನಪೆಟಗಿದವನ ಜತೆ ನಾ ಕುಂತು ಕಣ್ಣ ಪಿಳಿಕಿಸಲಾರ್ದಂಗ ನೋಡ್ದೆ. ಆಕಿ ನಿಜವಾಗಿಯೂ ಕಿತ್ತೂರ ಚೆನ್ನಮ್ಮ ಅಂತ ಭಾವಿಸಿದೆ. ನನ್ನ ಅವ್ವ ಕಿತ್ತೂರ ಚೆನ್ನಮ್ಮ ಅಂತ ಭಾವಿಸಿದೆ. ಬೆಳಗೂ ಮುಂಜಾನೆ ಹೊರಟ ಬಂದೆವು. ಮುಂದೆ ಹಲವಾರು ಸಲ ಹೋದೆವು. ಪ್ರತಿಸಲವೂ ನನ್ನನ್ನು ಪ್ರೀತಿಸಿದಳು, ಮುದ್ದು ಮಾಡಿದಳು. ತನ್ನ ಮಗಳಿನಂತೆಯೇ ವರ್ತಿಸಿದಳು. ಕ್ರಮೇಣ ನನಗೆ ಗೊತ್ತಾದದ್ದು, ಅವಳು ಅಪ್ಪನ ಸಲುವಾಗಿ ತನ್ನ ಕಂಪನಿ ಬಿಟ್ಟು, ತನ್ನ ದೂರದ ಸಂಬಂಧಿ ಒಂದು ಮುದುಕಿಯೊಡನೆ ಗದುಗಿನಲ್ಲೇ ಮನೆ ಮಾಡಿ ಇದ್ದಿದ್ದು. ನಂತರ ಅಂದರೆ ಹೈಸ್ಕೂಲಿಗೆ ಬಂದಾಗ, ಅಂದರ ಆಗ ಹೈಸ್ಕೂಲು ಭದ್ರಾಪುರದಲ್ಲಿ ಮಾತ್ರ ಇತ್ತು. ಅದು ನಮ್ಮೂರಿನಿಂದ ಎಂಟು ಮೈಲಿ. ನಾವು ನಾಲ್ಕಾರು ಹುಡುಗಿಯರು ನಮ್ಮ ಬಂಡಿಯಲ್ಲೇ ಬಂದು ಹೋಗ್ತಿದ್ದೆವು. ಸಿದ್ದಪ್ಪನೇ ಬಂಡಿ ಹೂಡುತ್ತಿದ್ದ. ಆ ವರ್ಷ ಏಕಾಏಕಿ ಆ ಹೆಂಗಸು ಗದಗ ಬಿಟ್ಟು ಹೋಗಿದ್ದಳು. ಸಿದ್ದಪ್ಪನಿಂದ ನನಗ ತಿಳಿದಿದ್ದ ಪ್ರಕಾರ, ಅವಳು ನಾಟಕದಿಂದ ದೂರ ಇರಲು ಸಾಧ್ಯವಾಗುತ್ತಿರಲಿಲ್ಲ, ಮತ್ತ ಗದುಗಿನಲ್ಲೇ ಒಂದು ಸಣ್ಣ ಖಾಯಂ ಕಂಪನಿ ಮಾಡಲು ಅಪ್ಪನ್ನ ಒತ್ತಾಯಿಸಿದಳಂತೆ, ಅಪ್ಪ, 'ಬ್ಯಾಡ ಲಗ್ನ ಆಕ್ಕೇನಿ, ಅಲ್ಲೆ ಊರಿಗೆ ಬಂದ ಬಿಡು ಮತ್ತ ಏನಾದರೂ ನಾ ನೋಡ್ತೇನಿ' ಅಂದನಂತೆ. ಆದರೆ ಅವಳು ಒಪ್ಪದೆ ಹೋಗಿಬಿಟ್ಟಳಂತೆ.

ಆ ಹೆಂಗಸನ್ನೂ ಅಪ್ಪ ಪ್ರೀತಿಸಿರಬೇಕು, ಇಲ್ಲ ಬಹಳ ಹಚ್ಚಿಕೊಂಡಿರಬೇಕು. ಯಾಕಂದ್ರ ಆ ಹೆಂಗಸು ಬಿಟ್ಟ ಮ್ಯಾಲೆ ಅಪ್ಪ ಯಾವಾಗಲೂ ಮಂಕಾಗಿ ಕುಳಿತು ಬಿಡುತ್ತಿದ್ದ. ಯಾವುದರಲ್ಲೂ ಆಸಕ್ತಿ ವಹಿಸುತ್ತಿರಲಿಲ್ಲ. ಎಲ್ಲ ಕೆಲಸ ಸಿದ್ದಪ್ಪನೇ ಮಾಡತಿದ್ದ. ಅಪ್ಪ ತನ್ನ ಎಲ್ಲವನ್ನೂ ಕಳೆದುಕೊಂಡವರ ತರಹ ಆಡಿದ. ಕ್ರಮೇಣ ಬರೀ ಗುಡಿಗುಂಡಾರ, ಮಠ ದೇವರು ಅಂತ ಓಡಾಡಿದ. ಈಗಿನ ಕಲ್ಮೇಶ್ವರ ದೇವಸ್ಥಾನ, ದ್ಯಾಮವ್ವನ ಗುಡಿ, ಅಪ್ಪನು ತನ್ನ ಹೊಲ ಮಾರಿ ಕಟ್ಟಿಸಿದ. ಕಲ್ಮೇಶ್ವರ ಮಠಕ್ಕೆ ದಾಸೋಹ ನಡೆಸಲಿಕ್ಕೆ ಸ್ವಾಮಿ ಹೆಸರಿನಲ್ಲಿ ನಾಲ್ಕು ಕೂರಿಗಿ ಜಮೀನು ಬರೆದ. ಆ ಲಫಂಗ ಸ್ವಾಮಿ, ಊರ ಗಾಣಿಗೇರ ಶಿವಪ್ಪಗ ಮಾರಿ ಓಡಿ ಹೋದ. ಈ ಊರಿನ ರಾಜಕೀಯಕ್ಕ ಇನ್ನೂ ಸೋತ. ಊರ ಹೊರಗಿದ್ದ ಹತ್ತ ಎಕರೆದಾಗ ಒಂದು ಸಣ್ಣ ಮನಿ ಹಾಕಿಸಿದ. ಅಲ್ಲೇ ಇರಲಿಕ್ಕೆ ಹತ್ತಿದ. ಊರಾಗಿನ ಮನಿಯಾಗ ನಾನು ಮತ್ತು ಫಕ್ಕೀರವ್ವ ಇಬ್ಬರ. ನಾ ಹತ್ತನೇ ಇಯತ್ತೆಗೆ ಬಂದಾಗ ನನ್ನ ಲಗ್ನ ಮಾಡಿದರು. ನಾ ಧಾರವಾಡಕ್ಕೆ ಬಂದೆ. ನಾ ಬಂದ್ದ ವರ್ಷನ ಬಂಜಿ ಫಕ್ಕೀರವ್ವಗ ಸತ್ಯವ್ವ ಹುಟ್ಟಿದಳು. ಅವಳು ಹುಟ್ಟಿ ಒಂದು ವರ್ಷಕ್ಕ ನೀ ಹುಟ್ಟಿದಿ.

ಮುಂದ, ನಿಮ್ಮಪ್ಪಗ ಆ ನಾಟಕದ ಹೆಂಗಸಿನ ವಿಷಯ ಗೊತ್ತಾಗಿ ಬಹಳ ಸಿಟ್ಟಿಗೆದ್ದರು. ನಾ ಊರಿಗೆ ಹೋಗಬಾರದು ಅಂತ ಹಟ ಹಿಡಿದು ನಿನ್ನ ಮ್ಯಾಲ ಆಣೆ ಮಾಡಿಸಿಕೊಂಡರು. ನಾನು ಊರಿಗೆ ಹೋಗಲಿಲ್ಲ, ಅಪ್ಪನ್ನ ನೋಡಲಿಲ್ಲ.

ಸತ್ಯವ್ವ ಹೊಟ್ಯಾಗ ಇದ್ದಾಗ ಸಿದ್ದಪ್ಪ, ಅಪ್ಪನ್ನ, ಫಕ್ಕೀರವ್ವನ್ನ ಬಿಟ್ಟು ಯಾವುದೋ ಸ್ವಾಮಿ ಹಿಂದ ದೇಶಾಂತರ ಹೋದ. ಎಷ್ಟು ಹುಡುಕಿಸಿದರೂ ಸಿಗಲಿಲ್ಲ. ಆದಾನೋ ಸತ್ತಾನೋ ಗೊತ್ತಿಲ್ಲ. ಸಿದ್ದಪ್ಪ ದೇಶಾಂತರ ಹೋಗಿದ್ದು ಅಪ್ಪನ ಮ್ಯಾಲೆ ಇನ್ನಷ್ಟು ಪೆಟ್ಟು ಬಿತ್ತು. ಅಪ್ಪ ದುಡೀಲಿಲ್ಲ, ಉಳಿದ ಹೊಲ ಮಾರಿಕೋತ ಜೀವನ ಸಾಗಿಸಿದ. ಮುಂದ, ಅಂದ್ರ ನೀ ಆರೇಳು ವರ್ಷದವ ಇದ್ದಾಗ ಅಪ್ಪಗ ಲಕ್ವಾ ಹೊಡೀತು. ಆಗ್ಲೂ ನಿಮ್ಮಪ್ಪ ನನ್ನ ಊರಿಗೆ ಕಳಿಸಲಿಲ್ಲ. ಫಕ್ಕೀರವ್ವನೇ ಅಪ್ಪನ ಸೇವಾ ಮಾಡಿದಳು. ಚಾಕರಿ ಮಾಡಿದಳು. ಹೇಲು ಉಚ್ಚಿ ಬಳಿದಳು. ಇನ್ನೊಬ್ಬರ ಹೊಲದಾಗ ದುಡಿದು ಸಾಕಿದಳು. ಆ... ಆ ಋಣಕ್ಕ ಆ ಹೊಲ ಅವರದು' ಅಂತ ಹೇಳಿ, ದುಃಖ ವತ್ತರಿಸಿಬಂದು ಅವ್ವ ಅತ್ತೇಬಿಟ್ಟಳು. 'ಹಡೆದ ತಂದಿ ಮುಪ್ಪಿನ್ಯಾಗ ಏನೂ ಮಾಡಾಕಾಗಲಿಲ್ಲ ಅಂತ ಪಾಪಪ್ರಜ್ಞೆ ನನ್ನ ಇನ್ನೂ ಕಾಡತೇತಿ. ಫಕ್ಕೀರವ್ವನ ಋಣ ಈ ಜನುಮದಾಗ ತೀರಸಾಕ ಆಗುದಿಲ್ಲೋ ಮಗನ' ಅಂತ ಅಂದು ಮತ್ತೆ ಅತ್ತಳು, ಬಿಕ್ಕಳಿಸಿ ಅತ್ತಳು.

ನಾನು ಮೌನವಾಗೇ ಇದ್ದೆ. ಕೋರ್ಟಿಗೆ ಹೋಗುವ ಮನಸ್ಸಾಗಲಿಲ್ಲ. ಬ್ಯಾಂಕಿನ ಕಡೆ ಹೊರಟೆ.

❖ ❖ ❖

ಬ್ಯಾಂಕಿನ ಆಫೀಸರ್‌ಗಳ ಜೊತೆ, ಸತ್ಯವ್ವನ ಸಾಲವನ್ನು ಹೊಸದಾಗಿ ಬಂದ "ಒನ್ ಟೈಮ್ ಸೆಟಲ್‌ಮೆಂಟ್" ಯೋಜನೆಯಲ್ಲಿ ಲೆಕ್ಕ ಹಾಕಿಸಿದೆ. ನಮ್ಮ ಮ್ಯಾನೇಜರ್‌ರಿಂದ ಸತ್ಯವ್ವ ಸಾಲ ಪಡೆದ ಬ್ಯಾಂಕಿನ ಶಾಖೆಯ ಮ್ಯಾನೇಜರ್‌ರಿಗೆ ಫೋನ್ ಮಾಡಿಸಿದೆ. ಒಂದು ಲಕ್ಷ ಎಂಭತ್ತು ಸಾವಿರಕ್ಕೆ ಅವರು ಒಪ್ಪಿ, ರೀಜನಲ್ ಮ್ಯಾನೇಜರ್‌ರಿಂದ ಅನುಮತಿ ಪಡೆಯುತ್ತೇನೆಂದು ಒಪ್ಪಿದರು. ಅರ್ಜಿಯನ್ನು ಸಲ್ಲಿಸಲು ಹೇಳಿದರು. ಸತ್ಯವ್ವನ ಸಾಲವನ್ನು ತೀರಿಸಬೇಕೆಂಬ ನಿರ್ಧಾರದಿಂದ ಮನೆಗೆ ಬಂದು ಅವ್ವನಿಗೆ ಹೇಳಿದೆ. ಅವ್ವ ಸಂತೋಷದಿಂದ ಹಿಗ್ಗಿ ಹಿರೀಕಾಯಿ ಆದಳು. ನಾನೇ ಊರಿಗೆ ಹೋಗಿ ಅರ್ಜಿಗೆ ಅವಳ ಸಹಿ ತರುವುದಾಗಿ ಹೇಳಿದೆ. ಶೆಟ್ಟಿ ಕೇಸ್ ತಯಾರು ಮಾಡಹತ್ತಿದೆ.

❖ ❖ ❖

ಎರಡು ದಿನಗಳ ನಂತರ ಊರಿಗೆ ಹೋದೆ. ನೇರವಾಗಿ ನಮ್ಮೂರ ಗೌಡರ ಮನೆಗೆ ಹೋಗಿ, ಕ್ಷೇಮ ಸಮಾಚಾರ ಕೇಳಿದೆ. ಬಸೂ ಮತ್ತು ಗಿರಿಜೆಯ ಬಗ್ಗೆ ಕೇಳಿದೆ. ಗಿರಿಜೆ ಅಲ್ಲೇ ಹಂದಿಗನೂರಿನಲ್ಲಿ ಓದುವುದಾಗಿ ಹೇಳಿದರು. ಬಸೂ ಅವನ ತಂಟೆಗೆ ಹೋಗಿಲ್ಲವೆಂದೂ ಹೇಳಿದರು. ಕೇಳಿ ಸಂತೋಷವಾಯಿತು. ಅಲ್ಲಿಂದ ತೋಟಕ್ಕೆ ಹೋದೆ. ಸತ್ಯವ್ವ ತೋಟದಲ್ಲೇ ಇದ್ದಳು. ಬಸೂ ನವಲಗುಂದಕ್ಕೆ ಹೋಗಿದ್ದ. 'ಸಾಲ ಯಾಕ ಮಾಡಿದಿ' ಅಂತ ಕೇಳಿದೆ. ಎಲ್ಲ ವಿವರವಾಗಿ ಹೇಳಿದಳು. ತನ್ನ ಗಂಡನ ಊರು ಬಿಟ್ಟು ಇಲ್ಲೇ ಇರಬೇಕೆಂದು ನಿರ್ಧಾರ ಮಾಡಿ ಬಂದಿದ್ದು, ತೆಂಗಿನ ತೋಟ ಮಾಡುವ ವಿಚಾರ ಬಂದಿದ್ದು, ಬೋರ್ ತೆಗೆಸಲು ಹೋಗಿ ಫೇಲ್ ಆಗಿದ್ದು, ಗಿಡಗಳಿಗೆ ಮುಂಗಡ ಕೊಟ್ಟಿದ್ದು, ಅದೇ ದುಡ್ಡಿನಿಂದ ಸ್ವಲ್ಪ ಮನೆಗೆ ಬೇಕಾಗುವ ಸಾಮಾನು ಖರೀದಿಸಿದ್ದು, ಸೊಸೆಗೆ ಇರಲೆಂದು ಚೂರು ಬಂಗಾರ ಮಾಡಿಸಿದ್ದು ಎಲ್ಲ ಹೇಳಿದಳು. ಮುಂದೆ ಮಳೆ ಬರದೇ ಬರ ಬಿದ್ದಿದ್ದು, ಸರಕಾರ ಸಾಲ ಮನ್ನಾ ಮಾಡ್ತದ ಅಂತ ಸುಮ್ಮನೆ ಕುಳಿತಿದ್ದು ಹೇಳಿದಳು. ಬಹಳ ಹೊತ್ತು ಸಾಲದ ಬಗ್ಗೆ ಮಾತನಾಡಿ ಸತ್ಯವ್ವನ ಸಹಿ ತೆಗೆದುಕೊಂಡೆ. ಇನ್ನೇನು ಹೊರಡವವನಿದ್ದಾಗ ಸತ್ಯವ್ವ, 'ಈ ಹೊಲವನ್ನು ನಿನ್ನ ಹೆಸರಿಗೆ ಬರೆಸಿಕೊಂಡು ಬಿಡು' ಅಂದಳು. ಆಶ್ಚರ್ಯವಾಯಿತು. ಆಶ್ಚರ್ಯದಿಂದ 'ಹಿಂಗ್ಯಾಕ ಅಂತಿ, ಅದು ನಿಂದು, ನಮ್ಮಜ್ಜ ನಿಮ್ಮವ್ವಗ ಕೊಟ್ಟಿದ್ದು' ಅಂತ ಹೇಳಿದೆ. 'ಹೌದು ಖರೆ, ಆದರ ಬಸೂ ಇದನ್ನ ಉಳಿಸಿಕೊಳ್ಳತಾನೋ ಇಲ್ಲವೋ ನನಗ ಭರೋಸ ಇಲ್ಲ, ಅವಗ ಒಂದು ಸರಕಾರಿ ನೌಕರಿ ಕೊಡಸಿ ನೀನ ಬರೆಸಿಕೊಂಡು ಬಿಡು' ಅಂದಳು. 'ಬಸೂನ ನೌಕರಿಗೂ ಇದಕೂ ಯಾಕ ಸಂಬಂಧ ಹಚ್ಚತೀದಿ, ಅವನ ನೌಕರಿ ಪ್ರಯತ್ನ ಮಾಡ್ತೇನಿ ಬಿಡು' ಅಂತ ಹೇಳಿದೆ. ಹೊತ್ತು ಮುಣಗಿದರೂ ಬಸೂ ಬರಲಿಲ್ಲ. ಹೊಂಟು ಬಂದೆ.

ದಾರಿಯುದ್ದಕ್ಕೂ ಸತ್ಯವ್ವನ ನೆನಪು. ಬಹುತೇಕ ನನಗೆ ಎಲ್ಲ ಗೊತ್ತಿದ್ದರೂ, ಸತ್ಯವ್ವ ತನ್ನ ಗಂಡನ್ನ ಯಾಕ ಬಿಟ್ಟು ಬಂದಳು. ಏನಾಗಿರಬಹುದೆಂದು ನೆನಪಿಸಿಕೊಂಡೆ. ಅವ್ವ ಒಮ್ಮೆ

ಹೇಳಿದ್ದು ನೆನಪಿಗೆ ಬಂತು. ಆಕಿ ಗಂಡ ಸತ್ಯವ್ವನ ಮೇಲೆ ಹಾದರದ ಆರೋಪ ಹೊರೆಸಿ, ಬಸೂ ಅವನ ಮಗ ಅಲ್ಲ ಅಂತ ಸಾಧಿಸಿದನಂತೆ. ಸೇರಿದ ಕೇರಿ ಪಂಚರು ಆ ಲಗ್ನವನ್ನು ಬಿಡುಗಡೆ ಮಾಡಿ, ಸತ್ಯವ್ವನ ಗಂಡನಿಗೆ ಇನ್ನೊಂದು ಲಗ್ನಕ್ಕೆ ಅನುಮತಿ ಕೊಟ್ಟರಂತೆ. ಅದರ ಪ್ರಕಾರ ಅವನು ಇನ್ನೊಂದು ಲಗ್ನ ಮಾಡಿಕೊಂಡನಂತೆ. ಅನಿವಾರ್ಯವಾಗಿ ಸತ್ಯವ್ವ ಊರಿಗೆ ಬಂದು ಸೇರಿದಳಂತೆ. ಸತ್ಯವ್ವ ಕೋರ್ಟಿಗೆ ಹೋಗಿ ಪೋಟಗೀ ಕೇಳಿದಳೋ ಇಲ್ಲವೋ ಗೊತ್ತಾಗಿರಲಿಲ್ಲ. ಬಸೂ ಸತ್ಯವ್ವನ ಗಂಡನ ಮಗ ಅಲ್ಲವಾದರೆ ಅವಳ ಸಂಬಂಧ ಯಾರ ಜೊತೆ ಇತ್ತು ? ಈಗ ಅವನು ಇದ್ದಾನೆಯೇ ? ಬಸೂ ಅವನ ಮಗ ಅಂತ ಅವನಿಗೆ ಗೊತ್ತಿದೆಯೇ ? ಅವನು ಅಪ್ಪನ ಕರ್ತವ್ಯಗಳನ್ನು ನಿಭಾಯಿಸಿದ್ದಾನೆಯೇ ? ಸತ್ಯವ್ವ ಈಗಲೂ ಅವನನ್ನು ಸಂಧಿಸುತ್ತಾಳೆಯೇ ? ಯಾರವನು ? ಅಂತ ಹಲವಾರು ಪ್ರಶ್ನೆಗಳೆದ್ದವು. ಆ ಪ್ರಶ್ನೆಗಳನ್ನು ಹೊತ್ತುಕೊಂಡೇ ಮನೆ ಸೇರಿದೆ.

❖ ❖ ❖

ಮರುದಿನ ಬೆಳಿಗ್ಗೆ ಶೆಟ್ಟಿಯವರ ಕೇಸನ್ನು ಅಂತಿಮ ಮಾಡಿ, ಕೋರ್ಟಿಗೆ ಕಟ್ಟುವ ಫೀ ಸಂಬಂಧ ಚೆಕ್ಕನ್ನು ಇಸಿದುಕೊಳ್ಳಲು ಬ್ಯಾಂಕಿಗೆ ಹೋದೆ. ಅಲ್ಲಿ ನನಗೆ ಆಶ್ಚರ್ಯ ಕಾದಿತ್ತು. ನಮ್ಮ ಬ್ಯಾಂಕಿನ ಮ್ಯಾನೇಜರ್‌ರ ತೀರ್ಮಾನವನ್ನು ಮೇಲಾಧಿಕಾರಿಗಳು ಬದಿಗೆ ಒತ್ತಿದ್ದರು. ಶೆಟ್ಟಿಯವರು "ಒನ್ ಟೈಮ್ ಸೆಟಲ್‌ಮೆಂಟ್"ಗೆ ನೇರವಾಗಿ ಬ್ಯಾಂಕಿನ ಚೇರಮನ್ ಮತ್ತು ಡೈರೆಕ್ಟರುಗಳ ಬಳಿ ಮಾತನಾಡಿ, ಕೇಸ್ ಹಾಕದೆ ಹಾಗೆ ಮೌಖಿಕ ಆದೇಶವನ್ನು ಕೆಳಗಿನವರಿಗೆ ಕೊಡುವಂತೆ ವ್ಯವಸ್ಥೆ ಮಾಡಿದ್ದರು. ಅದರಂತೆ ನಮ್ಮ ಮ್ಯಾನೇಜರ್ ಬಹಳ ಬೇಸರಗೊಂಡು, 'ಎಷ್ಟು ಸೊಕ್ಕೈತಿ ನೋಡ್ರಿ ಇವನಿಗೆ, ಮೇಲಿನವರನ್ನು ಹಿಡಕೊಂಡು ಆಟ ಆಡ್ತಾನ. ಅವರಪ್ಪನ ಮನಿ ದುಡ್ಡು ಅಂತ ತಿಳಿದಾನ ನೋಡ್ರಿ. ಇದು ಪಬ್ಲಿಕ್ ದುಡ್ಡರೀ, ಪಬ್ಲಿಕ್ ಇಟ್ಟ ಹಣದಿಂದ ನಾವು ವ್ಯಾಪಾರ ಮಾಡಿ ಬ್ಯಾಂಕಿಗೆ ಗಳಿಸಿಕೊಡ್ತೀವಿ, ಇಂತಹವರು ಸಾಲ ತಗೊಂಡು ಬ್ಯಾಂಕ್ ಮುಳುಗಿಸಲಿಕ್ಕೆ ನೋಡ್ತಾರ. ಇವರ ಕಡೆ ದುಡ್ಡಿಲ್ಲ ಅಂದರ ಯಾರ ನಂಬ್ತಾರ್ರೀ. ಉಳಕಿ ದಂಧೆದಾಗ ನೂರಾರು ಕೋಟಿ ಮಾಡ್ಯಾರ, ತುಂಬ ಬಾರದ... ಖೊಟ್ಟಿ ಪ್ರಾಜೆಕ್ಟ ತೋರಿಸಿ ದುಡ್ಡು ತಗೊಂಡು ಈಗ ಮನ್ನಾ ಕೇಳ್ತಾರ. ಅಲ್ರೀ ಮೇಲಿನವರು ಎಷ್ಟು ಸುಮಾರ್ರೀ ಇಂತಹವರಿಗೆ ಬೀಳ್ತಾರಲ್ಲ ಗೊತ್ತಾಗಂಗಿಲ್ಲ ಇವರಿಗೆ..... ನನಗಂತೂ ಈ ನೌಕರಿನ ಸಾಕಾಗೇತಿ ನೋಡ್ರಿ, ವಾಲಂಟರಿ ರಿಟೈರ್‌ಮೆಂಟ್ ತಗೋಬೇಕು' ಅಂತ ಸಿಟ್ಟಿನಿಂದ ಮಾತನಾಡಿ, 'sorry ವಕೀಲರ, ಈ ಕೇಸ್ ಹಾಕಾಕ ಆಗಂಗಿಲ್ಲ. ಮತ್ತ ಮುಂದ ನೋಡೋಣ' ಅಂತ ಹೇಳಿದರು. ಹದಿಮೂರು ಕೋಟಿ ರೂಪಾಯಿ ದಾವೆ ಕೈಗೆ ಬಂದಿದ್ದು ಬಾಯಿಗೆ ಬರಲಿಲ್ಲ. ಬರುವ ಫೀ ಲೆಕ್ಕ ಹಾಕಿದ್ದು ಬುಡಮೇಲಾಯಿತು. ಬಹಳ ಬೇಸರಗೊಂಡು ಅಪಮಾನ ಭಾವನೆಯಿಂದ ಆಫೀಸಿಗೆ ಹೋಗಿ ಒಬ್ಬನೆ ಕುಳಿತು ಯೋಚನೆಯಲ್ಲಿ ಮುಳುಗಿದೆ.

ಸಾಯಂಕಾಲ ಸುಮಾರು ಆರು ಗಂಟೆಗೆ ಬಸೂ ಬಂದ. ಬಂದವನೇ 'ಊರಿಗೆ ಯಾಕ್ರಿ ಬಂದಿದ್ರಿ, ಈಗ ಆಗಿರೂ ಅವಮಾನ ಸಾಲದು ಅಂತ ಮತ್ತ ನಮ್ಮ ಹೊಟ್ಟಿ ಉರಸಾಕ ಬರತೀರೇನ್ರಿ. ಊರಾಗ ಮಂದಿ ಏನೇನ ಮಾತಾಡ್ತಾರ ನಿಮಗೇನು ಗೊತ್ತು ? ನೋಡ್ರಿ ಒಂದ ಮಾತ ಹೇಳ್ತೀನಿ, ನಾ ನಿಮಗ ಬಹಳ ಗೌರವ ಕೊಡ್ತೀನಿ. ಹೋದ ವರ್ಷ ಗಿರಿಜಾನ ವಿಷಯದಾಗ ನೀವು ಹೇಳಿದಿರಿ ಅಂತ ಕೇಳಿದೆ. ನೀವು ನಡಕ ಇರಲಿಲ್ಲ ಅಂದ್ರ ಆ ಗೌಡನ್ನ ವಿಲಿವಿಲಿ ಒದ್ದಾಡು ಹಂಗ ಮಾಡ್ತಿದ್ದೆ. ನಮ್ಮ ಮನಿ ಮಂದಿ ನಿಮ್ಮ ಋಣದಾಗ ಅದಾರು ಅಂತ ನಿಮ್ಮ ಮಾತು ಕೇಳಿದೆ. ನಿಮ್ಮ ಹೊಲದ ಕೂಳು ತಿನ್ತೀವಿ ಅಂತ ಭಾವಿಸಬ್ಯಾಡರಿ. ನಾನೇನು ನಿಮ್ಮ ಋಣದಾಗ ಇಲ್ಲ. ಅದೂ ಹೊಲ ಅಂದರ ಬಂಗಾರೇನು ಬೆಳದಿಲ್ಲ. ನಮ್ಮವ್ವ ಎತ್ತಿಲ್ಲದ, ಟ್ರ್ಯಾಕ್ಟರ್ ಇಲ್ಲದ ಕಸರತ್ತ ಮಾಡ್ಯಾಳ. ಆಕಿ ಅದಾಳಂತ ಆ ಹೊಲ ಉಳದೇತಿ. ಬರ ಬಿದ್ದಾಗ ನಮ್ಮವ್ವ ಇನ್ನೊಬ್ಬರ ಹೊಲಕ್ಕ ಹೋಗಿ ದುಡಿದು ಕೂಳು ಗಿಟ್ಟಿಸ್ಯಾಳ. ಆ ಹೊಲದಿಂದೇನ ನಮ್ಮ ಹೊಟ್ಟಿ ತುಂಬಿಲ್ಲ. ನೋಡ್ರಿ, ಊರಾಗಿನ ಮಂದಿ ಇನ್ನೂ ಅದು ನಿಮ್ಮ ಹೊಲ, ನಿಮ್ಮಜ್ಜ ನಮಗ ಬಕ್ಷೀಸು ಕೊಟ್ಟಿದ್ದು ಅಂತ ವ್ಯಂಗ್ಯವಾಗಿ ಚುಚ್ಚಿ ಮಾತಾಡ್ತಾರ. ನನಗೂ ಕೇಳಿ ಕೇಳಿ ಸಾಕಾಗೇತಿ. ನಾನೂ ಈಗ ದೊಡ್ಡಾವ ಆಗೇನಿ, ನಾಕು ದುಡ್ಡು ದುಡೀತೇನಿ. ನನಗ ರಾಜಕೀಯ ಭವಿಷ್ಯನೂ ಆದ, ಜಿಲ್ಲಾ ಪಂಚಾಯತಿ ಮೆಂಬರ್ ಆಕ್ಕೇನಿ, ನಾಳೆ ಎಂ.ಎಲ್.ಎ.ನೂ ಆಗಬಹುದು ಯಾರ ಕಂಡಾರ. ಅದಕ್ಕ ಒಂದು ಹೇಳ್ತೇನಿ ಕೇಳ್ರಿ, ನಿನ್ನೆ ಅವ್ವ ಹೇಳಿದ್ಹಂಗ ಆ ಹೊಲಾನ ನಿಮ್ಮ ಹೆಸರಿಗೆ ಬರಸ್ಕೋರಿ. ನಮಗ ಯಾರ ಉಪಕಾರ ಹಂಗೂ ಬ್ಯಾಡ.

ಆ ಹೊಲ ಇಲ್ಲೀತನಕ ಯಾಕ ಉಳದೈತಿ ಗೊತ್ತೇನ್ರಿ ನಿಮಗ. ನಮ್ಮಮ್ಮ ಫಕ್ಕೀರವ್ವ ಸಾಯು ಮುಂದ ಅದನ್ನ ಮಾರಬೇಡ, ಅದು ನಿಮ್ದು. ಅವರ ಋಣ ನಮ್ಮ ಮೇಲೆ ಭಾಳೈತಿ ಅಂತ ಅವ್ವನ ಕಡೆ ಆಣಿ ಮಾಡಿಸಿಕೊಂಡಿದ್ದಳಂತ. ಅದಕ್ಕ ಉಳದೈತಿ. ಇಲ್ಲಾದರ ನಾವು ಪಟ್ಟ ಕಷ್ಟಕ್ಕೆ ಯಾವತ್ತೋ ಮಾರಿ ಗಾಳಿಗೆ ತೂರಬೇಕಿತ್ತು.

ನೋಡ್ರಿ, ದಿಲ್ಲಿಯೊಳಗ ನಮ್ಮ ಪಕ್ಷದ ಯುವಕರ ರ್‍ಯಾಲಿ ಅದ, ನಾನು ಇಲ್ಲಿಂದ ಎರಡು ನೂರು ಹುಡುಗರನ್ನು ಕರಕೊಂಡು ಹೊಂಟೇನಿ. ಬರೂದ ಹದಿನೈದು ದಿವಸ ಹಿಡೀತೇತಿ. ಅಷ್ಟರಾಗ, ಆ ಹೊಲ ಹೆಂಗ ಬರಸಿಕೊಳ್ಳಬೇಕು ಬರಸ್ಕೋರಿ. ಸಾಲ ನಿಮ್ಮ ಹೊಲದ ಮ್ಯಾಲ ಆಗೇತಿ ನೀವ ತೀರಸ್ರಿ' ಅಂತ ಒಂದೇ ಸಮನೇ ಹೇಳಿ 'ನಿಲ್ಲು' ಅಂದರೂ ನಿಲ್ಲದೇ ಹೊರಟು ಹೋದ.

❖ ❖ ❖

ಬಸೂ ಬಂದು ಏನೇನೋ ಮಾತನಾಡಿ ಹೋದ ಮುಂದಿನ ಎರಡು ದಿನ ಬಹಳ ಅಸಮಾಧಾನದಿಂದ ಕಳೆದೆ. ಹಲವಾರು ಪ್ರಶ್ನೆಗಳೆದ್ದವು. ಬಸೂ ಹೊಲದ ಬಗ್ಗೆ, ಅದೂ ಈ

ವೇಳೆಗೆ ಏಕೆ ಹೀಗೆ ಮಾತನಾಡಿದ ? ಊರಿನವರು ಯಾಕೆ ಆ ಹೊಲದ ಬಗ್ಗೆ ಚುಚ್ಚಿ ಮಾತನಾಡಿರಬಹುದು ? ಅದು ನನ್ನ ಹೊಲ ಅಂತ ಊರಿನವರು ಏಕೆ ಭಾವಿಸಿರಬೇಕು ? ಹಿಂದೊಮ್ಮೆ ನನ್ನವ್ವ ಅದಕ್ಕೆ ಏಕೈಕ ವಾರಸುದಾರಳಾಗಿರಬಹುದು. ಆದರೆ ಅದನ್ನು ಭಕ್ಷೀಸ್ (ದಾನ) ಕೊಟ್ಟ ಮೇಲೆ ನನ್ನವ್ವ ಅಥವಾ ನನ್ನ ಹಕ್ಕು ಏನ್ ಇರುತ್ತೆ. ಕೊಟ್ಟ ಮರುಗಳಿಗೆಯಲ್ಲಿಯೇ ಅದು ಸತ್ಯವ್ವನದು ಆಗಿ ಹೋಯಿತು. ಫಕ್ಕೀರಮ್ಮ ಸತ್ಯವ್ವನಿಂದ ಪರಾಧೀನ ಮಾಡಬಾರದೆಂಬ ಆಣೆ ಏಕೆ ಮಾಡಿಸಿಕೊಂಡಳು ? ಬಸೂ ಋಣದ ಬಗ್ಗೆ ಏನೇನೋ ಮಾತನಾಡಿದ ಕಾರಣವೇನು ? ಎಂಬ ಹಲವಾರು ಪ್ರಶ್ನೆಗಳೆದ್ದವು. ನನ್ನ ಬುದ್ಧಿಮಟ್ಟಕ್ಕೆ ನನ್ನ ತಿಳುವಳಿಕೆಗೆ ಯಾವ ಉತ್ತರವೂ ಹೊಳೆಯಲಿಲ್ಲ. ಅವ್ವ ಹಿಂದೆ ಆಗಾಗ ಹೇಳುತ್ತಿದ್ದ ನೆನಪು ಮಾಡಿಕೊಂಡು ಉತ್ತರ ಹುಡುಕಲೆತ್ನಿಸಿದೆ. ಅದು ಫಲಕಾರಿಯಾಗಲಿಲ್ಲ. ಒಂದು ನಿರ್ಧಾರಕ್ಕೆ ಬಂದೆ. ಅವ್ವನನ್ನೇ ಕೇಳಬೇಕೆಂದು.

ಎರಡು ದಿನಗಳ ನಂತರ ಅವ್ವ ಸತ್ಯವ್ವನ ಸಾಲದ ಪ್ರಸ್ತಾವನೆ ಮಾಡಿದಳು. 'ಅರ್ಜಿಯನ್ನು ರೀಜನಲ್ ಆಫೀಸಿಗೆ ಕಳಿಸ್ಯಾರೆ. ಇವತ್ತೋ ನಾಳೆಯೋ ಆಗಬಹುದು' ಎಂದೆ. 'ರೊಕ್ಕಕ್ಕ ಏನ್ ಮಾಡ್ತಿ' ಅಂತ ಕೇಳಿದಳು. 'ಎಫ್.ಡಿ. ಮುರಸ್ತೇನಿ ಮತ್ತ ಸ್ವಲ್ಪ ಬಂಗಾರ ಮಾರೋಣ' ಅಂದೆ. 'ಹ್ಞೂಂ' ಅಂದು ಸುಮ್ಮನಾದಳು. ಕೆಲ ಸಮಯದ ನಂತರ ಬಸೂ ಬಂದು ಹೇಳಿ ಹೋದದ್ದು ಹೇಳಿದೆ. ಅವ್ವ ಆಶ್ಚರ್ಯಪಟ್ಟಳು. ಮನಸ್ಸು ಕಸಿವಿಸಿಯಾಯಿತೆಂದು ಅನ್ನಿಸಿತು. ಕಾರಣ ಅತ್ತಿಂದಿತ್ತ ಇತ್ತಿಂದತ್ತ ಓಡಾಡಿದಳು. ಏನೋ ಹೇಳಬೇಕೆಂದು ಬಯಕೆ ಇದ್ದರೂ ತಡೆಹಿಡಿಯುತ್ತಿದ್ದಳು. ದುಃಖ ತಂದುಕೊಂಡು ಅತ್ತಳು. ಬಹಳ ದುಃಖಿಸಿ ಅತ್ತಳು. ಕೊನೆಗೆ ತಾನೇ ಸಮಾಧಾನ ಮಾಡಿಕೊಂಡು, ಬಹುಶಃ ಹೇಳಿ ಬಿಡಬೇಕೆಂಬ ನಿರ್ಧಾರದಿಂದ ಹೇಳಲು ಶುರು ಮಾಡಿದಳು.

'ನೋಡು, ನಮ್ಮಪ್ಪನ ಮುಪ್ಪಿನ ಕಾಲಕ್ಕ ನಾನು ಏನೂ ಮಾಡಲಾಗಲಿಲ್ಲ, ಮಗಳಾಗಿ ನಾನು ಯಾವ ಸೇವಾ, ಯಾವ ಚಾಕರಿ ಮಾಡಬೇಕಿತ್ತು ಅದನ್ನ ಮಾಡಲಾಗಲಿಲ್ಲ ಅಂತ ನಿನಗೆ ಹೇಳೇನಿ. ಆ ಪಾಪಪ್ರಜ್ಞೆ ನನ್ನ ಕಾಡಾಕಹತ್ತಿದ್ದು ಹೇಳೇನಿ. ಅದಕ ಕಾರಣ ನಿಮ್ಮಪ್ಪ ಹಾಕ್ಸಿದ ಆಣಿಯೂ ಅಂತ ಹೇಳೇನಿ. ಆದರ.... ನನಗ ಅದೊಂದ ಪಾಪಪ್ರಜ್ಞೆ ಕಾಡಿಲ್ಲ. ಇನ್ನೊಂದು ಪಾಪಪ್ರಜ್ಞೆ ಹೊತ್ತ ಜೀವ ಕಳಿಯಾಕಹತ್ತೇನಿ. ಅದು.... ಸತ್ಯವ್ವನ ಬಗ್ಗೆ.

ಆ ನಾಟಕದ ಹೆಂಗಸು ಅಪ್ಪನ ಬಿಟ್ಟು ಹೋದ ಮೇಲೆ, ಅಪ್ಪ ಮಂಕಾಗಿ ಮನಿಯಾಗ ಇರಾಕ ಹತ್ತಿದ. ದೇವ್ರು ದಿಂಡ್ರು ಮಾಡಿದ. ಗುಡಿ ಕಟ್ಟಿಸಿದ ಹೊಲಗಳನ್ನು ಮಾರಿ. ಒಂದು ಹೊಲ ಸ್ವಾಮಿಗೆ ದಾನವಾಗಿ ಕೊಟ್ಟ. ಆ ವ್ಯಾಳ್ಯಾದಾಗ ಹೊಲದ್ದು, ಮನಿ ದೇಖರಕಿ ಸಿದ್ದಪ್ಪನ್ಽ ಮಾಡಿದ್ದ. ಊರೂರು ತಿರುಗೋದು, ಭೂ ಕಾಯ್ದೆ ಸಲುವಾಗಿ ಕಛೇರಿಗೆ ಅಡ್ಡಾಡುದು ಅವನೇ ಮಾಡ್ತಿದ್ದ. ಮನಿಗೆಲಸ ಎಲ್ಲ ಫಕ್ಕೀರಮ್ಮನೇ ಮಾಡುತ್ತಿದ್ದಳು.

ನಾನು ಮ್ಯಾಟ್ರಿಕ್‌ಗೆ ಆಗ ತಾನೇ ಬಂದಾಗ, ನಿಮ್ಮಪ್ಪ ನನ್ನ ನೋಡಾಕ ಬಂದು ಒಪ್ಪಿ ಹೋದರು. ಲಗ್ನದ ಬಗ್ಗೆ ಮಾತಕತಿ ನಡೆದಿದ್ದವು. ಎಲ್ಲರ ಅಭಿಪ್ರಾಯ ನಾನು ಮ್ಯಾಟ್ರಿಕ್ ಪರೀಕ್ಷೆ ಕುಂತ ಮೇಲೆ ಲಗ್ನ ಮಾಡೋದು ಅಂತ ಆತು. ಅದ ವೇಳ್ಯಾಕ, ಬಹಳ ವರ್ಷ ಮಕ್ಕಳಾಗಲಾರದ ಫಕ್ಕೀರಮ್ಮ ಬಸರಾದಳು. ಫಕ್ಕೀರಮ್ಮ ಬಸರಾದಾಗಲೆ ಸಿದ್ದಪ್ಪ ಏಕಾಏಕಿ ಊರು ಬಿಟ್ಟು ಹೋದ. ಆ ಹೊತ್ತಿನಾಗ ಅವ ಯಾಕ ಹೋದ ಅಂತ ಗೊತ್ತಿರಲಿಲ್ಲ. ಮುಂದ ಹೊಲಗೆಲಸದ ಆಳುಗಳಿಂದ ಕಾರಣ ತಿಳಿಯಿತು. ಅಪ್ಪಗ ಮತ್ತು ಫಕ್ಕೀರಮ್ಮಗ ಸಂಬಂಧ ಇದ್ದಿದ್ದು, ಒಮ್ಮೆ ಸಿದ್ದಪ್ಪ ಕಣ್ಣಾರೆ ಕಂಡು ವ್ಯಸನಗೊಂಡು ಹೋದನಂತ. ಊರಾಗಿನ ಹಿರಿಯರು, ಅಪ್ಪಗ ಬ್ಯಾಡಾದವರು ಅಪ್ಪನ ಪಂಚಾಯಿತಿ ಹಿರೇತನವನ್ನು ಕಸಿದುಕೊಂಡರು. ಪಂಚಾಯತಿ ಕರೆದು ಫಕ್ಕೀರಮ್ಮನ ಮೇಲೆ ಹಾದರ ಹೊರಸಿದರು.

ಪಂಚಾಯತಿ ಹಿಂದಿನ ದಿವಸ ರಾತ್ರಿ, ಅಪ್ಪ ಫಕ್ಕೀರಮ್ಮನ ಕರೆದು 'ನೋಡು, ನೀ ಏನ್ ಹೆದರಬ್ಯಾಡ. ಆಣಿ ಮಾಡಿ ಹೇಳಂತಾರ, ಖರೆ ಏನೈತಿ ಅದನ್ನ ಹೇಳಿಬಿಡು. ನಾ ಅದೇನಿ, ನಿನ್ನ ಲಗ್ನ ಮಾಡಿಕೋತೇನಿ' ಅಂತ ಹೇಳಿದರು. ಅದಕ್ಕ ಫಕ್ಕೀರಮ್ಮ ಅತ್ತು ಅಪ್ಪನ ಕಾಲ ಹಿಡಿದುಕೊಂಡು, 'ಇದರಾಗ ನಿಮಗೇನು ತಿಳಿಯಾಂಗಿಲ್ಲ, ನೀವು ಸುಮ್ಮನಿರಿ. ನಾ ಎಲ್ಲಾ ಮಾಡ್ತೀನಿ. ನಾ ಖರೆ ಹೇಳಿದರ ಮಾನ ಮರಿಯಾದಿ ಹೋಗಿ ಊರಾಗ ಮಂದಿ ಮುಂದ ಸಣ್ಣವರಾಗತೀರಿ. ಅದಕ್ಕಿಂತ ಹೆಚ್ಚು ಕೆಟ್ಟ ನಿಮ್ಮ ಮಗಳ ಮೇಲಾಕ್ಕೇತಿ, ಹೆಂಗೂ ಮಾತುಕತಿ ನಡೆದು ಒಂದ ದಾರಿಗೆ ಬಂದೇತಿ. ಬೀಗರಿಗೆ ಹೆಂಗಾದರೂ ಗೊತ್ತಾಗೂದ ಬೇಡ, ಗೊತ್ತಾದರ ಸಂಬಂಧ ಮುರೀತೇತಿ, ಮುಂದ ಬರುವವರಿಗೆ ತ್ರಾಸ ಆಕ್ಕೇತಿ. ಮಗಳ ಸಲುವಾಗರೇ ಸುಳ್ಳು ಹೇಳಬೇಕು' ಅಂತ ಅಂದು ಕೆಲ ಕ್ಷಣ ಮೌನವಾದಳು. ನಂತರ 'ನಂದೇನೈತಿರಿ, ನಿಮ್ಮ ದಾಸಿಯಾಗಿ ಸೇವಾ ಮಾಡಕೋತ ಜೀವಾ ತಗೀತೇನಿ, ಮೊದಲ ಮಗಳ ಲಗ್ನಾಗಲಿ ನೀವು ಸುಮ್ಮನಿರಿ, ಪಂಚಾಯತಿ ಮುಂದ ನಾ ಏನ್ ಹೇಳಬೇಕೋ ಅದನ್ನ ಹೇಳ್ತೀನಿ' ಅಂತ ಅಂದಳು. 'ಪಂಚಾಯಿತಿ ಆಗಲಾರಧಂಗ ನೋಡ್ತೀನಿ ತಡಿ' ಅಂತ ಅಪ್ಪ ರಾತ್ರೋರಾತ್ರಿ ಹೋಗಿ, ಬೆಳಿಗ್ಗೆ ನಸಕಿನ್ಯಾಗ ಬಂದ. ತಡೀಲಿಕ್ಕೆ ಆಗಲಿಲ್ಲ. ಪಂಚಾಯತಿ ಕೂಡಿತು.

ಪಂಚಾಯತಿ ಮುಂದ ಫಕ್ಕೀರಮ್ಮ, ಅಪ್ಪನ ಮರ್ಯಾದಿ ಉಳಿಸೋ ಸಲುವಾಗಿ ಸುಳ್ಳು ಹೇಳುತ್ತಾಳೆ ಅಂತ ಎಲ್ಲರೂ ಭಾವಿಸಿದ್ದರು. ಅದರಂತೆ ಅವಳು ಸುಳ್ಳು ಹೇಳಿದಳು. 'ದ್ಯಾಮವ್ವನ ಆಣಿ ಮಾಡಿ ಹೇಳ್ತೀನಿ ನನಗೂ ಅವರಿಗೂ ಯಾವ ಸಂಬಂಧ ಇಲ್ಲಾ, ಆದರs' ಅಂತ ಹೇಳಿ, ಹೆರಳ ಬಿಚ್ಚಿ, ಕೂದಲಾ ಹರಡಿ ಚಂಡಿ ರೂಪ ತಾಳಿ, 'ಆದರs ಇದs ದ್ಯಾಮವ್ವನ ಆಣಿ ಮಾಡಿ ಹೇಳ್ತೀನಿ, ಇನ್ನ ಮುಂದ ಸಂಬಂಧ ಬೆಳಸ್ತೀನಿ, ಯಾವನರೇ ಸೂಳೆಮಗ ನನ್ನ ತಂಟೆಗೆ ಬಂದರೆ, ದ್ಯಾಮವ್ವನ ಆಣೆ, ಅಲ್ಲೇ ಕೊಚ್ಚಿ ಹುಟ್ಟಲಿಲ್ಲ ಅನ್ನಿಬಿಡ್ತೀನಿ...' ಅಂತ ಅಂದಳು. ಅವಳ ಆಕಾರ ನೋಡಿ ಎಲ್ಲರೂ ಹೆದರಿದರು. ಕೆಲ ಕ್ಷಣ ಮೌನ ತಾಳಿ, 'ಲೇ ಪಂಚಾಯತಿ ಮಕ್ಕಳ್ರಾ, ನಿಮ ಹೆಣ್ತೇರನ ನೋಡಿಕೊಳ್ರಲೆ, ಮೊದಲ ನಿಮ್ಮ ಮುಕಳಿ ತೊಕ್ಕೋರಿ, ಮಂದಿ

ಮುಕಳಿ ಏನ್ ಮಾಡ್ತೀರಿ' ಅಂತ ಹೇಳಿ, ನಡದೇಬಿಟ್ಟಳು. ಬಹಳ ಹೊತ್ತು ಗುಸು ಗುಸು ನಂತರ ಪಂಚರು ನಿರ್ಣಯ ಕೊಟ್ಟರು. ಫಕ್ಕೀರವ್ವನ ದ್ಯಾಮವ್ವನ ಆಣಿ ಗಮನದಲ್ಲಿಟ್ಟುಕೊಂಡು ಅಪವಾದದಿಂದ ಮುಕ್ತಗೊಳಿಸಿದರು. ರೂಢಿಯಿದ್ದ ಊರು ಬಿಡುವ ಇಲ್ಲ ಕೂಡಕಿ ಮಾಡಿಕೊಳ್ಳುವ ನಿರ್ಧಾರ ಹೇಳಲಿಲ್ಲ.

ಅವತ್ತು ಫಕ್ಕೀರಮ್ಮನ ಸುಳ್ಳಿನಿಂದ ಅಪ್ಪನ ಮಾನ, ಮರ್ಯಾದಿ ಉಳೀತು. ಬೀಗರ ಮುಂದ ನಾವು ಅಪಮಾನಕ್ಕ ಒಳಗಾಗಲಿಲ್ಲ. ನನ್ನ ಲಗ್ನ ನಡೀತು. ಅದ್ಧೂರಿಯಾಗಿ ನಡೆತು. ನಾನು ಗಂಡನ ಮನೆ ಸೇರಿದಾಗಲೆ, ಅಪ್ಪ ತೋಟದ ಮನೆ ಸೇರಿದ. ಸತ್ಯವ್ವ, ನಮ್ಮಪ್ಪಗ ಹುಟ್ಟಿದ ಫಕ್ಕೀರಮ್ಮನ ಮಗಳು' ಅಂತ ಮಾತು ನಿಲ್ಲಿಸಿದಳು. ಎದೆಯಲ್ಲಿ ಏನೋ ಢಮಾರ್ ಅಂದ್ಹಾಂಗ ಆಯಿತು. ಅವಳು ಮೌನವಾಗೇ ಇದ್ದಳು. ನಾನು ವಿಚಾರಕ್ಕೆ ಬಿದ್ದೆ. ಬಹಳ ಹೊತ್ತು ಮೌನ ತಾಳಿದೆವು. ಬಹುಶಃ ನಾನು ಮಾತನಾಡಲಿ ಅಂತ ಅವ್ವ ನಿರೀಕ್ಷಿಸಿರಬೇಕು, ಅವ್ವ ಮಾತನಾಡಲಿ ಅಂತ ನಾನು. ಇಬ್ಬರೂ ಮಾತನಾಡಲಿಲ್ಲ. ಅವ್ವ ಅಡುಗೆ ಮನೆಗೆ ಹೋಗಿ ಚಹ ಕಾಸಿ ತಂದಳು. ಹೀರಿದೆ. ಅವಳೇ ಮತ್ತೆ ಪ್ರಾರಂಭಿಸಿದಳು.

'ಹಗಲೆಲ್ಲ ಸೀಕ ಬೀಳುತ್ತಿದ್ದ ನನ್ನ ತಾಯಿ ನನ್ನ ಹಡೆದು ಮಲಿಯುಣಿಸಿರಬಹುದು, ಆದರ ಎಲ್ಲಾ ರೀತಿಯಿಂದ ಫಕ್ಕೀರಮ್ಮನ ನನಗೆ ತಾಯಿ ಆಗಿದ್ದಳು. ತಿನ್ನಿಸುವುದು, ಉಣಿಸುವುದರಿಂದ ಹಿಡಿದು ನಾನು ನೆರತಾಗ ಅರಬೀ ಇಟಕೊಳ್ಳೂದು ಕಲಿಸಿದ್ಲು. ಅಪ್ಪನ ಸೇವಾ ಮಾಡಿ ಮಾನ ಮರ್ಯಾದಿ ಉಳಿಸಿದ್ಲು, ಅಪ್ಪಗ ಹೆಣ್ತಿ ಆಗಿ ಬಾಳಿದ್ಲು. ನೀನು ಹೆಂಗ ನೋಡ್ತೀಯೋ ಗೊತ್ತಿಲ್ಲ, ನಾನ ಮಾತ್ರ.... ಆಕಿ ಋಣ ನನ್ನ ಮ್ಯಾಲೆ ಬಹಳ ಐತಿ. ನಿಮ್ಮಪ್ಪನ ಹಠಕ್ಕ, ಮಾಡಿಸಿಕೊಂಡ ಆಣೆಯಿಂದ ಆಕಿ ಋಣ ತೀರ್ಸಾಕ ಆಗಲಿಲ್ಲ. ಈಗ ತ್ರಾಸನ್ಯಾಗ ಇರೋ ಆಕೀ ಮಗಳನ್ನ, ಸತ್ಯವ್ವನ್ನ ಎತ್ತಿ ಹಿಡಿದು ಋಣ ತೀರಿಸ್ತೀನಿ' ಅಂತ ಅಂದ್ಲು.

'ನೋಡು ಬಸೂ ದಿಲ್ಲಿಗೆ ಹೋಗ್ಯಾನ ಅಂತಿ, ಅಲ್ಲಿ ಅಕೀನೂ ಒಬ್ಬಳ, ಹೋಗಿ ಕರೆದುಕೊಂಡು ಬಾ. ನಾಲ್ಕಾರು ದಿನ ಇದ್ದ ಹೋಗಲಿ' ಅಂತ ಆದೇಶಿಸಿದಳು. ಅವ್ವ ಹೇಳಿದಂತೆ ಸತ್ಯವ್ವನನ್ನು ಕರೆದುಕೊಂಡು ಬರಲು ಊರಿಗೆ ಹೋದೆ. ಸತ್ಯವ್ವ ಮನೆಯಲ್ಲಿದ್ದಳು. ಅವಳನ್ನು ನೋಡಿ 'ಸತ್ತೀ ಅಂತ' ಸಂಬೋಧಿಸಲಾಗಲಿಲ್ಲ. 'ಚಿಕ್ಕಮ್ಮ' ಅನ್ನಲು ನಾಚಿಕೆ - ಮುಜುಗರವಾಯಿತು. ಏನೂ ಹೇಳದೆ ನೇರವಾಗಿ 'ಹೆಂಗದೀ, ಬಸೂ ಬರೂತನಕ ನೀ ಒಬ್ಬಾಕಿನ ಇರಬಾರದಂತ, ಅವ್ವ ನಿನ್ನ ಕರಕೊಂಡು ಬಾ ಅಂದಾಳು. ನಡೀ ಹೋಗೋಣ' ಅಂದೆ. 'ಉಣ್ಣಾಕಿಡಲೋ ಚಹ ಕಾಸಲೋ' ಅಂತ ಕೇಳಿದಳು. 'ಚಹ ಕಾಸು, ಕುಡಿದು ಹೋಗೋಣ, ನನಗ ಕೆಲಸ ಅದಾವು' ಅಂದೆ. ಚಹ ಕಾಸಿ ತಂದಳು. ಇಬ್ಬರೂ ಕುಡಿಯುತ್ತಾ ಕುಳಿತೆವು.

ಸತ್ಯವ್ವನೇ ಮಾತನಾಡಿ 'ಗೌಡರು ತನ್ನ ಮಗಳು ಗಿರಿಜವ್ವನನ್ನು ಶೇರೇವಾಡ ಗೌಡರ ಮಗನಿಗೆ ಕೊಡುವುದಾಗಿ ಬೀಗತನ ಮಾಡಾಕಹತ್ಯಾರ. ಆದಷ್ಟು ಲಗೂ ಲಗ್ನ ಮಾಡೋ

ವಿಚಾರದಾಗ ಅದಾರ, ಬಸೂ ಆ ಹುಡುಗಿನ್ನ ಬಹಳ ಹಚ್ಚಿಕೊಂಡಾನ, ಆ ಹುಡುಗಿನೂ ಹಚ್ಚಿಕೊಂಡಾಳ. ಆಗಾಗ ಪತ್ರ ಬರೀತಾಳ, ಚಹದ ಅಂಗಡಿಗೆ ಫೋನ್ ಮಾಡ್ತಾಳ. ಲಗ್ನಗಿಗ್ನ ನಡೆದರ ಬಸೂಗ ಬಹಳ ತ್ರಾಸ ಆಕ್ಕೇತಿ. ಏನ್ ಮಾಡ್ತಾನೋ ಏನೋ ಹುಡುಗ ಬ್ಯಾರೆ, ಅವನ ಹಿಂದ ಈಗ ಮಂದಿ ಬಹಳ' ಅಂದಳು. ಕೇಳಿ ನನಗೂ ಬೇಸರವಾಯಿತು. ಅಂದು ಬಸೂ ಕಂಡ ಬಗೆ ಬೇರೆಯಿತ್ತು. ಇಂದು ಅವನು ನನಗೆ ತಮ್ಮನಾಗಿದ್ದಾನೆ. ನಾನು ನೋಡುವ ದೃಷ್ಟಿ ಬದಲಾಯಿತು. ಅವನು ಲಫಂಗನಾಗಿ ಕಾಣಲಿಲ್ಲ, ಸಾಮಾಜಿಕ ಮೌಲ್ಯಗಳಿಗೆ ತುತ್ತಾಗಿ ದುಃಖಗಳನ್ನು ಉಂಡು - ಉಣ್ಣುತ್ತಿರುವ ಒಬ್ಬ ನಿಸ್ಸಹಾಯಕನಂತೆ ಕಂಡ; ಸಮಾಜದ ಕೊಂಕು ಕೊಳಕು ಮಾತಿನಿಂದ ಬೆಂದು ಬೇಯುತ್ತಿರುವ ಒಂದು ಮಾಂಸದ ಮುದ್ದೆಯಂತೆ ಕಂಡ; ಗಂಡ ಬಿಟ್ಟ ಹರೆಯದ ತಾಯಿ ಇನ್ನೊಬ್ಬರು ಕೊಟ್ಟ ಹೊಲದಲ್ಲಿ ದುಡಿದು ಕೊಟ್ಟ ಅಂಬ್ಲಿ ಕುಡಿಯುತ್ತಿರುವ ಕಂದನಂತೆ ಕಂಡ; ತಾನು ಪ್ರೇಮಿಸಿದ ಹುಡುಗಿಯನ್ನು ದೂರ ಮಾಡುತ್ತಿರುವ ಜಾತಿಗಳ ಮೇಲೆ ಕೆಂಡ ಉಗುಳುತ್ತಿರುವ ಯುವಕನಂತೆ ಕಂಡ; ಇನ್ನೊಬ್ಬರ ಋಣದಲ್ಲಿ ಬದುಕುವುದು ಬೇಡ ಅಂತ ಹೋರಾಡುತ್ತಿರುವ ಭಂಡಕೋರನಂತೆ ಕಂಡ; ಅಪಮಾನ, ಆತ್ಮಗೌರವಗಳಿಗೆ ಎಲ್ಲ ಸಿದ್ಧತೆಗಳಿರುವ ಭಯೋತ್ಪಾದಕನಂತೆ ಕಂಡ. 'ನಾ ಗೌಡರ ಕೂಡ ಮಾತಾಡ್ತೇನಿ ನಡಿ' ಅಂತ ಹೇಳಿದೆ. ಹೊರಟು ಬಂದೆವು.

ಸತ್ಯವ್ವ ಬಂದ ನಾಲ್ಕನೇ ದಿನ ಬ್ಯಾಂಕಿನ ಮ್ಯಾನೇಜರ್ ಫೋನ್ ಮಾಡಿದರು. ಹೋದೆ. ನಾನು ಅವರ ಕೊಠಡಿಗೆ ಹೋಗುತ್ತಲೇ 'ಸಾರೀ ವಕೀಲರೆ, ನೀವು ಪ್ರಯತ್ನ ಮಾಡಿದ್ದ ಸತ್ಯವ್ವ ಎನ್ನುವವಳ ಸಾಲ, ರೀಜನಲ್ ಆಫೀಸ್‌ನವರು ಒಪ್ಪಲಿಲ್ಲ, ರಿಜೆಕ್ಟ್ ಮಾಡ್ಯಾರ. ನಾನು ಬಹಳ ಬೇಡಿಕೊಂಡೆ. ಪಾಪ ಬಡವಿ, ನಮ್ಮ ಪ್ಯಾನೆಲ್ ವಕೀಲರಿಗೆ ಬೇಕಾದವರು, ಅವರೇ ಆಕೀ ಸಾಲ ತೀರಸಲಿಕ್ಕೆ ಮುಂದ ಬಂದಾರ ಅಂದೆ. ಆದರ ಒಪ್ಪಲಿಲ್ಲ. ಅವರು ಫೀಲ್ಡ್ ಆಫೀಸರ್ ರಿಪೋರ್ಟ ಮ್ಯಾಲ ಹಂಗ ಮಾಡ್ಯಾರ. ಫೀಲ್ಡ್ ಆಫೀಸರ್ ತೋಟದಾಗ ಇದ್ದ ಮನಿ, ಅಂದಾಜು ಜಮೀನ ಕಿಮ್ಮತ್ತು, ಅಲ್ಲಲ್ಲಿ ಹಚ್ಚಿದ ತೆಂಗಿನ ಗಿಡಗಳು ನೋಡಿ ರಿಯಲಾಯಿಸೇಬಲ್ ಅಸೆಟ್ ಅಂತ ಬರದಾನ. ಸಾರೀ ರ‍್ರೀ' ಅಂತ ಹೇಳಿ, ಮತ್ತೆ ಮುಂದುವರಿದು 'ಅಂದ್ಹಂಗ ಆ ಶೆಟ್ಟಿ ಕೇಸ್‌ನ್ಯಾಗ ಮೊನ್ನೆ ನಡೆದ ಬೋರ್ಡ ಮೀಟಿಂಗ್‌ನ್ಯಾಗ, ಶೆಟ್ಟಿ ಕೊಡಬೇಕಾದ ಹದಿಮೂರು ಕೋಟಿ ಸಾಲವನ್ನ ಕೇವಲ ನಾಲ್ಕು ಕೋಟಿ ಐವತ್ತು ಲಕ್ಷಕ್ಕ settle ಮಾಡ್ಯಾರ, ಅದೂ ಎರಡು ಕಂತಿನ್ಯಾಗ ಬದ್ಮಾಶ್ ಸೂಳೆಮಕ್ಕಳು' ಅಂತ ಹೇಳಿದರು.

ಕೇಳಿ ಬಹಳ ನೊಂದೆ, ಸಿಟ್ಟು ಬಂತು. ಈ ದೇಶದಲ್ಲಿ ಬ್ಯಾಂಕಿಂಗ್ ಕಾಯಿದೆಗಳು ಹೀಗೆ ತಾರತಮ್ಯ ಮಾಡುವುದೆ ? ಸಿರಿವಂತರಿಗೊಂದು ಬಡವರಿಗೊಂದು ಇರುವುದು ನ್ಯಾಯವೇ ? ಬ್ಯಾಂಕು ಬಡವಿಯ ನೆರವಿಗೆ ಬರಲಿಲ್ಲ, ಆದರೆ ಉದ್ದೇಶಪೂರ್ವಕ ವಂಚಿಸುವವನ ನೆರವಿಗೆ ಹೋಯಿತು. ಬ್ಯಾಂಕಿಂಗೇ ಒಂದು ಮೋಸ. ಪಬ್ಲಿಕ್ ಹಣದಲ್ಲಿ ಸಿರಿವಂತರಿಗೆ ನೆರವು ಮಾಡಲು ಒಂದು ಹಣದ ಸಂಸ್ಥೆ ಅನ್ನಿಸಿತು. ವಕೀಲನಾದವನು ಹೀಗೆ ಏಕಾಏಕಿ ತೀರ್ಮಾನಕ್ಕೆ ಬರಬಾರದು

ಅಂತ ಮನಸ್ಸು ಹೇಳಿದರೂ ಹೃದಯ ಕೇಳಲಿಲ್ಲ. ಸತ್ಯ ನನ್ನೆದುರಿಗೆ ಇತ್ತು. 'ಆಯಿತ್ರಿ ನಾನು ಬರ್‍ತೀನಿ, ಸೂಟ್ ಫೈಲ್ ಮಾಡಿರಿ, ಬಡದಾಡೋಣ, ಏನ್ ಮಾಡಾಕ ಬರತೇತಿ' ಅಂತ ಅಂದು ಮ್ಯಾನೇಜರ್ ಕೊಠಡಿಯಿಂದ ಹೊರಬಂದೆ.

❖ ❖ ❖

ಸತ್ಯವ್ವ ತನ್ನ ಗಂಡನನ್ನು ಬಿಟ್ಟು ಹಾದರ ಅಪವಾದ ಹೊರೆಸಿಕೊಂಡು ಬಂದ ಬಗ್ಗೆ ವಿವರ ತಿಳಿದುಕೊಳ್ಳುವ ಕುತೂಹಲ ಬೆಳೆಯಿತು. ಒಂದು ಸಂದರ್ಭ ನೋಡಿ ಕೇಳಿಯೇ ಬಿಟ್ಟೆ. ಸತ್ಯವ್ವ ನನ್ನನ್ನು ನೋಡಿ 'ಹೋಗ್ಲಿ ಬಿಡು ಅದೆಲ್ಲ ಈಗ ಯಾಕ' ಅಂದಳು. 'ಇಲ್ಲ ನಾನು ತಿಳಕೋಬೇಕು ಸತ್ಯ ಹೇಳು, ನೀ ಯಾರ ಕೂಡ ಇದ್ದಿ, ಅವನೀಗದಾನೋ ? ಎಲ್ಲಿ ಅದಾನ ?' ಅಂತ ಪ್ರಶ್ನೆ ಹಾಕಿದೆ. ಅದಕ್ಕವಳು ನನ್ನ ಕಣ್ಣಾಲ್ಲಿ ಕಣ್ಣಿಟ್ಟು 'ಅದು ಸುಳ್ಳು, ನಾ ಯಾರ ಕೂಡ ಇದ್ದಿಲ್ಲ. ಅದು ಸುಳ್ಳು'. 'ಮತ್ತ ಖರೇ ಏನೈತಿ ಹೇಳು' ಎಂದು ಒತ್ತಾಯಿಸಿದೆ. 'ನನ್ನ ಗಂಡ ಮತ್ತು ಅವರ ಮನಿಯವರಿಗ ನಾ ನಮ್ಮಪ್ಪ ಸಿದ್ದಪ್ಪಗ ಹುಟ್ಟಿಲ್ಲ, ನಾ ನನ್ನ ಜಾತಿಯಕೀನ ಅಲ್ಲ, ಮೇಲ್ಜಾತಿ ಹಾದರಕ್ಕ ಹುಟ್ಟಿದವಳಂತ ರಂಪ ಮಾಡಿದರು. ಸುಮ್ಮನಿದ್ದೆ. ಕೇರಿ ಹಿರಿಯರು ಲಗ್ನ ಹರದರು. ಲಗ್ನ ಹರಿದ ಮ್ಯಾಲೆ ಗಂಡನ ಮನಿ ಅಥವಾ ಗಂಡನ ಊರಿನ ಋಣ ಯಾಕ ಅಂತ ಬಸೂನ ಕರಕೊಂಡು ಬಂದೆ' ಅಂತ ನೇರವಾಗಿ ಹೇಳಿದಳು. ಆದರೆ ನನಗೆ ದಿಗ್ಭ್ರಮೆಯಾಯಿತು. ನನ್ನ ಹೃದಯಕ್ಕೆ ಚೂರಿ ಇರಿದಂಗಾಯಿತು. ಸಿಟ್ಟು, ವ್ಯಥೆ, ಕನಿಕರ ಏಕಕಾಲಕ್ಕೆ ಹೊಮ್ಮಿದವು. ಮನಸ್ಸಿನಾಳದಲ್ಲಿ ದೊಡ್ಡ ಪಾಪಪ್ರಜ್ಞೆ ಟಿಸಿಲೊಡೆಯಿತು. ಅದು ಬೆಳೆದು ಬೃಹದಾಕಾರ ತಾಳಿತು. ಸತ್ಯವ್ವನ ಬಾಳುವೆ ಹಾಳು ಆಗಿದ್ದು ನಮ್ಮಿಂದಲೇ, ನನ್ನಜ್ಜನಿಂದಲೇ, ನನ್ನ ಜಾತಿಯಿಂದಲೇ, ನನ್ನಪ್ಪನ ಸಿಟ್ಟಿನಿಂದಲೇ, ನನ್ನ ಅವ್ವನ ನಿಸ್ಸಹಾಯಕತೆಯಿಂದಲೇ..... ಅಂತ ಅರಿತೆ. ಅವಳ ಹೀನಾಯ ಬದುಕಿಗೆ ನಾವೇ ಕಾರಣ. ತಿಂದುಂಡು ಗಂಡನ ಜೊತೆ ಬದುಕಬೇಕಿದ್ದ ಸತ್ಯವ್ವ, 'ಜಾತಿಗೆ ಹುಟ್ಟಿದವಳಲ್ಲ, ಗಂಡ ಬಿಟ್ಟವಳು' ಅಂತ ಅನ್ನಿಸಿಕೊಂಡು, 'ಹಾದರಕ ಹುಟ್ಟಿದವಳು' ಅಂತ ಅನ್ನಿಸಿಕೊಂಡು, ಹಡೆದ ಕೂಸನ್ನು ಸಾಕಲಿಕ್ಕೆ ದುಡಿದು ಕೂಲಿ ಮಾಡಿದ, ಅವಳ ಬದುಕಿನ ಎಲ್ಲದಕ್ಕೂ ನಾವೇ ಕಾರಣರು ಅಂತ ದೃಢವಾಯಿತು. ಎಲ್ಲವನ್ನು ಸಹಿಸಿದ ಆ ಹೆಣ್ಣಿಗೆ ಮನದಲ್ಲೇ ವಂದಿಸಿದೆ. ಜಾತಿ.... ಜಾತಿ.... ತ್ಚು..... ತ್ಚು.....

❖ ❖ ❖

ಒಂದು ವಾರದ ನಂತರ, ಸತ್ಯವ್ವ ಇಲ್ಲೇ ಇದಾಳಂತ ಬಸೂಗೆ ತಿಳಿದು, ಇಲ್ಲಿಗೇ ಫೋನ್ ಮಾಡಿದ. ತನ್ನ ರ್‍ಯಾಲಿ ಯಶಸ್ಸಿನ ಬಗ್ಗೆ ಹೇಳಿ, ಹುಡುಗರನ್ನು ಕರೆದುಕೊಂಡು ಉತ್ತರ ಭಾರತ ಪ್ರವಾಸ ಮಾಡುವುದಾಗಿಯೂ, ಇನ್ನೂ ಹದಿನೈದು ದಿವಸ ಬರಲಾಗುವುದಿಲ್ಲವೆಂದು ತಿಳಿಸಿದ.

ಅದೇ ದಿನ ಮನೆಗೆ ಗೌಡರು ಬಂದು ಸತ್ಯವ್ವ ಮತ್ತು ಅವ್ವನ ಎದುರಿನಲ್ಲೇ ತಮ್ಮ ಮಗಳು ಗಿರಿಜೆಯ ಲಗ್ನವ ಪ್ರಯತ್ನದ ಬಗ್ಗೆ ಹೇಳಿ, ನನ್ನ ಸಹಾಯ ಕೋರಿದರು. ನಾನು 'ಹಾಗೆಲ್ಲ ಆಗುವುದಿಲ್ಲ, ನೀವೇನಾದರೂ ಅವಳ ಮದುವೆ ನಡೆಸಿದರ ನಾನೇ ಪೊಲೀಸ್ ಕಂಪ್ಲೇಂಟ್ ಕೊಡ್ತೀನಿ. ಆಕಿಗೆ ಹದಿನೆಂಟು ತುಂಬುತನಕಾ ಏನೂ ನಡೆಯೂದಿಲ್ಲ ಅಂತ ಬಸೂಗ ಮಾತ ಕೊಟ್ಟೇನಿ' ಅಂತ ಹೇಳಿದೆ. ಗೌಡರು 'ನಾ ಅಂತೂ ಲಗ್ನ ಮಾಡ್ತೀನಿ ಏನ್ ಮಾಡ್ತಿರೋ ನಾನೂ ನೋಡಕೋತೀನಿ' ಅಂತ ಹೇಳಿ ಹೊರಟರು. ನಾನೂ ಸಿಟ್ಟಿಗೆದ್ದು 'ಅದ್ಹೆಂಗ ಮಾಡ್ತೀರೋ ನಾನೂ ನೋಡ್ತೇನಿ. ಗಿರಿಜಾನ ಲಗ್ನಾದರ ಅದೂ ಬಸೂನ ಕೂಡ' ಅಂತ ಅಂದೆ. ಅವರು ಹೊರಟರು.

ಅವ್ವ ಹಾಗೂ ಸತ್ಯವ್ವನ ಕಣ್ಣಲ್ಲಿ ನೀರಿದ್ದವು.

❖ ❖ ❖

ಬಸೂನ ಆಗಮನಕ್ಕೆ ಕಾಯುತ್ತಿದ್ದೇವೆ.

●

(೨೦೦೩)

# ಸಂಜೆಗಣ್ಣಾಲ್ಲಿ

● ಪ್ರಹ್ಲಾದ ಅಗಸನಕಟ್ಟೆ

ನೃಪತುಂಗ ಬೆಟ್ಟದ ಕೆಳಗೆ ಇಳುಕಲ್ಲಿನಲ್ಲಿ ಹರಿದು ಸಾಗಿರುವ ರೈಲು ಹಳಿಗುಂಟಾ ಗೂಡ್ಸೊಂದು ತನಗೆ ಅಂಟಿಸಿಕೊಂಡ ಅಸಂಖ್ಯ ಡಬ್ಬಿಗಳನ್ನು ಜಗ್ಗಲಾರದೆ ಜಗ್ಗುತ್ತಾ ಭುಸುಗುಡುತ್ತಾ ಸಾಗುತ್ತಿತ್ತು. ಹಗಲೆಲ್ಲಾ ಉರಿದ ಸೂರ್ಯ, ಸಂಜೆಗೆ ಸುಸ್ತಾಗಿ ಉಣಕಲ್ ಕೆರೆಗೆ ಧುಮುಕುವೋಪಾದಿಯಲ್ಲಿ ಕೆಂಪಗೆ ಥಕ ಥಕ ಕುಣಿಯುತ್ತಿದ್ದ. ಡಿಸೆಂಬರ್‌ನ ಚಳಿ, ಪುಷ್ಯ ಮಾಸದ ಮೈ ಕೊರೆಯುವ ಥಂಡಿ. ಇಡೀ ಪ್ರಕೃತಿ ಗರ ಬಡಿದಂತೆ ನಿಶ್ಚೇಷ್ಟಿತವಾಗಿತ್ತು.

ಆ ಬೆಟ್ಟದ ತುಟ್ಟ ತುದಿಯಲ್ಲಿ ಪುಟ್ಟ ಸರ್ಕಲ್, ಸರ್ಕಲ್ ಸುತ್ತಾ ಕೂರಲು ಹಾಕಿದ ಹಾಸುಗಲ್ಲುಗಳು. ಅದರಾಚೆ ಸಂಜೆಗೆ ಬಾಗಿಲು ತೆಗೆದ ದುಂಡನೆ ಆಕಾರದ ಹೈಹಿಲ್ ಕ್ಯಾಂಟೀನು, ನಿತ್ಯ ನೇಮದಂತೆ ಬದುಕಿಗೆ ಬೇಡವಾದವರಂತೆ ಸಂಜೆಯನ್ನು ಕಾದವರಂತೆ ಶ್ರೀಮಾನ್ ಮಾಳವದೆ, ಕುಲಕರ್ಣಿ, ಕೌಜಲಗಿ, ವಿಷ್ಣುಮೂರ್ತಿ, ಮೇಲಿನಮನಿ, ಹೊರಡಿ, ಅಗಸಿಮನಿ ಇತ್ಯಾದಿ ವೃದ್ಧರ ಕೂಟ ಹಾಸುಗಲ್ಲ ಮೇಲೆ ಕೂತು ತಮ್ಮ ಹಿಂದಣ ಬದುಕಿನ ವೈಭವದ ಸ್ಮೃತಿ ಸಡಗರದಲ್ಲಿ ಮಗ್ನವಾಗಿತ್ತು. ಇಡೀ ದಿನ ಅವರು ಮಾತಾಡಿಯೇ ಇಲ್ಲವೇನೋ ಅನ್ನುವಂತೆ ಬೆಟ್ಟ ಹತ್ತಿದ ಕೂಡಲೆ ಅವರು ಮಾತಿನ ಮಳೆಯನ್ನೆ ಹರಿಸುತ್ತಿದ್ದರು. ಅವರುಗಳಿಗೆ ಮಾತಿಗೆ ಇಂಥ ವಿಷಯವೇ ಬೇಕೆಂಬುದಿಲ್ಲ. ಮಾತುಗಳು ಭೂತಕ್ಕೋ ವರ್ತಮಾನಕ್ಕೋ ಭವಿಷ್ಯತ್‌ಗೋ ಕೆಲವೊಮ್ಮೆ ಕಾಲಾತೀತವೂ ವಿಷಯಾತೀತವೂ ಆಗಿ ಬಿಡುತ್ತಿದ್ದವು. ಕಡೆಗೆ ಆ ಮಾತುಗಳು ಮುಪ್ಪಿನ ಕಾಲದಲ್ಲಿ ಅವರುಗಳನ್ನು ಅವರಿಸಿಕೊಂಡಿರುವ ಬಿ. ಪಿ., ಡೈಯಾಬಿಟಿಸ್, ಒಬಿಸಿಟಿ, ಅರ್ಥ್ರೈಟಿಸ್, ಅಲ್ಸರ್ ಮುಂತಾದವುಗಳ ಕಡೆ ತಿರುಗುತ್ತಿತ್ತು.

ಮಾಳವದೆ ಇಂದೇಕೋ ಮ್ಲಾನವದನರಾಗಿದ್ದರು. ಪ್ರಾಯಶಃ ಅವರ ರಕ್ತದೊತ್ತಡ ಅಂಕೆ ಮೀರಿ ಹೋಗಿರಬೇಕು. ಆ ವಿಷಯವನ್ನೆ ಇಂದಿನ ಕೂಟದ ಚರ್ಚೆಯ ಮುಖ್ಯ ಅಜೆಂಡಾವನ್ನಾಗಿ ಇರಿಸಬೇಕೆಂಬುದೂ ಅವರ ಇರಾದೆಯಾಗಿತ್ತು. ಅಷ್ಟೊತ್ತಿಗೆ ಧಾರವಾಡದ ಕಡೆಯಿಂದ ಗೂಡ್ಸೊಂದು ಜುಗು, ಜುಗು, ಕೂ ಅನ್ನುತ್ತಾ ಕ್ರಾಸಿಂಗ್ ಸಲುವಾಗಿ ಉಣಕಲ್

ಸ್ಟೇಷನ್ನಿನಲ್ಲಿ ನಿಂತು ಭಯಂಕರ ಸೀಟಿ ಹೊಡೆಯಿತು. ಆ ವಿಶಲ್‌ನ ಸಪ್ಪಳದ ತೀವ್ರತೆ ಎಷ್ಟಿತ್ತೆಂದರೆ ಅದು ಬೆಟ್ಟಕ್ಕೆ ಬಡಿದು ಮತ್ತೆಲ್ಲೋ ಬಡಿದು, ಮಾರ್ದನಿಯಾಗಿ ಮೂರ್‍ನಾಲ್ಕು ಸಲ ಅನುರಣಿಸಿತು. ಮಾಳವದೆಯವರು ಆ ಶಬ್ದದ ಭಾರ ತಾಳಲಾರದೆ ಒಮ್ಮೆಗೆ ಎದೆಯ ಮೇಲೆ ಕೈಯಿಟ್ಟುಕೊಂಡರು. ಆ ಚಳಿಯಲ್ಲೂ ಅವರ ಮುಖದ ಮೇಲೆ ಬೆವರ ಹನಿಗಳು ಕಾಣಿಸಿಕೊಂಡವು.

ಮಾಳವದೆಯವರ ಸಂಕಟ ಊಹಿಸಿದ ಕುಲಕರ್ಣಿಯವರು, 'ಯಾಕ್ರಪ್ಪ, ಆರಾಮಿಲ್ಲೇನು' ಅಂದರು. ಮಾಳವದೆಯವರು ತಮ್ಮನ್ನು ತಾವು ಸುಧಾರಿಸಿಕೊಳ್ಳುತ್ತಾ 'ಇಲ್ಲಪ್ಪಾ, ನಿನ್ನೆಯಿಂದ ಒಂದಷ್ಟು ಬಿ.ಪಿ. ಜಾಸ್ತಿ ಆಧಂಗದ, .....ರಾತ್ರಿಯಿಡೀ ಕಣ್ಣಿಗೆ ನಿದ್ದಿ ಹತ್ತಲಿಲ್ಲ. ಒಂದೀಟು ಥಂಡಿ, ಜ್ವರ' ಅನ್ನುತ್ತಾ ತಮ್ಮ ತಲೆಗೆ ಹಾಕಿದ್ದ ಉಲ್ಲನ್ ಟೋಪಿಯನ್ನು ಸರಿಮಾಡಿಕೊಂಡು 'ಹಾ, ಹಾ,' ಎಂದು ನಡುಗಿದರು.

ಬಿ.ಪಿ. ಮಾತು ಕೇಳುತ್ತಲೇ ತಮ್ಮ ಸಿಹಿಮೂತ್ರದ ನೆನಪಾಗಿ ಕೌಜಲಗಿ ಅವರು 'ದವಾಖಾನೆಗೆ ಹೋಗಲಿಲ್ಲಾ, ರೆಗ್ಯುಲರ್ ಚೆಕಪ್ ಮಾಡ್ಸಿಗೋಬೇಕ್ರಿ' ಅಂದರು. ಸಿಹಿಮೂತ್ರ ರೋಗ, ಬಿ.ಪಿ.ಗಳು ಅವಳಿ-ಜವಳಿ ಇದ್ದಂತೆ, ಅವು ಸೈಲೆಂಟ್ ಕಿಲ್ಲರ್‌ಗಳಂತೆ ದೇಹದ ಅಂಗ ಅಂಗಗಳನ್ನು ಗೆದ್ದಲು ಹುಳುಗಳಂತೆ ಕೊರೆಯುತ್ತವೆಂದು ನಿನ್ನೆ ತಾನೆ ಅವರ ಫ್ಯಾಮಿಲಿ ಡಾಕ್ಟರ್ ಹೇಳಿದ್ದು ಯಾಕೋ ಈ ಕ್ಷಣ ಮತ್ತೆ ಕೌಜಲಗಿ ಅವರಿಗೆ ನೆನಪಾಗಿ ಅವರು ಮಾಳವದೆಯವರನ್ನ ತಮ್ಮ ಸಹೋದರನಂತೆ ಮರುಕದಿಂದ ನೋಡಿದರು.

ಮಾಳವದೆ ಅವರಿಗೆ ಹತ್ತಿರ ಹತ್ತಿರ ಎಂಭತ್ತು. ಕಂದಾಯ ಇಲಾಖೆಯಲ್ಲಿ ಕೆಲಸ ಮಾಡಿ ನಿವೃತ್ತಿಯಾಗಿ ಇಪ್ಪತ್ತು ವರ್ಷಗಳು ಮುಗಿದಿವೆ. ಅವರ ಮುಖದ ಚರ್ಮವೆಲ್ಲಾ ಸುಕ್ಕಾಗಿ ಗಲ್ಲದ ಕೆಳಗೆ, ಗಿಡದ ತೊಗಟೆಯಂತೆ ಜೋತು ಬಿದ್ದಿವೆ. ಮುಖದ ಮೇಲಿನ ವೃದ್ಧಾಪ್ಯದ ಗೆರೆಗಳು - ಪೆನ್ಸಿಲ್‌ನಿಂದ ಅತ್ತಿತ್ತ, ಅಡ್ಡಡ್ಡ ಬರೆದಂತೆ ಢಾಳವಾಗಿ ಮೂಡಿವೆ. ದಪ್ಪಗ್ಲಾಸಿನ ಕನ್ನಡಕದಲ್ಲಿ ಗಾಬರಿಯಾದ ಅವರ ಕಣ್ಣುಗಳಲ್ಲಿ ಬೆಳ್ಳನೆ ಪೊರೆ ಗಂಜಿಯ ಹಾಗೆ ಹರಡಿದೆ. ಬದುಕಿನುದ್ದಕ್ಕೂ ಹೋರಾಡಿದ ಅವರೀಗ ಸಾವು ಮತ್ತು ವೃದ್ಧಾಪ್ಯದ ವಿರುದ್ಧ ಸಮರ ಹೂಡಿದಂತೆ ನಿತ್ಯ ಮುಂಜಾನೆ - ಸಂಜೆ ಈ ಬೆಟ್ಟ ಹತ್ತಿ ಇಳಿದು ದೇಹವನ್ನು ಗಟ್ಟಿಗೊಳಿಸುವ ವ್ರತ ತೊಟ್ಟವರಂತೆ ವಾಕಿಂಗ್ ಮಾಡುತ್ತಾರೆ. ಈ ಬೆಟ್ಟ ಅವರಿಗೆ ಒಂದು ಭರವಸೆಯಂತೆ ಆಯುಷ್ಯವನ್ನು ವೃದ್ಧಿಸುವ ಸಂಜೀವಿನಿ ಪರ್ವತದಂತೆ ಭಾಸವಾಗುತ್ತದೆ.

'ದವಾಖಾನೆಗೆ ಹೋಗಿರಲಿಲ್ಲಾ' ಎಂಬ ಕೌಜಲಗಿ ಅವರ ಪ್ರಶ್ನೆಗೆ ಮಾಳವದೆಯವರು 'ಹೋಗಿದ್ನಪ್ಪಾ, ಅದೇ ಡಾಕ್ಟರು, ಅದೇ ಗುಳಿಗೆ, ಅದೇ ಪಥ್ಯ, ಅದೇ ಮಾತು... ಉಪ್ಪು ತಿನ್ನಬ್ಯಾಡ್ರಿ, ಎಣ್ಣೆ ತಿನ್ನಬ್ಯಾಡ್ರಿ, ಸಿಹಿ ತಿನ್ನಬ್ಯಾಡ್ರಿ... ಎಲ್ಲಾ ಬ್ಯಾಡ್ರಿ, ಬ್ಯಾಡ್ರಿ ಅಂದರೆ ಮತ್ತೇನ

ತಿನ್ನಬೇಕಪ್ಪಾ... ಮತ್ತೆ ಮನೆಯಾಗಳ ಮಂದಿ ನಮ್ಮ ಸಲುವಾಗಿ ಬ್ಯಾರೆ ಅಡುಗೆ ಮಾಡಪಕ್ಕಾಗತದs ...... ಅವರಿಗರ್ಯಾ ಎಲ್ಲಿ ಪುರಸೊತ್ತೈತೆ.... ಏನೋ ಒಂದ ಬೇಯಿಸಿ, ಗಬಗಬ ತಿಂದು ಓಡ್ತಾವ..... ಹೆಂಗೋ ಅದ್ರಾಗ ಒಂದಿಷ್ಟು ಅಡ್ಜಸ್ಟ್ ಮಾಡಿಕೊಂಡು ತಿಂದರಾತು.... ಸಣ್ಣಂಬವಾಗ ಇದ್ದಂಗ ಆಕ್ಕತಿ.....' ಅಂದ ಮಾಳವದೆಯವರು ನಿಟ್ಟುಸಿರುಬಿಟ್ಟರು.

ಅಲ್ಲಿ ಕೂತ ವೃದ್ಧರೆಲ್ಲಾ ಮಾಳವದೆ ಅವರು ಆಡಿದ ಮಾತು ತಮಗೂ ಅನ್ವಯಿಸುತ್ತಿದೆಯೇನೋ ಅನ್ನುವಂತೆ ಪರಸ್ಪರ ಮುಖ ನೋಡಿಕೊಂಡರು. ವಾತಾವರಣ ಯಾಕೋ ವಿಷಾದಕ್ಕೆ ತಿರುಗುತ್ತಿರುವುದನ್ನು ಗಮನಿಸಿದ ಮೇಲಿನಮನಿ ಅವರು -

'ವಿಷ್ಣುಮೂರ್ತಿಯವರೇ ನಿಮ್ಮ ಮಗಳ ಮ್ಯಾರೇಜ್ ಸೆಟ್ಲಾಯಿತಾ' ಅಂದರು. ವಿಷ್ಣುಮೂರ್ತಿ ಶೆಟ್ಟರ ಪೈಕಿ. ಹಾಸನದ ಕಡೆಯವರು. ಹುಬ್ಬಳ್ಳಿಯ ನೀರಿನ ಋಣವನ್ನು ಅವರ ಹಣೆಬರಹದಲ್ಲಿ ಈ ಬ್ರಹ್ಮ ಬರೆದಿದ್ದನೇನೋ.... ಯಾವ ಯಾವ ಕಡೆಯಿಂದಲೋ ಬೀಗತನ ಬೆಳೆದು ಅವರು ಹುಬ್ಬಳ್ಳಿಯ ರವಾ ಮಿಲ್ಲಿನ ಶೆಟ್ಟರೊಬ್ಬರ ಮಗಳನ್ನ ಮದುವೆಯಾಗಿ, ಮಾವನ ಪ್ರೋತ್ಸಾಹದಿಂದ ಇಲ್ಲಿಯೇ ಬಿಸಿನೆಸ್ ಮಾಡುತ್ತಾ ಉಳಿದರು. ವಿಷ್ಣುಮೂರ್ತಿ ಯಾರೊಡನೆಯೇ ಮಾತಾಡಲಿ ಅವರು ತಮ್ಮ ವೈಭವದ ಮದುವೆಯ ವರ್ಣನೆ ಮಾಡದೆ ಬಿಡುವುದಿಲ್ಲ..... ಆ ಕಾಲದಲ್ಲಿ ಆನೆಯ ಮೆಲೆ ತಮ್ಮ ಮೆರವಣಿಗೆಯಾಗಿತ್ತೆಂದೂ... ದೊಡ್ಡ ದೊಡ್ಡ ರಾಜಕಾರಣಿಗಳೂ, ಸ್ವಾಮಿಗಳೂ ಬಂದಿದ್ದರೆಂದೂ - ಆಗ ಮಾವನವರು ತಮ್ಮ ಕೈಗೆ ಬಂಗಾರದ ಕಡಗ ತೊಡಿಸಿದ್ದರೆಂದು ಅವರು ವರ್ಣಿಸುತ್ತಾರೆ.

ಆದರೆ ಈಗ ಅವರ ಕೈಯಲ್ಲಿ ಬಂಗಾರದ ಕಡಗ ಇರಲಿ, ಕಬ್ಬಿಣದ ಕಡಗವೂ ಇಲ್ಲ. ಮಾವನ ಮಿಲ್ಲು ಲಾಸಾಗಿ ಮುಳುಗಿ, ಅವರಿಗೆ ಪಾರ್ಶ್ವ ಹೊಡೆದು ತೀರಿ ಹೋಗಿ ಶೆಟ್ಟರ ಸಂಸಾರ ಅನಾಥವಾಯಿತು. ಆಗರ್ಭ ಶ್ರೀಮಂತಿಕೆಯಲ್ಲಿ ಬಾಳಿ ಬದುಕಿದ ಮನೆತನ ಅದೇ ರೀತಿ ಬಾಳಲು ಹೋಗಿ ಇದ್ದ ಬದ್ದ ಆಸ್ತಿಯೂ ಸಾಲಕ್ಕೆ ಬಿತ್ತು.

ವಿಷ್ಣುಮೂರ್ತಿಯವರ ಒಬ್ಬನೇ ಮಗ ಎತ್ತಲೋ ಓಡಿಹೋಗಿ ಕಡೆಗೆ ಬೆಂಗಳೂರಿನ ಯಾವುದೋ ಹೊಟೇಲಿನಲ್ಲಿ ಮ್ಯಾನೇಜರ್ ಆಗಿದ್ದಾನೆಂಬ ಸುದ್ದಿ ಇದೆ. ಮಗಳು ಮಾತ್ರ ಪಿ.ಯು.ಸಿ. ಓದಿ, ಆಕೆಯೂ ಬೆಂಗಳೂರಿನ ಗಾರ್ಮೆಂಟ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದಾಳೆ.

ವಿಷ್ಣುಮೂರ್ತಿ ಅವರ ಒಂದು ಕಣ್ಣಿಗೆ ಗ್ಲುಕೋಮಾ ಆಗಿ ಅದು ಕುರುಡಾಗಿದೆ. ಇನ್ನೊಂದು ಕಣ್ಣಿಗೆ ಪೊರೆ ಬಂದು.... ಅದೂ ಇನ್ನೇನು ನಂದಿ ಹೋಗುವ ಹಾಗೆ ಮಸುಕು-ಮಸುಕಾಗಿದೆ. ಕೈಯಲ್ಲಿ ಕೋಲು ಹಿಡಿದು ಹುಷಾರಿಯಿಂದ ನಡೆಯುತ್ತಾರೆ. ಅವರ ಹೆಂಡತಿಗೆ ಅರ್ಥ್ರೈಟಿಸ್... ಕಾಲಿನ ಸಂದುಗಳಲ್ಲಿ ಭಯಂಕರ ಬೇನೆ. ಬೆಟ್ಟದ ಕೆಳಗಿನ ಶಕ್ತಿ ಕಾಲನಿಯಲ್ಲಿ

ಪುಟ್ಟದೊಂದು ರೂಂ ಬಾಡಿಗೆ ಹಿಡಿದು ಸಂಸಾರ ನಡೆಸುತ್ತಾ, ಮಗಳ ತಲೆಯ ಮೇಲೆ ನಾಲ್ಕು ಅಕ್ಕಿಕಾಳು ಹಾಕುವ ಕನಸಿನಲ್ಲಿ ದಿನ ದೂಡುತ್ತಿದ್ದಾರೆ. ಅಂಗಡಿ ಮಾರಿ ಬಂದ ದುಡ್ಡನ್ನು ಬ್ಯಾಂಕಿನಲ್ಲಿಟ್ಟು ಅದರಲ್ಲಿ ಬರುವ ಬಡ್ಡಿಯಿಂದ ಹೇಗೋ ದಿನಗಳನ್ನು ದೂಡುತ್ತಿದ್ದಾರೆ.

'ಮೊನ್ನೆ ಬೆಂಗಳೂರಿನಾಗ ನಮ್ಮ ಪೈಕಿ ಮನುಷ್ಯ... ಯಾವ್ದೋ ವರ ಐತಿ ಅಂತ ಜಾತಕ ಕೇಳ್ದ.... ಕೊಟ್ಟೆ.... ಜಾತಕ ಸರಿ ಬರ್ತದೆ.... ಅಂದ. ನಾವು ಹುಡ್ಗ ಏನ್ ಮಾಡ್ತಾನೆ ಅಂದ್ವಿ..... ಬಳೆ ಪೇಟೇಲಿ ಕಿರಾಣಿ ಅಂಗಡಿ ಇಟ್ಟವನೆ ಅಂದ. ಮ್ಯಾರೇಜ್ ಬ್ರೋಕರ್ಸ್ ಮಾತು ನಂಬಕಾಗಲ್ಲ ನೋಡ್ರಿ.... ಅದ್ಕೆ ನಾವು ಬ್ಯಾರೇ ಕಡಿಂದ ವಿಚಾರಿಸಿದಾಗ ಅವನು ಆ ಅಂಗಡಿ ಓನರ್ ಅಲ್ಲ..... ಅಲ್ಲಿ ಕೆಲ್ಸ ಮಾಡೋ ಮನುಷ್ಯ ಅಂತ ಗೊತ್ತಾಯ್ತು. ಬೆಂಗಳೂರ್ನಲ್ಲಿ ಮ್ಯಾರೇಜ್ ಮಾಡಿಸ್ತೀವಿ ಅಂಬೋರ್ನ ನಂಬಕಾಗಲ್ಲ... ಏನೋ ಹೇಳ್ತಾರೆ.... ಯಾರನ್ನೋ ತೋರಿಸ್ತಾರೆ.... ಯಾರನ್ನೋ ಮದುವೆ ಮಾಡಿ ಬಿಡ್ತಾರೆ.... ತಾವು ಕಮಿಷನ್ ತಕ್ಕಂಡು ಪರಾರಿಯಾಗಿ ಬಿಡ್ತಾರೆ...' ಅಂದ ವಿಷ್ಣುಮೂರ್ತಿಯವರು ತಾವು ದೊಡ್ಡ ವಿಪತ್ತಿನಿಂದ ಪಾರಾದವರಂತೆ ನಿಟ್ಟುಸಿರುಬಿಟ್ಟು.... ಒಬ್ಬ ಬ್ರಾಹ್ಮಣ ಹುಡುಗಿಗೆ ಮತ್ಯಾರೋ ಹುಡುಗನ್ನ ಬ್ಯಾಂಕ್ ಮ್ಯಾನೇಜರ್ ಅಂತ ಹೇಳಿ ಬೇರೆ ಯಾವುದೋ ಜಾತಿ ಹುಡುಗನನ್ನ ಮದುವೆ ಮಾಡಿಸಿದ ಕತೆ ಹೇಳಿದರು.

ಮದುವೆ ವಿಷಯ ಬಂದ ಕೂಡಲೇ ಆ ವೃದ್ಧರೆಲ್ಲಾ ತಮ್ಮ ಕಾಲದ, ತಮ್ಮಗಳ ಮದುವೆಯ ವಿಷಯಗಳನ್ನು ಚರ್ಚೆಯ ಕಕ್ಷೆಗೆ ತಕ್ಕೊಂಡರು. ಒಬ್ಬರು ಆ ಕಾಲದ ಹಾಡು, ಹಸೆ, ಸಂಪ್ರದಾಯ, ಬೀಗತನದ ರೀತಿ - ರಿವಾಜುಗಳನ್ನ ವಿವರಿಸಿದರು. ಮತ್ತೊಬ್ಬರು ಆ ಕಾಲದ ಊಟದ ವಿವರಗಳನ್ನು, ಅವುಗಳನ್ನ ಮಾಡುತ್ತಿದ್ದ, ಬಡಿಸುತ್ತಿದ್ದ ವಿಧಾನವನ್ನು ಪ್ರಸ್ತಾಪಿಸಿ... ಈಗಿನ ಮದುವೆಗಳಲ್ಲಿ ನಿಂತುಣ್ಣುವ 'ಬಫೆ' ವ್ಯವಸ್ಥೆಯನ್ನು ಕಟುವಾಗಿ ಟೀಕಿಸಿದರು.

ಲಕ್ಷಗಟ್ಟಲೆ ಖರ್ಚು ಮಾಡಿ ಮಗನ ಮದುವೆ ಮಾಡಿದ ಕೌಜಲಗಿಯವರು 'ಏನು ಓದಿಸಿ, ಏನು ಮದುವೆ ಮಾಡಿದ್ರೇನು..... ಈಗಿನ ಮಕ್ಕಳು ತಂದೆ - ತಾಯಿಗಳನ್ನು ನೋಡಿಕೊಳ್ಳೋದು ಅಷ್ಟಾಗೆ ಐತೆ ಬಿಡ್ರಿ' ಅಂದರು. ಮದುವೆಯಾದ ಕೂಡ್ಲೆ ಹೆಂಡ್ತಿಯನ್ನ ಕರಕೊಂಡು ಅವ ಅಮೆರಿಕಾಕ್ಕೆ ಹಾರಿದ್ದು, ಅವರು ಅಲ್ಲಿಯೇ ಸೆಟ್ಲ ಆಗುತ್ತೇನೆ ಎಂದದ್ದು ಎಲ್ಲವೂ ಅವರಿಗೆ ನೆನಪಾಗಿ... ಮುದಿಗಾಲದಲ್ಲಿ ಇದ್ದೊಬ್ಬ ಮಗನ ಜೊತೆ ಬಾಳಲಾರದ ತಮ್ಮ ದುರಾದೃಷ್ಟಕ್ಕೆ ಮುಂದೆ ಮಾತು ಹೊರಡದೆ ಅವರ ಗಂಟಲು ಕಟ್ಟಿಕೊಂಡಿತು.

'.ಹೌದು ಬಿಡ್ರಿ, ಈಗಿನ ಕಾಲ್ಸ ಹಂಗ ಐತಿ.... ರೆಕ್ಕೆ ಬಂದ ಕೂಡಲೆ ಹಾರಿ ಹೋಗೋ ಹಕ್ಕಿಯಂಗ ಈಗಿನ ಹುಡುಗ್ರು.... ಅವಕ್ಕೆ ತಾವು ಬೆಳೆದ ಗೂಡೂ ಬೇಡ..... ಗೂಡಿನೊಳಗಿನ ಮುದಿ ಮಂದಿನೂ ಬೇಡ.... ತಾವಷ್ಟೇ ಸುಖ ಇದ್ದರ ಆತು ಅಂತಾವೆ.... ಇನ್ನು

ಮುದುಕ - ಮುದುಕಿ ಒಬ್ಬರ ಮುಖ ಮತ್ತೊಬ್ಬರು ನೋಡಕೋತ ದಿನಾ ದೂಡಬೇಕ್ರಪ್ಪಾ' ಅಂದ ಕುಲಕರ್ಣಿಯವರು, ಇನ್ನೂ ಮಾತನ್ನು ಮುಂದುವರೆಸುವ ಉಮೇದಿನಲ್ಲಿರುವಾಗಲೇ ಪೋಲಿನಮನಿಯವರಿಗೆ ಥಟ್ಟನೆ ಇತ್ತೀಚೆಗೆ ಬೆಂಗಳೂರಿನಲ್ಲಿ ಒಂಟಿಯಾಗಿ ವಾಸ ಮಾಡುತ್ತಿರುವ ವೃದ್ಧರ ಸರಣಿ ಕೊಲೆಗಳು ನೆನಪಾಗಿ,

'ಬೇಬಿ ಸಿಟ್ಟಿಂಗ್ ಅಂತ ಇರ್ತಾವಲ್ಲ.... ಹಂಗ ವೃದ್ಧರ ಸಿಟ್ಟಿಂಗ್ ಸೆಂಟರ್ ಅಂತ ಯಾರ್ಯಾರ ಯಾಕ್ ಓಪನ್ ಮಾಡವಲ್ರು' ಅಂದರು.

'ವೃದ್ಧಾಶ್ರಮಗಳೂ ಅಂತ ಅದಾವಲ್ರಿ... ಬೇಡಾದ ಮುದುಕರನ್ನ ತಗಂಬಂದು ಅಲ್ಲಿ ಹಾಕ್ತಾರಂತಲ್ಲ' ಅಂದರು ಕುಲಕರ್ಣಿ. ಇಷ್ಟು ಮಾತಾಡುವ ಹೊತ್ತಿಗೆ ಸಂಜೆಯೆಂಬುದು ಕತ್ತಲಿಗೆ ತಿರುಗಿ ಆಕಾಶದಲ್ಲಿ ಚುಕ್ಕಿಗಳು ಮೂಡತೊಡಗಿದವು. ತಣ್ಣನೆ ಗಾಳಿ ರುಂ ಎನ್ನುತ್ತಾ ನವಲಗುಂದದ ಕಡೆಯ ಬಯಲಿನಿಂದ ಬೀಸಿ ಬೆಟ್ಟಕ್ಕೆ ಅಪ್ಪಳಿಸತೊಡಗಿತು... ಉಣಕಲ್ ಸ್ಟೇಷನ್ನಿನಲ್ಲಿ ಮತ್ತಾವುದೋ ರೈಲುಗಾಡಿಗಳ ಕ್ರಾಸಿಂಗ್.... ಭಯಂಕರ ವಿಷಲ್.... ಕೂs ಎಂದು ಶುರುವಾಗಿ ಗಕ್ ಎಂದು ನಿಂತಿತು. ಬೆಟ್ಟದ ಕೆಳಗೆ ಹುಬ್ಬಳ್ಳಿ ಶಹರ ಥಂಡಿಗೆ ರಾವಿಕೊಂಡು ಮಲಗಿದಂತೆ ಪೇಲವವಾಗಿ, ಮಂಕಾಗಿ ಕಾಣುತ್ತಿತ್ತು. ಕಾಲೇಜು ಹುಡುಗರು ಯಾವುದೋ ರೇಸಿಂಗ್ ಹೊರಟವರಂತೆ ಬೆಟ್ಟದ ಅಂಕು ಡೊಂಕು ರಸ್ತೆಯಲ್ಲಿ ತಮ್ಮ ಬೈಕ್‌ಗಳನ್ನ ಹೊರಳಿಸುತ್ತಾ ಬೆಟ್ಟವೇರಿ ಬರತೊಡಗಿದರು.

'ನಿನ್ನೆ ಶೇಕರಪ್ಪನ್ನೋರು ಸತ್ತರಂತಲ್ಲ'

'ಯಾವ ಶೇಕರಪ್ಪ ?'

'ಅದೇರಿ ದಿನಾ ವಾಕಿಂಗ್ ಬರ್ತಾ ಇದ್ದರಲ್ಲ ಸ್ವಲ್ಪ ಉಬ್ಬಸ ಇತ್ತು ನೋಡಿ'

'ಅವರಿಗೆ ಬೈಪಾಸ್ ಸರ್ಜರಿಯಾಗಿತ್ತಲ್ಲ'

'ಹ್ಞಾ ಅವರಿಗೇನಾ, ನಿನ್ನೆ ರಾತ್ರಿ ಹಾರ್ಟ್ ಅಟ್ಯಾಕ್ ಆಗಿ' ವೃದ್ಧರೆಲ್ಲಾ ತಮ್ಮ ಹಾರ್ಟ್ ಗಟ್ಟಿಯಾಗಿದೆಯೇ ಎಂಬಂತೆ ತಮ್ಮ ತಮ್ಮ ಎದೆಗಳ ಮುಟ್ಟಿಕೊಂಡು 'ನಡ್ರೀ ಕತ್ಲಾತೂ...' ಅಂತ ಮೆಲ್ಲನೆ ಬೆಟ್ಟ ಇಳಿಯತೊಡಗಿದರು. ಬೆಟ್ಟದ ಕೆಳಗೆ ಮತ್ತೊಂದು ರೈಲು ನೋವಿನಿಂದ ಚೀರುವಂತೆ ಕೂಗಿತು.

೨

ಈ ಗುಡ್ಡಕ್ಕೆ ಯಾರು ನೃಪತುಂಗ ಬೆಟ್ಟ ಅಂತ ಹೆಸರಿಟ್ಟರೋ... ತನ್ನ ನೆತ್ತಿಯ ಮೇಲೆ, ವೃದ್ಧನ ಬೋಳಾದ ಮಂಡೆಯ ಮೇಲೆ ಕಾಲನ ನಿಷ್ಕರುಣೆಯ ಕತ್ತರಿಯಿಂದ ಉಳಿದ ಕೃಶ ಕೇಶಗಳಂತೆ - ನಾಲ್ಕಾರು ಗಿಡಗಳನ್ನ ಹೊಂದಿರುವ ಈ ಗುಡ್ಡ ಬಯಲ ನಡುವಣ ದಿಣ್ಣೆಯಂತೆ

ಇದೆ. ಈ ದಿಣ್ಣೆಯನ್ನು ಸಾಪು ಮಾಡಿ, ಅದರ ಮೇಲೆ ಪ್ಲಾಟ್‌ಗಳ ನಿರ್ಮಿಸಿ ಮಾರುವ ಕನಸು ಹೊಂದಿದ ರಿಯಲ್ ಎಸ್ಟೇಟ್ ಮಂದಿ ಈ ಬೆಟ್ಟಕ್ಕೆ ನಾಲ್ಕು ಕಡೆಯಿಂದ ಕತ್ತರಿ ಹಾಕುತ್ತಿದ್ದಾರೆ. ಪರಿಸರ ಪ್ರೇಮಿಗಳು ಪ್ರತಿ ಮಳೆಗಾಲದಲ್ಲಿ ನೆಡುವ ಸಸಿಗಳನ್ನ, ಬೇಸಿಗೆ ಕಾಲದಲ್ಲಿ ಕುರಿ, ಮೇಕೆಗಳು ಮೇಯ್ದು ಬೆಟ್ಟವನ್ನ ಮತ್ತಷ್ಟು ಬೋಳು ಮಾಡುತ್ತಲಿವೆ. ಸ್ವಾರ್ಥದ ಮುಂದೆ ಯಾವ ಬೆಟ್ಟ, ಯಾವ ಮರ, ಯಾವ ನದಿ, ಯಾವ ಕಡಲು, ಯಾವ ಮುಗಿಲು ?

ಇದನ್ನೆಲ್ಲ ನೋಡಿ ವಿಷಾದದಿಂದ ಕೂತ ಜೋಶಿಯವರು, ಈಚೆಗೆ ವೃದ್ಧರ ಕೂಟಕ್ಕೆ ಸೇರಿದ ಹೊಸ ಸದಸ್ಯರು. ಅವರ ಕಣ್ಣ ಮುಂದೆಯೇ ಒಂದು ಸಿಮೆಂಟ್ ಪಾತಿಯಲ್ಲಿ ಯಾರೋ ನೆಟ್ಟ ಆಲದ ಸಸಿ ಬೆಳೆಯಲಾರದೆ ಕುಸಿದಿರುವುದನ್ನು ಕಂಡು 'ಈ ಆಲದ ಗಿಡ ಬೆಳೆಯಂಗೆ ಕಾಣಲ್ಲ ಅಲ್ಲಪ್ಪಾ' ಅಂದರು.

'ಅಲ್ಲಪಾ, ಈಗ ಆಲಕ್ಕೇನು ಬೆಲೆ ಇದೆ ? ಈಗೆಲ್ಲಾ ನೀಲಗಿರಿಗೆ ಬೆಲೆ. ಎಲ್ಲಿ ನೋಡಿದರಲ್ಲಿ ಈಗ ನೀಲಗಿರಿನಾs ಇನ್ನಾ ಈ ಆಲ ಬೆಳೆಸಿ, ಅದು ಬಿಳಿಲುಗಳ ಬಿಟ್ಟು, ಅದರ ಮ್ಯಾಗೆ ಹಕ್ಕಿ ಗೂಡು ಕಟ್ಟಿ... ತಗೀರಿ, ತಗೀರಿ ಎಷ್ಟು ವರ್ಷ ಬೇಕೋ ಏನು ಕತಿ' ಅಂತ ಕುಲಕರ್ಣಿ ತಲೆ ಕೊಡವಿದರು.

'ಇವತ್ತ ಬೀಜ ಹಾಕಿದರ ನಾಳಿ ಮರ ಆಗಬೇಕು, ನಾಡಿದ್ದು ಹಣ್ಣು ಕೊಡಬೇಕು... ಇದು ಹೈಬ್ರಿಡ್ ಕಾಲ ಎಲ್ಲನೂ ಫಾಸ್ಟ್. ಈ ಹೈಬ್ರಿಡ್ ಬೆಳಿ ತಿಂದು ನಾವೂ ಹೈಬ್ರಿಡ್ ಮಂದಿ ಆಗೀವಿ. ಮೂವತ್ತು ವರ್ಷಕ್ಕ ಬಿ.ಪಿ., ಡಯಾಬಿಟಿಸ್; ಐವತ್ತಕ್ಕ ಬೈಪಾಸ್ ಸರ್ಜರಿ....; ಹಂಗೂ ಇಳಿದರ ಅರವತ್ತೇ ವರ್ಷಕ್ಕೆ ಢಂ... ನೋಡಿರೋ ಇಲ್ಲೋ, ಈಟೀಟ ಇರ್‍ತಾವ ಹುಡುಗ್ರು.... ಕಣ್ಣಿಗೆ ಚಾಳೀಸು, ಹಲ್ಲಿಗೆ ತಂತಿ, ಮೀಸೆ ಮೂಡಿರಂಗಿಲ್ಲ ಆಗಲೇ ತಲಿಯಾಗ ಬಿಳಿಕೂದ್ಲು....' ಅಂತ ಕುಲಕರ್ಣಿಯವರ ಮಾತಿಗೆ ಕೌಜಲಗಿಯವರು ಗೋಣು ತೂಗಿದರು.

ವೃದ್ಧರ ಕೂಟ ಈ ಸಂಜೆ ಒಂದಷ್ಟೇ ಹೈ ಮೂಡ್‌ನಲ್ಲಿತ್ತು. ವೃದ್ಧರ ಮೂಡ್‌ನೇ ಹಾಗೆ. ಒಮ್ಮೊಮ್ಮೆ ಕಿರಿಕಿರಿ, ಜಗಳ, ಮುನಿಸು, ಹಠ ! ಕುಲಕರ್ಣಿ, ಕೌಜಲಗಿ, ಮೇಲಿನಮನಿ, ಪಾಟೀಲ, ಜೋಶಿ ಹಾಗೂ ಒಂದೆರಡು ಹೊಸ ಮಂದಿ ಹಾಸುಗಲ್ಲುಗಳ ಮೇಲೆ ಕೂತು ಹಾಸ್ಯ ಚಟಾಕಿ ಹರಿಸಿದ್ದರು.

'ಕೌಜಲಗಿಯವರಾ.., ಹಿಂದಿನ ಚಟಾ ಏನಾರ ಬಿಟ್ಟಿರೋ... ಏನಾರ ಆಗೀಗಾ ಒಂದೀಟು ಗುಂಡ್ ಹಾಕ್ತೀರ್‍ಯೋ' ಅಂದರು ಮೇಲಿನಮನಿಯವರು, ಕೌಜಲಗಿಯವರ ಜೊತೆಗಿನ ಹಳೆಯ ಸಲುಗೆಯನ್ನ ಬಳಸಿ.

'ವಯಸ್ಸಾದ ಮ್ಯಾಲೆ ಏನೈತ್ರಿ, ಎಲ್ಲಾ ರಾಮ - ಶಿವ ಶಿವಾs.... ಮನಸ್ಸರ ಬೇಕಂತದs...... ಆದ್ರ ದೇಹ ತಾಳಕಬೇಕಲ್ಲ...... ಈಗ್ಯಾವ ಗುಂಡ್ ತರ್‍ತೀರಿ...... ನಾವಾs

ನಮಗ ಗುಂಡ್ ಹಾಕ್ಕೋ ಬೇಕರಿ....... ಬರೋ ಪೆನಶನ್‌ದಾಗ ಏನಕ್ಕಾತ್ರಿ...... ಮಗ ಉದ್ದಕ್ಕ ಓದ್ದಾ, ಈಗರ ಎಲ್ಲಿ ನೌಕರಿ ಸಿಕ್ತಾವs ವಯಸ್ಸಾತೂಂತ ಮದ್ವಿ ಮಾಡಿದ್ವಿ ಎರಡು ಮಕ್ಕಳ್ನ ಹಡೆದ. ಈಗ ಅವ್ನ ಜೊತೆಗೆ ಅವ್ನ ಮಕ್ಕಳನ್ನೂ, ಸೊಸೇನೂ ಸಾಕಾಕ್ಕತ್ತೀವಿ. ಇದೇ ಗುಂಡ ಸಾಕಾಗೇದs ಇನ್ನೆಲ್ಲಿ ಗುಂಡೂ.... ಆ ಕಾಲ ಹ್ವಾದವರ್ರಿ....' ಮೇಲಿನಮನಿ ನಿಟ್ಟುಸಿರ ಬಿಟ್ಟು ಹಿಂದಕ್ಕೆ ಒರಗಿದರು.

'ಜೋಶಿಯವರೇ, ನಿಮ್ಮ ಬಾಜೂ ಕೂತರಲ್ಲ.... ಯಾರ್ರೀ ಅವರು' ಅಂದರು ಕೌಜಲಗಿ, ಜೋಶಿಯವರ ಪಕ್ಕವೇ ಕೂತು ಅನ್ಯಮನಸ್ಕತೆಯಿಂದ ಎತ್ತೆತ್ತಲೋ ನೋಡುತ್ತಿದ್ದ ವೃದ್ಧರನ್ನು ತೋರಿ. ಎಲ್ಲರೂ ಅವರತ್ತಲೇ ತಿರುಗಿದರು. ಏನೋ ಒಂದು ವಾಸಿಯಾಗದ ಊನದಿಂದ ಬಳಲುತ್ತಿದ್ದಂತೆ ಆ ವ್ಯಕ್ತಿ ಕಂಡರು.

'ಇವ್ರಾ, ನಮ್ಮ ಮನಿ ಬಾಜೂಕ ಬಾಡಿಗೆಗೆ ಬಂದಾರಾs..... ಇವ್ರ ಮಗ ರೈಲ್ವೆನಾಗ ನೋಕರಿ ಮಾಡ್ತಾನ... ಇವ್ರು ಬ್ಯಾಂಕಿನಾಗ ಮ್ಯಾನೇಜರ್ ಇದ್ದರಂತ.... ಈಗಾರು ವರ್ಷದ ಕೆಳಗೆ ಬ್ರೈನಿನೊಳಗೆ ಟ್ಯೂಮರ್ ಆಗಿ ಆಪರೇಶನ್ ಆಯ್ತಂತ..... ಆಪರೇಶನ್ ಮಾಡುವಾಗ ಯಾವುದೋ ನರ ಡ್ಯಾಮೇಜ್ ಆಗಿ ಒಂದು ನಮೂನಿ ಅರಳು - ಮರಳು ಶುರುವಾಗಿ, ಅದನ್ನ ಡಾಕ್ಟರು ಡಿಮೆನ್ಶಿಯಾ ಅಂದರಂತೆ.... ಒಮ್ಮೊಮ್ಮೆ ಚಲೋ ಮಾತಾಡ್ತಾರ, ಒಮ್ಮೊಮ್ಮೆ ಏನೇನರ ಮಾತಾಡ್ತಾರ; ಒಮ್ಮೆ ಗುರ್ತು ಹಿಡೀತಾರ, ಒಮ್ಮೆ ಗುರ್ತು ಹಿಡಿಯಂಗಿಲ್ಲ; ಒಮ್ಮೊಮ್ಮೆ ಹಾಸಿಗೆ ಮ್ಯಾಲ ಎಲ್ಲಾ.... ಒಟ್ಟಾ ವಯಸ್ಸಾತೂ ಅಂದರ ಮನುಷ್ಯ ಸಣ್ಣ ಕೂಸಿನಂಗ. ಸಣ್ಣ ಕೂಸು ಜೋಪಾನ ಮಾಡೋಹಂಗ ಮಾಡೋ ಮಂದಿ ಮನೆಯಾಗ ಇದ್ದರ ಚಲೋ, ಇಲ್ಲಾಂದರ ಲಗೂನ ಸಾಯೋದು ಬೇಷಾs..., ಇವರಾರು ಎಂದು ಕೇಳಿದಕ್ಕೆ ಜೋಶಿ ಇಷ್ಟುದ್ದದ ವಿವರ ನೀಡಿ ಮೌನವಾದರು.

ಉಣಕಲ್ ಕ್ರಾಸ್ ದಾಟಿದ ಗೂಡ್ಸ್ ಭಯಂಕರ ಶಿಳ್ಳು ಹಾಕಿತು. ಮುಗಿಲಲ್ಲಿ ಬೆಳ್ಳಕ್ಕಿಗಳ ಸಾಲು ಚಿಂವ್ ಚಿಂವ್ ಶಬ್ದ ಮಾಡುತ್ತಾ ಸಾಗಿದವು. ಗಾಳಿ ಸಣ್ಣಗೆ ತೇಲಿ ಬಂತು ಅವ್ಯಕ್ತವಾಗಿ, ವ್ಯಕ್ತವಾಗಿ ಪ್ರಕೃತಿಯಲ್ಲಿ ಏನೋ ಚಲಿಸುತ್ತಿದೆ... ದೃಶ್ಯರೂಪ ಹಲವಕ್ಕೆ, ಅದೃಶ್ಯ ರೂಪ ಸಹಸ್ರಕ್ಕೆ. ಚಲನೆಯ ಹಿಂದೆ ಯಾವ ಉದ್ದೇಶ ಅಡಗಿದೆ, ಚಲನೆಗೆ ನೋವು ನಲಿವಿನ ಹಳಿ ಸಾಗುತ್ತಿದೆ, ಬಂಡಿ ಹೋಗುವುದಾದರೂ ಎಲ್ಲಿಗೆ, ಬಂದಿದ್ದಾರೂ ಎಲ್ಲಿಂದ.... ಅನಂತ ಪ್ರಯಾಣದ ಒಂದು ಕ್ಷಣದ ನಿಲ್ದಾಣವೇ ಈ ಬದುಕು.... !

ಜೋಶಿಯವರಿಗೆ ಗೂಡ್ಸ್ ಉಂಟುಮಾಡಿದ ಸದ್ದು ಏನೇನೋ ನೆನಪುಗಳನ್ನ, ವಿಚಾರಗಳನ್ನ ಹುಟ್ಟು ಹಾಕಿತು.

'ವಿಷ್ಣುಮೂರ್ತಿಯವರು, ಬೆಂಗ್ಳೂರಿಗೆ ಮನೆ ಶಿಫ್ಟ್ ಮಾಡಿದರಂತ ಗೊತ್ತಾಯ್ತ ಮೇಲಿನಮನಿಯವರೇ' ಅಂದರು ಕುಲಕರ್ಣಿ, ಯಾಕೋ ವಿಷ್ಣುಮೂರ್ತಿಯವರು ಒಮ್ಮೆಗೇ ನೆನಪಾಗಿ. ಮೇಲಿನಮನಿಯವರು ಕುತೂಹಲದಿಂದ 'ಯಾಕ್ರೀ' ಅಂದರು.

ಅದೇ ಅವ್ರ ಮಗಳು ಯಾವುದೋ ಕ್ರಿಶ್ಚಿಯನ್ ಹುಡುಗನ್ನ ರಿಜಿಸ್ಟರ್ಡ್ ಮದುವೆ ಆದ್ಲಂತೆ. ಅದ ಕೇಳಿ ಅವ್ರ ಮನಿಯವರಿಗೆ ಮೈಲ್ಡ್ ಹಾರ್ಟ್ ಅಟ್ಯಾಕ್ ಆಯ್ತಂತೆ. ಅವ್ರ ಮಗನಿಗೆ ವಿಷಯ ಗೊತ್ತಾಗಿ, 'ಇಲ್ಯಾಕೆ ಇರ್ತೀರಿ ಬನ್ನಿ ಬೆಂಗಳೂರಿಗೆಂತ - ಎಲ್ಲಾ ಸಾಮಾನು ಸಮೇತ ಬೆಂಗಳೂರಿಗೆ ಕರ್ಕಂಡು ಹೋದ್ನಂತೆ' ಅಂದ ಕುಲಕರ್ಣಿಯವರು.... 'ನಮ್ಮ ಕೂಟದ ಒಬ್ಬ ಖಾಯಂ ಸದಸ್ಯರು ಕಡಿಮೆಯಾಧಂಗಾತು ನೋಡ್ರಿ' ಅಂದರು.

'ಕಾಲ ಕೆಟ್ಟತ್ರಿ.... ಯಾರಿಗೆ ಯಾರೂ ಇಲ್ಲ....' ಅಂದ ಮೇಲಿನಮನಿ ಮೌನವಾದರು. ವೃದ್ಧಾಪ್ಯ, ರೋಗ, ಸಾವು, ಅರಕ್ಷತೆ, ನಿಷ್ಕಾಳಜಿ, ಮೌಲ್ಯಗಳ ಕುಸಿತ, ತಲೆಮಾರುಗಳ ಅಂತರ ಏನೆಲ್ಲವೂ ಒಮ್ಮೆಗೇ ಅವರ ಸ್ಮೃತಿಯಲ್ಲಿ ಅಲ್ಲೋಲ ಕಲ್ಲೋಲ ಉಂಟು ಮಾಡಿದವು. ಕಳೆದ ಹತ್ತು ವರ್ಷಗಳಿಂದ ಹೀಗೆ ಸಂಜೆ ಮುಂಜಾನೆ ಬೆಟ್ಟ ಹತ್ತುತ್ತಿದ್ದ ತಮ್ಮ ಒಡನಾಡಿಗಳಾಗಿದ್ದ ಹಲವರು ಹೇಗೆ ಕಾಲನ ಕೈವಶವಾದರು. ಕಾಲನ ಕರೆ ಯಾವ ಯಾವ ರೂಪದಲ್ಲಿ, ಹೇಗೆ ಎಳೆದುಕೊಂಡು ಹೋಗುತ್ತದೆ....

ಸಂಜೆಯ ಚಳಿ ಹೆಚ್ಚಾಯಿತು. ಹುಡುಗರು ಹಕ್ಕಿಯಂತೆ ಬೈಕುಗಳ ಮೇಲೆ ಹಾರಿ ಬಂದರು.... ಕೂತರು..... ಜಿಗಿದರು..... ಚಹಾ ಕುಡಿದರು...... ಸಿಗರೇಟು ಸೇದಿ ಗಾಳಿಗೆ ಹೊಗೆ ಬಿಟ್ಟರು. ವೃದ್ಧರು ವಿಷಾದದಿಂದ ಅವರತ್ತ ನೋಡಿ ಮನಸ್ಸಿನಲ್ಲಿಯೇ ಮರುಕದ ನಗೆ ನಕ್ಕರು. ಆಕಾಶದಲ್ಲಿ ಅಲ್ಲೊಂದು ಇಲ್ಲೊಂದು ಚುಕ್ಕಿಗಳು ಮೂಡಿದವು. ಉಣಕಲ್ ಕೆರೆಯ ನೀರಲ್ಲಿ ಚುಕ್ಕಿಗಳು ಮುಳಿಗೇಳುತ್ತಿದ್ದವು.

ಇನ್ನೇನು ಒಂದು ದಿನ ಮುಗಿಯಿತೆಂದು ವೃದ್ಧರು ಮೇಲೇಳಬೇಕು .. ಎದುರಿಗೆ ಬಂದ ಅಪರಿಚಿತ ವೃದ್ಧ, 'ನಿಮಗೆ ಮಾಳವದೆ ಗೊತ್ತಲ್ಲಾ' ಎಂದು ಎಲ್ಲರನ್ನೂ ಪ್ರಶ್ನಿಸಿದ.

ಎಲ್ಲರೂ ಒಮ್ಮೆಗೆ 'ಗೊತ್ತಲ್ಲ... ದಿನಾ ಸಂಜೀ ಮುಂದ ನಮ್ಮ ಕೂಡ ವಾಕಿಂಗ್ ಬರ್ತಿದ್ದರು ಚಲೋ ಮನುಷ್ಯ' ಅಂದರು.

ಆ ವೃದ್ಧ, 'ಅವ್ರು ತೀರಿಕೊಂಡರಲ್ಲ' ಅಂದು ಅವರ ಖಾಲಿಯಾದ ಜಾಗೆಗೆ ನನ್ನನ್ನು ಸೇರಿಸಿಕೊಳ್ಳಿ ಎಂಬಂತೆ ಅವರತ್ತ ನೋಡಿದ. ಅವರೆಲ್ಲಾ ಕೈಯನ್ನ ಎದೆಯ ಮೇಲಿಟ್ಟುಕೊಂಡು ಮುಗಿಲ ನೋಡಿದರು. ಉಣಕಲ್ ಸ್ಟೇಷನ್ನಿನ ಕ್ರಾಸಿಂಗ್‌ನಲ್ಲಿ ಗೂಡ್ಸೊಂದು ಭಯಂಕರವಾಗಿ ಶಿಳ್ಳು ಹಾಕಿತು.

●

(೨೦೦೨)

# ದೇವರು ಕೈಬಿಟ್ಟವನು

● ಆರೂರು ಲಕ್ಷ್ಮಣ ಶೇಟ್

'ನಂಬಿ ಕೆಟ್ಟವರಿಲ್ಲ ಶೇಷಪ್ಪಯ್ಯ.... ಮಗ ಮಂಜುನಾಥ ಕಾಗ್ದ ಬರೆದಿದ್ದಾನಲ್ಲ..... ಸೈ.... ಮತ್ತೆ...... ಹೊರಡಲಿ ನಿಮ್ಮ ಸವಾರಿ'.

ಮಯ್ಯರ ಮಾತು ಶೇಷಪ್ಪಯ್ಯನ ಬೆನ್ನು ಹುರಿಯಲ್ಲಿ ಹೊಸ ಶಕ್ತಿ ತುಂಬಿತು. ಬೆಳಗಾಂವ್ ಬಸ್ಸಿನ ಬಗ್ಗೆ ಏಜೆಂಟ್ ಕುಶಾಲ ಶೆಟ್ಟಿಯನ್ನು ವಿಚಾರಿಸತೊಡಗಿದರು.

'ಉಂಟಯ್ಯ ಬೇಕಾದಷ್ಟು ಬಸ್ಸು..... ಮಂಗಳೂರಿನಿಂದ ಉಂಟು. ಉಡುಪಿಯಿಂದ ಉಂಟು. ಧರ್ಮಸ್ಥಳ ಬಸ್ಸಿನಲ್ಲಿ ಹುಬ್ಬಳ್ಳಿಗೆ ಹೋದರೆ ಅಲ್ಲಿಂದ ಬೇರೆ ಬಸ್ಸು ಸಿಗ್ತದೆ. ಕೆಂಪು ಬಸ್ಸಿನ ಸಹವಾಸ ಬೇಡ ಅಂತಾದ್ರೆ ರಾತ್ರಿ ಲಗ್ಷುರಿ ಬಸ್‌ಗಳು ಹೊರಡುತ್ತವೆ ಮಾರಾಯ್ರೇ.... ಚಾರ್ಜು ಮಾತ್ರ ಜಾಸ್ತಿ ಅಷ್ಟೇ'. ಪಟ ಪಟ ವರದಿ ಒಪ್ಪಿಸಿದ ಶೆಟ್ಟಿಗೆ,

'ಜಬ್ಬ ನಾನು.... ಅದೂ ಅಲ್ದೆ ಮಗನ ವಿಳಾಸವೂ ಸರಿಯಾಗಿ ಗೊತ್ತಿಲ್ಲ.... ಅಷ್ಟೊಂದು ದೂರ ಸರ್ಕಾರೀ ಬಸ್ಸಿನಲ್ಲಿ ಹೋದ್ರೆ ನನ್ನ ಹಣ ಬಿದ್ದ್ ಹೋದೀತು ಶೆಟ್ರೇ.... ರಾತ್ರಿ ಬಸ್ಸೇ ಸಮ.... ಹೊರಡುವ ದಿನ ಯಾವುದು ಅಂತ ಹಿಂದಿನಿಂದ ಹೇಳ್ತೆ - ಆಗ್ದಾ ?' ಎಂದವರೇ ಮುತ್ತನ ಗೂಡಂಗಡಿಗೆ ಹೋಗಿ,

'ಗಡೇ... ಒಂದು ಬೀಡಾ ಕಟ್ಟು...... ಹೊಗೆಸೊಪ್ಪು ಬೇಡ.... ಕೇಂತಾ ?' ಎಂದು ಕ್ಲಿಪ್ಪಿಗೆ ತೂಗು ಹಾಕಿದ ವಾರಪತ್ರಿಕೆಯೊಂದನ್ನು ಎಳೆದು, 'ನಿಮ್ಮ ಭವಿಷ್ಯ'ದ 'ವೃಷಭರಾಶಿ' ಓದತೊಡಗಿದರು.

'ಮನೋದೌರ್ಬಲ್ಯ, ಆತ್ಮೀಯರ ವಿಯೋಗ, ಆದಾಯಕ್ಕಿಂತ ಅಧಿಕ ವ್ಯಯ, ಪಿತ್ತದೋಷ, ಸಂಸಾರದಲ್ಲಿ ಒಡಕು, ಜನಾಪವಾದಕ್ಕೆ ಗುರಿ, ಪ್ರಯಾಣದಲ್ಲಿ ವಿಘ್ನ...' ಇತ್ಯಾದಿ ಸಾಲುಗಳನ್ನು ಓದುತ್ತಿದ್ದಂತೆ ಮಂಡೆ ಬಿಸಿಯಾಗಿ 'ಥತ್' ಎಂದು ಪತ್ರಿಕೆಯನ್ನು ಕ್ಲಿಪ್ಪಿಗೆ ಸಿಗಿಸಿ, ಮತ್ತೊಂದನ್ನು ಎಳೆಯುತ್ತಿದ್ದಂತೆ,

'ತೆಕಣಿ ಅಯ್ಯ ಬೀಡ' ಎಂದ ಮುತ್ತ.

'ಶುಕ್ಲಪಕ್ಷದ ಚಂದ್ರನೋಪಾದಿ ನಿಮ್ಮ ಅದೃಷ್ಟ ದಿನೇ ದಿನೇ ಹಿಗ್ಗುತ್ತಾ ಬರಲಿದೆ. ವ್ಯಾಪಾರ ವ್ಯವಹಾರಗಳಿಗೆ ಕೆಲವೊಂದು ತೊಡಕು ತೊಂದರೆಗಳು ಬಂದರೂ, ಗಣನೆಗೆ ತಾರದೆ ಧೈರ್ಯದಿಂದ ಮುಂದುವರಿಯುವ ನಿಮಗೆ ವಾರಾಂತ್ಯದ ಐದು ದಿನಗಳಲ್ಲಿ ಲಾಭ, ಸುಖ, ಸಂತಸ ಲಭಿಸಲಿದೆ. ಪ್ರಯಾಣದಿಂದಾಗಿ ತಂದೆ ಮಕ್ಕಳ ಪುನರ್ಮಿಲನವಾಗಲಿದೆ. ದೇವರು ನಿಮ್ಮ ಕೈ ಬಿಡುವುದಿಲ್ಲ'.

ವೀಳ್ಯದ ರಸವನ್ನು ಪೂತ್ಕರಿಸಿ ಉಗುಳಿ,

'ಇದೀಗ ನಿಜವಾದ ಭವಿಷ್ಯ.... ಪೇಪರಂದ್ರೆ ಇದಯ್ಯ ! ತೆಕಾ ಮುತ್ತ, ಬೀಡದ್ದು ಎಂಟಾಣೆ.... ಮತ್ತೆ ಈ ಪೇಪರಿನದ್ದು ಏಳು ರೂಪಾಯಿ' ಎಂದು ಹತ್ತರ ನೋಟನ್ನು ಮಿಠಾಯಿ ಡಬ್ಬದ ಮೇಲಿಟ್ಟು, ಚಿಲ್ಲರೆ ವಾಪಸ್ಸು ಪಡೆದು, ಮನೆಯತ್ತ ದಾಪುಗಾಲು ಹಾಕತೊಡಗಿದರು.

❖ ❖ ❖

ಬಾಗಿಲಿಗೆ ಬೀಗ ಜಡಿದು, ಮೊಕ್ತೇಸರ ರಾಮಾ ಜೋಯಿಸರಿಗೆ ಕೃಷ್ಣ ಭವನದ ಹರಿಭಟ್ರಿಗೆ, ಜೀನಸಿನ ಅಂಗಡಿಯ ರಾಮಚಂದ್ರ ಪೈಗಳಿಗೆ, ಹೈಸ್ಕೂಲಿನ ಹೆಡ್ಮಾಸ್ತರ್ ಗೋಪಾಲಯ್ಯನಿಗೆ ಮತ್ತೆ ಮತ್ತೆ 'ಹೋಯ್ ಬತ್ನೇ.... ಮಂಜ್ನತನ್ನ ಮಾತಾಡ್ಸಿ ಬತ್ತೆ... ನಮ್ಮ ಭಾಗ್ಯಳನ್ನ ಕರ್ಕಂಡ ಬತ್ತೆ..... ಮನೆ ಕಡೆ ಸ್ವಲ್ಪ ನಿಗಾ ಇಟ್ಕಣಿ.....' ಎನ್ನುತ್ತಾ ಕೈಜೋಡಿಸಿ, ರಾತ್ರಿ ಬಸ್ಸು ಹೊರಡುವ ಹೊಟೇಲಿನೆದುರು ಬಂದು ನಿಂತರು ಶೇಷಪ್ಪಯ್ಯ.

ರಾತ್ರಿ ಒಂಭತ್ತೂವರೆ ಗಂಟೆಗೆ ಸರಿಯಾಗಿ ಬೆಳಗಾವಿಗೆ ಹೋಗುವ ಲಗ್ಶುರಿ ಬಸ್ ಬಂತು.

'ಜಪ್ಲೆ ಜಪ್ಲೆ ಉಣೌಸ್ ಮಳ್ಪಿನೊಕುಲು ಜಪ್ಲೆ.... ಇರ್ವ ಮಿನಿಟ್ ಟೈಮ್ ಉಂಡು' (ಇಳಿಯಿರಿ ಇಳಿಯಿರಿ ಊಟ ಮಾಡುವವರು ಇಳಿಯಿರಿ, ಇಪ್ಪತ್ತು ನಿಮಿಷ ಟೈಮ್ ಉಂಟು) ಗಟ್ಟಿಯಾಗಿ ಘೋಷಿಸಿದ ಕಂಡಕ್ಟರ್ ತುಳುವಿನಲ್ಲಿ.

ಕೆಲವರು ದಡಬಡಿಸಿ ಇಳಿದರು. ಟ್ರಂಕ್ ಎತ್ತಿಕೊಂಡು ಒಳನುಗ್ಗಿದ ಶೇಷಪ್ಪಯ್ಯ ತಮ್ಮ ಸೀಟಿಗಾಗಿ ಅಲ್ಲಿ ಇಲ್ಲಿ ಓಡಾಡಿ, ಅವರಿವರನ್ನು ವಿಚಾರಿಸಿ, ಕೊನೆಗೂ ಹುಡುಕುವಲ್ಲಿ ಯಶಸ್ವಿಯಾದರು.

ಅರ್ಧಗಂಟೆ ನಿಂತ ಬಸ್ಸು ಕೊನೆಗೂ ಹೊರಟಿತು. ಗಂಗೊಳ್ಳಿ ಸೇತುವೆ ಸಮೀಪಿಸುತ್ತಿದ್ದಂತೆ ಲೈಟುಗಳನ್ನು ಆರಿಸಲಾಯಿತು. ಕಾಲು ಚಾಚಿ ಕುಳಿತು ಸೀಟಿಗೊರಗಿದ ಶೇಷಪ್ಪಯ್ಯ ಹಾಗೇ ಕಣ್ಣು ಮುಚ್ಚಿದರು. ನೆನಪುಗಳು ಒಂದೊಂದಾಗಿ ಬಿಚ್ಚಿಕೊಳ್ಳ ತೊಡಗಿದವು :

.......ಊರಿನಲ್ಲಿ ಒಂದು ಜನ ಆಗಿ ತಾನು ಮರ್ಯಾದೆಯಿಂದ ದಿನ ದೂಡುತ್ತಾ ಬಂದಷ್ಟು; ಮಗ ಮಂಜುನಾಥನನ್ನು ಕಾಲೇಜು ಮೆಟ್ಟಿಲು ಹತ್ತಿಸಲು ಯತ್ನಿಸಿದ್ದು; ಆತ ವಿದ್ಯೆ ಕಲಿಯದೆ ಹಾಳುಗೇಡಿಯಾದದ್ದು; ನೂರೆಂಟು ಕಿತಾಪತಿಗಳಲ್ಲಿ ತೊಡಗಿದ್ದು; ಊರಿನ ಜನರ ಹರಕು ನಾಲಿಗೆಗಳಲ್ಲಿ ಅವನ ಕತೆಗಳೆಲ್ಲ ನಲಿದಾಡತೊಡಗಿದ್ದು; ಇನ್ನೀತ ಇಲ್ಲಿದ್ದರೆ ಜನರೆಲ್ಲಾ ಸೇರಿ ಬಹಿಷ್ಕಾರ ಹಾಕ್ತಾರೆ ಅಂತ ಹೆದರಿ ತಾನು ಅವನನ್ನು ಹುಬ್ಬಳ್ಳಿಯ ತನ್ನ ಗೆಳೆಯ ರಾಮರಾಯರ ಹೊಟೇಲ್ಲಿಗೆ ಕಳಿಸಿದ್ದು; ಅಲ್ಲಿ ಮೂರೇ ತಿಂಗಳು ಇದ್ದ ಆತ ರಾತ್ರೋರಾತ್ರಿ ನಾಪತ್ತೆ ಆದದ್ದು...

ಹೌದು ! ಅದೆಲ್ಲಾ ಎರಡು ವರ್ಷಗಳ ಹಿಂದಿನ ಕತೆ. ಮಗನ ಚಿಂತೆ ಹತ್ತಿಯೇ ಲಕ್ಷ್ಮೀ ಕಣ್ಣುಮುಚ್ಚಿದ್ದು. ನೆಪಕ್ಕೊಂದು ಮಂಗನ ಕಾಯಿಲೆ, ಅಷ್ಟೇ. ಮಗ ಮಂಗನಾದ ಚಿಂತೆಯಿಂದಲೇ ಅವಳು ಸತ್ತದ್ದು ಎಂಬುದು ತನಗೆ ಮತ್ತು ಮಗಳು ಭಾಗ್ಯಳಿಗೆ ಮಾತ್ರ ಗೊತ್ತು.

ತಾಯಿ ಸತ್ತಾಗಲೂ ಬಾರದ ಮಗರಾಯನ ಬಗ್ಗೆ ಜಿಗುಪ್ಸೆ ಮೂಡಿದ್ದು ಸುಳ್ಳಲ್ಲ. ಪತ್ರಿಕೆಯಲ್ಲಿ ಜಾಹೀರಾತು ಕೊಟ್ಟು, 'ತಾಯಿಯ ಉತ್ತರ ಕ್ರಿಯೆಗೆ ಎಲ್ಲಿದ್ದರೂ ಕೂಡಲೇ ಹೊರಟು ಬಾ' ಅಂತ ಬಿನ್ನವಿಸಿಕೊಂಡದ್ದು ವ್ಯರ್ಥವಾಯಿತು. ಪ್ರಕಟಣೆಗೆ ಇನ್ನೂರೈವತ್ತು ರೂಪಾಯಿ ದಂಡ, ಅಷ್ಟೇ !

ಶೇಷಪ್ಪಯ್ಯ ಪಾಣಿಪಂಚೆಯಿಂದ ಮುಖ ಮುಚ್ಚಿಕೊಂಡು ಕಣ್ಣಹನಿಗಳನ್ನು ಒರೆಸಿಕೊಂಡರೂ, ಮೈನೆರೆದ ಮಗಳೆದುರು ಗುಟ್ಟು ಬಿಡಲಿಲ್ಲ.

'ಹಾಳುಗೇಡಿ ಅಂದ..... ಶನಿ....... ದರಿದ್ರವ..... ಅಬ್ಬೆ ಬೊಜ್ಜಕ್ಕೆ ಬಾರದವ ಇದ್ದರೆಷ್ಟು, ನೆಗೆದು ಬಿದ್ದರೆಷ್ಟು ! ಇವನನ್ನು ಸೇರಿಸಿಯೇ ತಿಲೋದಕ ಬಿಡ್ತೇನೆ' ಎಂದೆಲ್ಲಾ ಹಾರಾಡಿದವರು, ಸಿಟ್ಟೆಲ್ಲ ತಣಿದ ಮೇಲೆ, ನಿಧಾನವಾಗಿ ಮಗಳ ಬಳಿ ಬಂದು,

'ಬರ್‍ತಾನೆ.... ನನ್ನ ಮಗ ಬಂದೇ ಬರ್‍ತಾನೆ.... ನಿನ್ನ ಮದುವೆಗೆ ಅಂವ ಖಂಡಿತಾ ಬರ್‍ತಾನೆ' ಎಂದು ಪಿಸುಗುಟ್ಟಿದ್ದುಂಟು. ಮಗಳ ಕಂಗಳಲ್ಲಿ ಹೊಸ ನಕ್ಷತ್ರ ಮಿಂಚುಗಳನ್ನು ಹುಡುಕಿದ್ದುಂಟು.

ದಿನಗಳು ಜಾರಿದವು.......... ತಿಂಗಳುಗಳೇ ಉರುಳಿ ಹೋದವು..... ಭಾಗ್ಯಳಿಗೆ ಗಂಡು ಸಿಗಲಿಲ್ಲ. ಮಂಜುನಾಥ ಮನೆಗೆ ಮರಳಲಿಲ್ಲ. ಹುಬ್ಬಳ್ಳಿಯಲ್ಲಿದ್ದವ ಮುಂದೆ ಹೋದದ್ದೆಲ್ಲಿಗೆ ಎಂಬುದೇ ತಿಳಿಯಲಿಲ್ಲ.

ಇದ್ದಕ್ಕಿದ್ದಂತೆ ಬಿರುಗಾಳಿ ಬೀಸಿ ಬಂತು ....... !

ಒಂದು ಮುಂಜಾನೆ ಮಂಜುನಾಥ ಮನೆಯಲ್ಲಿ ಪ್ರತ್ಯಕ್ಷ !

ಕತೆ ಹೇಳಿದ; ಬುರುಡೆ ಬಿಟ್ಟ; ಗಪ್ಲಾಸ್ ಹೊಡೆದ; ರೈಲು ಓಡಿಸಿದ; ತನ್ನ ಸಾಹಸದ ಕತೆಗಳನ್ನೆಲ್ಲಾ ಕೊರೆದ; ಯಕ್ಷಗಾನ ಕುಣಿಯುತ್ತ ಕೈ ಬಾಯಿ ಹಾರಿಸಿದ.

ಶೇಷಪ್ಪಯ್ಯನಿಗೆ ತಿಳಿದು ಬಂದದ್ದು ಇಷ್ಟು : ಮಂಜುನಾಥ ಟ್ರಾವೆಲಿಂಗ್ ಏಜೆನ್ಸಿಯೊಂದರಲ್ಲಿ ಇದ್ದಾನೆ. ಬೆಳಗಾಂವನಲ್ಲಿ ಕ್ಯಾಂಪ್. ಹೋಟೇಲೊಂದರಲ್ಲಿ ರೂಂ.

ಮೂರನೇ ದಿನಕ್ಕೇ ಮಗ ಹೊರಟು ನಿಂತಾಗ ಅಪ್ಪನಿಗೆ ಬೆರಗು. ತಾನಷ್ಟೇ ಅಲ್ಲ - ತಂಗಿಯನ್ನೂ ಕರೆದೊಯ್ಯುತ್ತಿದ್ದಾನೆ. ಅರೆ ! ಏನಿದೆಲ್ಲ ? ತಮಾಷೆಯೆ ? ಹುಡುಗಿಗೆ ಅಲ್ಲೇನು ಕೆಲಸ ? ತನಗೆ ಇಲ್ಲ್ಯಾರು ಗತಿ ?

ಅರ್ಧತಾಸಿನ ವಾಗ್ವಾದದ ನಂತರ ಅಂವ ಹೇಳಿದ್ದು :

'ನಂಬಿ ಅಪ್ಪಯ್ಯ, ಎರಡೇ ತಿಂಗಳಲ್ಲಿ ಇವಳನ್ನು ಊರಿಗೆ ಕಳಿಸ್ತೇನೆ. ಅಲ್ಲಿರುವಷ್ಟು ದಿನ ಟೈಪಿಂಗ್, ಕಂಪ್ಯೂಟರ್ ಕಲಿಸ್ತೇನೆ. ನೆಂಟಸ್ಥನದ ಬಗೆಗೂ ಪ್ರಯತ್ನ ನಡೆಸ್ತೇನೆ. ಎರಡೇ ತಿಂಗಳು ನೀವು ಸ್ವಂತಕ್ಕೆ ಅಡಿಗೆ ಉಂಡರಾಯಿತು, ಅಷ್ಟೇ.'

ಆ ಮಾತಿಗೀಗ ಆರು ತಿಂಗಳು ದಾಟಿದೆ. ಭಾಗ್ಯ ಮನೆಗೆ ಮರಳಿಲ್ಲ. ಒಂದು ಕಾರ್ಡನ್ನು ಗೀಚಿಲ್ಲ. ಈ ಪುಣ್ಯಾತ್ಮ ಒಂದೇ ಒಂದು ಪತ್ರ ಬರೆದಿದ್ದ. ಅರೆಬರೆ ವಿಳಾಸ ತಿಳಿಸಿದ್ದ. ಆ ವಿಳಾಸಕ್ಕೆ ತಾನು ಬರೆದಿದ್ದ ಪತ್ರ 'ಅಪೂರ್ಣ ವಿಳಾಸ'ದ ಶರಾದೊಂದಿಗೆ ಮರಳಿ ಬಂದಿತ್ತು.

ಆರು ತಿಂಗಳು ಕಾದ ಶೇಷಪ್ಪಯ್ಯ ಕರುಳ ಬಳ್ಳಿಗಳನ್ನು ಹುಡುಕುತ್ತಾ ಹೊರಟದ್ದಾಗಿದೆ.....

ಊರವರ ಕಣ್ಣುಗಳಲ್ಲಿ ತಾನು ಸಣ್ಣವನಾಗಬಾರದಲ್ಲ. ಸಸಾರ ಆಗಬಾರದಲ್ಲ. ಅದಕ್ಕೆಂದೇ ಕಟ್ಟುಕತೆಗಳನ್ನು ಊರ ತುಂಬಾ ಹಬ್ಬಿಸಿದ್ದಾರೆ. 'ಮಂಜುನಾಥ ಬರಲಿಕ್ಕೆ ಹೇಳಿದ್ದಾನೆ; ಮಗಳಿಗೆ ಒಳ್ಳೇ ಸಂಬಂಧ ಕೂಡಿ ಬಂದಿದೆ; ಬೆಳಗಾಂವ ಮುಂಬೈ ಎಲ್ಲಾ ತಿರುಗಾಡಿ ಬರ್ತೇನೆ.....' ಹಾಗೆ, ಹೀಗೆ ಎಂದೆಲ್ಲಾ ಬುರುಡೆ ಬಿಟ್ಟದ್ದನ್ನು ನೆನಪಿಸಿಕೊಂಡ ಶೇಷಪ್ಪಯ್ಯ ನಿಟ್ಟುಸಿರೊಂದನ್ನು ಬಿಟ್ಟು ಕಣ್ಣುಜ್ಜಿಕೊಂಡರು.

❖ ❖ ❖

'ಹಾ.... ಹಾಂ.... ಬೊಂಡ..... ಬೊಂಡ... ಸಿಹಿ ಸಿಹಿ ಎಳೆನೀರು..... ಬರೇ ಐದು ರೂಪಾಯಿ.... ಬೊಂಡ...... ಬೊಂಡ.......'

ಧಿಗ್ಗನೆ ಎಚ್ಚರಾಯಿತು. ಬಸ್ಸು ನಿಂತಿದೆ. ಪಕ್ಕದವರನ್ನು ವಿಚಾರಿಸಿದಾಗ ತಿಳಿಯಿತು - ಕುಮಟಾ ತಲುಪಿದ್ದು.

'ಟೈಮ್ ಏತ್ ಆಂಡ್ಸೇ'

ಪಕ್ಕದಲ್ಲಿ ಕುಳಿತವರನ್ನು ಸಮಯದ ಬಗ್ಗೆ ಪ್ರಶ್ನಿಸಿದರು.

'ಪದ್ರಾಡ್' (ಹನ್ನೆರಡು)

ಬೊಂಡವೊಂದನ್ನು ಕೆತ್ತಿಸಿ ಕುಡಿಯುತ್ತಿದ್ದಂತೆ ನಿದ್ರೆಯೂ ಪದ್ರಾಡ್ ! ಮತ್ತೆ ಬಸ್ಸು ಹೊರಟಿತು. ನೆನಪಿನ ಸುರುಳಿ ಬಿಚ್ಚಿಕೊಳ್ಳತೊಡಗಿತು....

ಹೆಂಡತಿ, ಮಗಳು, ಮಗ, ಅವನ ದುಶ್ಚಟಗಳು, ಎಲ್ಲ.... ಎಲ್ಲಾ.... ಕಣ್ಣೆದುರು ತೇಲುವಂತಾಗಿ, ನಾಳೆ ಅಂವ ಬೆಳಗಾಂವನಲ್ಲಿ ಸಿಗಬಹುದೆ ? ಹೋಟೇಲ್ ವಿಳಾಸ ಸರಿ ಇರಬಹುದೆ ? ಭಾಗ್ಯ ಅವನೊಂದಿಗೇ ಇರಬಹುದೆ ? ಅಥವಾ ..... ಅಥವಾ ..... ? ಭಯದಿಂದ ಕಂಪಿಸಿದ ಶೇಷಪ್ಪಯ್ಯ ಹಾಗೇ ಕಣ್ಣು ಮುಚ್ಚಿದಾಗ, ಮತ್ತೆ ನಿದ್ದೆ ನಿಧಾನ ಕವಿಯಿತು.

ಧಿಗ್ಗನೆ ಬಸ್ಸು ನಿಂತಾಗ ಹೌಹಾರಿ ಎಚ್ಚೆತ್ತರು ಶೇಷಪ್ಪಯ್ಯ.

ಅರೇ ! ಇದೇನಿದು !? ...... ಸ್ವಪ್ನವೆ ? ಸತ್ಯ ಘಟನೆಯೇ ?

ಬಸ್ಸಿನೊಳಗೆಲ್ಲಾ ಮಬ್ಬು ಬೆಳಕು. ಸಹಪ್ರಯಾಣಿಕರ ಕೀರಲು ಧ್ವನಿ. ಯಾರೋ ಭೀತಿಯಿಂದ ನಡುಗುತ್ತಿದ್ದಾರೆ. ಮತ್ಯಾರೋ ನೋವಿನಿಂದ ನರಳುತ್ತಿದ್ದಾರೆ. ಏನಿದೆಲ್ಲ ? ಅಪಘಾತವೆ ? ಬಸ್ಸು ಹಳ್ಳಕ್ಕೆ ಉರುಳಿತೆ ? ಯಾರಾದರೂ ಸತ್ತರೆ ? ನಿದ್ದೆಯ ಮಂಪರಿನಲ್ಲಿ ಚಾಲಕ ಎಲ್ಲರನ್ನು ಹೊಂಡಕ್ಕೆ ಉರುಳಿಸಿದನೆ ? ಛೇ ಛೇ ! ಒಟ್ಟು ಗುಲ್ಲು..... ದೊಂಬಿ...... ಅಳು...... ಆಕ್ರಂದನ....

ಸಾವರಿಸಿಕೊಂಡು, ನಿಧಾನ ಎದ್ದು ನಿಂತು, ಸುತ್ತಲೂ ಕಣ್ಣಾರಳಿಸಿ ನೋಡಿದ ಶೇಷಪ್ಪಯ್ಯ 'ಅಯ್ಯೋ ದೇವ್ರೇss' ಎಂದು ಚೀರಿ ಕುಸಿದು ಬಿದ್ದರು.

ಹೌದು ! ತಾನು ಪತ್ರಿಕೆಗಳಲ್ಲಷ್ಟೇ ಓದಿದ್ದು ಈಗ ಕಣ್ಣೆದುರೇ ಘಟಿಸುತ್ತಿದೆ. ನಾಲ್ಕೈದು ಮಂದಿ ದರೋಡೆಕೋರರು ಬಸ್ಸನ್ನು ತಡೆದು, ಒಳ ನುಗ್ಗಿದ್ದಾರೆ. ಪ್ರಯಾಣಿಕರನ್ನು ದೋಚುತ್ತಿದ್ದಾರೆ. ಹೆಂಗಸರ ಮೈಮೇಲಿನ ತಾಳಿ, ಓಲೆ, ಮೂಗುತಿ, ಬಳೆ, ಡಾಬುಗಳನ್ನು ಕಿತ್ತೆಳೆಯುತ್ತಿದ್ದಾರೆ. ಕಪ್ಪು ಬನಿಯನ್, ಖಾಕಿ ಚಡ್ಡಿ ಧರಿಸಿರುವ ದರೋಡೆಕೋರರು ಮುಖಕ್ಕೆ ಅಡ್ಡವಾಗಿ ಕಪ್ಪುಪಟ್ಟಿ ಸುತ್ತಿಕೊಂಡಿದ್ದಾರೆ. ಕೈಗಳಲ್ಲಿ ಪಿಸ್ತೂಲ್ ಹಿಡಿದು ಬೆದರಿಸುತ್ತಿದ್ದಾರೆ. ಓ ದೇವರೇ ! ಇದೇನು ನಿದ್ದೆಯೇ ? ಅಥವಾ ತಾನಿರುವ ಬಸ್ಸಿನಲ್ಲಿ ನಿಜಕ್ಕೂ ನಡೆಯುತ್ತಿರುವ ಧಾಂಧಲೆಯೇ ?

ಶೇಷಪ್ಪಯ್ಯ ನಡುಗಿದರು. ತನ್ನ ಟ್ರಂಕಿನ ಮೇಲೆ ಕೈಯಾಡಿಸಿದರು. ತನ್ನ ಬಳಿ ಬೆಲೆಬಾಳುವಂಥದು ಏನಿಲ್ಲ ನಿಜ. ಎರಡು ಜುಬ್ಬ, ಧೋತ್ರ, ಮೂರು ಬನಿಯನ್, ಲಕ್ಷ್ಮೀ - ಭಾಗ್ಯ - ಮಂಜುನಾಥನೊಟ್ಟಿಗೆ ನಿಂತು ತೆಗೆಸಿದ ಒಂದು ಹಳೆಯ ಫೋಟೋ, ಅವನ ಬೆಳಗಾಂವ ಹೊಟೇಲಿನ ವಿಳಾಸ ಇರುವ ಚೀಟಿ..... ಇದಿಷ್ಟೇ ಅದರಲ್ಲಿರುವುದು.

ಬಸ್ಸಿನ ಟಿಕೆಟ್ ಹಾಗೂ ಖರ್ಚಿಗೆಂದು ತಂದಿರುವ ಎಂಟನೂರು ರೂಪಾಯಿಗಳು ಅಂಡರವೇರಿನ ಜೇಬಿನಲ್ಲಿವೆ. ಈ ಖದೀಮರು ಅದನ್ನೆಲ್ಲಾದರೂ ದೋಚಿ ಬಿಟ್ರೆ ತನ್ನದು ನಾಯಿ ಪಾಡಾಗುತ್ತದೆ. ಬೆಳಗಾಂವಿನ ಗಲ್ಲಿ ಗಲ್ಲಿಗಳಲ್ಲಿ ಭಿಕ್ಷೆ ಎತ್ತಬೇಕಾಗುತ್ತದೆ. ಮಂಜುನಾಥ ಸಿಕ್ಕಿದ್ರೆ ಬಚಾವ್, ಸಿಗದಿದ್ರೆ ಧರ್ಮಸ್ಥಳದ ಮಂಜುನಾಥನೇ ಗತಿ.

'ಹುಷಾರ್ ! ಒಬ್ಬರೂ ಕಿರುಚಬಾರದು.... ನಮ್ಮನ್ನು ತಡೆಯುವ ಪ್ರಯತ್ನ ಮಾಡಬಾರದು... ಸೀಟು ಬಿಟ್ಟು ಮೇಲೇಳಬಾರದು..... ಹಾಗೇನಾದ್ರೂ ಮಾಡಿದ್ರೇ ಆದಲ್ಲಿ ಗುಂಡಿಗೆ ಬಲಿ ಆಗ್ತೀರಿ... ಹಂ.... !'

ದರೋಡೆಕೋರನೊಬ್ಬನ ಕಟ್ಟಪ್ಪಣೆ.

'ಅರೇ ಎಲ್ಲೋ ಕೇಳಿದ ಸ್ವರ.... ಪರಿಚಿತ ಕಂಠ.... ಹಂ..... ಹೌದೌದು.... ಮಂಜುನಾಥನದ್ದೇ ಕಂಠ...... ಆದರೆ... ಅಂವ.... ಇಲ್ಲಿ...... ?!

ಎದುರಿನ ಸೀಟಿನಲ್ಲಿ ಕುಳಿತ ಮಹಿಳೆಯ ಕತ್ತಿನ ಸರವನ್ನು ಎಳೆದ ರಭಸಕ್ಕೆ ಆಕೆ 'ಅಯ್ಯೋ' ಎಂದು ಚೀರಿದಳು. ಆತ ತನ್ನ ಕಪ್ಪು ಬನಿಯನ್ನಿನೊಳಗೆ ಸರವನ್ನು ತಳ್ಳುವಾಗ ಕೈ ತಗುಲಿ ಮುಖದ ಮುಸುಕು ಜಾರಿತು.

'ಹಾಂ... ! ಅಯ್ಯಯ್ಯೋ !ss ಮಂಜಪ್ಪಾss !!'

ಶೇಷಪ್ಪಯ್ಯ ಉದ್ಗಾರ ಹೊರಡಿಸಿದ್ದೇ ತಡ - ಆತನ ಕೈಯಲ್ಲಿನ ಪಿಸ್ತೂಲು ಸ್ವರ ಹೊರಡಿಸಿತು.

'ಅಯ್ಯಪ್ಪಾ... ಎಂತ ಮಾಡ್ದೆ ಮಗಾ ! .... ಅಯ್ಯೋ ಭಾಗ್ಯಾsss.....'

ಕೆಟ್ಟದಾಗಿ ಚೀರಿ ವಿಲ ವಿಲ ಒದ್ದಾಡಿದ ದೇಹ ಕೆಲವೇ ಕ್ಷಣಗಳಲ್ಲಿ ತಣ್ಣಗಾಯಿತು.... ಕೊರಡಾಯಿತು...

❖ ❖ ❖

ಇಂದಿನ ಪತ್ರಿಕೆಗಳಲ್ಲಿ ಮುಖಪುಟದಲ್ಲೇ ಪ್ರಕಟಗೊಂಡ 'ಹೆದ್ದಾರಿ ದರೋಡೆ'ಯ ಸುದ್ದಿಯನ್ನು ಇತರರೆಲ್ಲರಂತೆ ಶೇಷಪ್ಪಯ್ಯನ ಊರಿನ ಜನರು ಕೂಡ ಓದಿದ್ದಾರೆ. ಮಾಮೂಲೀ ಸುದ್ದಿ ಎಂಬಂತೆ ಓದಿ ಮರೆತಿದ್ದಾರೆ.

ಆದರೆ ಅವರಿಗೆಲ್ಲ ತಮ್ಮೂರಿನ ಆಸಾಮಿಗೆ ಒದಗಿ ಬಂದ ಆಪತ್ತಿನ ಅರಿವಿಲ್ಲ. ಶೇಷಪ್ಪಯ್ಯ ಹೆಣವಾದ ಸುದ್ದಿ ಇನ್ನೂ ಹರಡಿಲ್ಲ. ಮಗನ ಪಿಸ್ತೂಲಿಗೆ ಅಪ್ಪ ಬಲಿಯಾದ ದುರ್ಘಟನೆಯನ್ನು ತಿಳಿಸುವವರಿಲ್ಲ. ಅಪರಿಚಿತ ಶವಕ್ಕೆ ಸರಿಯಾದ ಅಂತಿಮ ಸಂಸ್ಕಾರ ಇಲ್ಲ.

ಅಲ್ಲಿ......

ದರೋಡೆಯ ವಸ್ತುಗಳನ್ನು ಹಂಚಿಕೊಳ್ಳುವುದರಲ್ಲೇ ಮೈಮರೆತಿರುವ ಮಂಜುನಾಥ ಆ ಹಳೆಯ ಟ್ರಂಕಿನತ್ತ ಕಣ್ಣು ಹಾಯಿಸಿಲ್ಲ. ಮೂಲೆಯಲ್ಲೆಲ್ಲೋ ಅಡಗಿ ಕುಳಿತಿರುವ 'ಫ್ಯಾಮಿಲಿ ಫೋಟೋ' ತನ್ನನ್ನು ಅಣಕಿಸುತ್ತಿರುವ ಬಗೆಗೆ ಆತನಿಗೆ ತಿಳಿದಿಲ್ಲ.

ಮುಂಬೈನಲ್ಲಿ ಕಾಮಾಟಿಪುರದ ವೇಶ್ಯಾವಾಟಿಕೆಯಲ್ಲಿ ಕೊಳೆಯುತ್ತಿರುವ ಭಾಗ್ಯಳಿಗೆ ಅಪ್ಪನ ಸಾವಿನ ಸುದ್ದಿ, ಅಣ್ಣನ ಕೆಟ್ಟ ದಂಧೆ ತಿಳಿಯುವಂತೆಯೇ ಇಲ್ಲ. 'ಹೆದ್ದಾರಿ ದರೋಡೆ'ಯಂತಹ ಮಾಮೂಲೀ ಸುದ್ದಿಗಳ ಬಗೆಗೆ ಅವಳಲ್ಲಿ ಯಾವುದೇ ಆಸಕ್ತಿ ಉಳಿದಿಲ್ಲ. 'ಹೆದ್ದಾರಿ'ಯಿಂದ ಅಡ್ಡಹಾದಿ ಹಿಡಿದ ತನ್ನ ವಿಚಿತ್ರ ಬದುಕಿನಲ್ಲಿ, ಅಮೂಲ್ಯವೆಂದು ಕಾಯ್ದುಕೊಂಡು ಬಂದದ್ದೆಲ್ಲ 'ದರೋಡೆ'ಯಾದ ಬಗ್ಗೆ ಅಳುವಷ್ಟು ಶಕ್ತಿಯೂ ಈಗಿಲ್ಲ.

●

(೨೦೦೩)

# ಪಾದರಕ್ಷೆ ಮಾತನಾಡಿತು

● ಸುದರ್ಶನ ದೇಸಾಯಿ

ಮೇಜರ್ ಹೇಮಂತ ರಿಸೀವರ್ ಎತ್ತಿದ.

ಆ ಕಡೆಯಿಂದ ಇನ್‌ಸ್ಪೆಕ್ಟರ್ ಪ್ರತಾಪ್ ಮಾತಾಡುತ್ತಿದ್ದರು.

'ಹಲೋ, ಮೇಜರ್ ?'

'ಹೌದು..... ನಾನೇ, ಹೇಳಿ ಪ್ರತಾಪ್.'

'ಹೇಮಂತ ನಿಮ್ಮಿಂದ ಸಹಾಯವಾಗಬೇಕಿತ್ತು.'

'ಹೇಳಿ ಪ್ರತಾಪ್. ನಾನಿರುವದೇ ನಿಮಗಾಗಿ ಅಲ್ಲವೇ ?'

ನಗುತ್ತ ಹೇಮಂತ ನುಡಿದಾಗ ತಡೆಯಲಿಕ್ಕಾಗದೇ ಪ್ರತಾಪನೂ ನಕ್ಕು ಉತ್ತರಿಸಿದ.

'ಚಿತ್ರನಟಿ ಅಂಕಿತಾಳ ಹೆಸರು ಕೇಳಿದ್ದೀರಲ್ಲ?'

'ಹಾಂ ಚೆನ್ನಾಗಿ ಕೇಳಿದ್ದೇನೆ.'

'ಅವಳ ಕೊಲೆಯಾಗಿದೆ. ಅವಳ ಮನೆಯಲ್ಲಿಯೇ.'

'ನೀವು ಅಲ್ಲೇ ಇರಿ. ನಾನರ್ಧಗಂಟೆಯಲ್ಲಿ ಬರುತ್ತೇನೆ. ಹಾಂ. ಅಂದ ಹಾಗೆ... ನಾನು ಬರುವವರೆಗೂ ಒಳಗಡೆ ಯಾರನ್ನೂ ಬಿಡಬೇಡಿ. ಫುಟ್‌ಪ್ರಿಂಟ್ಸ್... ಫಿಂಗರ್ ಪ್ರಿಂಟ್ಸ್ ಹಾಳಾಗಬಹುದು.'

'ಸರಿ. ಹಾಗೇ ಆಗಲಿ.'

ಹೇಮಂತ ರಿಸೀವರ್ ಯಥಾಸ್ಥಾನದಲ್ಲಿರಿಸಿದ. ಒಂದೆರಡು ನಿಮಿಷ ಅಂಕಿತಾಳ ಬಗ್ಗೆ ಯೋಚಿಸತೊಡಗಿದ. ಎರಡು ಮೂರು ವರ್ಷಗಳಲ್ಲಿ 'ಸ್ಪುಟ್ನಿಕ್' ವೇಗದಲ್ಲಿ ಮೇಲೆ ಬಂದಾಕೆ ಅವಳು. ಅವಳ ಅಭಿನಯದ ಮೂರು - ನಾಲ್ಕು ಚಿತ್ರಗಳು ಶತದಿನೋತ್ಸವ ಕಂಡಿದ್ದವು. ಹೀಗಾಗಿ ನಿರ್ಮಾಪಕರು, ನಿರ್ದೇಶಕರು ಅವಳ ದುಂಬಾಲು ಬಿದ್ದಿದ್ದರು. ಆಕೆ ಬೇಡಿದಷ್ಟು ಹಣ ನೀಡಲು ಮುಂದಾದರು. ಇಂಥ ಸುವರ್ಣಾವಕಾಶ ಕಳೆದುಕೊಳ್ಳಲು ಸಿದ್ಧವಿರದ ಅಂಕಿತಾ ಎರಡೆರಡು ಶಿಫ್ಟ್‌ಗಳಲ್ಲಿ ಕೆಲಸ ಮಾಡತೊಡಗಿದಳು. ಇದೇ ಸಮಯದಲ್ಲಿ ಚಿತ್ರನಟ

ಮನೀಶ್‌ನೊಂದಿಗೆ ಅವಳ ಮದುವೆಯಾಯಿತು. ಮನೀಶ್ ಸಹ ಅವಳಂತೇ ಖ್ಯಾತನಟ. ಆದರೆ ಸಧ್ಯ ಅವನ ಕೈಯಲ್ಲಿ ಒಂದೆರಡು ಚಿತ್ರಗಳು ಮಾತ್ರ ಇದ್ದವು. ಇವರಿಬ್ಬರ ಮದುವೆ ಕೆಲಕಾಲ ಚರ್ಚಿತ ವಿಷಯವಾಯಿತು. ಪತ್ರಿಕೆಗಳಿಗೆ ಸುಗ್ರಾಸ ಭೋಜನವೂ ಆಯಿತು. ಮುಂದದು ತಣ್ಣಗಾಯಿತು. ಮತ್ತದಕ್ಕೆ ಜೀವ ಬಂದದ್ದು ಅವರಿಬ್ಬರೂ ಬೇರೆ ಬೇರೆಯಾಗಿ ವಾಸಿಸಲು ಆರಂಭವಾದಾಗ. ಮತ್ತೆ ಸುದ್ದಿ. ರಂಜಿತ.... ಅತಿರಂಜಿತ... ಬಣ್ಣ ಬಣ್ಣದ ಗಾಸಿಪ್‌ಗಳು ಹುಟ್ಟಿಕೊಂಡವು. ಕೆಲ ದಿನಗಳ ನಂತರ ತಣ್ಣಗಾದವು.

ಇದೆಲ್ಲಾ ಆಗಿ ವರ್ಷಾರು ತಿಂಗಳು ಕಳೆದಿರಬಹುದು.

ಇಂದು ಈ ಸುದ್ದಿ.

ಅಂಕಿತಾಳ ಕೊಲೆ....

ಯಾರು ಮಾಡಿರಬಹುದು ? ಏಕೆ ಮಾಡಿರಬಹುದು... ? ಚಟಕ್ಕನೆ ಮೇಲೆದ್ದ ಹೇಮಂತ.

ಸಿದ್ಧವಾಗಿ ಹೊರ ಬಂದಾಗ ಇಪ್ಪತ್ತು ನಿಮಿಷಗಳು ಉರುಳಿದ್ದವು. ಮಾತುಕೊಟ್ಟಂತೆ ಅರ್ಧ ಗಂಟೆಗೆ ಆತ ಪ್ರತಾಪನ ಮುಂದಿದ್ದ.

ಅಂಕಿತಾಳ ಕೊಲೆ ಸಮಾಚಾರ ಆಗಲೇ ಕಾಳ್ಗಿಚ್ಚಿನಂತೆ ಸುತ್ತಲೂ ಪಸರಿಸಿದ್ದರಿಂದ ಸಾವಿರಾರು ಜನರು ಸುತ್ತಲೂ ಸೇರಿದ್ದರು. ತಲೆಗೊಂದರಂತೆ ಮಾತನಾಡುತ್ತಿದ್ದ ಅವರಲ್ಲಿ ಕೆಲವರು ಅಳುತ್ತಿರುವುದನ್ನೂ ಹೇಮಂತ ಗಮನಿಸಿದ.

ಗುಂಪುಗೂಡಿದ ಜನರನ್ನು ಚದುರಿಸಲು ಪೊಲೀಸರು ತುಂಬಾ ಪರಿಶ್ರಮ ತೆಗೆದು ಕೊಳ್ಳುತ್ತಿದ್ದರು. ಪ್ರತಾಪ್ ಗೇಟಿಗೆ ನಿಂತಿದ್ದ. ಆತ ಚಿಂತಾಕ್ರಾಂತನಾದಂತೆ ಕಂಡ. ತನ್ನ 'ಎಸ್ಟೀಮನ್ನು' ಪೊಲೀಸ್ ಜೀಪ್ ಹಿಂದೆಯೇ ಪಾರ್ಕ್ ಮಾಡಿ ಕೆಳಗಿಳಿದ ಹೇಮಂತ ಅವನನ್ನು ಸಮೀಪಿಸಿದ ಇಬ್ಬರೂ ಕೂಡಿ ಒಳ ನಡೆದರು..... ಮೆಟ್ಟಲು ಹತ್ತಿ 'ರಜತ ಮಹಲ್' ಪ್ರವೇಶಿಸಿದರು.

ರಜತ ಮಹಲ್ ...

ಕೇವಲ ಎರಡು ವರ್ಷಗಳ ಹಿಂದೆ ನಿರ್ಮಾಣಗೊಂಡ ಅಂಕಿತಾಳ 'ಸ್ವಪ್ನಸೌಧ'. ಬಿಳಿ ಅಮೃತಶಿಲೆಯಲ್ಲಿ ರೂಪುಗೊಂಡದ್ದು. ಅದಕ್ಕಾಗಿ ಆಕೆ ನೀರಿನಂತೆ ಹಣ ವೆಚ್ಚ ಮಾಡಿದ್ದಳು. ಆ ವಿಷಯಕ್ಕೂ ರೆಕ್ಕೆ, ಪುಕ್ಕ, ಕಾಲು ಹುಟ್ಟಿಕೊಂಡು ಸುತ್ತಲೂ ಹಾರಾಡಿತು, ಇಪ್ಪತ್ತು ಕೋಟಿ ವೆಚ್ಚವಾಗಿದೆ. ಮೂವತ್ತೈದು, ಮೂವತ್ತೈದಲ್ಲ ಕೇವಲ ಇಪ್ಪತ್ತೆಂಟು. ಅದೇನೇ ಇರಲಿ, ಸುಂದರವಾದ ಮನಮೋಹಕ ರಜತಮಹಲಿಗಂತೂ ಇಪ್ಪತ್ತು ಕೋಟಿ ಖರ್ಚಾಗಿರಲೇ ಬೇಕು ಎಂದು ಕೆಲವರು ಖಚಿತವಾದ ಅಭಿಪ್ರಾಯ ವ್ಯಕ್ತಪಡಿಸಿದರು.

'ಅಂಕಿತಾಳ ವಾರಸುದಾರರು ಯಾರು ?'

ನಡೆಯುತ್ತ ಪ್ರಶ್ನಿಸಿದ ಹೇಮಂತ.

'ಅವಳ ಪತಿ ಮನೀಶ್. ಅವರದಿನ್ನೂ ವಿವಾಹ ವಿಚ್ಛೇದನವಾಗಿರಲಿಲ್ಲವಲ್ಲ'

'ನಿನ್ನೆ ರಾತ್ರಿ ಅವನೆಲ್ಲಿದ್ದ ಎಂದು ವಿಚಾರಿಸಿದ್ದೀರಾ ?'

'ಶಾಡೋಗಳನ್ನು ಬಿಟ್ಟಿದ್ದೇನೆ. ವಿಷಯ ತಿಳಿದಿಲ್ಲ'

'ಕೊಲೆಯಾದ ವಿಷಯ ಹೇಗೆ ತಿಳಿಯಿತು ?'

'ಅಂಕಿತಾಳ ಸೆಕ್ರೆಟರಿ ರಂಜನಾಳಿಂದ'

'ಓಹ್, ಅವಳ ಜೊತೆಗೇ ಮನೀಶ್‌ನ "ರೋಮ್ಯಾನ್ಸ್" ಇದೆಯೆಂದು ಪುಕಾರು ಎದ್ದಿತ್ತಲ್ಲ ?'

'ಕೇವಲ ಪುಕಾರಲ್ಲ... ಪೊಲೀಸ್ ರಿಕಾರ್ಡ್ ಪ್ರಕಾರ ಸತ್ಯ ಸಂಗತಿ. ಅದೇ ದಿನನಿತ್ಯ ರಾತ್ರಿ ಅವನ ಬಂಗಲೆಯಲ್ಲೇ ಕಂಡುಬರುತ್ತಾಳೆ.'

ಅಲ್ಲಿಗೆ ಮಾತು ಮುಗಿಯಿತು.

ಅವರು ಮಧ್ಯೆ ಎದುರು ಬಂದವರಂತೆ ಸಂಜೆ ನಮಸ್ಕಾರ ಹೇಳುತ್ತಾ ಅಂಕಿತಾಳ ಬೆಡ್‌ರೂಮ್ ಬಳಿ ಬಂದಿದ್ದರು. ಅಲ್ಲಿಯೂ ಹತ್ತೆಂಟು ಜನರು ಕಾಯುತ್ತಿದ್ದರು. ಅವರೆಲ್ಲ ಖಾಸ್ ಜನರು.

ಅವರ ಪರಿಚಯ ಮಾಡಿಕೊಟ್ಟ ಪ್ರತಾಪ್.

'ಇವರು ನಿರ್ಮಾಪಕ ಮದನಮೋಹನರು'

'ಇವರು ಕ್ಯಾಮರಾಮನ್ ಪ್ರತಾಪ್'

ನಿರ್ಮಾಪಕ ವಲ್ಲಭಭಾಯಿ.... ಕುಲಕರ್ಣಿ..... ಇತ್ಯಾದಿ ಇತ್ಯಾದಿ.

ಕೊನೆಗೆ ಬಂದದ್ದು... ರಂಜನಾಳ ಸರದಿ. ಆಕೆ ಸೋಫಾದಲ್ಲಿ ಮುದ್ದೆಯಾಗಿ ಕುಳಿತಿದ್ದಳು. ಮುಖ ಬಾಡಿತ್ತು. ಕಣ್ಣುಗಳು ಕಾಂತಿ ಕಳೆದುಕೊಂಡಿದ್ದವು. ಕಣ್ಣುಗಳಿಂದ ಹರಿದ ಅಶ್ರುಗಳು ಮುಖದ ಮೇಕಪ್ ಹಾಳುಗೆಡವಿತ್ತು. ಆಕೆ ಎದ್ದು ನಿಂತು ಇಬ್ಬರಿಗೂ ನಮಸ್ಕರಿಸಿದಳು.. ಮತ್ತೆ ಕಣ್ಣುಗಳಲ್ಲಿ ನೀರು ಚಿಮ್ಮಿತು.

'ಮೇಜರ್ ಈಕೆ... ರಂಜನ...'

'ಸರ್, ನನ್ನ ನಂಬಿ, ನಾನವರ ಕೊಲೆ ಮಾಡಿಲ್ಲ. ಮಾಡಿಸಿಯೂ ಇಲ್ಲ. ನನಗೊಂದೂ ವಿಷಯ ತಿಳಿಯದು.'

'ನಾನಂತೂ ಹಾಗಂದಿಲ್ಲ... ನಿಶ್ಚಿಂತೆಯಿಂದಿರಿ'

ನಂಬಲಿಕ್ಕಾಗದೇ ಆಕೆ ಹೇಮಂತನನ್ನು ನೋಡಿದಳು. ಅವನ ಕಣ್ಣುಗಳಲ್ಲಿ ಆಶ್ವಾಸನೆಯಿತ್ತು.

'ಇದೇ ಬೆಡ್‌ರೂಮ್ ಮೇಜರ್'

ಪ್ರತಾಪ್‌ನೊಂದಿಗೆ ಒಳಗಡಿಯಿಟ್ಟ ಹೇಮಂತ.

ಇಂದ್ರನಗರಿಯನ್ನು ಮೀರಿಸುವಷ್ಟು ವೈಭವಪೂರಿತವಾಗಿತ್ತು ಅಂಕಿತಾಳ ಶಯನ ಕೊಠಡಿ. ಅರವತ್ತಡಿ ಉದ್ದ ನಲವತ್ತಡಿ ಅಗಲದ ವಿಸ್ತೀರ್ಣದಲ್ಲಿ ಇರಬಹುದಾದ ಆ ಕೊಠಡಿಯಲ್ಲಿ ಸಂಪೂರ್ಣ ಜಗತ್ತೇ ಮುದ್ದೆಯಾಗಿ ಬಿದ್ದಿತ್ತು. ಆದರೆ ಆ ಜಗತ್ತಿನ ರಾಣಿ ಮಾತ್ರ ಚಿರನಿದ್ರೆಯಲ್ಲಿ ಮಲಗಿಕೊಂಡು, ಸತ್ತ ಮೇಲೆ ಎಲ್ಲವೂ ಶೂನ್ಯ. ಯಾವುದೂ ನಿಮ್ಮ ಹಿಂದೆ ಬರಲಾರದು ಎಂಬ ಚಿರಸತ್ಯವನ್ನು ಸಾರಿ ಹೇಳುತ್ತಿದ್ದಳು. ಅದರ ಕಲ್ಪನೆ ಯಾರಿಗೂ ಇದ್ದಂತಿರಲಿಲ್ಲ.

ಬಾಗಿಲ ಬಳಿಯೇ ನಿಂತುಕೊಂಡ ಹೇಮಂತ.

ಪ್ರತಾಪ್ ಭದ್ರವಾಗಿ ಬಾಗಿಲು ಮುಚ್ಚಿ ಅವನೆಡೆಗೆ ಬಂದ. ಇಬ್ಬರೂ ಸೂಕ್ಷ್ಮವಾಗಿ ನಿರೀಕ್ಷಿಸತೊಡಗಿದರು. ಕೊಠಡಿಯಲ್ಲಿ ಚಿಕ್ಕ ಕಾಳಗ ನಡೆದದ್ದು ಸ್ಪಷ್ಟವಾಗಿ ಗೋಚರವಾಗುತ್ತಿತ್ತು. ಟೀಪಾಯ್, ಕುರ್ಚಿ ಮುರಿದು ಬಿದ್ದಿದ್ದವು. ಅತ್ಯಂತ ಸುಂದರವಾಗಿದ್ದ ನಿಲುವುಗನ್ನಡಿ ಒಡೆದು ಚೂರುಚೂರಾಗಿತ್ತು. ಫ್ಲವರ್‌ಪಾಟ್, ಆ್ಯಷ್‌ಟ್ರೇ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು.

'ಸಾವಿಗೆ ಮುನ್ನ ರೇಪ್ ಮಾಡಲಾಗಿದೆಯೆ ?'

'ಹಾಗೇ ಅನಿಸುತ್ತಿದೆ.'

ಮೆಲ್ಲನಡಿಯಿಡುತ್ತ ಹೇಮಂತ ವರ್ತುಳಾಕಾರದಲ್ಲಿದ್ದ ಮಂಚ ಸಮೀಪಿಸಿದ. ಮೇಲಿನಿಂದ ಕೆಳಗೆ ಮಂಚವನ್ನು ಸುತ್ತುವರೆದು ಹರಡಿಕೊಂಡಿತ್ತು ಮಲ್ಲಿಗೆಯಷ್ಟೇ ಬಿಳುಪಾಗಿದ್ದ ಸೊಳ್ಳೆ ಪರದೆ, ಬಿಳಿಬಣ್ಣದ ಬೆಡ್‌ಶೀಟ್, ದಿಂಬು, ಹಾಸಿಗೆ ಮುದ್ದೆಯಾದಂತೆ ಕಾಣಿಸಲಿಲ್ಲ. ದಿಂಬುಗಳು ಯಥಾಸ್ಥಾನದಲ್ಲಿದ್ದವು. ಒಂದು ದಿಂಬಿನ ಮೇಲೆ ತಲೆಯಿಟ್ಟು ಕತ್ತಿನವರೆಗೂ ಶಾಲು ಹೊದೆದು ಮಲಗಿಕೊಂಡಿದ್ದಳು ಅಂಕಿತಾ. ಕೂದಲು ಕೆದರಿದ್ದವು, ಕಣ್ಣುಗಳು ಪೂರ್ತಿಯಾಗಿ ಮುಚ್ಚಿಕೊಂಡಿದ್ದವು, ಬಾಯಿ ತುಸುವೇ ತೆರೆದುಕೊಂಡಿತ್ತು. ಆ ಸ್ಥಿತಿಯಲ್ಲಿ ನೋಡಿದ ಯಾರಿಗೂ ಆಕೆ ಸತ್ತಿದ್ದಾಳೆ ಎಂಬ ಕಲ್ಪನೆಯೇ ಬರುವಂತಿರಲಿಲ್ಲ. ಹೇಮಂತ ಅವಳ ಮುಖ, ಕತ್ತು ನಿರೀಕ್ಷಿಸಿದ. ಕತ್ತಿನ ಮೇಲೆ ಐದಾರು ಗೆರೆಗಳು, ಆ ಗೆರೆಗಳ ಮೇಲೆ ಒಂದೆರಡು ಕಡೆ ಜಿನುಗಿದ ರಕ್ತದ ಹನಿಗಳು, ತುಟಿಗಂಟಿಕೊಂಡಿದ್ದ ರಕ್ತ.

'ರಕ್ತವೋ.... ಲಿಪ್‌ಸ್ಟಿಕ್ಕೋ' ಶಂಕೆಗೊಳಗಾದ ಹೇಮಂತ. ಕಿರುಬೆರಳಿನಿಂದ ಅವಳ ಎರಡೂ ತುಟಿ ಬಿಡಿಸಲು ಮುಂದಾದ. ಸಾಧ್ಯವಾಗಲಿಲ್ಲ. ತುಟಿಗಳು ಬಿರುಸಾಗಿದ್ದವು.... ಎರಡೂ ತುಟಿ ಸಂಪೂರ್ಣವಾಗಿ ಬೇರ್ಪಡಿಸಲು ಆತ ತನ್ನೆರಡೂ ಕೈಬೆರಳುಗಳನ್ನು ಉಪಯೋಗಿಸಬೇಕಾಗಿಯಿತು.

'ಹೆಣ ಸೆಟೆದು ಹೋಗಿದೆ'

'ಹೌದು ಮೇಜರ್... ಸಾವು ರಾತ್ರಿ ಸಂಭವಿಸಿರಬೇಕು'

'ನನಗೆನಿಸುವ ಮಟ್ಟಿಗೆ ಹತ್ತು ಗಂಟೆಗಳಾಗಿವೆ.'

ಬಾಯಿ ಅಗಲವಾಗಿ ತೆರೆದುಕೊಂಡಿತು.

ಒಳಗಿನ ಹಲ್ಲುಗಳ ಮೇಲೆ ರಕ್ತದ ಲೇಪನ.

'ಈಕೆ ಚೆನ್ನಾಗಿ ಎದುರಿಸಿದ್ದಾಳೆ. ಹೋರಾಡಿದ್ದಾಳೆ. ಸುಲಭದಲ್ಲಿ ಶರಣಾಗಿಲ್ಲ. ರೇಪ್ ಮಾಡಲು ಬಂದಿದ್ದವನನ್ನು ಚೆನ್ನಾಗಿ ತದಕಿದ್ದಾಳೆ. ಕಚ್ಚಿದ್ದಾಳೆ.'

'ಇಷ್ಟೆಲ್ಲ ಆದರೂ ಅವಳ ಸಹಾಯಕ್ಕೆ ಯಾರೂ ಬಂದಿಲ್ಲವಲ್ಲ.'

'ಹಾಗಲ್ಲ ಮೇಜರ್, ಕೆಲಸಕ್ಕಿರುವವರೆಲ್ಲ ಒಂಭತ್ತಕ್ಕೆ ಹೊರಟುಹೋಗ್ತಾರೆ. ಹೇಳಿ ಕೇಳಿ ಇವರು ಸಿನೇಮಾ ಜನ. ರಾತ್ರಿ ಎಷ್ಟಕ್ಕೆ ಬರುತ್ತಾರೋ ತಿಳಿಯದು.'

'ಮತ್ತೆ ಹೊರಗಡೆ ವಾಚ್‌ಮನ್ ಇರಬೇಕಲ್ಲ ?'

'ಇದ್ದಾನಂತೆ. ಆದರೆ ರಾತ್ರಿ ಆತ ಇರಲಿಲ್ಲ. ಊರಿಗೆ ಹೋಗಿದ್ದಾನೆ' ಅಂತ ತಿಳಿದಿದೆ.

ಕತ್ತಿನವರೆಗೆ ಹೊದ್ದ ಶಾಲು ಕೆಳಗೆ ಸರಿಸಿದ ಹೇಮಂತ.

ಕಣ್ಣುಗಳು ತಾನೇ ತಾನಾಗಿ ಮುಚ್ಚಿಕೊಂಡವು.

ಕತ್ತು, ಎದೆ, ಕಿಬ್ಬೊಟ್ಟೆ ಎಲ್ಲದರ ಮೇಲೂ ನಾಲ್ಕಾರು ಗಾಯಗಳು. ಹರಿದ ರಕ್ತ ಹಾಸಿಗೆ, ಹೊದಿಕೆ ಎಲ್ಲಾ ತೋಯಿಸಿತ್ತು. ಆಕೆ ಪೂರ್ತಿ ನಗ್ನಳಾಗಿದ್ದಳು. ಆಕೆ ತೊಟ್ಟುಕೊಂಡಿದ್ದ ನೈಟಿ, ಪ್ಯಾಂಟಿ, ಬ್ರಾ ಮುಂತಾದವೆಲ್ಲ ಬಿದ್ದುಕೊಂಡಿದ್ದವು ಅಲ್ಲಿಯೇ.

ಒಂದೆರೆಡು ನಿಮಿಷ ಬಿಟ್ಟು ಮೇಜರ್ ಶವದ ನಿರೀಕ್ಷಣೆ ಮಾಡಿದ. ಅಲ್ಲಲ್ಲಿ ಆದ ಗಾಯಗಳು ನಡೆದ ಕಥೆ ಹೇಳುತ್ತಿದ್ದವು.... ಮತ್ತೆ ಹೊದಿಕೆಯನ್ನು ಕತ್ತಿನವರೆಗೂ ಸರಿಸಿದ ಹೇಮಂತ ಸುತ್ತಲೂ ನಿರೀಕ್ಷಿಸಿದ. ಜೇಬಿನಿಂದ ವಸ್ತ್ರ ತೆಗೆದು ಕೈಗೆ ಸುತ್ತಿಕೊಂಡ. ಕೆಳಗೆ ಬಿದ್ದಿದ್ದ ಒಂದೊಂದೇ ವಸ್ತುಗಳನ್ನು ಎತ್ತಿ ಎತ್ತಿ ಅಮೂಲಾಗ್ರವಾಗಿ ಪರೀಕ್ಷಿಸತೊಡಗಿದ. ಆ್ಯಷ್‌ಟ್ರೇ... ಗ್ಲಾಸು... ಲೋಟಾ... ಫ್ಲವರ್‌ಪಾಟ್ ಮುಂತಾದವು, ಅವುಗಳಲ್ಲಿ ಗಮನ ಸೆಳೆದದ್ದು ಫ್ಲವರ್‌ಪಾಟ್. ಸತುವಿನಲ್ಲಿ ಮಾಡಿದ ಭಾರವಾದ ವಸ್ತು ಅದರ ಹಿಂಭಾಗಕ್ಕೆ ತೆಳುವಾಗಿ ರಕ್ತ

ಅಂಟಿಕೊಂಡಿತ್ತು. ಅದನ್ನು ಮೂಗಿನವರೆಗೂ ತಂದ. ಸುವಾಸನೆ ಬಡಿಯಿತು. ಪ್ರತಾಪ್‌ನಿಗೆ ಅವನ್ನು ನೀಡಿ ಎಚ್ಚರಿಸಿದ.

'ಇದು ಬಹಳ ಮಹತ್ತ್ವದ ವಸ್ತು. ಇದಕ್ಕೆ ನೆತ್ತರು ಅಂಟಿದೆ. ಪರೀಕ್ಷೆ ಮಾಡಿಸಿ ಯಾವ ಗ್ರೂಪ್ ಎಂದು ತಿಳಿದುಕೊಳ್ಳಿ. ಅಲ್ಲದೆ ಇದಕ್ಕೆ ಸುವಾಸನೆ ಇದೆ. ತಲೆಕೂದಲಿಗೆ ಉಪಯೋಗಿಸುವ ಸುವಾಸನೆ ಎಣ್ಣೆಯಿದು. ನನಗೆ ತಿಳಿದ ಮಟ್ಟಿಗೆ ಈ ಎಣ್ಣೆಯನ್ನು ಪುರುಷರು ಉಪಯೋಗಿಸತ್ತಾರೆ. ಅದರ ಬಗ್ಗೆ ಪರಿಶೀಲನೆ ಮಾಡಿ. ಶವದ ಹಾಗೂ ಈ ರೂಮಿನ ಒಂದೊಂದು ಇಂಚಿನ ಪೋಟೋ ತೆಗೆಸಿ. ಫುಟ್‌ಪ್ರಿಂಟ್ಸ್ - ಫಿಂಗರ್ ಪ್ರಿಂಟ್ಸ್ ಡೆವಲಪ್ ಮಾಡಿ ಪಿ.ಎಂ. ರಿಪೋರ್ಟ್‌ನೊಂದಿಗೆ ಸಂಜೆ ಬಂದು ಕಾಣು'. ಎಲ್ಲದಕ್ಕೂ ತಲೆಯಾಡಿಸಿದ.

ರೂಮಿನಿಂದ ಹೊರಬಂದಾಗ ಎಲ್ಲರೂ ಅವರ ಪ್ರತೀಕ್ಷೆಯಲ್ಲಿ ಇದ್ದರು. ಎಲ್ಲರ ಮುಖದ ಮೇಲೂ ದುಗುಡ, ಆತಂಕ. ಪ್ರತಾಪ್ ಫೋಟೋಗ್ರಾಫರ್‌ಗೆ ಹಾಗೂ ಬೆರಳಚ್ಚು ತಜ್ಞರಿಗೆ ಎಲ್ಲಾ ಸೂಚನೆ ನೀಡಿದ.

ಸ್ವಲ್ಪ ಅನುಮಾನಿಸುತ್ತ ಹತ್ತಿರ ಬಂದರು ಮದನಮೋಹನ.

'ತಮ್ಮೊಂದಿಗೆ ಸ್ವಲ್ಪ ಮಾತನಾಡುವುದಿತ್ತು.'

'ಬನ್ನಿ ಅದಕ್ಕೇನಂತೆ ?' ಮೇಜರ್ ಅವರೊಂದಿಗೆ ತುಸು ದೂರದಲ್ಲಿದ್ದ ಸೋಫಾದ ಕಡೆ ನಡೆದು ಕುಳಿತುಕೊಂಡ, ಅವರೂ ಸಹ.

'ನಿನ್ನೆ ನನ್ನ ಚಿತ್ರ 'ಜಗನ್ಮೋಹಿನಿ'ಯ ಅಂತಿಮ ಹಂತದ ಚಿತ್ರೀಕರಣವಿತ್ತು. ಕುಂಬಳಕಾಯಿ ಒಡೆಯುವ ಕೆಲಸ ಅಂಕಿತಾಳದು. ಈ ಚಿತ್ರಕ್ಕೆ ನಾನು ತುಂಬಾ ಹಣ ಖರ್ಚು ಮಾಡಿದ್ದೇನೆ. ಒಂದು ದೃಷ್ಟಿಯಿಂದ ದಿವಾಳಿ ಅಂಚಿನಲ್ಲಿದ್ದೇನೆ.'

'ಮುಂದೆ ಹೇಳಿ'

ರಾತ್ರಿ ಹತ್ತು ಹೊಡೆದರೂ ಆಕೆ ಬರಲಿಲ್ಲ. ಮನೆಗೆ ಪೋನು ಮಾಡಿದರೆ ಎಂಗೇಜ್ ಸೌಂಡ್. ಬೇಸತ್ತು ನಾನೇ ಕುಂಬಳಕಾಯಿ ಒಡೆದು ಮುಗಿಸಿದೆ. ಉಳಿದೆಲ್ಲಾ ಕೆಲಸ ಮುಗಿಯುತ್ತಿದ್ದಂತೆ ಚಿತ್ರ ತಂಡದವರು ಗಾಡಿಯಲ್ಲಿ ಹೊರಟು ನಿಂತರು. ನಾನು ಮ್ಯಾನೇಜರ್ ಜೊತೆ ಮಾತಾಡಿ ಹಣಕಾಸಿನ ವ್ಯವಹಾರ ಮುಗಿಸಿ ಹೊರಡಬೇಕು ಅನ್ನುವಷ್ಟರಲ್ಲಿ ಕೆಟ್ಟ ಸುದ್ದಿ ಬಂದಿತು. ಅರ್ಧಗಂಟೆ ಮೊದಲು ಹೋಗಿದ್ದ ನಮ್ಮ ಪ್ರೊಡ್ಯೂಸರ್ ಗಾಡಿ ಅಪಘಾತಕ್ಕೆ ಈಡಾಯಿತಂತೆ. ಸುಮಾರು ಜನರಿಗೆ ಏಟು ಬಿದ್ದಿದೆ. ಎಲ್ಲರೂ ಸಿಟಿ ಆಸ್ಪತ್ರೆಯಲ್ಲಿದ್ದಾರೆ ಅಂತ. ಗಾಬರಿಯಾಗಿ ಅಲ್ಲಿಗೆ ಧಾವಿಸಿದೆ. ದೇವರ ದಯೆಯಿಂದ ಯಾರ ಪ್ರಾಣಕ್ಕೂ ಅಪಾಯವಿರಲಿಲ್ಲ. ಸಮಾಧಾನವೆನಿಸಿದರೂ ಏಕೋ ಬೇಜಾರಾಯಿತು. ನೇರವಾಗಿ ಮನೆಗೆ ಬಂದೆ. ಮತ್ತೆರಡು ಬಾರಿ ಅಂಕಿತಾಳಿಗೆ ಪೋನು ಮಾಡಿದೆ. ಮತ್ತದೇ ಸದ್ದು... ಎಂಗೇಜ್,

ಊಟ ಸಹ ಮಾಡದೇ ಹಾಗೇ ಮಲಗಿಕೊಂಡೆ. ಬೆಳಿಗ್ಗೆ ಪ್ರತಾಪ್ ಪೋನ್ ಮಾಡಿದಾಗಲೇ ಈ ವಿಷಯ ನನಗೆ ತಿಳಿದು ಬಂದದ್ದು.

ಮದನಮೋಹನ್ ಮೌನ ತಾಳಿದ.

'ಸರಿ ನನ್ನಿಂದೇನಾಗಬೇಕು ?'

'ಅದೇ ಪ್ರೆಸ್‌ನವರು, ಏನೇನೋ ಬರೆದು ನನ್ನ ಹೆಸರಿಗೆ ಕಲಂಕ ತರುತ್ತಾರೆ. ಕಾರಣ ದಯವಿಟ್ಟು ಈ ಕೊಲೆಯ ಕೇಸು ಪರಿಶೋಧನೆ ತಾವು ಮಾಡಿ, ನಾನು ನನ್ನ ಪರವಾಗಿ ಮೂರು ಲಕ್ಷ ಸಂಭಾವನೆ ಕೊಡುತ್ತೇನೆ. ಈಗಲೇ'

ಮೊದಲೇ ಬರೆದಿಟ್ಟಿದ್ದ ಚೆಕ್ಕನ್ನು ಹೇಮಂತರ ಕೈಗೆ ತುರುಕಿಯೇ ಬಿಟ್ಟ.

ಇನ್ನೇನು ಏಳಬೇಕು ಅನ್ನುವಷ್ಟರಲ್ಲಿ ಧಾವಿಸಿ ಬಂದ ಮೂವತ್ತು ಮೂವತ್ತೆರಡು ವರ್ಷಗಳ ತರುಣ ಒಂದು ಕ್ಷಣ ಗಕ್ಕನೆ ನಿಂತು ಎಲ್ಲೆಡೆ ದೃಷ್ಟಿಸಿದ. ಅವನ ಕಣ್ಣುಗಳು ಕೆಲಕಾಲ ಮದನ ಮೋಹನ ಮೇಲೆ ನೆಟ್ಟಿತು. ಮದನಮೋಹನ ದಡಬಡಿಸಿ ಎದ್ದುನಿಂತ.

'ಸರಿ ಮೇಜರ್ ಸಾಹೇಬ್... ನಾನು ಬರುತ್ತೇನೆ.'

ಭೂತ ಕಂಡವರಂತೆ ಮದನಮೋಹನ ಗಾಬರಿಯಾಗಿ ಅಲ್ಲಿಂದ ಕಾಲ್ಕಿತ್ತ.. ಆ ತರುಣ ಹೇಮಂತನೆಡೆ ಬಂದ.

'ಬನ್ನಿ ಮಿಸ್ಟರ್ ಮನೀಶ್' ಗಾಳಿಯಲ್ಲೊಂದು ಹುಸಿ ಗುಂಡು ಹಾರಿಸಿದ.

'ಹಾಂ ? ನನ್ನಬಗ್ಗೆ ನಿಮಗೆ ಗೊತ್ತೆ ?' ..... ಆತ ಗಾಬರಿಯಾಗಿ ಕೇಳಿದ.

'ನೀವು ಖ್ಯಾತ ನಟರು ಸ್ವಾಮಿ. ನನ್ನಂತೆ ಚಿಲ್ರೆ ಮನುಷ್ಯರಲ್ಲ. ಏನೇ ಇರಲಿ... ನಿಮಗೆ ಅಭಿನಂದನೆಗಳು.'

'ಯಾವುದಕ್ಕೆ ?'

'ಅಂಕಿತಾಳ ಕೋಟ್ಯಾನುಕೋಟಿ ಆಸ್ತಿ ದೊರೆತಿದ್ದಕ್ಕೆ.'

ಆತ ಪಟಾಕಿಯಂತೆ ಸಿಡಿದ.

'ಯಾರಿಗೆ ಬೇಕಾಗಿದೆ ಈ ಹಣ ? ಸಂಪತ್ತು... ಇದೆಲ್ಲಾ ಬೇಡ ಎಂದೇ ನಾ ಹೊರಗೆ ಹೋಗಿದ್ದು. ಈಗಲೂ ನನಗದು ಬೇಡ.'

ಆವೇಶದಿಂದ ಆತನು ನುಡಿದಾಗ ಉಸಿರು ವೇಗವಾಯಿತು.

'ಬನ್ನಿ ಕುಳಿತುಕೊಳ್ಳಿ ಸುಧಾರಿಸಿಕೊಂಡು ನನಗೆಲ್ಲ ವಿಷಯ ತಿಳಿಸಿ' ಆತ ಸೋಫಾದಲ್ಲಿ ಆಸೀನನಾದ. ಒಂದೆರಡು ನಿಮಿಷ ಸುಧಾರಿಸಿಕೊಂಡು ಹೇಳಲಾರಂಭಿಸಿದ.

'ನಾನು ನಿಜವಾಗಿಯೂ ಅಂಕಿತಾಳನ್ನು ಪ್ರೀತಿಸಿ ಮದುವೆಯಾದೆ. ನನ್ನ ದುರಾದೃಷ್ಟ ಅವಳಿಗೆ ಹೆಚ್ಚಿನ ಅವಕಾಶಗಳು ಬಂದವು. ನಾನು ಹಿಂದುಳಿದೆ. ನಮ್ಮಿಬ್ಬರ ಮಧ್ಯೆ ಆಕಾಶ ಪಾತಾಳದಷ್ಟು ಅಂತರ ಉಂಟಾಯಿತು. ನನ್ನನ್ನು ನೋಡುವ ದೃಷ್ಟಿ ಬದಲಾಯಿತು. ಹೀಗಾಗಿ ವೈಮನಸ್ಸು ಉಂಟಾಗಿ ಕಲಹ ಆರಂಭವಾಗತೊಡಗಿತು. ಅದು ಒಂದು ದಿನ ಅತೀ ಮುಂದಕ್ಕೂ ಹೋಗಿ ನಾನು ಬೇರೆಯಾಗಿ ವಾಸಮಾಡತೊಡಗಿದೆ. ಅವಳನ್ನು ಯಾರಾದರೂ ಮೋಸಪಡಿಸಬಹುದೆಂದು ತಿಳಿದು ರಂಜನಾಳನ್ನು ನಾನೇ ಅವಳ ಸೆಕ್ರೆಟರಿ ಮಾಡಿದೆ. ದಿನನಿತ್ಯ ರಾತ್ರಿ ಆಕೆ ಬಂದು ನನಗೆ ಸಮಾಚಾರ ತಿಳಿಸುತ್ತಿದ್ದಳು. ಮುಂದೆ ಒಂದು ವರ್ಷ ಕಳೆಯುವದರಲ್ಲಿ ನನ್ನ ಸಂಶಯ ನಿಜವಾಯಿತು.'

'ಹೌದಾ ?'

'ಹೌದು. ಅನೇಕರು ಅವಳಿಂದ ಹಣ ಪಡೆದು ಹಿಂತಿರುಗಿಕೊಡಲಿಲ್ಲ. ಅದರ ಬಗ್ಗೆ ಆಕೆ ಕೋಪ ಮಾಡಿದರೂ, ಹೆದರಿಸಿದರೂ ಹಣ ಕೊಡಲಿಲ್ಲ.'

'ಯಾರವರು ?'

'ನಾಲ್ಕಾರು ಜನರಿದ್ದಾರೆ. ಇದೇ ನಿರ್ಮಾಪಕ ಮದನಮೋಹನರನ್ನು ತೆಗೆದುಕೊಳ್ಳಿ. ಅಂಕಿತಳಿಗೆ ಅರವತ್ತು ಅರವತ್ತೈದು ಲಕ್ಷಕೊಡಬೇಕು. ಈ ಮನೆ ಕಟ್ಟುವಾಗ ಕಾಂಟ್ರ್ಯಾಕ್ಟರಿಂದ ಸುಮಾರು ಇಪ್ಪತ್ತು ಲಕ್ಷ ಕಮಿಷನ್ ಹೊಡೆದಿದ್ದಾರೆ. ಇದೆಲ್ಲ ಆಕೆಗೆ ತಿಳಿದು ಬಾಯಿ ಮಾಡಿದ್ದಳು. ನಿನ್ನೆ ಆಕೆಗೆ ಎಲ್ಲಾ ಹಣ ಬೇಕೆಂದು ಕೊನೆಯ ವಾರ್ನಿಂಗ್ ಸಹ ಕೊಟ್ಟಿದ್ದಳು.'

'ನಿನ್ನೆಯೇ ಅವರ ಕೊಲೆಯಾಯಿತು.'

'ಹೌದು'

'ಅವರೇ ಮಾಡಿದ್ದಾ ?'

'ನಾ ಹೇಗೆ ಹೇಳಲಿ ?'

'ನಿನ್ನೆ ರಾತ್ರಿ ನೀವೆಲ್ಲಿದ್ದಿರಿ ?'

'ಮನೆಯಲ್ಲಿ. ಬೇಕಾದರೆ ಸಾಕ್ಷಿಯಾಗಿ'

'ರಂಜನಾಳನ್ನು ಕೇಳಿ ... ಅಲ್ಲವೇ ?'

'ಹೌದು, ನಾನವಳ ಜೊತೆ ಮದುವೆಯಾಗಲು ನಿರ್ಧರಿಸಿದ್ದೆ.'

'ಓಕೆ. ಮನೀಶ್'

ಹೇಮಂತ ಎದ್ದುನಿಂತ.

'ಸರ್, ಏನೋ ಆಗಬಾರದ್ದು ಆಗಿ ಹೋಯಿತು. ದಯವಿಟ್ಟು ನನಗಾಗಿ ಕೊಲೆ ಆರೋಪಿಯ ಪತ್ತೆ ಮಾಡಿ. ನಾನು ಎರಡು ಲಕ್ಷ ಹಣ ಕೊಡಲು ಸಿದ್ಧ. ಆದರೆ ಈಗಲ್ಲ.'

'ಅಂಕಿತಾಳ ಎಲ್ಲಾ ಆಸ್ತಿ ಬಂದ ಮೇಲೆ ತಾನೇ'

'ನೋ ನೋ, ಅವಳ ಆಸ್ತಿಯ ಒಂದು ಕಾಸೂ ನನಗೆ ಬೇಕಾಗಿಲ್ಲ. ನಾನು ನನ್ನ ಹಣಕೊಡುತ್ತೇನೆ. ಅವಳೆಲ್ಲ ಆಸ್ತಿ ಒಂದು ಚಾರಿಟಿ ಟ್ರಸ್ಟ್ ಮಾಡಿ ಸಮಾಜ ಸೇವೆಗೆ ವಿನಿಯೋಗಿಸುತ್ತೇನೆ'

'ಗುಡ್ ಐಡಿಯಾ... ಬೈ'

ಪ್ರತಾಪ್‌ನೊಂದಿಗೆ ಮಾತನಾಡಿ ಮನೆಗೆ ನಡೆದ.

ರಾತ್ರಿ ಎಂಟು ಗಂಟೆ ಸುಮಾರಿಗೆ ಕರೆಗಂಟೆ ಬಾರಿಸಿತು. ಪ್ರತಾಪ್ ಬಂದಿರಬಹುದೆಂದು ಕೊಂಡು ಬಾಗಿಲು ತೆರೆದ. ತಲೆಗೆ ಪಟ್ಟಿ ಹಾಕಿ ಕೊಂಡು ನಿಂತ ಒಂದು ಅಪರಿಚಿತ ವ್ಯಕ್ತಿ.

'ನಮಸ್ಕಾರ ಸರ್. ನಾನು ವೇಣುಗೋಪಾಲ್ ಮೇಕಪ್‌ಮ್ಯಾನ್'

'ಬನ್ನಿ ಒಳಗೆ'

ಆತ ಕುಂಟುತ್ತ ಬಂದು ಕುಳಿತ.

'ನಿಮ್ಮ ತಲೆಗೇನಾಗಿದೆ ?'

'ಗಾಯ ಸರ್. ನಿನ್ನೆ ರಾತ್ರಿ ಪ್ರೊಡ್ಯೂಸರ್ ಗಾಡಿ ಅಪಘಾತವಾಯಿತು. ಅದರಲ್ಲಿ ನಾನೂ ಇದ್ದೆ. ದೇವರ ದಯೆಯಿಂದ ಹೆಚ್ಚಿಗೆ...'

ಅಷ್ಟರಲ್ಲಿ ಮತ್ತೊಮ್ಮೆ ಕರೆಗಂಟೆ... ಈ ಬಾರಿ ಬಂದವ ಪ್ರತಾಪ್.

'ನೀವು ಹೇಳಿದ ಎಲ್ಲಾ ಮಾಹಿತಿ ತಂದಿರುವೆ'

'ಸರಿ. ಒಂದು ನಿಮಿಷ ಇರಿ. ಹೂಂ. ಹೇಳಿ ವೇಣುಗೋಪಾಲ ಅವ್ರೇ.'

'ಏನಿಲ್ಲ ಸರ್. ಮನೀಶ್ ಸಿಕ್ಕಿದ್ರು. ಎಲ್ಲಾ ವಿಷಯ ತಿಳಿದು ತುಂಬಾ ನೋವಾಯಿತು. ದೇವತೆಯಂತಿದ್ದ ಅವಳಿಗೆ ಎಂಥಾ ದುರ್ಗತಿ ಬಂದಿತಲ್ಲಾ ಎಂದು ವ್ಯಥೆಯಾಯಿತು. ಸರ್, ನನಗೆ ತಿಳಿದ ಒಂದು ವಿಷಯ ಹೇಳಿ ಹೋಗುವಾ ಅಂತ ಬಂದೆ. ಆದರೆ... ಆದರೆ...' ಆತ ಹಿಂದೇಟು ಹೊಡೆದ.

'ಅದೇನದು.. ನಿರ್ಭಿಡೆಯಿಂದ, ಧೈರ್ಯವಾಗಿ ಹೇಳಿ.'

'ಮೊನ್ನೆ ಸರ್. ಮೇಡಂ ಅಂದ್ರೆ ಅಂಕಿತಾ ಸರ್. ಮೇಕಪ್ ತೆಗೀತಾ ಇದ್ರು. ನಮ್ಮ ಪ್ರೊಡ್ಯೂಸರ್ ಮದನಮೋಹನ ಒಳಗೆ ಬಂದ್ರು. ನನ್ನಿಂದೇಕೆ ತೊಂದ್ರೆ ಅಂದುಕೊಂಡ ನಾನು ಹೊರಗೆ ಬಂದು ನಿಂತೆ. ಇಬ್ಬರಲ್ಲಿ ಜೋರಾಗಿ ಮಾತು ಆಯ್ತು ಸರ್. ಹೊರಗಿದ್ದ ನನಗೆ

ಸ್ಪಷ್ಟವಾಗಿ ಕೇಳಿಸುತಿತ್ತು. ಇನ್ನೆರಡು ದಿನಗಳಲ್ಲಿ ನನ್ನ ಒಟ್ಟು ಎಪ್ಪತ್ತು ಲಕ್ಷ ಹಣ ಕೊಡಲೇಬೇಕು ಎಂದು ತಾಕೀತು ಮಾಡಿದ್ರು ಮೇಡಂ "ನಾನು ಕೊಡೋದಿಲ್ಲ. ನೀನು ಏನು ಮಾಡ್ತಿಯೋ ಮಾಡು" ಎಂದು ನುಡಿದ ಪ್ರೊಡ್ಯೂಸರ್ ಕೆಂಪುಮುಖ ಮಾಡಿಕೊಂಡು ಹೊರಗೆ ಬಂದ್ರು ಸರ್. ಇಷ್ಟೇ ನನಗೆ ಗೊತ್ತಿರೋದು.'

'ಅದು ಸರಿ. ನನ್ನ ಹತ್ರ ಹೋಗು ಅಂತ ನಿನಗಾರು ಹೇಳಿದ್ರು.'

'ಅದೇ ಮನೀಶ್ ಸರ್. ಅವರು ಹೇಳಿದ್ದಕ್ಕೆ ನಾನು....'

'ಒಳ್ಳೇದಾಯ್ತು. ಮತ್ತೇನಾದರೂ ತಿಳಿದು ಬಂದ್ರೆ ಬಂದು ಭೆಟ್ಟಿಯಾಗಿ.'

ಆತ ನಮಸ್ಕರಿಸಿ ಮೇಲೆದ್ದ. ಆತ ಹೊರಟು ಹೋದ ಮೇಲೆ ಬಾಗಿಲು ಭದ್ರಪಡಿಸಿ ಪ್ರತಾಪ್ ಹೇಮಂತನೆಡೆ ಬಂದ

'ಪಾಪ ! ಕುಂಟುತ್ತಿದ್ದಾನೆ'

'ಹೌದು. ನಿನ್ನೆ ಅಪಘಾತದಲ್ಲಿ ಪೆಟ್ಟಾಗಿರಬೇಕು.'

'ವೇಣುಗೋಪಾಲ ಹೇಳಿಕೆಯಿಂದ ನನ್ನ ಸಂಶಯ ದೃಢವಾಗುತ್ತ ನಡೆದಿದೆ ಮೇಜರ್'

'ಮೊದಲು ನಿಮ್ಮ ಸಂಶಯ ಏನೆಂಬುದನ್ನು ಹೇಳಿ'

'ನನಗೆ ಮನೀಶ್‌ನ ಮೇಲೆ ಅನುಮಾನ. ಮೊದಲೇ ಆತನ ಬೇಡಿಕೆ ಕಡಿಮೆಯಾಗಿತ್ತು. ಇದರಿಂದಾಗಿ ಆರ್ಥಿಕ ಹೊರೆ ಹೆಚ್ಚಾಗಿ ಆತ ಸಾಲಗಾರನಾದ. ಇದೇ ಸಮಯದಲ್ಲಿ ಆತ ತನ್ನ ಪತ್ನಿ ಅಂಕಿತಾಳೊಂದಿಗೆ ಕೂಡಿಕೊಳ್ಳಬೇಕೆಂದು ಯೋಚಿಸಿದ. ಅಷ್ಟರಲ್ಲಿ ಆಕೆ ಮದನಮೋಹನರ ಕಡೆ ವಾಲಿದ್ದು ಅಸಮಾಧಾನಕ್ಕೆ ಕಾರಣವಾಯಿತು. ಅದಕ್ಕಾಗಿ ಅವಳನ್ನು ದಾರಿಯಿಂದ ಸರಿಸಿ ಎಲ್ಲಾ ಸಂಕಷ್ಟಗಳಿಂದ ಪಾರಾದ.'

'ಒಂದು ದೃಷ್ಟಿಯಿಂದ ನಿಮ್ಮ ವಾದ ಸರಿ.'

'ಇನ್ನೊಂದು ದೃಷ್ಟಿಯಿಂದ ಸರಿ ಅಲ್ಲ ಅಂದಂತಾಯಿತು.'

ಮುಗುಳ್ನಕ್ಕ ಹೇಮಂತ ವಿವರಿಸಿದ.

'ಮಿಸ್ಟರ್ ಪ್ರತಾಪ್. ಯಾವಾಗಲೂ ಒಂದೇ ವಾದಕ್ಕೆ ಅಥವಾ ಒಂದೇ ಸಂಶಯಕ್ಕೆ ನಾವು ಅಂಟಿಕೊಳ್ಳಬಾರದು. ಸಮಸ್ಯೆಯನ್ನು ಸರ್ವ ವಿಧದಿಂದಲೂ ಸರ್ವ ದೃಷ್ಟಿಕೋನದಿಂದಲೂ ಪರೀಕ್ಷಿಸಬೇಕು. ಅಂದರೆ ಗಟ್ಟಿಯಾದ ತೀರ್ಮಾನಕ್ಕೆ ಬರಲು ಸಾಧ್ಯ.'

'ಅಂದರೆ... ಮನೀಶ್ ನಿರಪರಾಧಿಯೇ.'

'ಹಾಗಂತ ನಾನಂದಿಲ್ಲ... ಮನೀಶ್‌ನಷ್ಟೇ ಮದನಮೋಹನರೂ ಸಂದಿಗ್ಧರಾಗಿದ್ದಾರೆ. ಅದರ ಬಗ್ಗೆ ಯೋಚಿಸಿದ್ದೀರಾ ? ನೋಡಿ ಪ್ರತಾಪ್. ಚಲನಚಿತ್ರರಂಗ ಅಂದರೆ ಅದೊಂದು ಮಾಯಾಕುದುರೆ. ತನ್ನ ಮೇಲೆ ಹೊತ್ತೊಯ್ದು ತಿರುಗುವ ಅದು ಯಾವಾಗ ನೆಲಕ್ಕೆ ಕೆಡವುತ್ತದೆ ಎನ್ನುವುದೇ ತಿಳಿಯೋದಿಲ್ಲ.

ಮದನಮೋಹನ ಒಂದಾನೊಂದು ಕಾಲದಲ್ಲಿ ಹಣದ ಹೊಳೆಯಲ್ಲಿ ಮಿಂದವರು. ಅತೀ ಯಶಸ್ವಿ ನಿರ್ಮಾಪಕ ಎನಿಸಿಕೊಂಡವರು. ಈಗ "ಜೀರೊ" ಸಾಲಗಾರರಾಗಿದ್ದಾರೆ. ಅಂಕಿತಾಳಿಂದ ಎಂಭತ್ತು ಲಕ್ಷ ಹಣ ಪಡೆದಿದ್ದಾರೆ. ಆಕೆ ಒತ್ತಾಯಿಸಿದಾಗ ಬೇರೆ ದಾರಿ ಕಾಣಿಸಿಲ್ಲ. ಅವಳೊಂದಿಗೆ ಮದುವೆಯಾಗುವ ಒಂದು ಸುಲಭ ದಾರಿ ಸಹ ಅವರು ಕಂಡುಕೊಂಡಿದ್ದರು. ಅದು ಈಡೇರದೇ ಇದ್ದಾಗ ಅನಿವಾರ್ಯವಾಗಿ ಅವರೇ ಏಕೆ ಅಂಕಿತಾಳನ್ನು ದಾರಿಯಿಂದ ಸರಿಸಿರಬಾರದು ?'

ಒಂದು ನಿಮಿಷ ಯೋಚಿಸಿದ ಪ್ರತಾಪ್.

'ಒಂದು ನಿಮಿಷ ತಡೆಯಿರಿ. ಅಪಘಾತದಲ್ಲಿ ಗಾಯಹೊಂದಿದವರು, ಅವರಿಗೆ ಸೇವೆ ನೀಡಿದವರ ಹೆಸರು, ವಿಳಾಸ, ಸಮಯ ಎಲ್ಲಾ ನನ್ನ ಬಳಿ ಇದೆ. ನೋಡಿ ಹೇಳುತ್ತೇನೆ.'

ಬ್ರೀಫ್‌ಕೇಸಿನಿಂದ ಹಲವಾರು ಕಾಗದ ತೆಗೆದು ನಿರೀಕ್ಷಿಸಿ ಮತ್ತೆ ನುಡಿದ - 'ಕೊಲೆಯಾದ ಸಮಯದಲ್ಲಿ ಮದನಮೋಹನ, ವೇಣುಗೋಪಾಲ ಇವರಿಬ್ಬರನ್ನು ಬಿಟ್ಟರೆ ಉಳಿದವರೆಲ್ಲ ಆಸ್ಪತ್ರೆಯಲ್ಲಿದ್ದರು.'

'ಯಾರು ವೇಣುಗೋಪಾಲನೇ ? ಅವನೂ ಸಹ ಗಾಯಹೊಂದಿದ್ದಾನಲ್ಲ.'

'ಗಾಯ ಹೊಂದಿರಬಹುದು. ಅದು ಅಪಘಾತದಲ್ಲಿ ಅಲ್ಲ.'

ಹೇಮಂತ ಅವನಿಂದ ಗಾಯಗೊಂಡವರ ಪಟ್ಟಿ ಇಸಿದುಕೊಂಡು ನೋಡಿದ. ಅದರಲ್ಲಿ ವೇಣುಗೋಪಾಲನ ಹೆಸರಿರಲಿಲ್ಲ. ಹಾಗಾದರೆ ಆತ ಸುಳ್ಳು ಹೇಳಿದ. ಆದರೂ ಆತನಿಗೆ ಗಾಯಾಗಿದೆ. ಹೇಗೆ ?

ಮರುಕ್ಷಣವೇ ನೆನಪಾಯಿತು - "ಫ್ಲವರ್‌ಪಾಟ್"

'ಪ್ರತಾಪ್. ಫ್ಲವರ್‌ಪಾಟ್ ಪರೀಕ್ಷೆ ಆಯಿತೇ ?'

'ಆಯಿತು. ಅದರ ಮೇಲೆ ಅಂಕಿತಾಳ ಬೆರಳ ಗುರುತು ಇವೆ. ಆದರೆ ಅದಕ್ಕೆ ತಗಲಿದ ರಕ್ತ ಮಾತ್ರ ಅವರದಲ್ಲ.'

'ಅಂದರೆ ಅದು ಕೊಲೆಗಾರನದೇ ಆಗಿರಬೇಕು. ಫ್ಲವರ್‌ಪಾಟ್‌ನಿಂದ ಆಕೆ ಅವನ ತಲೆಗೆ ಬಾರಿಸಿದ್ದಾಳೆ. ತಲೆಯೊಡೆದು ರಕ್ತ ಅಂಟಿಕೊಂಡಿದೆ. ಅದರೊಂದಿಗೆ ಅವನು ಉಪಯೋಗಿಸಿದ ಸುವಾಸನೆ ಎಣ್ಣೆ ಸಹ ಬಹಳ ಹಾರ್ಡ್. ವೇಣುಗೋಪಾಲನ ತಲೆಗೆ ಗಾಯವಾಗಿದೆಯಲ್ಲ... ?'

ಮತ್ತೊಂದೆರಡು ನಿಮಿಷ ಯೋಚಿಸಿದ ಆತ, ಟೆಲಿಫೋನ್ ಬಳಿಬಂದು ಮನೀಶ್‌ಗೆ ಫೋನ್ ಮಾಡಿದ.

'ಮನೀಶ್, ನಾನು ಹೇಮಂತ. ನೀವು ಮೇಕಪ್‌ಮ್ಯಾನ್ ವೇಣುಗೋಪಾಲ ಅವರನ್ನು ನನ್ನ ಬಳಿಗೆ ಏಕೆ ಕಳಿಸಿದಿರಿ ?'

'ನಾನೆಲ್ಲಿ ಕಳಿಸಿದ್ದೇನೆ ? ನನಗೂ ಅವನಿಗೂ ಭೆಟ್ಟಿಯೇ ಆಗಿಲ್ಲ.'

'ಥ್ಯಾಂಕ್ಸ್... ನನಗೂ ಇದೇ ಬೇಕಾಗಿತ್ತು' ರಿಸೀವರ್ ಕೆಳಗಿಟ್ಟು ನುಡಿದ.

'ವೇಣುಗೋಪಾಲ ತಾನಾಗಿ ಬಂದ.... ಮನೀಶ್ ಕಳಿಸಿದ್ದಾನೆಯೆಂದ. ನಿನ್ನೆ ನಡೆದ ಅಪಘಾತದಲ್ಲಿ ಗಾಯವಾಗಿದೆ ಎಂದ. ಈ ಎರಡೂ ಮಾತು ಸುಳ್ಳಾದವು. ಆತ ಸುಳ್ಳೇಕೆ ನುಡಿದ ?'

ಪ್ರತಾಪ್ ಉತ್ತರಿಸಲಿಲ್ಲ... ಹೇಮಂತನನ್ನೇ ದಿಟ್ಟಿಸುತ್ತಿದ್ದ ಮೇಜರ್ ಥಟ್ಟನೆ ಮೇಲೆದ್ದು ಕುಳಿತುಕೊಂಡ.

'ಸ್ವಲ್ಪ ಫಿಂಗರ್ ಪ್ರಿಂಟ್ಸ್ ಹಾಗೂ ಫುಟ್‌ಪ್ರಿಂಟ್ಸ್ ಕಳಿಸಿಕೊಡಿ'

ಅರ್ಧಗಂಟೆ ಕಾಲ ಎಲ್ಲಾ ನಿರೂಪಿಸಿದ ಹೇಮಂತ ತನ್ನ ನಿರ್ಧಾರ ಪ್ರಕಟಿಸಿದ.

ಅಂಕಿತಾಳ ಬೆಡ್‌ರೂಮಿನಲ್ಲಿ ನಾಲ್ಕು ಬಗೆ ಫುಟ್‌ಪ್ರಿಂಟ್ಸ್ ಇವೆ. ಅವುಗಳಲ್ಲಿ ಒಂದು ಸಂಶಯಕ್ಕೆ ಎಡೆಮಾಡಿದೆ... ನೋಡಿ ಇದನ್ನ. ಎರಡೂ ಕಾಲಿನ ಬೂಟುಗಳ ಪ್ರಿಂಟ್. ಒಂದು ದಟ್ಟವಾಗಿ ಮೂಡಿದೆ. ಇನ್ನೊಂದು ಮಸಕು ಮಸಕಾಗಿ. ಇದಕ್ಕೆ ಕಾರಣವೇನು ಹೇಳುತ್ತೀರಾ ?

'ವೆರಿ ಸಿಂಪಲ್... ಒಂದು ಹೆಚ್ಚು ಸವೆದಿದೆ.'

'ನೋ. ಈ ಪ್ರಮಾಣದಲ್ಲಿ ಸವಕಳಿಯಾಗಲು ಸಾಧ್ಯವಿಲ್ಲ.'

'ಮತ್ತೆ ?'

'ನನ್ನ ಲೆಕ್ಕಾಚಾರದ ಪ್ರಕಾರ ಒಂದು ಕಾಲು ಚಿಕ್ಕದಿದೆ. ಅದಕ್ಕೆ ಅದನ್ನು ಎತ್ತಿ ಎತ್ತಿ ಹಾಕಬೇಕಾಗುತ್ತದೆ. ಕಾರಣ ಅದರ ಭಾರ ಹೆಚ್ಚು ವಿಶಾಲವಾಗಿಲ್ಲ. ಅದರ ಮುದ್ರೆ ಸಹ ಮಸಕು

ಮಸಕಾಗುತ್ತದೆ. ಅಪರಾಧಿಯ ಒಂದು ಕಾಲು ಚಿಕ್ಕದಾಗಿರುವುದರಿಂದ ಆತ ಕುಂಟುತ್ತ ಹೆಜ್ಜೆ ಹಾಕುತ್ತಾನೆ. ಅದಕ್ಕೇ ಒಂದು ಬೂಟ್ ಪ್ರಿಂಟು ಮಸಕಾಗಿ, ಇನ್ನೊಂದು ದಟ್ಟವಾಗಿ ಮೂಡಿದೆ.'

'ವೇಣುಗೋಪಾಲ ಸಹ ಕುಂಟುತ್ತಾನಲ್ಲ.'

'ಹೌದು... ಈಗಾಗಲೇ ಆತ ಎರಡು ಸುಳ್ಳು ಹೇಳಿ ಸಿಕ್ಕಿಹಾಕಿಕೊಂಡಿದ್ದಾನೆ. ಅದರೊಂದಿಗೆ ಅವನ ಪಾದರಕ್ಷೆ ಈಗ ಬೇರೊಂದು ಕಥೆ ಹೇಳುತ್ತಿದೆ. ನಡೆಯಿರಿ. ಅವನನ್ನು ಪರೀಕ್ಷಿಸಿಯೇ ಬಿಡೋಣ...'

ವೇಣುಗೋಪಾಲ ಅವರ ಮನೆಯಲ್ಲೇ ಇದ್ದ. ಅವರಿಬ್ಬರೂ ತನ್ನನ್ನು ಹುಡುಕಿಕೊಂಡು ಬಂದದ್ದು ಕಂಡು ಭೂಮಿಗಿಳಿದುಹೋದ...

ಹೇಮಂತನಿಗೆ ಅರ್ಧ ಗಂಟೆ ಸಾಕಾಯಿತು...

'ಹೌದು... ನಾನೇ ಅಂಕಿತಾಳ ಕೊಲೆ ಮಾಡಿದೆ. ಕೊಲೆ ಮಾಡುವ ಉದ್ದೇಶ ನನಗಿರಲಿಲ್ಲ. ಆದರೂ ಅವಳ ಕೊಲೆ ಮಾಡಿದೆ.'

'ಕಾರಣ ಏನು ಅಂತ ವಿವರವಾಗಿ ಹೇಳು.'

ಅಂಥ ಬಲವಾದ ಕಾರಣ ಯಾವುದೂ ಇಲ್ಲ, ನನಗೆ ಹಣದಾಸೆನೂ ಇರಲಿಲ್ಲ. ಅವಳ ಮೇಲೆ ಯಾವ ದ್ವೇಷವೂ ಇರಲಿಲ್ಲ. ಮೇಲಾಗಿ ನಾನವಳನ್ನು ಮದುವೆ ಆಗಿ ಸಕಲ ಆಸ್ತಿಗೆ ವಾರಸುದಾರನಾಗಲೂ ಬಯಸಿರಲಿಲ್ಲ.

'ಮತ್ತೇಕೆ ಈ ಘಟನೆ...'

'ಹೇಳುತ್ತೇನೆ. ನನಗೆ ಒಂದು ಬಗೆಯಲ್ಲಿ ಹೆಣ್ಣಿನ ಹುಚ್ಚಿದೆ. ನಾನು ಮೇಕಪ್‌ಮ್ಯಾನ್. ಎಲ್ಲರನ್ನೂ ಮುಟ್ಟಿ ಮೇಕಪ್ ಮಾಡುತ್ತೇನೆ. ಅವರ ದೇಹದ ಎಲ್ಲಾ ಅಂಗಗಳನ್ನೂ ಸ್ಪರ್ಶಿಸುತ್ತೇನೆ. ಹೀಗಾಗಿ ನನ್ನಲ್ಲಿ ಆಸೆ ಹುಟ್ಟುತ್ತದೆ. ಕೆಲವರನ್ನು ಆಹ್ವಾನಿಸಿದಾಗ ನಿರಾಳರಾಗಿ ಬರುತ್ತಾರೆ. ಕೆಲವರು ಇಲ್ಲ; ಅದರಂತೆ ಅಂಕಿತಾಳಿಗೂ ಆಹ್ವಾನ ನೀಡಿದೆ. ಆಕೆ ತಿರಸ್ಕರಿಸಿದಳು. ನನಗೆ ತಿಳಿದ ಮಟ್ಟಿಗೆ ಎಷ್ಟೋ ಜನರಿಗೆ ಆಕೆ "ಲಿಫ್ಟ್" ನೀಡಿದ್ದಳು. ನನಗೆ ನೀಡಲು ಒಪ್ಪದಿದ್ದಾಗ ನನಗೆ ಕೋಪ ಬಂದಿತು. ನಾನು ಸಮಯ ಕಾಯುತ್ತಿದ್ದೆ. ನಿನ್ನೆ ಕೂಡಿ ಬಂದಿತು. ಆಕೆ ತನ್ನ ಮನೆಯಲ್ಲಿ ಒಬ್ಬಳೇ ಇದ್ದಾಳೆ ಎಂದು ತಿಳಿಯಿತು. ರಾತ್ರಿ ಹತ್ತರ ಸುಮಾರಿಗೆ ಬಂದೆ. ಗೂರ್ಖಾನಿಗೆ ಹಣಕೊಟ್ಟು, ಊರಿಂದ ಫೋನ್ ಬಂದಿತ್ತು, ಬೇಗ ಹೋಗು ಎಂದು ಸುಳ್ಳು ಹೇಳಿ ಓಡಿಸಿದೆ. ಅಂಕಿತಾ ನನ್ನನ್ನು ಬರಮಾಡಿಕೊಂಡು ಮಾತನಾಡಿದಳು. ನಾನು ಮತ್ತೆ ನನ್ನ ಆಶೆ ತೋಡಿಕೊಂಡೆ. ಪರಿಪರಿಯಿಂದ ಬೇಡಿಕೊಂಡೆ. ಆಕೆ ಒಪ್ಪಿಕೊಳ್ಳಲಿಲ್ಲ. ಬದಲಾಗಿ ಅಪಹಾಸ್ಯ ಮಾಡಿದಳು. "ನೀನು ಕುಂಟ. ನಿನ್ನಲ್ಲಿ ಪುರುಷತ್ವ ಇಲ್ಲ. ನನ್ನನ್ನು ಸುಖಪಡಿಸಲು ನಿನ್ನಿಂದ ಸಾಧ್ಯವೇ ಇಲ್ಲ" ಎಂದು ಹೀಯಾಳಿಸಿದಾಗ ನನಗೆ ತಡೆಯಲಿಕ್ಕಾಗಲಿಲ್ಲ. ನನ್ನ

ಪುರುಷತ್ವ ತೋರಿಸಿಯೇ ಬಿಡುತ್ತೇನೆ ಎಂದು ಆಹ್ವಾನ ನೀಡಿದೆ. ನಮ್ಮಿಬ್ಬರ ಮಧ್ಯೆ ಸೆಣಸಾಟ ನಡೆಯಿತು. ಬಲವಾಗಿ ಪ್ರತಿಭಟಿಸಿದಳು. ನನಗೂ "ಹುಚ್ಚು" ನೆತ್ತಿಗೇರಿತು. ಬಿಡಲೇ ಇಲ್ಲ, ಅವಳನ್ನು ಅನುಭವಿಸಿಬಿಟ್ಟೆ.'

ಒಂದೆರಡು ಕ್ಷಣ ಆತ ಸುಮ್ಮನಿದ್ದು ಮುಂದುವರಿಸಿದ :

'ಇಷ್ಟು ಮಾಡಿ ನಾನು ಹೊರಟು ಹೋಗಿದ್ದರೆ ಈ ದುರ್ಘಟನೆ ನಡೆಯುತ್ತಿರಲಿಲ್ಲ. ಮರಳಿ ಅವಳನ್ನು ಮಾತನಾಡಿಸಿದ್ದು ತಪ್ಪಾಯಿತು. ನನ್ನ ಪುರುಷತ್ವ ಎಷ್ಟಿದೆ ? ಎಂದು ತಿಳಿಯಿತೆ ಎಂದು ಕೇಳಿದೆ. ಅವಮಾನದಿಂದ ಕುದ್ದ ಆಕೆ ನಿನ್ನ ಮೇಲೆ ದೂರು ನೀಡುತ್ತೇನೆ. ರೇಪ್ ಮಾಡಿದ್ದಕ್ಕೆ ಶಿಕ್ಷೆ ಕೊಡಿಸುತ್ತೇನೆ ಎಂದು ಎಚ್ಚರಿಸಿದಳು. ನನಗೆ ಹೆದರಿಕೆ ಆಯಿತು. ನಾನು ಹೇಗಾದರೂ ಮಾಡಿ ಉಳಿದುಕೊಳ್ಳಬೇಕೆಂದು ಯೋಚಿಸಿದೆ. ಅದಕ್ಕಾಗಿ ಏನು ಬೇಕಾದರೂ ಮಾಡಲು ತೀರ್ಮಾನಿಸಿದೆ. ಕಣ್ಣಿಗೆ ಕೆಳಗೆ ಬಿದ್ದು ಒಡೆದ "ಸ್ಕಾಚ್" ಸೀಸೆ ಕಣ್ಣಿಗೆ ಬಿತ್ತು. ಅದನ್ನೆತ್ತಿ ಅವಳ ಮೇಲೆ ಪ್ರಹಾರ ಮಾಡಿದೆ. ಕತ್ತು, ಎದೆ, ಹೊಟ್ಟೆ ಎಲ್ಲೆಡೆ ಹತ್ತಾರು ಬಾರಿ ಚುಚ್ಚಿದೆ. ಇದೇ ಸಮಯಕ್ಕೆ ಆಕೆ ತಾನು ಉಳಿದುಕೊಳ್ಳಲು ಫ್ಲವರ್‌ಪಾಟ್‌ನಿಂದ ನನ್ನ ತಲೆಗೆ ಬಡಿದಳು. ನಾನು ಮತ್ತಷ್ಟು ಕೆರಳಿ ಹುಚ್ಚನಂತಾದೆ. ಅವಳನ್ನು ಮುಗಿಸಿದರಷ್ಟೇ ನಾನು ಯಾರ ಕೈಗೂ ಸಿಲುಕಲಾರೆ ಎಂದು ತಿಳಿದಿದ್ದೆ. ನನ್ನ ಸುಳಿವು ಬಿಡಲಿಲ್ಲ. ನನ್ನನ್ನು ಯಾರೂ ಕಂಡಿರಲಿಲ್ಲ. ಕೊಲೆ ಮಾಡಿದ ಸೀಸೆ ನಾನೇ ಎತ್ತಿಕೊಂಡು ಹೊರಬಂದೆ.'

ಆತ ಮೌನಿಯಾದ.

'ವೇಣುಗೋಪಾಲ.... ನೀನೆಂದೂ ಸಿಕ್ಕಿ ಹಾಕಿಕೊಳ್ಳುತ್ತಿರಲಿಲ್ಲ. ನಿನ್ನ ಬಗ್ಗೆ ಯಾರಿಗೂ ಸಂಶಯ ಬರಲಿಲ್ಲ. ನೀನು ಹೇಳಿದ ಎರಡು ಸುಳ್ಳು ಹಾಗೂ ನಿನ್ನ ಪಾದರಕ್ಷೆ ಮಾತನಾಡಿದ್ದು. ನಿನ್ನನ್ನು ಸಿಕ್ಕಿ ಹಾಕಿಸಿತು. ಎಲ್ಲಾ ಪ್ರಾರಬ್ಧ... ಅಲ್ಲವೇ...'

ವೇಣುಗೋಪಾಲ ಮುಖ ಕೆಳಗೆ ಹಾಕಿದ...

ಹೇಮಂತ ಒಮ್ಮೆ ಅವನೆಡೆ ಅನುಕಂಪದ ದೃಷ್ಟಿ ಬೀರಿ ಪ್ರತಾಪ್‌ನತ್ತ ನೋಡಿದ. ಪ್ರತಾಪ್ ಅವಾಕ್ಕಾಗಿ ಕುಳಿತಿದ್ದ. ಈ ಕೇಸು ಇಷ್ಟು ಬೇಗ ಪರಿಸಮಾಪ್ತಿ ಆಗುತ್ತದೆ ಎಂದು ತಿಳಿದಿರಲಿಲ್ಲ ಆತ.... ಪಾಪ ! ಆತನಿಗೇನು ಗೊತ್ತು ಹೇಮಂತನ ಪರಿಶೋಧನಾ ತಂತ್ರ ? .....

●

(೨೦೦೦)

# ಚಿಗುರು ಪಾಲು

# ಕುರುರಾಯನಿದನೆಲ್ಲ ಕಂಡು....

● ಜಿ. ಯೋಗೀಶ್

"ತೋರಿಸಿಕೊಡ್ತೇನ್ರೋ. ಬರೀ ವ್ಯವಹಾರಕ್ಕಾಗಲ್ಲ ಮತ್ತೆ, ಕಲೆಗಾಗಿ ಆನು ಮ್ಯಾಳ ಮಾಡ್ತೆ. ಹೊಸ ಪ್ರಸಂಗ ಒಂದೂ ಆಡ್ತ್ನಿಲ್ಲೆ ತ್ಯಾಟ್ ಎಲ್ಲಾ ಮಾರಾಟಾಗ್ಲಿ- ಮ್ಯಾಳ ಮಾಡ್ತೀನ್ರೋ, ನಿಂಗಳ್‌ದ ಯಾರದ್ದೂ ಸಪೋರ್ಟು ಬ್ಯಾಡ- ದಮ್ಮಿ ಕಾಸ್ ಬ್ಯಾಡ- ಎಲ್ಲಾ ಬರೀ ಮಾತಾಡ್ತ್ರಿ - ಅದೂ ಈ ಇಸ್ಪೀಟ್ ಆಡಕರೆ. ವರ್ಷದಲ್ಲಿ ಒಂದಾಟ ಕಂಟ್ರಾಕ್ಟ್ ಮಾಡಲು ಹರೀತಿಲ್ಲೆ ನಿಂಗಳ್ಹತ್ರ. ಕಂಟ್ರಾಕ್ಟ್ ಬ್ಯಾಡ- ರಾತ್ರಿ ಬೆಳಿಗ್ಗೆ ಕೂತ್ಕಂಡು ಆಟ ನೋಡಲು ಆಗ್ತಾ ? ನಿಮ್ಮಾತಿಗಿಷ್ಟು ಬೆಂಕಿಹಾಕ್ರೋ. ಹೋಗ್ತ್ರಿ - ಅದೂ ಯಾವ ಆಟಕ್ಕೆ ? ಅದೇ ಸರೀ ಹನ್ನೆರಡು ಘಂಟ್ಯಾದ್ ಕೂಡ್ಲೆ ಟೆಂಟ್ ಮ್ಯಾಲಿಂದ ಸರ್ಕಸ್‌ನವ ಬತ್ನಲಿ ಅದ್ಕೋ, ಇಲ್ಕೋ ಆ ಆಟಕ್ಕೆ ! ಇಲ್ಲಿ ಬರೀ ಮಾತಾಡ್ತ್ರಿ. ಹೆಚ್ಚಿಗೆ ಏನು ಆನು ಹೇಳ್ತ್ನಿಲ್ಲೆ. ನಾ ಮ್ಯಾಳ ಮಾಡಿ ಏನಾದರೂ ಸಾಧಿಸ್ದೆ ಹೇಳಿ ನಿಂಗೋ ಒಪ್ಕಳಿ, ಅಲ್ಲಿವರೆಗೆ ಈ ಕ್ಲಬ್‌ಗೆ ಕಾಲಿಡದಿಲ್ಲೆ. ಹಾಂಗಾಗ್ದಿದ್ರೆ- ನಿಂಗೋ ಹೇಳದ್ಹಂಗೇ ಕೇಳ್ತೆ. ಮಾರಿ ಗುಡಿ ಎದ್ರಿಗೆ ಮೂಗ್ ಹೊಸಿತೆ. ನೋಡಿ ಆನು ಮಾಡಿ ತೋರಿಸಿಯೇ ತೋರಿಸ್ತೆ..." ಇನ್ನೂ ಏನೇನೋ ಕಿರಿಚಿದ್ದೆ. ಈಗ ವಾಕ್ಯಗಳು ಸರಿಯಾಗಿ ನೆನಪಾಗ್ತಾ ಇಲ್ಲ. ಸಿರ್ಸಿಯ ನಮ್ಮ ಅಡ್ಡೆ - ಅದೇ ಐತಾಳ್ ವಕೀಲ್ರ ಮನೆ ಹತ್ರದ ಶ್ರೀವನದಲ್ಲಿ ಇಸ್ಪೀಟ್ ಆಟದ ಮಧ್ಯೆ ಕೂಗಾಡಿದ್ದೆ. ಐತಾಳ್ ವಕೀಲ್ರೂ, ಕಲ್ಲಳ್ಳಿ ವಿಷ್ಣು, ದ್ಯಾವನಹಿತ್ಲು ಅಣ್ಣು, ಗಾಯ್‌ತೊಂಡೆ, ದತ್ತು, ಹೆಗ್ಗರಣೆ ವಾಸು ಎಲ್ಲ ಸ್ನೇಹಿತ್ರೂ ಇದ್ರು. ಅದೇನೋ 'ಉತ್ತರ ಕನ್ನಡದ ಯಕ್ಷಗಾನ ಕಲೆ ನಶಿಸಿ ಹೋಗ್ತಿದೆ' ಅಂತ ಪಾಪ ಬಹಳ ನೊಂದು ಮಾತಾಡ್ತಾ ಇದ್ರು ! ನಂಗೆ, ಅವ್ರ ಮಾತಿನ ಮಧ್ಯೆ ಬಹಳ ಸಿಟ್ಟು ಬಂತು. ಬರೀ ಮಾತಾಡಿದ್ರೆ ಆಗೋ ಕೆಲ್ಸ ಅಲ್ಲ ಇದು ಅಂತ ಕೂಗಾಡಿದ್ದೆ. ಪಂಚೆ ತುದಿ ಎತ್ತಿ ಹಿಡಿದು ಹೊರಗೆ ಬಂದಿದ್ದೆ.

ಅದು ಸುಮಾರು ಮೂವತ್ತು ಮೂವತ್ತೈದು ವರ್ಷದ ಹಿಂದಿನ ಘಟನೆ. ಹೌದು, ಆಮೇಲೆ ಅದೆಷ್ಟೋ ಸರ್ತಿ ಹಿಂದಕ್ಕೆ ಹೋಗಲೇ ಅನ್ನಿಸಿತ್ತು. ಇಸ್ಪೀಟ್ ಕ್ಲಬ್‌ನ ಘಟನೆ, ನೆಪ ಮಾತ್ರ ಆಗಿತ್ತು. ಬಹುಶಃ ನನ್ನ ಒಳಗಿನ ಸರ್ವಸ್ವವೂ ಈ ಸಂಘಟನೆಯನ್ನು ಬಯಸಿತ್ತು. ಆದ್ರೆ ಕಂಟ್ರಾಕ್ಟರ್ - ಕಲಾವಿದ ಮೇಳದ ಯಜಮಾನನಾದ ನನ್ನ- ನಡುವಣ ಸಂಬಂಧದ

ಅಸಮತೋಲನ ಎಷ್ಟೋ ಸರ್ತಿ ತಲೆ ಚಿಟ್ಟು ತರುತ್ತಿತ್ತು. ಆದ್ರೂ ಮಾಡುವ ಹಠವಿತ್ತು. ಜೊತೆಗೆ ಆಗಾಗ ಭಾಗವತಿಕೆ ಮಾಡುತ್ತಿದ್ದೆ. ಅಜ್ಜ ಆಗಾಗ ಮದ್ದಳೆ ಹೊಡೀತಿದ್ದನಂತೆ. ನಮ್ಮ ದೇವಸ್ಥಾನದ ಸಭಾಹಿತ್ರ ಹತ್ರ ಮೇಳ ಮಾಡುವ ನಿರ್ಧಾರ ತಿಳಿಸಿದೆ. ಜಾತಕ ಎಲ್ಲ ನೋಡಿ 'ಶ್ರೀ ಕ್ಷೇತ್ರಪಾಲ ಕೃಪಾಪೋಷಿತ ಯಕ್ಷಗಾನ ಮಂಡಳಿ' ಅಂತ ಹೆಸರಿಟ್ಟರು. ನಾನೇ ಸ್ವತಃ ಎಲ್ಲ ಕಲಾವಿದರ ಮನೆಗೆ ಹೋಗಿ ಮಾತಾಡಿಸಿ ಬಂದೆ. ಕುಮಟಾ ಮೇಳ ನಿಂತಿದ್ದರಿಂದ ಸ್ವಲ್ಪ ಕಲಾವಿದರು ಆರಾಮಿದ್ರು. ಕಲಗಾರು ನಾರಾಯಣ, ಹೊನ್ನಾವರದ ಯಾಜಿ, ಪುರಪ್ಪೆ ಮನೆ ಶೀನ, ಗುಡಿಬೈಲು ದತ್ತು, ಹಳೆಮಕ್ಕಿರಾಮ ಮೂಡ್ಕಣಿ ಸತ್ಯ ಎಲ್ರಿಗೂ ವೀಳ್ಯ ಕೊಟ್ಟು ನಿಕ್ಕಿ ಮಾಡಿ ಬಂದೆ. ದಕ್ಷಿಣ ಕನ್ನಡದ ಕಲಾವಿದ್ರನ್ನೂ ಕರೆದೆ. ಮಳವಳ್ಳಿ ವೆಂಕಟೇಶ, ಬಣ್ಣದ ಗಾಣಿಗ ಇಬ್ರೂ ಬಂದ್ರು. ಸ್ತ್ರೀ ವೇಷದ್ದು ಆಗಲೂ ತೊಂದ್ರೆ ಇತ್ತು. ನಮ್ಮ ಸಿದ್ದಾಪುರ ವಿಷ್ಣು ಜೊತೆಗೆ ದಕ್ಷಿಣ ಕನ್ನಡದ ಮರವಂತೆ ನಾಗೇಶ, ಉಪ್ಪುಂದ ಕೃಷ್ಣರನ್ನು ಹಾಕಿಕೊಂಡೆ. ಹಾಸ್ಯಕ್ಕೆ ಹಳೆಗದ್ದೆ ತಿಮ್ಮ, ಪಾಪ ವಯಸ್ಸಾಗಿತ್ತು ಆದ್ರೂ ಬಂದ. ಏನೋ ನನ್ನ ಉದ್ದೇಶ ತಿಳಿದೋ ಅಥ್ವಾ ಆದದ್ದಾಗಲಿ, ಮನೇಲಿ ಕೂರುವ ಬದಲು ಒಂದು ತಿರುಗಾಟ ಅಂತನೋ ಕಲಾವಿದ್ರು ಬಂದ್ರು. ಅಲ್ಲಾಪುರ ನರಸಿಂಹಭಟ್ರು ಪ್ರಧಾನ ಭಾಗವತ್ರು. ಕೊಳಗದ್ದೆ ಗೋವಿಂದ ಮೃದಂಗಕ್ಕೆ ಬಂದ. ಇಡಗುಂಜಿ ಗಜಾನನ ಚಂಡೆಗೆ ಬಂದ. ಒಟ್ಟೂ ಜಿಲ್ಲೆಯ ಅನೇಕ ಕಲಾವಿದ್ರಿಗೆ ಅವಕಾಶ ಕೊಟ್ಟಿದ್ದೆ- ಅವ್ರೂ ಸಹಕರಿಸಿದ್ರು.

ಅಂತೂ ಸೇವೆ ಆಟ ಮಾಡಿ ಮ್ಯಾಳ ಹೊರಡಿಸಿದ್ದೆ. ಮೊದಲ ವರ್ಷ ಚಾಲ್ತಿಯಲ್ಲಿದ್ದ ಹಳೇ ಪ್ರಸಂಗನೇ ಆಡಿದ್ದು. ಹೊಸರೀತಿ ಏನೂ ಮಾಡ್ಲಿಲ್ಲ. ಮಾಮೂಲಿ ಕೋಡಂಗಿ ಬಾಲಗೋಪಾಲ ವೇಷ, ಪೀಠಿಕೆ ಸ್ತ್ರೀವೇಷ, ಒಡ್ಡೋಲಗ- ಇತ್ಯಾದಿ ಹಳೇ ರೀತೀನೇ ಆಡಿದ್ವಿ. ಕರ್ಕಿಮೇಳ, ಕೆರೆಮನೆ ಮೇಳದ ರೀತೀನೇ ಆಟ ಆಗ್ತಿತ್ತು. ಖುರ್ಚಿ, ಟೆಂಟ್ ಎಲ್ಲ ಕೆರೆಮನೆ ಮೇಳದ ಥರ ಮಾಡಿಸಿದೆ. ಪ್ರದರ್ಶನಗಳು ಕೆರೆಮನೆ ಮೇಳದ ಅನುಕರಣೆ ಅಂತ ಪೇಪರಿನವ್ರು ಬರೆದ್ರು. ಇದೇ ಕಾರಣ ಇರಬೇಕು. ಪ್ರೇಕ್ಷಕರು ಕಡಿಮೆ ಆದ್ರು. ಮುಂದಿನ ಒಂದೆರಡು ವರ್ಷಗಳಲ್ಲಿ ಚೇತರಿಸಿಕೊಂಡೆ. ಕೆಲವು ಹಳೇ ಪ್ರಸಂಗಗಳನ್ನು ಆರಿಸಿದೆ. ಜಾಂಬವತಿ ಕಲ್ಯಾಣ, ಅತಿಕಾಯಕಾಳಗ ಇತ್ಯಾದಿ ಮರೆತುಹೋದ ಪ್ರಸಂಗಗಳನ್ನು ಆಡಿಸಿದೆ. ಮುಂದಿನ ವರ್ಷಗಳಲ್ಲಿ ಹೊಸ ಪ್ರಸಂಗಕರ್ತರು ಬರೆದ ಬಿಲ್ಲಹಬ್ಬ, ಮಾಗಧ ಗರ್ವಭಂಗ ಮುಂತಾದ ಪುರಾಣ ಪ್ರಸಂಗಗಳನ್ನು ಆಯ್ಕೆ ಮಾಡಿದೆ.

ಹತ್ತೋ ಹನ್ನೆರಡೋ ವರ್ಷದಲ್ಲಿರಬೇಕು, ಮೇಳದ ಕಲಾವಿದರಾದ ಹಳೇಮಕ್ಕಿ ರಾಮಂಗೆ ಮತ್ತು ಮಾಡ್ಕಣಿ ಸತ್ಯಂಗೆ ರಾಜ್ಯಪ್ರಶಸ್ತಿ ಬಂತು. ಒಂದು ಕಾರ್ಯಕ್ರಮ ಮಾಡಿಸಿ, ಅವ್ರಿಗೆ ಸನ್ಮಾನ ಮಾಡಿದೆವು. ಎಲ್ಲಾ ಕಲಾವಿದರಿಗೂ ಪಾಯ್ಸದ ಊಟ ಹಾಕಿಸಿದೆ. ಆದ್ರೆ ಮುಂದಿನ ಒಂದೆರಡು ವರ್ಷದಲ್ಲಿ ಅವ್ರು ಬೇರೆ ಮೇಳಕ್ಕೆ ಹೋದ್ರು. ವಯ್ಯಾರದ ಸ್ತ್ರೀ

ಪಾತ್ರಗಳನ್ನು ಮಾಡುತ್ತಿದ್ದ ಮರವಂತೆ ನಾಗೇಶ, ಹೊಸ ಪ್ರಸಂಗಗಳ ಆಸೆಯಿಂದ ಬೇರೆ ಮೇಳಕ್ಕೆ ಹೋದ. ಸ್ತ್ರೀವೇಷದ ತೊಂದ್ರೆ ಹೆಚ್ಚಾದಾಗ ಗದಾಯುದ್ಧ, ಕೃಷ್ಣ ಸಂಧಾನ, ಕರ್ಣಪರ್ವ ಹೆಚ್ಚು ಆಕರ್ಷಕವಾಗಿ ಬಂದದ್ದು ನನ್ನ ಪುಣ್ಯ. ಒಂದು ವರ್ಷ ಅಂತೂ ಗದಾಯುದ್ಧ ಅತೀ ಹೆಚ್ಚು ಪ್ರದರ್ಶನ ಕಾಣ್ತು. ಪುರಪ್ಪೆ ಮನೆ ಶೀನ ಕೌರವನನ್ನು ತುಂಬಾ ಚೆನ್ನಾಗಿ ಮಾಡ್ತಿದ್ದ. ಮಾಗಧ ಗರ್ವಭಂಗ ಕೂಡ ಚೆನ್ನಾಗಿ ಬರ್‍ತಿತ್ತು.

ಹದ್ನೇಳ್ನೇ ವರ್ಷದಲ್ಲೋ ಹತ್ತೊಂಭತ್ನೇ ವರ್ಷದಲ್ಲೋ ಕಲಾವಿದ್ರ ಹೊಸ ತೊಂದ್ರೆ ಅನುಭವಿಸಿದೆ. ವ್ಯಾವಹಾರಿಕ ತೊಂದ್ರೆ ಆದ್ರೆ ಅನುಭವಿಸಬಹುದು. ಈ ಮಾನಸಿಕ ತೊಂದ್ರೆ ಅನುಭವಿಸುವುದು ಕಷ್ಟ. ಸಾಗರದ್ದೋ, ಕ್ಯಾದಗಿ ಕ್ಯಾಂಪ್‌ನಲ್ಲೋ- ಮೇಳದ ಮುಖ್ಯ ಕಲಾವಿದನೊಬ್ಬ ಸೂಳೆಮನೆಗೆ ಹೋಗಿ ದೊಡ್ಡ ಗಲಾಟೆ ಆಯ್ತು. ಪೊಲೀಸ್ ಕೇಸ್ ಕೂಡ ಆಯ್ತು. ಐತಾಳ ವಕೀಲ್ರು ನೆರವಾದ್ರು. ಆಮೇಲೆ ಹಾಸ್ಯದ ತಿಮ್ಮ ಸತ್ತೋದ. ಹೊಸದಾಗಿ ಬಂದ ಗೀಜಗಾರು ವಿಷ್ಣು ಬಹಳ ಕುಡೀತಿದ್ದ. ತಿರುಗಾಟದ ಮಧ್ಯೆ ನೇಣ್ ಹಾಕಿಕೊಂಡು ಸತ್ತ. ಆಮೇಲೆ ಬಂದ ಹೆರಂಜಾಲು ಮಾಧವ ಹೆಸರಾಂತ ಹಾಸ್ಯಗಾರನಾದ. ಹಾಸ್ಯಕ್ಕೇ ಹೊಸ ಆಯಾಮ ತಂದ. ಬಿಲ್ಲಹಬ್ಬ ಮತ್ತು ಕಂಸವಧೆಯ ರಾಜಾರಜಕನ ಪಾತ್ರ ತುಂಬಾ ಚೆನ್ನಾಗಿ ಮಾಡ್ತಿದ್ದ. ಚಂದ್ರಾವಳಿಯ ಚಂದಗೋಪ, ಗದಾಯುದ್ಧದ ವನಪಾಲಕ ಚೆನ್ನಾಗಾಗ್ತಾ ಇತ್ತು. ಒಟ್ಟಾರೇ ನನ್ನ ಆಸೆಯಂತೇ ಮೇಳ ನಡೀತಾ ಇತ್ತು.

ಮೇಳದ ಇಪ್ಪತ್ತೈದನೇ ವರ್ಷದಲ್ಲಿ ಸಂಭ್ರಮವೋ ಸಂಭ್ರಮ. ಒಂದು ಒಳ್ಳೆ ಆಚರಣೆ ನಡೆಸುವ ಸಂದರ್ಭ. ಆ ಕಲ್ಲಳ್ಳಿ ವಿಷ್ಣು, ದತ್ತು, ಗಾಯತೊಂಡೆ ಎಲ್ಲ ಸೇರಿ ದೊಡ್ಡ ಕಾರ್ಯಕ್ರಮ ಆಡಿದ್ರು. ನನ್ನಾಸೆಯಂತೇ ಕಲೆಗಾಗಿ ಮೇಳ ಮಾಡಿದ್ದೆನಲ್ಲ. ಜೊತೆಗೆ ನನ್ನ ಸ್ನೇಹಿತ್ರಿಗೂ ನನ್ನ ಅಭಿನಂದಿಸೋ ಒಂದು ಒಳ್ಳೆ ಅವಕಾಶ ನೋಡಿ ! ನನಗೂ ನನ್ನ ಕುಟುಂಬಕ್ಕೂ, ನಮ್ಮ ಕಲಾವಿದರೆಲ್ಲರಿಗೂ ಸನ್ಮಾನ. ಎಲ್ಲರಿಗೂ, ಕೆಲಸದಾಳುಗಳಿಗೂ ನೆನಪಿನ ಕಾಣಿಕೆ. ಒಂದು ಒಳ್ಳೆ ಸಮಾರಂಭ. ಎಲ್ಲರೂ ಹೊಗಳಿ ಭಾಷಣ ಮಾಡಿದ್ದೇ ಮಾಡಿದ್ದು. ಆ ಇಸ್ಪೀಟ್ ಕ್ಲಬ್‌ನ ಘಟನೇನು ನೆನಪು ಮಾಡಿಕೊಂಡು ಐತಾಳ ವಕೀಲ್ರು ಮಾತಾಡಿದ್ರು.

ಆಮೇಲೆ ಮೇಳ ನಿಲ್ಲಿಸಬಹುದಿತ್ತು. ಆ ಸಮಾರಂಭದ ರಾತ್ರಿ ಹೆಂಡತಿ ಸಾವಿತ್ರಿ ಹತ್ರ ಕೇಳಿದ್ದೆ- "ಹೋದನೇ, ನಾ ಮ್ಯಾಳ ನಿಲ್ಲಿಸ್ಲೇನೇ ?" ಸಾತು ಹೇಳಿದ್ದಳು- "ನೋಡಿ ನಿಂಗೋಕೆ ಬೇಕಾದ್ರೆ ಮುಂದ್ವರಿಸಿ. ನೀವ್ ಮೇಳ ಮಾಡಿದ್ರಿ ಹೇಳಿ ಮನೆ ಬಿಟ್ಟೋರಲ್ಲ. ಮೇಳದವ್ರೆಲ್ಲಾ ಕಲಾವಿದರೂ - ಯಜಮಾನ್ರೂ ಎಲ್ಲ ಕಚ್ಚೆ ಸಡ್‌ಲಿದ್ದೋರು ಹೇಳ್ತೋ. ನೀವು ಯಾವ್ದೇ ವಿಷಯದಲ್ಲಿ ಹಂಗಾಗ್ದೆ ಇದ್ದದ್ದು ನನ್ನ ಪುಣ್ಯ. ಸಾಲಗೀಲನೂ ಹೆಚ್ಚು ಮಾಡ್ದೆ - ಸಾಂಗವಾಗಿ ಎಲ್ಲಾ ನೋಡ್ಕತ್ರಿ. ನಿಂಗೋಕೆ ಬೇಕು ಹೇಳಾದ್ರೆ ಮುಂದ್ವರಿಸಿ" ಅಂದಳು. ಆಗ್ಲೂ ಮುಂದ್ವರಿಸಿದ್ದೆ.

ಈಗೇನಾಯಿತು ? ಮತ್ತ್ಯಾಕೆ ಇದನ್ನೆಲ್ಲಾ, ಯಾಕೆ ನೆನಪಿಸಿಕೊಳ್ತಾ ಇದ್ದೇನೆ. ಈಗ ಆಟದ ಸೀಸನ್ ಪ್ರಾರಂಭವಾದರೆ ಸಾಕು, ಇದ್ದೊಬ್ಬ ಮಗ ರಾಮಚಂದ್ರಂಗೂ ಹುರುಪು ಬರ್ತಿತ್ತು. ಕಲಾವಿದರ ಪತ್ರ ವ್ಯವಹಾರ, ಪೇಪರ್ ಜಾಹೀರಾತು ಎಲ್ಲಾ ನೋಡಿಕೊಳ್ತಿದ್ದ. ಹ್ಯಾಂಡ್‌ಬಿಲ್, ಷೋಕಾರ್ಡ್, ವಾಲ್‌ಪೋಸ್ಟರ್ ಎಲ್ಲ ಹೊಸರೀತಿ ಮಾಡಿಸುತ್ತಿದ್ದ. ಮೇಳದ ಲೆಕ್ಕದಲ್ಲೂ ಸಹಕರಿಸುತ್ತಿದ್ದ. ಆಟದ ವ್ಯವಸ್ಥೆಯಲ್ಲಿ ತಲುಬು ಜಾಸ್ತಿಯಾಗ್ತಾ ಇತ್ತು. ಕಾಲೇಜನ್ನೂ ಬಿಟ್ಟ. ಸ್ವತಃ ಕುಣೇದೇ ಇದ್ರೂ, ಮೃದಂಗ ಬಾರಿಸ್ತಿದ್ದ. ಪೇಪರಿನಲ್ಲಿ, ಅಲ್ಲಿ ಇಲ್ಲಿ ಓದಿದ್ದ ಯಕ್ಷಗಾನ ವಿಮರ್ಶಕರ ಅಭಿಪ್ರಾಯಗಳನ್ನು ಗಮನಿಸಿ, ಆಲೋಚಿಸುತ್ತಿದ್ದ. ಇಂಥ ಮಗ ಮೊನ್ನೆ ಹೇಳಿದ್ದ, ಅಲ್ಲ ಕೇಳಿದ್ದ - "ಅಪ್ಪಯ್ಯ ಈ ಮೇಳದ ವ್ಯವಹಾರ ಸಾಕು. ನಿಂಗೂ ಸುಸ್ತ್ಯಾದು. ಮೇಳ ನಡೆಯದೂ ಕಷ್ಟ. ಮೇಳ ಮಾರಿ ಏನಾದ್ರೂ ಮಾಡಿ ನಂಗೆ ದುಡ್ಡು ಕೊಡು. ನಾ ಒಂದು ಡಿಸ್ಟಿಲರಿ ಮಾಡಕು. ಈ ಗೇರಣ್ಣೆಲ್ಲ ಭಟ್ಟಿ ಇಳಿಸಿ ಹೆಂಡ ಮಾಡ್ಲಕ್ಕು. ಭಟ್ಟಿ ಕೇಂದ್ರಕ್ಕೆ ಹಣ ಕೊಡು" ಇಷ್ಟೇ. ಆದ್ರೆ ನನ್ನೆದೆ ಅಲ್ಲಾಡಿತ್ತು. ಯಾಣದ ಕಪ್ಪು ಕಲ್ಲು ನನ್ನೆದೆ ಆಗಬಾರದೇ ಅನ್ನಿಸಿತ್ತು.

ಈಗ ಹಕ್ಕೆಹೊಳ್ಳಿ ಮೇಲೆ ಮಲಗಿ ಯೋಚಿಸುತ್ತಿದ್ದೇನೆ. ಅಲ್ಲ ಸಾಂಪ್ರದಾಯಿಕ ಕಲೆ ಕುರಿತು ಯೋಚಿಸುತ್ತಾ ಬಂದವನು ನಾನು. ನನ್ನ ಮನೆಯಲ್ಲೇ ಕವಲಾಯಿತಲ್ಲಾ ! ಇತ್ತೀಚೆಗೆ ಯಾವುದೋ ಏಡ್ಸ್ ಮೇಲೆ, ತಾಯಿನೇ ಮದುವೆಯಾಗೋ ಮಗನ ಮೇಲೆ ಪ್ರಸಂಗ ಕೃತಿಗಳು ಬಂದಂತೆ ಈ ಜನರೇಶನ್ ಗ್ಯಾಪ್ ಮೇಲೂ ಒಂದು ಪ್ರಸಂಗ ಬಂದಿದೆಯಂತೆ. ಇದೇ ನನ್ನ ಸ್ಥಿತಿ ಆ ಪ್ರಸಂಗಕ್ಕೆ ವಸ್ತುವಾಗಬಹುದಿತ್ತು ! ಈ ಸ್ಥಿತೀನೂ ನನ್ನ ಕಣ್ಣಮುಂದೆ ಯಕ್ಷಗಾನ ಪ್ರಸಂಗದಂತೆ ಕಟ್ಟಿದೆ. ನಾನು ಗದಾಯುದ್ಧದ ಕೌರವ- ದಿ. ಶಿವರಾಮ ಹೆಗಡೆ ಕೌರವನ ಥರ- ಕುರುಕ್ಷೇತ್ರ ರಣಕ್ಷೇತ್ರದಲ್ಲಿ ಬಿದ್ದ ಹೆಣಗಳ ರಾಶಿ ಮಧ್ಯೆ ನಾನು. ನನ್ನ ಮಗನದ್ದೂ ಒಂಥರಾ ಹೆಣ ! ಹೆಣ ದಾಟುತ್ತ ಬಂದ ನನ್ನ ನೋಡಾ, ಭಾಗವತ್ರು ಪದ ಶುರು ಮಾಡಿದ್ರು. 'ಕುರುರಾಯನಿದನೆಲ್ಲ ಕಂಡು, ಮರುಗಿ, ಸಂತಾಪದಿ ತನ್ನಯ ಭಾಗ್ಯದ ವಿಧಿಯೆನುತ....'

●

# ಅಂಬಿಗ

● **ಅಂಜನಾ ಹೆಗಡೆ** ದೊಡ್ಡಮನೆ

ಮಕ್ಕಳಿರಾ ಮಕ್ಕಳಿರಾ
ಮಕ್ಕಿಗದ್ದೆಗೆ ಹೋಗಬ್ಯಾಡಿ
ಹಾವು ಚೇಳು ಕಚ್ಚಾವೆ ...

ಕೆಟ್ಟ ಕನಸು ಕಂಡಂತೆ ಬೆಚ್ಚಿ ಎಚ್ಚರವಾಗಿತ್ತು. ಅಮ್ಮನೇ ಬೇಕೆಂದು ಹಠ ಮಾಡುವಾಗೆಲ್ಲ ಅಪ್ಪ ತೆಕ್ಕೆಗೆಳೆದುಕೊಂಡು ಹೇಳುತ್ತಿದ್ದ ಪದ್ಯ .. ಬದುಕಿನ ಹೊಯ್ದಾಟಗಳಲ್ಲಿ ಮರೆತೇಹೋಗಿತ್ತು. ಇವತ್ತು ಕನಸಿನಲ್ಲಿ ಅದೇ ಪದ್ಯ ತೀರಾ ಹಳೆಯ ಹತ್ತಿರದ ಮುಖವೊಂದು ಕಾಲುದಾರಿಯಲ್ಲಿ ಎದುರಾದಂತೆ. ಮನಸ್ಸಿಲ್ಲದಿದ್ದರೂ ಕಣ್ಣು ತಪ್ಪಿಸುವಂತಿಲ್ಲ. ಹೊರಗೆ ಜೋರಾಗಿ ಮಳೆ ಹೊಯ್ಯುವಾಗೆಲ್ಲ ಬೆಚ್ಚಗಿನ ಹಾಸಿಗೆ ನನ್ನ ಸಂಗಾತಿ. ಯಾವತ್ತಿನ ಹಾಗೆ ಇವತ್ತೂ ಕಿಟಕಿಗಳನ್ನೆಲ್ಲ ಮುಚ್ಚಿ ಹಾಸಿಗೆ ಸೇರಿದ್ದಷ್ಟೇ ನೆನಪು. ಪದ್ಯದ ಕನಸು ಬಿದ್ದು ಎಚ್ಚರವಾಗುವಷ್ಟರಲ್ಲಿ ಬೆಚ್ಚನೆಯ ಬಿಸಿಲು ಜಗದ ಎಲ್ಲ ಅಸಂಬದ್ಧಗಳಿಗೆ ಸಾಕ್ಷಿಯಾದಂತೆ. ಪದ್ಯ ಮಾತ್ರ ಕಿವಿಗೆ ಬಡಿಯುತ್ತಲೇ ಇತ್ತು ಅಪ್ಪನೇ ಬಂದು ಹೇಳಿಹೋದಂತೆ.

ಮಳೆಯ ಪಿರಿಪಿರಿ ಮುಗಿದಂತೆಲ್ಲ ಎಲ್ಲ ತಮ್ಮ ಕೆಲಸಕ್ಕೆ ಹೋಗಿಯಾಗಿದೆ. ಮನೆತುಂಬ ವಿಚಿತ್ರ ಮೌನ. ಪಕ್ಕದ ಆಚಾರಿ ಮನೆಯಿಂದ ಶೃತಿ ಅಳುವ ಸದ್ದು ಅಪ್ಪನ ಪದ್ಯವನ್ನು ಮೀರಿಸುವಂತಿದೆ. ಈಗಷ್ಟೇ ನಾಲ್ಕನೇ ಕ್ಲಾಸಿನ ಶೃತಿಗೆ ಇಬ್ಬರು ತಂಗಿಯರು ಮೇಲೊಬ್ಬ ತಮ್ಮ. ಮಕ್ಕಳು ತನಗೆ ಸಂಬಂಧಪಟ್ಟವರಲ್ಲ ಎನ್ನುವಂತೆ ವರ್ತಿಸುವ ಕುಡುಕ ಅಪ್ಪ. ಮೂವತ್ತನ್ನೂ ಕಾಣದ ತಾಯಿಗೆ ತನಗೆ ಏನೂ ಉಳಿದಿಲ್ಲವೆಂಬ ದಿವ್ಯ ನಿರ್ಲಕ್ಷ್ಯ ಬದುಕಿನೆಡೆಗೆ. ಅಳುವಿಗೆ ನಗುವಿಗೆ ವ್ಯತ್ಯಾಸವನ್ನೇ ಕಾಣದ ಆ ಪುಟ್ಟ ಜೀವಗಳು ಎಣ್ಣೆಯೂ ಬೇಕಿಲ್ಲದ ದೀಪಗಳೆನಿಸುತ್ತವೆ ನನಗೆ. ಮಾಸ್ತರರು ತರಹೇಳಿದ ಜೋಡುಗೆರೆ ಪಟ್ಟಿಗೋ, ಪಕ್ಕದಮನೆ ಶಾಲಿನಿಯಂಥದೇ ಕೆಂಪು ರಿಬ್ಬನ್ನಿಗೋ, ಚಪ್ಪಲಿಯಿಲ್ಲದ ಕಾಲಿಗೆ ಚುಚ್ಚಿಕೊಂಡ ಮುಳ್ಳು ಕೊಡುತ್ತಿರುವ ನೋವಿಗೋ ಅಳುತ್ತಿರಬಹುದು ಶೃತಿ, ತಿಳಿಯದೇ ನೀರು ತುಂಬಿಕೊಂಡಿತ್ತು ನನ್ನ ಕಣ್ಣತುಂಬ. "ಬೇರೆಯವರಿಗಾಗಿ ಅಳುವ ನಿನ್ನ ಈ ವಿಚಿತ್ರ ಸ್ವಭಾವವನ್ನು ಸರಿಪಡಿಸಿಕೊಳ್ಳುವವರೆಗೂ ನೀ ಉದ್ಧಾರವಾಗೋದಿಲ್ಲ ನೋಡು" ಖಾರವಾಗಿಯೇ ಹೇಳುತ್ತಾನೆ

ವರ್ಧನ ರಾಜಕುಮಾರ. ಮಗನಂತೆ ಹೊಟ್ಟೆಗೆ ಹಾಕಿಕೊಂಡಿದ್ದೇನೆ ನಾನವನನ್ನ. ಆತ ಕಣ್ಣು ಕೆಂಪಗೆ ಮಾಡಿಕೊಂಡು ಬಯ್ಯುತ್ತಿದ್ದರೆ ನಾನು ಆತನ ಸುಂದರವಾದ ಹೆಸರಿನ ಬಗ್ಗೆಯೋ, ಚಂದವದ ಕಣ್ಣುಗಳ ಕುರಿತೋ ಯೋಚಿಸುತ್ತಿರುತ್ತೇನೆ ಯಾವುದೂ ಸಂಬಂಧಪಟ್ಟೇ ಇಲ್ಲವೆನ್ನುವಂತೆ. ಒಟ್ಟಿನಲ್ಲಿ ಎಲ್ಲ ಅಪ್ಪಂದಿರ ಪುರುಷ ಜಾತಿಗೆ ಆತನೂ ಸೇರಿಹೋಗುವುದು ಬೇಕಿಲ್ಲ ನನಗೆ.

ಈ ಅಪ್ಪಂದಿರೆಲ್ಲ ಹುಟ್ಟಿಸಿದ್ದಕ್ಕಷ್ಟೇ ಸಾಕ್ಷಿಯಾಗಿಬಿಡುವ ಪರಿಗೆ ಆಶ್ಚರ್ಯವಿದೆ ನನಗೆ. "ಅಪ್ಪನ ಮಗಳು" ಅಂತಲೇ ಎಲ್ಲ ಕರೆಯುತ್ತಿದ್ದರಂತೆ ನನ್ನ. ಅದೇ ರೂಪ, ಅದೇ ಬಣ್ಣ, ಬೆಳೆಯುತ್ತ ತಾನೂ ಕಡಿಮೆ ಇಲ್ಲವೆನ್ನುವಂತೆ ಬೆಳೆದುಕೊಂಡ ಅದೇ ಹಠದ ಸ್ವಭಾವ, ನನ್ನನ್ನು ಮಡಿಲಲ್ಲಿ ಮಲಗಿಸಿಕೊಂಡ ಅಮ್ಮನ ಕಣ್ಣುಗಳಲ್ಲಿ ಜಗತ್ತಿನ ಎಲ್ಲ ಸಂತೋಷಗಳನ್ನು ಅಡಗಿಸಿಕೊಂಡ ಭಾವನೆ ಸುಳಿಯುತ್ತಿದ್ದುದ್ದನ್ನು ನಾನು ಹಳೆಯ ಫೋಟೋಗಳಲ್ಲಿ ನೋಡಿದ್ದೇನೆ. ಈಗೀಗ ಯಾವುದೂ ಇಲ್ಲವಾಗಿದೆ. ಅಪ್ಪನ ವಾತ್ಸಲ್ಯ, ಅಮ್ಮನ ಸಂತೋಷ ಎಲ್ಲ ಬೆಳಗಾಗುವ ಮುನ್ನವೇ ಮರೆತುಹೋಗುವ ಕನಸಿನಂತಾಗಿ ಹೋಗಿವೆ. ಎಲ್ಲದಕ್ಕೂ ಕೊನೆಯಿದೆಯೆಂಬಂತೆ ನಾನು ಕೂಡಾ ಒಣಗಿಹೋಗಿದ್ದೇನೆ ಒಳಗಿಂದೊಳಗೆ. ಆದರೂ ಕಣ್ಣುಗಳು ಮಾತ್ರ ಮಾತುಮಾತಿಗೆ ನೀರು ಸುರಿಸುವುದನ್ನು ಬಿಟ್ಟಿಲ್ಲ. ಸಂತೋಷ, ದುಃಖ, ವ್ಯಂಗ್ಯ ಪಕ್ಷಪಾತವಿಲ್ಲದೇ ತಮ್ಮ ಪಾಡಿಗೆ ನೀರು ಸುರಿಸುವ ಕಣ್ಣುಗಳೆಂದರೆ ಭಾರೀ ಪ್ರೀತಿ ನನಗೆ. ವರ್ಧನ ಸಿಕ್ಕಾಗಲೆಲ್ಲ ಆತನ ಕಣ್ಣುಗಳೊಂದಿಗೆ ಆಟವಾಡುತ್ತಲೋ, ರೆಪ್ಪೆಗಳ ಕೂದಲುಗಳನ್ನು ಕೀಳುತ್ತಲೋ ಮಗುವಿನಂತಾಡುತ್ತೇನೆ. ಆದರೂ ಆತ ಅಪ್ಪನಾಗುವುದು ಬೇಕಿಲ್ಲ ನನಗೆ.

ಹತ್ತು ವರ್ಷಗಳ ಹಿಂದೆ ಹೀಗಿರಲಿಲ್ಲ ಅಪ್ಪ. ಅಮ್ಮ ತಿಂಗಳಿಗೊಮ್ಮೆ ಮೂಲೆಹಿಡಿದಾಗೆಲ್ಲ ನನ್ನ ಉದ್ದನೆಯ ಕೂದಲನ್ನು ಬಾಚುತ್ತಿದ್ದ; ಬಿಸಿಬಿಸಿ ದೋಸೆಯೆರೆದು ತಿನ್ನಿಸುತ್ತಿದ್ದ; ಅವನ ಕೆಂಪು ಚಾದರದಲ್ಲಿ ನನ್ನನ್ನು ಹೊಕ್ಕಿಸಿಕೊಂಡು ಕಥೆಯನ್ನೋ, ಪದ್ಯವನ್ನೋ ಹೇಳಿ ಮಲಗಿಸುತ್ತಿದ್ದ; ವಿಪರೀತ ಮುಂಗೋಪಿ. ಕೈ ಅಚ್ಚಾಗುವಂತೆ ಹೊಡೆಯುತ್ತಲೂ ಇದ್ದ. ಒಟ್ಟಿನಲ್ಲಿ ಅಪ್ಪನ ಛಾಪು ಎಲ್ಲೆಲ್ಲೂ ಇತ್ತು. ನಾ ದೊಡ್ಡವರ ಸಾಲಿಗೆ ಸೇರಿಹೋದಾಗ ಅಪ್ಪನೂ ಅತ್ತಿದ್ದ ನನ್ನೊಂದಿಗೆ. ಈಗ ಆ ಕಥೆ, ಪದ್ಯ, ಅಳು ಯಾವುದೂ ಇಲ್ಲ. ಅಪ್ಪನ ಆಸುಪಾಸೆಲ್ಲೂ ನಾನಿಲ್ಲ. ಅಪ್ಪನನ್ನು ಅಪ್ಪಿಕೊಂಡು ಊರೆಲ್ಲ ಸುತ್ತುತ್ತಿದ್ದ ದಿನಗಳೆಲ್ಲ ನೆನಪುಗಳಾಗಿ ಮೂಲೆಸೇರಿವೆ; ಗೆದ್ದಲು ಹಿಡಿದು ಮಣ್ಣಾಗಿ ಹೋಗಿವೆ, ಕೆದಕಿದರೂ ಲಕ್ಷಣವೂ ಇಲ್ಲ. ಮೊನ್ನೆ ಮೊನ್ನೆಯಷ್ಟೇ ಪ್ರೀತಿಯಿಂದ ತಬ್ಬಿಕೊಂಡಿದ್ದೆ ವರ್ಧನನನ್ನ. ನೆಮ್ಮದಿಯಲ್ಲಿ ಅಪ್ಪನ ನೆನಪೇನೂ ಆಗಿರಲಿಲ್ಲ. ಆದರೆ ಈಗ ಆತನ ಎದೆಯ ಮೇಲಿನ ಕೂದಲು, ಬಿಸಿಬಿಸಿ ಉಸಿರು, ಪ್ರಯತ್ನವಿಲ್ಲದೇ ತೋಳುಗಳಲ್ಲಿ ತುಳುಕಿಬಿಡುವ ದರ್ಪ

ಯಾವುದೂ ಅಪ್ಪನಿಗಿಂತ ಭಿನ್ನವಾಗಿಯೇನೂ ಇಲ್ಲವೆನ್ನಿಸುತ್ತಿದೆ. ಯಾವುದೋ ಹಳೆಯ ಪದ್ಯ ನೀಡುತ್ತಿರುವ ಹಿಂಸೆ ವಿಚಿತ್ರದ್ದೆನ್ನಿಸಿ ನಕ್ಕುಬಿಟ್ಟೆ ಪೆಚ್ಚುಪೆಚ್ಚಾಗಿ. ಅಪ್ಪನ ಕೆಂಪು ಚಾದರವೇ ಆಕಾಶ, ಭೂಮಿ ಎಲ್ಲವನ್ನೂ ವ್ಯಾಪಿಸಿಕೊಂಡು ನಾನದರೊಳಗೆ ಸಿಕ್ಕಿಕೊಂಡು ಉಸಿರುಕಟ್ಟಿದಂತೆನ್ನಿಸಿ ನರಳಿದೆ. ಮೈಯೆಲ್ಲ ಬೆವರಿ ಮತ್ತದೇ ಹಾಸಿಗೆ ಸೇರಿಕೊಂಡಿದ್ದೆ ಎಲ್ಲ ಬಾಗಿಲುಗಳನ್ನು ತೆರೆದು.

ಕೊಂಚ ತಣ್ಣಗಾಗಿ ಹಾಸಿಗೆ ಬಿಟ್ಟೆದ್ದರೆ ಅದೇ ಕನಸಿನ ಹಾಡು ಕಿವಿಗೆ ಬಿದ್ದಂತಾಗಿ ಎರಗಿನೋಡಿದೆ. ದೊಡ್ಡಪ್ಪನ ಮಗ ಮನೋಜನೊಂದಿಗೆ ಮಗುವಿನಂತೆ ಆಟವಾಡುತ್ತಿರುವ ಅಪ್ಪನ ಬಾಯಿಂದ ಅದೇ ಪದ್ಯ ! ಮಕ್ಕಳ ಜಾಗದಲ್ಲಿ ಈಗ ಮೊಮ್ಮಕ್ಕಳು !! ಎಲೆ ಉದುರಿಸಿಕೊಂಡ ಮರದಂತಾಗಿದ್ದ ಅಪ್ಪ ಮತ್ತೆ ಚಿಗುರಿಕೊಳ್ಳುತ್ತಿದ್ದಾನೆ ಸದ್ದಿಲ್ಲದೆ. ಮಕ್ಕಳೇ ಬೇಡವೆಂದು ನಿರ್ಧರಿಸಿಕೊಂಡಿದ್ದ ನನಗೂ ಮಗುವಿನ ಮೇಲೆ ಆಸೆಯಾಗಿತ್ತು ಒಂದು ಕ್ಷಣ. ಇವತ್ತೇ ವರ್ಧನನಲ್ಲಿ ಹೇಳಬೇಕೆಂದುಕೊಂಡೆ. ತಕ್ಷಣವೇ ಅಳಕು, ಅವನೂ ಅಪ್ಪನಾಗಿಬಿಡುತ್ತಾನೆ. ಯಾಕೋ ಅಪ್ಪ, ವರ್ಧನ, ಮನೋಜ ಎಲ್ಲ ಒಂದೇ ಜಾತಿಯವರೆಂಬ ಭಾವದ ಭಾರ, ಮನಸ್ಸಿನ ತುಂಬ ತುಂಬಿಕೊಂಡಿತ್ತು. ಭೂಮಿ ಮೇಲಿರುವ ಜೀವರಾಶಿಗಳಲ್ಲೆಲ್ಲ ಹೆಣ್ಣು ಜೀವವೇ ತೀರಾ ನಿಕೃಷ್ಟದ್ದೆನ್ನಿಸಿತ್ತು. ಸದಾಕಾಲ ಅಡುಗೆ ಮನೆಯಲ್ಲಿ ಜೀವತೇಯುವ ನನ್ನಮ್ಮ, ಸದ್ದಿಲ್ಲದೆ ಮಾವನ ಸೇವೆ ಮಾಡುವ ಮನೋಜನ ಅಮ್ಮ, ಗಳಿಗೆಗೊಮ್ಮೆ ವರ್ಧನನಿಗಾಗಿ ಹಂಬಲಿಸಿ ಅಳುವ ನಾನು ಎಲ್ಲ ಮಾತೇ ಮರೆತವರೇನೋ ಅನ್ನಿಸಿತ್ತು. ಪ್ರಪಂಚದ ತುಂಬ ಅಪ್ಪಂದಿರೇ ತುಂಬಿಕೊಂಡಂತೆ, ನಾವೆಲ್ಲ ಅವರ ಮಕ್ಕಳಾದಂತೆ ............ ಮತ್ತೆ ಶೃತಿಯ ಅಳು ಕೇಳುತ್ತಿತ್ತು ಯಾವತ್ತಿನಂತೆ.

ನನ್ನ ಬಾಲ್ಯದ ಮೇಲೆ ತೀರದ ಕುತೂಹಲ ನನಗೆ ಈಗೀಗ. ಅಮ್ಮ ರಸವತ್ತಾಗಿ ಅಪ್ಪನ ಪ್ರಾಯಕಾಲದ ಸುದ್ದಿಗಳನ್ನು ಹೇಳುತ್ತಿದ್ದರೆ ಕಣ್ಣು ಬಾಯಿಗಳನ್ನು ಅರಳಿಸಿಕೊಂಡು ಕೇಳುತ್ತಿರುತ್ತೇನೆ. ಅಪ್ಪ ಹೂವನ್ನ ಕೊಯ್ಯಲಿಕ್ಕೋ, ಮಂಗನ ಬೇಟೆಗೋ ತೋಟಕ್ಕೆ ಹೊರಟರೆ ನಾನು ಕೈಕಾಲು ಬಡಿದುಕೊಂಡು ಅಳುತ್ತಿದ್ದುದ್ದನ್ನು ಕಣ್ಣಿಗೆ ಕಟ್ಟುವಂತೆ ಹೇಳುತ್ತಾಳೆ ಅಮ್ಮ. ಒಟ್ಟಿನಲ್ಲಿ ನನ್ನವರಿಗೆಲ್ಲ ನಾ ಅತ್ತಿದ್ದೇ ನೆನಪು. ನಮ್ಮ ಸಂಬಂಧಿಕರ ಮಧ್ಯದಲ್ಲೆಲ್ಲ ಅದೇ ಮಾತು - ಮಾತುಮಾತಿಗೆ ಅಳುತ್ತಾಳೆ. ಎಲ್ಲ ಮೂಗಿನ ನೇರಕ್ಕೆ ಪ್ರಪಂಚ ಕಂಡವರು ಅಂತ ನಿರ್ಲಕ್ಷಿಸಿಬಿಡುತ್ತೇನೆ ನಾನು. ಎಲ್ಲ ಬಿಟ್ಟು ಮನುಷ್ಯರ ವಿಲಕ್ಷಣ ಪ್ರವೃತ್ತಿಯ ಕುರಿತು ಯೋಚಿಸುವ ಹುಚ್ಚು ನನಗೆ. ಅಕ್ಕನ ಮಗ ಅಶ್ವತ್ಥ ಅಂಗಳದ ಮೆಟ್ಟಿಲನ್ನ ದಿನಕ್ಕೆ ನೂರಾರು ಸಲ ಹತ್ತಿ - ಇಳಿದು ಮಾಡುವುದನ್ನು ಹುಚ್ಚು ಹಿಡಿದವಳಂತೆ ನೋಡುತ್ತಿರುತ್ತೇನೆ. ಹತ್ತಲಿಕ್ಕಾಗಿ ಎಷ್ಟೆಲ್ಲ ಪ್ರಯತ್ನಿಸುವ ನಾವುಗಳು ತೀರಾ ಸರಾಗವಾಗಿ ಇಳಿದುಬಿಡುತ್ತೇವಲ್ಲ ಅನ್ನುವ ನೋವು ಕಾಡುತ್ತಿರುತ್ತದೆ ಆಗೆಲ್ಲ ನನ್ನನ್ನು. ಈ ರೀತಿಯ ಹುಚ್ಚು ಯೋಚನೆಗಳಿಗೆ ಸಮಯ ವ್ಯಯಿಸುವ

ನಾನೆಂದರೆ ಅಸಡ್ಡೆ ಅಪ್ಪನಿಗೆ. ನಾನು ಯಾವ ಬಾಗಿಲಲ್ಲಿ ನಿಂತರೂ ಓಡಿಸಲಿಕ್ಕೆ ಬಂದುಬಿಡುತ್ತಾನೆ. ಹಾಗೆ ಬಾಗಿಲತುಂಬ ನಿಂತು ಮೈಮರೆಯುವುದು ನನ್ನ ಇಷ್ಟಗಳಲ್ಲಿ ಒಂದೆಂದು ಗೊತ್ತಿದ್ದರೂ, ನನ್ನನ್ನು ಮೀರಿಸುವವರಿಲ್ಲ ಅಂತ ಹಾರಾಡುವಾಗಲೆಲ್ಲ ಅಪ್ಪನೇ ಎದುರಾದಂತಾಗಿ ತಲೆತಗ್ಗಿಸಿಬಿಡುತ್ತೇನೆ ತಣ್ಣಗೆ. ನಾ ತಣ್ಣಗಾಗಿರುವಾಗಲೆಲ್ಲ ಬೆಚ್ಚನೆಯ ನೆನಪಾಗಿ ಬಳಿ ಬರುತ್ತಾನೆ ವರ್ಧನ. ಯಾರಿಗೂ ಕೇಳಿಸದಂತೆ ನಕ್ಕುಬಿಡುತ್ತೇನೆ.

ಚಳಿ - ಮಳೆ - ಗಾಳಿ ಎಲ್ಲ ಮೀರಿದ ಚಂದದ ಮಂದಬಿಸಿಲು. ಅಪ್ಪ ಕತ್ತಿ ಹಿಡಿದು ಗದ್ದೆಗೆ ಹೋಗಿದ್ದಾನೆ. ಅಮ್ಮ ಅದೇ ಅಡುಗೆ ಮನೆಯಲ್ಲಿ ತೇಯುತ್ತಿದ್ದಾಳೆ ಜೀವವನ್ನ. ಆಚಾರಿ ಮನೆಯಲ್ಲಿ ದೊಡ್ಡದಾಗಿ ಗಲಾಟೆ. ಶೃತಿಯ ಮುದಿ ಅಜ್ಜ ಸತ್ತು ಹೋಗಿದ್ದಾನಂತೆ, ಅಜ್ಜಿಯ ಬಳೆ ಒಡೆಯುತ್ತಿದ್ದಾರಂತೆ. ಸುದ್ದಿ ತಿಳಿದಕೂಡಲೇ ಎದ್ದು ಓಡಿದ್ದೆ ಆಚಾರಿ ಮನೆಗೆ. ತಲೆಗೆ ಸ್ನಾನ ಮಾಡಿಸಲಿಕ್ಕೆ ಅಂತ ವಾರಕ್ಕೊಮ್ಮೆ ಹಾಜರಾಗಿಬಿಡುತ್ತಿದ್ದ ಶೃತಿಯ ಅಜ್ಜಿಯ ಬಳೆಗಳ ಮೇಲೆ ನಮ್ಮ ಕಣ್ಣು ಸದಾ ಇದ್ದೇ ಇರುತ್ತಿತ್ತು. ತಲೆ ಉಜ್ಜುವ ರಭಸಕ್ಕೆ ಬಳೆ ಒಡೆದು ತಲೆಗೆ ಚುಚ್ಚಿಬಿಟ್ಟರೆ ಅನ್ನುವ ಹೆದರಿಕೆ. ಈಗ ಅದೇ ಬಳೆಚೂರು ಎದೆಗೇ ಬಂದು ಚುಚ್ಚಿಕೊಂಡಂತೆನ್ನಿಸಿತ್ತು. ಹೋಗುವುದು ತಪ್ಪದು ಅಂತ ತಿಳಿದಿದ್ದರೂ ಎಲ್ಲ ಅಳುತ್ತಿದ್ದಾರೆ. ಕಾರಣವಿಲ್ಲದೆ ಅಳುವ ನನ್ನ ಕಣ್ಣಲ್ಲಿ ಮಾತ್ರ ಹನಿ ನೀರೂ ಇಲ್ಲ, ಇಲ್ಲಿ ಇಷ್ಟು ದೊಡ್ಡ ಕಾರಣವಿದ್ದರೂ. ಶೃತಿಗಾಗಿ ಹುಡುಕಿದೆ. ಅಜ್ಜನ ಪ್ರೀತಿಯಲ್ಲಿ ಮುಳುಗೇಳುತ್ತಿದ್ದ ಶೃತಿ ಅನಾಥಳಾದಂತೆನ್ನಿಸಿ ಮರಳಿ ಗೂಡಿಗೆ ಸೇರಿದ್ದೆ. ಇಡೀದಿನ ಆಚಾರಿ ಮನೆಯದೇ ನೆನಪು. ನಾನು ಶೃತಿಯಷ್ಟೇ ದೊಡ್ಡವಳಾಗಿದ್ದಾಗ ಟಿ.ವಿ. ನೋಡಲೋ, ಚನ್ನೆಮಣೆ ಆಡಲೋ ಊಟ - ನಿದ್ದೆಯನ್ನೂ ಮರೆತು ಓಡುತ್ತಿದ್ದೆ ಆಚಾರಿ ಮನೆಗೆ. ಆವಾಗ ಮನೆತುಂಬ ಜನರನ್ನು ತುಂಬಿಸಿಕೊಂಡಿದ್ದ ಅದು ಈಗ ಚೂರಾಗಿಹೋಗಿದೆ. ಕೂಡಿಸಲಿಕ್ಕಾಗಿ ಅಗಾಧ ಪ್ರಯತ್ನ ಮಾಡುತ್ತಿದ್ದ ಜೀವವೂ ಕೊನೆಯುಸಿರೆಳೆದಾಗಿತ್ತು. ಆಸ್ತಿ ಪಾಲು ಮಾಡುತ್ತಾರಂತೆ. ಎಲ್ಲ ಅಪ್ಪಂದಿರೂ ಸೇರಿದ್ದಾರಂತೆ, ಅಳಲು ಬಾರದ ಅಪ್ಪಂದಿರು.

ಅಮ್ಮ ಯಾವುದೋ ತರಕಾರಿಯ ಸಲುವಾಗಿ ಗೊಣಗುತ್ತಿದ್ದಾಳೆ. ಅವಳಿಗೆ ಚಿಂತಿಸಲಿಕ್ಕೊಂದು ವಿಷಯ ಬೇಕು ಸದಾಕಾಲ. "ನಮ್ಮನೆ ತಂಗೀಗಿನ್ನೂ ಸೀರೆ ಉಡಲಿಕ್ಕೇ ಬರೋದಿಲ್ಲ" ಊರ ಅಮ್ಮಂದಿರ ಹತ್ತಿರವೆಲ್ಲ ಹೇಳಿಕೊಂಡು ಅಲವತ್ತುಕೊಳ್ಳುತ್ತಾಳೆ. ಬದುಕನ್ನು ಮಾತ್ರವೇ ಕಂಡ ಘಟ. ಓರೆ - ಕೋರೆಗಳನ್ನೆಲ್ಲ ವಿಶ್ಲೇಷಿಸಿದವಳಲ್ಲ. ಮಕ್ಕಳ ಅಮ್ಮನಾಗುವುದಕ್ಕಿಂತ ಅಪ್ಪನ ಹೆಂಡತಿಯಾಗುವಲ್ಲಿಯೇ ಜಾಸ್ತಿ ಆಸಕ್ತಿ. ಮದುವೆಯಾದ ಹೊಸದರಲ್ಲಿ ಕೂಡಾ ಅಪ್ಪನಿಗಿಷ್ಟವಾದ ಸಿನೆಮಾಗಳನ್ನು ಮಾತ್ರವೇ ನೋಡಿದವಳು. ಪ್ರಪಂಚದ ಎಲ್ಲ ಅಮ್ಮಂದಿರೂ ಅಪ್ಪಂದಿರು ನಿರ್ದೇಶಿಸಿದ ನಾಟಕದ ನಟಿಯರೇನೋ ಅನ್ನಿಸಿಬಿಟ್ಟಿದೆ ನನಗೆ. ಅನಿಸಿಕೆ - ನಾನು - ನನಗೆ - ನನ್ನದು - ನನ್ನ ಸುತ್ತ ನಾನೂ ಅತಿಯಾಯಿತೇನೋ !

ಅಪ್ಪ - ಅಣ್ಣ - ತಮ್ಮ - ಅಮ್ಮ - ಶೃತಿ ಎಲ್ಲರೂ ಜಗತ್ತಿನ ಜೀವಂತ ಶವಗಳಾದಂತೆ, ಎಲ್ಲರ ತಲೆಯ ಮೇಲೆ 'ನಾನು' - 'ನಾನೆಂಬ' ಮಾಯೆ ದೆವ್ವವಾಗಿ ನರ್ತಿಸಿದಂತೆ, ಯಾರಿಗೂ ಇಲ್ಲದ ಬದುಕುವ ಹಕ್ಕನ್ನು ನಾನು ಮಾತ್ರವೇ ಯಾರಿಂದಲೋ ಕಸಿದುಕೊಂಡಂತೆ, ಅದರಲ್ಲಿ ಅರ್ಧವನ್ನು ವರ್ಧನನಿಗೆ ಕೊಟ್ಟಂತೆ, ಆತ ತನ್ನರ್ಧವನ್ನು ಇನ್ನಾರಿಗೋ ಕೊಟ್ಟು ತಾನು ಅಪ್ಪನಾದಂತೆ .............. ಎಲ್ಲ ಕನಸಾಗಲಿ ದೇವರೇ !

ಇವತ್ತಿಗೆ ಮುದಿ ಆಚಾರಿ ಸತ್ತು ಹದಿನೈದು ದಿನಗಳಾಗಿವೆ. ಅವನ ಮಕ್ಕಳೆಲ್ಲ ತಮ್ಮ ಪಾಲಿನ ಆಸ್ತಿ ತೆಗೆದುಕೊಂಡು ಹೋಗಿಯಾಗಿದೆ. ಈವಾಗ ಇಲ್ಲಿರುವವಳು ಶೃತಿಯ ತಾಯಿಯೊಬ್ಬಳೇ. ತನ್ನ ನಾಲ್ಕು ಮಕ್ಕಳೊಂದಿಗೆ ಮೂಕಪ್ರಾಣಿಯಂತೆ ಜೀವಿಸುತ್ತಿದ್ದಾಳೆ. ಅವಳ ಗಂಡ ಕೆಲಸದ ಸಲುವಾಗಿ ಕಾರವಾರಕ್ಕೆ ಹೋಗಿದ್ದಾನಂತೆ. ಇನ್ನು ಐದು ತಿಂಗಳು ಬರುವುದಿಲ್ಲವಂತೆ. ಇತ್ತೀಚೆಗೆ ಶೃತಿಯ ಮುಖದಲ್ಲಿ ಕಾಣುತ್ತಿರುವುದು ಅಪ್ಪನಿಲ್ಲದ ಖುಷಿಯಿರಬಹುದು ಅನ್ನಿಸಿದೆ ನನಗೆ. ಅಳುವ ತಮ್ಮನನ್ನೋ, ತಂಗಿಯನ್ನೋ ಮುದ್ದು ಮಾಡುತ್ತ ಯಾವುದೋ ಕೊನೆಗಾಗಿ, ಇನ್ನಾವುದೋ ಆರಂಭಕ್ಕಾಗಿ ಕಾಯುತ್ತಿರುವಂತೆ ಮನೆಯನ್ನು ಕಾಯುತ್ತಿರುತ್ತಾಳೆ ಹುಲ್ಲಿಗೆ ಹೋದ ತಾಯಿ ಬರುವವರೆಗೆ. ನಗುವಾಗಲೀ, ನೋವಾಗಲೀ ಇಲ್ಲದ ಅವಳ ಮುಖದ ಮೇಲೆ ಬದುಕಿನ ದುರಂತ ನಾಟಕದ ಕರಾಳ ಛಾಯೆಯಿದೆ; ಅವಳಪ್ಪ ಬರೆದು ನಿರ್ದೇಶಿಸಿರುವ ನಾಟಕದ ನೆರಳು ! ಗಂಡನಿಲ್ಲದಿದ್ದರೆ ಮಕ್ಕಳು ಅಳುವುದಿಲ್ಲ ಎಂಬುದನ್ನು ಅರಿಯದ ಶೃತಿಯ ದಡ್ಡ ತಾಯಿ ಅದೇ ಗಂಡನಿಗಾಗಿ ಎದುರು ನೋಡುತ್ತಿದ್ದಾಳೆ.

●

# ಸ್ಕ್ರಿಪ್ಟ್

● ಎಮ್. ಜೆ. ಪದ್ಮಿನಿ

ಮಾಜಿ ನಾಯಕ ವೇಣಿಮಾಧವನ್ ಭಾಷಣ ಮಾಡಿ ಚಪ್ಪಾಳೆ ಗಿಟ್ಟಿಸಿಕೊಂಡು ಹೋದದ್ದೆಲ್ಲಿಗೆ ?

"ಈಗ ನಮ್ಮ ನಿಮ್ಮೆಲ್ಲರ ಮೆಚ್ಚಿನ, ಖ್ಯಾತ ನಟರಾದ ಡಾ. ವೇಣಿ ಮಾಧವನ್‌ರವರು ಭಾಷಣ ಮಾಡಬೇಕು" ಕೋರಿಕೊಂಡರು ಸಭಾಧ್ಯಕ್ಷರು.

ಒಂದು ಕಾಲದಲ್ಲಿ ಖ್ಯಾತಿ ಪಡೆದಿದ್ದ, ಜನಪ್ರಿಯನಾಗಿದ್ದ, ಮಾಜಿ ನಟ ವಿನಯದಿಂದ ಎರಡೂ ಕೈಗಳನ್ನು ಜೋಡಿಸಿ ಮೈಯನ್ನು ಬಾಗಿಸಿ ವೇದಿಕೆಯ ಮೈಕ್ ಬಳಿ ಬರುತ್ತಿದ್ದಂತೆಯೇ ಸಭೆ ಒಮ್ಮೆ ಸಂತಸದಿಂದ ಕರತಾಡನ ಮಾಡಿತು.

'ನಾ ಭಾಷಣ ಮಾಡಲ್ಲ' ಎಂದ ವೇಣಿಮಾಧವನ್ ಮತ್ತೆ ಮುಂದುವರಿಸಿ 'ಯಾಕಂದ್ರೆ ಈ ದೇಶದಲ್ಲಿ ಭಾಷಣಕ್ಕೆ ಬೆಲೆ ಇಲ್ಲ .... ಬಹಳ ಅಗ್ಗ' ಎಂದ.

ಮೆಚ್ಚಿನ ಮಾಜಿ ನಾಯಕನಟನ ಭಾಷಣದ ಮುನ್ನುಡಿ ಸಭಿಕರನ್ನು ಪುಳಕಿತರನ್ನಾಗಿಸಿತು. 'ಹೋ...' ಎಂದು ಚಪ್ಪಾಳೆ ತಟ್ಟಿ ಹರ್ಷೋದ್ಗಾರ ಮಾಡಿದರು. ವೇಣಿಮಾಧವನ್ ತನ್ನ ಮಾತುಗಳ ಮಾಂತ್ರಿಕಶಕ್ತಿಯಿಂದ ಪ್ರಾಮಾಣಿಕತೆ ಎದ್ದು ತೋರುವಂತೆ ಚಮತ್ಕಾರವಾಗಿ ಮಾತನಾಡತೊಡಗಿದ.

'ಈಗಿನ ಸಿನಿಮಾಗಳು ನಮ್ಮ ಕಾಲದಂತಲ್ಲ' ಎಂದು ಹೇಳಿದ ನಟ, "ಎಲ್ಲವೂ ವೇಗಮಯ... ಎಲ್ಲವೂ ಇನ್‌ಸ್ಟಂಟ್ ತಯಾರು... ಒಟ್ಟಿನಲ್ಲಿ ಹಣ ಸ್ವಾಮಿ... ಹಣ. ನಮ್ಮ ಕಾಲದಲ್ಲಿ ಮನುಷ್ಯರು ಹಣವನ್ನು ಸಂಪಾದಿಸ್ತಿದ್ರು... ಈಗ ಹಣ ಮನುಷ್ಯರನ್ನು ಕೊಂಡ್ಕೊಳತ್ತೆ... ಮಾತಾಡ್ಸತ್ತೆ... ಕುಣಿಸುತ್ತೆ. ಬ್ಲಾಕ್‌ಮನಿ ಮಾಡೋದೇ ತಮ್ಮ ಜೀವನದ ಪರಮ ಧ್ಯೇಯ ಅಂದ್ಕೊಂಡಿದ್ದಾರೆ. ಪರಿಸ್ಥಿತಿ ಹಾಗಿದೆ..." ಹೇಳುತ್ತಾ ಹೋದ ನಟ.

ಕರತಾಡನ... ಹರ್ಷೋದ್ಗಾರ... ಶಿಳ್ಳು... ಪಟಾಕಿ ಸಿಡಿತ...

"ಈಗ ನೋಡಿ ನಾ ಹೇಳ್ತೀನಿ. ಸರಕಾರ ಒಂದು ಕಾನೂನು ಮಾಡ್ಲಿ. ಕಾನೂನು ಜಾರಿಗೆ

ತರ್ಲಿ. ಆಗ ಪರಿಸ್ಥಿತಿ ಸುಧಾರಿಸುತ್ತೆ. ನೀವೇ ನೋಡ್ತೀರಿ. ಏನ್ ಆ ಕಾನೂನು ? ಇಷ್ಟೇ ನಾ ಹೇಳೋದು. ಒಬ್ಬ ವ್ಯಕ್ತಿ ಎಷ್ಟು ಲಕ್ಷ, ಕೋಟಿ ಬೇಕಾದ್ರೂ ಸಂಪಾದಿಸ್ಲಿ. ಅದಕ್ಕವನು ತೆರಿಗೆ ಕಟ್ಬೇಕಾಗಿಲ್ಲ... ಕಳ್ಳ ಲೆಕ್ಕ ತೋರಿಸ್ಬೇಕಾಗಿಲ್ಲ... ದಿಲ್‌ದಾರ್ ಸಂಪಾದಿಸ್ಲಿ... ಅದು ಅವನ ಸಾಮರ್ಥ್ಯದ ಪ್ರತೀಕವಾಗ್ಲಿ. ಆದರೆ ?" ಸ್ವಲ್ಪ ನಿಲ್ಲಿಸಿ ಸಭಿಕರನ್ನು ನೋಡಿದ.

ಸಭಿಕರು ಉದ್ವೇಗಗೊಂಡಿದ್ದರು.

ನಟ ವೇಣಿಮಾಧವನ್ ಮುಂದುವರಿಸಿದ - "ಆದರೆ ಸರಕಾರ ಹೊಸದೊಂದು ಕಾನೂನು ಮಾಡ್ಲಿ. ಯಾವುದೇ ವ್ಯಕ್ತಿ ಸತ್ತ ನಂತರ ಆತನ ಸಂಪಾದನೆಯೆಲ್ಲಾ ಸರಕಾರಕ್ಕೇ ಸೇರಬೇಕು... ಹೆಂಡತಿ ಮಕ್ಕಳಿಗೆ ಬಳುವಳಿಯಾಗಿ ಏನೂ ವರ್ಗಾಯಿಸಲ್ಪಡುವುದಿಲ್ಲ ಅಂತ ಒಂದೇ ಒಂದು ಕಾನೂನು ಜಾರಿಗೆ ತರ್ಲಿ. ಆಗ ನೋಡಿ ಹೇಗಿರುತ್ತೆ ಅಂತ. ಸಂಪಾದಿಸೋದೆಲ್ಲಾ ಕೊನೆಗೆ ಸರಕಾರಕ್ಕೆ ಹೋಗತ್ತೆ ಅಂದ್ರೆ ನಾ ಯಾಕೆ ಕೋಟಿಗಟ್ಲೆ ಸಂಪಾದಿಸ್ಲಿ ಅಂತಾನೆ ಪ್ರಜೆ. ತನ್ನನ್ನು ತಾನು ನಿಯಂತ್ರಿಸ್ಕೋತಾನೆ. ಲಿಮಿಟ್ ಮಾಡ್ತಾನೆ. ಕಪ್ಪು ಹಣ ಕಂಟ್ರೋಲ್‌ಗೆ ಬರುತ್ತೆ, ನಾ ಬರ್ಕೊಡ್ತೀನಿ. ಸರಕಾರ ಸುಧಾರಿಸುತ್ತೆ. ಜನಗಳು ಸುಧಾರಿಸ್ತಾರೆ. ಈ ಕುರಿತು ಸರಕಾರ ಗೈಡ್‌ಲೈನ್ಸ್ ಮಾಡ್ಲಿ ... ಚಿಂತಿಸ್ಲಿ ... ಗಮನ ಹರಿಸ್ಲಿ ... ಇದು ನನ್ನ ಗುರಿ. ನನ್ನ ಕನಸು".

ಕಿವಿ ಕಿತ್ತುವ ಚಪ್ಪಾಳೆಯ ಸದ್ದು ಕೆಲವು ನಿಮಿಷಗಳು ಮುಂದುವರಿಯಿತು.

ಡಾ. ವೇಣಿಮಾಧವನ್‌ರಿಗೆ ಜೈಕಾರದ ಅಭಿನಂದನೆ ದೊರೆಯಿತು.

ಪ್ರೇಕ್ಷಕರ ಹೃದಯದಲ್ಲಿ ಹೊಸ ವಿಚಾರಗಳ ಕಾರಂಜಿಯನ್ನು ಉಕ್ಕಿಸಿ ಸಭೆಯಿಂದ ಹೊರಬಂದ ಮಾಜಿ ನಟ ವೇಣಿಮಾಧವನ್ ತನ್ನ ಮಾಸಿದ ಹಳೆಯ ಕಾರನ್ನೇರಿದ. ಮನೆಗೆ ಹೋಗೋಣ ಎಂದುಕೊಂಡವನು ಮನಸ್ಸು ಬದಲಾಯಿಸಿ ವಿರೋಧ ಪಕ್ಷದ ಪಾರ್ಟಿ ಆಫೀಸ್ ಕಡೆಗೆ ಕಾರನ್ನು ತಿರುಗಿಸಿದ.

ರಾಜಕೀಯದಲ್ಲಿ ಅಭಿನಯಿಸಲು ಸ್ಕ್ರಿಪ್ಟ್‌ನ್ನು ತಾನೇ ತಯಾರಿಸಿ ಜನಸಾಮಾನ್ಯರ ಮುಂದೆ ಆಗಾಗ ಇಡುತ್ತಿದ್ದ ಮಾಜಿ ನಟನಿಗೆ ಅಪಾರ ಭರವಸೆಯಿತ್ತು ... ತನ್ನ ಈಗಿನ ನಟನಾ ಸಾಮರ್ಥ್ಯಕ್ಕೆ ವಿರೋಧ ಪಕ್ಷದವರಿಂದ ಟಿಕೆಟ್ ಸಿಗುತ್ತೆ... ಮತ್ತೆ ತಾನು ಚೇತರಿಸಿಕೊಳ್ಳಬಲ್ಲೆ ... ಮಿಂಚಬಲ್ಲೆ ... ಮೆರೆಯಬಲ್ಲೆ ... ಮೇಲೇಳಬಲ್ಲೆ ... ಹೆಂಡತಿ ಮಕ್ಕಳಿಗೆ ಅಪಾರ ಆಸ್ತಿ ಮಾಡಬಲ್ಲೆ ... ಎಂದು.

●

# ವಶ

● ಸುನಂದಾ ಕಡಮೆ

ಹೊಸದಾಗಿ ವ್ಯಾಪಿಸಿಕೊಂಡ ದೂರದ ಬಡಾವಣೆಯೊಂದರ ಬಸ್ಸಿನಲ್ಲಿ ಬಂದು ಹುಬ್ಬಳ್ಳಿಯ ಹಳೇ ಬಸ್‌ಸ್ಟ್ಯಾಂಡಿನ ಮುಂದಿರುವ ಕಾಮತ್ ಕೆಫೆಯ ಇದಿರು ಇಳಿದಾಗ ಕನ್ನಿಕಳಿಗೆ ಒಂದು ಹೆಜ್ಜೆ ಎತ್ತಿ ಹಾಕಲೂ ಸಹ ಸಾಧ್ಯವಾಗಲಿಲ್ಲ. ಕೈಯಲ್ಲಿ ಹಿಡಿದಿರುವ ಬ್ಯಾಗ್‌ನ್ನು ಹೆಗಲೇರಿಸಿ, ಮಗಳು ರಶ್ಮಿಯ ರಟ್ಟೆಯನ್ನು ಬಿಗಿಯಾಗಿ ಹಿಡಿದುಕೊಂಡು ಒಂದರ ಹಿಂದೆ ಒಂದು ಕೊಂಕಣ ರೇಲ್ವೆ ಬೋಗಿಗಳಂತೆ ಹೋಗುವ ಸಾಲು ವಾಹನಗಳನ್ನು ವೀಕ್ಷಿಸುತ್ತ ದಿಕ್ಕು ತಪ್ಪಿದವಳಂತೆ ನಿಂತೇ ಇದ್ದಳು.

ಪ್ರಶಾಂತವಾದ ಗೋಕರ್ಣದ ಚಿನ್ನದಕೇರಿಯ ಪುಟ್ಟ ಮನೆಯೊಂದರಲ್ಲಿ ಬೇಗ ಬೇಗ ಕೆಲಸ ಮುಗಿಸಿ, ಎದಿರು ಮನೆ ಭಟ್ಟರ ಹುಡುಗಿಯರ ಹತ್ತಿರ ಚಿಟ್ಟೆಯ ಮೇಲೆ ಕೂತು 'ಇಂದ್ ಕಾಲೇಜೀಗೆ ಹೋಗ್ತಿಲ್ಯೇ ಕೂಸೇ, ಬಾಜಾರಕ್ ಬತ್ತಿಲ್ಯೆ' ಎಂದು ಹರಟೆ ಹೊಡೆಯುತ್ತ ಮಗಳನ್ನೆತ್ತಿಕೊಂಡು ಆಡಿಸುತ್ತ ಕೂಡುವ ಕನ್ನಿಕಳಿಗೆ ಈ ಹುಬ್ಬಳ್ಳಿಯೊಂದು ಭಾವಶೂನ್ಯವಾದ ಅಸಹನೀಯ ನಗರವಾಗಿ ಭಾಸವಾಗುತ್ತಿದ್ದಂತೆ 'ಉತ್ತರ ಧ್ರುವದಿಂ ದಕ್ಷಿಣ ಧ್ರುವಕೂ' ಅಂತಲೋ ಇಲ್ಲ 'ಸೈನಿಕ' ಅಂತಲೋ ಎಂದೋ ಬೆನ್ನಿಗೆ ಬರೆಸಿಕೊಂಡ ಸಿನೇಮಾ ಜಾಹೀರಾತು ಹೊತ್ತು ತಿರುಗುವ ಬಸ್ಸುಗಳೋ ಆಟೋರಿಕ್ಷಾಗಳೋ ಪಾದದ ಅಂಚಿನಿಂದಲೇ ಸುಂಯ್ಯನೇ ಹಾಯ್ದುಹೋದಂತೆ ಬೆಚ್ಚುತ್ತ ಉಸಿರು ಬಿಗಿಹಿಡಿದು ಪಿ.ಬಿ. ರಸ್ತೆ ದಾಟಿ ಹಳೇ ಬಸ್‌ಸ್ಟ್ಯಾಂಡಿನ ಒಳಹೋಗಬೇಕಾದರೆ ಏಳು ರಾಮನ ಕಂಡಂತಾಗಿತ್ತು.

ಸುತ್ತಲೂ ಜನಜಂಗುಳಿ. ರಸ್ತೆಯೇ ಸಿಗದಂತೆ ಇಲ್ಲಿ ನಿತ್ಯವೂ ಶಿವರಾತ್ರಿ. ಎಲ್ಲಿಂದ ಎಲ್ಲಿಗೋ ಸರಿದುಹೋಗುವ ಅಪರಿಚಿತ ಮಂದಿಯ ನಡುವೆ ದಾರಿಮಾಡಿಕೊಂಡು 'ಅಂಕೋಲಾ – ಗೋಕರ್ಣ ಕಡೆಗೆ ಹೋಗುವ ಬಸ್ಸು ನಿಲ್ಲುವ ಸ್ಥಳ' ಎಂದು ಬರೆದಿದ್ದ ಜಾಗಕ್ಕೆ ಬಂದು ತಲುಪುವಷ್ಟರಲ್ಲಿ ಸುಸ್ತು ಹೊಡೆದು ಹೋಗಿದ್ದಳು ಕನ್ನಿಕಾ.

ಅಷ್ಟು ಹೊತ್ತು ಮೂಗುದಾಣ ಹಾಕಿದ ಕರುವಿನಂತೆ ಸುಮ್ಮನಿದ್ದ ರಶ್ಮಿ ತಟ್ಟನೆ ಮಾತು ಬಂದಂತೆ 'ಅಮ್ಮಾ ಇದು ಯಾವ ಬಸ್ಸು ? ಅಮ್ಮಾ ಅದು ಆ ಕಡೆ ಯಾಕೆ ಹೋಯ್ತು ?

ಇಲ್ಯಾಕೆ ನಿಲ್ಲಿಲ್ಲ ? ಅಲ್ಲಿ ಯಾಕೆ ನಿಂತು ?' ಎಂಬಿತ್ಯಾದಿ ತೊದಲ ಪ್ರಶ್ನೆಗೆ ಉತ್ತರಿಸಿ ಬೇಸರ ಬಂದು ಈಗ ಬರೀ 'ಹ್ಞೂ' 'ಹ್ಞಾ' ಹಾಕುತ್ತಾ ಮೊದಲ ದಿನ ತಾನು ಹೋಗಿದ್ದ ಗೃಹಪ್ರವೇಶದ ಮನೆಯಲ್ಲಿ ನಡೆದ ಮಾನಸಿಕ ಕ್ಲೇಶದಿಂದ ಹೊರಬರಲಾಗದೇ ಮೌನವಾಗುಳಿದು ಬಿಟ್ಟಳು. ಈಗ ರಶ್ಮಿಯ ಪ್ರಶ್ನೆಗಳಿಗೆಲ್ಲ ಬಾಜೂ ನಿಂತ ಹೆಂಗಸೊಬ್ಬಳು ಉತ್ತರಿಸಲಾರಂಭಿಸಿದ್ದಳು.

ಮನೆಯವರೆಲ್ಲ 'ಉಳೀ - ಉಳೀ' ಎಂದರೂ ತಾನು ಮುಖ ಮುರಿದಂತೆ ಎದ್ದು ಬಂದದ್ದು ತನ್ನದೇ ಸಣ್ಣತನವಾಯ್ತೇನೊ ಎಂಬ ದುಗುಡ ಕನ್ನಿಕಳನ್ನು ಈಗ ಕಾಡತೊಡಗಿತು. ಆತ್ಮೀಯ ಸ್ನೇಹಿತೆ ಮಾಧವಿಯ ಕಣ್ಣಲ್ಲಿ ಇಳಿದ ಎರಡು ಹನಿ ನೀರಿಗಾಗಿ ನಾನು ಎಷ್ಟು ಕರಗಿ ಹೋಗಿದ್ದೆನೆಂದರೆ, ತನ್ನ ಆತ್ಮವನ್ನೇ ತೊಳೆದು ಶುದ್ಧಗೊಳಿಸಿ ಬಿಡುವ ಶಕ್ತಿಯಿತ್ತು ಆ ಎರಡು ಹನಿ ಕಣ್ಣೀರಿಗೆ. ಅಂದು ಯಾರೂ ಉದ್ದೇಶಪೂರ್ವಕ ತಪ್ಪು ಮಾಡುವ ಕಾರಣವಿರಲಿಲ್ಲ. ಹಾಳು ಮರೆವು ಜೊತೆಯಲ್ಲಿ ವ್ಯವಧಾನವಿಲ್ಲದ ಅವಸರ. ತಾನು ಅದನ್ನೇ ಅಷ್ಟು ದೊಡ್ಡ ವಿಷಯವಾಗಿ ತಿಳಿಯಬಾರದಾಗಿತ್ತು ಎಂಬುದು ಈಗ ಮನವರಿಕೆಯಾಗತೊಡಗಿತು.

ಜಾತಿ, ಸಂಬಂಧಗಳಂತ ಕೊಂಡಿಯಿರದಿದ್ದರೂ ಸ್ನೇಹ ಅದಕ್ಕಿಂತ ಹತ್ತಿರದ್ದು ಎಂಬ ಕಾರಣಕ್ಕೆ ಅಂದು ಮಾಧವಿ ಹೇಳಿಕೆಗೆ ಬಂದಿದ್ದಳು. ಅಂದು ಮಾಧವಿ ಕಣ್ಣುಗಳಲ್ಲಿ ದೈನ್ಯಭಾವವಿತ್ತು. 'ಬಂದರೆ ಬರಲಿ ಬಿಟ್ಟರೆ ಬಿಡಲಿ' ಎಂಬ ಉದಾಸೀನವಿರಲಿಲ್ಲ. ತನ್ನ ಗಂಡನೂ ದೊಡ್ಡ ಮನಸ್ಸಿನಿಂದ, ಮನೆಬಾಗಿಲಿಗೆ ಕರೆಯಲು ಬಂದವರಿಗೆ ಏನು ಕಿಮ್ಮತ್ತಿಲ್ವೇ 'ರಶ್ಮಿಯನ್ನು ಕರ್ಕೊಂಡು ಹೋಗಿದ್ದು ಬಾ. ನನಗೋ ಅಂಗಡಿ ಬಂದ್ ಮಾಡೋಹಾಗಿಲ್ಲ' ಎಂದದ್ದಕ್ಕಾಗಿ ತಾನೂ ಬರಲು ಮನಸ್ಸು ಮಾಡಿದ್ದು. ಮೊದಲ ದಿನವೇ ಬಂದು ಹೊಕ್ಕಿದಾಗ ಎಲ್ಲರ ಜೊತೆ ಪರಿಚಯಿಸುತ್ತ ಎಷ್ಟು ಖುಶಿಪಟ್ಟಿದ್ದಳು. ತಾನೂ ಸಹ ಮನೆಯ ಹೆಂಗಸರ ಪೈಕಿಯಂತೆಯೇ ಅವರೊಟ್ಟಿಗೇ ಕೆಲಸ ಮಾಡಿಕೊಂಡು ಬಂದು ಹೋದವರ ವಿಚಾರಿಸಿಕೊಳ್ಳುತ್ತ ಇಡೀ ದಿನ ಓಡಾಡಿಕೊಂಡಿದ್ದು ಗಮನಿಸಿದ ಕೆಲ ಅತಿಥಿಗಳು ಕನ್ನಿಕಳನ್ನು ಸಹ ಆ ಮನೆಯ ಸದಸ್ಯರಂತೆಯೇ ಮಾತಾಡಿಸುತ್ತಿದ್ದರು.

ಕನ್ನಿಕಳಿಗೆ ಒಂದು ರೀತಿಯ ಹೆಮ್ಮೆ ಎನ್ನಿಸಿತ್ತು. ತಾನು ಬಂದಿದ್ದು ಖಂಡಿತ ನಿರರ್ಥಕ ಅಲ್ಲ ಎಂಬ ಖುಷಿಯಲ್ಲಿ ಮಗಳಿಗೆ ಮೊದಲ ಪಂಕ್ತಿಯಲ್ಲೇ ಉಣಿಸಿ ಕೈ ಬಿಟ್ಟು ತಾನು ಬಡಿಸಲು ಓಡಾಡುತ್ತಿದ್ದಳು. ಬಂದು - ಹೋಗುವವರ ಸಂಭ್ರಮ ಮುಗಿದು ಮನೆಯವರು ಊಟಕ್ಕೆ ಕೂಡುವ ಸಮಯದಲ್ಲಿ ಸರೀ ಹೊತ್ತಿಗೆ ರಶ್ಮಿ 'ಅಮ್ಮಾ ಇಜ್ಜೀ ಅಮ್ಮಾ ಇಜ್ಜೀ' ಎನ್ನುತ್ತ ಓಡಿ ಬಂದು ಮುಖ ಕಿವುಚಿದಾಗ ಕನ್ನಿಕಳಿಗೆ ಎಲ್ಲಿಲ್ಲದ ಸಿಟ್ಟು ಉಕ್ಕಿ ಬಂದು 'ಶುರೂ ಆಯ್ತಲ್ಲ ನಿಂದು ಸರೀ ಹೊತ್ತಿಗೆ' ಎಂದೆನುತ ನಿರಿಗೆ ಸಿಕ್ಕಿಸಿದಳು. ಅದನ್ನು ಕಂಡ ಅಲ್ಲೇ ಊಟ ಮಾಡಿ ಕೂತ ಅಜ್ಜಿಯರು 'ಅಬಾಬಾ..... ಎಲ್ಲಾ ಮನೆ ಮಕ್ಕಳದೂ ಒಂದೇ ಹಾಡಾಯ್ತಲ್ಲ ತಾಯಂದಿರು ಊಟಕ್ಕೆ ಕೂಡುವಾಗೇ ಈ ಮಕ್ಕಳಿಗೆ ಏನಾಗ್ತದೆ' ಎಂದು

ತಮ್ಮಷ್ಟಕ್ಕೆ ತಾವು ವಟಗುಡುತ್ತ ಕೂತಿದ್ದರು. ಬಡಿಸುತ್ತಿದ್ದವಳು ಕೈ ಬಿಟ್ಟು ಕನ್ನಿಕಾ ಮಗಳನ್ನು ಗೇಟಿನ ಹೊರಗೆ ಸ್ವಲ್ಪ ದೂರದಲ್ಲಿ ಗಿಡ - ಗಂಟಿಗಳ ಹಿಂದಿನ ನೆರಳಲ್ಲಿ ಚೆಡ್ಡಿ ಜಾರಿಸಿ ಕೂಡಿಸುತ್ತ ಅದೇ ಪುಟ್ಟ ಚೆಡ್ಡಿಯನ್ನು ಸೊಂಟಕ್ಕೆ ಸಿಕ್ಕಿಸಿಕೊಂಡು 'ಆಯ್ತೇನೇ......... ಬೇಗ ಮಾಡು' ಎಂದು ಒಂದೇ ರಾಗ ಎಳೆಯುತ್ತ ಬಿಸಿಲ ಝಳಕ್ಕೆ ಕಾಯ್ದ ಕೆಂಪು ಮಣ್ಣಿನ ರಸ್ತೆಯಲ್ಲಿ ಹಿಂದಕ್ಕೆ ಕೈ ಕಟ್ಟಿ ಪಾದಗಳನ್ನು ಎತ್ತಿ ಎತ್ತಿ ಹಾಕುತ್ತ ನಿಂತೇ ಇದ್ದಳು. ಆಹಾರ ಅಥವಾ ಜಾಗದ ಬದಲಾವಣೆಗೋ ನೀರು - ಗೀರು ಕಾಲಕ್ಕೆ ಸರಿಯಾಗಿ ಕುಡಿಸದೇ ಇದ್ದದ್ದಕ್ಕೋ ರಶ್ಮಿ ಬೇಗ ಬೇಗ ಇಜ್ಜಿಯೇ ಬರದೇ ಸುಮ್ಮನೆ ಕೂತಲ್ಲೇ ಅರ್ಧ ತಾಸು ಮಾಡಿಬಿಟ್ಟಳು. ಮತ್ತೆ ಪ್ಲ್ಯಾಸ್ಟಿಕ್ ಚೆಂಬಿನಲ್ಲಿ ನೀರು ಹುಡುಕಿ ತಂದು ತೊಳೆಸಿ ಚೆಡ್ಡಿ ಹಾಕಿ ಊಟದ ಪೆಂಡಾಲಿಗೆ ಬರುವಷ್ಟರಲ್ಲಿ ಮನೆಯವರೆಲ್ಲ ಸಾಲಾಗಿ ಊಟಕ್ಕೆ ಕೂತು ಅರ್ಧ ಊಟವಾಗಿ ಹೋಗಿತ್ತು. ತನಗೇನಾದರೂ ಒಂದು ಎಲೆ ಬಡಿಸಿದ್ದಿದೆಯೇ ಎಂದು ಬಾರೀಕಾಗಿ ಕಣ್ಣು ಹಾಯಿಸಿದವಳು ತುಸು ಹೊತ್ತು ಅಲ್ಲಾಡದೇ ನಿಂತು ಬಿಟ್ಟಳು ಕನ್ನಿಕೆ. ಅಂಥದ್ದೇನೂ ಅಲ್ಲಿರಲಿಲ್ಲ. ಹಾಗಾದರೆ ನಾನೂ ಸಹ ಊಟ ಮಾಡದೇ ಇದ್ದದ್ದು ಇವರ್ಯಾರಿಗೂ ನೆನಪಿಲ್ಲವೇ ?

ಅಥವಾ ರಶ್ಮಿಗೆ ಉಣ್ಣಿಸುವಾಗಲೇ ತಾನೂ ಊಟ ಮುಗಿಸಿ ಎದ್ದೆನೆಂದು ತಪ್ಪು ತಿಳಿದರೇ ? ಊಟ ಮಾಡುತ್ತಿರುವವರ ಮುಂದೆ ಹೋಗಿ ನಿಂತು 'ತನ್ನದೂ ಊಟವಾಗಿಲ್ಲ' ಅನ್ನುವುದು ಎಷ್ಟು ಸರಿ. ಅಥವಾ ಒಬ್ಬರೂ ಹೇಳದೇನೆ ತಾನೇ ಹೋಗಿ ಊಟ ಬಡಿಸಿಕೊಂಡು ಉಣ್ಣಲೂ ಏನೋ ಸಂಕೋಚ ಎಂಥದೋ ಚೂರು ಸ್ವಾಭಿಮಾನ ಅಡ್ಡಬಂದಂತಾಯಿತು. ಊಟ ಮುಗಿಸಿ ಕೂತವರ ಗುಂಪಿನಲ್ಲಿ ತಾನೂ ಒಂದು ಕುರ್ಚಿ ಎಳೆದು ಕೂತುಬಿಟ್ಟಳು. ಅದೇ ಹೊತ್ತಿಗೆ 'ಇಜ್ಜಿ' ಎಂದು ಜೀವ ತಿಂದ ರಶ್ಮಿಯ ಮೇಲೆ ಅಸಾಧ್ಯ ಸಿಟ್ಟು ಉಕ್ಕಿ ಬಂದಿತು. ಪಕ್ಕದಲ್ಲಿ ಕೂತ ಅಪರಿಚಿತ ವ್ಯಕ್ತಿಯೊಬ್ಬ 'ಹಾಡು ಹೇಳಿದರೆ ಬಿಡ್ತೇನೆ' ಎಂದು ಅತ್ತಿಂದಿತ್ತ ಓಡಾಡುತ್ತಿದ್ದ ರಶ್ಮಿಯನ್ನು ಹಿಡಿದುಕೊಂಡು ಬಿಟ್ಟ.

ಅಪರಿಚಿತನ ಹಿಡಿತದ ಬಿಗಿಗೆ ಹೆದರಿದ ರಶ್ಮಿ ಅಳಲು ಸುರುಮಾಡಿ ಬಿಟ್ಟಳು. 'ಯಾಕೆ ತೀಡ್ತಿದ್ದಿ. ಮನೇಲಿ ಹೇಳ್ತಿದ್ದಿಯಲ್ಲಾ ಅದೇ ಹಾಡು ಹೇಳು. ಎಲ್ಲಾ ಗುಡ್ ಗರ್ಲ್ ಅಂತಾರ, ಹ್ಞೂ ಹೇಳು' ಎಂದು ದೊಡ್ಡ ಸ್ವರದಲ್ಲಿ ತಾನು ಹೇಳಿದ್ದುದರಲ್ಲಿ ತನ್ನ ದನಿ ಮಾಧವಿಗಾದರೂ ಕೇಳಿ ತಾನು ಊಟ ಮಾಡದೇ ಕೂತಿರುವ ನೆನಪಾಗಲಿ ಎಂಬ ಹಂಬಲವಿತ್ತೇ ತನಗೆ ಎಂದು ಆಳದಲ್ಲೆಲ್ಲೋ ಅನ್ನಿಸುತ್ತಲೇ ತನ್ನ ದನಿಗೆ ತಾನೇ ನಾಚಿದ್ದಳು ಕನ್ನಿಕ.

ಊಟಕ್ಕೆ ಕೂತವರೆಲ್ಲ ಒಬ್ಬೊಬ್ಬರು ಒಂದೊಂದು ಮಾತಾಡುತ್ತ ಆರಾಮಾಗಿ ಉಣ್ಣುತ್ತಿದ್ದರು. 'ಚೊಲೋ ಜನ ಬಂದ್ರು ಹ್ಞಾ, ಅಡಿಗೆ ಏನೂ ಅಷ್ಟು ಜಾಸ್ತಿ ಉಳೀಲಿಲ್ಲ ನೋಡು, ನಿನ್ನೆ ಈ ನಮ್ನಿ ಮಳೆ ಬಂದು ಬರೋರಿಗೆ ಭಾಳ ತೊಂದ್ರೆ ಆಗ್ತಿತ್ತು. ಚಿರೂಟಿ ರಾಶಿ ಮಿದೂ ಆಯ್ತಲ್ಲ, ಅಡಿಗೆಯವರೆಲ್ಲ ಉಂಡರೋ ಏನು ?'

ಎಲ್ಲಾರದೂ ಊಟವಾಯ್ತೋ ಇಲ್ಲೋ ಮತ್ತೆ ಯಾರು ಉಳಿದರು ? ಏ... ಅರೇ ಕನ್ನಿಕ, ಏ..... ಕನ್ನಿಕಾಂದು ಊಟ ಆಯ್ತೇನೆ ? ಮಗಳಿಗೆ ಸಂಡಾಸು ಮಾಡಿಸಲಿಕ್ಕೆ ಕರ್‍ಕೊಂಡು ಹೋಗಿತ್ತಲ್ಲ. ಹೌದಲ್ಲ, ಏ ಕನ್ನಿಕ ನೀನು ... ಊಟ .... ನಾವು ಗಡಿಬಿಡಿಯಲ್ಲಿ ಮರತೇ ಬಿಟ್ಟೆವು ನೋಡು. ನೀನೇ ಆದ್ರೂ ಹೇಳಿ ಕೂಡ್ರಬಾರದಿತ್ತೇನೇ ? ಎನ್ನುತ್ತ ಕೂತಲ್ಲಿಯೇ ಎಲ್ಲರೂ ಒಂದೊಂದು ಮಾತು ಹೂತಾಕುತ್ತಿದ್ದರೆ, ಮಾಧವಿ ಮಾತ್ರ ಅರ್ಧದಲ್ಲೇ ಊಟ ಬಿಟ್ಟು ಎದ್ದು, ಎಲೆ ಇರಿಸಿ ಊಟ ಬಡಿಸಿ, ಕೈ ಹಿಡಿದು ಕರ್‍ಕೊಂಡು ಹೋಗಿ ಕೂಡಿಸಿದ್ದಳು.

ಕನ್ನಿಕಳ ಕಣ್ಣು - ಕೆನ್ನೆ - ತುಟಿಗಳು ಒಂದು ರೀತಿಯ ಅವಮಾನದಿಂದ ವಿವರ್ಣವಾಗಿ,ಮೈಯ ನರನರಗಳಲ್ಲಿ ಅವಮಾನದ ಬೆಂಕಿ ಹರಡಿಕೊಂಡಂತಾಗಿತ್ತು. ಮನೆಯ ಕೆಲ ಗಂಡಸರು 'ಹೆ.... ಹೆ..... ಹೆ..... ಎಂಥಾ ಹೆಂಗಸರೇ ನೀವು. ಅಷ್ಟೆಲ್ಲ ನಿಮ್ಮ ಜೊತೆ ದುಡಿದವಳನ್ನು ಬಿಟ್ಟು ಊಟಕ್ಕೆ ಕೂತೀರಲ್ಲ' ಎಂದು ನಾಲ್ಕೈದು ಶಬ್ದದಲ್ಲೇ ಬೈದ ಹಾಗೆ ನಟಿಸಿದರು. ಊಟಕ್ಕೆ ಕೂಡಿಸಿದ ಹೆಂಗಸರು ಎಲ್ಲವನ್ನೂ ಮರೆತು ತಮ್ಮ ತಮ್ಮ ಮಾತಲ್ಲೇ, ತಮ್ಮ ತಮ್ಮ ಕೆಲಸದಲ್ಲೇ ಮಗ್ನರಾಗಿ ಬಿಟ್ಟರು. ಹಸಿವೆಯಾಗಿ ಊಟಕ್ಕೆ ಕೂತಾಗಲೂ ಕನ್ನಿಕಳಿಗೆ ತುತ್ತೇ ಗಂಟಲಲ್ಲಿಳಿಯಲಿಲ್ಲ.

ಯಾವುದೂ ರುಚಿಸಲಿಲ್ಲ. ಇವರೆಲ್ಲ ತನಗಾದ ಅವಮಾನವನ್ನು, ಬೇಸರವನ್ನು ಅಷ್ಟು ಗಂಭೀರವಾಗಿ ತೆಗೆದುಕೊಂಡೇ ಇಲ್ಲ ಎಂಬ ಸಂಗತಿಯೇ ಕನ್ನಿಕಳಿಗೆ ಬಹಳ ಹೊತ್ತು ಬೇಸರ ತಂದಿತ್ತು. ಅಥವಾ ಎಲ್ಲರೂ ಸೇರಿ ಹಲವು ಬಾರಿ ತಮಾಷೆಯಾದರೂ ಮಾಡಿದ್ದರೆ, ಆ ವಿಷಯವೇ ಒಂದು ತಮಾಷೆಗೆ ವಸ್ತುವಾಗಿದ್ದರೆ ಎಷ್ಟೋ ಸಮಾಧಾನವಾಗುತ್ತಿತ್ತು. ಅದು ಹಾಗಾಗಲೂ ಇಲ್ಲ.

ಇಲ್ಲಿಯದು ಏನೂ ಬೇಡ ಅನ್ನಿಸಿಬಿಟ್ಟಿತು. ತನಗಾದ ದುಃಖಕ್ಕೆ ಸ್ವತಃ ಮಾಧವಿ ಒಂದೇ ಒಂದು ಮಾತಿನಲ್ಲೂ ಕ್ಷಮೆ ಕೇಳದೆ ಇದ್ದದ್ದು ಕನ್ನಿಕಳಿಗೆ ನೋವು ತಂದಿತ್ತು. ತನ್ನ ಅಸಮಾಧಾನ ಬೇರೆಯವರಿಗೆ ತೋರದ ಹಾಗೆ ನುಂಗಿಕೊಂಡಿರುವುದೇ ಪ್ರಯಾಸದ್ದಾಗಿ ಬಿಟ್ಟಿತು. ಮನೆಗೆಲಸ ತನಗೆ ಹಚ್ಚದೇ ಎಲ್ಲರೂ ಕಸಿ-ಕಸಿದೂ ಮಾಡುತ್ತಿರುವಂತೆನಿಸಿತ್ತು. ರಾತ್ರಿಯೂ ಸರಿಯಾಗಿ ಉಣ್ಣದೆ ಕೋಣೆಯಲ್ಲಿ ಒಂದು ಚಾಪೆ ಬಿಚ್ಚಿಕೊಂಡು, ರಶ್ಮಿಯನ್ನು ಹಾಕಿಕೊಂಡು ಮಲಗಿಬಿಟ್ಟಳು.

ಯಾಕೋ ತನ್ನನ್ನು ಎಲ್ಲರೂ ಕಡೆಗಣಿಸಿದಂತೆನ್ನಿಸಿ, ತಾನು ಇಲ್ಲಿ ಒಂಟಿಯಾದೆ ಅನ್ನಿಸಿಬಿಡಲು ತಡವಾಗಲಿಲ್ಲ. ಮಗಳ ಮೇಲೆ ಸುಮ್ಮಸುಮ್ಮನೆ ಸಿಟ್ಟು ಮಾಡಿಕೊಳ್ಳುವಂತಾಯಿತು. ಯಾಕಾದರೂ ಇಲ್ಲಿಗೆ ಬರುವ ಮನಸ್ಸು ಮಾಡಿದೆನೋ ಎಂದು ಮರುಗುತ್ತ ಮಲಗಿದಳು.

ಬೆಳಿಗ್ಗೆ ಎದ್ದಾಗ ರಶ್ಮೀ ಚಹಾ ಕುಡಿಯುವವಳಾದರೂ, 'ಅವಳು ಕುಡಿಯುವದಿಲ್ಲ' ಅಂದು ಬಿಟ್ಟಳು. ರಶ್ಮಿ 'ತಂಗೆ ಚಹಾ ಬೇಕು' ಎಂದು ಅಳುವ ಸ್ವರದಲ್ಲಿ ಕುಸು - ಕುಸು ಮಾಡುತ್ತಿದ್ದರೂ 'ನಮ್ಮ ಮನೆಗೆ ಹೋಗಿ ಕುಡಿಯುವಾ' ಎಂದು ಕಿವಿಯಲ್ಲಿ ಉಸುರುತ್ತ ತೊಡೆ ಚಿವುಟಿದಳು. ರಶ್ಮಿ ಆಗ ದೊಡ್ಡಕ್ಕೆ 'ಚಾ ಬೇಕೂ' ಎಂದು ರಾಗ ತೆಗೆದೇ ಬಿಟ್ಟಳು. ಮಾಧವಿ ಅರ್ಧ ಲೋಟ ಚಹಕ್ಕೆ, ಅರ್ಧ ಹಾಲು ಸೇರಿಸಿ ಮೇಲೆ - ಕೆಳಗೆ ಸುರಿದು ತಣ್ಣಗೆ ಮಾಡಿ ಕುಡಿಸಿದ್ದಳು.

ಕನ್ನಿಕಳ ವರ್ತನೆಯಲ್ಲಾದ ಬದಲಾವಣೆಯನ್ನು ಗಮನಿಸುತ್ತಿದ್ದರೂ ಮಾಧವಿ, ಅವಳನ್ನು ಸಮಾಧಾನ ಮಾಡಲು ಶಬ್ದಗಳೇ ಸಿಗದಂತೆ ಮಾತಿನಲ್ಲೂ ತೋಡಿಕೊಳ್ಳಲಾಗದ ಒದ್ದಾಟದೊಂದಿಗೆ, ಸುಮ್ಮನಿದ್ದು ಬಿಟ್ಟಿದ್ದಳು. ಕನ್ನಿಕ ಬರೀ ಚಹ ಕುಡಿದದ್ದೇ, ತಲೆಬಾಚಿಕೊಂಡು ಹೊರಡಲು ತಯಾರಾಗಿ ಬಿಟ್ಟಿದ್ದನ್ನು ನೋಡಿ ಮಾಧವಿ, ಸಣ್ಣ ದನಿಯಲ್ಲಿ ಭಾವುಕಳಾಗಿ 'ಉಳಿದು ಹೋಗು' ಎಂದಿದ್ದಳು.

ಅಗದೀ ಹೊರಟೇ ಬರಲನುವಾದಾಗ, ಮನಸ್ಸಿಲ್ಲದ ಮನಸ್ಸಿನಿಂದ ಅರಿಷಿಣ - ಕುಂಕುಮ ಕೊಡುತ್ತ 'ನಾನು..... ನಿನ್ನೆ...... sorry ಹ್ಞಾ' ಎಂಬ ತುಂಡು ತುಂಡು ಶಬ್ದಗಳು ಹೊರಬೀಳುತ್ತಿದ್ದಂತೆ, ಯಾರಿಗೂ ಕಾಣಿಸದಂತೆ ಆ ಕಡೆ ತಿರುಗಿಸಿದ ಕಣ್ಣುಗಳಲ್ಲಿ ಒಸರಿದ ಎರಡು ಹನಿ ನೀರು, ಕನ್ನಿಕಾಳ ರೋಷ - ದ್ವೇಷ - ಅವಮಾನವೆಲ್ಲ ಜರ್‍ರನೆ ಇಳಿದು ಹೋಗಿ, ಮನಸ್ಸಿನ ಭಾವಗಳೇ ಬದಲಾಗತೊಡಗಿತ್ತು.

ಅಷ್ಟು ಹೊತ್ತು ತನ್ನ ವ್ಯಗ್ರಗೊಂಡ ಮನಸ್ಸು ಜೀವದ ಗೆಳತಿ ಮಾಧವಿಯ ಕಣ್ಣೀರಿಗಾಗಿ ಬೇಡುತ್ತ ವ್ಯಾಕುಲಕೊಂಡಿತ್ತೇ ಹಾಗಾದರೆ, ಇಲ್ಲವೆಂದಾದರೆ ಮತ್ಯಾಕೆ ಅವಳ ಕಣ್ಣೀರಿನಿಂದ ತನ್ನ ಎದೆಯಲ್ಲಿ ಉರಿಯುತ್ತಿರುವ ಅಸಹನೆಯ ಬೆಂಕಿ ನಂದಿತ್ತು ? 'ಯಾಕೆ ಬೇಜಾರು ಮಾಡ್ತೀ ಮಾಧವಿ, ನನಗೇನೂ ಬೇಜಾರಿಲ್ಲ' ಎಂದು ಒಂದು ಮಾತು ತಾನು ಹೇಳಿ ಬರಬೇಕಿತ್ತು. ಛೇ ! ಎಂದು ಒಳಗೊಳಗೇ ಪರಿತಪಿಸಿದಳು. ಹೇಳಬಾರದ ಮಾತನ್ನು ಹೇಳಿದಾಗ ಎಷ್ಟು ಪಶ್ಚಾತ್ತಾಪ ಅನುಭವಿಸಬೇಕಾಗುತ್ತದೊ, ಹಾಗೆಯೇ ಹೇಳಲೇ ಬೇಕಾದ ಮಾತನ್ನು ಹೇಳದೇ ಇದ್ದಾಗಲೂ ಅಷ್ಟೇ ಪಶ್ಚಾತ್ತಾಪ ಪಡಬೇಕಾಗುತ್ತದೆ ಎಂದು ಮೊದಲ ಬಾರಿ ಅನ್ನಿಸಿಬಿಟ್ಟಿತವಳಿಗೆ.

ನಿಧಾನ ಹಿಂದೆ ಸರಿದು ಖಾಲಿಯಾದ ಸಿಮೆಂಟ್ ಆಸನದಲ್ಲಿ ಕೂತುಕೊಳ್ಳುತ್ತ, ಬರುವಾಗ ಮಾಧವಿ ಹಿಡಿಸಿದ ಹಳದೀ ಬಣ್ಣದ ದಪ್ಪ ಪ್ಲಾಸ್ಟಿಕ್ ಕೊಟ್ಟೆಯನ್ನು ಕುತೂಹಲಕ್ಕಾಗಿ ಬ್ಯಾಗಿನಿಂದ ಹೊರತೆಗೆದು, ಬಿಚ್ಚಿದಳು. ರಶ್ಮಿ ಕೂಡೆಂದರೂ ಕೂಡದೇ ಇಲ್ಲಿ - ಅಲ್ಲಿ ಓಡಾಡಿಕೊಂಡಿದ್ದವಳು ಪ್ಯಾಕೇಟು ತೆಗೆದ ಕೂಡಲೇ ಓಡಿ ಬಂದು 'ಅಮ್ಮಾ - ಲಾಡು' ಎನ್ನುತ್ತ ಹಸ್ತ ಚಾಚಿದಳು. 'ತಿನಬಾಕೀ' ಎಂದು ಬೈಯ್ಯುತ್ತ ಲಾಡು ಪೊಟ್ಟಣಕ್ಕೆ ಕೈ ಹಾಕಿದರೆ, ಮೆತ್ತಗೆ

ವಸ್ತುವೊಂದು ಕೈಯಿಗೆ ಹತ್ತಿದಂತಾಗಿ ಹೊರ ಜಗ್ಗಿ ನೋಡಿದರೆ ತಿಳಿಹಸಿರು ಬಣ್ಣದ ಚೆಂದದ ಸೀರೆ. 'ಅಯ್ಯೋ, ಸೀರೆ ಯಾಕೆ ಕೊಟ್ಲು ?' ಎಂದು ತನ್ನೊಳಗೇ ತಾನು ಉದ್ಗರಿಸುತ್ತ ಒಂದು ಕ್ಷಣ ರೋಮಾಂಚನಗೊಂಡು ಮತ್ತೆ ಮೌನಕ್ಕೆ ಜಾರಿದಳು. ಅವಳು ಸೀರೆ ಕೊಡಬಹುದೆಂದು ಸಂಶಯವಿದ್ದರೆ ತಾನೂ ಏನಾದರೂ ಇನ್ನೂ ಒಳ್ಳೆಯ ಆಹೇರು ತರಬಹುದಾಗಿತ್ತಲ್ಲ ಎಂಬ ಯೋಚನೆ ತೀವ್ರವಾಗಿ ಆತಂಕಗೊಂಡಳು.

ತನ್ನ ಹಾಗೂ ಮಾಧವಿಯ ನಡುವಿನ ಸಂಬಂಧ ಕೇವಲ ವ್ಯವಹಾರಿಕವಾಗಿಯೇ ನಿಂತು, ಬಿರುಕುಬಿಟ್ಟಂತೆ ಭಾಸವಾಗುತ್ತ ಹೋದಹಾಗೆ ಸಣ್ಣಗೆ ನಡುಗಿದಳು.

ಯಕಃಶ್ಚಿತ್ ಕಾರಣಕ್ಕೆ ಹುಟ್ಟಿಕೊಂಡ ಅಸಮಾಧಾನ ಮಾಧವಿಯ ಕಣ್ಣೀರಿನ ಜೊತೆ ಇಳಿದು ಹೋಗಿ, ಈಗ ಈ ಚೆಂದದ ಸೀರೆಯ ಮಡಿಕೆಗಳ ಒಳಗೆ ಸೇರಿ ಮಂಜಿನಂತೆ ಕರಗಿಹೋಗಿ, ಮನಸ್ಸು ಆಗಷ್ಟೇ ಅರಳಿದ ಹೂವಿನಂತೆ ಶಾಂತವಾಗಿತ್ತು.

'ವಾಪಸ್ಸು ಮಾಧವಿಯ ಮನೆಗೆ ಹೋಗಿಯೇ ಬಿಡೋಣ ಎಂದು ತೀವ್ರವಾಗಿ ಅನ್ನಿಸತೊಡಗಿದಂತೆ, ಅಕಸ್ಮಾತ್ತಾಗಿ ಗೋಕರ್ಣದಲ್ಲೇ ಮಾಸ್ತರಣಿಯಾಗಿದ್ದು, ಸ್ವಲ್ಪ ದಿನ ಕನ್ನಿಕಳ ಮನೆ ಪಕ್ಕದಲ್ಲೇ ಭಾಡಿಗೆಗಿದ್ದವಳು, ಈಗ ಮನೆ ದೂರವಿದ್ದರೂ ಬಾಜಾರದಲ್ಲೋ ದೇವಸ್ಥಾನದಲ್ಲೋ ವಾರಕ್ಕೊಮ್ಮೆ ಭೇಟಿಯಾಗಿ ಸುಖ - ದುಃಖ ಹಂಚಿಕೊಳ್ಳುತ್ತಿದ್ದ ಭಾಗೀರಥಿ ಬಂದು ಸೇರಿಕೊಂಡು ಬಿಟ್ಟಿದ್ದಳು. ಜೊತೆಯಲ್ಲೇ ಮಾತಾಡುತ್ತ ದಾರಿ ಸವೆಸಲು ಕನ್ನಿಕಾ ಸಿಕ್ಕಾಗ ಭಾಗೀರಥಿಗೂ ಖುಷಿ. ಇಲ್ಲೇ ನಮ್ಮ ಹಳೆಯ ಗೆಳತಿಯೊಬ್ಬಳ ತಂಗಿಯ ಮದುವೆಗೆ ಬಂದಿದ್ದೆ. ಎಂಟ್ಹತ್ತು ವರ್ಷಗಳ ಹಿಂದೆ ದಾಂಡೇಲಿಯಲ್ಲೆಲ್ಲೊ ಟೀಚರ್ ಇದ್ದಾಗಿನ ದೋಸ್ತಿ ಅದು. ಬಿಟ್ಟರೆ ಬಿಟ್ಟೇ ಹೋಗ್ತದೆ. ಅವಳೂ ನೆನಪು ಮಾಡಿ ಆಮಂತ್ರಣ ಕಳಿಸಿದ್ದಳು' ಎಂದು ಒಂದೇ ಉಸಿರಲ್ಲಿ ಹೇಳಿ, 'ನೀನೆಲ್ಲಿ ಇಲ್ಲಿ ?' ಎಂದಳು.

'ನಾನೂ ನಿಮ್ಮ ಹಾಗೇ ಬಾಲ್ಯದ ಗೆಳತಿಯೊಬ್ಬಳ ಗೃಹ ಪ್ರವೇಶಕ್ಕೆ ಬಂದಿದ್ದೆ' ಎಂದಳು ಚುಟುಕಾಗಿ 'ಚೊಲೋ ಆಯ್ತು ಹ್ಞಾ, ಹೀಗೆ ಬರೋದು, ಹೋಗೋದು, ಪತ್ರ ಬರೆಯೋದು ಮಾಡ್ತಿರಬೇಕು, ಆಗ್ಲೇ ನೆನಪುಗಳು ಸಂಬಂಧಗಳು ಗಟ್ಟಿಯಾಗಿರೋದು' ಎಂದವಳು ಹೇಳುತ್ತಿದ್ದಂತೆ 'ತಾಳೀಕೋಟೆ - ಗೋಕರ್ಣ' ಬಸ್ಸು ಸುಂಯನೆ ಬಂದು ಮುಂದೆಯೇ ನಿಂತುಬಿಟ್ಟಿತ್ತು.

ಭಾಗೀರಥಿ ಮೊದಲು ಗಡಬಡಿಸಿ ಹತ್ತಿ, ಮೂರು ಸೀಟಿರುವ ಕಡೆ ಕಿಟಕಿಯ ಹತ್ತಿರ ಕೈ ಅಗಲಿಸಿ ಕೂತು ಕನ್ನಿಕಳಿಗೂ, ರಶ್ಮಿಗೂ ಸೀಟು ಹಿಡಿದಿದ್ದಳು. 'ಸೀಟು ಸಿಕ್ಕಿತು ಸಧ್ಯ. ಎಷ್ಟು ಹೊತ್ತಿಗೆ ಬಿಡುತ್ತಾರೋ ಏನೋ' ಎಂದೆಲ್ಲ ಮಾತಾಡುತ್ತ ಕೂತಾಗಲೇ ಕಂಡಕ್ಟರು ಟಿಕೇಟು ಕೊಡಲು ಬಂದಾಗ, ಕನ್ನಿಕಾ, ತನ್ನದೊಬ್ಬಳದೇ ಟಿಕೇಟು ತೆಗೆಸಲೋ, ಇಲ್ಲ ಇಬ್ಬರದೂ

ತೆಗೆಸಿಬಿಡಲೋ ಎಂದು ಗಲಿಬಿಲಿಗೆ ಬಿದ್ದು ಅನುಮಾನಿಸುತ್ತ ಕೂತಾಗಲೇ ಭಾಗೀರಥಿ 'ಗೋಕರ್ಣಕ್ಕೆ ಎರಡು ಕೊಡಿ' ಎಂದು ದುಡ್ಡು ಕೊಟ್ಟುಬಿಟ್ಟಿದ್ದಳು.

ಭಾಗೀರಥಿ ಯಾವುದೇ ರೀತಿಯ ಭಾವನೆಯನ್ನು ತೋರ್ಪಡಿಸದೇ ಆತಂಕಗೊಳ್ಳದೇ ಕೂತದ್ದನ್ನು ಕಂಡ ಕನ್ನಿಕಾ ಎರಡನೇ ಬಾರಿ ಇಳಿದುಹೋದಳು. ಆದರೂ 'ನಾನೇ ತೆಗೆಸ್ತಿದ್ದೆ ಇಬ್ಬರದೂ' ಎಂದು ಕಂಪಿಸುವ ಸ್ವರದಲ್ಲಿ ಅಂದಿದ್ದಳು. ಇರ್ಲಿ ಬಿಡು ಎನ್ನುತ್ತ ಭಾಗೀರಥಿ ಕನ್ನಿಕಳ ತೊಡೆಯನ್ನು ಹಿತಕರವಾಗಿ ತಟ್ಟಿ, ತಾನು ಹೋಗಿ ಬಂದ ಮದುವೆ ಸಂಭ್ರಮದ ಬಗ್ಗೆ ಮಾತಾಡಲು ಶುರು ಮಾಡಿದ್ದಳು.

ಭಾಗೀರಥಿ ಯಾವುದೋ ಹಳೆಗೆಳತಿಯ ತಂಗಿಯ ಮದುವೆಗೆ ಗೋಕರ್ಣದಿಂದ ಹುಬ್ಬಳ್ಳಿಗೆ ಬಂದದ್ದು, ತಾನು ಹೊಸ ಮನೆ ಪ್ರವೇಶಕ್ಕೆ ಸುರಿಯುವ ಮಳೆಯನ್ನು ಲೆಕ್ಕಿಸದೇ ಮಗುವನ್ನೆತ್ತಿಕೊಡು ಬಂದದ್ದು, ಮಾಧವಿಯ ಆ ಎರಡು ಹನಿ ಕಣ್ಣೀರು, ಪ್ರೀತಿಯ ದ್ಯೋತಕವಾಗಿರುವ ಅವಳು ಕೊಟ್ಟ ಸೀರೆ ಎಲ್ಲವೂ ಒಮ್ಮೆಲೇ ಅವಳ ಚಿತ್ತದಲ್ಲಿ ನಾಮುಂದು - ತಾಮುಂದು ಎಂದು ತಾಕಲಾಟ ನಡೆಸಿತು.

ಈ ಎಲ್ಲ ಲೌಕಿಕದ ಕ್ಷುಲ್ಲಕ ವ್ಯವಹಾರವನ್ನು ಮೀರಿದ್ದು. ತನಗೇ ತಿಳಿಯದ್ದು ಅಂದುಕೊಂಡಳು. ತನ್ನನ್ನು ಕಟ್ಟಿಹಾಕಿದ ಎಂಥದೋ ಒಂದು ವಿಚಿತ್ರ ಅನುಬಂಧಕ್ಕೆ, ಮಧುರ ಅನುಭೂತಿಗೆ ವಶವಾದವಳಂತೆ ಕರಗುತ್ತ ಮೆಲ್ಲಗೆ ಭಾವಲೋಕದಲ್ಲಿ ತೇಲುತ್ತ ಸುಖಿಸಿದಳು.

# ಬಿಡುಗಡೆ

● ಅಬ್ದುಲ್ ರೆಹಮಾನ್

ಜೂನ್ ತಿಂಗಳಲ್ಲಾದ ಭರ್ತಿ ಮಳೆಯಿಂದ ಕಾಳಿ ತುಂಬಿಕೊಂಡು ಹರಿಯುತ್ತಿದ್ದಾತ್ತಾಳೆ. ಶುಕ್ರವಾರ ಮಧ್ಯಾಹ್ನ ಇವನು ನದಿಯ ದಡಕ್ಕೆ ಬಂದು ಅಲ್ಲಿದ್ದ ಕಲ್ಲುಬಂಡೆಯೊಂದರ ಮೇಲೆ ಕುಳಿತುಕೊಳ್ಳುತ್ತಾನೆ. ಮಳೆರಾಯನ ವಿರಾಮದಲ್ಲಿ ಸೂರ್ಯ ಪ್ರಕಾಶಮಾನವಾಗಿ ಬಿಸಿಲು ಹರಡುತ್ತಿರುತ್ತಾನೆ. ಕಲ್ಲು ಬಂಡೆ ಮೇಲೆ ಕುಳಿತ ಇವನ ಚಿಕ್ಕ ತಲೆಗೆ ಸೂರ್ಯನ ಬಿಸಿಲು ಬಡಿದು ಇವನನ್ನು ಘಾಸಿಗೊಳಿಸುತ್ತಿರುತ್ತದೆ. ಇವನ ತಲೆಯಲ್ಲಿ ಚಿಂತೆಗಳು ಭೋರ್ಗರೆಯುತ್ತಿರುತ್ತವೆ. ಅಸಹನೆಗಳು ಚಡಪಡಿಸುತ್ತಿರುತ್ತವೆ. ಆಗ 'ಒಟ್ಟಿನಲ್ಲಿ ನಾನು ಈ ಜಾತಿಯಿಂದ ಬಿಡುಗಡೆ ಹೊಂದಬೇಕು' ಎಂದುಕೊಳ್ಳುತ್ತಾನೆ. ಅಷ್ಟರಲ್ಲಿ ಮಸೀದಿಯಿಂದ ಬಂದ ಶುಕ್ರವಾರ ಮಧ್ಯಾಹ್ನ ಪ್ರಾರ್ಥನೆಯ 'ಬಾಂಗ' ಕೇಳಿ ಇವನ ತಲೆ ಸಿಡಿದು ಹೋಗುತ್ತದೆ. 'ಅಲ್ಲಾಹು ಅಕ್ಬರ್' ಕೇಳಿ ಬರುವುದೇ ತಡ ಇವನು ಕಿವಿ ಮುಚ್ಚಿಕೊಂಡು ಹಲ್ಲು ಮಸೆಯುತ್ತಾ ತುಂಬಿ ಹರಿಯುತ್ತಿರುವ ಕಾಳಿಯನ್ನೇ ನೋಡುತ್ತಿರುತ್ತಾನೆ. ಆಕೆಯ ದಬದಬ ಸಪ್ಪಳದ ಜೊತೆಗೆ ಅವನ ಎದೆಯ ಡವ ಡವಗಳೂ ಕೂಡಿ ಇವನನ್ನು ಒಂದಿಷ್ಟು ನಿಶ್ಚಲಗೊಳಿಸಿ ಬಿಡುತ್ತವೆ. ಒಂದೆರಡು ನಿಮಿಷಗಳ ನಂತರ ಮುಚ್ಚಿದ ಕಿವಿಗಳನ್ನು ಬಿಚ್ಚಿಡುತ್ತಾನೆ. ಅಲ್ಲಾಹು ಅಕ್ಬರ್ ಮುಗಿದಿರುತ್ತದೆ. ಮತ್ತರೆಕ್ಷಣದಲ್ಲಿ ಕೈ ಕಟ್ಟಿಕೊಂಡು ಕಾಲು ಮುದುಡಿಸಿ ಕುಳಿತುಕೊಳ್ಳುತ್ತಾನೆ. ಒಂದು ಸಲ ಗೋಣೆತ್ತಿ ಬರಿದಾದ ಆಗಸವನ್ನು ವೀಕ್ಷಿಸುತ್ತಾನೆ. ಸೂರ್ಯನ ಬಿಸಿಲು ಕಣ್ಣಿಗೆರಗಿದರೂ ಆಗಸವನ್ನೇ ದಿಟ್ಟಿಸುತ್ತ ಇರುತ್ತಾನೆ. ನಂತರ ಮೆಲ್ಲಗೆ ಕಣ್ಣು ಮುಚ್ಚಿಕೊಂಡು ಎಲ್ಲವನ್ನೂ ನೆನಪಿಸಿಕೊಳ್ಳುತ್ತಾನೆ;

❖ ❖ ❖

'ಏನಲೇ ಕಾಫಿರ್, ಕಾಲೇಜು ಓದಿದ ತಕ್ಷಣ ನೀನೇನು ಅಲ್ಲಾಹು ಆಗಿ ಬಿಟ್ಟೆ ಏನು ? ಮಸೀದಿ ಮರೆತು ಬಿಡುವುದೇನು ? ನಮಾಜದ ಖಬರ್ ಇಲ್ಲವೇನು ? ಇಸ್ಲಾಂದ ಸಂಪ್ರದಾಯಗಳನ್ನು ಮುರಿಯುವಷ್ಟು ಜ್ಞಾನ ಬಂದಿದೆಯೇನು ?' ಇತ್ಯಾದಿಯಾಗಿ ಬಾಪಾ (ಅಪ್ಪ) ಪ್ರಶ್ನಿಸಿದ ಪ್ರಶ್ನೆಗಳಿಗೆ ಉತ್ತರವಾಗಿ ತಾನು ಹೇಳಿದ 'ಬಾಪಾ, ನನಗೆ ಹಿಂದೊಮ್ಮೆ ಈ ಧರ್ಮ ಸಂಪ್ರದಾಯವನ್ನು ಬಿಡಬೇಕೋ, ಆಚರಿಸಬೇಕೋ ಎಂದು ಗೊತ್ತಿರಲಿಲ್ಲ,

ವಿಚಾರಿಸಿರಲಿಲ್ಲ. ಆಗ ದಿನದ ಊಟ, ನಿದ್ದೆ, ಶಾಲೆಗಳ ಜೊತೆಗೆ 'ನಮಾಜ್' ಕೂಡಾ ಒಂದು ಎಂದು ಹಾಗೆ ಮಾಡುತ್ತಿದ್ದೆ. ಈಗ ನನಗೆ ತಿಳುವಳಿಕೆ ಬಂದಿದೆ. ಒಳ್ಳೊಳ್ಳೆ ಪುಸ್ತಕಗಳನ್ನು ಓದಿದ್ದೇನೆ. ಬದುಕಲು ಧರ್ಮ ಸಂಪ್ರದಾಯಗಳೇ ಬೇಕು ಎಂದು ನನಗಿಂದು ಅನ್ನಿಸುತ್ತಿಲ್ಲ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ನನಗೆ ಈಗ ಈ ಜಾತಿಯ ಗೊಡವೆ ಬೇಡ, ನಮಾಜ್ ಬೇಡ, ಜಾತಿಯ ಏನೇನೂ ಬೇಡ. ನನ್ನಷ್ಟಕ್ಕೆ ಸ್ವತಂತ್ರವಾಗಿ ಬದುಕಿಕೊಂಡಿರುತ್ತೇನೆ' ಎಂದ ಮಾತುಗಳು ನೆನಪಾಗುತ್ತವೆ. ತನ್ನ ಈ ಧೋರಣೆಗೆ ಮನೆಯವರೆಲ್ಲ ಕೂಡಿ ಮೀಟಿಂಗ್ ಮಾಡಿ 'ಅದ್ಹೇಗೆ ಇವನ ತಲೆಯಲ್ಲಿ ಸೈತಾನನ ಪ್ರವೇಶವಾಯಿತೊ ? ಇವನ್ಹೇಗೆ ಕಾಫಿರನಾದನೊ ?' ಎಂದು ಚಿಂತಿಸಿದ್ದರು. ಸಾಲದೆ ಜಮಾತ್‌ನ ಪ್ರೆಸಿಡೆಂಟರನ್ನು ಕರೆಯಿಸಿ 'ಬೇಟಾ, ಹಾಗೆಲ್ಲ ಮಾಡಬಾರದು. ಇಸ್ಲಾಂದ ಕರ್ತವ್ಯವನ್ನು ನಾವು ಮಾಡಲೇಬೇಕು. ದಿನಕ್ಕೆ ಐದು ಸಲ, ತಪ್ಪಿದಲ್ಲಿ ಒಂದು ಸಲ, ಅದೂ ಆಗದಿದ್ದರೆ ಶುಕ್ರವಾರಕ್ಕೊಮ್ಮೆ ಜುಮ್ಮಾ ನಮಾಜ್ ಇವನ್ನು ಮಾಡಲೇಬೇಕು. ಇಲ್ಲದಿದ್ದರೆ ಇದು ಸರಿಯಾಗುವುದಿಲ್ಲ ನೋಡು ಹುಷಾರ್.....' ಎಂದು ವಾರ್ನಿಂಗ್ ಕೊಟ್ಟಂದಿನಿಂದ ಇವನಲ್ಲಿ ಜಾತಿಯ ಬಗ್ಗೆ ಮತ್ತಷ್ಟು ದ್ವೇಷ ಮತ್ತು ವಿರೋಧ ಅಭಿಪ್ರಾಯಗಳು ಬೆಳೆಯುತ್ತ ಹೋದವು !

ಹೀಗೇ ಇವನು ಅಂದಿನಿಂದ ವರ್ಷಪೂರ್ತಿ ಒಂದು ದಿನವೂ ನಮಾಜ್ ಮಾಡದೆ ಕಳೆದ. ಕುರಾನ್ ಭೂಮಿಗೆ ಬಂದ ಪವಿತ್ರ ತಿಂಗಳು ರಂಜಾನ್ ಬಂದಿತ್ತು. ಮನೆಯವರೆಲ್ಲ ಪ್ರಥಮ ದಿನದ ಉಪವಾಸಕ್ಕೆ ಬೆಳಿಗ್ಗೆ ಎದ್ದು ಸಹರ್ ಊಟಕ್ಕೆ ರೆಡಿಯಾದರು. ಇವನು ಮಾತ್ರ ಮಲಗಿದ್ದಲ್ಲಿಂದ ಏಳಲೇ ಇಲ್ಲ. ಸಹರ್‌ಗೆ ಐದು ನಿಮಿಷ ಇರುವಾಗಲೇ ಬಾಪಾ ಬಂದು ಇವನ ಕೋಣೆಯ ಬಾಗಿಲು ತೆರೆದು ಇವನನ್ನು ಎಬ್ಬಿಸಿ ಕುಳ್ಳಿರಿಸಿ ತರಾಟೆಗೆ ತೆಗೆದುಕೊಂಡರು. ಇವನು, 'ತಾನು ಈ ವರ್ಷ ಮತ್ತು ಈ ವರ್ಷದಿಂದ ಮುಂದೆಂದೂ ಉಪವಾಸ ಮಾಡುವುದಿಲ್ಲ, ನಮಾಜ್ ಅಂತೂ ನನ್ನಿಂದ ಆಗುವುದಿಲ್ಲ, ದಾಡಿ ಬೆಳೆಸುವುದಿಲ್ಲ, ಟೋಪಿ ಹಾಕುವುದಿಲ್ಲ' ಎಂದವನೇ ಚಾದರ ಹೊದ್ದುಕೊಂಡು ಹಾಸಿಗೆಯಲ್ಲಿ ಉರುಳಿದ್ದ. ಮನೆಯವರೆಲ್ಲ ಇವನ ಖಡಕ್ ಖಬರಿ ಕೇಳಿ ಇವನಿದ್ದಲ್ಲಿಗೆ ಧಾವಿಸಿದ್ದರು. ಎಲ್ಲರೂ ಮುಖ ಮುಖ ನೋಡಿಕೊಂಡು ಹಲ್ಲು ಮಸೆಯತೊಡಗಿದರು. ಇವನ ಮೇಲೆ ಬಾಪಾನಿಗೆ ಕೋಪ ಉಕ್ಕೇರಿ ಬಂತು, ಸಿಟ್ಟಿನಿಂದಲೇ ಇವನ ಚಾದರ್ ಜಗ್ಗಿ ಕತ್ತಿಗೆ ಕೈ ಹಾಕಿ ಭುಜಕ್ಕೊಂದು ಬಾರಿಸಿ ಕೊರಳುಪಟ್ಟಿ ಹಿಡಿದು ಮನೆಯ ಹೊರಗೆಳೆದುಕೊಂಡು ಬಂದರು. ಮನೆಯವರು ಬಾಪಾನ ಹಿಂದೆಯೇ ಇದ್ದರು. ಒಬ್ಬರೂ ಇವನನ್ನು ಬಚಾವ್ ಮಾಡಲಿಲ್ಲ. ಅಂಗಳಕ್ಕೆ ಬಂದಿದ್ದ ಅಬ್ಬಾ (ಅಪ್ಪ) ಮತ್ತು ಮನೆಯವರು ಇವನನ್ನು ಸುತ್ತುವರೆದು ಮತ್ತೆ ತರಾಟೆಗೆ ತೆಗೆದುಕೊಂಡರು. ಅಕ್ಕಪಕ್ಕದಲ್ಲಿನ ಮನೆಗಳಿಂದ ಟೋಪಿ ಧರಿಸಿದವರು ಮತ್ತು ಅವರ ಮಹಿಳೆಯರೂ ಬಂದು ಸುತ್ತುವರೆದರು. ಇವನು ಜುಮ್ಮೆನ್ನಲಿಲ್ಲ. ಬಾಪಾನಿಗೆ ತಡೆಯಲಾಗದೆ ಇವನ ಕತ್ತು ಹಿಡಿದು ನೂಕುತ್ತಾ, 'ನೀನು ಉಪವಾಸ ಮಾಡುವುದಿಲ್ಲ, ನಮಾಜ್ ಮಾಡುವುದಿಲ್ಲ, ದಾಡಿ ಇಲ್ಲ,

ಟೋಪಿ ಇಲ್ಲ, ಅಂದರೆ ನಾನು ನಿನ್ನನ್ನು ಮನೆಯಲ್ಲಿಟ್ಟುಕೊಳ್ಳುವುದಿಲ್ಲ. ಮನೆ ಬಿಡು ಕಾಫಿರ್ ನನ್ಮಗನೆ.......' ಎಂದು ಇವನನ್ನು ದೂಡಿಬಿಟ್ಟಿದ್ದನು. ಇವನು 'ನಿಮ್ಮ ಗೊಡವೆಯೇ ಸಾಕು' ಎನ್ನುತ್ತಾ ಹಿಂದಕ್ಕೆ ತಿರುಗಿ ನೋಡದೆಯೇ ಆ ಮನೆ ಆ ಓಣಿ ಆ ಮುಸ್ಲಿಂ ಜಗತ್ತು ಬಿಟ್ಟು ಈ ಊರಿಗೆ ಬಂದು ಬಿಟ್ಟಿದ್ದ. ಆಗ ಇವನಿಗೆ ಕೇವಲ ಇಪ್ಪತ್ತೂರು ವಯಸ್ಸು.

ಹೀಗೆ ತನ್ನನ್ನು ಮುಲಾಜು ಇಲ್ಲದೆ ಹುಟ್ಟಿದ ಮನೆ, ಓಣಿ, ಊರು ಬಿಡಿಸಿದ ಬಾಪಾ ಮತ್ತು ಮನೆಯವರು ಅಲ್ಲದೆ ಅಲ್ಲಿದ್ದ ಮುಸ್ಲಿಂರು ಎಲ್ಲರೂ ಇವನಿಗೆ 'ಸೈತಾನ್'ರಂತೆ ಕಾಣಿಸುತ್ತಿದ್ದರು. ಆಗ ಇವನೊಳಗೆ 'ಒಟ್ಟಿನಲ್ಲಿ ನಾನು ಈ ಜಾತಿಯಿಂದ ಬಿಡುಗಡೆ ಹೊಂದಬೇಕು.....' ಎಂಬುದು ಮೊಳಗಿತ್ತು. ಅದಕ್ಕಾಗಿ ಆ ಊರು ಬಿಟ್ಟು ಈ ಊರಿಗೆ ಬಂದಾಗ ಇವನು 'ಈ ಊರಿನಲ್ಲಿ ಮುಸ್ಲಿಂರಿಲ್ಲದ ಓಣಿಗಳಲ್ಲಿ ರೂಮು ಬಾಡಿಗೆಗೆ ಸಿಗುತ್ತದೆಯೇ ? ಎಂದು ಅಲ್ಲಲ್ಲಿ ವಿಚಾರಿಸಿದ್ದ. ಇವನು ಹೀಗೆ ಕೇಳಿದವರಲ್ಲಿ ಕೆಲವರು ಮುಸ್ಲಿಂರೂ ಇದ್ದರು. ಅಂತಹವರು 'ಗೊತ್ತಿಲ್ಲ' ಎಂದು ಸಿಡುಕಿದ್ದರು. ಮುಸ್ಲಿಂರಲ್ಲದ ಕೆಲವರು ಸಹನೆಯಿಂದ 'ಆ ಓಣಿಯಲ್ಲಿ ಮುಸ್ಲಿಂರು ಯಾರೂ ಇಲ್ಲಂತ ಕಾಣಿಸ್ತದೆ' ಅನ್ನುವುದರ ಜೊತೆಗೆ ಯಾಕೆ ? ಎಂದು ಪ್ರಶ್ನಿಸಿದವರೂ ಇದ್ದರು. ಇವನು ಯಾಕೆ ಅನ್ನುವುದಕ್ಕೆ ಉತ್ತರಿಸಲು ಹೋಗದೆ ಓಣಿಗೆ ಬಂದು ಬಿಟ್ಟಿದ್ದ. ಖಾಲಿಯಿದ್ದ ಮನೆಯ ಮಾಲೀಕರಿಗೆ ಭೇಟಿಯಾಗಿದ್ದ, ಮಾಲೀಕರು ಮುಸ್ಲಿಂರೇನಾಗಿರಲಿಲ್ಲ. ಇಬ್ಬರ ನಡುವೆ ಮಾತುಕತೆ ಆಯ್ತು. ಮಾಲೀಕರು ಕೀ ತಂದು ಕೋಣೆ ತೋರಿಸುತ್ತಾ 'ಸರೀನಾ ?' ಎಂದಿದ್ದರು. ಇವನು 'ಅಡ್ಡಿಯಿಲ್ಲ' ಅಂದಿದ್ದ. ಮಾಲೀಕರು ಒಂದು ಪಟ್ಟಿ ಪೆನ್ನು ತಂದು 'ಇದರಲ್ಲಿ ನಿಮ್ಮ ಹೆಸರು, ಸ್ವಂತ ಊರು, ಇಲ್ಲಿ ಏನು ಮಾಡುತ್ತೀರಿ ? ಎಂದು ಬರೆದು ಕೊಡಿ. ಇದು ನಮ್ಮ ಸಿಸ್ಟಮ್' ಎಂದರು. ಇವನು ಗಲಿಬಿಲಿಗೊಂಡಿದ್ದ. ಪಟ್ಟಿ ತೆಗೆದುಕೊಂಡು ಬರೆದು ಕೊಟ್ಟಿದ್ದ. ಬರೆದದ್ದನ್ನು ಓದಿದ ಮಾಲೀಕರು 'ಇದೇನು ? ಹೆಸರು - ಮನುಷ್ಯ; ಊರು - ಈ ದೇಶ; ಕೆಲಸ - ಇನ್ನು ಮೇಲೆ ಅಂತ ಬರೆದಿದ್ದೀರಲ್ಲಾ ? ಹೋಗಲಿ, ನಿಮ್ಮ ಜಾತಿಯನ್ನಾದರೂ ಹೇಳಿ' ಎಂದ. ಇವನು ತುಟಿ ಬಿಗಿ ಹಿಡಿದು, ಮೊಗವರಳಿಸಿ ಅಸಹಾಯಕನಾಗಿ ಕೋಣೆಯ ಮೇಲ್ಚಾವಣಿ ದಿಟ್ಟಿಸತೊಡಗಿದ್ದ. ಮಾಲೀಕರೇ ಮುಂದುವರೆದು, 'ಬ್ರಾಹ್ಮಣರಾ ?' ಎಂದಿದ್ದರು. ಇವನು 'ಹೂಂ' ಅಂದಿದ್ದ; 'ಲಿಂಗಾಯತರೇ ?' 'ಹೂಂ'; 'ಎಸ್.ಸಿ./ಎಸ್.ಟಿ. ಏನಾದ್ರೂ ?' 'ಹೂಂ'; 'ಬೌದ್ಧರು, ಜೈನರು ?' 'ಹೂಂ'; ಕಡೆಗೆ 'ಕ್ರಿಶ್ಚಿಯನ್ನರು ?' ಹಾಗಾದ್ರೆ ಮುಸ್ಲಿಂರಿರಬೇಕು ಅಲ್ಲವೇ ? ಎಂದು ಮಾಲೀಕರು ಪ್ರಶ್ನಿಸಿದಾಗ ಇವನು ಬಿಳುಚಿ ಹೋಗಿದ್ದ. ಆಗ 'ಹೂಂ' ಅನ್ನಲಿಲ್ಲ. ಹಾಗೆಯೇ 'ಉಹೂಂ' ಅಂತಾನೂ ಅನ್ನಲಿಲ್ಲ !

ಇವನ ಬಿಳುಚು ಮುಖ ನೋಡಿ ಮಾಲೀಕರು ಮತ್ತೇನು ಹೆಚ್ಚಿಗೆ ಕೇಳಲು ಹೋಗದೆ 'ಕೀ ಇಟ್ಕೊಳ್ಳಿ. ನಮ್ಮ ಆಳು ಬರ್ತದೆ. ನಿಮಗೆ ಒಂದು ಕೊಡ, ತಂಬಿಗೆ ಕಳಿಸಿರ್ತೇನೆ. ನೀವು

ತಂದ ಮೇಲೆ ಪರತ್ ಕೊಟ್ರಾಯಿತು, ಏನೂ ಸಂಕೋಚ ಪಡಬೇಡಿ, ಆರಾಮವಾಗಿ ಉಳೀರಿ....' ಎಂದು ಇವನ ಕೈಗೆ ಕೀ ಕೊಟ್ಟು, ಹೊರಬಿದ್ದಿದ್ದರು. ಅಲ್ಲೇ ಹಾಯ್ದು ಹೋಗುತ್ತಿದ್ದ ವ್ಯಕ್ತಿಯೊಂದು 'ಏನು ಭಟ್ರರೆ ಯಾರು ಬಂದದ್ದು ?' ಎನ್ನಲು ಮಾಲೀಕರು ಬಾಡಿಗೆಗ ಇರ್ತಾನಂತೆ, ಪಾಪ ಹುಡುಗ..... ಇರಲಿ' ಎಂದು ಚುಟುಕಾಗಿ ಉತ್ತರಿಸಿದ್ದರು. ಆ ವ್ಯಕ್ತಿಯೊಡನೆ ತಮ್ಮ ಮನೆ ಕಡೆ ನಡೆಯುತ್ತಿದ್ದ ಭಟ್ಟರಿಗೆ ವ್ಯಕ್ತಿ ಮತ್ತೆ ಪ್ರಶ್ನಿಸಿತ್ತು. 'ಯಾವ ಪೈಕಿಯಂತೆ.... ? ಎಲ್ಲಿಯವನಂತೆ ?' ಎಂದು. ಭಟ್ಟರು ಮತ್ತೆ ಚುಟುಕಾಗಿಯೇ 'ಮುಸ್ಲಿಂರಂತೆ ಕಾಣಿಸ್ತಾರೆ' ಎಂದು ಉತ್ತರಿಸಿದ್ದು ಗಾಳಿಯಲ್ಲಿ ಅಲೆ ಅಲೆಯಾಗಿ ತೇಲಿ ಬಂದು 'ಮುಸ್ಲಿಂರವನಂತೆ' ಎಂದದ್ದು ಇವನ ಕಿವಿಯ ಮೇಲೆ ಅಪ್ಪಳಿಸಿತ್ತು. ಅದ್ಹೇಗೋ ಕೆಲವೇ ದಿನಗಳಲ್ಲಿ ಇವನು ಮುಸ್ಲಿಂರವನು ಎಂಬುದು ವಾಸವಾಗಿದ್ದ ಆ ಮುಸ್ಲಿಂರಲ್ಲದ ಓಣಿಗೆಲ್ಲ ಗೊತ್ತಾಗಿ ಹೋಗಿತ್ತು. ಮತ್ತೆ ಅವನೊಳಗೆ 'ಒಟ್ಟಿನಲ್ಲಿ ನಾನು ಈ ಜಾತಿಯಿಂದ ಬಿಡುಗಡೆ ಹೊಂದಬೇಕು' ಎಂಬುದು ಮೊಳಗುತ್ತಿತ್ತು...... !

ಇವನು ಈ ಊರು, ಈ ಓಣಿ, ಈ ರೂಮ್‌ಗೆ ಬಂದು ಒಂದು ವರ್ಷ ಕಳೆದಿತ್ತು. ಎಲ್ಲೋ ಕಂಪನಿಯಲ್ಲಿ ಕೆಲಸ ಪಡೆದಿದ್ದ. ಸಂಬಳದಲ್ಲಿ ಹೊಟ್ಟೆ - ಬಟ್ಟೆ, ಮನೆ ಭಾಡಿಗೆಗೆ ಏನೂ ಕೊರತೆ ಇರಲಿಲ್ಲ. ಒಂದಿಷ್ಟು ಪುಸ್ತಕಗಳನ್ನು ಖರೀದಿಸಿ ಓದತೊಡಗಿದ್ದ. ಒಟ್ಟಿನಲ್ಲಿ ತನ್ನ ಸ್ವಂತ ಕಾಲಿನ ಮೇಲೆ ನಿಂತಿದ್ದ. ಆಗೊಮ್ಮೆ ಇವನಿದ್ದ ರೂಮಿಗೆ ಎದುರಾಗಿರುವ ಆಂಟಿ - ಅಂಕಲ್ ಎಂದು ಓಣಿಯ ಮಕ್ಕಳಿಂದ ಕರೆಯಲ್ಪಡುತ್ತಿದ್ದ ದಂಪತಿಗಳ ಮನೆಗೆ ಎಲ್ಲಿಂದಲೋ ಒಬ್ಬಳು ಇಪ್ಪತ್ತರ ಹುಡುಗಿ ಬಂದಳು. ಇವನೊಂದು ಮಧ್ಯಾಹ್ನ ಹಾಸಿಗೆಯಲ್ಲಿ ಒರಗಿಕೊಂಡು ಪುಸ್ತಕವೊಂದನ್ನು ವೀಕ್ಷಿಸುತ್ತಿದ್ದಾಗ, ಇವನ ಕಿಡಕಿಯಿಂದ ಬಂದ ಕನ್ನಡಿಯ ಬೆಳಕು ಗೋಡೆಯ ಮೇಲೆ ಬಿತ್ತು. ಅದನ್ನು ಕಂಡು ಇವನು ಆಶ್ಚರ್ಯನಾದ. ಆ ಬೆಳಕು ಗೋಡೆಯ ಮೇಲೊಮ್ಮೆ, ಮಧ್ಯದಲ್ಲೊಮ್ಮೆ ಹೀಗೇ ಎಲ್ಲೆಲ್ಲಾ ಬೀಳಹತ್ತಿತು. ಇವನಿಗೆ ಏನೋ ಮಜಾಯಿದೆ ಎನ್ನಿಸಿತು. ಎದ್ದು ಕುಳಿತು ಕಿಡಕಿಯ ಆ ಕಡೆ ನೋಡಿದ. ಎದುರು ಮನೆಯ ಆ ಕಿಡಕಿಯೊಳಗೆ ಹಣೆಯಲ್ಲಿ ಕುಂಕುಮವಿಟ್ಟು ನಳನಳಿಸುತ್ತಿದ್ದ ಬೆಳ್ಳನೆಯ ಹುಡುಗಿ ತನ್ನನ್ನು ಕನ್ನಡಿ ಬಿಟ್ಟು ಸತಾಯಿಸುತ್ತಿರುವುದನ್ನು ನೋಡಿ ಇವನಿಗೆ ನಗು ಬಂತು. ಅವಳು ಇನ್ನೊಮ್ಮೆ ಬಿಟ್ಟ ಕಣ್ಣಿನಿಂದ ನೋಡಿದಳು. ಇವನು ಅದೇ ನೋಟದಿಂದ ನೋಡಿ ನಕ್ಕು ಬಿಟ್ಟ. ಇವನ ನಗೆಗೆ ಪ್ರತಿಕ್ರಿಯೆಯಾಗಿ ಅವಳೂ ನಕ್ಕಳು. ತನ್ನ ಬಟ್ಟಲುಕಣ್ಣನ್ನೊಮ್ಮೆ ಫಳಕ್ ಅಂತ ಹೊಡೆದು ಕಿಡಕಿಯಿಂದ ಆ ಕಡೆ ಸರಿದು ಮಂಗಮಾಯವಾದಳು. ಇವನು ಕಂಗಾಲಾಗಿ ಹೋಗಿದ್ದ. ಹಾಗೆಯೇ ಹಾಸಿಗೆಯಲ್ಲಿ ಉರುಳಿ ನಾಚಿಕೆಯಿಂದ ಮುಖಮುಚ್ಚಿಕೊಂಡು ಬಿಟ್ಟ. ಆಕೆ ಇವನ ಕನಸಿನಲ್ಲಿ ಬರತೊಡಗಿದಳು. ಇವನಲ್ಲಿ ದಿನೆದಿನೇ ಹೊಸ ಚಿಗುರು ಹೊರಡಿಸತೊಡಗಿದಳು. ದಿನಂಪ್ರತಿ ಇವನು ರೂಮಿಗೆ ಬರುವ ಸಮಯಕ್ಕೆ ಅವಳು ಮನೆಯ ಬಾಗಿಲಲ್ಲೋ, ಕಿಡಕಿಯಲ್ಲೋ ನಿಂತು ತನ್ನ ದರ್ಶನ ಮಾಡಿಸಿಬಿಟ್ಟು ಕಿಲಕಿಲಿಸುತ್ತಾ ಒಳಗೆ

ನಡೆದು ಮತ್ತೆ ಆಗಾಗ ಕಿಡಕಿಯಲ್ಲಿ ನಿಂತು ಕಣ್ಣು ಬೆರೆಸುತ್ತಿದ್ದಳು. ಇವನಂತೂ ಅವಳಲ್ಲಿ ಬೆರೆತು ಹೋಗಿದ್ದ.

ಹೀಗೊಮ್ಮೆ ಕರೆಂಟು ಇಲ್ಲದೆ ನಳದಲ್ಲಿ ನೀರು ಬಾರದೆ ಇದ್ದಾಗ ಸ್ವಲ್ಪ ದೂರದಲ್ಲಿರುವ ಸಾರ್ವಜನಿಕ ಬಾವಿಗೆ ನೀರು ತರಲು ಇವನು ಹೋಗಿದ್ದ. ನೀರು ಸೇದಿಕೊಂಡು ಕೊಡ ಎತ್ತಿಕೊಳ್ಳುವಾಗ ಎದುರು ಮನೆಯ ಕನ್ನಡಿ ಹುಡುಗಿ, ಅವನ ಕನಸಿನ ಹುಡುಗಿ ಕಂಕುಳಲ್ಲಿ ಕೊಡವಿರಿಸಿಕೊಂಡು ಇವನ ಮುಂದೆ ನಿಂತಿತ್ತು ಹೂ ನಗೆ ಬೀರುತ್ತಾ. ಇವನು ಪೆಚ್ಚು ಪೆಚ್ಚಾಗಿ ನಕ್ಕ, ಅವಳೂ ನಗೆ ಬೆರೆಸುತ್ತಾ 'ನಿಮ್ಮ ಹೆಸರು ?' ಎಂದಳು. ಇವನು ಕೂಡಲೇ ಬಿಳುಚಿಕೊಂಡಾಗ 'ಹೋಗಲಿ ಮೊದಲು ನನ್ನ ಹೆಸರು ಹೇಳುತ್ತೇನೆ' ಎಂದು ಆಕೆ ತನ್ನ ಹೆಸರು ಹೇಳಿ ಮುಗಿಸಿ 'ಈಗಾದ್ರೂ ಹೇಳಿ ನಿಮ್ಮ ಸ್ವೀಟ್ ನೇಮ್ ?' ಎಂದಳು. ಇವನು ತುಟಿ ಬಿಗಿ ಮಾಡಿ ಮೂಗರಳಿಸಿ ಅದೆಂತದ್ದೋ ಅಸಹಾಯಕ ನೋಟ ಬೀರಿದ. ಅವಳು ಅವಸರ ಮಾಡಹತ್ತಿದಳು, ಹೇಳಿ ಹೇಳಿ ಯಾರಾದ್ರೂ ಬಂದು ಬಿಡುತ್ತಾರೆ ಎಂದಳು. ಇವನು ಪೆಚ್ಚು ಮೋರೆ ಮಾಡಿಕೊಂಡು ಅದೇ ನೋಟ ಬೀರಿದ. ಅವಳು ಮಾತು ಬದಲಿಸುತ್ತಾ, 'ಯಾವ ಊರಿನವರು ?' ಅಂದಳು. ಇವನು ಕೂಡಲೇ 'ನನಗೆ ಗೊತ್ತಿಲ್ಲ' ಅಂದ. ಅವಳು ಸೋತು ಹೋದಳು. ಅಸಹನೆಯಿಂದ 'ಕಡೆಗೆ ನೀವು ಯಾವ ಪೈಕಿ ಅಂತಾದ್ರೂ ಹೇಳ್ತೀರಾ ?' ಅಂದಳು. ಇವನು 'ಮನುಷ್ಯರ ಪೈಕಿ' ಅಂದ 'ಛೀ ಹೋಗಿ ಅದಲ್ಲಾ, ಮನುಷ್ಯರಿಗಂತಾ ಒಂದು ಜಾತಿ ಇರುತ್ತಲ್ಲಾ ಅದನ್ನ ಹೇಳಿ ಮಾರಾಯ್ರೇ ?' ಸ್ವಲ್ಪ ಭಯದಿಂದ ಪ್ರಶ್ನಿಸಿದ್ದಳು. ಅವಳ ಈ ಪ್ರಶ್ನೆಗೆ ಇವನ ತಲೆ ಗಿರ್ರೆಂದು ಒಮ್ಮೆಲೇ ಸಿಟ್ಟು ತಂದುಕೊಂಡು, 'ನಾನು...... ನಾನು..... ಮುಸ್ಲಿಂರವನು...... ಏನು ತೊಂದ್ರೆಯಿದೆಯಾ ?' ಎಂದ್ಬಿಟ್ಟು, ಅವಳನ್ನು ಪ್ರೀತಿಯಿಂದ ನೋಡಹತ್ತಿದ. ಅವಳು ಇವನು ಹೇಳಿದ ಜಾತಿ ಕೇಳಿ ಜರ್ರೆಂದು ಇಳಿದು ಹೋದಳು. ವಿಹ್ವಲಳಾಗಿ ವಿಚಿತ್ರವಾಗಿ ಎಂಥದ್ದೋ ಕೀಳರಿಮೆಯಲ್ಲಿ ಇವನನ್ನೊಮ್ಮೆ ನೋಡಿ ಬಿಟ್ಟು ಕಂಕುಳಲ್ಲಿರಿಸಿಕೊಂಡಿದ್ದ ಕೊಡವನ್ನು ಕೈಗೆ ತೆಗೆದುಕೊಂಡು ಸೋತ ಹೆಜ್ಜೆ ಹಾಕುತ್ತಾ ಭಾವಿಕಟ್ಟೆ ಕಡೆ ನಡೆದಳು. ಇವನು ನಿಂತಲ್ಲಿಂದ ತಿರುಗಿ ಅವಳ ಕಡೆ ನೋಡಿದ. ಅವಳು ಮಾತ್ರ ಹಿಂದಕ್ಕೆ ನೋಡಲೇ ಇಲ್ಲ. ಇವನಲ್ಲಿ ಅಪಮಾನದ ಕಿಡಿ ಹಾರಿತು. ಸುಟ್ಟಮುಖ ಮಾಡಿಕೊಂಡು ನೋವು ತುಂಬಿದವನಂತೆ ಭಾರವಾದ ಹೆಜ್ಜೆ ಹಾಕುತ್ತಾ ತನ್ನ ರೂಮಿಗೆ ಬಂದ. ಕಿಡಕಿಯಲ್ಲಿ ನಿಂತು ಅವಳು ಬರುವುದನ್ನೇ ಕಾಯುತ್ತಿದ್ದ. ಅವಳು ಬಂದಳು, ಅದೇ ಜರಿದ ಮುಖ ಇತ್ತು, ಕೊಡ ಹೊತ್ತು ಮನೆಯೊಳಗೆ ನಡೆದಳು, ಕೊಡ ಇಳಿಸಿ ಬಂದು ಕಿಡಕಿ ಹಾಕಿಕೊಂಡು ಬಿಟ್ಟಳು. ಮುಖದಲ್ಲಿ ಯಾವ ಭಾವನೆಯೂ ಇರಲಿಲ್ಲ. ಇವನು ದಿಗ್ಭ್ರಾಂತನಾಗಿ 'ಓಹ್ ! ಕನ್ನಡಿ ಹುಡುಗಿ, ಕಿಲಕಿಲಿಸುವ ಹುಡುಗಿ, ನನ್ನ ಕನಸಿನ ಹುಡುಗಿಯೇ, ನನ್ನ ಜಾತಿ ತಿಳಿದು ನೀನು ಹೀಗೆ ಮಾಡಿದೆಯಾ ? ಥುತ್' ಎಂದು ಉಗಿದು ಕಣ್ಣೀರು ತುಂಬಿಕೊಂಡು ಹಾಸಿಗೆಯಲ್ಲಿ ಉರುಳಿ ಹೋಗಿದ್ದ. ಇವನ ಎದೆಯೊಳಗೆ ಆಗ 'ನಾನು ಈ ಜಾತಿಯಿಂದ ಬಿಡುಗಡೆ ಹೊಂದಬೇಕು' ಎಂಬುದು ಮಾರ್ದನಿಗೈಯಹತ್ತಿತ್ತು !

ಆ ದಿನ ಸಂಜೆ ಅನಿವಾರ್ಯವಾಗಿ ತಿರುಗಾಡಿ ಬರಲು ಇವನು ಮಾರುಕಟ್ಟೆಗೆ ಹೋಗಿದ್ದ. ಕಳೆಗುಂದಿದ ಕಣ್ಣುಗಳು ಅನಾಥವಾಗಿ ಏನೇನೋ ಹುಡುಕಾಡುತ್ತಿದ್ದಾಗ ಕೆಂಪು ಬಣ್ಣದಲ್ಲಿ ಬರೆಯಲ್ಪಟ್ಟಿದ್ದ Viram Wine Centre, Raj Peg Bar, Balaji Wine Centre...... ಮುಂತಾದ ಮದ್ಯದಂಗಡಿಗಳನ್ನು ಕಂಡ. 'ನೋವು ಮರೆಯಬೇಕಾದರೆ ಕುಡಿಯಬೇಕಂತೆ, ಇಸ್ಲಾಂಯಿಲ್ಲದವರು ಮದ್ಯ ಕುಡಿಯುತ್ತಾರಂತೆ, ನಾನು ಈ ನೋವು ಮರೆಯಬೇಕು, ನಾನು ಇಸ್ಲಾಂದವನು ಅಲ್ಲವಾಗಬೇಕು. ಹಾಗಾದರೆ ಮದ್ಯ ಕುಡಿಯಬೇಕು' ಎಂದುಕೊಂಡು ಇವನು Raj Peg Bar ನಲ್ಲಿ ಹೊಕ್ಕನು. ಬೇರರ್‌ನನ್ನೇ ವಿಚಾರಿಸಿ ಯಾವುದು ಲೈಟು; ಯಾವುದು ಪವರ್‌ಫುಲ್ ಎಂದು ಕೇಳಿ ಬಿಟ್ಟು, ಪವರ್‌ಫುಲ್ ಆದುದನ್ನೇ ತಾ ಎಂದು ಒಂದೆರಡು ಪೆಗ್ ಇಳಿಸಿಬಿಟ್ಟ. ತೆವಳುತ್ತಾ, ತೇಲಾಡುತ್ತಾ ಎದ್ದುಕೊಂಡು ರೂಮ್ ಕಡೆ ನಡೆದ. ಇವನಿಗೆ ಅದು ಹೊಸ ಅನುಭವವಾಗಿತ್ತು. ಕಂಟ್ರೋಲ್ ಮಾಡಿಕೊಳ್ಳುವುದು ಆಗಲಿಲ್ಲ. ಮಧ್ಯಾಹ್ನದ ಸಿಟ್ಟು, ನೋವುಗಳು ಈಗ ಹಾಕಿದ ಗುಂಡಿನೊಂದಿಗೆ ಮಾತಾಗಿ ಬಾಂಬ್‌ನಂತೆ ಸ್ಫೋಟಗೊಳ್ಳತೊಡಗಿದವು. ತನ್ನ ರೂಮ್ ಸಮೀಪಿಸುತ್ತಿದ್ದಂತೆ ಜೋರಾಗಿ ಅರಚುತ್ತಾ, 'ಏಯ್ ಜಾತಿ ಜಾತಿ ಅಂತ ಜಾತಿ ಭ್ರಮೆಯೊಳಗೆ ಇರುವ ಕುರುಡು ಜನಗಳೇ ನಾನು ಮುಸ್ಲಿಂ ಜಾತಿ ಬಿಟ್ಟಿದ್ದೇನೆ ಅಂದರೆ ನಂಬುತ್ತೀರಾ ? ಇದೋ ನೋಡಿ, ಮುಸ್ಲಿಂ ಕುಡಿಯೋದಿಲ್ಲ, ನಾನು ಕುಡಿದು ಬಂದಿದ್ದೇನೆ. ಈಗಾದರೂ ನನ್ನನ್ನು ಮುಸ್ಲಿಂ ಅಂತ ಕರೆಯೋ ಬದಲು ಒಬ್ಬ ಮನುಷ್ಯ ಅಂತ ಕರೆಯಿರಿ' ಹೀಗೇ ಏನೆಲ್ಲ ಹೇಳತೊಡಗಿದ. ಇವನ ಅರಚಾಟಕ್ಕೆ ಓಣಿಯ ಜನಗಳೆಲ್ಲಾ ಹೊರಗೆ ಬಂದು ತಮ್ಮ ಅಂಗಳಗಳಲ್ಲಿ ನಿಂತು ಇವನನ್ನು ನೋಡಹತ್ತಿದರು. ಅಕ್ಕಪಕ್ಕದವರೊಂದಿಷ್ಟು ಜನ ಭಟ್ಟರ ಸಮೀಪಕ್ಕೆ ಸುಳಿದಾಡಿದಾಗ ಭಟ್ಟರು, 'ಈಗ ರಾತ್ರಿಯಾಗಿದೆ, ನಾಳೆ ವಿಚಾರಿಸಿ ಹೊರಗೆ ಹಾಕ್ತೇನೆ. ಇವನು ಇಂತಹವನು ಅಂತ ಗೊತ್ತಿರಲಿಲ್ಲ' ಎಂದು ಗೊಣಗಿ ಮನೆಯೊಳಗೆ ನಡೆದರು. ನಂತರ ನಿಂತ ಉಳಿದ ಜನರೂ ಮನೆಯೊಳಗೆ ನಡೆದರು. ಇವನು ಅರಚುವುದನ್ನು ನಿಲ್ಲಿಸಿರಲಿಲ್ಲ. ಹಾಗೇ ಒದರಾಡುತ್ತ ತನ್ನ ರೂಂ ಕೀ ತೆಗೆದು ಒಳಗೆ ಬಂದು ಬಾಗಿಲು ಹಾಕಿಕೊಂಡು ಕಿಡಕಿಯಿಂದ ಎದುರು ಮನೆಯ ಕಡೆ ನೋಡಿದ. ಆ ಕಿಡಕಿ ಹಾಗೇ ಮುಚ್ಚಿತ್ತು. ಅದನ್ನು ನೋಡಿ ಬಿಟ್ಟು ಇವನು ಕಣ್ಣು ತುಂಬಾ ನೀರು ತಂದುಕೊಂಡು ಬಿಕ್ಕಳಿಸುತ್ತಾ ವಿಷಾದವಾಗಿ ಏನೇನೋ ಹೇಳುತ್ತಾ ಹಾಸಿಗೆಯಲ್ಲಿ ಉರುಳಿದ್ದ...!

ಮಾರನೆಯ ದಿನ ಬೆಳಿಗ್ಗೆನೇ ಇವನು ಇನ್ನೂ ಎದ್ದಿರಲಿಲ್ಲ. ಭಟ್ಟರು ಬಂದು ಬಾಗಿಲು ಬಡಿಯುತ್ತಾ 'ಇವನೇ ಇವನೇ.....' ಎಂದು ಕರೆದಾಗಲೇ ಇವನಿಗೆ ಎಚ್ಚರಾಗಿ ಎದ್ದು ಬಂದು ಬಾಗಿಲು ತೆಗೆದ. ಭಟ್ಟರು ಒಳಗೆ ಬಂದವರು 'ನೀನು ಇಂದೇ, ಈಗಲೇ ರೂಂ ಖಾಲಿ ಮಾಡತಕ್ಕದ್ದು' ಎನ್ನುತ್ತಾ ತಾವೇ ಅಲ್ಲಿದ್ದ ಇವನ ಒಂದಿಷ್ಟು ಬಟ್ಟೆ, ಪುಸ್ತಕಗಳನ್ನು ಇವನ ಮುಂದೆ ಎಸೆಯತೊಡಗಿದರು. ಇವನು ವಿಷಾದವಾಗಿ ವ್ಯಂಗ್ಯವಾಗಿ ನಗು ಚೆಲ್ಲುತ್ತಾ 'ಹೌದು ಮಾಲೀಕರೆ, ಈ ಓಣಿಯಲ್ಲಿ ಇರಲು ಇನ್ನೂ ಮುಂದೆ ನನಗೂ ಇಷ್ಟವಿಲ್ಲ. ನನ್ನದೇನೂ

ಇಲ್ಲಿ ಉಳಿಯಲಿಲ್ಲ....' ಎನ್ನುತ್ತಾ ಬಟ್ಟೆ, ಪುಸ್ತಕಗಳನ್ನು ಹೊಂದಿಸಿಕೊಂಡು ತನ್ನ ಬಳಿಯಿದ್ದ ಚಿಕ್ಕ ಟ್ರಂಕ್‌ವೊಂದರಲ್ಲಿ ತುಂಬಿ ಬಿಟ್ಟು, ಎದ್ದು ನಿಂತು ಭಟ್ಟರನ್ನೊಮ್ಮೆ ದೈನ್ಯವಾಗಿ ನೋಡಿ ಬಾಗಿಲು ದಾಟಿ ಪಾವಟಿಗೆಯ ಮೇಲೆ ನಿಂತ, ಹಿಂತಿರುಗಿ ಕೋಣೆಯನ್ನೊಮ್ಮೆ ಧನ್ಯತಾ ಭಾವದಲ್ಲಿ ನೋಡಿದ. ಮತ್ತೊಮ್ಮೆ ಎದುರು ಮನೆಯ ಕನ್ನಡಿ ಬೆಳಕಿನ ಕಿಡಕಿಯ ಕಡೆ ನೋಡಿದ. ಅದು ಮುಚ್ಚಿಕೊಂಡೇ ಇತ್ತು. ವಿಷಾದದ ವ್ಯಂಗ್ಯ ನಗೆ ಚೆಲ್ಲಿದ. ಹಾಗೆಯೇ ರಸ್ತೆಗಿಳಿದು ನಡೆದು ಬಿಟ್ಟ. ಆ ಓಣಿ ದಾಟುತ್ತ ಹೂ ಬಿಸಿಲಿನಲ್ಲಿ ಮಂಜು ಮಂಜಾಗಿ ನಿಧಾನಕ್ಕೆ ಕಾಣೆಯಾದ.

ಅದೇ ದಿನ ಕೆಲಸಕ್ಕೆ ಹೋದಾಗ ಕ್ರೈಸ್ತರವರಾದ ಮ್ಯಾನೇಜರ್‌ರ ಮುಂದೆ ಇವನು ಕಣ್ಣು ತುಂಬಾ ನೀರು ತಂದುಕೊಂಡು ಕೈಕಟ್ಟಿ ನಿಂತ, ಮ್ಯಾನೇಜರ್ 'ಯಾಕೋ ? ಏನಾಯಿತೊ ?' ಅಂದರು. 'ಸರ್, ನನಗೆ ಇವತ್ತಿಂದ ಇರಲಿಕ್ಕೆ ಅಲ್ಲಿ ರೂಮ್ ಇಲ್ಲ, ನನಗೆ ಅಲ್ಲಿರಲು ಇಷ್ಟವೂ ಇಲ್ಲ. ಅದಕ್ಕೆ ನಿಮ್ಮ ಚರ್ಚ ಸ್ಟ್ರೀಟ್‌ನಲ್ಲಿ ಒಂದು ರೂಮ್ ಏನಾದರೂ ಇದ್ದರೆ.... ಮತ್ತೆ ಅಲ್ಲಿ ಮುಸ್ಲಿಂರು, ಹಿಂದೂಗಳು ಇರಬಾರದು' ತಡವರಿಸುತ್ತಲೇ ಹೇಳಿದ. ಮ್ಯಾನೇಜರ್ ಇವನನ್ನು ಕರುಣೆಯಿಂದ ನೋಡಿದರು. 'ನನಗೆ ನಿನ್ನ ಸಮಸ್ಯೆ ಗೊತ್ತಾಗ್ತದೆ.... ನೋಡು, ನನ್ನ ಬಂಗಲೆಯಲ್ಲಿ ಒಂದೆರಡು ಕೋಣೆಗಳು ಖಾಲಿ ಇವೆ. ನೀನು ಬಂದು ಅಲ್ಲಿರಬಹುದು, ನನಗೆ ಎರಡು ಗಂಡು ಮಕ್ಕಳು ಇದ್ದಾರೆ. ಪ್ರೈಮರಿ ಶಾಲೆಗೆ ಹೋಗುವವರು, ಅವರಿಗೆ ನೀನು ಸ್ವಲ್ಪ ಸ್ಟಡಿ ಮಾಡಿಸಿದರೆ ಸಾಕು. ಬಾಡಿಗೆ ಸಹಿತ ಬೇಡ. ಮತ್ತೆ ಅಲ್ಲಿ ಮುಸ್ಲಿಂ, ಹಿಂದೂಗಳು ಯಾರೂ ಇಲ್ಲ' ಎಂದು ಕೊನೆಯ ಸಾಲನ್ನು ಹೇಳುತ್ತಾ ತುಂಟತನದಿಂದ ಮೃದುವಾಗಿ ನಕ್ಕು ಇವನ ಭುಜ ತಟ್ಟಿದರು. ಇವನು ಸಂಕೋಚದಿಂದ ತುಟಿ ಅರಳಿಸಿದ್ದ.

ಆ ಕ್ರೈಸ್ತ ಮ್ಯಾನೇಜರ್‌ರ ಮನೆಯಲ್ಲಿ ಇವನಿಗೆ ಇರಲು ಸಿಕ್ಕಿತು. ಒಮ್ಮೆ ಇವನು ಅವರ ಇಬ್ಬರು ಮಕ್ಕಳಿಗೆ ಪಾಠ ಹೇಳುತ್ತಿರುವಾಗ ಮ್ಯಾನೇಜರ್ ಇವನ ಕೋಣೆಗೆ ಬಂದರು. ಇವನು ಅವರಿಗೆ ಗೌರವದಿಂದ ನಮಸ್ಕರಿಸಿ ಒಂದು ಚೇರ್ ನೀಡಿದ. ಮಕ್ಕಳಿಗೆ ಹೋಂವರ್ಕ್ ಕೊಟ್ಟು ಕ್ಲಾಸ್ ಬಿಟ್ಟ. ಮ್ಯಾನೇಜರ್ ಇವನೊಡನೆ ಮಾತಿಗೆ ಇಳಿದರು. 'ಏನು ಎಲ್ಲಾ ಕ್ಷೇಮವಾಗಿದೆ ತಾನೇ ? ಎನಿ ಪ್ರಾಬ್ಲಮ್ ?' ಎಂದರು. 'ಏನೂ ಇಲ್ಲ. ಸರಿಯಾಗಿದೆ ಸರ್' ಚುಟುಕಾಗಿ ಉತ್ತರಿಸಿದ ಇವನು. 'ನೋಡು ಇವನೆ, ನನ್ನದು ಕಾಮರ್ಸ್ ಲೈನ್ ಆದ್ರೂ, ಆಸಕ್ತಿ ಸಾಹಿತ್ಯ. ನಿನ್ನೆ ನೀನು ಇಲ್ಲದಾಗ ಇಲ್ಲಿಗೆ ಬಂದಿದ್ದೆ. ಸೆಲ್ಫನಲ್ಲಿಟ್ಟ ನಿನ್ನ ಎಲ್ಲ ಪುಸ್ತಕಗಳನ್ನು ನೋಡಿದೆ. ಅನಂತಮೂರ್ತಿ, ಲಂಕೇಶ್, ದೇವನೂರು, ಮೊಗಳ್ಳಿ, ಚಿತ್ತಾಲ, ಸಾಯಿಸುತೆ, ಯಂಡಮೂರಿ..... ಎಲ್ಲ ಹೊಸಬರ ತುಸು ತುಸು ಪುಸ್ತಕಗಳನ್ನು ಕಂಡೆ, ಬಹಳ ಸಂತೋಷವಾಯಿತು. ನೀನು ಸಾರಾಳ 'ಚಂದ್ರಗಿರಿಯ ತೀರದಲ್ಲಿ ಓದಿದ್ದೀಯಾ ?' ಎಂದು ಪ್ರಶ್ನಿಸಿದರು. ಮ್ಯಾನೇಜರ್‌ರ ಸಾಹಿತ್ಯಾಭಿರುಚಿ ತಿಳಿದು ಇವನಿಗೂ ಖುಷಿಯಾಗಿತ್ತು. 'ಇಲ್ಲ ಸರ್, ಸಾರಾಳ ಪುಸ್ತಕಗಳನ್ನು ಓದಿಲ್ಲ' ಅಂದ. 'ಹೋಗಲಿ, ಬಾನು ಮುಷ್ತಾಕ್

ಇವರವ್ವೇನಾದ್ರೂ ಓದಿದ್ದೀಯಾ ?' 'ಇಲ್ಲ ಸರ್' ಮ್ಯಾನೇಜರ್‌ರು, 'ಸರಿ ಸ್ವಲ್ಪ ಆ ಕಡೆ ಮನೆಗೆ ಹೋಗೋಣ ಬಾ. ಒಂದಿಷ್ಟು ಪುಸ್ತಕಗಳನ್ನು ತರುವಿಯಂತೆ' ಎಂದು ಇವನನ್ನು ಕರೆದುಕೊಂಡು ಮನೆಗೆ ನಡೆದರು. ಅವರು ಇವನನ್ನು ತಮ್ಮ ಡ್ರಾಯಿಂಗ್ ರೂಮಿನಲ್ಲಿ ಕುಳ್ಳಿರಿಸಿ ಒಳಹೋಗಿ ಒಂದಿಷ್ಟು ಪುಸ್ತಕಗಳನ್ನು ತಂದು ಇವನ ಮುಂದೆ ಇಟ್ಟರು. ಅವುಗಳನ್ನು ನೋಡುತ್ತಾ ಇವನು ಒಂದೊಂದನ್ನು ಕೈಗೆತ್ತಿಕೊಂಡ. ಸಾರಾ, ಬಾನು ಮುಷ್ತಾಕ್, ರಷೀದ್, ವೈಕಂ, ಫಕೀರ್ ಮಹ್ಮದ್, ಬೋಳುವಾರ್ ಬರೀ ಮುಸ್ಲಿಂ ಲೇಖಕರ ಪುಸ್ತಕಗಳನ್ನೇ ಕಂಡು ಇವನಿಗೆ ತುಸು ಪೇಚಿಗಿಡಿಸಿತು. ಆದರೂ ಪುಸ್ತಕಗಳೆಂದ ಮೇಲೆ ಎಲ್ಲರವೂ ಅಷ್ಟೇ ಎಂಬ ಸಮಾಧಾನ ತಂದುಕೊಂಡು ಎಲ್ಲವನ್ನು ತೆಗೆದುಕೊಂಡು ಮೇಲೆದ್ದ. ಮ್ಯಾನೇಜರ್‌ಗೆ ಕೃತಜ್ಞತೆ ಹೇಳಿ ತನ್ನ ರೂಮ್ ಕಡೆ ನಡೆದ. ಇವನು ಹೋಗುವುದನ್ನೇ ದಿಟ್ಟಿಸುತ್ತಾ ಮ್ಯಾನೇಜರರು ಕೊಂಚ ತುಂಟ ನಗೆ ಬೀರಿದ್ದು ಇವನಿಗೆ ಆಗ ಗೊತ್ತಾಗಿರಲಿಲ್ಲ..... !

ಇವನು ಕೆಲಸದ ಬಿಡುವಿನಲ್ಲಿ ಮ್ಯಾನೇಜರ್ ಕೊಟ್ಟ ಮುಸ್ಲಿಂ ಲೇಖಕರ ಎಲ್ಲ ಪುಸ್ತಕಗಳನ್ನು ಒಂದೊಂದಾಗಿ ಸಂಯಮದಿಂದ ಓದಿ ಮುಗಿಸಿ ವಿಮರ್ಶೆಯನ್ನೂ ಬರೆದಿಟ್ಟ. ಕೆಲವನ್ನು ಬಿಟ್ಟರೆ ಈ ಮುಸ್ಲಿಂ ಲೇಖಕರಿಗೆಲ್ಲಾ ಮುಸ್ಲಿಂ ಪ್ರಪಂಚ ಬಿಟ್ಟು ಬೇರೇನೂ ಕಾಣಿಸಲೇ ಇಲ್ಲವೇನು ? ಎಂದೆನ್ನಿಸಿ ತುಸು ಅಂತರ್‌ಮುಖಿಯಾದ. ಇದೇ ಗುಂಗಿನಲ್ಲಿದ್ದಾಗ ಇವನೊಮ್ಮೆ ಮ್ಯಾನೇಜರ್‌ರನ್ನು ಸಂಧಿಸಿದ. 'ಏನು, ಹೇಗನ್ನಿಸಿದವು ಪುಸ್ತಕಗಳು ? ಚೆನ್ನಾಗಿ ಬರೆದಿದ್ದಾರಲ್ಲಾ ?' ಮ್ಯಾನೇಜರ್‌ರ ಪ್ರಶ್ನೆಯಲ್ಲಿ ತುಂಟತನವಿದ್ದರೂ ಗಂಭೀರರಂತೆಯೇ ಕೇಳಿದರು. ಇವನು ಮುಗ್ಧ ಮತ್ತು ಅಸಹನೆ ಮಿಶ್ರಿತ ಪ್ರತಿಕ್ರಿಯೆಯಲ್ಲಿ 'ಪರವಾಗಿಲ್ಲ ಸರ್, ಆದರೆ ಅವರಿಗೆ ಬರೆಯಲಿಕ್ಕೆ ಕೆಲವನ್ನು ಬಿಟ್ಟರೆ ಉಳಿದದ್ದಕ್ಕೆಲ್ಲಾ ಮುಸ್ಲಿಂ ಜಗತ್ತು ಬಿಟ್ಟು ಬೇರೇನು ಕಾಣಲಿಲ್ಲವೋ ? ಅನ್ನಿಸಿತು' ಅಂದ. ಆಗ ಮ್ಯಾನೇಜರ್‌ರು ಅದೇ ಗಾಂಭೀರ್ಯದಲ್ಲಿ 'ಹಾಗಲ್ಲ ಇವನೇ, ಅನಂತಮೂರ್ತಿ ಬ್ರಾಹ್ಮಣರಾಗಿ "ಸಂಸ್ಕಾರ"ದ ಮೂಲಕ ಇಂದು ಬದಲಾದ ಪರಿಸ್ಥಿತಿಯಲ್ಲಿ ವೈದಿಕ ಸಂಪ್ರದಾಯಗಳು ಹೇಗೆ ನಿಂತು ಮರೆತು ಹೋಗುತ್ತಿವೆ ಎಂಬುದನ್ನು ಚಿತ್ರಿಸಿದರು. ಹಾಗೇ ಸಾರಾ, ಬೋಳುವಾರರು ಮುಸ್ಲಿಂರಾಗಿ ಮುಸ್ಲಿಂ ಜಾತಿಯ ಕಟ್ಟಳೆಗಳನ್ನು ಚಿತ್ರಿಸಿದ್ದಾರೆ. ಒಂದು ವೇಳೆ ಸಾರಾ, ಬೋಳುವಾರರು "ಸಂಸ್ಕಾರ"ವನ್ನು ಬರೆದಿದ್ದರೆ ಅವರು ವೈದಿಕ ಸಂಪ್ರದಾಯದ ಹೊರಗೆ ನಿಂತು ಬರೆದಿದ್ದಾರೆಂದಾಗುತ್ತಿತ್ತು. ಆಗ "ಸಂಸ್ಕಾರ" ಇಷ್ಟು ಖ್ಯಾತಿ ಪಡೆಯುತ್ತಿತ್ತೋ ಇಲ್ಲವೋ ಗೊತ್ತಿಲ್ಲ. ಅದರ ಜೊತೆಗೆ ಮುಸ್ಲಿಂರಾದ ಇವರಿಗೇಕೆ ಬ್ರಾಹ್ಮಣ ಸಂವೇದನೆಗಳು ಬಂದವು ? ಎಂಬ ನಿರ್ಲಕ್ಷ್ಯದ ಅಣಕದ ಪ್ರಶ್ನೆಗಳೂ ಬರುತ್ತಿದ್ದವು. ಹಾಗೇ ಅನಂತಮೂರ್ತಿ "ಜೆಹಾದ್" ಬರೆದಿದ್ದರೆ ಇವರಿಗ್ಹೇಗೆ ಮುಸ್ಲಿಂ ಸಂವೇದನೆಗಳು ಬಂದವು, ಹೊರಗೆ ನಿಂತು ಬರೆದಿದ್ದಾರೆ ಅನ್ನಿಸುತ್ತಿತ್ತು. ಅದಕ್ಕೆ ಲೇಖಕನಾದವನು ಯಾವಾಗ್ಲೂ ತನ್ನ ಜಾತಿ ಮತ್ತು ತನ್ನ ಪರಿಸರದ ಬಗ್ಗೆ ಅದರ ಅನುಭವಗಳನ್ನು, ಗೊಂದಲಗಳನ್ನು ತನಗೆ ಅನ್ನಿಸಿದ ಹಾಗೆ ಫ್ರೀ ಆಗಿ ಬರೆದು ಬಿಡಬೇಕು. ಅದಕ್ಕೊಂದು ಅರ್ಥವಿದ್ದರೆ ಖಂಡಿತ ಅದು ಒಳ್ಳೆಯ ಸಾಹಿತ್ಯವಾಗುತ್ತದೆ. ಅದನ್ನು

ಬರೆದವನೂ ಹೆಸರಾಗುತ್ತಾನೆ' ಎಂದು ನೇರವಾಗಿ ಬಾಣ ಬಿಟ್ಟಂತೆ ಹೇಳಿ ಇವನನ್ನೊಮ್ಮೆ ನಿರ್ಲಿಪ್ತರಾಗಿ ನೋಡಿಬಿಟ್ಟರು. ಇವನು ಅವರ ಮಾತಿನ ಸಮ್ಮೋಹಿನಿಗೆ ಒಳಗಾಗಿ ಹೋಗಿದ್ದ. ಅವರನ್ನೇ ಕಣ್ಣು ಬಿಟ್ಟುಕೊಂಡು ನೋಡತೊಡಗಿದ್ದ. ಮತ್ತೇ ಮ್ಯಾನೇಜರ್‌ರೇ ಮುಂದುವರೆಸುತ್ತಾ, 'ಹಾಗೆ ನಿನಗೆ ಹೇಗೂ ಭಾಷೆ ಬರ್ತದೆ, ಓದಿದ್ದೀಯಾ, ತಿಳಿದುಕೊಂಡಿದ್ದೀಯಾ ಎಲ್ಲಕ್ಕೂ ಮುಖ್ಯವಾಗಿ ನೀನು ಏನೂ ತಪ್ಪು ಮಾಡದೇ ನಿನ್ನ ಜಾತಿಯವರಿಂದ ಅವಮಾನಗೊಂಡಿದ್ದೀಯಾ, ಆಗ ನಿನಗೆ ಏನು ಅನ್ನಿಸಿತು ? ನೀನು ಎಂತಹ ಸ್ಥಿತಿಯಲ್ಲಿದ್ದೆ ? ನಿನ್ನನ್ನು ಹಾಗೆ ಮನೆ ಬಿಟ್ಟು, ಹೊರಗೆ ಹಾಕಲು ಕಾರಣವಾದದ್ದು ಏನು ? ಯಾರು ? ಇದನ್ನೇ ನಿನ್ನ ವೃತ್ತಾಂತದ ರೀತಿಯಲ್ಲಿ ವಾಚ್ಯವಾಗಿ ಬರೆಯದೆ, ಸುಂದರ ವಾಕ್ಯಗಳನ್ನು ಸೇರಿಸಿ ಬೇರೆಯ ಹೆಸರುಗಳನ್ನಿಟ್ಟು, ನೀನೂ ಸಹ ಅವರ ಹಾಗೆ ಕತೆ, ಕಾದಂಬರಿಗಳನ್ನು, ಕವನಗಳನ್ನು ಒಟ್ಟಿನಲ್ಲಿ ಯಾವುದೇ ಫಾರ್ಮ್‌ನಲ್ಲಿಯಾಗಲಿ ಯಾಕೆ ಬರೆಯಬಾರದು ?' ಎಂದು ಇವನನ್ನೊಮ್ಮೆ ಪ್ರಶ್ನಿಸಿಬಿಟ್ಟು, ಹುರಿದುಂಬಿಸುತ್ತಾ, ಪ್ರೋತ್ಸಾಹಿಸುತ್ತಾ ನೋಡಿದಾಗ ಇವನು ಬಾಯಿಬಿಟ್ಟುಕೊಂಡು ಕುಳಿತಿದ್ದ. ಮ್ಯಾನೇಜರ್‌ರು ತನ್ನನ್ನು ಲೇಖಕನನ್ನಾಗಿ ಮಾಡಲು ಇಚ್ಛಿಸಿದ್ದಕ್ಕೆ ಅವರಿಗೆ ಮರುಳಾಗಿ ಹೋದ. 'ಸರ್, ಹಾಗಾದರೆ ನಾನು ಕತೆ ಬರೆಯಲೇ, ಬರೆದು ತಮಗೆ ತೋರಿಸಲೇ ?' ಎಂದು ಕೇಳಿದ್ದ ಇವನು. ಆಗ ಮ್ಯಾನೇಜರ್‌ರು, 'ಅಗತ್ಯವಾಗಿ, ನನಗೆ ತಿಳಿದಷ್ಟು ಕರೆಕ್ಷನ್ ಮಾಡಿ ಗೈಡ್ ಮಾಡ್ತೇನೆ, ಯಾವ ಪತ್ರಿಕೆಗೆ ಕಳುಹಿಸಬೇಕೆಂದು ಹೇಳ್ತೇನೆ. ನೀನು ಬರೆಯೋ' ಎಂದು ಸ್ಫೂರ್ತಿಸಿದ್ದರು. ಇವನು ಅದೇ ಸ್ಫೂರ್ತಿಯಲ್ಲಿ 'ಹೌದು, ನನಗಾದ ಅನ್ಯಾಯವನ್ನು ಹೀಗಾದರೂ ಖಂಡಿಸಬಹುದು' ಎಂದುಕೊಳ್ಳುತ್ತಾ ಕತೆ ಬರೆಯತೊಡಗಿದ್ದ !

ಇವನು ತಾನು ಧರ್ಮ, ಸಂಪ್ರದಾಯವನ್ನು ತೊರೆದಾಗ ತನ್ನ ತಂದೆ ಮನೆ ಬಿಟ್ಟು ಹೊರಗೆ ಹಾಕಿದ್ದಲ್ಲಿಂದ ಹಿಡಿದು ಮ್ಯಾನೇಜರ್‌ರು ಆಶ್ರಯ ನೀಡಿದ್ದು ಮತ್ತು ತನ್ನಲ್ಲಿ ಸಾಹಿತ್ಯಸಕ್ತಿಯನ್ನು ಕೆರಳಿಸಿದ್ದು ಎಲ್ಲವನ್ನೂ, ಒಂದು ವೃತ್ತಾಂತ ರೀತಿಯಲ್ಲಿ ಬರೆದು "ಧರ್ಮ ಸಂಕೋಲೆಯಲ್ಲಿ" ಎಂದು ಹೆಸರಿಟ್ಟು ಕತೆ ತಯಾರಿಸಿದ. ಅದನ್ನು ಮ್ಯಾನೇಜರ್‌ರಿಗೆ ತಂದು ತೋರಿಸಿದ. ನೊಂದ ಯುವಕನ ನೋವಿನ ಧ್ವನಿ, ಧರ್ಮ ಕಟ್ಟಳೆಗಳ ಬಗೆಗಿನ ವಿಷಾದ, ವ್ಯಂಗ್ಯ, ದುಃಖದ ಭಾವ, ಕಾವ್ಯಾತ್ಮಕ ಶೈಲಿಯ ವಿಭಿನ್ನ ಟೆಕ್ನಿಕ್‌ನ ಆ ಕತೆ ಮ್ಯಾನೇಜರ್‌ರಿಗೆ ತುಂಬಾ ಹಿಡಿಸಿತು. ಅವರು ಓದಿ ಮುಗಿಸಿ, 'ಭಲೇ ಚೆನ್ನಾಗಿ ಬರೆದಿದ್ದೀಯಾ' ಎಂದು ಮೆಚ್ಚುಗೆ ವ್ಯಕ್ತಪಡಿಸಿ ತಾವೇ ಸ್ಟ್ಯಾಂಪ್ ಕವರ್ ಖರ್ಚು ಮಾಡಿ ಇವನ ಈ ಕತೆಯನ್ನು ನಾಡಿನ ಪ್ರಸಿದ್ಧ "ಜನಪ್ರಿಯ" ಪತ್ರಿಕೆಗಳಿಗೆ ಕಳುಹಿಸಿ ಕೊಟ್ಟರು. ಒಂದು ವಾರದ ನಂತರ "ಜನಪ್ರಿಯ" ಪತ್ರಿಕೆಯ ಸಂಪಾದಕರಿಂದ ಇವನ ವಿಳಾಸಕ್ಕೆ ಒಂದು ಕಾರ್ಡ್ ಬಂತು. ಅದರಲ್ಲಿ ಸಂಪಾದಕರು, 'ನಿಮ್ಮ ಕತೆ "ಧರ್ಮ ಸಂಕೋಲೆಯಲ್ಲಿ" ಸ್ವೀಕೃತವಾಗಿದೆ. ಮುಂದಿನ ವಾರದಲ್ಲಿ ಅದನ್ನು ಪ್ರಕಟಿಸುತ್ತೇವೆ. ಮುಸ್ಲಿಂ ಸೂಕ್ಷ್ಮ ಮನಸ್ಸುಗಳ ಮಧ್ಯದಲ್ಲಿ ತಾವೂ ಒಬ್ಬರು. ಮುಂದಿನ

ದಿನಗಳಲ್ಲಿ ತಾವೋರ್ವ ಒಳ್ಳೆಯ ಮುಸ್ಲಿಂ ಲೇಖಕರಾಗುವಲ್ಲಿ ಸಂದೇಹವೇ ಇಲ್ಲ' ಎಂದು ಹಾರೈಸಿದ್ದರು. ಅಂತೆಯೇ ಮುಂದಿನ ವಾರದಲ್ಲಿ ಇವನ ಕತೆ "ಜನಪ್ರಿಯ" ಪತ್ರಿಕೆಯಲ್ಲಿ 'ವಿಶೇಷ ಕತೆ' ಎಂಬ ಹೆಗ್ಗಳಿಕೆಯ ಶೀರ್ಷಿಕೆಯಡಿಯಲ್ಲಿ ಪ್ರಕಟವಾಗಿತ್ತು. ಈ ಕತೆ ಇಡೀ ನಾಡಿನಾದ್ಯಂತ ಪ್ರಸಿದ್ಧವಾಗಿ ಓದುಗ ಸಮುದಾಯ ಮತ್ತು ಸಾಹಿತಿಗಳ ಬಳಗ ಇವನನ್ನು ಉತ್ತಮ "ಮುಸ್ಲಿಂ ಲೇಖಕ" ಎಂದು ಹೊಗಳಲಾರಂಭಿಸಿತ್ತು. ಈ ಕತೆ ಪ್ರಕಟಿಸಿದ "ಜನಪ್ರಿಯ" ಸಂಪಾದಕರಿಗೆ ಹಲವಾರು ಓದುಗರು, ಸಾಹಿತಿಗಳು ಸಾಲುಸಾಲಾಗಿ ಪತ್ರ ಬರೆದು ಒಳ್ಳೆಯ ಕತೆ ನೀಡಿದ್ದೀರಿ ಎಂದು ಪತ್ರಿಕೆಯವರನ್ನೂ ಹೊಗಳಿದ್ದರು. ಹೀಗೆ ಇವನು ಬರೆದ ಒಂದು ಕತೆಯಿಂದಲೇ ನಾಡಿನ ಪ್ರಸಿದ್ಧ 'ಮುಸ್ಲಿಂ ಲೇಖಕ'ನಾಗಿ ಬಿಟ್ಟ !

ಇವನೋ ತೀವ್ರ ಗೊಂದಲಕ್ಕೀಡಾಗಿ ಬಿಟ್ಟಿದ್ದ. 'ನನ್ನನ್ನು ಬರೀ ಒಬ್ಬ 'ಲೇಖಕ' ಎಂದು ಕರೆಯಲು ಬರುವುದಿಲ್ಲವೆ ಈ ಜನರಿಗೆ ? 'ಲೇಖಕ'ನ ಮುಂದೆ 'ಮುಸ್ಲಿಂ' ಅಂತ ಸಂಬೋಧಿಸಿಯೇ ನನ್ನನ್ನು ಕರೆಯಬೇಕೆ ? ಛೇ, ಇಲ್ಲಿಯವರೆಗೆ ನಾನು ನನ್ನ ಮನೆ, ಊರು, ಆ ಓಣಿಗೆ, ಆ ಕನ್ನಡಿಯ ಹುಡುಗಿಗೆ ಮಾತ್ರ ಮುಸ್ಲಿಂನಾಗಿದ್ದೆ. ಇಂದು ನಾ ಬರೆದ ಈ ಸಾಹಿತ್ಯದಿಂದ ನಾನು ನಾಡಿಗೇ ಮುಸ್ಲಿಂನಾಗಿ ಹೋದೆ. ಅಂದರೆ ಈ ಸಾಹಿತ್ಯದಿಂದಲೂ ನನಗೆ ಜಾತಿಯ ಬಿಡುಗಡೆ ಇಲ್ಲವೇ ? ಅಯ್ಯೋ, ನಾನು ಏನಾಗಬೇಕೆಂದಿದ್ದೆ ಏನಾಗಿ ಹೋದೆ ? ಏನಾಗುತ್ತಿದ್ದೇನೆ ? ನಾನು ಯಾವುದರಿಂದ ದೂರ ದೂರ ಹೋಗಬೇಕೆನ್ನುತ್ತಿದ್ದೆನೋ ಅದಕ್ಕೆ ಅಷ್ಟು ಹತ್ತಿರವಾಗಹತ್ತಿದ್ದೇನೆ. ಹತ್ತಿರವಾಗಿ ಬಿಟ್ಟಿದ್ದೇನೆ. ಇನ್ನು ಇದರಿಂದ ನನಗೆ ಬಿಡುಗಡೆ ಸಾಧ್ಯವಿಲ್ಲ. ಈ ಜಾತಿ ಕವಚವನ್ನು ಎಲ್ಲಿ ಹೋಗಿ ಕಳಚಿಕೊಳ್ಳಲಿ ? ಅದ್ಹೇಗೇ ಕಳಚಿಕೊಳ್ಳುವುದು ? ಎಂದು ಚಿಂತಿಸುತ್ತಾ ನೋವನ್ನನುಭವಿಸುತ್ತಾ ಮಲಗಿದ್ದಲ್ಲಿಂದ ಎದ್ದು ಧರಿಸಿದ್ದ ಲುಂಗಿ ಬನಿಯನ್‌ನ ಮೇಲೆ ಮ್ಯಾನೇಜರ್‌ರ ಬಂಗಲೆ ಬಿಟ್ಟು ನಡೆದುಬಿಟ್ಟಿದ್ದ. ಹಾಗೇ ನಡೆಯುತ್ತಾ ಊರು ದಾಟಿ ಕಾಳಿ ನದಿಯ ದಡಕ್ಕೆ ಬಂದುಬಿಟ್ಟಿದ್ದ.

❖ ❖ ❖

ಹೀಗೆ ಎಲ್ಲವನ್ನೂ ನೆನಪಿಸಿಕೊಂಡಾದ ಮೇಲೆ ಆಗಸಕ್ಕೆ ಚಾಚಿದ್ದ ಕತ್ತನ್ನು ಹರಿಯುವ ಕಾಳಿಯ ಕಡೆ ವಾಲಿಸುತ್ತಾನೆ. ಇವನ ಕಣ್ಣುಗಳು ತುಂಬಿ ಬರುತ್ತವೆ. ಗಂಟಲು ಬಿಗಿದುಕೊಳ್ಳುತ್ತದೆ. ತುಟಿ ಒಂದಕ್ಕೊಂದು ಅಪ್ಪಿಕೊಂಡು ಬಿಗಿಯಾಗುತ್ತವೆ. ಮೂಗಿನ ಹೊಳ್ಳೆಗಳು ಅರಳಿ ನಿಲ್ಲುತ್ತವೆ. ತುಂಬಿದ ಕಣ್ಣುಗಳಲ್ಲೇ, ಬಿಗಿದ ಗಂಟಲಿಂದ, ಅಪ್ಪಿಕೊಂಡ ತುಟಿಗಳನ್ನು ಬೇರ್ಪಡಿಸಿ ಗದ್ಗದ ಕಂಠದಲ್ಲಿ -

"ತಾಯಿ ಕಾಳಿಯೇ !

ಈ ಭೂಮಿಯ ಮೇಲೆ ಮಾನವ ಪ್ರಪಂಚದಲ್ಲಿ ನನಗೆ ಎಂದೂ ಜಾತಿಯಿಂದ ಬಿಡುಗಡೆ ಇಲ್ಲ. ಈ ಭೂಮಿ ಬಿಟ್ಟು ಆಗಸಕ್ಕೆ ಹಾರಿ ಹೋಗಬೇಕೆಂದರೆ ನನಗೆ ರೆಕ್ಕೆಗಳಿಲ್ಲ. ಆದರೆ

ನಾನು ಈ ಭೂಮಿ ಬಿಟ್ಟು ನಿನ್ನೊಡನೆ ಬರಬಲ್ಲೆ. ಕೈಕಾಲುಗಳಲ್ಲಿ ಶಕ್ತಿಯಿರುವವರೆಗೂ ನಿನ್ನೊಡನೆ ಈಜಿ ಸಾಗಬಲ್ಲೆ. ನಿನ್ನ ಲೋಕದಲ್ಲಿ ಮುಸ್ಲಿಂರಿಲ್ಲ, ಹಿಂದೂಗಳೂ ಇಲ್ಲ. ಕನ್ನಡಿಯ ಹುಡುಗಿ ಇಲ್ಲ, ಮ್ಯಾನೇಜರ್‌ರೂ ಇಲ್ಲ, ಪತ್ರಿಕೆಯವರಿಲ್ಲ, ನನ್ನ ಕತೆ ಓದಿದವರು ಇಲ್ಲ, ನನ್ನನ್ನು ಮುಸ್ಲಿಂ ಎಂದು ಕರೆಯುವ ಒಂದೇ ಒಂದು ನರಹುಳು ಅಲ್ಲಿಲ್ಲ. ಅದಕ್ಕಾಗಿ ನಾನು ನಿನ್ನಲ್ಲಿಗೆ ಬಂದು ನನ್ನ ಜಾತಿಯಿಂದ ಬಿಡುಗಡೆ ಹೊಂದಬಲ್ಲೆ. ಇದೋ ಬಂದೆ, ನನ್ನನ್ನು ಕರೆದುಕೊಂಡು ನಡೆ ತಾಯಿ...."

ಎಂದು ಕಾಳಿಗೆ ಕೈ ಜೋಡಿಸಿ ಒಮ್ಮೆ ವಂದಿಸಿ ಬಿಟ್ಟು ಮತ್ತೊಮ್ಮೆ ತನ್ನ ಕೈಗಳನ್ನು ಹರಿಯುತ್ತಿರುವ ಕಾಳಿಗೆ ಚಾಚಿ ಧುಮುಕಿ ಬಿಡುತ್ತಾನೆ. ಹೊಸ ಲೋಕಕ್ಕೆ ಕಾಲಿಟ್ಟ ಆನಂದದಲ್ಲಿ ಮುಸ್ಲಿಂರೂ, ಹಿಂದೂಗಳೂ .... ಮತ್ತೆ ಆ ಎಲ್ಲರೂ .... ಯಾರೂ ತನ್ನನ್ನು ಮುಸ್ಲಿಂ ಎಂದು ಕರೆಯದ ಜಗತ್ತಿನಲ್ಲಿ ತಾನು ಬದುಕಲು ಹೊರಟಿದ್ದೇನೆಂಬ ಹರ್ಷದಲ್ಲಿ ಇವನ ಮುಖ ಅರಳಿಬಿಡುತ್ತದೆ. ಇವನು ಕಾಳಿಯೊಡನೆ ಹರಿಯುತ್ತಾ ಮುಂದೆ ಮುಂದೆ ಸಾಗುತ್ತಾನೆ.

ಮಾರನೆಯ ದಿವಸ ಕಾಳಿ ನದಿಯ ಈ ಕಡೆ ಮೀನು ಹಿಡಿಯಲು ನದಿಯ ದಡಕ್ಕೆ ಬಂದ ಒಂದಿಬ್ಬರು ದಾಡಿ ಬಿಟ್ಟು ಟೋಪಿ ಧರಿಸಿದವರು ನದಿಯ ಪಕ್ಕದ ಹುಲ್ಲಿನ ದಿಬ್ಬಕ್ಕೆ ಸಿಕ್ಕಿಕೊಂಡಿರುವ ಇವನ ಶವವನ್ನು ನೋಡುತ್ತಾರೆ. ಅವರಿಬ್ಬರೂ ಅಲ್ಲಿಂದ ತಮ್ಮ ಓಣಿಯ ಕಡೆ ಓಡುತ್ತಾರೆ. ಬರೀ ಮುಸ್ಲಿಂರೇ ಇರುವ ಓಣಿ ಅದಾಗಿರುತ್ತದೆ. ಒಂದೆರಡೇ ನಿಮಿಷಗಳಲ್ಲಿ ಇಡೀ ಓಣಿಯ ಮುಸ್ಲಿಂರು ಅವರೊಡನೆ ನದಿಯ ದಡಕ್ಕೆ ಬಂದು ಬಿಡುತ್ತಾರೆ. ಇವನ ಶವ ನೋಡುತ್ತಾರೆ. ಅವರಲ್ಲೊಬ್ಬ, ಇವನನ್ನು ಫ್ಯಾಕ್ಟರಿಯಲ್ಲಿ ನೋಡಿದವನಿರುತ್ತಾನೆ. ಇವನು ಮ್ಯಾನೇಜರ್‌ರ ಮುಂದೆ ಕೈಕಟ್ಟಿನಿಂತು ಆ ದಿನ ಮಾತಾಡಿದ್ದನ್ನೆಲ್ಲ ಕೇಳಿಕೊಂಡು ಸಿಟ್ಟಿನಲ್ಲೇ ಇವನನ್ನು ದಿಟ್ಟಿಸಿ ನೆನಪಿನಲ್ಲಿಟ್ಟು ಕೊಂಡಿರುತ್ತಾನೆ. ಅವನು ಇತರರಿಗೆಲ್ಲ ಇವನು 'ನಮ್ಮ ಜಾತಿಯವನೇ' ಎಂದು ಕೂಗಿ ಎಲ್ಲ ವಿವರಿಸುತ್ತಾನೆ. ಅವರೆಲ್ಲ ಒಪ್ಪಿಕೊಳ್ಳುತ್ತಾರೆ. ತಮ್ಮೊಳಗೇ -

'ನದಿಗೆ ಬಿದ್ದು ಜೀವ ಕೊಟ್ಟಿದ್ದಾನಂತ ಕಾಣಿಸ್ತದೆ ಪಾಪ'

'ಕಾಲು ಜಾರಿ ಬಿದ್ದು ನದಿ ಪಾಲಾಗಿರಬೇಕೋ ಏನೋ ?'

'ನೀರಿಗೆ ಬಿದ್ದು ಬಹಳ ದಿವಸವೇ ಆಗಿರಬಹುದು. ಅಲ್ಲವೇ ?'

'ಹೌದು, ಶವ ಕೊಳೆತಿದೆ, ವಾಸನೆ ಬರುತ್ತಿದೆ .....'

'ಇವನು ನಮ್ಮವನೇ ಹೌದು, ಎಲ್ಲಿಯವನೋ ಏನೋ ?'

'ಹೌದು, ನಾವು ಇವನ ಶವಸಂಸ್ಕಾರಕ್ಕೆ ಸಹಾಯ ಮಾಡಲೇಬೇಕು'

'ಪೊಲೀಸ್ ಕಂಪ್ಲೆಂಟ್ ಕೊಟ್ಟರಾಯ್ತು ಅಲ್ಲವೇ ? ಅವರು ಇವನನ್ನು ಮನೆಗೆ ಒಪ್ಪಿಸಿಯಾರು ?'

'ಸುಮ್ನೆ ಉಳಿಯೋ, ಪೊಲೀಸ್‌ರಿಗೆ ಕೊಟ್ಟರೆ ಇವನ ಸಂಬಂಧಿಕರು ಬಂದು ತಗೊಂಡು ಹೋಗುವುದರೊಳಗೆ ಶವ ಪಿಸಿಪಿಸಿಯಾಗಿರ್ತದೆ. ಅಷ್ಟು ಕೊಳೆತ ಶವಕ್ಕೆ ಇಸ್ಲಾಂ ಪ್ರಕಾರ ಸ್ನಾನ ಮಾಡಿಸುವುದಾದರೂ ಹೇಗೆ ? ಕಬ್ರಸ್ಥಾನಕ್ಕೆ ಒಯ್ಯುವುದಾದರೂ ಹೇಗೆ ? ಪಾಪ ಇವನಿಗೆ ಜನ್ನತ್ (ಸ್ವರ್ಗ) ಸಿಗಲಿಕ್ಕಿಲ್ಲ' ಎಂದು ತಲೆಗೊಂದು ಮಾತನಾಡುತ್ತಾರೆ. ಅವರೆಲ್ಲರನ್ನೂ ಕೇಳಿದ ಬಳಿಕ ಅಲ್ಲಿದ್ದ ಜಮಾತ್ ಪ್ರೆಸಿಡೆಂಟರು 'ಇವನ ಅಂತಿಮ ಸಂಸ್ಕಾರದ ಖರ್ಚನ್ನೆಲ್ಲ ನಾನು ಕೊಡುತ್ತೇನೆ. ನಾವೆಲ್ಲರೂ ಸೇರಿ ಇವನ ಸಂಸ್ಕಾರ ಮಾಡೋಣ. ಇದು ನನ್ನ ಹುಕುಂ. ಅಲ್ಲಾಹುವಿಗೆ ಪ್ರಿಯವಾದ ಕೆಲಸ ಮಾಡಿದರೆ ಯಾರೇನು ಅನ್ನುತ್ತಾರೆ ? ನಡೆಯಿರಿ ಎಲ್ಲ ತಯಾರು ಆಗಲಿ' ಎನ್ನುತ್ತಾರೆ. ಪ್ರೆಸಿಡೆಂಟರ ಮಾತು ಕೇಳಿ ಇತರರೂ ಹರ್ಷಿತರಾಗಿ ಬಿಟ್ಟು ಅವರ ಹುಕುಂ ಪ್ರಕಾರ ಎಲ್ಲರೂ ಒಂದೊಂದು ಕೆಲಸ ವಹಿಸಿಕೊಂಡು ತಯಾರಿ ನಡೆಸುತ್ತಾರೆ.

ಪ್ರೆಸಿಡೆಂಟರೇ ನೀರಿಗೆ ಇಳಿದು ಇವನ ಶವ ಮೇಲೆ ತರಲು ಅನುವಾಗುತ್ತಾರೆ. ಮತ್ತಿಬ್ಬರು ಸಹಕರಿಸುತ್ತಾರೆ. ವಾಸನೆ ಹೊಡೆಯುವ ಶವದ ಮೇಲೂ ಅವರಿಗೆ ಕಿಂಚಿತ್ ಅಸಹ್ಯ ಇರುವುದಿಲ್ಲ. ಶವವನ್ನು ಸಾವಕಾಶವಾಗಿ ದಂಡೆಗೆ ತಂದು ಇಡುತ್ತಾರೆ. ಒಂದಿಬ್ಬರು ದಡದ ಮೇಲೇ ಮೂರು ಕಲ್ಲುಗಳನ್ನಿಟ್ಟು ಒಲೆ ಮಾಡಿ ಹಂಡೆ ತಂದು ನೀರು ತುಂಬಿಟ್ಟು ಕಾಸತೊಡಗುತ್ತಾರೆ; ಇನ್ನಿಬ್ಬರು ಮರದ ಬೆಂಚು ತಂದಿರಿಸುತ್ತಾರೆ; ಬೇರೆ ಇಬ್ಬರು ಕಬರ್ (ಗೋರಿ) ತೋಡಲು ಹೋಗುತ್ತಾರೆ; ಮತ್ತಿಬ್ಬರು ಮಸೀದಿಗೆ ಮಯ್ಯತ್ ಮಂಚ ತರಲು ಹೋಗುತ್ತಾರೆ. ಒಲೆಯ ಮೇಲಿನ ನೀರು ಬಿಸಿ ಏರುತ್ತಿದ್ದಂತೆ ಮುಯುದ್ದೀನರು ಕುರಾನು ಪಠಣ ಮಾಡುತ್ತಾರೆ. ಕಬರ್ ತೋಡಲು ಹೋದವರು ತಯಾರು ಆಯ್ತು ಎನ್ನುತ್ತಾ ಬರುತ್ತಾರೆ. ಪ್ರೆಸಿಡೆಂಟರು ಕಫನ್ (ಬಟ್ಟೆ) ಅತ್ತರ್ (ಸೇಂಟ್) ತರುತ್ತಾರೆ. ಆ ಬಳಿಕ ಮುಂದಿನ ಎಲ್ಲ ಕಾರ್ಯ ನಿಯಮಗಳನ್ನು ನಡೆಸಿ,

ಶವವನ್ನು ಹೊತ್ತು ಕಬರ್ (ಗೋರಿ) ಕಡೆ ನಡೆಯುತ್ತಾರೆ.
ಗೋರಿಯಲ್ಲಿ ಅದನ್ನು ಆಳಕ್ಕಿಳಿಸುತ್ತಾರೆ.
ಮಣ್ಣು ಸುರಿದು ಬಿಟ್ಟು ತಮ್ಮ ತಮ್ಮ ಮನೆಗಳ
ಕಡೆಗೆ ನಡೆಯುತ್ತಾ, ಅನಾಥ 'ಮುಸ್ಲಿಂ ಶವ'ವನ್ನು ಇಸ್ಲಾಂ
ಪ್ರಕಾರ ಶವಸಂಸ್ಕಾರ ಮಾಡಿ ಪುಣ್ಯ ಕಟ್ಟಿಕೊಂಡೆವು......
ಎಂಬಂತೆ ಅಭಿಮಾನದ ಹೆಜ್ಜೆ ಹಾಕುತ್ತಾರೆ !

# ನಗ್ನಸತ್ಯ

● ಪ್ರಸನ್ನ ಬೆನ್ನೂರ

"ಊರ್ ಹೊರ್ಗಿನ್ ಚೌಡಮ್‌ದ್ಯಾವುರ್ಗೆ ಹಿಂಡೀ ತಿಕ್ಕಿದ್ಮ್ಯಾಲೆನೇ ಕಳುದೋದ್ ಕೊಡಾ ಸಿಕ್ಕಿದ್ದು ಅಂತ ನಂಬಿದ್ದ ಅವರುಗಳು ಅರಿಯದಾದ ಈ ನಗ್ನಸತ್ಯ ಏನಾಗಿತ್ತು ?"

ಊರಾಚೆ ಸಾಲು ದಿಬ್ಬಕ್ ಸೂರ್ಯ ಇಳಿತಿದ್ದಂಗನ್ಸ ನಲ್ಲೀಮುಂದ ಕೊಡ್ಪಾನದ್ ಸಂಖ್ಯಾ ಇನ್ನೂ ಹೆಚ್ಚಾ ಬಂತು. ಅಷ್ಟೊಂದ್ ಕಡುಬಿಸ್ಲಿನ್ ಧಗೆಗೆ ಕೊಡ್ಪಾನದ್ ಬಣ್ಣಾ ಸುಟ್‌ಬುಡುತ್ತೆ ಎಂದು ಯೋಚಿಸಿದ್ ಬಸ್ಸಣ್ಣ ಸ್ವಲ್ಪು ಇಳೀವತ್ ಮಾಡ್ಕಂಡೇ ಇಟ್ರಾಯ್ತು ಅಂದ್ಕಂಡಿದ್ದ. ಆ ಕಾರ್ಣಕ್ಕೇ ಏನೋ ಎಂದಿನಂತೆ ಅವನ ಪಾಳಿ ಮುಂದಿದ್ದಿದ್ದಿಲ್ಲ.

ಅಷ್ಟೊತ್ತಿಗಾಗಲೇ ಕೇರಿಯ ಜನಗಳೂ ಕೊಡ್ಪಾನವಿಟ್ಟು ಬಿಟ್ಟಿದ್ದರು. ಆ ಕಾರಣಕ್ಕೇ ಕೊಂಚ ಹಿಂದೆ ಉಳಿಯಬೇಕಾಗಿತ್ತು.

ಎಲ್ಲರ ಪಾಳಿಗಿಂತಲೂ ಹಿಂದಿದ್ದಿದ್ದಕ್ಕೆ ಆ ದಿನ ಬೆಳಿಗ್ಗೆ ನೀರ್ ಬಂದ್ರೂ ನಲ್ಲೀ ಸಮೀಪಕ್ಕ ಬಂದಿದ್ದಿಲ್ಲ. ಮೊದಲೋ ಒಂದಿಷ್ಟ್ ಒಡುದ್ ಕೊಡಾ ಇಟ್ಟು ಹೇಗೋ ಪಾಳೆ ಮುಂದ್ಮಾಡ್ಕೆಂಡಿದ್ದ. ಆದರೆ ಈ ಸರ್ತಿ ಹಾಗ್ ಮಾಡ್ಲಿಕ್ಕವು ಇದ್ದಿದ್ದಿಲ್ಲ. ಅವುನ್ ಹೆಂಡ್ತಿ ಹೊನ್ನಿ ಆಗ್ಲೇ ಅವುನ್ನೆಲ್ಲಾ ಕೊಟ್ಟು ಹೊಸ್ಸಾ ಕೊಡ್ಪಾನಾ ಅಂತ ಮಾಡ್ಕಂಡಿದ್ಲು.

ಆ ಒಂದ್ ಹೆಂಡ್ತಿ ಮಾಡಿದ್ ತಪ್ಗೇ ಇಕ್ಕಟ್ನಲ್ಲಿ ಸಿಕ್‌ಹಾಕಂಡಿದ್ದ. ಇಷ್ಟಗ್ಗಾ ಬಾಯ್ಮಾಡಿ ಎಲ್ರೂನೂ ಹೆದುರ್ಸಿ ಹೇಗೋ ಒಡ್ಕುದ್ ಪಾಳೆ ಬದ್ಲಿ ಪಾಳೆ ಹಿಡ್ದು ಹಿಡ್ದು ಸಾಕ್ ಮಾಡುವಷ್ಟ್ರಲ್ಲಿ ನೀರೇ ಹೋಗ್‌ಬುಡ್ತಿದ್ದು. ಕೇರಿಯ ಜನಕ್ಕಾಗುವಷ್ಟೂ ನೀರು ಅವುನೊಬ್ಬನಿಗೇ ಸಾಕಾಗ್ತಿದ್ದಿಲ್ಲವಾಗಿದ್ರಿಂದ ದೂರದ ಹನ್ಮಂತ್ ದೇವ್ರುರ್‌ಗುಡಿ ನಲ್ಲಿಗೂ ಕರೆಂಟ್ ಬರೊ ಮಟ ಕಾಯ್ದು ಅಲ್ಲೂ ಪಾಳೆಯಿಟ್ಟು ನೀರ್ತರ್ತಿದ್ದ.

ಇತ್ತೀಚ್ಗೆ ನಾಲ್ಕೈದೇ ಕೊಡ್ಪಾನ್ತುಂಬುವಷ್ಟರಲ್ಲಿ ನೀರ್ ಹೋಗ್‌ಬುಡ್ತಿದ್ರಿಂದ ಇಂದ್ಗಿಟ್ಟಿರ್ ಪಾಳೆ ನಾಳೆ ಇಲ್ಲಾ ನಾಡ್ದುಕ್ಕೇ ಬರ್ತಿದ್ದು. ಹಾಗೆ ಪಾಳೆ ಯಾವಾಗ್ಲಾದ್ರೂ ಬರ್ಲಿ

ಬಂದಾಗ್ ಹಿಡ್ಕಂಡ್ರಾಯ್ತು ಎಂದು ಒಡ್ಕುದ್ ಕೊಡಾ ಅಲ್ಲೇ ಬುಟ್ಕೋದರ್ಗೇ ಮಾರ್ನೆ ದಿನಾನೂ ಮದ್ಲೆ ಪಾಳೆ ಬರ್‍ತಿದ್ ಕಂಡು ಹೆಂಡ್ತಿ ಮ್ಯಾಗ್ ರೇಗಿದ್ದ.

'ನೋಡ್ದ್ಯಾ ನೀ ಮಾಡಿದ್ದ, ಈಗ್ನೋಡು ಪಾಳೇನ ಬರಾಕಿಲ್ಲ ಒಡ್ಕುದ್ ಕೊಟ್ಟು ಚೊಲೋದ್ ತಗಂಡ್ರ ಬೆಲೆನೇ ಇಲ್ದಂಗಾತು. ಬರೀ ಅವುರ್ಗೇ ಸಿಗ್ತಾವು'. ಸ್ವಲ್ಪ ಕೋಪ ನೆತ್ತಿಗೇರಿದ್ದರಿಂದ ದೊಡ್ ಪರ್ಮಾಣದಲ್ಲಿ ಜಗುಳ್ ಆಗ್ತಿರ್ವಂತೆ ಕಂಡಿತ್ತು. ಅದುಕ್ಕೆ ಜನಾನೂ ಸೇರಿತ್ತು. ಪುಗ್ಸಟ್ಟೆ ಮನ್ರಂಜ್ನೆ ಸಿಗ್ತೈತಂದ್ರ ಬುಡಾಕಾಗುತ್ತಾ ? ಕೆಂಚಣ್ಣನೂ ಅಲ್ಲಿಯೇ ಒಂದು ಪಕ್ಕಕ್ಕಿದ್ದು ಕೊಡ್ಪಾನಾ ಎಣ್ಸೊ ನೆವ್ದಾಗ ಜಗಳಾ ನೋಡ್ತಿದ್ದ.

ಅದೇಕೋ ಅದೆಲ್ರೂ ಜಗುಳ್ದಾಗ್ ಮಧ್ಯಸ್ತಿಕೆ ವೈಸೋನು ಹಿಂಗ್ಯಾಕ್ ನಿಂತ್ಬುಟ್ಟಾ ಎಂದು ಜನಾ ಯೋಚಿಸ್ತಿದ್ರೂ ಉತ್ರಾ ಕಂಡ್ಕೊಂಡಿದ್ರು. ಬೇರೇ ಜಗುಳುತ್ತರಾ ಈ ಜಗುಳಾ ಅಲ್ಲಾ ಇದು ಗಂಡ್ ಹೆಂಡಿರ್ಜಗುಳಾ, ಗಾದೆನೇ ಇಲ್ವೆ ? 'ಗಂಡ್ ಹೆಂಡಿರ್ಜಗುಳಾ ಉಂಡ್ ಮಲ್ಗೋ ತನಕ' ಅಂತ. ಅದುನ್ನ ಅಂವ ಅರಿತ್ಕ್ಕಂಡಿರ್ಬೇಕು ಅದ್ಕೇ ತೆಪ್ಗಿದಾನ ಅಂದಿದ್ರು.

ಹೌದು ಕೆಂಚಣ್ಣ ಅದುನ್ನ ಅರಿತ್ಕಂಡಿದ್ದ.

ಅಷ್ಟೇ ಅಲ್ಲ ಕೊಂಚ ಮುಂದುವರಿದು ಯೋಚಿಸಿದ್ದಕ್ಕೆ ಸರ್ವಜ್ಞನ ವಚನವೊಂದು ಅವನಿಗೆ ನೆನಪಾಗಿತ್ತು. 'ಕರಿಯದೇ ಬರುವವನ, ಬರಿಯದೇ ಓದುವವನ, ಬರಿಗಾಲಲಿ ನಡೆವವನ, ಕರೆದು ಕೆರದಿಂದ ಹೊಡಿ ಎಂದ ಸರ್ವಜ್ಞ'.

ಯುವಕ ಮಂಡಲಗಳೆರಡು ಹಮ್ಮಿಕೊಂಡಿದ್ದ ಯುಗಾದಿ ನಾಟಕೋತ್ಸವದಲ್ಲಿ ಉಪನ್ಯಾಸವನ್ನು ಕೇಳಿದ್ದರಿಂದ ಈ ಮಾತು ತಲೆಗೆ ಹೋಗಿತ್ತು.

ಈ ಬಾರಿ ಯಾರ ಜಗಳದಲ್ಲೂ ಮಧ್ಯಸ್ಥಿಕೆ ವಹಿಸಬಾರದೆಂದು ತೀರ್ಮಾನಿಸಿ ಬಿಟ್ಟಂತಿತ್ತು. ನೋಡಿಕೊಂಡೇ ಸುಮ್ಮನಿದ್ದ.

'ಇಷ್ಟೆಲ್ಲಾ ಹೇಳೋ ನಿಮಗ ನಾನೇನ್ ಹೇಳ್ಲಿ, ಒಡ್ಕುದ್ ಕೊಡಾ ಕೊಟ್ಟಿದ್ಕೇ ಅಲ್ವಾ ಹೊಸ್ದಾ ಕೊಡಾ ಅಂತ ಆಗಿ ಇಂತಾ ಬರ್‍ಗಾಲ್ದಲ್ಲೂ ನೀರ್ ಸ್ಟಾಕ್ ಇರೋದು. ಅಲ್ದೆ ಪಾಳೆ ಸಿಗಾಕುಲ್ಲಾ ಅಂದ್ರ ಒಡ್ಕುದ್ ಕೊಡಾ ಹಚ್ಕೋದುನ್ನ ಬುಡಿಸ್‌ಬುಡ್ಬೇಕು. ಸುಮ್ಕೆ ನನ್ ಮೇಲ್ ರೇಗೋದ್ಕಿಂತ ಅದುನ್ನಾದ್ರೂ ಮಾಡಿ ಅಪ್ಪೂಟ ನೀರಿಲ್ದರಿಗೂ ನೀರ್ ಸಿಗುತ್ತೆ' ಎಂದ್ಲು. ಆ ಮಾತು ಖರೆ ಅನಿಸಿತ್ತು. ಹೊನ್ನಿ ಆಟಂದು ಹೋಗುತ್ತಲೇ ಈ ರೀತಿ ಮಾಡಿದ್ರ ಸರಿ ಹೋಗುತ್ತೆ ಎನ್ನುವ ನಿರ್ಧಾರಕ್ಕ ಬಂದಿದ್ದ.

ಮಾರ್ನೇ ದಿನಾ ಖುದ್ದ ನಲ್ಲೀ ಮುಂದ ನಿಂತ್ಕಂಡು ಈ ವಿಷ್ಯಾ ತಿಳಿಸ್ಬೇಕು. ಇಲ್ಲಾ ಅಂದ್ರ ನಾನ್ ಜಲ್ಲೀ ಶಗ್ಣೀ ಬುಟ್ಬೇನs ಇಡ್ತೀನಿ. ಅದ್ಯಾವಾಗ್ ತುಂಬುತ್ತೋ ಆಗ್ ಹಿಡ್ಕಳ್ಳಿ

ಎಂದ್ರಾಯ್ತೆಂದು ಒಟ್ ಹೊನ್ನೀನ್ ಸಮಾಧಾನ ಮಾಡುವ ನಿಟ್ಟಿಂದ ಒಳುಗೋಗಿದ್ದ. ಹೀಂಗೇ ಎಷ್ಟೋ ಸಾರಿ ಅರ್ಥವಿಲ್ಲದೆ ಜಗಳ ನಡೆಯುತ್ತಿದ್ದವಾದರೂ ಕೊಂಚ ಪಿರೂತಿಯಿಂದ ಹೊನ್ನಿನ್ ಬುಜುಕ್ ಕೈಯಿಟ್ಟು ಸಮಾಧಾನ ಪಡಿಸದೆ ಹೋದ್ರೆ ಆ ದಿನಾ ಏನು ಮಾರ್ನೆ ದಿನಾನೂ ಹೊನ್ನಿಯೊಂದಿಗೆ ಮಾತಾಡಲಿಕ್ಕಾಗದು ಎಂದು ತಿಳಿದಿದ್ದ ಬಸ್ಸಣ್ಣ ಮುಂದಿನ ಕ್ಷಣದಲ್ಲಿಯೇ ಅಡ್ಗೀ ಮನಿಗೋಗಿ ಬುಡುತ್ತಿದ್ದ.

ಅವ್ಳು ಇಷ್ಟಗುಲಾ ಗಲ್ಲಾ ಊದಿಸ್ಗಂಡು ಒಲೀಮುಂದ್ ಕುಂತ್ರೆ ಮುಗೀತು. ಯಾರ್ ಹೇಳಿದ್ರೂ ತನ್ ದುಖ್ಖಾ ಕಡ್ಮಿ ಮಾಡ್ಕೊಳ್ಳೋಳಲ್ಲ ಎಂದು ಮೊದ್ಲೇ ಬಸ್ಸಣ್ಣನ್ ತಾಯಿ ಹೇಳ್‌ಸತ್ತಿದ್ಲು.

'ಮಗುಳ್ ಮಗುಳು ಮೊಮ್ಮಾಗಳಾಗಿದ್ರಿಂದ ಅವುಳ್ ಬಗ್ಗೆ ನಿಂಗಿಂತಾನೂ ನಂಗೇ ಚೆನ್ನಾಗೊತ್ತು. ಅವುಳ್ನ ಸಂದಾಕ್ ನೋಡ್ಕೊ. ಜಗ್ಳಾ ಪಗ್ಳಾ ಮಾಡ್ಬೇಡಾ. ಜಗ್ಳಾ ಮಾಡ್ ಮಾತಾಡ್ಸೋದ್ ಬುಟ್ರೆ ಏನಾದ್ರೂ ಅನಾಹುತ ಮಾಡ್ಕಂಡ್ಬುಟ್ಟಾಳು ಹೋಗೋ ಮಾತಾಡ್ಸು' ಎಂದು ಸತ್ತ ತಾಯಿಯೇ ಮಾತಾಡಿಸಿದಂತಿತ್ತು. ಆ ಕಾರಣದಿಂದಲೇ ಮೊದುಲೋಗಿ ಅವಳನ್ಕಂಡಿದ್ದ.

ಬಾಗಿಲಿನ ಮೇಲೆಯೇ ಒಂದು ಕಡೆಗೆ ತುಸುದೂರದಲ್ಲಿ ತಾಯಿಯ ಫೋಟೋ ನೇತು ಹಾಕಿದ್ರಿಂದ ಅದರ ಕೆಳ್ಗಡೆಯೇ ಹೊನ್ನಿ ಬಿಕ್ಕುತ್ತಿದ್ಲು. ಒಮ್ಮೆಲೆ ಹಿಂದೆ ಬಂದು ಅವಳ ಭುಜಕ್ಕೆ ಕೈಯಿಡಬೇಕೆಂದು ಚಾಚಿದ್ದ ಕೈಗಳೂ ನಡುಗುತ್ತಿದ್ದವು. ಹೇಗೋ ಭುಜಕ್ಕೆ ಕೈಯಿಟ್ಟು 'ನಂತಪ್ಪಾತು ಕಣೆ ಕ್ಷಮಿಸ್ಬುಡು' ಎಂದಿದ್ದ. ಅವೆರಡೇ ಮಾತು ಇನ್ನೂ ಮುಗಿದಿದ್ದಿಲ್ಲ. ಅಷ್ಟೊತ್ತಿಗಾಗ್ಲೇ ಮೈಕೊಡವಿ ಬಿಟ್ಟಿದ್ದಳು. 'ನನ್ ಮೇಲೆ ಕೋಪಾನಾ ?' ಈ ಬಾರಿ ಕೊಂಚ ಮುಂದೆ ಬಂದು ಕೆನ್ನೆಯನ್ನು ತಡವಿ ಚೂಟಿದ್ದ 'ಹೇಯ್ ಕಳ್ಳೀ ಒಳ್ಗೇ ನಗ್ತೀಯಾ ?' ಎಂದೂ ಹೇಳಿದ್ದ. ಅಷ್ಟ್ ಅನ್ನುವಷ್ಟರಲ್ಲಿ ಹಿಂದಿನ ದ್ವೇಷವೆಲ್ಲಾ ಮರೆತು ಹೊನ್ನಿ ಅವನ ತೋಳು ತೆಕ್ಕೆಗವಿತು ಬಿಟ್ಟಿದ್ದಳು.

'ಮೂಗಿನ್ ಮ್ಯಾಲೇ ಕೋಪಿದೆ ಅಂತ ರುದ್ರ್‌ಕಾಳಿಯಾಗ್ ಬುಡ್ತಿಯಲ್ಲೇ ಒಂದ್ ಕ್ಷಣಾ ನಾನೇನಾದೆ ಗೊತ್ತಾ ನಿಂಗೆ' ಅವಳನ್ನು ಇನ್ನಷ್ಟೂ ಬಿಗಿಗೊಳಿಸಿಕೊಂಡು ಮತ್ತಷ್ಟೂ ಬಿಗಿದಿದ್ದ.

'ಛೀ ಹೋಗಿಪಾ, ರಸಿಕ್ರೂ ನೀವು' ಎಂದು ಒಮ್ಮೆ ಬರಾಸೆಯಿಂದ ಬಿಡಿಸಿ ಕೊಂಡಾಗಲೆ ಅವಳು ತೋಳು ತೆಕ್ಕೆಯಿಂದ ಹೊರಬರುತ್ತಿದ್ದುದು. ಅಷ್ಟೊತ್ತಿಗಾಗಲೇ ತಮಷೆಯಾಗಿದ್ದ ಜಗಳವೀಗ ಮಾಯವಾಗಿ ಹೊನ್ನೀ ಮಖ್ದಾಗಿಷ್ಟು ಕಳೆ ಬಂದಿತ್ತು. ಮಾರನೆಯ ದಿನ ಅದೇ ಸಾಲುದಿಬ್ಬುಕ್ಕವಿತುಕೊಂಡಿದ್ ಸೂರ್ಯ ಮೆಲ್ಲನೆ ಯಾರಿಗೂ ಕಾಣದೆ ಮೇಲೇಳಲಿದ್ದ. ಆದರೆ ಬಿಡಬೇಕಲ್ಲವೆ ? ಎನ್ನುವಂತೆ ಅವನ ಹೊಂಗಿರಣಗಳು ಭೂಮಿಯ ಉದ್ದಗಲಕ್ಕೂ

ಹಾಕಿಬಿಟ್ಟಿದ್ದರಿಂದ ಕೋಳಿಗೆ ಹೇಗೋ ಸುಳಿವು ತಿಳಿದು ಕೂಗಿಬಿಟ್ಟಿತ್ತು. ಬೆಳಗಾದ ಆ ಬಗೆ ಮೊದಲು ಕತ್ತಲಾಗಿದ್ದು ಕ್ರಮೇಣ ಬೆಳಕು ಮೂಡಿವಂತೆ ರಂಗಮಂದಿರವೇ ಎನಿಸಿತ್ತು.

ಸದ್ದುಗದ್ದಲವಿಲ್ಲದೆ ಎದ್ದೆದ್ದು ನೋಡುತ್ತಿದ್ದ ಸೂರ್ಯನಿಗೋ ಕೊಂಚ ಮುಜುಗರ. ಕೋಳಿ ಕೂಗಿ ರಂಪ ಮಾಡಿದ್ದರಿಂದ ಎದ್ದ ಜನಗಳೆದ್ದೆದ್ದು ಅದೆಲ್ಲಿಗೋ ಹೋಗಿಬರುವ ದಿನಚರಿಯನ್ನು ತುಣುಕು ಮೋಡದ ಹಿಂದೆ ಇದ್ದುಕೊಂಡೇ ನೋಡುವಂತಿತ್ತು. ಬಸ್ಸಣ್ಣ ಅಷ್ಟೊತ್ತಿಗಾಗಲೇ ಚರಿಗೀ ತಗೊಂಡ್ ಹೋಗ್ಲಿಕ್ಕಣಿಯಾಗಿ ಕಣುದ್‌ಕಡೆ ನಡೆದ. ಹಾಗೆ ನಡೆಯುವಾಗ ಪಂಚಾತಿ ವಾಟರ್‌ಮನ್ ವಾಲ್ ತಿರುವಲು ಹೋಗಿದ್ದು ಕಂಡಿತ್ತು. ಅವಸರವಸರವಾಗಿಯೇ ತಿಪ್ಪಿಯಾಚೆಯ ಒಂದು ಗುಂಡಿಯಲ್ಲಿ ಕುಂತು ಹಿಂಗ್‌ಹೋಗಿ ಹಿಂಗ್ ಬಂದಿದ್ದಕ್ಕ ಸರಿಯೇ ಎನಿಸಿತ್ತು.

ಆಗತಾನೆ ಬುದುಗ್ ಬುದುಗ್ ಮಾಡ್ತಾ ನಲ್ಯಾಗ್ ನೀರ್ ಬರ್‍ತಿದ್ದು. ಪಾಳೇ ಪ್ರಕಾರ ಮೊದುಲ್ ಯಾರ್‍ಬಿದ್ರೋ ಅವರುಗಳು ನೀರ್ ಹಿಡಿಯೋದು ಮುಗಿಯುತ್ತಾ ಬಂದಂತೆ ಬಸ್ಸಣ್ಣನ್ ಪಾಳೆನೂ ಕೊಂಚ ನಲ್ಲೀ ಸಮೀಪುಕ್ ಬಂದಿದ್ದು. ಅವನ ಹಿಂದೆಯೇ ಮತ್ತೆ ಆಗಲೊಮ್ಮೆ ಹಿಡಿದಿದ್ದ ಪಾಳೆಗಳು ಹಿಂತಿರುಗಿ ಬರುತ್ತಿದ್ದು. ಒಡ್ಕುನ್ ತಗ್ದು ಚೊಲೋವ್ ಹಿಡ್ಕಂಡ್ ಮತ್‌ಪಾಳೆ ಹಚ್ಚಿದ್ರಿಂದ ನೀರು ಹೋದರೂ ನಾಳಿಯ ಪಾಳಿ ಅವರಿಗೇ ಮೊದ್ಲಾಗಿದ್ದು ಈ ಭಾರಿ ಬಸ್ಸಣ್ಣುಂಗ್ ಸರಿಬಂದಿದ್ದಿಲ್ಲ.

ಕೆಂಚನ್ನೆಣ್ತಿ ಅಷ್ಟೊತ್ತಿನೊರ್‍ಗೂ ಮಾಡಿದ್ದ ಎಲ್ಲವನ್ನೂ ನೋಡಿದ್ದಕ್ಕೆ ಈ ಸಾರಿ ಹೊಡಿಯಲೇ ಬೇಕಾಗಿತ್ತು. 'ಪಾರಕ್ಕಾ ನೀ ಹಿಂಗ್ ಮಾಡದು ಸರೀ ಬರಾಕುಲ್ಲ ಬುಡೂ. ಏನೋ ಒಂದು ಎಲ್ಡು ಹಚ್ಗಂತಾಳಾ ಅಂದ್ರ......' ಬಾಯಿ ಮಾಡಿ ದಬಾಯಿಸಿದ್ದ.

ಪಾರಕ್ಕಾನೂ ಏನೋ ಅನ್ನಬೇಕೆನ್ನುತ್ತಿದ್ದ್ಲು. ಅಷ್ಟೊತ್ತಿಗ್ ಸಮ್ಯಕ್ ಸರಿಯಾಗಿ ಒಳುಗ್ನಿಂದ ಬಂದ ಬಸ್ಸಣ್ಣುನ್ನೆಣ್ತಿ ಹೊನ್ನಿನೂ ದನೀಗೂಡ್ಸಿದ್ಲು.

'ಎಲ್ರೂ ಯಾಲ್ಡ್ಯಾಲ್ಡ್ ಕೊಡಾ ಹಿಡ್ಕಾಬೇಕ ಬ್ಯಾಡ ನೀ ಹಿಂಗ್ ಒಡ್ದುದ್ದೋಷ್ಟೂ ಇಟ್ ತುಂಬ್ಕನ್ನದ್ರಾಗ್ನ ನೀರೋಗ್‌ಬುಡ್ತವು. ಪಾಳೆ ಎಷ್ಟವಾವಷ್ಟ್ ಹಚ್ಗ್ಯಾ ಆದ್ರ ಅವುಗಳ್ ಬದ್ಲಿ ಬದ್ಲಿ ಕೊಡಾ ಹಿಡ್ಕಂಡ್ರ ಯಾರ್ ಕೇಳ್ತಾರು ನಾಳೆ ನಮ್ಮೆಜ್ಮಾನ್ರು ಜಲ್ಲೀ ಇಡ್ತಾರಾ ಸುಮ್ಕಿರ್‍ತಿರಾ ?' ಎಂದಿದ್ಲು. ಗಂಡನ್ನವರ್‍ಗಾಗಿ ಮಾತಾಡಿದ್ರೂ ಕೊಂಚ ನ್ಯಾಯಾವಾಗಿಯೇ ಇದ್ದಿದ್ಕೆ ನಲ್ಲಿಯ ಸುತ್ಲೂ ಇದ್ ಇನ್ನುಳಿದ್ ಜನ್ರಿಗೂ ಬಾಯ್ಬಂದಿತ್ತು.

'ಹೌದು ಪಾರಕ್ಕಾ, ಅವುರೇಳೋದು ಸಂದಾಕೆ ಐತಿ. ಅಪ್ಪೂಟ ನೀರಿಲ್ದೋರು ಕಾಲೀ ಕೊಡಾ ಒಯ್ ಬೇಕಾದೀತು. ನಾಳೆಯಿಂದಾನೇ ಯಾರೂ ಒಡ್ಕುದ್ ಕೊಡಾ ಹಚ್‌ಬ್ಯಾಡ್ರಿ'

ಜನಾನೇ ಆಡಾಕ್ ಸುರುಮಾಡಿದ್ರು. ಪಾರಕ್ಕಂಗೆ ಬೇರೆ ದಾರಿಯೇ ಇಲ್ದೆ ಒಡೆದ ಕೊಡ ತೆಗಿಲೇ ಬೇಕಾಗಿತ್ತು. ಹಾಗೆ ತೆಗಿಯುವಾಗೊಮ್ಮೆ ಎಚ್ಚರಿಕೆಯನ್ನು ಕೊಡಲು ಮರೆತಿದ್ದಿಲ್ಲ.

'ನೋಡೀ, ನೀವುಗಳೆಲ್ಲಾ ಇಷ್ಟ್ ಹೇಳಿದ್ಮ್ಯಾಲೂ ನಾ ಕೊಡಾ ತೆಗಿದೆ ಇದ್ರೆ ಅದೂ ಸರಿ ಕಾಣಾಕಿಲ್ಲ, ಅದುಕ್ ನಾ ತಗೀತಾ ಇದ್ದೀನಿ. ಆದ್ರ ನಾಳೆ ಯಾರಾದ್ರೂ ಒಡ್ಕುದ್ ಕೊಡಾ ಇಟ್ರ ನನ್ನಿಂದ ಬಂತು ಅನ್ನಾಕಿಲ್ಲ' ಎಂದಳು.

ಅಷ್ಟೊತ್ತಿಗಾಗಲೇ ಪಾರಮ್ಮನ್ ಡಜನ್ ಕೊಡ್ಪಾನಗಳೂ ತುಂಬಿದ್ವು. ಇನ್ನೇನು ಬಸ್ಸಣ್ಣನ್ ಪಾಳೆ ಬಂದಿತ್ತಷ್ಟೇ ನೀರು ಹೋಗ್ಬುಟ್ಟಿತ್ತು. 'ನೋಡ್ದಾ ನೀವಿಷ್ಟಿಷ್ಟ ಪಾಳೆ ಇಟ್ ನೀರ್ ಮಾಡ್ಕಂಡ್ಬುಟ್ಟಿದ್ಕೆ ಹಿಂದ್ಲರ್ಗಿ ನೀರೇ ಇಲ್ದಂಗಾತು. ಓಟ್ ಹಿಂದ್ಲರು ಮುಂದ್ಲಾರು ಅನ್ನೋರ್ಗೆ ನೀರ್ ಸಿಗ್ಲಿ' ಎಂದ. ಅಷ್ಟೊತ್ತಿಗಾಗ್ಲೇ ನಳದ ಮುಂದೆ ಯಾರೂ ಇರ್ಲಿಲ್ಲ. ಮತ್ತೆ ಮುಂಜಾನಿವರ್ಗ್ಗೂ ಕೊಡ್ಪಾನಗಳು ಕೊಳಿತಾನೇ ಬೀಳ್ತಿದ್ವು.

ಇತ್ತೀಚ್ಯಾಕೋ ನೀರು ಸರ್ಯಾಗೇ ಬರ್ತಾ ಇಲ್ಲ. ಒಂದ್ ಕೊಡಾ ತುಂಬೀದ್ರ ಒಂದ್ ಕೊಡುಕ್ ನೀರಿಲ್ದಂಗ್ ಮಾಡಾಕತ್ಯಾರಲ್ಲಾ. ಹಿಂಗೇ ಮಾಡ್ತಾ ಇದ್ರ ಮುಂದ್ಹೆಂಗ ? ಮೊದ್ಲು ನೀರನ್ನೋದು ಇಷ್ಟ್ ದೂರಾ ಒಗಿಯೋನು, ಈಗ ಉಚ್ಚಿಹೊಯ್ದಂಗಾಗ್ತಾ ಇದೆ. ಉಗಾದಿಗೂ ಹಿಂಗೇ ಮಾಡಿದ್ಕೆ ಎರ್ಕನ್ನದ್‌ಬುಟ್ಟು ಬಾವ್ಗೋಗಿ ಮೈ ತಕ್ಕಂಡಬಂದ್ವಿ ಅಲ್ದೆ ನಾವೇನೋ ಗಣ್ಮಕ್ಳು ಬಾವಿಗಾದ್ರೂ ಹೊಕ್ಕವಿ, ಕೆರಿಗಾದ್ರೂ ಹೊಕ್ಕವಿ. ಹೆಣ್ಮಕ್ಳೆಲ್ಲಿಗೋಗೋದು ? ಆ ದಿನ ಮೈತೊಕ್ಕಳ್ದೆ ಹಬ್ಬಾ ಮಾಡಿದ್ರಲ್ಲ ಇದುಕ್ಕೇನನ್ಬೇಕು. ಪಂಚಾತಿಗ್ ಬೀಗಾ ಹಾಕಿದ್ರೇ ಇದುಕ್ಕೊಂದ್ ಪರ್ಯ್ಯಾರಾ ಸಿಗೋದು ಅಂತ ಯೋಚಿಸಿದ್ಕೆ ಪಂಚಾತಿಗ್ ಬೀಗಾನೂ ಬಿದ್ದಿತ್ತು.

ಆದ್ರೆ ಆವಾಗ್ಲೇ ಹೇಳಿದ್ರಲ್ಲಾ ನೀರ್ ಸರ್ಯಾಗ್ ಬುಡ್ತೀವಿ ಅಂತ ಒಬ್ಬನೇ ಗುನುಗುತ್ತ ಕುಳಿತಿದ್ದ. ಈ ಸಾರೀ ಅದೆಂಗ್ ಬುಡೋದಿಲ್ಲೋ ನೋಡಾಣು. ಕೊನೆಗೆ ಒಂದ್ ತೀರ್ಮಾನುಕ್ಕೂ ಬಂದಿದ್ದ. ತನ್ನ ಪಾಳೆಗಳೇ ಮೊದಲಿಗಿದ್ದಿದ್ದರಿಂದ ಯಾರಾದರೂ ಏನಾದರೂ ಪಾಳೆ ಕದ್‌ಬುಟ್ಟಾರೆಂದು ಬಸ್ಸಣ್ಣ ಸರ್ಪಗಾವಲು ಇರುವುದರಲ್ಲೇ ಹೊತ್ತು ನೂಕಿದ್ದ.

ಮತ್ತೆ ಎಂದಿನಂತೆ ಬೆಳಗಾಗಿತ್ತು. ತನ್ನೆಲ್ಲ ದಿನಚರಿಯಿದ್ರೂ ಅವುಗಳನ್ನು ಬದಿಗೊತ್ತಿದ್ದು ಈಗೋ ಆಗೋ ಬರಬೇಕಾಗಿದ್ದ ನೀರಿಗೇ ಕಾದು ಕುಳಿತಿದ್ದ.

'ಮಾರೀ ತಕ್ಕನ್ನಾಕೂ ನಿಮ್ಗ ಪುರ್ರೊತ್ತಿಲ್ಲೇನು ? ಬರ್ರೀ ಮಾರೀ ತಕ್ಕಂಡು ಚಾ ಕುಡ್ದು ಹೋಗ್ವಂತ್ರಿ' ಎಂದು ಹೊನ್ನಿ ಕಿಟಕಿಯಿಂದಲೇ ಕೂಗಿ ಹೇಳುತ್ತಿದ್ದಳು. ಆ ಯಾವ ಮಾತುಗಳೂ ಬಸ್ಸಣ್ಣನ್ ಕಿವಿಗೆ ಮುಟ್ಟಿದ್ದಿಲ್ಲ ಎನ್ನುವಂತೆ ಅವನಿದ್ದುಬಿಟ್ಟಿದ್ದಕ್ಕೆ 'ನೀವು ಬರ್ದೆ ಇದ್ರೆ ಚಾ ಆರೋಗುತ್ತೆ ಮತ್ತೊಮ್ ಕಾಯಿಸ್ಲೇನು ? ಬಂದ್ ಕುಡುದ್ ಹೋಗ್ಬಾರ್ದಾ ?' ಮತ್ತೊಮ್ ಹೇಳಿದ್ಲು.

ಈ ಮೊದಲೇ ನೀರು ಒಂದು ಸಾರಿ ಬುದುಗ್ ಬುದುಗ್ ಮಾಡಿ ಹೋಗಿದ್ದರಿಂದ ಅಷ್ಟೇನು ಸಮ್ಮಾ ತಗೊಳ್ವೇ ನೀರು ಬರ್ತಾವನ್ನುವ ಗ್ಯಾರಂಟಿ ಮೇಲೆದ್ದು ಹೋಗಿದ್ದ. ಹಾಗೆ ಎದ್ದು ಹೋಗುವಾಗನೇ ಕೊಡ್ಪಾನುಕ್ಕಿಷ್ಟು ನೀರ್ ಬಂದಿದ್ರಿಂದ ಅವುಗಳಲ್ಲೇ ಕೊಡ್ಪಾನಾ ಗಲಾಸ್ ತೊಳಿದಿಟ್ರೆ ನೀರ್ ಬಂದ್ರೂ ಬಾಯ್ಗೇ ಬೀಳ್ಲಿ ಎಂದು ಕೊಡ್ಪಾನಾ ಇಟ್ ಬಂದಿದ್ದ.

'ಮಖಾಗಿಖಾ ತೊಕ್ಕನ್ನೋದಾಮ್ಯಾಲಿರ್ಲಿ ಮದ್ಲು ಚಾ ಕೊಡು. ಕುಡ್ದು ಓಗ್ತೀನಿ. ಯಾರಾದ್ರೂ ಕೈ ಹೆಟ್ ಬುಟ್ಟಾರು ಕುಡೆನೀರಾಗ್ ಕೈ ಎದ್ದೀದ್ರೆ ನಂಗದು ಸರೀಬರಾಕುಲ್ಲ ಅಂತ ನಿಂಗೊತ್ತು' ಎಂದಿದ್ಕೆ ಚಾ ಸೋಸಿ ಹೊನ್ನಿ ಕೈಗಿಟ್ಲು. ಇನ್ನೇನು ಕಪ್ಪಿಗೆ ಬಾಯಿಟ್ಟು ಒಂದಿಷ್ಟು ಕುಡ್ದಿದ್ದ ಅಷ್ಟೇ. ಅಷ್ಟೊತ್ತಿಗಾಗ್ಲೇ ಸರ್......ರ್.......ರ್.......ರ್ ಎನ್ನುವ ಸದ್ದು. ಅದು ನೀರಿದನೇ ಎಂದು ಗೊತ್ತಾಗಿದ್ ಬಸಣ್ಣ ಬಾಯಿ ಸುಡುವ ಕಬುರೂ ಇಲ್ದೆ ಗಟ್ಗಟ್ ಚಾ ಅದೆಂಗ್ ಕುಡುದ್ನೋ ನಲ್ಲೀಗ್ ಬಂದ್ ನಿಂತಿದ್ದ.

ಅದೇ ತಾನೆ ನೀರು ಬರುತ್ತಿದ್ದುದರಿಂದ ಇನ್ನೂ ಸಣ್ಮಕ್ಕುಛ್ಚೀ ತರ ಜಿನೀಯಂತಿದ್ಕೆ ಕೊಡ್ಪಾನ್ದಲ್ಲಿ ಅಷ್ಟೇನೂ ನೀರಿದ್ದಿದ್ದಿಲ್ಲ. ಮತ್ತೊಮ್ಮೆ ಅವನ್ನು ಚೆಲ್ಲಿ ತೊಳೆದಿಟ್ಟಿದ್ದ. ಈ ಬಾರಿ ಕುಡೇ ನೀರ್ಗೆ ಕೈ ಅದ್ದೋದೇನ್ಬಂತು ಧೂಳೀ ಕಣಾನೂ ಕೂಡ ಹೋಗ್‌ಬಾರ್ದೆಂದು ಅರ್ರಿಬಿ ಕಟ್ಟಿದ್ದ.

ಕ್ರಮೇಣ ನೀರಿನ್ ಬರುವಿಕೆಯಲ್ಲಿ ಹೆಚ್ಚಾಗುತ್ತಿದ್ದುದಕ್ಕೆ ಕೊಡ್ಪಾನಗಳೂ ಬೇಗ್‌ಬೇಗ ತುಂಬ್ತಿದ್ವು. ನೆದರ್‌ಲ್ಯಾಂಡ್ ಸ್ಕೀಮಲ್ವೆ ? ಆದಷ್ಟು ನೀರಿನ ಬರಾ ನೀಗ್ಸಿತ್ತು. ಪ್ರತೀ ಇಪ್ಪತ್ತು ಮನೆಗೊಂದರಂತೆ ನಲ್ಲಿಯನ್ನು ಕೂಡ್ರಿಸಿ ಸರ್ಕಾರ ಪುಣ್ಯ ಕಟ್ಗಂಡಿದ್ಕೆ ಊರಲ್ಲಿ ನೀರಿನ ಹೊಳೆನೇ ಹಾದಂತಿತ್ತು. ಆದ್ರೆ ಅದು ಇತ್ತೀಚ್ಗೆ ಕಡ್ಮೀ ಆಗ್ಲಿಕ್ಕೆ ಕಾರಣ ಮಳೆ ಇಲ್ದಂಗಾಗಿ ಭೂಮ್ಯಾನ್ ನೀರೂ ಬತ್ತಿ ಬಾಡ್ ಹೋಗಿತ್ತು. ಆ ಕಾರಣ್‌ದಿಂದ್ಲೇ ಪ್ರತೀ ಬೋರ್‌ವೆಲ್‌ಗಳೂ ನೀರನ್ ಸಣ್ಮಕ್ಕುಛ್ಚಿಹೊಯ್ಯುವ ಮಟ್ಟಕ್ಕಿಳ್ದಿದ್ವು. ಕೆರೆನೂ ಹೂಳೆತ್ತದ ಕಾರಣ ಅದ್ರಲ್ಲೂ ಇದ್‌ಬದ್ ಅಲ್ಪ್ ಸ್ವಲ್ಪ್ ನೀರು ಸುಡ್ವ ಬಿಸಿಲ್ಗೆ ಒಣುಗೋಗಿತ್ತು.

ಈಗ್ಗೆ ಊರಿಗೇ ದೊಡ್ಡ ಕೆರೆಯದು ಅದುನ್ ಹೂಳೆತ್ತಿದ್ರೆ ಸಾಕಷ್ಟ್ ನೀರು ಸಿಗುತ್ತೆ ಭೂಮ್ಯಾನಂತರ್ಜಲ ಮಟ್ಟಾನೂ ಹೆಚ್ಚುತ್ತೆ ಅಂದು ಪಂಚಾತಿ ಸಭೆಯಲ್ಲಿನ್ ಮುಖ್ಯಾಂಶವಾಗಿ ಈ ವಿಷಯಾ ಬಂದಿತ್ತಾದ್ರೂ ಅದಕ್ಷಣಾ ಬಿಡ್ಗಡೆಯಾಗಿದ್ದಿಲ್ಲ. ಮುಂದಿನ ವರ್ಷಾಂತ್ಯದೊಳಗೆ ಕೆರೆ ಹೂಳೆತ್ತುವ ಕಾರ್ಯ ಭರದಿಂದಲೇ ಸಾಗುತ್ತೆ ಎಂದು ಶಾಸಕ ಮಹಾಶಯರೊಬ್ಬರು ಭರವಸೆ ಕೊಟ್ಟಿದ್ದರು. 'ಆ ಭರವಸೆ ಈಡೇರುಹೊತ್ಗೆ ಮಳೆನೇ ಬರುತ್ತೆ. ಅದುನ್ ನಂಬ್ಕಂಡ್ ಕುಂತ್ಕಂಡ್ರೆ ಅಷ್ಟೆಯಾ. ನಾವೇ ಒಂದ್ಹೈದಾರ್ ಮಂದಿ ಕೂಡಿ ಕೆಲ್ಸಾ ಸುರು ಹಚ್ಕಂಡ್ರಾಯ್ತು. ನಾಳ್ಪತ್ರಿಕೆರ್ಗೂ ತಿಳ್ದು ಸರ್ಕಾರುದ್ ಗಮನಕ್ಕೂ ಬರ್ಬೋದು' ಎಂದು ಕುಮಾರ್ ಕರಿಯ ಒಂದಿಷ್ಟ್ ಮಂದೀ ಕೂಡ್ಸಿ ತಾನೇ ಮುಂದಾಳತ್ವವಯಿಸ್ಕೊಂಡು ಹೇಳುತ್ಲೇ ಬಂದಿದ್ದ.

ಅದು ಬಾಯ್ಮಾತಾಗಿತ್ತಾದ್ರೂ ವಟ್ಯಾಗೊಂದ್ ಕ್ವಾಟರ್ ಸರಾಯಿ ಬಿದ್ಮೇಲೆನೇ ಹೊರ್ಬಿದ್ ಮಾತಾಗಿದ್ಕೆ ಇದು ಬರೀ ಬೊಗಳೆ ಎಂದೆನ್ನುವರೇನು ಕಮ್ಮಿ ಇದ್ದಿದ್ದಿಲ್ಲ. ಮುಂಗಾರಿನ ಮಿಂಚೊಂದು ಮಧ್ಯ ಮಿಂಚಿ ಮಾಯ್ವಾಗಿದ್ರಿಂದ ಜುಬುರ್ ಜುಬುರ್ ಮಳೆ ಆಗ್ಲೇ ಸುರು ಹಚ್ಗಂಡಿತ್ತು. ಕೊಡ್ಪಾನ್ ತುಂಬ್ಕೆಂತ ಬಂದಂಗ ಪಾಳೆ ಮುಗಿದ್ವೇನ ? ಹೊನ್ನೀನ್ ಕೇಳಿದ್ದ. ಕೊಡ್ಪಾನಗಳು ತುಂಬ್ಕೆಂತ ಬಂದಾಗ ಎರಡೂ ಕೈಯ್ಯಲೊಂದ್ರಂತೆ ಎಲ್ಡೆಲ್ಡ್ ಕೊಡಾ ಅಂಡೇಕ್ ಹಾಕ್ಬಂದಿದ್ದ. ಹೊನ್ನಿನೇ ಖುದ್ದು ನಿಂತು ಕೊಡ್ಪಾನ ತುಂಬ್ಸಾಕಿದ್ಲು.

'ಏನ್ರೀ ಇನ್ನೊಂದ್ ಕೊಡಾನ ಕಾಣ್ತಾ ಇಲ್ಲಾ, ಅದ್ರಾಗ್ ಬೇರೆ ಹೊಸ್ದಾದು' ಎಂದ್ಲು.

'ಅಲ್ಲೇ ಇರ್ಬೇಕ್ ನೋಡೇ ಸಲ್ಪ ಸರ್‍ಯಾಗ್ ಹುಡ್ಕು'

'ಹುಡ್ಕೇನ್ರೀ, ಎಲ್ಲೂ ಕಾಣ್ತಾ ಇಲ್ಲಾ ನೀನೇನರ ನೋಡ್ದ್ಯಾ ಪಾರಕ್ಕಾ ?'

'ಇಲ್ಲಾ ಹೊನ್ನಕ್ಕಾ, ನಾನೂ ಈಗ್ತಾನೇ ಬರ್‍ತಾ ಇವ್ನೀ'

'ಅಂಗಾರೆ ಎಲ್ಹೋಯ್ತು, ನಮ್ಮೋಣ್ಯಾಗ್ ಕಳ್ರು ಬಂದ್ರಾ ?'

'ಬಂದ್ರೂ ಬರ್‍ಬೋದು. ನೀ ಒಂದ್ ಕೆಲ್ಸಾ ಯಾಕ್ ಮಾಡ್ಬಾರ್‍ದು ಹೊನ್ನಕ್ಕಾ, ಕಳುದ್ ಓದ್ ಕೊಡ್ಪಾನಾ ಏನು ಅವುರ್ಮನ್ಯಾಗೇನಾರೂ ಒಂದ್ ನಗುದ್ ಬುದ್ ಸತ್ತೇ ಹೋಕ್ಕಾರ' ಎದುರಿಗಿದ್ದ ಅಂಬಕ್ಕನಿಗೂ ತನುಗೂ ಆಗ್‌ಬರ್‍ತರ್ಲಿಲ್ಲ. ಆಕಿ ಮೇಲೆಯೇ ಸಂಶಾ ಕಟ್ಟಿ ಪಾರಕ್ಕಾ ಚುಚ್ ಮಾತಾಡಿದ್ಲು.

'ಏನ್ಮಾಡ್ಬೇಕು ಅಂದ್ಕಂಡಿದ್ದಿ ಪಾರಕ್ಕಾ, ಕಳ್ಹೋದ್ ಕೊಡ್ಪಾನಾ ಸಿಗುತ್ತಾ ?'

'ಸಿಗೋದೇನು ? ಮನೀ ಬಾಗಿಲ್ಗೆ ಬಂದಿಟ್ಟಿರಾರೆ'

'ಅಂಗಾರೆ ನನ್ನೇನ್ ಮಾಡಂತಿದೀ ಪಾರಕ್ಕಾ ?'

'ಇನ್ನೇನ್ ಮಾಡ್ತಿ,ತಗೋ ಒಂದಿಟ್ ಕಾರಾ ತಗೋ. ಹಿತ್ತುಲ್ದಾಗಿರೋ ಚೋಡಮ್ಗ್ ತಿಕ್ಬಂದ್ಬುಡು. ಮಾರ್‍ನೆ ದಿನಾ ನೋಡು ನಿಮ್ ಕೊಡಾ ನಿಮ್ ಮನಿ ಮುಂದೇ ಬಿದ್ದಿರುತ್ತೆ. ಮದ್ಲ ಅಶ್ಟಾಲ್ದಾಕಿ ಎಂತಾ ಕಳ್ರಿದ್ರೂ ಸಿಕ್‌ಹಕ್ಕಂತಾರ'

ಈ ಮಾತು ಸರಿ ಬಂದಿತ್ತು. ಅಷ್ಟೊತ್ತಿನವರೆಗೂ ಕಿವಿಗೊಟ್ಟು ಕೇಳಿದ್ಕೆ ವಿಷ್ಯ ತಿಳ್ಕಂಡ ಬಸಣ್ಣ ಕಾರ್‍ಪುಡೀ ಡಬ್ಬೀ ತರಾಕಂದ್ ಹೋಗ್ತಿದ್ದ್ ಹೊನ್ನೀ ತಡ್ದು, 'ಹಿಕ್ಕಾ ಇಲ್ಲೇ ಐತ್ನೋಡು ಕಾರ್‍ಪುಡಿ' ಎಂದ. ಒಂದ್ ರದ್ದೀ ಪೇಪರ್‍ನಾಗ್ ಆಗ್ಲೇ ಪ್ಯಾಕ್ ಆಗಿದ್ರಿಂದ ಹೊನ್ನಿ ಎದಿಯೊಳುಗ್ ತುರುಕೆಂಡಿದ್ಲು. ಅದು ಎಣ್ಮಕ್ಕುಳ್ ಸೇಫ್ಟಿ ಲಾಕರೆಂದು ಮೊದ್ಲೇ ಗೊತ್ತಾಗಿದ್ಕೆ ಅಲ್ಲಿಯ ವಸ್ತು ಕಳುವ್ ಆಗಿದ್ದಿಲ್ಲ. ಅದುಕ್ಕೇ ಹೊನ್ನಿ ಎಲೆ ಅಡ್ಕಿನೂ ಸೇಫ್ಟಿಲಾಕರೆಂದು

ಹೇಳಿಕೊಳ್ಳುವ ಕುಬುಸುದಾಗೇ ಇಟ್ಗಂಡಿದ್ಲು. ಹೇಗೋ ಪಾರಕ್ಕುನ್ನೂ ಬರಾಕ್ ಹೇಳಿದ್ಲು. 'ನಂಗೆ ನೇಮಾ ನೀತಿ ಗೊತ್ತಿಲ್ ಪಾರಕ್ಕಾ, ಅದೇನು ಅಂತ ನೀನೇ ಮಾಡು ಕಾರ್‍ಪುಡಿನೂ ನೀನೇ ತಿಕ್ಕು. ಆ ಮೇಲಡ್ಕಿಎಲೆ ಹಕ್ಯವಂತಿ' ಅಂದಿದ್ಲು. ಅಷ್ಟೇನೂ ಸಮ್ಯ ತಕ್ಕಳ್ದಂಗೆನೇ ಕಾರ್‍ಪುಡಿ ತಿಕ್ಕಿದ್ಲ ಪಾರಕ್ಕ ಕೈ ತಕ್ಕಂಡು ಹೇಳ್ತಿದ್ಲು, 'ಇನ್ ನೋಡ್ ಹೊನ್ನಿ, ಆ ಕೊಡಾ ಕದ್ದೋರ್ ಮೈಯ್ಯೀ ಕಣ್ಣು ಎಲ್ಲಾ ಉರಿ ಉರಿ ಉರಿ ನಾಳೆಲ್ಲಿದ್ರೂ ಕೊಡಾ ಸಿಕ್ಕಂಗೆನೇ ಅನ್‌ಮಾನಾ ಬೇಡಾ' ಹಿತ್ತುಲ್ ಬಾಗ್ಲಾ ದಾಟಿ ಪಾರಕ್ಕ ಹೊರಬರುವಷ್ಟರಲ್ಲಿ ಜುಬುರು ಜುಬುರಿದ್ದ ಮಳೆ ಕ್ರಮೇಣ ಕಡ್ಮೀ ಆಗಿತ್ತು. ನೀರೂ ಹೋಗಿದ್ಕೆ 'ನಾನಿನ್ ಬತ್ತೇನಿ ಹೊನ್ನಕ್ಕಾ' ಎಂದು ಹೇಳಿ ಹೋದಿದ್ಲು.

ಮಾರ್ನೇ ದಿನ ಏನಾಗುವುದೋ ಎಂಬ ಹೊಸ್ಸಾ ನಿರೀಕ್ಷೆಯಲ್ಲಿ ನೀರ್ ಹಿಡಿವ ಜನಾ ಇತ್ತು. ಇನ್ನೂ ನೀರ್ ಬರ್ದೇ ಇದ್ರೂ ಬಂದಂತ ಜನುರ್ ಬಾಯ್ಗೆ ಬೀಗ ಬಿದ್ದಿದ್ದಿಲ್ಲ. ಎಲುವಿಲ್ಲದ ನಾಲಿಗೆ ಅದಲ್ಲವೆ ? ಕೊಂಚ ಮಾತಿನ ಮಂಥನವೇ ನಡೆದು ಕೊನಿಗೆ ಹೊನ್ನಕ್ಕ ಬರುವುದನ್ನೇ ನೋಡ್ಕೆಂಡು,

'ಕಾರ್‍ಪುಡಿ ತಿಕ್ದೆ ಅಂತ ಕೇಳ್ದೆ. ಹೌದೇನ್ ಹೊನ್ನಕ್ಕಾ ?'

'ಮತ್ತೇ ತಿಕ್ದೆ ಬುಡ್ತೀನಾ ? ಇವತ್ ಕೊಡಾ ಕದ್ದೋರು ನಾಳಿನ್ನೇನೇನ್ ಕದಿತಾರೋ ಯಾರ್‍ಗೊತ್'

'ಹೌದೌದ್ ಹೊನ್ನಕ್ಕಾ, ಮಾಡಿದ್ ಚೊಲೊನೇ ಐತಿ. ಹೌದೂ ಯಾವ್ ಬಣ್ಣುದ್ದೂ ? ಮನ್‌ತಗಂಡೆಲ್ಲಾ ಆದಾ ?' ಗಿರ್ಜಾ ಮಾತು ಮುಂದುವರೆಸಿದ್ದಳು.

'ಹೂಂ, ಅದನೋಡು ಯಾವ್ಯಾವ್ ಊರ್ ಹಾಟ್‌ನನ್ಮಕ್ಳು ಹೊತ್ರೋ ಏನೋ ಒಟ್ನಲ್ಲಿ ಎಂಗರ ಯಾಕಾಗ್ಲಿ ಅಂತ ಚೋಡಮ್ಗ್ ತಿಕ್ಬಂದಿದ್ದು ಚೊಲೋ ಆಗ್ತೈತಿ ಅಂತ ಪಾರಕ್ಕಂದ್ಲು. ಬುಡ್ತಿನಾ ಅವುಳ್ನೇ ಕರ್‍ಕಂಡೋಗಿ ಕಾರ್‍ಪುಡಿ ತಿಕ್ಬಂದೆ'

'ಅದ್ಸರೀ ಹೊನ್ನಕ್ಕಾ, ಅದೇನೋ ನಿಮ್ಮನಿ ಬಾಗಿಲ್ದಾಗಿರೋ ಕಾಲಿವ್ಯಾಗ ಕೆಂಪ್ ಬಣ್ಣುದ್ದೇನ ತೇಲಿಸ್ತಂಗೈತಿ ? ಅದs ತರ ಇತ್ತಲ್ಲ ನಿಮ್ ಕೊಡಾ. ಅದು ಹೌದಾಗಿರ್‍ಲೂ ಬೌದು. ಒಂದ್ಸಾರೀ ನೋಡೇ ಬುಡುವಾ ಬರ್‍ತೀಯಾ ?'

ಹೊನ್ನಕ್ಕುನ್ ಮನೀ ಬಾಗಿಲುದ್ ಬುಡ್ದಾಗಿನ್ ಕಾಲ್ವೇ ಅದು ಇನ್ನೂ ಹೂಳೆತ್ತಿದ್ದಿಲ್ಲವಾದ್ರಿಂದ ಗಬ್ ನಾರ್‍ತಿತ್ತು. ಮೂಗು ಮುಚ್ಚಿಕೊಂಡೇ ಕಾಲ್ವೆದತ್ರ ಗಿರ್ಜಕ್ಕಾ ಬರೋವಷ್ಟ್ರಲ್ಲಿ ಪಾರಕ್ಕಾನೂ ಬಂದ್ ಬುಟ್ಟಿದ್ಲು.

'ಐ ನೋಡ್ದ್ಯ ಹೊನ್ನಕ್ಕಾ, ಚೋಡಮ್ಮನ್ ವೈಮೆನಾ. ಆಗ್ಲೆ ಕೊಡ್ಪಾನಾ ಸಿಕ್ಕಿಸ್‌ಬುಟ್ಟಾಳೆ...... ಅದು ನಿಮ್ದೇ ತಾನೆ'

'ಕೊಡ್ಪಾನಾ ಹೊರುಕ್ ತಗ್ದಿದ್ರಿಂದ ಅದು ಅವಳದು ಎಂದು ಗೊತ್ತಾಗ್ಲಿಕ್ಕೇನಾದ್ರೂ ಪುರಾವೆ ಬೇಡ್ವಾ ?' ಗಿರ್ಜಾ ಕೇಳಿದ್ಲು.

'ಪುರಾವ್ಗೆ ಅಂತ ಹೆಸ್ರುರ್ ಮಡ್ಗಾವ್ಸೆ. ಬೇಕ್ಕಾರ್ ನೋಡು ಹೊನ್ನಕ್ಕಾ ಅಂತ' ಎಂದ್ಲು. ಪಾರಕ್ಕಾನೂ ಓದು ಬಲ್ಲವಳಾಗಿದ್ದರಿಂದ ಅಲ್ಪ ಸ್ವಲ್ಪ ಹಾಳಿಂಗ್ಲೀಷೂ ಬರ್ತಿತ್ತು. ಅದ್ರಲ್ಲಿರೊ ಎಚ್ ಮತ್ತು ಬಿ ನೋಡಿಯೇ

'ಎಚ್ ಅಂದ್ರ ಹೊನ್ನಕ್ಕಾ, ಬಿ ಅಂದ್ರ ಬಸಣ್ಣ. ಅಷ್ಟೇ ಅಲ್ಲ, ಇದು ಹೊಸ್ದಾ ಕೊಡಾ ಇದ್ದಾಗ ನನ್ನಿಂದ್ಲೇ ಹೊನ್ನಕ್ ಬರ್ಸಿದ್ಲು' ಎಂದು ಪಾರಕ್ಕ ಈ ಬಾರಿ ಎಲ್ಲಾ ಬಿಡಿಸಿಟ್ಟಿದ್ಲು.

'ಅಂತೂ ಕೊಡಾ ಸಿಕ್ತು ಚೋಡಮ್ಮ್ಮಗ್ ಕಾರ್ಪುಡಿ ತಿಕ್ಕಿದ್ರೂ ಸಾರ್ಥ್‌ಕಾಯ್ತು ಅಶ್ವಾಲ್ಲೋಳ ಕೈಯ್ಯಾಗ್ ಕಳ್ರಾಟಾ ಎಲ್ಲೂವರ್ಗೂ ನಡ್ದೀತೂ. ನೋಡೆಂಗ್ ತಂದಿಟ್ ಬುಟ್ಟೋಗ್ಯಾರೆ. ನಾ ಮದ್ಲ ಹೇಳ್ಲಿಲ್ವಾ ಹೊನ್ನಕ್ಕಾ ಬಾಗುಲ್ಕೇ ಬಂದುರ್‍ತೈತಿ ಅಂತ'.

ಕೊಡ್ಪಾನು ಸಿಕ್ಕಿದ್ಕೆ ಬಸಣ್ಣ ಕಿಸುಕ್ಕೆಂದು ನಕ್ಕು, ಕೈ ಜೋಡಿಸಿ, 'ಚೋಡಮ್ಮಾ ನಿಜ್ವಾಗ್ಲೂ ಅಶ್ವಾಲ್ದೋಳು' ಎಂದ.

ಆದರೆ ಅವರುಗಳರಿಯದಾದ ಆ ಸತ್ಯವೇ ಬೇರೆಯಾಗಿತ್ತು. ನಿಜ ಹೇಳಬೇಕೆಂದರೆ ಕೊಡ್ಪಾನ ಕಳುವಾಗಿದ್ದಿಲ್ಲ. ಬದಲಾಗಿ ಅದು ನಲ್ಲಿಯ ಬಾಯಿಗೇ ಇತ್ತು. ಬಾಯಾರಿಕೆಯಿಂದ ಆಡಿನ ಮರಿಯೊಂದು ಅಲ್ಲಿಗೆ ಬಂದು ಇಣುಕಿತ್ತಾದರೂ ನೀರು ಸಿಕ್ಕಿದ್ದಿಲ್ಲ. ತಲೆ ಸಿಕ್ಕಿಸಿಕೊಳ್ಳುವಷ್ಟೂ ಕೊಡ್ಪಾನದಲ್ಲಿ ತಲೆ ತೂರಿ ನೀರು ಕುಡಿಯಲಿಕ್ಕೆ ಕುತ್ತಿಗೆವರೆಗೂ ಚಂಡು ತೂರಿತ್ತು ಅಷ್ಟೆ. ತಲೆ ಒಳಗೆ ಸಿಕ್ಕು ಒದ್ದಾಡುತ್ತ ಕಾಲ್ವೆಗೂ ಬಂದು ಸೇರಿತ್ತು. ಅಲ್ಲಿಯೇ ಹೇಗೋ ಹೊಯ್ದಾಡಿ ಓಲಾಡಿದ್ದಕ್ಕೆ ಕೊಡ್ಪಾನವಲ್ಲಿಯೇ ಉಳಿದು, ಆಡುಮರಿ ಹೊರಬಂದು ತನ್ನ ಜೀವ ಉಳಿಸಿಕೊಂಡಿತ್ತು. ಜೀವವಿಲ್ಲದ ಆ ಪ್ಲಾಸ್ಟಿಕ್ ಕೊಡವಾದರೂ ಏನು ಮಾಡಬೇಕು ? ಅದು ಅಲ್ಲಿಯೇ ಉಳಿದುಕೊಂಡಿತ್ತು.

●

# ಎಲ್ಲಿದ್ದರೇನಂತೆ ...

● ಸಂಕೇತ ಪಾಟೀಲ

ಮುಂಜಾನೆ ಬೇಗನೆ ಎಚ್ಚರವಾಗಿತ್ತು. ಯಾವುದೋ ಮಂಜು ಮುಸುಕಿದ ಸ್ಟೇಶನ್. ಬ್ಯಾಗಿನಲ್ಲಿ ತಡಕಾಡಿ ಬ್ರಷ್, ಪೇಸ್ಟುಗಳನ್ನೆತ್ತಿಕೊಂಡು, ಕೆಳಗಿಳಿಯುವಾಗ ಕುಳಿತವರೊಬ್ಬರ ಕಾಲು ತುಳಿದು ಕ್ಷಮಾಯಾಚನೆಯ ಒಂದಷ್ಟು ಶಬ್ದಗಳನ್ನು ಗೊಣಗುತ್ತಾ ಬೋಗಿಯ ಒಂದು ತುದಿಯತ್ತ ನಡೆದೆ ........

ಇನ್ನೂ ಬಹಳ ಜನ ಮಲಗಿಯೇ ಇದ್ದರು. ಮರಳಿ ಸೀಟಿಗೆ ಹೋದರೂ ಬರ್ತ್ ಮೇಲೆ ಬಗ್ಗಿಕೊಂಡು ಕುಳಿತುಕೊಳ್ಳಬೇಕಾಗುತ್ತದೆಂದು ಬಾಗಿಲ ಬಳಿಯೇ ನಿಂತಿದ್ದೆ. ಕೂಲಿಯಾಳಿನ ಹಾಗೆ ಕಾಣುವ ಒಬ್ಬ ಇನ್ನೊಂದು ಬಾಗಿಲಿನ ಬಳಿ ಮುದುರಿಕೊಂಡು ಮಲಗಿದ್ದ. ಬಾಗಿಲನ್ನು ತೆಗೆಯಲೇ ಎನ್ನಿಸಿ ಪ್ರಯತ್ನಿಸಿದೆ. ಅದು ಅಲುಗಾಡಲಿಲ್ಲ. ಹೋಗಲಿ ಎಂದು ಕಿಟಕಿಯನ್ನು ಮೇಲೇರಿಸಿದೆ. ಕುಕ್ಕುರುಗಾಲಿನಲ್ಲಿ ಕುಳಿತು ಹೊರಗೆ ನೋಡತೊಡಗಿದೆ. ಹೊರಗಿನ ಪ್ರಪಂಚವೆಲ್ಲ ಕತ್ತಲೆಯನ್ನು ಹೊದ್ದಿತ್ತು. ಎಲ್ಲಾ ಅಸ್ಪಷ್ಟವಾಗಿ ಕಾಣುತ್ತಿತ್ತು. ಅದೇ ಹೆಚ್ಚು safe ಅನ್ನಿಸಿತು. ಚಳಿಯಿತ್ತು. ತಂಪು ಗಾಳಿ ಬೀಸುತ್ತಿತ್ತು. ಮೈಮೇಲಿದ್ದ ಶಾಲನ್ನು ಗಟ್ಟಿಯಾಗಿ ಸುತ್ತಿಕೊಂಡೆ. ಹತ್ತಿರದ ಬರ್ತ್‌ನಲ್ಲಿ ಮಲಗಿದ್ದ ಒಬ್ಬ ಗೊಗ್ಗರು ದನಿಯಲ್ಲಿ ಗೊಣಗಿದ. ಬಹುಶಃ ಕಿಟಕಿ ತೆರೆದಿದ್ದಕ್ಕೆ ಚಳಿಯಾಗಿರಬೇಕು. ಅವಸರದಿಂದ ಕಿಟಕಿ ಮುಚ್ಚಿದೆ. ಮುಚ್ಚಿದ ಕಿಟಕಿಯಿಂದಲೇ ಹೊರಗೆ ನೋಡುತ್ತಾ ಕುಳಿತೆ. ಈಗ ಅಸ್ಪಷ್ಟತೆಯ ಮೇಲೆ ಗಾಜಿನ ಕವಚ. ಬಹಳ ಹೊತ್ತು ಹಾಗೇ ಕುಳಿತಿದ್ದೆ.

ಕ್ರಮವಾಗಿ ಹೆಚ್ಚು ಜನ ಏಳತೊಡಗಿದರು. ನಾನೂ ಎದ್ದು ಮರಳಿ ಬರುವಷ್ಟರಲ್ಲಿ ಚಹಾದವರ ಗದ್ದಲ ಶುರುವಾಗಿತ್ತು. ಆಗ ತಾನೇ ಎಚ್ಚತ್ತುಗೊಳ್ಳುತ್ತಿದ್ದ ಜನರ ಆಕಳಿಕೆ, ಮೈಮುರಿತಗಳು, ಗಡಸು ದನಿಗಳ ನಡುವೆ ಜಾಗ ಮಾಡಿಕೊಂಡು ಹೋಗಿ ನನ್ನ ಸೀಟಿನಲ್ಲಿ ಕುಳಿತುಕೊಂಡೆ. ಎದುರುಗಡೆ ಸೀಟಿನ ಮುದುಕ ಹಿಂದಿನ ದಿನದಂತೆ ಮತ್ತೆ ಭಗವದ್ಗೀತೆ ಓದುತ್ತ ತನ್ನ ಉಡಾಳ ಮೊಮ್ಮಗನಿಗೆ ಬುದ್ಧಿ ಹೇಳುತ್ತಿದ್ದ. ಆ ಹುಡುಗ ನಿರ್ಲಕ್ಷ್ಯದಿಂದ ನನ್ನತ್ತ ಕೀಟಲೆಯ ನಗು ಬೀರಿದ. ಮುದುಕನಿಗೆ ಮಾತು ಬಹಳ ಬೇಕು. ಮೌಲ್ಯಗಳ ಕುಸಿತದಿಂದ ಹಿಡಿದು ಡಾಲರ್ ಎದುರು ರೂಪಾಯಿ ಕುಸಿತದವರೆಗೂ ಕೈಗೆ ಸಿಕ್ಕವರ ಜೊತೆಗೆ ಮಾತು

ಹಚ್ಚುತ್ತಿದ್ದ. ಹಿಂದಿನ ದಿನ ನಾನು ಶೌಚಕ್ಕೆ ಹೋದಾಗ ನನ್ನ ಸೀಟು ದಾಳಿಗೊಳಗಾಗಿತ್ತೆಂದೂ ತಾನು ಅದನ್ನು ರಕ್ಷಿಸಿದೆನೆಂದೂ ಹೇಳಿಕೊಂಡಿದ್ದ. ಅದರ ಭಿಡೆ·ಗೋ ಎಂಬಂತೆ ಅವನ ಮೊಮ್ಮಗನ ಲೀಲೆಗಳನ್ನೆಲ್ಲಾ ಸಹಿಸಬೇಕಾಗಿತ್ತು. ನನ್ನ ಕ್ಯಾಸೆಟ್ ಒಂದನ್ನು ಹಾಳು ಮಾಡುವುದರಿಂದ ಹಿಡಿದು ಅಜ್ಜನ ಚೀಲದಲ್ಲಿದ್ದ ತಂಬಾಕನ್ನು ತುಡುಗು ಮಾಡಿ ತಿನ್ನುವುದರವರೆಗೆ ಅವನ ಚೇಷ್ಟೆ ಎಡೆಬಿಡದೆ ಸಾಗಿತ್ತು.

ಮುದುಕನ ಜೊತೆ ಇದ್ದ ಹೆಂಗಸಿಗೂ (ಅವನ ಹೆಂಡತಿ ಇರಬೇಕು) ನನ್ನ ಮೇಲಿನ ಬರ್ತ್‌ನಲ್ಲಿ ಮಲಗಿದ್ದ ಯುವಕನಿಗೂ ಮಾತು ಬೆಳೆದು ನಿಂತಿತು. ಅವನು ಸಿಗರೇಟ್ ಸೇದುತ್ತಿದುದ್ದರಿಂದ ಹೆಂಗಸಿಗೆ ತೊಂದರೆಯಾಗುತ್ತಿತ್ತು. ಈಗ ಮುದುಕನೂ ಅದರಲ್ಲಿ ಸೇರಿಕೊಂಡು ಬಾಗಿಲ ಹತ್ತಿರ ಹೋಗಿ ಸೇದೆಂದು ಸಲಹೆ ಕೊಟ್ಟ. ಪ್ರತಿವಾದಿಯು ಇವಾವಕ್ಕೂ ಸೊಪ್ಪು ಹಾಕದೆ ಅವ್ಯಾಹತವಾಗಿ ತನ್ನ ಕಾಯಕವನ್ನು ಮುಂದುವರಿಸಿದಾಗ ವಾದಿಗಳಿಬ್ಬರೂ ತೆಪ್ಪಗಾಗಬೇಕಾಯಿತು. ಮುದುಕನ ಹೆಂಡತಿ ನನ್ನತ್ತ ತಿರುಗಿ ಹಾವಭಾವಪೂರ್ವಕ ಏನೇನೋ ಗೊಣಗಿದಳು. ನಾನು ಸುಮ್ಮನೆ ತಲೆಯಾಡಿಸಿದೆ. ಮುದುಕ ನನ್ನತ್ತ ತಿರುಗಿ ತಂಬಾಕು ಸೇವನೆಯ ದುಷ್ಪರಿಣಾಮಗಳ ಬಗ್ಗೆ ವಿವರಿಸತೊಡಗಿದ.

❖ ❖ ❖

ಪೇಪರ್ ಓದುವುದು ಬೇಸರವಾದಾಗ ಸುಮ್ಮನೆ ಹೊರಗೆ ನೋಡುತ್ತಾ ಕುಳಿತೆ. ಹೋಗಲಿ ರೈಲಿನ ವೇಗವನ್ನಾದರೂ ಕಂಡುಹಿಡಿಯೋಣವೆನ್ನಿಸಿ ಸ್ಟಾಪ್‌ವಾಚ್ ಸೆಟ್ ಮಾಡಿಕೊಂಡು ಕಂಬಗಳನ್ನೆಣಿಸುತ್ತಾ ಹೋದೆ. ನಡುವೆ ಸೀನು ಬಂದು ಲೆಕ್ಕ ತಪ್ಪಿತು. ಮತ್ತೆ ಶುರು ಮಾಡಿ ಲೆಕ್ಕ ಹಾಕಿದಾಗ ಉತ್ತರ ತೀರಾ ಕಡಿಮೆ ಬಂದು ರೈಲಿನ ವೇಗ ಏನೇನೂ ಸಾಲದೆನ್ನಿಸಿ ಬೇಸರವಾಯಿತು. ಮತ್ತೆ ಹೊರಗೆ ನೋಡುತ್ತಾ ಕುಳಿತೆ. ಹಿಂದೆ ... ಬಹಳ ಹಿಂದೆ ತಾನೂ ಒಮ್ಮೆ ಎಲ್ಲರಂತೆಯೇ ಕೇಳಿದ್ದೆ, 'ಕಂಬಗಳೇಕೆ ಹಿಂದೆ ಹಿಂದೆ ಓಡುತ್ತವೆ' ಎಂದು. ಅವು ಮುಗ್ಧತೆಯ ದಿನಗಳು, ಸಹಜತೆಯ ದಿನಗಳು. ಅಂದಿನ ಆ ಮುಗ್ಧತೆ ಇಂದಿಗೆ ಉಳಿದಿರಲಿಕ್ಕಿಲ್ಲ ನಿಜ. ಆದರೆ ಸಹಜತೆಗೇನಾಯಿತು ?

ಮುದುಕನ ಹೆಂಡತಿ ನಾಷ್ಟಾದ ತಯಾರಿ ನಡೆಸುತ್ತಿದ್ದಳು. ನಾನು ಅಲ್ಲಿಯೇ ಕುಳಿತಿದ್ದರೆ ನನಗೆ ಬೇಡವಾದರೂ ಅವರು ನನ್ನೊಂದಿಗೆ ಹಂಚಿಕೊಂಡು ತಿನ್ನುವುದು ಗೊತ್ತಿದ್ದುದರಿಂದ ಏನೋ ನೆನಪಾದವನಂತೆ ಒಮ್ಮೆಲೇ ಅಲ್ಲಿಂದ ಎದ್ದು ಬಾಗಿಲ ಹತ್ತಿರ ಬಂದು ನಿಂತೆ. ಒಂದಿಬ್ಬರು ಸಿಗರೇಟು ಸೇದುವವರು ಆಗಲೇ ಅಲ್ಲಿ ಬಾಗಿಲುಗಳನ್ನು ಆಕ್ರಮಿಸಿಕೊಂಡಿದ್ದರು. ಆಕಸ್ಮಾತ್ತಾಗಿ ಹೊರಳಿದಾಗ ಕನ್ನಡಿಯಲ್ಲಿ ಮುಖ ಕಂಡಿತು. ಬೇರೆ ಯಾರನ್ನೋ ನೋಡಿದ ಹಾಗಾಯಿತು; ಗಡ್ಡ ಬೆಳೆದು ನಿಂತಿತ್ತು. ಗಡ್ಡವನ್ನು ಬೋಳಿಸಿಕೊಂಡಾಗ ಭಾರವಿಳಿದ ಹಾಗೆನ್ನಿಸಿ ನಿರಾಳವಾಯಿತು. ಅಥವಾ ಶ್ರೀಕಾಂತ ಹೇಳುವಂತೆ "you do seem an executive

sometimes." Pantry ಯವನು ಓಡಾಡುತ್ತಿದ್ದ. ಅವನನ್ನು ತಡೆದು ಎಂಥದೋ ಒಂದು ಬಗೆಯ ವಡೆಯನ್ನು ತೆಗೆದುಕೊಂಡೆ.

ಕಾಲ ಕೆಳಗೆಲ್ಲಾ ನೀರು ಬರಲಾರಂಭಿಸಿತು. ಬಹುಶಃ ಪಾಯಿಖಾನೆಯಲ್ಲಿಯೇ block ಆಗಿರಬೇಕು. ಅಲ್ಲಿ ನಿಲ್ಲದೆ ಮರಳಿ ಬಂದೆ. ಸೈಡ್ ಬರ್ತ್‌ನಲ್ಲಿ ಕುಳಿತಿದ್ದ ನಿವೃತ್ತ ಕಾರಕೂನರು ಆಯಾಸಕ್ಕೇನೋ ಕಣ್ಣು ಮುಚ್ಚಿದ್ದರು. ಯಾವುದೋ ಖಾಸಗಿ ಬ್ಯಾಂಕಿನಲ್ಲಿ ಕಾರಕೂನರಾಗಿದ್ದು ಇತ್ತೀಚೆಗೆ ನಿವೃತ್ತರಾಗಿದ್ದರೆಂದು ನಿನ್ನೆ ಮುದುಕನೊಂದಿಗೆ ಹೇಳುತ್ತಿದ್ದರು. ಅವರ ಮೇಲಿನ ಬರ್ತ್‌ನಲ್ಲಿ ಅವರ ಮಗ ಎತ್ತಲೋ ದೃಷ್ಟಿ ನೆಟ್ಟು ಮಲಗಿದ್ದ. ಅವನು ಮಾನಸಿಕ ರೋಗಿ. ತನ್ನ ಮಗನ ಹುಚ್ಚು ಗುಣವಾಗಲೆಂದು ಕಾಶಿ ಪ್ರಯಾಗಗಳಿಗೆಲ್ಲಾ ಕರೆದುಕೊಂಡು ಅಡ್ಡಾಡುತ್ತಿದ್ದಾರೆ. ಇದೆಲ್ಲಾ ಪೂರ್ವಜನ್ಮದ ಕರ್ಮವೆಂದು ಮುದುಕ ಹೇಳುತ್ತಿದ್ದ. ಮುದುಕನ ಮೊಮ್ಮಗ ಆ ಬಡಪಾಯಿ ರೋಗಿಗೆ ಕೀಟಲೆ ಮಾಡುವಾಗ ಕಾರಕೂನರ ಕಣ್ಣಲ್ಲಿ ನೋವು ಕಾಣುತ್ತಿತ್ತು.

ರೈಲು ಯಾವುದೋ ಸಣ್ಣ ಸ್ಟೇಶನ್ನಿನಲ್ಲಿ ನಿಂತಿತು. ಸ್ವಲ್ಪ ಗಲಾಟೆ ಎದ್ದಿತು. ರಿಸರ್ವೇಶನ್ ಬೋಗಿಗಳಿಗೆ ಜನ ನುಗ್ಗುತ್ತಿದ್ದರೆಂದು ತೋರುತ್ತದೆ.

ಮತ್ತೆ ವಿಚಾರ ಮಾಡಿದರೆ ಸಣ್ಣವನಿದ್ದಾಗಲಾದರೂ ನಾನು ಸಹಜತೆಯಿಂದ ಕೂಡಿದ್ದೆ, ಜೀವನಕ್ಕೆ ತೀರ ಆಪ್ತನಾಗಿದ್ದೆ ಎಂದುಕೊಳ್ಳುವುದೂ ಒಂದು ಭ್ರಮೆ ಅನ್ನಿಸುತ್ತೆ. ನನ್ನನ್ನು ಎಲ್ಲಕ್ಕಿಂತ ಹೆಚ್ಚಾಗಿ ಪ್ರೀತಿಸುವ ಅಕ್ಕ ಇದ್ದರೂ ಕೂಡ ನಾನು ಎಲ್ಲಿಯೂ ಇಲ್ಲದ, ಎಂದಿಗೂ ಸಾಧ್ಯವಿಲ್ಲದ ಯಾವುದೋ ಒಬ್ಬ ತಂಗಿಯನ್ನು ಹಚ್ಚಿಕೊಂಡಿದ್ದೆ. ಆ ಕನಸಿನ ಬಾಲೆಯೇ ನನಗೆ ಜಗತ್ತಿನ ಎಲ್ಲಕ್ಕಿಂತ ಪ್ರಿಯಳಾಗಿದ್ದಳು. ಅವಳ ರೂಪ, ಅವಳ ಮಾತು, ನಡವಳಿಕೆ ಇವುಗಳನ್ನೆಲ್ಲ ಊಹಿಸಿಕೊಂಡು ನಿದ್ದೆ ಬರುವವರೆಗೂ ಅನಂತ ಕನಸುಗಳನ್ನು ಹೆಣೆಯುತ್ತಿದ್ದೆ. ನಾನು ಅಕ್ಕನನ್ನು ಪ್ರೀತಿಸುತ್ತಿರಲಿಲ್ಲವೆಂದೇನೂ ಅಲ್ಲ. ಆದರೆ ಆ ಕನಸುಗಳೆಲ್ಲಾ ನಿಜವಾಗಲೆಂದು ದೇವರಲ್ಲಿ ಬೇಡಿಕೊಳ್ಳುತ್ತಿದ್ದೆ.

ನಂತರದ ದಿನಗಳಲ್ಲಿ, ಇನ್ನೂ ಸ್ವಲ್ಪ ದೊಡ್ಡವನಾದ ಮೇಲೆ ಮತ್ತಾವುದೋ ರೂಪ ಪ್ರೇಯಸಿಯಾಗಿ ಒಡಮೂಡಿತು. ಪ್ರೀತಿಸುವ, ತಿದ್ದುವ, ಒಬ್ಬ ಸಮರ್ಥ, ಅರ್ಥಪೂರ್ಣ, ಆಪ್ತ ಜೊತೆಗಾತಿ.

ಇವುಗಳಲ್ಲಿ ಎರಡನೆಯದೇ ಹೆಚ್ಚು ಸಹಜವಾದದ್ದು ಅನ್ನಿಸುತ್ತೆ. ತೀರ ಇತ್ತೀಚಿನವರೆಗೂ ಅಕ್ಕ ಎಲ್ಲರಿಗೂ ಹತ್ತಿರದವಳಾಗಿಯೇ ಇದ್ದಳು - ಅವಳು ಮದುವೆ ಮಾಡಿಕೊಂಡು ಹೋಗುವತನಕ. ಅದಾದ ಮೇಲೆ ನಮ್ಮ ತಂದೆ - ತಾಯಿಗೆ ನಾನು ಏಕಮೇವ ಸಂತಾನ.

ಎಲ್ಲವೂ ಎಷ್ಟು ಬೇಗ ಮುಗಿದು ಹೋಗಿತ್ತು. ಅಕ್ಕ ಮಾಡುತ್ತಿರುವುದರಲ್ಲೇನೂ ತಪ್ಪಿಲ್ಲವೆಂದು ನನಗೆ ಗೊತ್ತಿದ್ದರೂ ನಾನು ಏನೂ ಮಾಡಲಿಲ್ಲ. ಅಕ್ಕನಂತೂ ತಾನು ಎಲ್ಲ

ನಿಭಾಯಿಸುವುದಾಗಿಯೂ, ನಾನು ಯಾವುದರಲ್ಲಿಯೂ ತಲೆ ಹಾಕದೇ ತೆಪ್ಪಗಿರಬೇಕೆಂದೂ ತಾಕೀತು ಮಾಡಿದ್ದಳು. ಅವಳು ಹಾಗೆ ಹೇಳದಿದ್ದರೂ ನಾನೊಂದು ದೊಡ್ಡ ಕ್ರಾಂತಿಯನ್ನೇ ಮಾಡುತ್ತಿದ್ದೇನೆಂದು ನನಗನ್ನಿಸುವುದಿಲ್ಲ.

ಡೈರಿ ಬರೆಯಲೇ ಅನ್ನಿಸಿತು. ತುಂಬ ದಿನಗಳಿಂದ ಬರೆದಿರಲೇ ಇಲ್ಲ. ಶ್ರೀಕಾಂತನೇ ಹಚ್ಚಿದ್ದ ರೂಢಿಯದು. ಅವನು psychologist. "ನಿನ್ನಂಥ introverts ಗೆ ಭಾವನೆಗಳ ಭಾರ ಹೆಚ್ಚಾದಾಗ ಬಾಯಿ ತೆರೆಯದೇ ತೋಡಿಕೊಳ್ಳಲು ಯಾರಾದರೂ ಬೇಕಲ್ಲ, ಅದೂ ನಿನ್ನ ಹುಚ್ಚು ವಿಚಾರಗಳಿಗೆ ಕಂ.....ಕಿಂ ಎನ್ನದೇ" ಎಂದಿದ್ದ. ಬರೆಯುವಂಥದ್ದು ಏನಾದರೂ ಇದೆ ಎಂದೇನೂ ಅನ್ನಿಸಲಿಲ್ಲ. ಸುಮ್ಮನೆ ಪೆನ್ನು ಹಿಡಿದುಕೊಂಡು ಕುಳಿತಿದ್ದೆ.

ಗೊತ್ತಿಲ್ಲದಂತೆಯೇ ಏನೇನೋ ಗೀಚುತ್ತ ಹೋದೆ. ಅರೆನಿಮಿಷದಲ್ಲಿ ಹಕ್ಕಿಗಳ ಹಿಂಡೊಂದು ಹಾರಿತು. ಒಂದೇ ನಮೂನೆಯ ಹಕ್ಕಿಗಳು. ದೊಡ್ಡ ಹಿಂಡು ... ಹಕ್ಕಿಗಳೇ ? ಅಲ್ಲ ... ಅರೇ ! ಇದೊಂದು ನದಿಯಲ್ಲವೆ ? ಛೇ ! ಇರಲಾರದು ... ಯಾವ ನದಿ ? ಯಾವುದಾದರೇನು ? ... ಗಂಗಾ, ಯಮುನಾ, ನರ್ಮದಾ, ಕಾವೇರಿ, ಸಿಂಧೂ ... ಸಿಂಧೂ !! .... ಸಿಂಧೂ ... ಸಿಂಧೂ ಏಕೆ ? .. ಗೀಚುತ್ತಿದ್ದೆ. ಅಗೋ ಅಲ್ಲೊಂದು ದೋಣಿ ... ಅಲ್ಲಲ್ಲ ಕುದುರೆ ... ಓ ! ಕೇವಲ ಕುದುರೆಯ ತಲೆಯಿದೆ. ಕುದುರೆಯ ತಲೆಯಿರುವ ದೋಣಿ. ಅದರಲ್ಲಿ ಯಾರೋ ಇರುವ ಹಾಗಿದೆ. ಯಾರಪ್ಪಾ ಇದು ನದಿಗೆ ಎದುರಾಗಿ ಹುಟ್ಟು ಹಾಕುತ್ತಿರುವುದು ? ... ಅಸ್ಪಷ್ಟತೆ ... ಅಪ್ಪ !! ಅಪ್ಪನೇ ? ದೋಣಿಯ ಓಲಾಟ, ನದಿಯ ಭೋರ್ಗರೆತ ಎರಡು ನಿಮಿಷಗಳಷ್ಟೇ ... ಮತ್ತೆ ಎಲ್ಲ ಸುಗಮ, ಸುಲಲಿತ. ದೋಣಿಗೆ ಈಗ ತನ್ನದೇ ಲಯ ... ತನ್ನದೇ ದಾರಿ ...

ರೈಲು ಶಿಳ್ಳೆ ಹಾಕಿದಾಗ ಗಾಬರಿಯಾಯಿತು. ಮಲಗಿದ್ದವನನ್ನು ಬಡಿದೆಬ್ಬಿಸಿದಂತಾಗಿತ್ತು. ವಿಪರೀತ ಬೆವೆತಿದ್ದೆ; ಕೈ ನಡುಗುತ್ತಿತ್ತು. ಮುದುಕ ಸೀಟಿಗೆ ಒರಗಿಕೊಂಡಿದ್ದ. ಬದುಕಿಕೊಂಡೆ. ಮತ್ತೆ ಡೈರಿ ತೆಗೆದು ನೋಡಿದೆ. ಅರ್ಥವಿಲ್ಲದ ಚಿತ್ತಾರಗಳು, ಮುಚ್ಚಿಟ್ಟೆ.

ಮುಖ ತೊಳೆದುಕೊಂಡು ಬಂದು ಸೀಟಿನಲ್ಲಿ ಕೂತೆ. ಮುದುಕ ಎದ್ದಿದ್ದ. ಸಮಯ ಕೇಳಿದ, ಹೇಳಿದೆ. ರೈಲು ಹೊರಟಿತು. ಕಾರಕೂನರು ಓಡಿ ಬಂದು ರೈಲು ಹತ್ತಿದರು. ಅವರು ಹತ್ತಿರವಾದಾಗ ಮುದುಕ ವಿಚಾರಿಸಿದ. ಅವರ ಹೆಂಡತಿ ಮತ್ತು ಇನ್ನಿಬ್ಬರು ಮಕ್ಕಳು ಎರಡು ಬೋಗಿಯಾಚೆಯ ಬೋಗಿಯಲ್ಲಿರುವರೆಂದು ಹೇಳಿದರು. ಒಂದೇ ಕಡೆ reservation ಸಿಗಲಿಲ್ಲವಂತೆ. ಮುದುಕ, ಇನ್ನೊಂದು ಸ್ವಲ್ಪ ಹೊತ್ತಿಗೆ ಬೋಗಿ ಖಾಲಿಯಾಗುವುದೆಂದು ಹೇಳಿದ.

❖ ❖ ❖

ಅಕ್ಕನ ಮದುವೆಯಾಗಿ ಆರು ವರ್ಷಗಳು ಕಳೆದಿವೆ. ಈ ಆರು ವರ್ಷಗಳಲ್ಲಿ ಯಾರೂ ಅವಳನ್ನು ನೋಡಲು ಹೋಗಿಲ್ಲ. ಅವಳೂ ಬಂದಿಲ್ಲ. ಅಪ್ಪ ಗಟ್ಟಿ. ಅಕ್ಕನೂ ಅಪ್ಪನಂತೆಯೇ ಮೊದಲಿನಿಂದಲೂ. ಅವ್ವನಿಗೆ ಏನೆನ್ನಿಸುತ್ತಿತ್ತೋ ಯಾರಿಗೆ ಗೊತ್ತು. ಅವಳು ಯಾವುದಕ್ಕೂ ಹೆಚ್ಚು ನಕ್ಕವಳಲ್ಲ; ಯಾವುದಕ್ಕೂ ಹೆಚ್ಚು ಅತ್ತವಳಲ್ಲ. ಇನ್ನು ನಾನು, ನನಗೆ ಅಕ್ಕನ ಬಗ್ಗೆ ಒಮ್ಮೊಮ್ಮೆ ಬೇಸರ ಮೂಡುತ್ತದೆ. ಆದರೆ ಆ ಬೇಸರ ಅಕ್ಕನಿಗಿಂತ ಹೆಚ್ಚಾಗಿ ಅವಳ ಧೈರ್ಯದ ಬಗ್ಗೆ, ಅವಳ ಗಟ್ಟಿತನದ ಬಗ್ಗೆ ಇರಬೇಕು.

ಆ ದಿನ ರಾತ್ರಿ ನಾನು ಓದುತ್ತಿದ್ದಾಗ ನನ್ನ ಕೋಣೆಗೆ ಬಂದಳು. "ಏನಕ್ಕಾ" ಎಂದೆ, ಅವಳು "ನಾ ನಾಳೆ ಮದುವೀ ಮಾಡಿಕೊಳ್ಳಲೀಕತ್ತೀನಿ" ಎಂದಳು ದನಿ ತಗ್ಗಿಸಿ. "ಯಾರ ಜೋಡಿ ? !" "ಯಾರು ಅಂತ ಗೊತ್ತಿಲ್ಲೇನು ?" ಎಂದು ಕೇಳಿದಳು. "ಅವರs .... ಏನು ?" "ಹೂಂ".

"ಅಲ್ಲ ... ಇಷ್ಟು ಅವಸರದಿಂದ " ಎಂದೆ ಸಂಶಯದಿಂದ.

"ನಿಧಾನವಾಗಿ ಸಂಭ್ರಮದಿಂದ ಮಾಡಿಕೊಳ್ಳುವಂಥಾದ್ದು ಅಲ್ಲ ಇದು". ಸ್ವಲ್ಪ ಹೊತ್ತು ಮೌನ. ನಾನು ನಿಧಾನವಾಗಿ ಕೇಳಿದೆ "ನಾ ಬರಲೇನು ?" "ಬ್ಯಾಡ ... ನಿನಗಿದು ಗೊತ್ತಿತ್ತು ಅಂತ ಯಾರಿಗೂ ತಿಳಿಯೂದು ಬ್ಯಾಡ. ನಾ ಅಪ್ಪಗ ಹೇಳತೀನಿ ... ಆದರೂ ಬಹುಶಃ .... ನಾವಿನ್ನು ಭೆಟ್ಟಿಯಾಗಲಿಕ್ಕಿಲ್ಲ". ಅವಳ ಕಣ್ಣಲ್ಲಿ ತೆಳುವಾದ ವಿಷಾದವಾದರೂ ಕಂಡಿದ್ದರೆ ನನಗೆ ಅಷ್ಟು ಸಿಟ್ಟು ಬರುತ್ತಿರಲಿಲ್ಲ. ಹೇಗೋ ಕೋಪ ನುಂಗಿಕೊಂಡಿದ್ದೆ.

ನನಗಂತೂ ಜೀವನವಿಡೀ ಅವಳನ್ನು ನೋಡದೇ ಇರುವುದು ಸಾಧ್ಯವಿರಲಿಲ್ಲ. ಒಂದು ವರ್ಷದ ಕೆಳಗೆ ಹೋಗಿದ್ದೆ. ಅದಕ್ಕಿಂತಲೂ ಮೊದಲಿಗೆ ಒಂದೆರಡು ಸಲ ಫೋನಿನಲ್ಲಿ ಮಾತಾಡಿದ್ದೆ. ಅವಳಿಗೆ ನನ್ನ ನಂಬರು ಕೊಟ್ಟಿದ್ದೆ. ಅಕ್ಕನಿಗೆ ಮಗ ಹುಟ್ಟಿದಾಗ ಅವಳ ಗಂಡ ಫೋನು ಮಾಡಿದ್ದರು. ಕರೆದಿದ್ದರು. ಅದು ಎರಡು ವರ್ಷದ ಕೆಳಗಿನ ಮಾತು. ಆವಾಗ ಹೋಗಿರಲಿಲ್ಲ. ಹೋದ ವರ್ಷ ಹೋಗಿದ್ದೆ. ಅಕ್ಕ ನಾನಂದುಕೊಂಡಷ್ಟು ದಪ್ಪವೇನೂ ಆಗಿರಲಿಲ್ಲ. ಅಕ್ಕನ ಗಂಡನನ್ನು ನೋಡುವುದು ಅದು ಎರಡನೇ ಬಾರಿ. ಬಹಳ ಹಿಂದೆ, ಮದುವೆಗೆ ಮೊದಲೇ, ಒಮ್ಮೆ ಭೆಟ್ಟಿ ಮಾಡಿಸಿದ್ದಳು. ನನಗಂತೂ ಆಗ ನೋಡಿದ ನೆನಪೂ ಇರಲಿಲ್ಲ. ಅವರು ಮಾತ್ರ "ಏನು ! ಹಾಗೇ ಇದ್ದೀರಲ್ಲ, ಏನೇನೂ ವಯಸ್ಸಾಗಿಲ್ಲ !" ಅಂದಿದ್ದರು. ಅಕ್ಕನ ಮಗನಿಗೆ ಒಂದು ವರ್ಷವಾಗಿತ್ತೇನೋ. ಹೆಸರೇನೆಂದು ಕೇಳಿದೆ. ಅಕ್ಕ ಅಪ್ಪನ ಹೆಸರು ಹೇಳಿದಳು. "ಕರೆಯುವುದು ಹಾಗೆ. ಹೆಸರು ವಸಂತ ಅಂತ. ವಸಂತ ಮಾಸದಲ್ಲಿ ಹುಟ್ಟಿದವನಲ್ಲವೇ ?" ಅಕ್ಕನ ಗಂಡ ಹೇಳಿದರು. ಅಂದ ಹಾಗೆ ಇವರು ಸಣ್ಣ ಪ್ರಮಾಣದ ಒಬ್ಬ ಕವಿ. ಇದು ನೆನಪಿರಲು ಕಾರಣವೆಂದರೆ, ಅಕ್ಕ ಒಂದು ಸಲ ಅವರ ಪದ್ಯಗಳನ್ನು ತೋರಿಸಿದ್ದಾಳೆ.

ಮಗುವಿಗೆ ಒಂದು ಉಂಗುರವನ್ನು ಒಯ್ದಿದ್ದೆ. ಚಿಕ್ಕ ಹುಡುಗನಿಗೆ ಅದೆಲ್ಲ ಏಕೆ, ಸುಮ್ಮನೆ ಹಾಳಾಗುತ್ತದೆಂದು ಅಕ್ಕ ಹಾಕಲು ಬಿಡಲೇ ಇಲ್ಲ. ತೆಗೆದಿಟ್ಟು ಬಿಟ್ಟಳು. ಮಗುವನ್ನು ನನ್ನ ಕೈಗೆ ಕೊಡಲು ಹಿಂದೇಟು ಹಾಕುತ್ತಿದ್ದಳು. "ನಿನಗೆಲ್ಲಿ ಸಣ್ಣ ಹುಡುಗೂರನ ಎತ್ತಿಕೊಳ್ಳೂದು ಬೇಕಾಗತದ ತೊಗೋ" ಅಂತ. ಚಿಕ್ಕಮಕ್ಕಳನ್ನು ಎತ್ತಿಕೊಳ್ಳುವುದು ನನಗೆ ಅಷ್ಟೇನೂ ಪ್ರಿಯವಲ್ಲದಿದ್ದರೂ ಇದು ಅಕ್ಕನ ಮಗುವಲ್ಲವೇ ? ಯಾಕೋ avoid ಮಾಡುತ್ತಿದ್ದಳು. ಬಹುಶಃ ಸೋದರಮಾವನ ಕೈಗೆ ಸಿಕ್ಕಿ ಅವನಂತೆ ಆಗದಿರಲು ಎಂಬುದರ ಸಲುವಾಗಿ ಜಾಗರೂಕತೆಯೋ ಏನೋ. ಅಪ್ಪನ ಹೆಸರಿನಿಂದ ಕೂಗುತ್ತಿದ್ದುದೂ ಅದೇ ಮನಃ ಸ್ಥಿತಿಯಿಂದಲೇ ಇರಬೇಕು. ಅಥವಾ ಹಾಗೇನೂ ಇರಲಿಕ್ಕಿಲ್ಲ. ಯಾರಿಗೆ ಗೊತ್ತು, ಅವಳು ಹೇಳಿದ್ದೇ ಸರಿ ಇರಬಹುದು. ನನಗೇನು ಕೆಟ್ಟೆನ್ನಿಸಿರಲಿಲ್ಲ.

ಅಕ್ಕನ ಗಂಡ ಬಹಳ ಲವಲವಿಕೆಯ ವ್ಯಕ್ತಿ. ಅಕ್ಕನಿಗೆ ಎಲ್ಲದರಲ್ಲೂ ಅನುಕೂಲ ಮಾಡಿಕೊಡುತ್ತಿದ್ದರು. ಇತ್ತೀಚೆಗೆ ಒಂದು ಕವನ ಸಂಕಲನ ಹೊರತಂದಿದ್ದರು. ನನಗೊಂದು ಪ್ರತಿ ಕೊಟ್ಟರು. "ಅಂದ್ಹಂಗ ನೀವು ಗೆಳ್ಯಾರು ಒಂದು paper ನಡೆಸತಿದ್ದಿರಲಾ ... ಹೆಂಗ ನಡದದ ಈಗ ?" ಅಂತ ಅಕ್ಕ ವಿಚಾರಿಸಿದ್ದಳು. "ಹೂಂ ... ನಡದದ ... ಈಗಿನ ಭರಾಟೆ ಕಾಲದಾಗ ನಮ್ಮ offbeat ಪತ್ರಿಕೆ ಯಾರು ತೊಗೊಂಡು ಓದತಾರ, ಎಲ್ಲೋ ಒಂದಷ್ಟು ಮಂದಿ ನಮ್ಮಂಥವರ್‍ದು ಹುಚ್ಚರು ಓದತಾರ ಅಷ್ಟ" ಅಂದಿದ್ದೆ. ತಾನೂ ಚಂದಾದಾರನಾಗುತ್ತೇನೆ ಎಂದು ಅಕ್ಕನ ಗಂಡ ಹೇಳಿದ್ದರು. ಹಾಗೆಯೇ ಒಂದು ಹಾಸ್ಯ ಕವಿತೆಯನ್ನು ಇತ್ತೀಚೆಗೆ ರಚಿಸಿರುವುದಾಗಿ ಹೇಳಿ ಅದನ್ನು ಓದಿದರು. ಅಕ್ಕನ ಬಾಣಂತನದ ವೇಳೆಯಲ್ಲಿ ತಾವು ಪಟ್ಟ ಪಾಡು ಇತ್ಯಾದಿ ಬರೆದಿದ್ದರು.

❖ ❖ ❖

ನಾನು ಹೊರಡುವುದಕ್ಕಿಂತ ಒಂದು ದಿನ ಮೊದಲು ಅಕ್ಕ ಹೇಳಿದ್ದಳು. "ಇಂವಾ ಸ್ವಲ್ಪ ದೊಡ್ಡಾಂವಾದ ಮ್ಯಾಲೆ ನೀ ಇಂವನ್ನ ಎಲ್ಲಾ ಕಡೆ ಕರಕೊಂಡು ಹೋಗಿ ಬರಬೇಕು. ಮನೀಗೆ, ಕಾಕಾನ ಕಡೆ ... ಎಲ್ಲ ಕಡೆ .. ಎಲ್ಲಾರನೂ ಗುರುತು ಮಾಡಿ ಕೊಡಬೇಕು. ಇವನ ಗುರುತು ನೀ ಏನರೆ ಹೇಳಿಕೋ" ತಾದಾತ್ಮ್ಯದಿಂದ ಹೇಳಿದ್ದಳು. ನಾನು ಹೂಂಗುಟ್ಟಿದ್ದೆ.

ಅಕ್ಕ ಯಾಕೆ ಹಾಗೆ ಹೇಳಿದ್ದಳು ? ಅದರಲ್ಲಿ ಯಾವ ವ್ಯಂಗ್ಯವೂ ಇದ್ದಂತಿರಲಿಲ್ಲ. ಮಗುವನ್ನು ನನ್ನ ಹತ್ತಿರ ಕೊಡಲು ಹಿಂದ್ಹೇಟು ಹಾಕಿದವಳು ಒಮ್ಮಿಂದೊಮ್ಮೆಲೇ "ಇದು ನಿಂದ್ರ ಜವಾಬ್ದಾರಿ" ಎನ್ನುವವರ ಹಾಗೆ ನನಗೆ ಹೇಳಿದ್ದಳು. ಅವಳಿಗೆ ನಿಜವಾಗಲೂ ಹಾಗೆನ್ನಿಸಿತ್ತೇ ? ಇಂದಿಗೂ ತಿಳಿಯುವುದಿಲ್ಲ. ಅಥವಾ ಅದು ಅವಳಿಗೆ ಬಿದ್ದ ಯಾವುದೋ ಕನಸಿನ ನಿರುದ್ದಿಶ್ಯ ಅಭಿವ್ಯಕ್ತಿಯಾಗಿರಬೇಕು. ಅಲ್ಲದೆ ಹೋದಲ್ಲಿ ಅವಳಿಗೆ ನನ್ನಿಂದ ಇಂಥ ಒಂದು ಜವಾಬ್ದಾರಿ ಹೊರಲು ಸಾಧ್ಯ ಎಂದು ಅನ್ನಿಸಲಾದರೂ ಹೇಗೆ ಸಾಧ್ಯ ?

ನಾನು ಹೊರಡುವ ದಿನ packing ಮಾಡಿಕೊಳ್ಳುತ್ತಿದ್ದಾಗ ಬಂದು "ಅಂದ್ಹಾಂಗ ನೀ ಇವನ್ನ ಕರಕೊಂಡು ಹೋಗತೀಲಾ, ಆವಾಗ ಸ್ವಾಮಿಗೋಳ ಕಡೆ ಮುದ್ರೀ ಹಾಕಸು" ಅಂದಿದ್ದಳು, ಅತ್ಯಂತ ಸಹಜವಾಗಿ. ನಾನು ನಿಧಾನವಾಗಿ ಅರಗಿಸಿಕೊಳ್ಳುತ್ತಿದ್ದೆ.

ಎದುರಿನ ಸೀಟಿನ ಮುದುಕನ ಪರಿವಾರ ಇಳಿಯುವ ತಯಾರಿ ನಡೆಸುತ್ತಿತ್ತು. ಮುದುಕ ಎಲ್ಲರಿಗೂ ಮತ್ತೆ ಸಿಗೋಣ ಎಂದು ಹೇಳುತ್ತಿದ್ದ. ನನ್ನ ಮೇಲಿನ ಬರ್ತ್‌ನ ಯುವಕನಿಗೆ ಸಿಗರೇಟು ಹೆಚ್ಚು ಸೇದಬಾರದೆಂದೂ ಮತ್ತು ಹಾಗೆ ಹೇಳಿದ್ದಕ್ಕಾಗಿ ತನ್ನನ್ನು ತಪ್ಪು ತಿಳಿಯಬಾರದೆಂದೂ ಹೇಳಿದ. ಅವನು ಇಳಿದ ಮೇಲೆ, ಕಾರಕೂನರು ಸೈಡ್ ಬರ್ತ್‌ನಿಂದ ನನ್ನ ಎದುರುಗಡೆಯ ಸೀಟಿಗೆ ಬದಲಿಸಿಕೊಂಡರು. ಅವಸರದಿಂದ ಓಡಾಡಿ ಅವರು ತಮ್ಮ ಹೆಂಡತಿ ಮತ್ತು ಇನ್ನಿಬ್ಬರು ಮಕ್ಕಳನ್ನು ಕರೆದುಕೊಂಡು ಬಂದರು. ಈಗ ರೈಲಿನಲ್ಲಿ ಹೆಚ್ಚು ಜನ ಇರಲಿಲ್ಲ. ಕಾರಕೂನರ ಹೆಂಡತಿ ತಮ್ಮ ರೋಗಿ ಮಗನಿಗೆ ಸ್ವಲ್ಪ ಹೊತ್ತು ಮಲಗಿಕೊಳ್ಳಲು ಮನವೊಲಿಸುತ್ತಿದ್ದರು. ಆದರೆ ಆತ ತಯಾರಿರಲಿಲ್ಲ.

ರೈಲು ಯಾವುದೋ ದೊಡ್ಡ ಊರನ್ನು ದಾಟುತ್ತಿತ್ತು. ಸ್ಟೇಶನ್ನಿನಲ್ಲಿ ನಾನು ಬೋರ್ಡ್ ನೋಡಲಿಲ್ಲ. ಕಾರಕೂನರಿಗೆ ಗೊತ್ತಿರಬಹುದೆಂದು ಕೇಳಿದೆ. ಅವರೂ ಸಾಮಾನು ಇಳಿಸಿಕೊಂಡು ಈ ಕಡೆ ಬರುವ ಗಡಿಬಿಡಿಯಲ್ಲಿ ನೋಡಿರಲಿಲ್ಲ. ಸಿನಿಮಾಗಳ ದೊಡ್ಡ ದೊಡ್ಡ billboard ಗಳು ಕಾಣಿಸುತ್ತಿದ್ದವು. ನನ್ನ ಪಕ್ಕದವನನ್ನು ಕೇಳಬೇಕೆಂದುಕೊಂಡೆ. ಕೆಳಗಿನ ಬರ್ತ್‌ನ ಮನುಷ್ಯ ರಾತ್ರಿಯೆಲ್ಲ ವಿಪರೀತ ಗೊರಕೆ ಹೊಡೆಯುತ್ತಿದ್ದ. ಆತ ಖುಷ್ವಂತಸಿಂಗ್‌ನ ಯಾವುದೋ ಪುಸ್ತಕವನ್ನು ಓದುತ್ತಿದ್ದ. ಮುಗುಳ್ನಗೆಯನ್ನು ಧರಿಸಿದ್ದ. ಸುಮ್ಮನಾದೆ.

ಆ ಬೋರ್ಡ್‌ಗಳನ್ನು ನೋಡಿ ಶ್ರೀಕಾಂತನ ನೆನಪಾಯಿತು. ಊರಲ್ಲಿ ತಿರುಗಾಡುತ್ತಿದ್ದಾಗ ಇಂಥದ್ದೇ ಒಂದು board ನೋಡಿ ಅಂದಿದ್ದ "ಅವಳ ನಗು ನೋಡು. ಎಷ್ಟು ಕೃತಕವಾಗಿದೆ, ಹೊಟ್ಟೆಯಲ್ಲಿ gas ಇದ್ದವರ ಹಾಗೆ." ಯಾವುದೋ satellite phone ನ ಜಾಹೀರಾತು. ನಾನು ಆ ಕಡೆಯೇ ನೋಡುತ್ತಾ ಹೇಳಿದ್ದೆ. "ಹಾಗೆ ನೋಡಿದರೆ ಎಲ್ಲವೂ ಕೃತಕವೇ ಅನ್ನಿಸುತ್ತದೆ ... ಯಾವುದಲ್ಲ ಹೇಳು ? ಬೆತ್ತಲೆಯೊಂದೇ ಸಹಜವಾದದ್ದು. ಅದಕ್ಕೇ ಪ್ರಕೃತಿ ಬೆತ್ತಲಾಗಿದೆ. ಗಿಡಗಳು, ಹಣ್ಣು, ಹೂವು, ಪ್ರಾಣಿಗಳು, ಪಕ್ಷಿಗಳು ... ಎಲ್ಲವೂ ಬೆತ್ತಲೆಯಾಗಿವೆ. ಮನುಷ್ಯನನ್ನು ಬಿಟ್ಟು ....."

"Rhetoric" ಶ್ರೀಕಾಂತ ಅಂದ, "ಆದರೂ ನೀನು ಹೇಳುವುದೇ ಸರಿ ಇರಬೇಕು. ಇವೆಲ್ಲ ತೀರ relative ಯಾವುದು ಸ್ವಾಭಾವಿಕ, ಯಾವುದಲ್ಲ. ... ಇವನ್ನೆಲ್ಲ ನಿರ್ಣಯಿಸುವವರು ಯಾರು ? ಅಥವಾ ಯಾಕಾಗಿ ನಿರ್ಣಯಿಸಬೇಕು ? ನೀನು ನಿರ್ಣಯಿಸಲಿಲ್ಲ ಅನ್ನಿಸಿದ್ದನ್ನು ಹೇಳಿದೆ". ಸ್ವಲ್ಪ ಹೊತ್ತಿನ ನಂತರ ಮತ್ತೆ ಮುಂದುವರಿಸಿದ, "ನೀನು ಹೇಳುತ್ತೀಯಲ್ಲಾ ಪ್ರಕೃತಿ ಬೆತ್ತಲಾಗಿದೆ ಅಂತ. ಅದು ಆಗಿಲ್ಲ, ಇರುವುದೇ ಹಾಗೆ ..."

"ಎಲ್ಲವೂ ಒಂದೇ ..." ನಾನೆಂದೆ ಅವಸರದಿಂದ.

"ಎಲ್ಲವೂ ಒಂದೇ ಅಲ್ಲ. ನೀನು ಮೊದಲು ಹೇಳಿದ್ದುದು ಬಹುಶಃ ಸರಿ ಇರಬಹುದು. ಬೆತ್ತಲೆಯಲ್ಲಿ ಸಹಜತೆಯಿದೆ. ಆದರೆ ಈ ಬೆತ್ತಲೆ ಅಂದರೆ ಏನು ? ಈ ಸಹಜತೆ ವ್ಯಕ್ತಿತ್ವದಿಂದ ಬರುತ್ತದೆ. ಅದರ ಹಿಂದೆ ಧೈರ್ಯ ಇರುತ್ತದೆ. ಆ ಧೈರ್ಯ ಯಾವುದು ಗೊತ್ತೇ ? ಪ್ರಾಮಾಣಿಕತೆ. ಒಟ್ಟಾರೆ ತನಗಾಗಿ ಒಂದು identity ... ಒಂದು niche ಗುರುತಿಸಿಕೊಂಡಾಗ ..."

ಜೋರಾಗಿ ನಕ್ಕು ಹೇಳಿದೆ, "you are being romantic ... stop preaching ..."

ಶ್ರೀಕಾಂತ ನನ್ನತ್ತ ನೋಡಿದ. ಗಂಭೀರವಾಗಿದ್ದ. ನಿಟ್ಟುಸಿರು ಬಿಟ್ಟು ಹೇಳಿದ, "ನಿನ್ನಲ್ಲಿ ತುಂಬಾ guilt ಇದೆ. ಅದು ಕೆಲವೊಮ್ಮೆ ಅಕಾರಣವಾಗಿಯೂ ಬೆಳೆದುಕೊಳ್ಳುತ್ತದೆ. ನಿನ್ನ ಸಮಸ್ಯೆ ಅದೇ. ಸಣ್ಣ ಸಣ್ಣ ತಪ್ಪುಗಳನ್ನು ಮಾಡಿದಾಗಲೂ ನಿನಗೆ ಪಾಪಭೀತಿ ಕಾಡುತ್ತದೆ. ಅದಕ್ಕಾಗಿ ಯಾವುದೇ ಅಡೆತಡೆಗಳಿಲ್ಲದ, ತಪ್ಪಿಗೆ ಆಸ್ಪದವಿಲ್ಲದ ದಾರಿಯನ್ನು ಹುಡುಕುತ್ತಿ. ಗೊಂದಲಗಳು ನಿನಗೆ ಬೇಡಾಗಿವೆ ... ಹಾಗಂತ ತಪ್ಪು ಮಾಡದೇ ಇರಲು ಸಾಧ್ಯವೇ ? ಮತ್ತೆ ತಪ್ಪು ... ಮತ್ತೆ guilt ಇದೊಂದು vicious circle. ಹೊರಗೆ ಬರಬೇಕೆಂದರೆ ಎರಡರಲ್ಲಿ ಒಂದು ಇರಬಾರದು ... why don't you recognise your niche ? ಆಗ ಬೆತ್ತಲಾಗುತ್ತೀ ... ಒಮ್ಮೆ ಆದರೆ ಸಾಕು ..."

ಇನ್ನೂ ಏನೇನೋ ಹೇಳುತ್ತಿದ್ದ. ಆ ಮಾತುಗಳೆಲ್ಲಾ ಎಲ್ಲಿಯೋ ಹೋಗಿ ಹತ್ತಿದ್ದವು.

ಕಾರಕೂನರ ಮಗ ಎದುರುಗಡೆಯ ಸೀಟಿನಲ್ಲಿ ಮುದ್ದೆಯಾಗಿ ಮಲಗಿದ್ದ. ಅವರೊಂದಿಗೆ ನಿನ್ನೆ ಇಡೀ ದಿನದಲ್ಲಿ ಸ್ವಲ್ಪವೇ ಮಾತುಕತೆಯಾಗಿತ್ತು. ಈಗ ಅವರೇ "ಒಬ್ಬರೇ ಪ್ರಯಾಣಿಸುತ್ತಿದ್ದೀರಾ ?" ಇಂಗ್ಲೀಷಿನಲ್ಲಿ ಕೇಳಿದರು.

"ಹೌದು, ಒಂದು business trip ಮುಗಿಸಿಕೊಂಡು ಬರುತ್ತಿದ್ದೇನೆ" ಎಂದೆ.

"Business trip ರೈಲಿನಲ್ಲಿ ಪ್ರಯಾಣ ಮಾಡುತ್ತಾರೆಯೇ ಈಗ ? ಅದೂ ಟೂ-ಟೈರ್‌ನಲ್ಲಿ !" ಮುಗುಳ್ನಗುತ್ತಾ ಕೇಳಿದರು. ಆ ಪ್ರಶ್ನೆಯಲ್ಲಿ ಕುತೂಹಲವೇನೂ ಇರಲಿಲ್ಲ.

"ಫಸ್ಟ್‌ಕ್ಲಾಸ್ ರಿಸರ್ವೇಶನ್ ಸಿಗಲಿಲ್ಲ ... ಹೋಗುವಾಗ ವಿಮಾನದಲ್ಲೇ ಹೋಗಿದ್ದೆ. ಮತ್ತೆ ಈಗ ಸಮಯವೂ ಇತ್ತು. ಅವಸರದ ಪ್ರಯಾಣ ಬೇಡವೆನ್ನಿಸಿತು".

ಅವರು ತಮ್ಮ ಹೆಂಡತಿ ಮತ್ತು ಇಬ್ಬರು ಮಕ್ಕಳ ಪರಿಚಯ ಮಾಡಿಸಿದರು. ಅವರೆಲ್ಲರಿಗೆ ಅಂಥ ಆಸಕ್ತಿ ಇರಲಿಲ್ಲ. ಮಲಗುವ ತಯಾರಿ ನಡೆಸುತ್ತಿದ್ದರು.

"ನೀವು ಮಧ್ಯಾಹ್ನ ಮಲಗುತ್ತೀರಾ ?" ಎಂದರು ಅವರ ಹೆಂಡತಿ. ಇಲ್ಲವೆಂದೆ. ಕಾರಕೂನರೂ ಮಲಗಲಿಲ್ಲ. ತಮ್ಮ ಕನ್ನಡಕ ತೆಗೆದು ಒರೆಸುತ್ತಿದ್ದರು. "ನೀವು ಇತ್ತೀಚೆಗೆ ನಿವೃತ್ತರಾಗಿದ್ದೀರಾ ?" ಎಂದು ಕೇಳಿದೆ. "ಹೌದು, ಎರಡು ತಿಂಗಳಾಯಿತು ... ಹಾಗೆಯೇ ಒಮ್ಮೆ ಸ್ವಲ್ಪ ತಿರುಗಾಡಿ ಬರೋಣವೆನ್ನಿಸಿತು. ಅದಕ್ಕೇ ಎಲ್ಲರೂ ಕೂಡಿ ಹೊರಬಿದ್ದೆವು". "ನಿಮಗೆ ಇವರಲ್ಲೆಲ್ಲಾ ನಂಬಿಕೆ ಇದೆಯೇ ? ಅಳುಕಿನಿಂದ ಕೇಳಿದೆ. "ಯಾವುದರಲ್ಲಿ ... ?"

"ಕ್ಷಮಿಸಿ, ಅಂದರೆ ... ನೀವು ನಿಮ್ಮ ಮಗನಿಗೆ ಗುಣವಾಗಲೆಂದು ಕಾಶಿ, ಪ್ರಯಾಗಗಳಿಗೆಲ್ಲಾ ಕರೆದುಕೊಂಡು ಹೋಗಿದ್ದಿರೆಂದು ನಿನ್ನೆ ಅವರು ಹೇಳುತ್ತಿದ್ದರು". ಮುದುಕ ಹೇಳಿದ್ದನ್ನು ಜ್ಞಾಪಿಸಿಕೊಂಡು ಕೇಳುತ್ತಿದ್ದೆ, "ಕ್ಷಮಿಸಿ, It's none of my business ..."

"Never mind. ಕಾಶೀ .. ಹಹ್ಹ .. ಪ್ರಯಾಗಕ್ಕೆ ಹೋದದ್ದೇನೋ ಹೌದು. ಕಾಶಿಗೆ ಹೋಗಲಾಗಲಿಲ್ಲ .. ಆದರೆ ಪ್ರಯಾಗಕ್ಕೆ ಹೋಗುವಾಗ ಆ ಉದ್ದೇಶ ಇತ್ತೆಂದು ಅನ್ನಿಸುವುದಿಲ್ಲ. ಹಾಗೆ ಹೋಗಿದ್ದೆವು ತೀರ್ಥಕ್ಷೇತ್ರ ಅಂತ. ಇನ್ನು ... ಅವರವರ ಗ್ರಹಿಕೆ ... ಹಹಹ್ಹ .. ಇಲ್ಲದೆ ಹೋದಲ್ಲಿ ನನಗೆ ಸಲ್ಲದ ಧಾರ್ಮಿಕತೆಯನ್ನು ಅವರು ನನಗೆ ಹಚ್ಚುತ್ತಿದ್ದರೇ ? ..." ನಿರುದ್ವಿಗ್ನರಾಗಿ ಹೇಳಿದರು.

ಅವರ ಮಗ ಎದ್ದು ಕೂತ. ಏನು ಬೇಕೆಂದು ಕೇಳಿದರು. ಅವನು ಸುಮ್ಮನಿದ್ದ. ಇವರು ನೀರು ಕುಡಿಸಿದರು.

"ಇವರು ..."

"ಹೌದು, spastic. ಹುಟ್ಟಿನಿಂದಲೇ ಹೀಗೆ" ನನ್ನ ಸಂಶಯವನ್ನು ಗ್ರಹಿಸಿ ಹೇಳಿದರು. ಅವನು ಕೆಳಗೆ ಕೂತು ಬಾಟಲಿಯ ಮುಚ್ಚಳವನ್ನು ಉರುಳಿಸತೊಡಗಿದ. ಅವರು ಯಾವುದೋ ಪುಸ್ತಕವನ್ನು ಓದತೊಡಗಿದರು. ಪುಸ್ತಕದಿಂದ ತಲೆಯೆತ್ತಿ ಕೇಳಿದರು "ನೀವು ಓದುತ್ತೀರಾ ?"

"ಹಾಂ, ಅಲ್ಪ-ಸ್ವಲ್ಪ ... ಹೆಚ್ಚಾಗಿ ಸಮಯ ಕಳೆಯುವುದಕ್ಕಾಗಿ, ಅಂಥ ಆಳ ಏನೂ ಇಲ್ಲ". ಅವರ ಮಗನನ್ನು ದಿಟ್ಟಿಸುತ್ತ ಕೇಳಿದೆ "ನೀವು ಇವರನ್ನು ತಜ್ಞರಿಗೆ ತೋರಿಸಿರಬೇಕಲ್ಲವೇ ?"

"ಹಾಂ, ತೋರಿಸಿದ್ದೇವೆ. ಹೆಚ್ಚಿನ ಪರಿಣಾಮವಾಗಲಿಲ್ಲ. ನಾನಾ ನಮೂನೆಯ ಚಿಕಿತ್ಸೆಗಳು. ರೋಸಿ ನಾನೇ ಕೈಬಿಟ್ಟೆ. ಸ್ವಾರಸ್ಯಕರ ಸಂಗತಿ ಏನು ಗೊತ್ತೆ ? ಒಂದು ವಿಧಾನವಿದೆ ಅವನನ್ನು ಗುಣಪಡಿಸಲು ... ಅದೇನೆಂದರೆ .. ಈಗ ನೋಡಿ, ನೀವು ನನ್ನನ್ನು ಗುರುತಿಸುತ್ತೀರಿ;

ನನಗೆ ನಾನು ಏನು ಎಂದು ಗೊತ್ತಿದೆ. ನಿಮಗೂ ಅದೇ ಅನ್ವಯಿಸುತ್ತದೆ. ಈಗ ... ನಾವೆಲ್ಲರೂ ಇವನನ್ನು ಗುರುತಿಸುತ್ತೇವೆ ... ಆದರೆ ತಾನು ಏನು ಎಂಬುದು ಆತನಿಗೆ ಗೊತ್ತಾದಾಗ ಆತ ಅದರಿಂದ ಕಳಚಿಕೊಳ್ಳಬಹುದು. ಅದೇನೂ ಸಾಧ್ಯವಿಲ್ಲ ಬಿಡಿ".

ನಾನು ಸುಮ್ಮನೇ ಕೇಳುತ್ತಿದ್ದೆ. ಅದೇ ಹೆಚ್ಚು ಸುರಕ್ಷಿತ ಅನ್ನಿಸಿತು. ಸ್ವಲ್ಪ ಹೊತ್ತಿನ ನಂತರ ಮತ್ತೆ ಮುಂದುವರಿಸಿದರು "ನಾನು ನೂರು ಸಂಗತಿಗಳ ಮೇಲೆ ಅವಲಂಬಿತನಾಗಿದ್ದೇನೆ. ನನ್ನ ಈ ನನ್ನತನಕ್ಕೆ ಅದರ ಅರಿವಿದೆ. ಇವನು ಎಲ್ಲದಕ್ಕೂ ಇತರರ ಮೇಲೆ ಅವಲಂಬಿತನಾಗಿದ್ದಾನೆ. ಆದರೆ ಅವನ ವ್ಯಕ್ತಿತ್ವಕ್ಕೆ ತನ್ನ ಅವಲಂಬನದ ಅರಿವಿಲ್ಲ ..."

"I can understand" ನಾನು ತಲೆಯಾಡಿಸುತ್ತ ನಿಧಾನವಾಗಿ ಹೇಳಿದೆ. ಬೆಳೆದ ಮಗ ತನ್ನ ಮೇಲೆ ಅವಲಂಬಿತನಾಗಿರುವುದು ಎಂಥ ನೋವೆಂದು ಅವರನ್ನು ನೋಡಿದರೆ ಅರ್ಥವಾಗುತ್ತಿತ್ತು. ಸ್ವಲ್ಪ ಹೊತ್ತು ಓದುತ್ತಿದ್ದವರು ನಂತರ ಹಾಗೇ ಸೀಟಿಗೆ ಒರಗಿಕೊಂಡರು. ನಾನು ಸುಮ್ಮನೆ ಕುಳಿತಿದ್ದೆ. ಹಗಲು ಮಸಕಾಗುತ್ತಿತ್ತು.

❖ ❖ ❖

ರಾತ್ರಿ ಮನೆ ಮುಟ್ಟಿದಾಗ ತಡವಾಗಿತ್ತು. ಯಾಕೋ ತುಂಬಾ ಆಯಾಸವಾಗಿತ್ತು. ಬಾಗಿಲು ತೆರೆದ ಅವ್ವ, "ಅಲ್ಲೋ, ಮೊನ್ನೆನs ಬರತೀನಿ ಅಂದಿದ್ದೆಲ್ಲಾ ?" ಎಂದು ಕೇಳಿದಳು. "ನಾಳೆ ಮಾತಾಡೂಣು, ನನಗೆ ಸುಸ್ತಾಗೇದ" ಎಂದು ಕೋಣೆಯತ್ತ ಹೊರಟೆ. ಊಟ ಮಾಡೆಂದು ಹೇಳಿದಳು. ಹಸಿವಿಲ್ಲವೆಂದೆ. ನಿದ್ದೆ ಬರುತ್ತಿತ್ತು. ಬಟ್ಟೆ ಬದಲಿಸಿ ಹಾಸಿಗೆಯ ಮೇಲೆ ಉರುಳಿದೆ. ಬೇಗನೇ ನಿದ್ದೆ ಹತ್ತಿತೆಂದು ಕಾಣುತ್ತದೆ. ರಾತ್ರಿ ವಿಚಿತ್ರವಾದ ಕನಸು ಬಿತ್ತು ... ಅತ್ಯಂತ ಸ್ಪಷ್ಟ ... ರೈಲಿನ ಅದೇ ಬೋಗಿಯಲ್ಲಿ ಕುಳಿತಿದ್ದೆ. ವಿಪರೀತ ಗದ್ದಲವಿತ್ತು ... ಬಹಳ ಜನ ಇದ್ದರು. ಅಲ್ಲಿ ಎಲ್ಲರೂ ಇದ್ದರು ... ಅಪ್ಪ, ಅವ್ವ, ಕಾಕಾ, ಅಕ್ಕ, ಅವಳ ಗಂಡ, ಮಗ ... ಅವರೆಲ್ಲ ಒಂದು ಕಡೆ ಗುಂಪುಗೂಡಿ ಏನೋ ಮಾತಾಡುತ್ತಿದ್ದರು. ನಾನು ಕೈ ಮಾಡಿದೆ. ಅವರಿಗೆ ಲಕ್ಷ್ಯವಿರಲಿಲ್ಲ. ಸೈಡ್ ಬರ್ತ್‌ನಲ್ಲಿ ಕಾರಕೂನರು ಕೂತಿದ್ದರು. ಅವರ ಮಗ ಬೂಟಿನೊಂದಿಗೆ ಆಟವಾಡುತ್ತಿದ್ದ. ನನ್ನನ್ನು ನೋಡಿ ಮುಗುಳ್ನಕ್ಕು 'ಹಲೋ' ಎಂದರು. ನಾನು ಅವರತ್ತ ತಿರುಗಿ ಅವಸರದಿಂದ ಹೇಳಿದೆ, "ಅಂದ ಹಾಗೆ, ನಾನು ಮರೆತಿದ್ದೆ. ನೀವು ನಿಮ್ಮ ಮಗನನ್ನು ಶ್ರೀಕಾಂತನಿಗೆ ತೋರಿಸಬೇಕು ... ಅವರಿಗೆ ನೀವು ಹೇಳಿದ ವಿಧಾನದ ಅರಿವಿದೆ." ... ಎದುರು ಸೀಟಿನ ಮುದುಕ ಗಟ್ಟಿಯಾಗಿ ಏನೋ ಹೇಳುತ್ತಿದ್ದ ... ಅವನ ಮೊಮ್ಮಗ ಧಾಂಧಲೆ ಎಬ್ಬಿಸುತ್ತಿದ್ದ. ಮೇಲಿನ ಬರ್ತ್‌ನ ಯುವಕ ಬಾಗಿಲ ಹತ್ತಿರ ಸಿಗರೇಟು ಸೇದಿ ಮರಳಿ ಬಂದ. ಮುದುಕನ ಹೆಂಡತಿ ಅವನನ್ನು ಆತ್ಮೀಯತೆಯಿಂದ ಮಾತಾಡಿಸಿ ರವೆ ಉಂಡೆಯನ್ನು

ಕೊಡುತ್ತಿದ್ದಳು. ಯಾರೋ ಜೋರಾಗಿ ಕೆಮ್ಮುತ್ತಿದ್ದರು ... ಕೆಳಗಿನ ಬರ್ತ್‌ನ ಮನುಷ್ಯ ಖುಷ್ವಂತಸಿಂಗ್‌ನ ಆತ್ಮಕತೆಯನ್ನು ಕೈಯಲ್ಲಿ ಹಿಡಿದುಕೊಂಡಿದ್ದ .. ಗಹಗಹಿಸುತ್ತಿದ್ದ ...

ಇದ್ದಕ್ಕಿದ್ದಂತೆ ಮುದುಕ ಎದ್ದು ನಡುವೆ ನಿಂತುಕೊಂಡು ಏನೇನೋ ಹೇಳಿದ ... ಏನೋ ಘೋಷಿಸುತ್ತಿದ್ದಂತೆ ಇತ್ತು, ಸರಿಯಾಗಿ ಕೇಳಿಸಲಿಲ್ಲ ... ಒಂದೆರಡು ನಿಮಿಷಗಳಲ್ಲಿ ಎಲ್ಲರೂ ವೃತ್ತಾಕಾರವಾಗಿ ನಿಂತುಕೊಂಡರು ... ಏನೋ ಒಂದು ಬಗೆಯ ಆಟವನ್ನು ಅವರು ಆಡಲು ಪ್ರಾರಂಭಿಸಿದರು. ಏನೆಂದು ಕೂಡಲೇ ಅರ್ಥವಾಗಲಿಲ್ಲ ... ಅವರು ಒಬ್ಬೊಬ್ಬರಾಗಿ ಎಲ್ಲರ ಎದುರೂ ಹೋಗಿ ಅವರನ್ನು ಗುರುತಿಸುತ್ತಿದ್ದರು ... ಉರು ಹೊಡೆದವರ ಹಾಗೆ ಅವರ ಪರಿಚಯ ಹೇಳುತ್ತಿದ್ದರು ... ನನಗೆ ಯಾಕೋ ಭಯವಾಗಿ ಹಿಂದೆಯೇ ಉಳಿದೆ. ಒಬ್ಬೊಬ್ಬರದಾಗಿ ಎಲ್ಲರ ಸರದಿಯೂ ಬರುತ್ತಿತ್ತು ... ಮುದುಕ, ಅವನ ಹೆಂಡತಿ, ಮೊಮ್ಮಗ ... ನಂತರ ಮೇಲಿನ ಬರ್ತ್‌ನ ಯುವಕ, ಕಾರಕೂನ, ಅವರ ಮಗ, ಇವರೆಲ್ಲರ ಸರದಿ ಆಯಿತು ... ಅಕ್ಕನ ಮಗನ ಪಾಳಿ ಬಂದ ಕೂಡಲೇ ಅಕ್ಕ ಹೇಳಿದ್ದು ನೆನಪಾಯಿತು ... ಸೀಟಿನಿಂದ ಎದ್ದು ಮುಂದೆ ಹೋದೆ ... ಮುದುಕ ಕಡೆಯವನಾಗಿ ಸೇರಿಕೋ ಎಂದು ಹೇಳಿದ. ನಾನು ಅಕ್ಕನ ಮಗನನ್ನು ಎತ್ತಿಕೊಳ್ಳಬೇಕೆಂದು ಕೈ ಚಾಚಿದೆ. ಅವನಿಗೆ ಲಕ್ಷ್ಯವಿರಲಿಲ್ಲ ... ಎಲ್ಲರನ್ನು ಗುರುತಿಸುತ್ತಾ ನಡೆದ. ಅಜ್ಜಿ .. ಸ್ಥಿತಪ್ರಜ್ಞೆ; ದೊಡ್ಡ ಅಜ್ಜ .. ಗಟ್ಟಿ; ... ಸಣ್ಣಜ್ಜ .. ಸಿಟ್ಟಿನವ..; ಅವ್ವ .. ಅಜ್ಜನಂತೆ; ಅಪ್ಪ .. ಪದ್ಯ ಬರೆಯುತ್ತಾನೆ .. ಎಲ್ಲರನ್ನೂ ಗುರುತಿಸುತ್ತಿದ್ದ ... ಪ್ರತಿಯೊಬ್ಬರನ್ನು ಗುರುತಿಸಿದಾಗಲೂ ಅಕ್ಕನಿಗೆ ಖುಷಿಯಾಗುತ್ತಿತ್ತು ... ಮೇಲಿನ ಬರ್ತ್‌ನವ .. ಸಿಗರೇಟ್ ಬಹಳ ಸೇದುತ್ತಾನೆ; ಕೆಳಗಿನ ಬರ್ತ್‌ನ ಮನುಷ್ಯ .. ಗೊರಕೆ ..; ಖುಷ್ವಂತ್‌ಸಿಂಗ್ .. ನಿವೃತ್ತ ಕಾರಕೂನರು .. ಬಹಳ ಓದುತ್ತಾರೆ; ಅವರ ಮಗ .. ಬೂಟಿನೊಂದಿಗೆ ಆಡುತ್ತಾನೆ .. ದೃಷ್ಟಿ ಹೊರಳಿಸಿದಾಗ ಎದುರುಗಡೆ ಬರ್ತ್‌ನಲ್ಲಿ ಒಬ್ಬ ಪುಟ್ಟ ಹುಡುಗಿ ಕಂಡಳು. ... ಆ ಮುದ್ದು ಮುಖ ಎಲ್ಲೋ ನೋಡಿದಂತಿತ್ತು ... ಒಂದೆರಡು ಕ್ಷಣ ಬಿಟ್ಟು ಕೂಗಿದೆ, "ಅವಳೂ ... ಅವಳೂ ಇದ್ದಾಳೆ ... ಆಟದಲ್ಲಿ ..." ಮುದುಕ ಸುಮ್ಮನಿರಲು ಹೇಳಿದ ... ವಸಂತ ಈಗ ಮುದುಕನ ಮೊಮ್ಮಗನ ಹತ್ತಿರ ಬರುತ್ತಿದ್ದ ... ತಂಬಾಕು ತುಡುಗು ಮಾಡುತ್ತಾನೆ ... ನನ್ನೆದುರು ನಿಂತ ... ಸೋದರಮಾವ ... executive ... offbeat ಪತ್ರಿಕೆ ನಡೆಸುತ್ತಾನೆ ... ನಾನು ಕೈ ಮಾಡಿ ತೋರಿಸಿದೆ. "ಅವಳು ... ಅವಳು.." ಅವನಿಗೆ ಲಕ್ಷ್ಯವಿರಲಿಲ್ಲ. ... ಎಲ್ಲರೂ ಚಪ್ಪಾಳೆ ತಟ್ಟಿದರು. ಎಲ್ಲರನ್ನೂ ಗುರುತಿಸಿದ್ದ ... ಅಕ್ಕ ಅವನನ್ನು ಎತ್ತಿಕೊಂಡು ಮುದ್ದಿಸಿದಳು ... ಈಗ ಅಕ್ಕನ ಪಾಳಿ ಬಂತು .. ನಾನು ಜಾಗೃತನಾದೆ ... ನಡುವೆ ಬಂದು ಕೈ ಮಾಡಿ ತೋರಿಸುತ್ತಾ ಹೇಳಿದೆ, "ಇಲ್ಲ ... ಈಗ ಅಕೀ ಪಾಳೀ ಅದ .. ಅವಳು ಚಿಕ್ಕವಳು ... ನೋಡಿ." ಎಲ್ಲವೂ ಪಾಳಿಯ ಪ್ರಕಾರ

ನಡೆಯುತ್ತಿದೆಯೆಂದು ಮುದುಕ ಗದರಿಸಿದ. ನಾನು ಅವಳತ್ತ ನಿರಾಶೆಯಿಂದ ನೋಡಿದೆ .. ಅವಳು ಪರವಾಗಿಲ್ಲವೆನ್ನುವಂತೆ ತಲೆಯಾಡಿಸಿ ಮುಗುಳ್ನಕ್ಕಳು ...

ಇದ್ದಕ್ಕಿದ್ದಂತೆ ಗದ್ದಲ ಶುರುವಾಯಿತು .. ಯಾರೋ chain ಜಗ್ಗಿದ್ದರೆಂದು ಕಾಣುತ್ತದೆ. ಒಂದೆರಡು ಕ್ಷಣಗಳಾದ ನಂತರ ಅಲ್ಲಿ ಸ್ವಾಮಿಗಳು ಅವರ ಶಿಷ್ಯವೃಂದದೊಂದಿಗೆ ಬಂದರು .. ಎಲ್ಲರೂ ಸುಮ್ಮನಾದರು ... ಕೈಯೆತ್ತಿ ನಮಸ್ಕಾರ ಮಾಡಿದರು ... ಕಣ್ಣಲ್ಲಿ ಕಾತರವಿತ್ತು. ... ಅಕ್ಕ ಮಗನನ್ನು ತಂದು ನನ್ನ ಕೈಯಲ್ಲಿ ಕೊಟ್ಟಳು ... ಮರೆತಿದ್ದು ನೆನಪಾದವರಂತೆ ಪರ್ಸ್ ತೆಗೆದು ಉಂಗುರ ಹುಡುಕಿ ತೊಡಿಸಿದಳು ... ನಾನು ಸ್ವಾಮಿಗಳ ಹತ್ತಿರ ಹೋದೆ ... ಅಪ್ಪ ನನ್ನನ್ನು ತಡೆದರು ... ಬೇಡವೆಂದರು ... ಮಗುವನ್ನು ತಮ್ಮ ಕೈಗೆ ತೆಗೆದುಕೊಂಡು, ಒಯ್ದು ಅಕ್ಕನ ಕೈಗೆ ಕೊಟ್ಟರು ... ಯಾಕೆ ಹಾಗೆ ಮಾಡಿದರೆಂದು ಗೊತ್ತಾಗಲಿಲ್ಲ ... ಅಕ್ಕನಿಗೆ ಅರ್ಥವಾದಂತಿತ್ತು. ಅಪ್ಪನ ಮುಖ ದಿಟ್ಟಿಸಿದೆ ... ಅವರು ನಗುತ್ತಿದ್ದಂತೆ ಇದ್ದಿತು ... ಆ ನಗು, ಮುಗುಳ್ನಗೆಗಿಂತ ದೊಡ್ಡದಿತ್ತು ... ಗಹಗಹಿಕೆಗಿಂತ ಸಣ್ಣದಿತ್ತು ....

❖ ❖ ❖

ಬೆಳಿಗ್ಗೆ ಎಚ್ಚರವಾದಾಗ ತಡವಾಗಿತ್ತು. Boss ಗೆ ಫೋನು ಮಾಡಿ ನನ್ನ business trip ನ ಫಲಿತಾಂಶಗಳನ್ನು ತಿಳಿಸಿದೆ. ಅವನಿಗೆ ತೃಪ್ತಿಯಾಯಿತು. ಹಾಗೆಯೇ ಇವತ್ತು ಬರುವುದಿಲ್ಲವೆಂದು ಹೇಳಿದೆ. ತೊಂದರೆಯಿಲ್ಲವೆಂದು ಹೇಳಿದ. ಬಹುದೂರದ ಪ್ರವಾಸದಿಂದಾಗಿ ಇನ್ನೂ ರೈಲಿನಲ್ಲಿ ಕೂತ ಅನುಭವವಾಗುತ್ತಿತ್ತು. ಸ್ನಾನ ಮುಗಿಸಿಕೊಂಡು ಬರುವಷ್ಟರಲ್ಲಿ ಅಪ್ಪ, ಅವ್ವ ಗುಡಿಯಿಂದ ಬಂದರು. ಅಪ್ಪ ಕೇಳಿದರು, “ಮೊನ್ನಿನ್ಸ ಬರತೀನಿ ಅಂತ ಹೇಳಿದ್ದೆಲಾ ... flight ಸಿಗಲಿಲ್ಲೇನು ?”

“ಇಲ್ಲಪ್ಪಾ ... ನಾ .. ಅಕ್ಕನ ಹತ್ತಿರ ಹೋಗಿದ್ದೆ ...” ಅಬ್ಬಾ ! ಭಂಡ ಸುಳ್ಳೇ ! ಅಯಾಚಿತವಾಗಿ ಹೊರಬಿದ್ದಿತ್ತು.

“ಪುಣೇಕ್ಕ ಹೋಗಿದ್ದೀ ? ಜಾನಕಿ ಕಡೆ ?”

“ಇಲ್ಲ ... ನಾ .. ನನ್ನ ಅಕ್ಕ ... ನಿಮ್ಮ ಮಗಳ ಕಡೆ ಹೋಗಿದ್ದೆ.” ಅಪನಂಬಿಕೆಯಿಂದ ದಿಟ್ಟಿಸಿದರು. “ಹೌದು” ಅಂದೆ.

“ಯಾಕ ?” ವ್ಯಂಗ್ಯವಿತ್ತು. ಮುಖ ಕಠಿಣವಾಗತೊಡಗಿತ್ತು.

“ಅವಳ ಮಗನ ಹೆಸರಿಡೂದಿತ್ತು.”

"ಹೆಸರು ಇಡೋದಿದ್ರs, ಓಹೋ ! ಸೋದರಮಾವ .. ಆಗಬೇಕಾದ್ದs" ದನಿ ಜೋರಾಗಿತ್ತು. "ಏನಂತ ಇಟ್ಟರು ... ಮಡ್ಡೆಪ್ಪನೋ ಇಲ್ಲ ಬೀರಪ್ಪನೋ !"

"ನಿಮ್ಮ ಹೆಸರು ಅಪ್ಪಾ !" ದೈನ್ಯತೆಯಿಂದ ಹೇಳಿದೆ. ಏನಾದರೂ ಹೇಳುತ್ತಾರೆ, ಕೂಗಾಡುತ್ತಾರೆ, ತೊಲಗು ಎನ್ನುತ್ತಾರೆ ಎಂದುಕೊಳ್ಳುತ್ತಾ ನಿಂತಿದ್ದೆ. ಮನಸ್ಸು ಪ್ರಶಾಂತವಾಗಿತ್ತು. ಏನೂ ಆಗಲಿಲ್ಲ. ಪಟಕ್ಕನೆ ಎದ್ದು ಒಳಗೆ ಹೋದರು. ಅವ್ವ ಸುಮ್ಮನೆ ನಿಂತಿದ್ದಳು. ಅವಳ ಕಣ್ಣುಗಳಲ್ಲಿ ತೆಳುವಾದ ವಿಷಾದದ ನೀರಿತ್ತು. ನಾನು ಏನೂ ಹೇಳಲಿಲ್ಲ.

ಬಟ್ಟೆ ಬದಲಿಸಿ ವೇಗದಿಂದ ನಡೆಯುತ್ತಾ ಶ್ರೀಕಾಂತನ ಕ್ಲಿನಿಕ್ಕಿಗೆ ಹೊರಟೆ. ಹೊರಗೆ ಬಿಸಿಲಿತ್ತು. ಹಿಂದಿನ ರಾತ್ರಿ ಮಳೆಯಾಗಿ ನೆಲ ಸ್ವಲ್ಪ ತೊಯ್ದಿತ್ತು. ಸೀದಾ ಶ್ರೀಕಾಂತನ ಚೇಂಬರಿಗೆ ನುಗ್ಗಿದೆ. ನನ್ನನ್ನು ನೋಡಿ ಎದ್ದು ನಿಂತ. ಮುಗುಳ್ನಕ್ಕು ಕೈಕುಲುಕಿದ. "ಹಲೋ" ಎಂದ. "ಹೇಗಿತ್ತು ?" ಎಂದು ವಿಚಾರಿಸಿದ. ನಾನು ಅವರ ಕೈ ಗಟ್ಟಿಯಾಗಿ ಹಿಡಿದುಕೊಂಡು ನಿರುದ್ವಿಗ್ನನಾಗಿ ಹೇಳಿದೆ. "ನೀನೊಬ್ಬ ಪ್ರವಾದಿ ... you are a prophet ..."

●

# ಕುಸುಮ...

● ಡಾ. ಚಿತ್ರಾ ದೈಜೋಡೆ

ಓಡುತ್ತಿದ್ದಳು . . . ಲಂಗ ಹಾಗೂ ಜಾಕೇಟಿನ ಮೇಲೆ. ರಾತ್ರಿ ಹತ್ತು ಗಂಟೆಗೆ ಉಸಿರು ಕಟ್ಟಿ, ಹಿಂದೆ ಹುಚ್ಚು ನಾಯಿ ಓಡಿಸಿಕೊಂಡು ಬರುತ್ತಿರುವಂತೆ ಓಡುತ್ತಿದ್ದಳು. ಎಣ್ಣೆ, ನೀರು ಕಾಣದ ಕೂದಲು ಜಡೆಯ ರೂಪದಲ್ಲಿ, ಸತ್ತ ಹಾವಿನಂತೆ ಬೆನ್ನ ಮೇಲೆ ಧೊಪ್ಪಂತ ಬೀಳುತ್ತಾ ಇತ್ತು. ಅಮವಾಸ್ಯೆಯ ಕತ್ತಲನ್ನು ಕಲಾಕಾರ ಕುಂಚದಿಂದ ಎತ್ತಿ ಅವಳ ಕಣ್ಣ ಸುತ್ತ ಹಚ್ಚಿದಂತೆ ಕಾಣುತ್ತಿತ್ತು. ಕಾಡಿಗೆಗಿಂತ ಕಪ್ಪು ವಸ್ತು ಇದೇಂತ ಸಾಕ್ಷಿ ಸಾಧಿಸುವಂತೆ ಆ ಕಣ್ಣಿನ ಸುತ್ತ ಇರುವ ಪ್ರಭಂಜನವಿತ್ತು.

ಸುಸ್ತಾಗಿ, ಇನ್ನು ಓಡಲು ಸಾಧ್ಯವಿಲ್ಲಾಂತ ಅವಳ ಕಾಲುಗಳು ಹಠ ಮಾಡಿದಾಗ ಒಂದು ಮನೆಯ ಹೊರಗೆ ಕುಳಿತುಕೊಂಡಳು. ಮೋಡದ ಮರೆಯಿಂದ ಚಂದ್ರ ಭುವಿಯ ಮೇಲೆ ನಡೆಯುವ ಈ ದುರಂತ ನಾಟಕವನ್ನು ನೋಡಲೆಂಬಂತೆ ಹೊರಗೆ ಬಂದ. ಸುಂದರವಾದ ಹುಣ್ಣಿಮೆಯ ಬೆಳದಿಂಗಳು ನೋಡುವ ದೃಷ್ಟಿ. ಈ ಕವಯತ್ರಿ ಎಲ್ಲೋ ಜೀವನದ ದಾರಿಯಲ್ಲಿ ಕಳೆದುಕೊಂಡಿದ್ದಳು. ಹಿಂದಿ ಎಂ.ಎ. ಓದಿದ ಹುಡುಗಿ, ಕವಿತೆಗಳಿಂದ ಶ್ರೋತೃಗಳನ್ನು ಕನಸಿನ ಲೋಕಕ್ಕೆ ಒಯ್ಯುತ್ತಿದ್ದ ಸುಂದರಿ, ನನಸಿನ ಲೋಕದ ಕಠೋರತೆಯ ಪ್ರತೀಕವೆಂಬಂತಿದ್ದ ಕಲ್ಲುಗಳ ಮೇಲೆ ಕುಳಿತು ಏದುಸಿರು ಬಿಡುತ್ತಿದ್ದಳು. ಹೆದರಿದ ಕಣ್ಣುಗಳು ಅತ್ತಿತ್ತ ಗಾಜಿನ ಗೋಟಿಗಳಂತೆ ತಿರುಗುತ್ತಿದ್ದವು. ಪಾದಗಳ ಬಿರುಕುಗಳಿಂದ ನೆತ್ತರು ಹೊರಗೆ ಬರುವುದೋ ಬೇಡವೋಂತ ನಿರ್ಧರಿಸಲು ಆಗದಂತೆ ಬಿರುಕುಗಳಲ್ಲಿ ತುಂಬಿ ನಿಂತಿತ್ತು.

ಕುಸುಮಾ ನಿಜವಾಗಲೂ ಹೂವಿನಂಥ ಗುಣದವಳಾಗಿದ್ದಳು. ಅಂದ್ರೆ ಬರೀ ಸ್ವೀಟ್ ಸ್ವೀಟ್ ಅಂತ ಅಲ್ಲಾ. ಎಲ್ಲಿ ಜೋರಾಗಿರಬೇಕೋ ಅಲ್ಲಿ ಜೋರಾಗಿದ್ದಳು. ತನ್ನತನವನ್ನು ಯಾವತ್ತೂ ಕಳೆದುಕೊಂಡವಳಲ್ಲಾ. ಶ್ಯಾಮಲವರ್ಣ ಹೊಂದಿದ ಇವಳನ್ನು ಯಾರೂ ಕಪ್ಪು ಅನ್ನುವಂತಿರಲಿಲ್ಲಾ. ನೀಳ ನಾಸಿಕ, ದೊಡ್ಡ ಕಣ್ಣುಗಳು, ತುಂಬಿದ ತುಟಿ (ಸದಾ ಮುಗುಳು ನಗಲು ಸಿದ್ಧವಾಗಿರುವಂಥವು) ಸುಂದರ ಕೇಶರಾಶಿ, ಕೋಮಲ ಕಂಠದ ಹುಡುಗಿ, ಯಾರಲ್ಲೂ ದ್ವೇಷ ಹುಟ್ಟಿಸಿರಲಿಲ್ಲಾ. ಎಲ್ಲಾ ತರಹದ ಉಡುಪುಗಳನ್ನು ತೊಡುತ್ತಿದ್ದರೂ ಮಾನವಂತೆ ಆಗಿ ಗಂಭೀರವಾಗಿ ನಡೆದುಕೊಳ್ಳುತ್ತಿದ್ದಳು. ಜೀನ್ಸ್‌ಧಾರಿಣಿಗಳೆಲ್ಲಾ ಗಂಡುಬೀರಿ

ಹೆಣ್ಣುಗಳೆಂಬುವನ್ನು ಸುಳ್ಳಾಗಿಸಿದ್ದಳು. ಇದೆಲ್ಲ ವರ್ಣನೆ ಕೇಳಿ ಅತಿಶಯೋಕ್ತಿ ಅನ್ನಿಸಬಹುದು, ಆದರೆ ಇದು ನಿಜವಾಗಿತ್ತು.

ಎಂ.ಎ. ಮುಗಿದೊಡನೆ ಅಪ್ಪ, ಅಮ್ಮ ಕುಂಡಲಿ ನೋಡಿಸಿ ನಿರ್ಧರಿಸಿದ ಗಂಡನ್ನು ವರಿಸಿದ್ದಳು. ಬೇಕಾದಷ್ಟು ವರದಕ್ಷಿಣೆ ಕೊಟ್ಟಿದ್ದರು. ಆದರೂ ಮನುಷ್ಯನಿಗೆ ಸುಲಭವಾಗಿ ಐಶ್ವರ್ಯ ಬರುವ ದಾರಿ ತಿಳಿದಾಗ ಮಾಡುವಂಥ ಕೆಲಸವನ್ನು ಅವಳ ಮಾವನ ಮನೆಯವರು ಕೂಡಾ ಮಾಡಿದ್ದರು. ಮೊದಮೊದಲು ಪ್ರೀತಿಯಿಂದ ತಮ್ಮ ಬೇಡಿಕೆಗಳನ್ನು ಅವಳ ಮುಂದಿಡುತ್ತಿದ್ದರು. ಮಾನವ ಸಹಜ ದೌರ್ಬಲ್ಯಕ್ಕೆ ತಾವು ಅಪವಾದವಿಲ್ಲವೆಂಬಂತೆ, ಮೆಲ್ಲಗೆ ಹಿಂಸೆಗೆ ಶರಣು ಹೋದರು. ಇವರ ಬೇಡಿಕೆಗಳನ್ನು ಪೂರೈಸಿ ಹಣ್ಣಾದ ಅಪ್ಪನನ್ನು ನೋಡಿ ಕುಸುಮಾ, ತಿರುಗಿಬಿದ್ದಳು. ಇನ್ನು ತನ್ನಿಂದ ಅಂಥ ಕೆಲಸ ಸಾಧ್ಯವಿಲ್ಲಂತ ಖಡಾ ಖಂಡಿತವಾಗಿ ಹೇಳಿದಳು. ಅದರ ಪರಿಣಾಮವಾಗಿ ಸೀಮೆ ಎಣ್ಣೆ ಸುರಿದು ಅವಳನ್ನು ಜೀವಂತ ದಹನ ಮಾಡಲು ಪ್ರಯತ್ನ ಮಾಡಿದ್ದರು.

ಹುಡುಗಿ, ಹುಟ್ಟಿದಾಗಿನಿಂದಲೇ ಬೇರೆಯವರ ಸ್ವತ್ತೆಂದೂ, ವಿವಾಹವಾದ ಮೇಲೆ, ಅವಳಿಗೆ ತವರು ಮನೆಯ ಸಂಬಂಧ ಕಡಿದು ಹೋಗುತ್ತದೆ ಎಂದೂ, ಅವಳ ಬದುಕು ಸಾವು ಅವಳ ಗಂಡನ ಕೈಯಲ್ಲಿರುವುದೆಂದೂ ನಂಬುವ ದೇಶದಲ್ಲಿ ಹುಟ್ಟಿದ ಪುಣ್ಯವಂತಳು ಕುಸುಮಾ.

ತಿಂಗಳುಗಟ್ಟಲೆ, ಕೋಣೆಯಲ್ಲಿ ಕೂಡಿಹಾಕಿ ಹೊಟ್ಟೆಗೂ ಹಾಕದೆ, ದನಕ್ಕೆ ಬಡಿದಂತೆ ಬಡಿದು, ಕೊನೆಗೆ ಅದರಿಂದಲೂ ತಮ್ಮ ರಾಕ್ಷಸ ಸ್ವಭಾವಕ್ಕೆ ಸಮಾಧಾನವಾಗದಿರಲು ಅವಳನ್ನು ಸುಡುವ ತಂತ್ರ ಹೂಡಿದ್ದರು. ಹೊಟ್ಟೆಗಿಲ್ಲದೆ ಇರುವ ಕಾರಣ ಅವಳು ತುಂಬಾ ನಿಶ್ಯಕ್ತಳಾಗಿದ್ದುದು ಅವರಿಗೆ ತಿಳಿದಿತ್ತು. ಆದರೆ ಬರೀ ಅವಳ ದೇಹ ನಿಶ್ಯಕ್ತವಾಗಿತ್ತೇ ಹೊರತು ಬದುಕುವ ಛಲವಲ್ಲ ಎಂಬುದನ್ನು ಅವರು ಅರಿಯದವರಾಗಿದ್ದರು. ಅವಳನ್ನು ತಂದು ಧೊಪ್ಪಂತ ನೆಲದ ಮೇಲೆ ತಳ್ಳಿದವರೇ ಸೀಮೆಎಣ್ಣೆ ಸುರಿದಿದ್ದರು. ಅವಳನ್ನು ಕಟ್ಟಿ ಹಾಕಬೇಕು ಎಂದು ಅವರಿಗೆ ಪಾಪ ಹೊಳೆದಿರಲಿಕ್ಕಿಲ್ಲ, ಅವಳಲ್ಲಿ ಅಷ್ಟು ವೇಗವಾಗಿ ಓಡುವ ಶಕ್ತಿ ಉಳಿದಿತ್ತೆಂದು ಅವರು ಕನಸು ಮನಸ್ಸಿನಲ್ಲೂ ಅಂದುಕೊಂಡಿರಲಿಲ್ಲ. ಅಂತೂ, ಕುಸುಮಾ ತಪ್ಪಿಸಿಕೊಂಡಿದ್ದಳು.

ಸರಿಯಾಗಿ ತಿರುವಿನ ಹತ್ತಿರ ಇರುವ ಮನೆ ಆಗಿದ್ದರಿಂದ ಬಂದ ಕಾರಿನ ಬೆಳಕು ಸೀದಾ ಅವಳ ಮುದುಡಿದ, ಬೆದರಿದ ಕಣ್ಣುಗಳ ಮೇಲೆ ಬಿತ್ತು. ಯಾವುದೋ ಅಲೆಮಾರಿ ಹುಚ್ಚಿ ತರಹ ಕಾಣಿಸುತ್ತಿದ್ದ ಅವಳನ್ನು ತನ್ನ ಮನೆಯ ಮುಂದೆ ಕುಳಿತು ಕೊಳ್ಳಬೇಡವೆಂದು ಹೇಳಲು ಅಂಬಾ ಇಳಿದಳು. ನಾಜೂಕು ಶರೀರದ ಅಂಬಾ, ಎತ್ತರ ಹಿಮ್ಮಡಿಯ ಬಂಗಾರದ ಬಣ್ಣದ ಲೆದರ್‌ನಿಂದ ರಕ್ಷಿಸಲ್ಪಟ್ಟ ತನ್ನ ಪಾದಗಳನ್ನು ಕುಸುಮಳೆಡೆಗೆ ತಿರುಗಿಸಿದಳು. ತೋಳಿಲ್ಲದ

ಉದ್ದನೆಯ ಬಟ್ಟೆ ತೊಟ್ಟ ಅಂಬಾ, ತನ್ನ ಕೆಂಪು ಕೂದಲ ರಾಶಿಯನ್ನು ಕತ್ತು ಕೊಂಕಿಸಿ ಹಿಂದಕ್ಕೆ ಹಾಕಿ -

'ಏಯ್ !' ಅನ್ನಬೇಕು ಅಷ್ಟರಲ್ಲಿ ಕುಸುಮ ಎದ್ದು ನಿಂತು,

'ಆಯಾಮ್ ಸಾರಿ ಮ್ಯಾಮ್' ಅಂದಳು.

ಅವಳ ಭಾಷೆ, ಅದಕ್ಕಿಂತ ಹೆಚ್ಚಾಗಿ ಅವಳಿಂದ ಬರುತ್ತಿರುವ ಸೀಮೆಎಣ್ಣೆಯ ವಾಸನೆಯಿಂದ ಪರಿಸ್ಥಿತಿಯನ್ನು ಅರ್ಥೈಸಿಕೊಂಡಳು ಅಂಬಾ.

'ಒಳಗೆ ಬಾ, ಆಮೇಲೆ ಮಾತಾಡೋಣ' ಅಂತ ಒಳಗೆ ನಡೆದಳು. ಅವಳಿಗೆ ಈ ಅಪರಿಚಿತ ಹೆಣ್ಣು ಖಂಡಿತವಾಗಿಯೂ ತನ್ನನ್ನು ಹಿಂಬಾಲಿಸುವಳೆಂದು ಖಾತ್ರಿ ಇತ್ತು. ಈ ದೇಶದಲ್ಲಿ ಜಾತೀಯತೆಯ ಚೌಕಟ್ಟಿನಲ್ಲಿ ಬೆಳೆದು ತಂದೆ ತಾಯಿಯರ ಮರ್ಜಿವಹಿಸಿ ವಿವಾಹವಾದ ಹೆಣ್ಣುಗಳಿಗೆ, ಆ ವಿವಾಹ ಸಂಪನ್ನಭರಿತವಾಗದಿದ್ದಲ್ಲಿ ತನ್ನವರೆಂಬುವರು ಯಾರೂ ಉಳಿದಿರುವುದಿಲ್ಲಾಂತ ಗೊತ್ತಿತ್ತು. ಇಂಥ ಸಮಯದಲ್ಲೇ ಈ ಒಳ್ಳೇ ಹುಡುಗಿಯರು ದಲಾಲಿಗಳ ಕೈಯಲ್ಲಿ ಸಿಕ್ಕಿ ಬೀಳುವುದು. ಇವರಲ್ಲಿ ಎಷ್ಟೋ ಜನ ವಿದ್ಯಾವಂತರಾಗೇ ಇರುತ್ತಾರೆ. ಆದರೆ, ಪುಸ್ತಕ ವಿದ್ಯೆ ಬಿಟ್ಟರೆ, ಸ್ವಂತಿಕೆಯನ್ನು ಬೆಳೆಸಿಕೊಂಡವರಿರುವುದಿಲ್ಲ. ಜೀವನವಿಡೀ ಅಪ್ಪನ ಮನಸ್ಸು ನೋಯಿಸಬಾರದು. ಅಮ್ಮನ ಹೃದಯ ನೋಯಿಸಬಾರದು ಎಂದು, ಸಂಸಾರದ ಮಾನ ಮರ್ರ್ಯಾದೆ ಎಲ್ಲಾ ತನ್ನ ಮೇಲೆ ಅವಲಂಬಿಸಿದೆ ಎಂದು ಅಂದುಕೊಳ್ಳುತ್ತಾ ಬದುಕುವುದೂ ಕೂಡಾ ಬೇರೆಯವರ ಸಲುವಾಗಿ ಎಂಬಂತೆ ಬದುಕುವ ಈ ಹುಡುಗಿಯರು ತುಂಬಾ ನಿಷ್ಠಾವಂತರೂ, ಶ್ರಮಜೀವಿಗಳೂ, ಮುಗ್ಧರೂ ಆಗಿರುತ್ತಾರೆಂಬುದು ಅಂಬಾಗೆ ತಿಳಿದಿತ್ತು.

ಕುಸುಮಾ ಒಳಗೆ ಬಂದು ಕುಳಿತುಕೊಳ್ಳಲು ಹಿಂದು ಮುಂದು ಮಾಡತೊಡಗಿದಳು. ಅಂಬಾ, ಇದನ್ನು ನೋಡಿ,

'ಅಲ್ಲಿ ಬೇಡಾ, ಮೊದಲು ಬಾತ್‌ರೂಂಗೆ ಹೋಗಿ ಸ್ನಾನ ಮಾಡಿ ಬಟ್ಟೆ ಬದಲಾಯಿಸಿಕೊಂಡು ಬಾ' ಎಂದು ತನ್ನ ನೈಟಿ ಹಿಡಿದುಕೊಂಡು ಬಂದಳು.

ಕುಸುಮ ತುಂಬಾ ಹೇಳಿಸಿಕೊಳ್ಳದೇ ಅಂಬಾ ಕೈ ಮಾಡಿದ ಕಡೆಗೆ ನಡೆದಳು. ಅರ್ಧ ನಗ್ನ ದೇಹವನ್ನು ಪ್ರದರ್ಶಿಸುವ ಮುಜುಗರ ಬೇರೆಯವರ ಬಟ್ಟೆ ಹಾಕುವುದಕ್ಕಿಂತ ಹೆಚ್ಚಿನದು ಎಂದು ಕುಸುಮಾ ನಿರ್ಧರಿಸಿದ್ದಳು. ಸ್ವಚ್ಛವಾಗಿ ಬಿಸಿನೀರಿನ ಶವರ್ ಕೆಳಗೆ ನಿಂತು ಅಲ್ಲಿದ್ದ ಹೊಸ ಸೋಪಿನಿಂದ ಮೈಯನ್ನು ಚರ್ಮ ಸುಲಿಯುವಂತೆ ತಿಕ್ಕಿ ತಿಕ್ಕಿ ತೊಳೆದಳು. ಸೀಮೆಎಣ್ಣೆಯ ವಾಸನೆಯ ಜೊತೆಗೆ ಆ ಭಯಂಕರ ನೆನಪನ್ನು ತೊಳೆಯುವಂತೆ ಮೈ ತೊಳೆದುಕೊಂಡಳು.

ನುಣುಪಾದ ಸ್ಯಾಟಿನ್ ನೈಟಿಯನ್ನು ಹಾಕಿಕೊಂಡು ಹೊರಗೆ ಬಂದಳು. ಒಳ ಉಡುಪುಗಳನ್ನು ಅವಳು ಮೊದಲೇ ಹಾಕಿರಲಿಲ್ಲಾ. ಕೋಣೆಯಲ್ಲಿ ಕೂಡಿಹಾಕಿ, ಸ್ನಾನಕ್ಕೂ ಬಿಡದೇ ಇದ್ದುದರಿಂದ ಅವುಗಳಿಂದ ವಾಸನೆ ಬರ್‍ತಿತ್ತು. ಅವನ್ನು ಕಳಚಿ ರೂಮಿನಲ್ಲೇ ಮೂಲೆಗೆ ಒಗೆದಿದ್ದಳು. ಈಗ ಸಂಕೋಚವಿಲ್ಲ. ತನ್ನ ಹೊಸ ಗೆಳತಿಯ ಕಡೆಗೆ ನಡೆದಳು. ಆ ಹಿಂಸೆ ಅನುಭವಿಸಿ ಬಡಕಲಾದ ದೇಹದಲ್ಲೂ ಗಾಂಭೀರ್ಯ ಹಾಗೂ ಸೌಂದರ್ಯ ಅಡಗಿತ್ತು. ಅಂಬಾ ಅವಳನ್ನು ನೋಡಿ ಮುಗುಳ್ನಕ್ಕಳು. ಕುಸುಮಾಗೆ ಒಂದು ಸಲ ಶಾಕ್ ಹೊಡೆದ ಹಾಗಾಯಿತು. ನಂತರ ಅದು ತನ್ನ ಮನಸ್ಸಿನ ಆಟ ಎಂದು ಪ್ರತಿನಕ್ಕಳು. ಬಿಸಿ ಕಾಫಿ, ಬಿಸ್ಕೀಟ್ ಸೇವನೆಯ ನಂತರ ಕುಸುಮಾ ತಾನಾಗಿ ತನ್ನ ಕಥೆಯನ್ನು ಹೇಳಿದಳು. ಕಣ್ಣೀರು ತುಂಬಿ ಬಿಕ್ಕುತ್ತಾ ಹೇಳಲಿಲ್ಲಾ, ತನ್ನ ಕಥೆ ಅಲ್ಲವೇನೋ ಎಂಬಂತೆ ಆರಾಮವಾಗಿ ಹೇಳಿದಳು. ಅವಳಲ್ಲಿ ಅದು ಮಾಮೂಲಾಗಿರುವ ವಿಷಯ ಹಾಗೂ ಇನ್ನು ತನ್ನ ಭವಿಷ್ಯವನ್ನು ರೂಪಿಸುವ ಛಲ ಹುಟ್ಟಿತ್ತೆಂದು ತಿಳಿಯಬಹುದಿತ್ತು.

'ಮ್ಯಾಡಂ, ನಿಮಗೆ ಬೇಸರವಿಲ್ಲದಿದ್ದರೆ ನಾನು ಇವತ್ತು ಇಲ್ಲೇ ಮಲಗಬಹುದೇ ?' ಎಂದಳು.

'ಹಾಂ, ಹೌದು, ಮಲಗು, ಆ ಬಲಗಡೆ ಇರುವ ಕೋಣೆ ಅತಿಥಿಗಳಿಗಾಗಿ ಕಾದಿರಿಸಿದೆ.'

ಬೆಳಿಗ್ಗೆ ಹತ್ತು ಘಂಟೆ ಆದರೂ ಕುಸುಮಗೆ ಎಚ್ಚರ ಆಗಲಿಲ್ಲ. ಅವಳು ಹನ್ನೊಂದು ಗಂಟೆಗೆ ಎದ್ದಾಗ ಅವಳ ಮಂಚದ ಪಕ್ಕದ ಸಣ್ಣ ಟೇಬಲ್ ಮೇಲೆ ಒಂದು ಚೀಟಿ ಇತ್ತು.

'ಗುಡ್ ಮಾರ್ನಿಂಗ್, ಕಿಚನ್‌ನಲ್ಲಿ ಎಲ್ಲಾ ಅಡಿಗೆ ತಯಾರಿದೆ, ಬೇಕಾದ್ದನ್ನು ಬಿಸಿ ಮಾಡಿ ಊಟ ಮಾಡು. ಹಾಗೂ ನಿನಗಾಗಿ ಹೊಸ ಒಳ ಉಡುಗೆಗಳನ್ನು ಬಾತ್‌ರೂಂನಲ್ಲಿ ಇಟ್ಟಿದ್ದೇನೆ. ಸ್ನಾನ ಮಾಡಿ ಹೊಸ ಚೂಡಿದಾರ್ ಹಾಕಿ ರೆಡಿ ಆಗಿ ಇದರಲ್ಲಿರುವ ನಂಬರ್‌ಗೆ ಫೋನ್ ಮಾಡು'.

ಕುಸಮಗೆ ಇದು ಕನಸೋ, ನನಸೋ ಅಂತ ತಿಳಿಯಲು ಸ್ವಲ್ಪ ಸಮಯ ಹಿಡಿಯಿತು. ಇಡೀ ಮನೆಯನ್ನು ಒಂದು ಸಲ ನೋಡಿ ಬಂದಳು. ದಣಿವಾರಿದ ಮೈ, ಮನಸ್ಸು ಈಗ ಚುರುಕಾಗಿ ಕೆಲಸ ಮಾಡುತ್ತಿತ್ತು. ಅಂಬಾ, ನನಗೆ ಯಾಕೆ ಇಷ್ಟು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದಾಳೆ. ಅವಳ ಉದ್ದೇಶವೇನು ? ಆದರೂ ಇರ್‍ಲಿ ಎಲ್ಲವನ್ನೂ ಕಳೆದುಕೊಂಡ ನನಗೆ ಈ ಹಂತವನ್ನು ದಾಟೋಣ ಅಂತ ಅಂದುಕೊಂಡಳು. ಮನುಷ್ಯರ ಮೇಲೆ ವಿಶ್ವಾಸ ಕಳೆದ ಮೇಲೆ, ಎಲ್ಲರೂ ದುಷ್ಟರಾಗಿ ಅಥವಾ ದುಷ್ಟ ಧ್ಯೇಯವುಳ್ಳವರಾಗಿ ಕಾಣಿಸುವುದರಲ್ಲಿ ವಿಶೇಷವೇನೂ ಇರಲಿಲ್ಲಾ.

ತಯಾರಾಗಿ ಅಂಬಾಗೆ ಫೋನ್ ಮಾಡಿದಳು ಕುಸುಮ, ಅರ್ಧ ಘಂಟೆಯಲ್ಲಿ ಬಂದ ಅಂಬಾ, ಅವಳನ್ನು ಬ್ಯೂಟಿ ಪಾರ್ಲರ್‌ಗೆ ಕರೆದುಕೊಂಡು ಹೋಗಿ ಮೊದಲು ಅವಳ

ಕೂದಲನ್ನು ತೊಳೆಸಿದಳು. ಗಂಟು ಗಂಟಾಗಿದ್ದ ಕೂದಲು ಸರಿಮಾಡಲು ಸ್ವತಃ ಕುಸುಮಳಿಂದ ಖಂಡಿತ ಸಾಧ್ಯವಿರಲಿಲ್ಲಾ. ಆಮೇಲೆ ಮುಖದ ಚಿಕಿತ್ಸೆ ನಡೆಯಿತು. ಕಣ್ಣ ಗುಳಿಗಳು ಹಾಗೂ ಅದರ ಸುತ್ತಲಿರುವ ಕಪ್ಪು ಹೋಗದಿದ್ದರೂ, ಮುಖ ನೋಡುವಂತಾಗಿತ್ತು. ಬಿಲ್ಲು ಪಾವತಿ ಮಾಡಿದ ಅಂಬಾ ಅವಳನ್ನು ಮತ್ತೆ ಮನೆಗೆ ಕರೆದುಕೊಂಡು ಬಂದಳು.

"ಕುಸುಮ, ಹೆಣ್ಣು ಸುಂದರಿಯಾಗಿ ಕಾಣುವುದು ಜನ್ಮಸಿದ್ಧ ಹಕ್ಕು, ಇದನ್ನು ಯಾವತ್ತೂ ಮರೀಬೇಡಾ. ದೇಹದ ಸೌಂದರ್ಯವನ್ನು ಕಾಪಾಡುವುದು ಬಹಳ ಮುಖ್ಯ. ಅದರಿಂದ ಸಮಾಜದಲ್ಲಿ ಒಂದು ಸ್ಥಾನ, ಗೌರವ ದೊರಕುತ್ತದೆ. ಅಷ್ಟೇ ಆ ಅಟೆನ್ಷನ್ ಪಡಕೊಂಡ ಮೇಲೆ ನಾವು ನಮ್ಮ ಸಾತ್ವಿಕತೆಯೋ, ಜಾಣತನವನ್ನೋ ಸಾಧಿಸಬಹುದು. ಮನಸ್ಸಿನ ಮೇಲೆ ಮೊದಲು ಪರಿಣಾಮ ಮಾಡುವುದು ನಮ್ಮ ಬಾಹ್ಯ ಸೌಂದರ್ಯ. ಸ್ವಭಾವ ಒಳ್ಳೇದಿದೆ, ಬಂಗಾರದಂಥ ಹೆಣ್ಣು ಅಂತ ಯಾರಾದರೂ ಕುರೂಪಿಗಳನ್ನು ವರದಕ್ಷಿಣೆ ಇಲ್ಲದೆ ವರಿಸಿದ್ದಾರೆಯೇ, ಬೆರಳೆಣಿಕೆಯಷ್ಟು ಜನರು ಬಾಹ್ಯಕ್ಕೆ ಬೆಲೆ ಕೊಡದೇ ಇರಬಹುದು. ಆದರೆ ಅವರಿಂದ ಸಮಾಜ ಸ್ಥಾಪನೆ ಆಗಿಲ್ಲಾ. ಶೇಕಡಾ ಎಂಭತ್ತು ಪರ್ಸೆಂಟ್ ಜನ ಬಾಯಿಯಲ್ಲಿ ಫಿಲಾಸಫಿ ಮಾತಾಡುವ ಆಷಾಢಭೂತಿಗಳು. ಆದ್ದರಿಂದ ಇನ್ನು ಮುಂದೆ ನೀನು ಒಂದು ತಿಂಗಳು ಚೆನ್ನಾಗಿ ಉಂಡು, ತಿಂದು, ನಿನ್ನ ಕಳೆದು ಹೋದ ಸೌಂದರ್ಯವನ್ನೂ ಮರಳಿ ಪಡೆಯುವ ಪ್ರಯತ್ನ ಮಾಡಬೇಕು. ನಿನಗೆ ಎಲ್ಲ ತರಹದ ಅನುಕೂಲ ಇಲ್ಲಿದೆ. ಹಾಂ ! ಅಂದ ಹಾಗೆ ವೆಚ್ಚದ ವಿಚಾರ ಮಾಡಬೇಡ. ಮುಂದೆ ನಿನಗೆ ಕೆಲಸ ಸಿಕ್ಕ ಮೇಲೆ ಬಡ್ಡಿ ಸಮೇತ ತೀರಿಸುವಿಯಂತೆ" ಅಂತ ಹೇಳಿ, ಹೊರಟು ಹೋದಳು.

ರಾತ್ರಿ ನಿನಗೆ ಎಣ್ಣೆ ತಿಕ್ಕುತ್ತೀನಿ ಅಂತ, ಜುಲುಮಿ ಮಾಡಿ ಸ್ನಾನಗೃಹಕ್ಕೆ ಕರೆದುಕೊಂಡು ಹೋದಳು. ಚೆನ್ನಾಗಿ ಬಾಣಂತಿಗೆ ಸ್ನಾನ ಮಾಡಿಸುವಂತೆ ಮಾಡಿಸಿ ಹೊರಗೆ ಬಂದಳು. ಕುಸುಮಾಗೆ ತಾಯಿಯ ನೆನಪಾಗಿ ಕಣ್ಣು ತುಂಬಿ ಬಂತು. ಆದರೂ ಅದನ್ನು ಅಂಬಾಗೆ ಕಾಣದಂತೆ ಒರೆಸಿಕೊಂಡು, ತಾನು ಅಡುಗೆ ಮಾಡುವುದಾಗಿಯೂ ಇನ್ನು ಹೊರಗೆ ದುಡ್ಡು ಖರ್ಚು ಮಾಡುವ ಅಗತ್ಯವಿಲ್ಲವೆಂದು ಹೇಳಿದಳು. ಇಷ್ಟು ಉಪಕಾರ ಮಾಡಿದವಳಿಗೆ, ತನ್ನ ಕೈಯಿಂದಾದಷ್ಟು ಸಹಾಯ ಮಾಡಬೇಕೆಂದುಕೊಂಡಳು.

ಮೂರು ತಿಂಗಳು ಈ ರೀತಿ ಆ ಸ್ನೇಹಿತೆಯರ ಜೀವನದಲ್ಲಿ ಮೂರು ಕ್ಷಣಗಳಂತೆ ಉರುಳಿದವು. ಇಷ್ಟಾದರೂ, ಕುಸುಮ ಅಂಬಾಳ ಶಯ್ಯಾಗೃಹವನ್ನು ಪ್ರವೇಶಿಸುವ ವಿಚಾರ ಮಾಡಿರಲಿಲ್ಲಾ. ಅಂಬಾ ಅವಳನ್ನು ತುಂಬಾ ಆತ್ಮೀಯತೆಯಿಂದ ನೋಡುತ್ತಿದ್ದರೂ, ಸಲಿಗೆ ಕೊಟ್ಟಿರಲಿಲ್ಲಾ.

ಒಂದು ಸಂಜೆ ನಾಲ್ಕು ಘಂಟೆಗೆ ಅಂಬಾಗಾಗಿ ಒಂದು ಫೋನ್ ಬಂದಿತ್ತು. ಅದನ್ನು ಹೇಳಲು ಕುಸುಮಾ ಮರೆತಿದ್ದಳು. ರಾತ್ರಿ ಹನ್ನೆರಡಕ್ಕೆ ಅಚಾನಕ್ಕಾಗಿ ನೆನಪಾಯಿತು. ತಪ್ಪು

ಸರಿ ಯೋಚನೆ ಮಾಡದೆ ಅಂಬಾಳ ಶಯ್ಯಾಗೃಹದ ಬಾಗಿಲನ್ನು ಮೆಲ್ಲನೆ ತಳ್ಳಿದಳು. ಅಲ್ಲಿ ಅವಳಿಗೆ ಒಬ್ಬ ಗಂಡಸು ಕಾಣಿಸಿದನು.

"ಅರೆ ! ಅಂಬಾಳಿಗೆ ಬಾಯ್‌ಫ್ರೆಂಡ್ ಇರುವುದು ತನಗೆ ಹೇಗೆ ತಿಳಿಯಲಿಲ್ಲಾ. ಇರ್‍ಲಿ, ನನಗ್ಯಾಕೆ ಬೇಕು" ಅಂತ ಹಿಂತಿರುಗಿದಳು. ಆದರೂ, ಮನಸ್ಸಿನಾಳದಲ್ಲಿ ಆ ಪುರುಷನನ್ನು ನೋಡುವ ಆಸೆ ಚಿಗುರಿತ್ತು. ಮತ್ತೆ ಅಲ್ಲಿ ಹೋಗಿ ಹಣಕಿ ಹಾಕಿದಳು. ಒಳಗಿನ ದೃಶ್ಯ ಕಂಡು ಹೌಹಾರಿದಳು.

ಅಲ್ಲೇ, ಪಕ್ಕದಲ್ಲಿ ಅಂಬಾಳ ಬಂಗಾರ ಬಣ್ಣದ ಕೂದಲು ಸ್ಟ್ಯಾಂಡ್ ಮೇಲಿತ್ತು. ಅಂಬಾ ಕನ್ನಡಿ ಮುಂದೆ ತನ್ನ ಎದೆಯ ಮೇಲೆ ಬೆಳೆದ ಕೂದಲನ್ನು ಶೇವ್ ಮಾಡುತ್ತಾ ಇದ್ದಳು. ಇವಳ ಬಾಯಿಯಿಂದ ಒಂದೂ ಮಾತು ಹೊರ ಬರಲಿಲ್ಲಾ.

"ದೇವರೇ, ಇದೇನಿದು ! ಬಾಣಲೆಯಿಂದ ಬೆಂಕಿಗೆ ಬಿದ್ದಂತಾಯಿತಲ್ಲಾ" ಅಂದುಕೊಳ್ಳತೊಡಗಿದಳು. ಅಷ್ಟರಲ್ಲಿ ಅಂಬಾ,

"ಕುಸುಮಾ, ಒಳಗೆ ಬಾ," ಅಂದಳು . . . ಅಂದನು.

ಇಷ್ಟು ದಿನದ ವ್ಯವಹಾರವನ್ನು, ಆತ್ಮೀಯತೆಯನ್ನು ಮರೆತು ಕುಸುಮಾ ಒಳಗೆ ಹೋಗಲು ಹಿಂಜರಿದಳು. ಅಂಬಾಳಿಗಿಂತ ದುಷ್ಟ ಕ್ರಿಮಿ ಈ ಜಗತ್ತಿನಲ್ಲಿಲ್ಲಾ ಅನ್ನುವಂಥ ನಿರ್ಣಯಕ್ಕೆ ಬಂದಳು.

"ಛೇ, ಇವನ ಮುಂದೆ ತಾನು ನಗ್ನಳಾಗಿ ಸ್ನಾನ ಮಾಡಿದ್ದೆನಲ್ಲವೆ. ಪುರುಷನೆಂದು ತಿಳಿಯದೆ ಇದೇ ರೀತಿಯಲ್ಲಿ ಇನ್ನೆಷ್ಟು ಅಮಾಯಕ ಹೆಣ್ಣುಗಳನ್ನು ಸ್ಪರ್ಶಿಸಿ ಸುಖಿಸಿದ್ದಾನೋ ಏನೋ ? ತಾನು ವಿವಾಹಿತಳು ಎಂದು ಆತನಿಗೆ ತಿಳಿದಿಲ್ಲವೇ ? (ಸಾಯಿಸಲು ಹೊರಟ ಪತಿಯ ಮಾಂಗಲ್ಯಕ್ಕೆ ಈಗಲೂ ಮಹತ್ವವಿರುವದು ವೈಚಿತ್ರ್ಯದ ಅತಿರೇಕ).

ಅಂಬಾ ಸೀದಾ ತನ್ನ ಪಾಯಜಾಮದಲ್ಲಿ, ಮೇಲುಡುಪು ಇಲ್ಲದೆ ಹೊರಗೆ ಬಂದಳು. ಕೈಯಲ್ಲಿ ಬಾಡಿ ಹಿಡಿದಿದ್ದಳು, ಕೃತಕ ಸ್ತನಗಳ ಬಾಡಿ ಅದಾಗಿತ್ತು.

"ಕುಸುಮಾ, ಇವು ಇದ್ದರಷ್ಟೇ ನಾನು ಹೆಣ್ಣೇನು ? ಯಾವತ್ತಾದರೂ, ನಿನ್ನನ್ನು ಒಬ್ಬ ಪುರುಷ ದೃಷ್ಟಿಯಿಂದ ನಾನು ನೋಡಿದ್ದೇನೆಯೇ ? ಸ್ತ್ರೀಗೆ ಇನಸ್ಟಿಂಕ್ಟ್ ಬಹಳ ಸೂಕ್ಷ್ಮವಿರುತ್ತದೆ. ನಿನಗೆ ಅದರಲ್ಲಿ ಯಾವತ್ತಾದರೂ ನನ್ನ ನಡತೆಯ ಮೇಲೆ ಸಂಶಯ ಹುಟ್ಟಿದೆಯಾ ? ಇಲ್ಲಾ, ಆದರೆ ಇವತ್ತು ನನ್ನ ಈ ರೂಪ ನೋಡಿ ನನ್ನ ಒಳ್ಳೇತನವನ್ನೆಲ್ಲಾ ಒಂದೇ ಕ್ಷಣದಲ್ಲಿ ಮರೆತೆ ಅಲ್ಲವೆ. ನಿನಗೊಂದು ವಿಶೇಷ ಇನ್ನೂ ಕಾದಿದೆ" ಅನ್ನುತ್ತಾ ತನ್ನ ಪಾಯಿಜಾಮಾವನ್ನು ಕಳಚಿದಳು. ಅಲ್ಲಿ ಪುರುಷ ಮುದ್ರೆ ಮಾಯವಾಗಿತ್ತು.

ಕುಸುಮಾ ಸುಸ್ತಾಗಿ ಕುಳಿತುಕೊಂಡಳು. ಅಂಬಾ ತನ್ನ ನಗ್ನತೆಯನ್ನು ಮುಚ್ಚುವ ಪ್ರಯತ್ನ ಮಾಡದೇ ಅವಳ ಪಕ್ಕಕ್ಕೆ ಬಂದು ಕುಳಿತಳು. ಕುಸುಮಾ ಮೆಲ್ಲನೆ ದೂರ ಸರಿಯಲು ಪ್ರಯತ್ನಿಸಿದಳು. ಆದರೆ ಅಂಬಾ ಗಟ್ಟಿಯಾಗಿ ಅವಳ ಕೈ ಹಿಡಿದು,

"ನಿನ್ನ ಕಥೆಯನ್ನು ನಾನು ಕೇಳಿ ಕನಿಕರಿಸಿದೆ, ಆದ್ದರಿಂದ ನನ್ನ ಕಥೆಯನ್ನು ನೀನು ಕೇಳಬೇಕಾಗಿದೆ. ಕನಿಕರಿಸುವುದು ಬಿಡುವುದು ನಿನಗೆ ಬಿಟ್ಟಿದ್ದು".

ನಾನು ಒಬ್ಬ ದೊಡ್ಡ ಉದ್ಯೋಗಪತಿಯ ಮಗ. ಸಂಪತ್ತಿಗೆ ನಮ್ಮಲ್ಲಿ ಕೊರತೆ ಇರಲಿಲ್ಲಾ. ನನಗೆ ಒಬ್ಬ ಅಣ್ಣ, ಇಂಜಿನೀಯರ್, ತುಂಬಾ ಮೃದು ಸ್ವಭಾವದವನು. ಅವನಿಗೆ ಇನ್ನೊಬ್ಬ ಸಿರಿವಂತ ಹುಡುಗಿಯೊಡನೆ ಮದುವೆ ಮಾಡಿದರು. ಮದುಮಗಳು, ಅಂದರೆ ನನ್ನ ಅತ್ತಿಗೆ ತುಂಬಾ ಸುಂದರಿ ಆಗಿರಲಿಲ್ಲಾ. ಆದರೆ, ತುಂಬ ಒಳ್ಳೆಯವಳಾಗಿದ್ದಳು. ಅಣ್ಣ-ಅತ್ತಿಗೆ ಅಮೆರಿಕಾ, ಸಿಂಗಾಪೂರ, ಸ್ವಿಟ್ಜರ್‌ಲ್ಯಾಂಡ್ ಅಂತ ಮಧುಚಂದ್ರ ಮುಗಿಸಿ ಬಂದರು. ಮದುವೆಯ ಮೊದಲು ಏನು ಕರಾರು ನಡೆದಿತ್ತೋ ನನಗಂತೂ ತಿಳಿಯದು. ಅತ್ತಿಗೆ ಬಸಿರೆಂದು ಮಾತ್ರ ನನಗೆ ಗೊತ್ತಿತ್ತು. ಪ್ರೀತಿಯ ಮಳೆಗರೆಯುವ ನನ್ನ ಅಪ್ಪ, ಅಮ್ಮ ಅತ್ತಿಗೆಯ ಪಾಲಿಗೆ ರಾಕ್ಷಸರಾಗಿದ್ದರು. ಹೊಟ್ಟೆಯಲ್ಲಿ ತಮ್ಮ ವಂಶದ ಕುಡಿ ಇರುವುದನ್ನೂ ಮರೆತು ಅವಳನ್ನು ಹಿಂಸಿಸತೊಡಗಿದ್ದರು. ಒಂದು ರಾತ್ರಿ ಒಂದು ಸಮಾರಂಭ ಮುಗಿಸಿ ಮನೆಗೆ ಬರುವಾಗ ಅತ್ತಿಗೆ ನರಳುವುದು ಕೇಳಿಸಿತು. ಹಿರಿಯರಿಗೆ ಎದುರು ಮಾತಾಡದೇ ಬೆಳೆದ ನನಗೂ, ನನ್ನ ಅಣ್ಣನಿಗೂ ಅಪ್ಪ, ಅಮ್ಮನ ನಡತೆ ನುಂಗಲಾರದ ತುತ್ತಾಗಿತ್ತು. ಸೀದಾ ಅತ್ತಿಗೆಯ ಕೋಣೆಯನ್ನು ಪ್ರವೇಶಿಸಿದೆ. ರಕ್ತದ ಮಡುವಿನಲ್ಲಿ ಬಿದ್ದಿದ್ದರು, "ಅತ್ತಿಗೆ" ಅಂತ ಕೂಗಿ ಅವರ ಪಕ್ಕಕ್ಕೆ ಹೋದೆ.

"ಅಂಬರೀಶ ನನ್ನ ಮಗುವನ್ನು ಕೊಂದು ಬಿಟ್ಟರು," ಅಂದರು.

ಅವರಿಂದ ತಿಳಿದುದು ಇಷ್ಟು. ಅವಳನ್ನು ಜೋರಾಗಿ ನೂಕಿದ್ದರು, ಅವಾಗ ಅತ್ತಿಗೆ,

"ಬೇಡ, ನನ್ನ ಹೊಟ್ಟೆಯಲ್ಲಿ ನಿಮ್ಮ ವಂಶದ ಕುಡಿ ಇದೆ" ಅಂದ್ರಂತೆ.

"ಅದೂ ನಮಗೆ ಬೇಕಾಗಿಲ್ಲ, ನಮ್ಮ ಮಗನಿಗೆ ಇನ್ನೊಂದು ಮದುವೆ ಮಾಡಿ ಹುಟ್ಟಿಸಿಕೊಳ್ಳುತ್ತೀವಿ. ನಿನ್ನ ಹೊಟ್ಟೆಯಲ್ಲೇ ಬೆಳೀಬೇಕು ಅನ್ನುವ ಅಗತ್ಯ ನಮಗಿಲ್ಲಾಂತ ನಮ್ಮ ಅಪ್ಪ ಅವರ ಹೊಟ್ಟೆ ಮೇಲೆ ಒದ್ದರಂತೆ, ರಕ್ತಸ್ರಾವವಾಗುವುದನ್ನು ಖಾತ್ರಿ ಮಾಡಿ ಹೊರಗೆ ಹೋಗಿದ್ದರು". ರಾತ್ರಿ ನಾನು ಅತ್ತಿಗೆ ಪಕ್ಕಕ್ಕೆ ಕುಳಿತಿದ್ದೆ. ಅಣ್ಣನನ್ನು ಅಪ್ಪ ಕೆಲಸದ ಮೇಲೆ ಬೇರೆ ಊರಿಗೆ ಕಳುಹಿಸಿದ್ದರು. ರಾತ್ರಿ ನನಗೆ ಯಾವಾಗ ಕಣ್ಣು ಹತ್ತಿತ್ತೋ, ಗೊತ್ತಿಲ್ಲಾ, ಅತ್ತಿಗೆಯ ಚೀರಾಟ ಕೇಳಿ ಕಣ್ಣು ಬಿಟ್ಟೆ, ಸೀಮೆಎಣ್ಣೆ ಹಾಕಿ ಅತ್ತಿಗೆಯನ್ನು ಸುಡುತ್ತಾ ನಿಂತಿದ್ದರು. ನನ್ನ ಅಪ್ಪ ಹಾಗೂ ಅಮ್ಮ ನನಗೆ ಅತ್ತಿಗೆಯ ಹತ್ತಿರ ಹೋಗಲು ಬಿಡಲಿಲ್ಲ. ಅತ್ತಿಗೆಯ ಹೊಟ್ಟೆ ಒಡೆದು ಅರ್ಧ ಬೆಳೆದ ಶಿಶು ಹೊರಗೆ ಬಂತು, ಅವರು ಸತ್ತು ಹೋದರು.

ಹೆಣದ ತಲೆ ಸಿಡಿಯುವುದು ಗೊತ್ತಿತ್ತು. ಆದರೆ ಗರ್ಭ ಸಿಡಿಯುವುದನ್ನು ಕಣ್ಣಾರೆ ನೋಡಿದೆ. ಸುಟ್ಟವಾಸನೆ ಮನೆ ತುಂಬಿಕೊಂಡಿತ್ತು. ಮರುದಿನ ಆತ್ಮಹತ್ಯೆ ಎಂದು ದಾಖಲಾಯಿತು. ಮೊಸಳೆ ಕಣ್ಣೀರು ಸುರಿಸಿದರು ಅಪ್ಪ, ಅಮ್ಮ. ಅಣ್ಣ, ಅತ್ತಿಗೆಯನ್ನು ಸ್ಮಶಾನಕ್ಕೆ ಒಯ್ದು ಕೆಲಸ ಮುಗಿಸಿ ಬಂದವನು ನೇಣು ಹಾಕಿಕೊಂಡು ಸತ್ತು ಹೋದ. ಇಷ್ಟಾದರೂ ನಮ್ಮ ಅಪ್ಪ-ಅಮ್ಮನಿಗೆ ಎಳ್ಳಷ್ಟೂ ಬುದ್ಧಿ ಬಂದಂತಿರಲಿಲ್ಲಾ. ಅತ್ತಿಗೆ, ಅಣ್ಣ ತೀರಿಕೊಂಡು ಎರಡು ತಿಂಗಳಾಗಿರಲಿಲ್ಲಾ. ನನ್ನ ಮದುವೆಯ ಮಾತುಕತೆ ನಡೆಯತೊಡಗಿತು. "ಇಂಥ ರಾಕ್ಷಸರಿಗೆ ಬುದ್ಧಿ ಕಲಿಸಬೇಕು, ಅವರ ವಂಶ ನಿರ್ವಂಶವಾಗಲೆಂದು, ಈ ರೀತಿ ನನ್ನ ಲಿಂಗವನ್ನು ಬದಲಿಸಿಕೊಂಡೆ" ಅನ್ನುತ್ತಾ ಬಿಕ್ಕ ತೊಡಗಿದಳು ಅಂಬಾ, ಅಂಬರೀಶ್.

ಕುಸುಮಾ, ಏನೂ ಮಾತಾಡದೆ, ಬಾಚಿ ತಬ್ಬಿಕೊಂಡು 'ಇಲ್ಲಾ, ನೀನು ನನಗೆ ಯಾವತ್ತೂ ಅಂಬಾನೇ, ನಿನ್ನಂಥ ಗೆಳತಿ ಪಡೆಯಲು ನಾನು ಪುಣ್ಯ ಮಾಡಿರಬೇಕು' ಅಂತ ಕಣ್ಣೀರು ಸುರಿಸತೊಡಗಿದಳು.

ಕಿಟಕಿ ಪರದೆಯಡಿಯಿಂದ ರವಿ ಮೆಲ್ಲನೆ ಈ ವಿಚಿತ್ರ ಗೆಳೆತನದ ಮೇಲೆ ಬಂಗಾರದ ಹೊಂಬೆಳಕಿನ ಆರತಿಯನ್ನು ಬೆಳಗಿಸಲು ಅವಸರಿಸುತ್ತಿದ್ದಂತೆ, ಎಲ್ಲಿಂದಲೋ ಬಂದ ಒಂದು ಮೋಡ, ಈ ಸಸ್ತನಿ-ನಿಸ್ತನಿ ಗೆಳತಿಯರ ಆಲಿಂಗನದ ದೃಶ್ಯವನ್ನು ಕ್ಷಣಮಾತ್ರ ವೀಕ್ಷಿಸಲು ಬಯಸಿ, ಪರದೆ ಆಗಿ ನಿಂತಿತು . . . ! ?

# ಚೆನ್ನೀಮನೆ

● ಸುನಂದಾ ಹಾಲಭಾವಿ

ಬಾಗಲಕೋಟೆ ನೀರಲ್ಲಿ ಮುಳುಗುತ್ತದೆ ಎಂದು ಗೊತ್ತಿದ್ದರೂ ಕಾಸಿಗೆ ಕಾಸು ಕೂಡಿಸಿ ಕಟ್ಟಿಸಿದ ಮನೆಯನ್ನು ಬಿಟ್ಟು ಹೊರಡಲು ತಯಾರಾಗದ ಚೆನ್ನಿ ಕೊನೆಗೆ ತಳೆದ ನಿರ್ಧಾರ ಯಾವುದು ? ...

ಬಾಗಲಕೋಟೆ ನಗರ ಇಂದಲ್ಲ ನಾಳೆ ಭಾಗಶಃ ಕೃಷ್ಣಾರ್ಪಣೆಯಾಗಲಿದೆ ಎಂದು ಎಲ್ಲರಿಗೂ ಗೊತ್ತಿದ್ದರೂ ಆ ದಿನ ಯಾವಾಗ ಬರುತ್ತದೋ ಏನೋ, ಹಾಗಂತ ತಲೆಮೇಲೆ ನಮ್ಮದೇ ಆದ ಒಂದು ಸೂರಿಲ್ಲದೇ ಸಾಯಬೇಕೆ ? ಮುಂದೆ ಬಂದದ್ದು ಮುಂದೆ ಎಂದು ೨೫ - ೩೦ ವರ್ಷಗಳ ಹಿಂದೆಯೇ ಸ್ವಂತಮನೆ ಕಟ್ಟಿಕೊಂಡು ಅದರಲ್ಲೇ ಸತ್ತರಾಯಿತೆಂದುಕೊಂಡು ಆ ಮನೆ ಸುಖದಲ್ಲಿ ಮುಂದೆ ಬರಲಿರುವ ಮುಳುಗಡೆ ವಿಷಯ ಮರೆತುಬಿಟ್ಟವರೆಷ್ಟೋ !! ಅಂಥವರಲ್ಲಿ ಜೈನಪೇಟೆಯಲ್ಲಿ ತನ್ನದೇ ಆದ ಮನೆ ಕಟ್ಟಿಕೊಂಡು ಹೆಂಡತಿ, ಪುಟ್ಟ ಮಗನೊಂದಿಗೆ ಇರತೊಡಗಿದ್ದ ಈರಣ್ಣನೂ ಒಬ್ಬ. ಅವನು ಮನೆ ಕಟ್ಟಿದ್ದೇ ಒಂದು ಪವಾಡವೆನ್ನಬೇಕು. ಮಣ್ಣಿನ ಗೋಡೆಯ, ಒಡೆದ ಹೆಂಚಿನ, ಸೋರುವ ಬಾಡಿಗೆ ಮನೆಯಿಂದ ಬೇಸತ್ತ ಈರಣ್ಣ ಎಂಥ ಪ್ರಸಂಗವೇ ಬರಲಿ, ತನ್ನದೇ ಆದೊಂದು ಮನೆ ಬೇಕೆಂದು ಹಂಬಲಿಸಿ ದುಡ್ಡಿಗೆ ದುಡ್ಡು ಕೂಡಿಡುತ್ತ, ಇದ್ದ ಅರ್ಧ ಎಕರೆ ಹೊಲದಿಂದ ಬಂದ ಉತ್ಪನ್ನದಲ್ಲಿ ತಮ್ಮ ಮೂವರ ಹೊಟ್ಟೆ ತುಂಬಿಕೊಳ್ಳುತ್ತಿದ್ದನು. ತನ್ನ ಹೊಲದಲ್ಲಿ ಕೆಲಸ ಮಾಡಿ, ಗೌಡರ ಮನೆಯಲ್ಲಿ ಕೆಲಸ ಮಾಡಿ ಬಂದು ದಿನದ ಖರ್ಚಿನ ದುಡ್ಡು ಮಡದಿ ಚೆನ್ನಮ್ಮನ ಕೈಲಿಟ್ಟು ಉಳಿದದ್ದನ್ನು ಮನೆ ಕಟ್ಟಿಸಲೆಂದು ಬ್ಯಾಂಕಿನಲ್ಲಿಡುತ್ತ ಬಂದ. ಅಂತೂ ಅಲ್ಪ ಸ್ವಲ್ಪ ದುಡ್ಡು ಕೂಡಿಟ್ಟು ಮನೆ ಕಟ್ಟಿಸಲು ಶುರು ಮಾಡಿದಾಗ ಅವರಿಬ್ಬರ ಸಂತೋಷಕ್ಕೆ ಪಾರವೇ ಇರಲಿಲ್ಲ.

ಬಡವರೆಂದರೆ ಎಲ್ಲರಿಗೂ ಒಂದು ರೀತಿಯ ತಾತ್ಸಾರವೇ. ಮನೆ ಕಟ್ಟುವ ಗೌಂಡಿಗಳು ನಾಲ್ಕು ದಿನ ಬಂದರೆ ಎಂಟು ದಿನ ಬರುತ್ತಿರಲಿಲ್ಲ. ಹಾಗೆಂದು ಮನೆಗೆಲಸ ಹಿಂದುಳಿಯುವುದು ಬೇಡವೆಂದು ತಾವೇ ಗೌಂಡೀ ಕೆಲಸದವರಾಗಿ ಇಟ್ಟಂಗಿ ಏರಿಸುವುದು, ಉಸುಕು ಸಾಣಿಸುವುದು,

ಸಿಮೆಂಟು ಕಲಿಸಿ ಮೆತ್ತುವುದು, ನೀರುಣಿಸುವುದು ಹೀಗೆ ಅವರು ಅರ್ಧ ಬಿಟ್ಟುಹೋದ ಕೆಲಸಗಳನ್ನು ತನ್ನ ಹೆಂಡತಿಯ ಸಹಾಯದಿಂದ ಈರಣ್ಣನೇ ಮಾಡಿ ಮುಗಿಸುತ್ತಿದ್ದನು. ಅಂತೂ ಅರ್ಧ ತಮ್ಮಿಂದ, ಅರ್ಧ ಆಳುಗಳಿಂದ ಪೂರ್ತಿಯಾಗಿ ತಯಾರಾಗಿ ನಿಂತ ಮೂರು ಕೋಣೆಗಳ ಗಟ್ಟಿಮುಟ್ಟಾದ ಮನೆ ಕಾಣಬೇಕಾದರೆ ಅವರು ಪಟ್ಟಪಾಡು ಅಷ್ಟಿಷ್ಟಲ್ಲ. ಮನೆಯಲ್ಲಿ ಒಂದು ಸಣ್ಣ ಪೂಜೆ ಮಾಡಿಸಿ ಸ್ವಾಮಿಗಳಿಗೆ ಊಟ ಹಾಕಿ ಮನೆ ಪ್ರವೇಶ ಮಾಡಿದಾಗ ಅವರಿಗೆ ಸ್ವರ್ಗ ಮೂರೇ ಗೇಣು. ಈರಣ್ಣ ತನ್ನ ಮಡದಿಯ ಸಹಕಾರದಿಂದಲೇ ಮನೆಯಾಯಿತು ಎಂಬ ಕಾರಣದಿಂದ ಹೆಮ್ಮೆಯಿಂದ ಅದಕ್ಕೆ "ಚೆನ್ನೀಮನೆ" ಎಂದು ಹೆಸರಿಟ್ಟ. ಚೆನ್ನಮ್ಮ ನಾಚಿ ನೀರಾಗಿ ದೇವರ ಹೆಸರಿಡು ಎಂದು ಅಂಗಲಾಚಿದರೂ ಕೇಳಲಿಲ್ಲ.

ಹೊಸ ಮನೆಯ ಹುರುಪು ಕಡಿಮೆಯಾಗಿ ಹಲವಾರು ವರುಷಗಳು ಕಳೆಯುತ್ತಲೇ ಈರಣ್ಣ ಕ್ಯಾನ್ಸರಿಗೆ ಬಲಿಯಾದ. ಚೆನ್ನಮ್ಮ ತನ್ನ ತವರು ಮನೆಯವರ ಸಹಾಯದಿಂದ ಅಲ್ಲಿ - ಇಲ್ಲಿ ತೋರಿಸಿ ಔಷಧಿ ಕೊಡಿಸಿದರೂ ತಿಂಗಳುಗಟ್ಟಲೆ ಹಾಸಿಗೆ ಹಿಡಿದ ಈರಣ್ಣ ಗುಣವಾಗದೇ ಕೊನೆಯುಸಿರೆಳೆದಾಗ ಚೆನ್ನಮ್ಮನಿಗೆ ಮುಗಿಲು ಹರಿದು ಮೈಮೇಲೆ ಬಿದ್ದಂತಾಯಿತು. ಈಗ ಮನೆ ಜವಾಬ್ದಾರಿ ಚಿಕ್ಕವನಾದ ಮಗ ಅಡವೀಸ್ವಾಮಿಯ ಮೇಲೆ ಬಿದ್ದು, ತಾಯನ್ನು ನೋಡಿಕೊಳ್ಳುತ್ತ ಹೊಲದ ಜವಾಬ್ದಾರಿ ಹೊತ್ತು ಕೆಲಸ ಮಾಡತೊಡಗಿದ. ತಾನಿರುವುದರೊಳಗೇ ಮಗನಿಗೊಂದು ಹೆಣ್ಣು ತಂದು ಮದುವೆ ಮಾಡಿದರಾಯಿತೆಂದುಕೊಂಡು ತನ್ನ ತವರಿನವರಿಗೆ, ಊರ ಹಿರಿಯರಿಗೆ ಅದರ ವಿಚಾರ ಪ್ರಸ್ತಾಪ ಮಾಡಿಟ್ಟಳು.

ಮುಂದೆ ಒಂದೆರಡು ವರ್ಷ ಕಳೆಯುವುದರಲ್ಲಿಯೇ ಬಾಗಲಕೋಟೆ ಮುಳುಗಡೆ ವಿಷಯ ಬಹು ಚರ್ಚಿತವಾಗತೊಡಗಿ ತಾಯಿ - ಮಗ ಇಬ್ಬರೂ ಭಯಭೀತರಾಗತೊಡಗಿದರು. ದಶಕಗಳಿಂದ ಕೇವಲ ಚರ್ಚೆ, ಟೀಕೆ, ಟಿಪ್ಪಣಿಗಳಿಗೆ ಗ್ರಾಸವಾಗಿದ್ದ ಆಲಮಟ್ಟಿ ಜಲಾಶಯದ ಸುದ್ದಿ ಇಂದು ವಾಸ್ತವಿಕ ಸತ್ಯವಾಗಿತ್ತು.

ಫಲವತ್ತಾದ ಭೂಮಿ. ಅಮೂಲ್ಯ ಸಾಂಸ್ಕೃತಿಕ, ಧಾರ್ಮಿಕ, ಐತಿಹಾಸಿಕ ಸಂಗತಿಗಳಿಂದ ಶತಮಾನಗಳಿಂದಲೂ ಜನಜೀವನದ ಹಾಸುಹೊಕ್ಕಾಗಿದ್ದ ದೇವಾಲಯಗಳು, ಮಸೀದಿಗಳು ಹಾಗೂ ಇತರ ಧಾರ್ಮಿಕ ಕಟ್ಟಡಗಳು, ಜನರ ಬದುಕಿಗೆ ಸ್ಪಂದಿಸುತ್ತ ಸೂರು ನೀಡಿದ ಮನೆಗಳು ಇನ್ನು ಇತಿಹಾಸ ಕಾಲ ಗರ್ಭ ಸೇರಿ ಕೇವಲ ನೆನಪಾಗಿ ಉಳಿಯಲಿವೆ ಎಂದುಕೊಂಡಾಗ ಎಂಥ ಕಲ್ಲು ಹೃದಯದವರ ಕಣ್ಣೂ ಮಂಜಾಗುವುದು ಸಹಜವಾಯಿತು.

ಬಾಗಲಕೋಟೆ ಮುಳುಗಡೆಯಾಗುವ ಭಾಗದ ಜನರನ್ನು ನವನಗರಕ್ಕೆ ಸ್ಥಳಾಂತರಿಸಲು ಸರಕಾರ ಆದೇಶಿಸಿತು. ಸರಕಾರ ಕೇಳಿದ ವಿವರಣೆ ನೀಡಿ, ಬೇಕಾದ ಕಾಗದ ಪತ್ರಗಳನ್ನು ಒದಗಿಸಿ, ಪರಿಹಾರ ಧನಕ್ಕೆ ಸಹಿ ಮಾಡಿ ಸಮರೋಪಾದಿಯಲ್ಲಿ ಜನರೆಲ್ಲ ಗಂಟು ಮೂಟೆ ಕಟ್ಟತೊಡಗಿದರು. ಊರಿನ ಒಂದೊಂದೇ ಭಾಗ ಜಲಾವೃತವಾಗತೊಡಗಿತು.

ಅಡವೀಸ್ವಾಮಿ ಹೊರಗಿನಿಂದ ಒಳಬರುತ್ತಲೇ, 'ಇವತ್ತ ಆ ಹೊಸಾ ಪ್ಯಾಟ್ಯಾಗಿನ ಐದಾರು ಮನೆ ಜನ ಟ್ರಕ್ಕಿನಾಗ ಸಾಮಾನು ಹೇರಿಕೊಂಡು ಹೋದ್ರು. ಹಿಂದಿನಮನಿ ಶೆಟ್ರು ತಮ್ಮ ಬೀಗರ ಊರಿಗೆ ಹೋದ್ರು. ಹಳೇಪ್ಯಾಟಿ ಜನಾನೂ ಊರ ಬಿಟ್ಟ ಹೊಂಟಾರಂತ. ನಾವೂ ಇಲ್ಲೇ ನಿಂತು ಏನು ಮಾಡೂದೈತಿ ? ಪರಿಹಾರದ ದುಡ್ಡಿಗೆ ಸಹಿ ಮಾಡಿ ಬಂದೇನಿ, ನಾವೂ ಹೋಗಿ ಬಿಡೂನು' ಎಂದು ಹೇಳುತ್ತ ಬಂದ.

ಮಗನ ಮಾತನ್ನು ತಳ್ಳಿಹಾಕುತ್ತ, 'ಹೋಗವ್ರು ಹೋಗ್ಲಿ, ಅವ್ರಿಗ್ಯಾರು ಬ್ಯಾಡಂತಾರು ? ನಾ ಇಲ್ಲೇ ಇರುವಾಕೀನ. ಈ ಮನೀ ಬಿಟ್ಟು ನಾ ಎಲ್ಲೂ ಬರೂದಿಲ್ಲ' ಖಡಾಖಂಡಿತವಾಗಿ ನುಡಿಯತೊಡಗಿದಳು.

ಅವ್ವ ಹೀಗೇ ಹಟ ಮಾಡುತ್ತಾಳೆ, ಮುಂದೆ ತಾನೇ ಬರಲು ಒಪ್ಪುತ್ತಾಳೆ ಎಂದುಕೊಂಡು ಅವಳ ಮನಸ್ಸಿಗೆ ನಾಟುವಂತೆ ಮತ್ತೆ ಮತ್ತೆ ಹೇಳುತ್ತಲೇ ಬಂದ. 'ನಿನಗ ಗೊತ್ತೈತೇನವಾ ? ನೀರಿನ ಕೂಡ ಹಾವು, ಚೋಳು ಬರಾಕತ್ತಾವಂತ, ಕಿಲ್ಲಾದಾಗಿನ ಮೂರ್‍ನಾಕ ಮಂದೀಗೆ ಕಡದಾವಂತ, ಒಂದು ಸಣ್ಣ ಕೂಸು ಸತ್ತಿತಂತ ಮೊನ್ನೆ'. ಅವನ ಮಾತನ್ನು ಕೇಳಿ ಚೆನ್ನಮ್ಮ ಮುಗಿಲಿಗೆ ಕೈ ಮುಗಿದು, 'ಹೆಂಥಾ ವ್ಯಾಳ್ಯಾ ತಂದ್ಯೋ ಬಸವಣ್ಣಾ ? ಹಿಂಗೆಲ್ಲಾ ಕಾಡಬ್ಯಾಡ ಲಗೂನ ನಿನ್ನ ಪಾದಾ ಸೇರಿಸ್ಕೋ' ಎಂದು ಸೆರಗಿಗೆ ಕಣ್ಣೊರೆಸಿಕೊಂಡಳು.

ಮತ್ತೆರಡು ದಿನ ಬಿಟ್ಟು ಅಡವೀಸ್ವಾಮಿ ಅದೂ ಇದೂ ಮಾತನಾಡುತ್ತ, 'ಮನ್ನೆ ಕುಂಬಾರ ಓಣಿ ಶಿವಪ್ಪಣ್ಣ ಭೆಟ್ಟಿಯಾಗಿದ್ನು. ನಮ್ಮಪ್ಪ ಮನೀ ಉತಾರ ಎಲ್ಲಿಟ್ಟಾನೋ ಒಟ್ಟ ಸಿಗವಲ್ತು. ಸಾಯಂವ ಸತ್ತ, ನಮನ್ನ ಸಿಗಿಸಿಟ್ಟಾ. ಎಷ್ಟ ಹುಡುಕಿದ್ರೂ ಸಿಗವಲ್ತು ಅನ್ನಾಕತ್ತಿದ್ದ' ಎಂದು ಹೇಳಿ ಮಾತು ಮುಂದುವರೆಸುತ್ತ 'ಇನ್ನ ಸ್ವಲ್ಪ ದಿನದಾಗ ನೀರು ಜೈನ ಪ್ಯಾಟ್ಯಾಗ ಬರ್‍ತೈತಂತ. ಇಲ್ಲೀಯವರೂ ಊರು ಬಿಟ್ಟು ಹೊಂಟಾರು, ನಾವೂ ಲಗೂನ ಹೊಂಟರ ಛೊಲೋ, ಮುಂದ ಅಲ್ಲೆ ಸಂಗಮನಾಥ ಹೆಂಗ ನಡಸ್ತಾನೋ ಹಂಗ ನಡೀತೈತಿ' ಎನ್ನುತ್ತ ಮೆಲ್ಲನೆ ಮುಖ್ಯ ವಿಷಯಕ್ಕೆ ಬಂದನು.

'ಅಲ್ಲೋ ತಮ್ಮಾ, ನಮ್ಮ ಬುಡಕ್ಕೆ ಕೊಡ್ಲೀ ಇಟ್ಟರ ನಾವು ಬದುಕೂದು ಹೆಂಗ ? ಇದ್ದದ್ದ ಒಂದು ಗೇಣು ಹೊಲಾ, ಮತ್ತ ಕಷ್ಟಪಟ್ಟು ಕಟ್ಟಿಸಿದ ಈ ಮನಿ ಬಿಟ್ಟ ಹೆಂಗ ಹೋಗೂದಾಗತೈತಿ ?' ಅಳುತ್ತ ನುಡಿದ ಚೆನ್ನಮ್ಮನನ್ನು ಸಂತೈಸುತ್ತ, 'ಈ ಪರಿಸ್ಥಿತಿ ನಮಗಷ್ಟ ಬಂದೈತೇನು ? ಊರಿಗೆ ಊರ ಮುಣಗಾಕ ಹತ್ತೈತಿ, ಸುತ್ಲಿನ ೬೦ - ೭೦ ಹಳ್ಳಿ ಮುಣಗ್ಯಾವ ಇದ್ರಾಗ ನಮ್ಮದೊಂದ ಬ್ಯಾರೆಯೇನ ? ನನಗೂ ಅಳು ಒತ್ತರಿಸಿ ಬರ್‍ತೈತಿ ಖರೆ. ಇನ್ನೊಬ್ರನ್ನ ನೋಡಿಕೊಂಡು ಸಮಾಧಾನ ಮಾಡ್ಕೋಬೇಕು. ಮನೀ ಉತಾರ, ರೇಶನ್ ಕಾರ್ಡ, ಮತದಾರರ ಲಿಸ್ಟು, ಏನೇನ ಬೇಕಂತಾರ ಅವನ್ನೆಲ್ಲ ಕೊಟ್ಟ ಬಂದೀನಿ, ಸರಕಾರದಿಂದ ಪರಿಹಾರ ಬಂದ ಬರ್‍ತೈತಿ, ಹೆಂಗರ ನಡೀತೈತಿ, ನಾಳಿನ್ನ ನಾಳೆ ಸಾಮಾನ ಕಟ್ಟಿ ಚಕಡ್ಯಾಗ ಹಾಕಿ ಹೊಂಡೂ ತಯಾರಿ ಮಾಡೂನು' ಎನ್ನುವುದೇ ತಡ, ಎದೆ ಬಡಿದುಕೊಂಡು ಅಳತೊಡಗಿದ ಚೆನ್ನಮ್ಮ,

'ಅಡವೀಸ್ವಾಮೀ ಇದೇನ ಗತಿ ತಂದ್ಯೋ, ಅಯ್ಯೋ ಬಸವಣ್ಣಾ, ಇದೇನ ಮಾಡಿದ್ಯೋ ? ಇಷ್ಟರೊಳಗ ನನ್ನ ನಿನ್ನ ಕಡೆ ಒಯ್ಯಬಾರ್ದಾಗಿತ್ತೇನೋ ? ನನ್ನ ಗಂಡ ಬೆವರ ಸುರ್ಸಿ ಕಟ್ಟಿದ ಈ ಮನಿ ನೀರಾಗ ಮುಣಗೂದು ನಾ ಹ್ಯಾಂಗ ನೋಡ್ಲಿ ? ಮ್ಯಾಲ ಹೋಗಿ ಅಂವಗ ನಾ ಏನಂತ ಉತ್ರಾ ಕೊಡ್ಲಿ ?' ಅವಳ ರೋದನ ಮುಗಿಲು ಮುಟ್ಟಿತ್ತು. ಅವಳನ್ನು ಕಂಡು ಅಡವೀಸ್ವಾಮಿ ಕೂಡ ಅಳತೊಡಗಿದನು. ಆದರೂ ಸುಧಾರಿಸಿಕೊಂಡು,

'ನಮ್ಮ ಅನ್ನದ್ದು, ನಮ್ಮ ನೀರಿಂದು ಋಣ ಎಷ್ಟೆಷ್ಟು ಎಲ್ಲೆಲ್ಲಿ ಇರ್ತೈತೋ, ಅದನ್ನ ತಪ್ಪಸಾಕ ಬರಂಗಿಲ್ಲ. ನಮ್ಮಿಂದ ಇನ್ನೊಬ್ರಿಗೆ ಸುಖಾ ಆಗ್ತೈತಲ್ಲ ಅಷ್ಟ ಸಾಕು. ನಮ್ಮ ಈ ತ್ಯಾಗಕ್ಕೆ ಆ ಬಸವಣ್ಣಾ ಪ್ರತಿಫಲ ಕೊಟ್ಟ ಕೊಡ್ತಾನ' ಎಂದು ಸಮಾಧಾನಿಸಿದ.

'ನಿನಗಿದ್ದ ಭಂಡ ಧೈರ್ಯ ನನಗಿಲ್ಲೋ ಭಂಡ್ಯಾ, ನೀ ಹೇಳಾಂವ ಹೇಳ್ತಿ, ಈ ಮನಿ ಕಟ್ಟಬೇಕಾದ್ರ ನಾನು, ನಿಮ್ಮಪ್ಪ ಎಷ್ಟ ಕಷ್ಟಾ ಸೋಸೇವಿ ನನಗ ಗೊತ್ತು. ಆವಾಗ ನೀ ಇನ್ನ ಮಲೀ ಕುಡಿಯೂ ಕೂಸಿದ್ದಿ, ಈ ಮನೀ ಒಂದೊಂದು ಕಣದಾಗ ನನ್ನ ಗಂಡ ಇದ್ದಂಗ ಅನಸತೈತಿ, ಈ ಮನೀ ಒಂದೊಂದು ಕಲ್ಲು, ಒಂದೊಂದು ಇಟ್ಟಂಗ್ಯಾಗ ಅವನ ಶ್ರಮಾ ಐತಿ. ಅವನ ಬೆವರಿನಿಂದ ಈ ಮನಿ ನಿಂತೈತಿ. ನನ್ನತನಾ, ಕರುಳು ಅನ್ನೂದು ಈ ಮನಿ ತುಂಬ ತುಂಬೈತಿ. ಈ ಭಾವನಾ ಸುಡಗಾಡ ಆ ತಗಡಿನ ಶೆಡ್ಡಿನ್ಯಾಗ ಬರ್ತೈತೇನ ? ಈ ಮನಿ ಬಿಟ್ಟ ನಾ ಎಲ್ಲೂ ಬರಂಗಿಲ್ಲ. ಏನಾದದ್ದ ಆಗ್ಲಿ'

'ಅಳಬ್ಯಾಡವ್ವಾ, ನೀ ಅತ್ರ ನನಗ ಧೈರ್ಯ ಹೇಳವ್ರಾರು ? ಸಮಾಧಾನಾ ಮಾಡ್ಕೋ, ನಾಳೆ ವಿಚಾರಾ ಮಾಡೂನು. ಈಗ್ ಅನಕಾ ಮಲಕ್ಕೋ' ಎಂದು ಅವಳನ್ನು ಅಲ್ಲೇ ಚಾದರ ಹೊದೆಸಿ ಮಲಗಿಸಿದ. ಅವನ ಕಣ್ಣಿಂದ ನಿದ್ದೆ ಹಾರಿ ಹೋಗಿತ್ತು. ತನ್ನ ಹೊಲ - ಮನಿ, ಮುಂದಿನ ಭವಿಷ್ಯ ಶೂನ್ಯ, ಕರಾಳ ಕಾರ್ಗತ್ತಲು ಎನಿಸಿ ಎದೆಯೊಡೆದವನಿಗೆ ನಿದ್ದೆ ಹೇಗೆ ಬಂದೀತು ? ತೆರೆದ ಕಂಗಳಿಂದ ಸೂರು ದಿಟ್ಟಿಸುತ್ತ ಚಿಂತಾಕ್ರಾಂತನಾಗಿ ಮಲಗಿದವನಿಗೆ ಇದೀಗ ನುಡಿದ ಅವ್ವನ ಮಾತುಗಳು ಕಿವಿಯಲ್ಲಿ ಪ್ರತಿಧ್ವನಿಸಿದವು. ಅವಳು ಹೇಳುವುದೂ ನಿಜವೇ, ಅದರಲ್ಲಿ ತಪ್ಪೇನೂ ಇಲ್ಲ. ಸರಕಾರದವರು ನೀಡಿದ ಆ ತಗಡಿನ ಶೆಡ್ಡಿನಲ್ಲಿ ನನ್ನತನದ ಭಾವನೆ, ನನ್ನದೆಂಬ ಕರುಳು, ಪ್ರೀತಿ ಬರುತ್ತದೆಯೆ ? ಎಂದಿಗೂ ಸಾಧ್ಯವಿಲ್ಲ. ಹಾಗೆಂದು ಇಲ್ಲಿಯೇ ಇರುವುದಾಗುತ್ತದೆಯೇ ? ಅದೂ ಆಗದು. ಹೊರಗೆ ಎಲ್ಲ ಕಡೆಗೂ 'ಮುಳುಗಡೆ ಪ್ರದೇಶ' ಎಂದು ಬೋರ್ಡು ಹಾಕಿ ಹಳೇ ಮಾತಾಗಿದೆ. ಅಲ್ಲದೇ ಎಲ್ಲ ಕಡೆ ಸಾರಿ ಸಾರಿ ಹೇಳಿದ್ದಾರೆ. 'ಬೇಗ ಮನೆ ಖಾಲಿ ಮಾಡಿರಿ' ಅಂತ. ನೀರು ಬಂದು ಯಾವಾಗ ಬಾಗಿಲು ತಟ್ಟುತ್ತೋ ಗೊತ್ತಿಲ್ಲ. ನಾಳೆಯಾದರೂ ಹೋಗುವುದೇ, ಇಂದೇ ಎದ್ದುಬಿಟ್ಟರೆ ಒಳ್ಳೆಯದಲ್ಲವೇ ? ಎಂದು ವಿಚಾರ ಮಾಡುತ್ತಿದ್ದರೂ ಅವನಿಗೂ ಈ ಮನೆ ಬಿಟ್ಟು ಹೋಗಲು ಮನಸ್ಸಿಲ್ಲ. ಅಪ್ಪ - ಅವ್ವ ಹೊಟ್ಟೆ ಬಟ್ಟೆ ಕಟ್ಟಿ, ಕಾಸಿಗೆ ಕಾಸು ಕೂಡಿಟ್ಟು ಈ ಮನೆಯಾಗಲು ಎಷ್ಟು ಕಷ್ಟಪಟ್ಟಿದ್ದಾರೆಯೋ ಯಾರಿಗೆ ಗೊತ್ತು ? ಅವರ ಶ್ರಮದ ಫಲ, ಬೆವರಿನ ಫಲವಾಗಿ ಅವರ ವಿಶ್ವಾಸ - ಪ್ರೀತಿಯ

ಚಿಲುಮೆಯಾಗಿ ನಿಂತ ಈ ಮನೆ ತನ್ನದಾದಂತೆ ಆ ತಗಡಿನ ಶೆಡ್ಡು ಆದೀತೆ ? ನಾಳೆ ಇದು ನೀರಿನಲ್ಲಿ ಮುಳುಗಿದಾಗ ಅವ್ವ - ಅಪ್ಪನ ಮನಸ್ಸಿನ ಮೇಲೆ ಎಂಥ ಪರಿಣಾಮವಾದೀತು ? ತನಗಾದರೂ ಅದನ್ನು ಸಹಿಸಲಾದೀತೆ ? ಅಲ್ಲದೇ ವಯಸ್ಸಾದ ಅವ್ವನನ್ನು ಕಟ್ಟಿಕೊಂಡು ಅಲ್ಲಿ ಹೋಗಿ ಎಷ್ಟೆಲ್ಲ ಪರದಾಡಬೇಕಾಗುತ್ತೋ ಯಾರಿಗೆ ಗೊತ್ತು ? ಪರಿಹಾರಕ್ಕೆ ಅರ್ಜಿ ಹಾಕಿ ಕೂತರೆ ಅದು ಬಂದು ಬಿಡುತ್ತದೆಯೇ ? ಮೊನ್ನೆ ಕಿಲ್ಲೇದಾಗಿನ ಕಲ್ಲಪ್ಪ ಹೇಳುತ್ತಿದ್ದ,

'ಪರಿಹಾರ ಪಡೀಬೇಕಂದ್ರ ಮದ್ಲ ನಾವು ಲಂಚಾ ಕೊಡ್ಬೇಕು. ಒಂದು ವರ್ಷದ ಹಿಂದನ ಲಂಚಾ ಕೊಟ್ಟ ರಾಮಣ್ಣಗ ಆಫೀಸಿಗೆ ಹೋದಾಗೊಮ್ಮೆ ಅಲ್ಲ ಹೋಗ್ರಿ, ಇಲ್ಲ ಬರ್ರಿ, ಸಾಯೇಬ್ರಿಲ್ರಿ, ನಾಳೆ ಬರ್ರಿ, ನಾಡದ ಬರ್ರಿ, ಆ ಕಾಗದಾ ತಗೊಂಬರ್ರಿ, ಈ ಕಾಗದಾ ತಗೊಂಬರ್ರಿ ಅಂತ ಅಲಸಾಕ ಹತ್ತಿ ನಾಕು ತಿಂಗಳಾದುವಂತ. ನೀ ಏನ ಅನ್ನು ಅಡಿವೆಣ್ಣಾ, ನಾವಿಷ್ಟ ತ್ಯಾಗಾ ಮಾಡ್ತೀವೆಂದ್ರ ಯಾರಿಂದನೂ ನಮಗ ಸಹಕಾರ - ಅನುಕಂಪಾ ಸಿಕ್ಕಿಲ್ಲ ನೋಡು, ಮ್ಯಾಲಿನವರಂತೂ ಕೆಳಗಿಳಿದು ಬರ್ಲಿಲ್ಲಾ ನಮ್ಮ ಸುಕದುಕ್ಕಾ ಕೇಳಲಿಲ್ಲ. ನಮ್ಮ ಪರಿಸ್ಥಿತಿ ನೋಡವ್ರಿಗೆ ನಗೆಪಾಟಲಾಗೇತಿ' ಎಂದು ನೊಂದು ನುಡಿದಾಗ ಆತನೊಡನೆ ತಮ್ಮ ಕಣ್ಣು ಮಂಜಾಗಿದ್ದು ಸುಳ್ಳಲ್ಲ. ಆಯಿತು, ಅಲ್ಲಿ ಹೋಗಲೇಬೇಕು, ಇರಲೇಬೇಕು ಇದು ಕಹಿಸತ್ಯ, ಆದರೆ ಮುಂಬರುವ ಪರಿಸ್ಥಿತಿಯನ್ನು ಎದುರಿಸುವ ಧೈರ್ಯವೂ ಬೇಕಲ್ಲವೇ ? ಮಾನಸಿಕ ದ್ವಂದ್ವದಲ್ಲಿ ತೊಳಲಾಡುತ್ತಿರುವಂತೆಯೇ, ಅಡವೀಸ್ವಾಮಿಗೆ ಹಿಂದಿನ ಮನಿ ಹನುಮಣ್ಣನ ಮಾತುಗಳು ಪಾತಾಳಗರಡಿ ಬಿಟ್ಟು ಲಗ್ಗೆಯಿಟ್ಟವು.

'ಆ ಶೆಡ್ಡಿನ್ಯಾಗ ಏನೂ ವ್ಯವಸ್ಥಾ ಇಲ್ಲ ಅಡಿವೆಣ್ಣಾ. ಬೈಲಕಡೆ ಹೋಗಬೇಕಂದ್ರ ನಾಕ್ ಕಿಲೋಮೀಟರ್ ದೂರ ಹೋಗ್ಬೇಕು. ನೀರಿಂದೂ ಏನೂ ವ್ಯವಸ್ಥಾ ಛಲೋ ಇಲ್ಲ, ಒಂದೆರಡು ಆಪೀಸು ಮಾಡ್ಯಾರ, ಮುಗದ ಹೋತು. ಹೋದಷ್ಟು ದಿವ್ಸ ಹೋಗ್ತಿದ್ದು, ನಾನೂ ಇನ್ನೂ ಸ್ವಲ್ಪ ದಿನಾ ಇಲ್ಲೇ ಇರ್ಲಿಲ್ಲ ನೋಡು'.

ನವನಗರಕ್ಕೆ ಹೋದವರು, ಹೋಗುತ್ತಲಿರುವವರು ಯಾರಿಂದಲೂ ಆಶಾದಾಯಕ ಮಾತುಗಳೇ ಇಲ್ಲ. ತನ್ನ ಹೊಲ - ಮನೆ ಪರಿಸರ ಬಿಟ್ಟು ಅಗಲುವುದು ಎಲ್ಲರಿಗೂ ನೋವಿನ ಸಂಗತಿ. ಬಲವಾಗಿ ಬೇರೂರಿ ನಿಂತ ಮಹಾವೃಕ್ಷವನ್ನು ಬುಡಸಹಿತ ಕಿತ್ತು ಬೇರೆಡೆ ನೆಟ್ಟಂತಾಗಿದೆ ಎಲ್ಲರ ಪರಿಸ್ಥಿತಿ. ಸ್ವಲ್ಪವಾದರೂ ಅಲ್ಲಿ ಅನುಕೂಲತೆಗಳನ್ನು ಮಾಡಿದ್ದರೆ ಅಷ್ಟೇ ಸಮಾಧಾನವಾಗುತ್ತಿತ್ತು. ಪರಿಸ್ಥಿತಿ ಹಾಗೂ ಇಲ್ಲ. ಎಷ್ಟು ಒರೆಸಿಕೊಂಡರೂ ಕೋಡಿಯಾಗಿ ಹರಿಯುತ್ತಿರುವ ಕಣ್ಣೀರನ್ನು ತಡೆಯಲು ವ್ಯರ್ಥ ಪ್ರಯತ್ನ ಮಾಡುತ್ತಿದ್ದ ಅಡವೀಸ್ವಾಮಿಗೆ ತಿಂಗಳ ಹಿಂದೆ ನವನಗರಕ್ಕೆ ಶೆಡ್ಡಿನ ಮನೆಗೆ ಹೋದ ಪಾರವ್ವತ್ತಿ ಹೇಳಿದ ಮಾತುಗಳು ಕಿವಿಯಲ್ಲಿ ಗುಂಯ್‌ಗುಟ್ಟಿದವು.

'ಏ ಏನ ಹೇಳಪಾ. ಇದೆಲ್ಲ ಬಡವರಿಗೆ ನೀಗೂದಲ್ಲ, ಅಲ್ಲೆಂತೂ ಏನೂ ಸಿಗೂದಿಲ್ಲ, ಕಾಯಿಪಲ್ಲೆ ಬೇಕಂದ್ರ ಎಂಟು ರೂಪಾಯಿ ಬಸ್ ಚಾರ್ಜ್ ಕೊಟ್ಟು ಇಲ್ಲೇ ಬರ್ಬೇಕು. ಮನೀ ಸಾಮಾನಿಗೆ ಹಾಕೂದಕಿಂತ ಹೆಚ್ಚು ರೊಕ್ಕ ಬಸ್ಸಿಗೆ ಹಾಕಬೇಕಾಗತೈತಿ ನೋಡು. ಒಂದು ಕೆ.ಜಿ. ಕಾಯಿಪಲ್ಲೆ ಬೇಕಂದ್ರ ಅದರ ಡಬಲ್ ರೊಕ್ಕ ಬಸ್ಸಿಗೆ ಬಡದು ಬರಬೇಕು. ಮದ್ಲ ಮದ್ಲ ಬಸ್ ಪಾಸು ಮಾಡಿದ್ಹಂಗ ಮಾಡಿದ್ರು, ಈಗ ಅದೂ ಹೋಗೈತಿ, ಅಲ್ಲದ ಪರಿಹಾರಂತೂ ದೊಡ್ಡ ಮಂದಿಗೆ, ರೊಕ್ಕಸ್ತರಿಗೆ ಲಕ್ಷಗಟ್ಟಲೇ ಸಿಕ್ಕೈತಿ, ನಮ್ಮಂಥಾ ಬಡೂವ್ರಿಗೆ, ಪಾಪಿಗೋಳ್ಗೆ ಸಾವಿರ ಸೈತ ಸಿಕ್ಕಿಲ್ಲ. ಇಲ್ಲೆ ಅದೀವೆಂತ ನಾನು ಇನ್ನೂ ಏನೇನ ಅನುಭವಿಸಬೇಕೋ ಆ ಬಸವಣ್ಣನ ಬಲ್ಲ' ಎಂದು ಕಣ್ಣೊರೆಸಿಕೊಳ್ಳುತ್ತ ನಡೆದಾಗ ತನ್ನ ಹೊಟ್ಟೆಯಲ್ಲಿ ಹೇಳದಂತಹ ಸಂಕಟವಾಗಿ, ನೋವು ತುಂಬಿದ ನಿಟ್ಟುಸಿರು ತನಗರಿಯದಂತೆಯೇ ಹೊರಬಿದ್ದಿತ್ತು. ಇದನ್ನೆಲ್ಲ ಅವ್ವನ ಮುಂದೆ ಹೇಳುವಂತೆಯೇ ಇಲ್ಲ.

ಇಲ್ಲಿಂದ ಹೋಗಬೇಕಾದದ್ದಂತೂ ಅನಿವಾರ್ಯ. ಬಂದದ್ದೆಲ್ಲ ಬರಲಿ, ಗೋವಿಂದನ ದಯೆ ಇರಲಿ ಎನ್ನುವಂತೆ ದೇವರ ಮೇಲೆ ಭಾರ ಹಾಕಿದರಾಯಿತು. ಹುಟ್ಟಿಸಿದ ದೇವರು ಹುಲ್ಲು ಮೇಯಿಸುತ್ತಾನೆಯೆ ? ಎಂದುಕೊಂಡು ಮನಸ್ಸಿಗೆ ಧೈರ್ಯ, ಸಮಾಧಾನ ತಂದುಕೊಳ್ಳಲು ಪ್ರಯತ್ನಿಸಿದ. ಅವ್ವನಿಗೆ ಹೇಗಾದರೂ ಮಾಡಿ ಸಮಜಾಯಿಸಿ ಹೇಳಬೇಕು. ನನ್ನ ಮಾತು ಕೇಳದಿದ್ದರೆ ಊರ ಹಿರಿಯರನ್ನು ಕರೆಸಿ ಬುದ್ಧಿ ಹೇಳಿಸಬೇಕು ಎಂದುಕೊಳ್ಳುತ್ತ ಮಗ್ಗಲು ಬದಲಾಯಿಸುವಾಗ ಅವ್ವನ ಮುಸು ಮುಸು ದನಿ ಕೇಳಿಸಿತು.

ನಸುಕಿನಲ್ಲಿ ತುಸು ಜೊಂಪು ಹತ್ತಿದಂತಾಗಿ ಎಚ್ಚರವಾದಾಗ ಅವ್ವ ಇನ್ನೂ ಮಲಗಿದ್ದು ಕಂಡು ಈಗಲೇ ಎಬ್ಬಿಸುವುದು ಬೇಡವೆಂದು ಮೆಲ್ಲನೇ ಒಳ ನಡೆದ. ಆದಷ್ಟು ಸಾಮಾನು ಕಟ್ಟಿ ತಯಾರಿ ಮಾಡಿಟ್ಟುಕೊಂಡರಾಯಿತೆಂದುಕೊಂಡು ಕಾಳು - ಕಡಿ, ಪಾತ್ರೆ - ಪಗಡಗಳನ್ನು ಗೋಣೀಚೀಲದಲ್ಲಿ ತುಂಬಿದ, ಎತ್ತಿಗಷ್ಟು ನೀರು ಕುಡಿಸಿ ಚಕ್ಕಡಿಗೆ ಹೂಡಿದ. ಬರಲಿರುವ ದಿನಗಳಲ್ಲಿ ಬರೀ ನೆನಪಾಗಿಯೇ ಉಳಿಯಲಿರುವ ಮನೆಯ ಮೂಲೆ ಮೂಲೆಯಲ್ಲೂ ದೃಷ್ಟಿ ಹಾಯಿಸಿ ಕಣ್ತುಂಬ ತುಂಬಿಕೊಂಡ. ಅವ್ವ - ಅಪ್ಪನ ಪ್ರೀತಿ - ವಿಶ್ವಾಸ, ನಂಬಿಕೆ - ಮಮಕಾರಗಳ ಸಾಕಾರಮೂರ್ತಿಯಾದ ಮನೆಯ ಪ್ರತಿಯೊಂದು ಗೋಡೆಗೂ ಹಣೆ ಹಚ್ಚಿ ನಮಸ್ಕರಿಸಿದ. ಮಣ್ಣಿನ ಕಣ ಕಣದಲ್ಲೂ, ತನ್ನತನ ತುಂಬಿಕೊಂಡ ಮನೆಗೆ ತುಂಬಿದ ಕಂಗಳಿಂದ ಕೊನೆಯ ನಮಸ್ಕಾರ ಹೇಳಿ ಅವ್ವನನ್ನು ಎಬ್ಬಿಸಲು ಬಂದನು.

'ಯವ್ವಾ, ಯವ್ವಾ ಯೋಳಾಗೇತಿ ಏಳು, ಒಂದೆರಡು ಚರಿಗೀ ಜಳಕಾ ಮಾಡಿ, ಪೂಜಾ ಮಾಡ್ಕೊಂಡು ಚಾ ಕುಡಿ, ಮುಂದಿಂದು ನೋಡೂಣಂತ' ಚೆನ್ನಮ್ಮ ಉತ್ತರಿಸಲಿಲ್ಲ. 'ಯವ್ವಾ, ಯವ್ವಾ' ಎಂದು ಅವಳ ಕೈ ಹಿಡಿದು ಅಲುಗಿಸಿದವನ ಕೈಯಿಂದ ಅವಳ ಕೈ ಜಾರಿ ಧೊಪ್ಪನೆ ಕೆಳಗೆ ಬಿತ್ತು. ಮರುಕ್ಷಣವೇ 'ಯವ್ವಾ' ಎಂದು ಅವನು ಭೀಕರವಾಗಿ ಕಿರುಚಿದ್ದು "ಚೆನ್ನೀಮನೆ"ಯ ಮೂಲೆಮೂಲೆಯಲ್ಲಿ ಮಾರ್ದನಿಗೈಯಿತು.

# ಯುಗಾದಿ

● ಎಸ್. ಹೆಚ್. ರೆಡ್ಡಿ

ಅಂದು ಯುಗಾದಿ. ನಾಡಲ್ಲೆಲ್ಲಾ ಹಬ್ಬದ ಸಡಗರ. ಹಿಂದೂಗಳಿಗೆ ಹೊಸ ವರ್ಷದಾರಂಭ. ಬೇವಿನ ಕಹಿ ಮರದಲ್ಲೂ ಹೂ ಅರಳಿ ಸುಗಂಧ ಬೀರೋ ಕಾಲ. ಎಲ್ಲರೂ ಅಭ್ಯಂಜನ ಸ್ನಾನ ಮಾಡಿ ಜೀವನದ ಕಷ್ಟ - ಸುಖಗಳನ್ನು ಬೇವಿನ ಹೂ ಹರಿದು ಬಾಳೆ ಬೆಲ್ಲ ಹಾಲು ತುಪ್ಪ ಸೇರಿ ಮಾಡಿದ ರಸಾಯನವನ್ನು ದೇವರ ಮುಂದಿಟ್ಟು ಪೂಜೆಗೈದು ಅದನ್ನ ಸೇವಿಸಿ ಆ ವರ್ಷಾರಂಭದ ಹೊಸ ವಸ್ತುಗಳೊಂದಿಗೆ ಹೊಸ ವರ್ಷದ ಹೊಸ ಚೈತನ್ಯ ತುಂಬಿಕೊಂಡು ಹೊಸ ಕಾರ್ಯಾರಂಭಗೊಳ್ಳುವ ಸುದಿನ ಯುಗಾದಿ.

ಎಲ್ಲರಂತೆ ಯುಗಾದಿ ದೊಡ್ಡ ಮನೆಯಲ್ಲಿಯೂ ನಡೆದಿತ್ತು. ಇವರಲ್ಲೂ ಹೊಸ ವರ್ಷಾರಂಭಕ್ಕೆ ಭರ್ಜರಿಯಾದ ಸ್ವಾಗತವೇ ಕೋರಿದ್ದರು. ತಂದೆ - ತಾಯಿ ಮೂವರು ಮಕ್ಕಳು ಇಬ್ಬರು ಸೊಸೆಯಂದಿರು ಮನೆ ತುಂಬಾ ಮೊಮ್ಮಕ್ಕಳ ಗದ್ದಲವೇ ಸಾಕಾಗಿತ್ತು. ಮನೆಯವರ ಮನರಂಜನೆಗೆ ಬೇರಾವ ನಂಟರೂ ಬೇಕಾಗಿರಲಿಲ್ಲ. ಹಿರಿಯ ಮಗ ರುದ್ರಪ್ಪನ ಕೈಗೆ ಮನೆಯ ಜವಾಬ್ದಾರಿ ಕೊಟ್ಟು ಮೊಮ್ಮಕ್ಕಳ ಆಟದಲ್ಲೇ ತೊಡಗಿದ್ದರು ತಂದೆ. ಎರಡನೆಯವಗೆ ಕನಸಲ್ಲೂ - ಮನಸಲ್ಲೂ ತೋಟದ ಕೆಲಸವೇ .... ತನಗೊಬ್ಬ ಪತ್ನಿ ಇದ್ದಾಳೆಂಬುದು ತಿಳಿಯುತ್ತಿದ್ದುದು ಬುತ್ತಿ ಹೊತ್ತು ತಂದು ಅವಗೆ ಉಣಬಡಿಸಲು ಅವನ ಮುಂದೆ ಕುಳಿತಾಗಲೇ ತಿಳಿದಿದ್ದು ತನಗೂ ಸುಂದರ ಪತ್ನಿ ಇದ್ದಾಳೆಂದು ! ಮದುವೆಯಾದ ಎರಡು ವರ್ಷದಲ್ಲಿ ಅವನ ಅಪೂರ್ವ ಪ್ರೀತಿಯ ಕಾಣಿಕೆಯಾಗಿ ಒಂದು ಗಂಡು ಮಗುವಾಗಿದ್ದು, ಅವನ ಮುದ್ದಿಸಲೂ ಸಮಯವೆಲ್ಲಿ ? 'ಬೇಸಾಯ ನೀನು ಸಾಯ ನಿನ್ನ ಮನೆ ಮಕ್ಕಳೆಲ್ಲಾ ಸಾಯ' ಎಂಬ ಗಾದೆ ಇವನ ಮಾತಿಗೆ ನಿಜವಾಗಿತ್ತು. ಇವನ ಹಿಂಬಾಲಕ ಮೂರನೆಯವನ ದೇಹದಲ್ಲಿರುವ ಯಾವುದೋ ಕಾಯಿಲೆ ಅವನ ಕಿತ್ತು ತಿನ್ನುತ್ತಿತ್ತು. ಆದ್ದರಿಂದ ಅವನಿಗೆ ಯಾರೂ ಹೆಣ್ಣು ಕೊಡಲು ಮುಂದೆ ಬಂದಿರಲಿಲ್ಲ.

ದೇವಾಲಯದಲ್ಲಿ ಎಲ್ಲ ಅಚ್ಚರಿಯಿಂದ ನೋಡುತ್ತಿದ್ದರು. ಬಿಳಿಯ ಬನಿಯನ್ ಬಿಳಿ ಪಂಚೆಯಲ್ಲಿ ದೇವರ ಪೂಜೆಗೆ ಬಂದಿದ್ದ, 'ಇವತ್ತು ಸೂರ್ಯ ಪಶ್ಚಿಮಕ್ಕೆ ಹುಟ್ಟಿಧಾಂಗೆ ಕಾಣುತ್ತೆ' ನಗುತ್ತಾ ನುಡಿದ ಅರ್ಚಕರು ಪೂಜೆ ಮಾಡಿಕೊಟ್ಟರು. ಮನೆಯಲ್ಲೂ ಹಿರಿಯರ

ಪೂಜೆ, ದೇವರ ಪೂಜೆ ಮಾಡಿದ್ದ. ಬಹುಶಃ ಇದೇ ನನ್ನ ಕೊನೆಯ ಪೂಜೆ ಎಂಬುದು ತಿಳಿದಿದ್ದರೆ ಪೂಜೆ ಮಾಡುತ್ತಿರಲಿಲ್ಲವೇನೋ ...... ಯುಗಾದಿಯ ಬೇವಿನ ರಸಾಯನದಲ್ಲಿ ಕಹಿ ಜಾಸ್ತಿಯಾಗಿತ್ತು. ಅವನ ಮುಖ ನೋಡಿದಾಕ್ಷಣ ಹೇಮ ಸಕ್ಕರೆ ಹಾಕಿ ಸರಿಪಡಿಸಿದಳು. ಆದರೆ ಬಾಳೇ ಕಹಿಯಾದಾಗ ....... ಎಲ್ಲಿಂದ ಸಕ್ಕರೆ ತರುವುದು.

'ಅಮ್ಮಾ ನನಗೆ ಖರ್ಚಿಗೆ ನೂರು ರೂಪಾಯಿಗಳು ಬೇಕು'.

ಸಿರಿಯಪ್ಪನ ಮಾತು ತಾಯಿ ರಂಗವ್ವಗೆ ಅಚ್ಚರಿ ಮೂಡಿಸಿತ್ತು. ಎಂದೂ ಯಾವತ್ತೂ ದುಡ್ಡು ಕೇಳದ ಮಗ ಮದುವೆಯಾದಾಗಿನಿಂದ ಈಚೆಗೆ ನಾಲ್ಕಾರು ಸಲ ಕೇಳಿದ್ದಲ್ಲದೆ ಕೊಡದೇ ಇದ್ದುದಕ್ಕೆ ಜಾತ್ರೆಯಲ್ಲಿ ಹೋರಿಯನ್ನು ಮಾರಲು ವ್ಯಾಪಾರ ಹಚ್ಚುವಷ್ಟು ಮುಂದುವರೆದಿದ್ದ. ಜೀವನದಲ್ಲಿ ಪಕ್ಕದ ಚಳ್ಳಕೆರೆಗೆ ಹೋಗಿದ್ದು ಒಂದೋ ಎರಡೋ ಸಾರಿ. ಒಂದು ಸಿನಿಮಾ, ನಾಟಕ ಊಹುಂ ! ಇದ್ಯಾವುದೂ ಇಲ್ಲ. ಅವನೂ ಕೇಳುತ್ತಿರಲಿಲ್ಲ. ಇವರೂ ಕಳಿಸುವ ಗೋಜಿಗೆ ಹೋಗಿರಲಿಲ್ಲ. ಕಾರಣ ಹಿರಿಯವ ರುದ್ರಪ್ಪ ಬುದ್ಧಿವಂತ ಎಲ್ಲ ವ್ಯವಹಾರ ಮಾಡಿಕೊಂಡು ಬರುತ್ತಾನೆ. ಬೆಂಗಳೂರಿನ ತನಕ ತಾನೇ ಈರುಳ್ಳಿ ಹಾಕಿಕೊಂಡು ಹೋಗಿ ಮಾರಿಕೊಂಡು ಬರುವಷ್ಟು. ಅಂಥದರಲ್ಲಿ ಇವನನ್ನು ಜನರ ನಡುವೆ ಬಿಟ್ಟರೆ .... ಅವನಿಗೆ ಅದೂ ಇದೂ ಅಂತ ತಲೆಕೆಡಿಸಿ ಬಿಡುತ್ತಾರೆ. ಅವನಿಗೆ ಮುಂಗೋಪ ಜಾಸ್ತಿ, ಆದ್ದರಿಂದ ಹೊರಗಿನ ಪ್ರಪಂಚದ ಅರಿವೇ ಇಲ್ಲದಂತಾಗಿ ಬೆಳೆದು ಬಿಟ್ಟಿದ್ದ. ತಾನು ಕೇಳಿದ್ದು, ಅಂದುಕೊಂಡ ಕೆಲಸ ಮಾತ್ರ ಅಂದುಕೊಂಡಂತೇ ಆಗಬೇಕು. ಆಗದಿದ್ದಾಗ ಮಾತ್ರ ತಾನು ಏನು ಮಾಡುತ್ತೀನಿ..... ಮುಂದೇನು...... ಇದರ ಪರಿಣಾಮ...... ಏನಾಗಬಹುದು ಎಂದು ಯೋಚಿಸುತ್ತಿರಲಿಲ್ಲ. ಯೋಚಿಸುವದು ಎಲ್ಲಿಂದ ಬರಬೇಕು ಪಾಪ.

'ನಿಂಗ್ಯಾಕೋ ದುಡ್ಡು ? ಎಲ್ಲಾ ಇವಳಿಂದಲೇ..... ಇವಳ ಕಟ್ಟಿಕೊಂಡ ಮೇಲೆ ನೀನು ಹೀಗಾಡ್ತಿರೋದು'.

'ಅಮ್ಮಾ ಅವಳನ್ಯಾಕೆ ಬೈತೀಯಾ..... ಈಗೇನು ದುಡ್ಡು ಕೊಡುತ್ತೀಯೋ ಇಲ್ಲವೋ ನೆಟ್ಟಗೆ ಚಳ್ಳಕೆರೆಗೆ ಹೋಗೋದು ಗೊತ್ತಿಲ್ಲದ ಬಕರ ಕಣೋ.... ನೀನು, ನನ್ನತ್ರ ದುಡ್ಡಿಲ್ಲ' ಎಂದಳು ತಾಯಿ.

ಪತ್ನಿ ತೌರಲ್ಲಿದ್ದಾಗ ಅವಳನ್ನು ನೋಡಲು ಕಳಿಸಿದರೆ ಎರಡು ರೂಪಾಯಿ ಕೈಗೆ ಕೊಡುತ್ತಿದ್ದಳು. ದುಡಿಯೋ ಮಗ ಅಲ್ವಾ ಪತ್ನಿಗೆ ಹೂ ಕೊಡಲು ಅಲ್ಲದಿದ್ದರೂ ಬಸ್ಸಲ್ಲಿ ಹೋಗಿ ಬರುವಷ್ಟಾದರೂ ಕೊಡುತ್ತಿರಲಿಲ್ಲ.... 'ಹೆಚ್ಚು ದುಡ್ಡು ಕೊಡಬೇಡಮ್ಮ.... ದಿನಾ ಅದೇ ಹಟ ಹಿಡಿತಾನೆ' ಅಂತ ಬುದ್ಧಿವಂತ ಮಗ ಹೇಳಿದಂತೆ ಕೇಳಿದ್ದಳು. ತೌರಲ್ಲಿದ್ದಾಗಾದ್ರೂ ಪತ್ನಿ ಹತ್ತಿರ ಎರಡು ಸಿಹಿ ಮಾತು ಇಲ್ಲಾ. ಮಾವನು ಕೆಲಸ ಮಾಡುತ್ತಿದ್ದರೆ ಅಲ್ಲಿಗೆ ನಡೆದೇ

ಬಿಡುತ್ತಿದ್ದ, ವರ್ಷಕ್ಕೆ ಲಕ್ಷಾಂತರ ರೂಪಾಯಿಗಳ ಆದಾಯವಿರುವ ಮನೆಯಲ್ಲಿ ತನಗೆ ಅನುಭವಿಸುವ ಹಕ್ಕಿಲ್ಲ, ಪತಿಯ ದುಸ್ಥಿತಿಯನ್ನು ಯಾರ ಬಳಿ ಹೇಳುವುದು ಅವರನ್ನು ಎದುರಿಸೋ ಧೈರ್ಯವೆಲ್ಲಿಂದ ಬರಬೇಕು ? ಈಚಲ ಹಳ್ಳದಲ್ಲಿ ಎಮ್ಮೆ ಕಾಯುತ್ತಿದ್ದವಳೊಂದು ದಿನ ಮೈಯಲ್ಲಿ ಏನೋ ನೋವಾಗಿತ್ತು. ಭಯದಿಂದ ಅಮ್ಮನಲ್ಲಿ ತಿಳಿಸಿದಾಗ ಅವರಲ್ಲಿ ಸಂತಸ - ಆತಂಕಗಳೆರಡೂ ಉಂಟಾಗಿದ್ದವು. ಮಗಳು ವಯಸ್ಸಿಗೆ ಬಂದರೆ ಸೆರಗಲ್ಲಿ ಕೆಂಡ ಇದ್ದಂತೆ. ಅಲ್ಲದೇ ಹಿರಿಯ ಮಗಳ ಮದುವೆ ಮಾಡಿ ಒಂದು ವರ್ಷ ಮಾತ್ರವೇ ಆಗಿತ್ತು. ಅದರ ಸಾಲ ತೀರೋದರಲ್ಲಿ ಎರಡನೆಯವಳಾದ ಕುಸುಮ ಪುಷ್ಪವತಿಯಾಗಿದ್ದಳು. ಇನ್ನು ಕೊನೆಯವಳು ಇಂದೋ ನಾಳೆಯೋ ಎಂಬಂತೆ ಬೆಳೆದು ನಿಂತುಬಿಟ್ಟಿದ್ದಳು. ಗಂಡು ಸಂತಾನವಿಲ್ಲದ ಮನೆಯಲ್ಲಿ ಈ ಮೂರು ಹೆಣ್ಣುಮಕ್ಕಳನ್ನೇ ಗಂಡುಮಕ್ಕಳೆಂದುಕೊಂಡಿದ್ದರು. ಹೆಣ್ಣು ಎಂದಿದ್ದರೂ ಗಂಡನ ಮನೆಗೆ ಹೋಗುವವಳೇ. ಆದಷ್ಟು ಬೇಗ ಈ ಹೊರೆಯನ್ನು ಇಳಿಸಿಕೊಳ್ಳಬೇಕು ಎಂದು ಯೋಚಿಸುತ್ತಿದ್ದರು. ಕುಸುಮ ಮದುವೆಯ ಅರ್ಥವನ್ನು ಸರಿಯಾಗಿ ಅರಿಯದವಳಾಗಿದ್ದ ಮುಗ್ಧೆ, ಆಗ ತಾನೆ ಪ್ರಪಂಚದ ಕಡೆ ಕಣ್ಣರಳಿಸುತ್ತಿದ್ದಳು. ಅಷ್ಟರಲ್ಲೇ ಬಂದಿತ್ತು ದೊಡ್ಡ ಮನೆತನದ ಸಂಬಂಧ. ತನ್ನ ಮನೆಯ ಬಾಗಿಲಿಗೆ ತಂಗಿ ಲಕ್ಷ್ಮೀಯಾಗಿ ಬಂದಂತಾಗಿತ್ತು.

ಅಣ್ಣ ಕುಸುಮಳನ್ನು 'ತನ್ನ ಎರಡನೇ ಸೊಸೆಯಾಗಿ ಮಾಡಿಕೋತೀನಿ' ಎಂದಾಗ ರಂಗವ್ವ ಅವನಿಗೆ ಏನು ಹೇಳಬೇಕೊ..... ಸಂತಸದ ಒತ್ತಡದಲ್ಲಿ ಮಾತೇ ಹೊರಡಲಿಲ್ಲ.

'ಅವನು ಕೇಳಿದ್ರೆ ಸಾವಿರ, ಸಾವಿರ ಕೊಡ್ತೀಯಾ...... ನನಗೆ ನೂರು ರೂಪಾಯಿ ಇಲ್ಲಾ ಅಂತೀಯಾ..... ಬೋಳಿ ಮುಂಡೆ' ಎಂದು ಕೈಯಲ್ಲಿದ್ದ ನೀರಿನ ತುಂಬಿದ ತಂಬಿಗೆಯನ್ನೇ ಬೀಸಿದ, ಅದು ಗುರಿ ತಪ್ಪಿ ಪಕ್ಕದ ಕನ್ನಡಿಗೆ ಬಿತ್ತು, ಒಡೆಯಿತು. ಮನೆಯ ತುಂಬೆಲ್ಲಾ ಗಾಜಿನ ಚೂರುಗಳೇ...... ಎಲ್ಲರೂ ಮೂಕರಾಗಿ ನಿಂತಿದ್ದರು. ಮುಂದೆ ಉಸಿರೆತ್ತಿದರೆ ಅವರ ತಲೆ ಒಡೆಯುವುದು ಗ್ಯಾರಂಟಿ. ವಿಚಿತ್ರ ಕೋಪ ! ರುದ್ರಪ್ಪ ಅಲ್ಲಿಂದ ಯಾವಾಗಲೋ ಹೊರಟುಹೋಗಿದ್ದ.

ಹೊರಗಡೆ ತಂದೆ ಮಲ್ಲಯ್ಯ ತೋಟಕ್ಕೆ ಗಾಡಿ ಸಿದ್ದ ಮಾಡಿದ್ದ, ಸಿರಿಯಪ್ಪನ ನೋಡಿ 'ಬಾಪ್ಪಾ ಸಿರಿಯಾ ತೋಟಕ್ಕಾದರೂ ಹೋಗೋಣ' ಎಂದರು. ಹೊರಟೇಬಿಟ್ಟರು. ಇವೆಲ್ಲಾ ತೀರಾ ಸಾಧಾರಣವಾಗಿತ್ತು ಮನೆಯಲ್ಲಿ. ಆದ್ದರಿಂದ ಯಾರೂ ತಲೆಕೆಡಿಸಿ ಕೊಂಡಿರಲಿಲ್ಲ. ಕುಸುಮ ಮಾತ್ರ ಮೂಲೆಯಲ್ಲಿ ಮಗುವಿಗೆ ಹಾಲುಣಿಸುತ್ತಾ ಕುಳಿತಳು ದುಃಖ ನುಂಗಿ. ಅವರ ಎಣಿಕೆ ಹುಸಿಯಾಗಿತ್ತು. ಕುಸುಮಳ ಬಾಳಿಗೆ ಯುಗಾದಿ ಕಹಿಯನ್ನೇ ಕೊಟ್ಟಿತು. ಅಲ್ಪ - ಸ್ವಲ್ಪ ಉಳಿದ ಕನಸಿನ ಗೋಪುರಗಳು ಉರುಳಿದವು.

'ಸಿರಿಯಪ್ಪ ವಿಷ ಕುಡಿದಿದ್ದಾನೆ' ಸಿಡಿಲಿನಂತೆ ಅಪ್ಪಳಿಸಿತ್ತು ಸುದ್ದಿ. ಅದರ ಬೆನ್ನ ಹಿಂದೆಯೇ ಬೈಕ್‌ನಲ್ಲಿ ಅವನನ್ನು ಕರೆ ತಂದಿದ್ದರು.

ಉಪ್ಪು ತನ್ನಿ.......

ನೀರು ತನ್ನಿ.........

ಎಂದು ಯುವಕರು ಕೂಗತೊಡಗಿದ್ದು ಅದ್ಯಾರೊ ನೀರು ತಂದರು, ಉಪ್ಪು ಕೊಟ್ಟರು. ಗಂಡನ ವಿಕೃತ ರೂಪ ನೋಡಿದ ಕುಸುಮ ಚಿಟ್ಟನೆ ಚೀರಿದಳು, ಮುಂದೆಲ್ಲಾ ಕತ್ತಲಾಗಿತ್ತು. ರುದ್ರಪ್ಪ, ರಂಗಪ್ಪ ಹಿರಿಯ ಸೊಸೆಯರೆಲ್ಲಾ ಅರಚುತ್ತಿದ್ದರು, ಉಪ್ಪು ಕಲಸಿದ ನೀರನ್ನು ಕುಡಿ, ಕುಡಿ ಎಂದು ಅವನಿಗೆ ಕುಡಿಸಲು ಹೋದರೆ,

'ಥೂ..... ಅಣ್ಣಾ ನಾನು ಬದುಕೋಲ್ಲಾ.......'

ಹಿಂದೆಯೇ ಆಗಿತ್ತು ವಾಂತಿ, ದುರ್ನಾತ. ಹಬ್ಬದ ಸಿಹಿ ಅಡುಗೆ, ಮೊಸರು ಊಟ ಮಾಡಿದ್ದರಿಂದ ವಿಷ ತಕ್ಷಣ ಪ್ರತಿಕ್ರಿಯೆ ತೋರಿಸಿರಲಿಲ್ಲ. ಬಿಸಿಲೇರುತ್ತಿದ್ದಂತೆ ಒಳಗೆ ಸಹಿಸಲಾರದ ಸಂಕಟದಿಂದ ನಾಲ್ಕೈದು ಜನ ಹಿಡಿದರೂ ಅವನ ಒದ್ದಾಟ ತಡೆಯಲಾಗುತ್ತಿರಲಿಲ್ಲ.

'ನಿನ್ನನ್ನೇ ನಂಬಿದ್ನಲ್ಲೋ ಸಿರಿಯಾ...... ನಡು ನೀರಿಗೆ ಬಿಟ್ಯಲ್ಲೋ', ವೃದ್ಧ ರಂಗಪ್ಪನವರು ರೋಧಿಸಿದಾಗ,

'ನಿನಗೂ...... ನಿನಗೂ........ ಉಳಿಸಿದ್ದೀನಿ........ ಜೊ....... ಜೊತೆಗೆ ಬಂದು....' ಮಾತು ಬಿದ್ದೋಗಿತ್ತು. ಬೇರೊಂದು ಬೈಕ್‌ನಲ್ಲಿ ಚಳ್ಳಕೆರೆ ಆಸ್ಪತ್ರೆಗೆ ಕಳುಹಿಸಲಾಯಿತು.

ಅದೇನೋ ಹತ್ತಿ ಔಷಧಿಯಂತೆ, ಅರ್ಧ ಲೀಟರಂತೆ, ಹತ್ತಿ ಔಷಧಿಯೇ - ಅದೇನೋ ಸಿಂಬುಷ್........ ಅಂತಾರಲ್ಲಾ..... ಗುಸು ಗುಸು ಆರಂಭಗೊಂಡಿದ್ದು, ಉಳಿಯುವ ಖಾತ್ರಿ ಯಾರಲ್ಲೂ ಇರಲಿಲ್ಲ. ಅಳಿಯಗೆ ಚೆನ್ನಾಗಿಲ್ಲ ತುರ್ತಾಗಿ ಬನ್ನಿ ಎಂಬ ಸಂದೇಶದೊಂದಿಗೆ ಅತ್ತೆ - ಮಾವನವರನ್ನು ಕರೆಸಿಕೊಂಡಿದ್ದರು. ಅಲ್ಲಿಗೆ ಬಂದಾಗ ವಿಷಯ ತಿಳಿದಿತ್ತು. ಕಾರಣ..... ಎಂದು ಪ್ರಶ್ನಿಸಿದರೆ ಯಾರಲ್ಲೂ ಉತ್ತರವಿರಲಿಲ್ಲ. ದುಃಖದಲ್ಲಿ ಮಗಳ ಕೇಳುವುದು ಹೇಗೆ ? ಮನೆಯಲ್ಲಿ ಏನೇ ಗಲಾಟೆಯಾದರೂ ಅದು ಹೊರಗಿನವರಿಗೆ ತಿಳಿಯುತ್ತಿರಲಿಲ್ಲ. ಅದು ದೊಡ್ಡ ಮನೆಯ ಗುಟ್ಟು.

ತಲೆಗೆ ಎಣ್ಣೆ ಕೊಡುವಂತೆ ಪತ್ನಿಯ ಕೇಳಿದರಂತೆ, ಆಕೆ ಕೊಡಲಿಲ್ಲವಂತೆ. ಅದಕ್ಕೆ ಕುಡಿದಿರಬೇಕು ಎಂಬ ಸುದ್ದಿ ಹರಡತೊಡಗಿತ್ತು. ಮಗು ಅಳುತ್ತಿತ್ತು, ಯಾವುದರ ಪರಿವಿಲ್ಲ ಅವಳಿಗೆ, ಪ್ರಪಂಚವೇ ಶೂನ್ಯ. ನಾನೊಬ್ಬಳೇ ಇಲ್ಲಿ ಒಂಟಿ, ನಾನಾದ್ರೂ ಯಾಕಿರಬೇಕು ಹಾಳು

ಮನೆಯವನು ತಾನೊಬ್ಬನೇ ಕುಡಿಯೋ ಬದಲು ನಮ್ಮಿಬ್ಬರಿಗೂ ಕುಡಿಸಿ ಅವನು ಕುಡಿಯೋಕೆ ಏನಾಗಿತ್ತು ? ನಾನೇನು ತಪ್ಪು ಮಾಡಿದೆ. ಕುಡಿದು ಸಾಯೋನಿಗೆ.... ಯಾಕೆ ಬೇಕಿತ್ತು..... ಹೆಂಡ್ತಿ.... ಮಕ್ಕಳು..... ಯಾಕೆ ಬೇಕಿತ್ತು ? ಆ ಅವಳ ಪ್ರಶ್ನೆಗೆ ಉತ್ತರ ಕೊಡುರ್‍ರ್ಯಾರು ?

ಬದುಕೇ ಒಂದು ಪ್ರಶ್ನೆ ಮಗಾ.... ಉತ್ತರಾನಾ.... ನಾವೇ ಹುಡುಕೊಕಾಬೇಕು. ಎಲ್ಲಿಯ ಉತ್ತರ ? ಉತ್ತರ ಕೊಡುವವನು ಹೆಣವಾಗಿ ಮಾರನೇದಿನ ಸಾಯಂಕಾಲ ಮನೆಗೆ ಬಂದುಬಿಟ್ಟ. ಎಲೆಯ ಪೆಂಡೆಯಂತೆ ಶವದ ಪರೀಕ್ಷೆ ನಡೆಸಿದ್ದರಿಂದ ಎಲ್ಲಾ ಬ್ಯಾಂಡೇಜ್ ಕಟ್ಟಿ ಮುಖ ಮಾತ್ರ ಬಿಟ್ಟಿತ್ತು. ಸಂಬಂಧಿಕರು ನೋಡುವುದಕ್ಕಾಗಿ ತೇರಿಲ್ಲದ ಜಾತ್ರೆಯಾಯಿತು ಮನೆಯ ಮುಂದೆ. ಈ ಸಾವು ಎಲ್ಲರಿಗೂ ಒಂದು ಕಗ್ಗಂಟು, ಬಿಡಿಸಲಾಗದ ಕಗ್ಗಂಟು. ಸಾವಿನ ಬಗ್ಗೆ ಅನುಕಂಪ ತೋರಿಸುವವರೇ ಹೆಚ್ಚು. ಅವಳು ನೋಡುತ್ತಿದ್ದಾಳೆ. ಮೊಸಳೆ ಕಣ್ಣೀರು ಹರಿಸುವ ಹಗಲು ವೇಷಧಾರಿಗಳು. ಅವಳ ಕಣ್ಣಲ್ಲಿ ಒಂದ್ಹನಿಯೂ ಇಲ್ಲಾ. ಸಿರಿಯಪ್ಪನ ಮುಖ ನೋಡಿ ಅಳುವುದಕ್ಕಿಂತ ಅವನ ಪೂಜೆಗೈಯುವ ಕುಸುಮಳನ್ನು ನೋಡಿ 'ಅಯ್ಯೋ' ಎನ್ನದವರೇ ಪಾಪಿಗಳು.

'ಅಮ್ಮಾ ಕುಸುಮಾ...... ಅತ್ತು ಬಿಡಮ್ಮ..... ನಿನ್ನ ದುಃಖ ಏನೂ ಅಂತಾ...... ನಂಗೆ ಗೊತ್ತಮ್ಮ..... ಹಾ..... ನಂಗೊತ್ತಮ್ಮ ಮಗನ ಕೈಯಲ್ಲಿ ಚಿತೆಗೆ ಬೆಂಕಿ ಹಚ್ಚಿಸ್ಕೋ ಬೇಕಾದವ ನಾನು...... ಈಗ...... ಈಗ....... ನಾನೇ.......' ಚಿಕ್ಕಮಕ್ಕಳಂತೆ ಅತ್ತುಬಿಟ್ಟರು. ಆಗಲೂ ಇಲ್ಲಾ ನೀರು, ನಿಂತುಬಿಟ್ಟಳು ಕಲ್ಲಿನ ವಿಗ್ರಹದಂತೆ.

ಶವಸಂಸ್ಕಾರಕ್ಕೆ ಎಲ್ಲರೂ ಹೊರಟೇ ಬಿಟ್ಟರು. ಇಪ್ಪತ್ತೈದು ವರ್ಷಗಳಿಂದ ಬೆಳೆಸಿದ ಮಗ ಕೇವಲ ಅರ್ಧ ಗಂಟೆಯಲ್ಲಿ ಬೆಂಕಿಯಲ್ಲಿ ಉರಿದು ಬೂದಿಯಾಗಿ ಬಿಟ್ಟಿದ್ದ. ಹೊಗೆಯಾಡುತ್ತಲಿತ್ತು. ಇನ್ನೂ....... ಅಮವಾಸ್ಯೆಯ ರಾತ್ರಿ ತೋಟದ ಹುಣಸೇ ಮರಕ್ಕೆ ನೇಣು ಹಾಕಿಕೊಳ್ಳೋಕೆ ನೋಡುತ್ತಿದ್ದನಂತೆ, ಹೆಂಡ್ತಿ ಚೆನ್ನಾಗಿಲ್ಲದೇ ಮನೆಯಲ್ಲಿ ಮಲಗಿದ್ದಾಗ ರುದ್ರಪ್ಪ ಕೆಲಸದ ಆಳಿನ ಜೊತೆ ಆಸ್ಪತ್ರೆಗೆ ಕಳಿಸಿದಾಗ ನನ್ನ ಪತಿಯ ಹತ್ತಿರ ಏನೋ ಹೇಳಿ ಅತ್ತಿದ್ದಳಂತೆ. ಕಾಲ ಕಳೆದಂತೆ ಹೊಗೆಯೂ ಆರತೊಡಗಿತ್ತು. ದಿನಕಳೆದಂತೆ ಜನರು ಮರೆತೂ ಬಿಟ್ಟರು. ತನ್ನ ಕಣ್ಣ ಮುಂದೆಯೇ ಸೊಸೆಯ ಕುಂಕುಮ - ಬಳೆಗಳ ಒಡೆಸುವಾಗ ಕರುಳು ಕಿತ್ತಂತಾಯಿತು. ಇಂತಹವೇನೂ ಹೊಸದಲ್ಲ. ಮಲ್ಲಯ್ಯನಿಗೆ ಅದು ಸಂಪ್ರದಾಯ. ಹಿರಿಯರಿಂದ ಬಂದ ವಿಧಿವಿಧಾನ.

ನಿಲ್ಲಿ !

ಮಲ್ಲಯ್ಯ ನುಡಿದಾಗ ಸೇರಿದ ಹೆಂಗಳೆಯರೆಲ್ಲಾ ಅಚ್ಚರಿಯಿಂದ ನೋಡತೊಡಗಿದರು. 'ನೋಡಿ ಮಂಗ ಮುಂಡೇದು ಯೋಚಿಸ್ದೇ ಕುಡಿದು ಸತ್ತುಬಿಟ್ಟ. ಆದ್ರೇ.... ಆದ್ರೇ..... ನನ್ನ ಸೊಸೆ ಕೊರಗೋದು ನಾನು ನೋಡಲ್ಲಾ'.

ಮಲ್ಲಯ್ಯನವರೇ ನೀವು ಏನು ಮಾಡ್ತಿದ್ದೀರಾ..... ಅಂತಾ.....

'ಗೊತ್ತೈತಮ್ಮಾ..... ನಾನು........ ಸಂಪ್ರದಾಯ ಮುರೀತೀನಿ ಅಂತಾ. ತಾಳಿ ಮಗ ಕಟ್ಟಿದ್ದು, ಆದ್ರೇ ಈ ಅರಿಶಿಣ - ಕುಂಕುಮ ಹುಟ್ಟಿದಾಗಿನಿಂದ ಬಂದಿದ್ದಲ್ಲಾ'.

'ಏನೋ...... ದುಡ್ಡಿದ್ದೋರು ಏನು ಮಾಡಿದ್ರೂ ನಡೆಯುತ್ತೆ' ಎಂದು ಗೊಣಗುತ್ತ ನಡೆದರು, ಕುಸುಮ ನೋಡುತ್ತ ಕುಳಿತಿದ್ದಳು ಮೂಕಳಾಗಿ. 'ಯಾಕಮ್ಮ ಹಾಗೆ ನೋಡ್ತಿಯಾ ತಿಳಿದವರು ಇದನ್ನೇ ಹೇಳಿದ್ರು ನನಗೂ ನೀನು ನಗಬೇಕು...... ಹಾ....... ನೀ ಯಾರಿಗೂ ಹೆದರೋದು ಬೇಡ ಮೊದಲಿನಾಗೇ ಇರು'.

'ಈಗ...... ಈಗ....... ಹೂ ಮುಡಕೊಂಡ್ರೆ ಕುಂಕುಮ ಇಟಕೊಂಡ್ರೆ ಸಿರಿಯಪ್ಪ ಮಾವ ಬರತಾರಾ ? ಅವರೇ ಇಲ್ಲಾಗ ಇವೆಲ್ಲಾ ಯಾಕೆ ? ನಾನು ಯಾರಿಗಾಗಿ ಬದುಕಬೇಕು ?'

'ನಿನಗಾಗಿ ನಿನ್ನ ಮಗನಿಗಾಗಿಯಾದ್ರೂ ಬದುಕಲೇಬೇಕು' ಎಂದಾಗ ಕುಸುಮಳಿಗೆ ಅಂಧಕಾರದಲ್ಲಿ ಚಿಕ್ಕ ಬೆಳಕು ಕಾಣತೊಡಗಿತ್ತು. ಮುಖದಲ್ಲಿ ಆಶಾಭಾವನೆ ಮೂಡತೊಡಗಿತ್ತು. ಹಳ್ಳಿಯಲ್ಲಿ ಸಿನಿಮಾ ಬಂದಿತ್ತು. ಸುತ್ತಲೂ ಒಂದು ಡೇರೆ ಕಟ್ಟಿದ ಟೆಂಟ್‌ಲ್ಲಿ ಒಂದು ಚಿಕ್ಕ ಪರದೆಯ ಕಟ್ಟಿ ಅದರಲ್ಲಿ ಆಗಾಗ ಸುಗ್ಗಿ ಸಮಯಗಳಲ್ಲಿ ಎರಡು ರೂಪಾಯಿ ಶುಲ್ಕ ಪಡೆದು ಸಿನಿಮಾ ತೋರಿಸುತ್ತಿದ್ದರು. ಅಂತಹದೇ ಸಿನಿಮಾ ಬಂದಿತ್ತು. ಮನೆಯಲ್ಲಿ ಎಲ್ಲಾ ಸಿನಿಮಾ ನೋಡಲು ಹೊರಟಿದ್ದರು. 'ಕುಸುಮ ಬಾರೇ ಹೋಗೋಣ' ಎಂದಳು ಅಕ್ಕ. ಅದಕ್ಕೆ ಕುಸುಮ ನಯವಾಗಿ ನಿರಾಕರಿಸಿದಳು. 'ಅಲ್ಲಮ್ಮಾ ಈ ದೊಡ್ಡ ಮನೆಯಲ್ಲಿ ಒಬ್ಬಳೇ ಹೇಗಿರುತ್ತೀಯಾ... ? ನೀನು ಬಾ.....' ಎಂದು ರುದ್ರಪ್ಪ ಕರೆದರೂ ನಿರ್ಧಾರ ಬದಲಿಸಲಿಲ್ಲ. ನನ್ನ ಸರ್ವಸ್ವವೇ ಇಲ್ಲದಿರುವಾಗ ಜೀವ ಇಲ್ಲದ ಗೊಂಬೆಗಳದೇನು ಪ್ರಯೋಜನ ಎಂಬ ವಾದ ಅವಳಲ್ಲಿ.

ಇದ್ದಕ್ಕಿದ್ದಂತೆ ಯಾರೋ ಬಿಗಿಯಾಗಿ ಅವಳ ಹಿಡಿದಿದ್ದರು. ಪತಿ, ದೇವರಂತಹ ಮಾವನವರ ಅಗಲಿಕೆಯ ಆಘಾತದಲ್ಲಿದ್ದ ಕುಸುಮ ತನ್ನ ಶಕ್ತಿ ಎಲ್ಲಾ ಒಟ್ಟುಗೂಡಿಸಿ ತಳ್ಳಿದರೂ ಪ್ರಯೋಜನವಿರಲಿಲ್ಲ. ಕಿರುಚಲು ಬಾಯಿ ತೆರೆಯುವಷ್ಟರಲ್ಲಿ ಬಿದ್ದಿತ್ತು ಕೆನ್ನೆಗೆ ಪೆಟ್ಟು. ಕತ್ತಲಲ್ಲಿ ಯಾರು ? ಎಂಬುದು ಅರಿಯುವಷ್ಟರಲ್ಲಿ ಬಟ್ಟೆ ದೂರವಾಗಿತ್ತು. ಅವಳದೆಲ್ಲಾ ಕಳೆದುಕೊಂಡಿದ್ದಳು. ತಬ್ಬಿ ಹಾಗೇ ಅವಳ ಮೇಲೆ ಮಲಗಿಬಿಟ್ಟಿದ್ದ. ಕುಡಿದ ಶರಾಬು ವಾಸನೆ. ತನಗಾದ ನೋವು ತಡೆದುಕೊಳ್ಳಲಾಗದೇ ಕೆಳಗುರುಳಿಸಿ ಮೇಲೇಳುವಷ್ಟರಲ್ಲಿ ಕೈ ಬಿಗಿಯಾಗಿ ಹಿಡಿದು ಮತ್ತೆ ಎಳೆದಿದ್ದ.

ನಾನು ನಿನ್ನ ಮಾವ ರುದ್ರಪ್ಪ.

'ನೀನಾ...... ಥೂ....... ಚಂಡಾಲಾ......'

'ಏಯ್ ಬಾಯ್ ಮುಚ್ಚು ಮುಂಡೇದೇ......... ನನ್ನ ತಮ್ಮ ಸತ್ರು ಇನ್ನೂ ಕುಂಕುಮ, ಹೂ ಮುಡಕೊಂಡು ಯಾರನ್ನ ಮರಳು ಮಾಡಬೇಕೂಂತ..... ಹಾ...... ನನ್ನಪ್ಪ ಸತ್ತಾಗ ನಿನ್ನಪ್ಪಾ, ನಿನ್ನಮ್ಮಾ ಏನು ಹೇಳಿದ್ರು.

ಈ ಮನೆಯ ಯಜಮಾನ ನೀನು, ನೀನೇ ಅವಳಿಗೆ ದಿಕ್ಕು. ಯಾವ ಕೊರತೇನೂ ಬಾರದಂತೆ ನೋಡಿಕೊ ಅಂತ'. ಈಗ ಅವಳಿಗೆ ಆಗಸವೇ ಕಳಚಿದಂತಿತ್ತು. ದೀಪ ಬೆಳಗಿತ್ತು. ಎದುರಲ್ಲಿ ರುದ್ರಪ್ಪನ ಹೆಂಡತಿ ನಿಂತಿದ್ದಳು. ತನ್ನ ಗಂಡ ಬೇರೊಬ್ಬ ಹೆಣ್ಣಿನ ಜೊತೆ ಇರುವುದನ್ನು ಯಾರೂ ಸಹಿಸಲಾರರು. ಇಲ್ಲಿಯೂ ಅದೇ ಆಗಿತ್ತು. ಆದರೆ ಕುಸುಮಳಿಗೆ ಸವತಿಯ ಪಟ್ಟ ಕಟ್ಟಿದ್ದರು. ಕುಸುಮ ಎಷ್ಟೇ ಹೇಳಿದರೂ ಅವಳು ನಂಬುವ ಸ್ಥಿತಿಯಲ್ಲಿರಲಿಲ್ಲ.

ಕುಸುಮಳನ್ನು ಮನೆಯಿಂದ ಹೊರಗೆ ಹಾಕಿದ್ದರು. ಹಳ್ಳಿಯ ಹಿರಿಯರು ಏನೂ ಅರಿಯದ ಸ್ಥಿತಿಯಲ್ಲಿದ್ದರು. ಆಸ್ತಿಯಲ್ಲಿ ಬರುವ ಪಾಲನ್ನು ಕೊಡಿಸಿ ಕೊಡುವುದಾಗಿ ಧೈರ್ಯ ತುಂಬಿದರು. ಹುಚ್ಚು ತಗ್ಗಿನ ರಸ್ತೆಯಲ್ಲಿ ಎತ್ತಿನ ಗಾಡಿಯ ಚಕ್ರ ಉರುಳುತ್ತಿತ್ತು.

# ಆಘಾತ

● ರವಿಕಾಂತ ಎಂ. ಕೆ.

ಇತ್ತೀಚೆಗೆ ನಮ್ಮ ಬಿಡಾರವನ್ನು ಮೈಸೂರಿನಿಂದ ಕರಾವಳಿಯ ಕುಮಟಾಕ್ಕೆ ವರ್ಗಾಯಿಸಲಾಗಿತ್ತು. ಬಯಲು ಸೀಮೆಯಲ್ಲಿ ಹುಟ್ಟಿ ಬೆಳೆದ ನಾನು ಇಂದು, ಈ ದಟ್ಟ ಅರಣ್ಯ ಸಂಪತ್ತು, ಭೋರ್ಗರೆವ ಕಡಲು ಕಂಡು ಸ್ವರ್ಗವೇ ನನ್ನ ಕಣ್ ಎದುರು ಇರುವಂತೆ ಭಾಸವಾಗಿತ್ತು. ಮನಕ್ಕೆ ನಾನೆಷ್ಟು ಅದೃಷ್ಟಶಾಲಿ, ಈ ಮನೋಹರ ಪರಿಸರದಲ್ಲಿ ಇರುವಂತಾಯಿತಲ್ಲ ಎಂದು ತಂದೆಯನ್ನು ವರ್ಗಮಾಡಿದ್ದ ಅಧಿಕಾರಿಗಳಿಗೆ ಮನದಲ್ಲಿಯೇ ವಂದನೆ ಸಲ್ಲಿಸಿದ್ದೆ. ತಂದೆ ನೀರಾವರಿ ಇಂಜಿನೀಯರ್ ಆಗಿದ್ದರು. ಟ್ರಾನ್ಸ್‌ಫರ್ ಈ ಭಾಗಕ್ಕೆ ಆಗಿಹೋಗಿತ್ತು. ವರ್ಗಾವಣೆ ರದ್ದತಿಗೆ, ತಂದೆ ಇಲಾಖೆ ಮಟ್ಟದಲ್ಲಿ ಉನ್ನತ ಅಧಿಕಾರಿಗಳನ್ನು ಕಂಡು ಓಡಾಡಿದ್ದರು. ಸಫಲವಾಗಲಿಲ್ಲ. ಹತ್ತು ದಿನದ ಒಳಗೆ ಡ್ಯೂಟಿ ರಿಪೋರ್ಟ್ ಮಾಡಿಕೊಳ್ಳುವುದು, ಅನಿವಾರ್ಯವಾಗಿ ಹೋಯಿತು. ಸ್ಮಿತಾಳಿಗೆ ಈಗಷ್ಟೇ ಎಂ.ಬಿ.ಬಿ.ಎಸ್. ಸೀಟು ದೊರಕಿತ್ತು. ಅವಳೊಬ್ಬಳನ್ನು ಬಿಟ್ಟು ಹೋಗುವುದೇ ? ನೌಕರಿ ಹೋದರೂ ಸರಿಯೇ ! ಅದಂತೂ ಸಾಧ್ಯವಿಲ್ಲ. ನಮ್ಮ ಚಿನ್ನು, ಸ್ಮಿತಾ ನನ್ನ ಕಣ್ಣೆದುರು ಇರಬೇಕೆಂದು ತಂದೆಯವರು ಹಟ ಹಿಡಿದಿದ್ದರು.

ಸ್ಮಿತಾ, 'ಡ್ಯಾಡಿ ಡೋಂಟ್‌ವರಿ, ಇಲ್ಲೇ ನನ್ನ ಗೆಳತಿ, ರಚನಾಳ ಮನೆಯಲ್ಲೆ ಇರುವುದಕ್ಕೆ ಶ್ರೀನಿವಾಸ್ ಅಂಕಲ್ ಹೇಳಿದ್ದಾರೆ. ಅದು ಸಾಧ್ಯವಿಲ್ಲದಿದ್ದರೂ ದೆಹಲಿಯಿಂದ ಬಂದಿರುವ ಶಿಲ್ಪಾ ಅಗರವಾಲ್ ರೂಮ್‌ನಲ್ಲಿ ಅವಳೊಟ್ಟಿಗೆ ಇರುತ್ತೇನೆ. ವಾರದಲ್ಲಿ ಎರಡು ಬಾರಿ ಟೆಲಿಫೋನಿನಲ್ಲಿ ಸಂಭಾಷಣೆ ನಡೆಸುತ್ತಿರುತ್ತೇನೆ. ನನ್ನ ಚಿಂತೆ ಬಿಡಿ' ಎನ್ನುತ್ತ ತಂದೆಗೆ ಧೈರ್ಯ ಕೊಟ್ಟಿದ್ದಳು. ಆಗಷ್ಟೇ ಮಗಳ ಧೈರ್ಯ ನೋಡಿ ನಿರಾಳವಾಗಿ 'ಆಯ್ತು ಪುಟ್ಟಿ, ಕುಮಟಾದಲ್ಲಿ ಕಾರ್ಯನಿರ್ವಹಿಸಲು ಇಂದೇ ಹೊರಡುತ್ತೇನೆ' ಎಂದು ಆ ದಿನವೇ ತಮ್ಮ ಬಿಡಾರ ಬದಲಿಸಿದ್ದರು.

ನನ್ನ ಡಿಗ್ರಿ ವಿದ್ಯಾಭ್ಯಾಸ ಎರಡು ವರ್ಷ ಮೈಸೂರಿನಲ್ಲಿ ಮುಗಿದಿತ್ತು. ಅಂತಿಮ ಬಿ.ಎ. ತರಗತಿಗೆ ಅಲ್ಲಿಯೇ ಒಂದು ಕಾಲೇಜಿನಲ್ಲಿ ಸೇರ್ಪಡೆಗೊಂಡಿದ್ದೆ.

ಮೇ ೨೨ ರಂದು ಸ್ಮಿತಾಳ ಹುಟ್ಟುಹಬ್ಬ. 'ಖುದ್ದಾಗಿ ಕಂಡು ಸ್ಮಿತಾಳಿಗೆ ಶುಭಾಶಯ ಹೇಳಿ ಗಿಫ್ಟ್ ಕೊಟ್ಟು ಬರ್ತೀವಿ. ಸೂರ್ಯ ಮನೆ ಕಡೆ ಎಚ್ಚರ' ಎನ್ನುತ್ತ ಎರಡು ದಿನದ ಜವಾಬ್ದಾರಿ ನನಗೆ ವಹಿಸಿ ತಾಯಿ, ತಂದೆ ಇಬ್ಬರೂ ಇಪ್ಪತ್ತನೆಯ ದಿನಾಂಕದಂದು ಬೆಳಿಗ್ಗೆ ಹತ್ತು ಗಂಟೆಗೆ ಮೈಸೂರಿಗೆ ಪ್ರಯಾಣ ಬೆಳೆಸಿದ್ದರು. ಸಂಜೆ ೪-೩೦ ಕ್ಕೆ ಸ್ಮಿತಾಳ ಫೋನ್ ಕರೆ,

'ಹಲೋ, ಬ್ರದರ್ ಸೂರ್ಯ, ಹೇಗಿದ್ದಿಯೋ ?'

'ಚೆಂದ ಇದ್ದೀನಿ ಡಾ. ಸ್ಮಿತಾ' ಎಂದೆ.

'ಇದೇನು ? ನಿನ್ನ ಗಂಟಲು ಸರಿಯಿಲ್ಲ, ಕದ್ದು ಸ್ಮೋಕ್ ಮಾಡುವುದನ್ನು ಮೊದಲು ನಿಲ್ಲಿಸು ಬ್ರದರ್'.

'ಹಲೋ, ಅಪ್ಪ ನನಗೆ ಗಿಫ್ಟ್ ಏನು ಕೊಟ್ಟಿದ್ದಾರೆ ತಿಳೀತಾ ?'

'ಇನ್ನೇನು ಸ್ಟಿಕ್ಕರ್, ಬಳೆ, ಒಂದು ಜೊತೆ ಡ್ರೆಸ್ ಇರಬೇಕಲ್ವೆ !' ಎಂದು ಛೇಡಿಸಿದ್ದೆ.

'ಇಲ್ಲ ಅಣ್ಣ, ನೆಕ್‌ಲೇಸ್ ಪ್ರಸೆಂಟ್ ಮಾಡಿದ್ದಾರೆ'.

ಡ್ಯಾಡಿ - ಮಮ್ಮಿ ಇಲ್ಲೇ ಹೊಟೇಲ್‌ನಲ್ಲಿ ಉಳಿದಿದ್ದಾರೆ. ಈಗ ನಾನು ರೂಂನಲ್ಲಿರುವೆ. ಅಲ್ಲಿಂದಲೇ ಮಾತನಾಡುತ್ತಿರುವೆ. ೨೪ ನೇ ದಿನಾಂಕದಿಂದ ಡಾಕ್ಟರ್‌ಗಳ ಮುಷ್ಕರ ಆರಂಭಗೊಳ್ಳಲಿದೆ. ಮೂರು ದಿನ ರಜೆ ಇದೆ. ಅದಕ್ಕಾಗಿ ಅಮ್ಮ ಅಪ್ಪನ ಸಂಗಡ ನಾನು ಕುಮಟಾಕ್ಕೆ ಬರ್ತಿದ್ದೇನೆ. ಅಣ್ಣಾ, ಅಲ್ಲಿ ಸುತ್ತಮುತ್ತ ನೋಡಬಹುದಾದ ಪ್ರವಾಸಿ ತಾಣಗಳಿಗೆ ಭೇಟಿ ಕೊಡಬೇಕೆಂದುಕೊಂಡಿರುವೆ. ನೀವು ಅಲ್ಲಿ ನೆಲೆಸಿದಾಗಿನಿಂದ, ಈ ಪುಟ್ಟಿ ಬಯಕೆ ಕಾಡುತ್ತಲೇ ಇದೆ. ಬ್ರದರ್ ಈಡೇರಿಸುತ್ತೀಯಾ.

'ಓ, ಎಸ್, ಬೇಗ ಬಾ ನಿಮ್ಮಗಳ ನಿರೀಕ್ಷೆಯಲ್ಲಿ ಇರುತ್ತೇನೆ' ಎನ್ನುತ್ತಲೇ ಫೋನ್ ಇಟ್ಟೆ. F. M. ರೇಡಿಯೊದಲ್ಲಿ ಚರ್ಚೆ ನಡೆಯುತ್ತಿತ್ತು. ಏಳು ಗಂಟೆಗೆ ಸರಿಯಾಗಿ F. M. ಸುದ್ದಿ ಬಂದ ಉದ್ಘೋಷಕರ ಧ್ವನಿ ಕೇಳಿ ಕಿವಿಗಳು ಚುರುಕಾದವು. ಮೈಸೂರಿನಿಂದ ಹೊನ್ನಾವರಕ್ಕೆ ಧಾವಿಸುತ್ತಿದ್ದ ಬಸ್ ಒಂದು ಜೋಗದ ಸಮೀಪ ಅಪಘಾತಕ್ಕೆ ಈಡಾಗಿದೆ. ಸ್ಥಳದಲ್ಲಿಯೇ ಹನ್ನೆರಡು ಮಂದಿ ಮೃತಪಟ್ಟಿದ್ದಾರೆ ಎಂಬ ಸುದ್ದಿ ಬಿತ್ತರವಾಯಿತು. ಇದನ್ನು ಕೇಳಿ ಹೃದಯ ಬಡಿತದ ವೇಗ ಇನ್ನೂ ಹೆಚ್ಚಾಯಿತು. ಕುಲದೈವ ಮಲೆಮಹದೇಶನ ಸ್ಮರಣೆ ಮಾಡಿಕೊಳ್ಳುತ್ತಲೇ ಮನಸ್ಸನ್ನು ಗಟ್ಟಿ ಮಾಡಿಕೊಂಡೆ. ಊಟ ಮಾಡಲು ಮನಸ್ಸು ಅವಕಾಶ ಕೊಡಲಿಲ್ಲ. ಮಲಗಲು ಅಣಿ ಮಾಡಿಕೊಳ್ಳುತ್ತಿದ್ದೆ. ಅಷ್ಟರಲ್ಲೇ ಫೋನ್ ಸದ್ದು ಮಾಡತೊಡಗಿತ್ತು. ರಾತ್ರಿ ಹತ್ತು ಗಂಟೆ ಸಮೀಪಿಸುತ್ತಿತ್ತು. ಓಹ್ ! ಮಾರ್ಗಮಧ್ಯೆ ಊಟಕ್ಕೆ ಬಸ್ ನಿಲ್ಲಿಸಿರಬಹುದು. ಸ್ಮಿತಾ ಕರೆ ಮಾಡಿರಬಹುದು ಎಂದು ಮನವು ಮಾತನಾಡಿತು. ಧೈರ್ಯದಿಂದಲೇ ಫೋನ್ ಎತ್ತಿದೆ.

'ಹಲೋ !' ಎಂದೆ.

'ಹಲೋ, ಇದು ಇಂಜನೀಯರ್ ಶಂಕರಯ್ಯನವರ ಮನೆಯೇ ? ನೀವು ಅವರ ಮಗ ಸೂರ್ಯನೇ ?' ಅನಾಮಿಕ ಧ್ವನಿಯೊಂದು ಕೇಳಿತು.

'ಹೌದು, ತಾವು ಯಾರು ?'

'ಹಲೋ ! ನಾವು ಪೊಲೀಸ್'

ನನ್ನ ಶಕ್ತಿ ಎಲ್ಲಾ ಕುಂದಿ ಹೋಯಿತು. ಬಾಯಿ ಒಣಗತೊಡಗಿತ್ತು.

'ಏನು ಸಾರ್ ವಿಷಯ ?'

'ಹಲೋ, ನೋಡಿ ಸೂರ್ಯ, ನಿಮ್ಮ ಫ್ಯಾಮಿಲಿಗೆ ಮಧ್ಯಾಹ್ನ ಆದ ರಸ್ತೆ ದುರಂತದಲ್ಲಿ ಅಲ್ಪಸ್ವಲ್ಪ ಪೆಟ್ಟು ಬಿದ್ದಿದೆ' ಎಂದರು. ಹೊನ್ನಾವರದ ಆಸ್ಪತ್ರೆಯಲ್ಲಿ ಇರುವರು. ಆದಷ್ಟು ಬೇಗ ಬನ್ನಿ ಎಂದು ಫೋನ್ ಇಟ್ಟಿದ್ದರು. ಕೂಡಲೇ ಆಸ್ಪತ್ರೆಯ ಬಳಿ ಧಾವಿಸಿದ್ದೆ. ಜನಸಾಗರವೇ ಅಲ್ಲಿ ನೆರೆದಿತ್ತು. ವಿವಿಧ ಪತ್ರಿಕೆಯ ಛಾಯಾಗ್ರಾಹಕರು, ಟಿ.ವಿ. ಚಾನಲ್‌ನವರು ಅಲ್ಲಿ ನೆರೆದಿದ್ದರು. ಆ ರಾತ್ರಿಯಂತೂ ಹಗಲಾಗಿ ಮಾರ್ಪಟ್ಟಿತ್ತು. ನೋಡುತ್ತಲೇ ಒಳಗೆ ಹೆಜ್ಜೆ ಹಾಕಿದೆ. ದುಃಖ ಉಮ್ಮಳಿಸಿಕೊಂಡು ಬರುತ್ತಿತ್ತು. ಆದರೂ ಮನಸ್ಸನ್ನು ನಿಯಂತ್ರಿಸಿಕೊಂಡೆ. ಅಲ್ಲಿ ಸ್ಥಾಪಿತವಾಗಿದ್ದ ಕೌಂಟರ್‌ನಲ್ಲಿ ವಿಳಾಸ ಕೊಟ್ಟು ವಿಚಾರಿಸಿದ್ದೆ. ಅವರು ಏಕೋ ಮೌನ ತಾಳಿದ್ದರು. ಏನನ್ನೂ ಹೇಳಲಿಲ್ಲ. ನನ್ನೊಂದಿಗೆ ಒಬ್ಬ ಪೇದೆಯನ್ನು ಕಳುಹಿಸಿದರು. ಇವರ ಜೊತೆ ಹೋಗಿ ಎಂದಷ್ಟೆ ಹೇಳಿದ್ದರು. ಪೇದೆಯನ್ನು ಹಿಂಬಾಲಿಸಿದೆ. ಕಣ್ಣಿನಲ್ಲಿ ನೀರು ಉದುರುತ್ತಲೇ ಇದ್ದಿತು. ಬಾಯಿ ಒಣಗಿ ಹೋಗಿತ್ತು. ಮಾತುಗಳು ಹೊರಡದಂತಾದವು. ಮೆಲ್ಲನೆ ಹೆಜ್ಜೆ ಹಾಕುತ್ತಿದ್ದರೂ ಅಮ್ಮ, ಅಪ್ಪ, ಪುಟ್ಟಿ ಇದ್ದ ವಾರ್ಡ್ ಸಿಗಲಿಲ್ಲ. ಆಸ್ಪತ್ರೆಯಲ್ಲಿನ ವಾರ್ಡ್‌ಗಳೆಲ್ಲಾ ಕೊನೆಗೊಂಡವು. ನನಗೆ ಭಯ ಆರಂಭವಾಯಿತು. ಆಸ್ಪತ್ರೆಯ ಅಂಚಿನಲ್ಲಿ ಒಂದು ಕೊಠಡಿ ಮಾತ್ರ ಕಾಣುತ್ತಿತ್ತು. ಅದರ ಮುಂದೆ ಜನವೋ ಜನ.

ಆಗ ಆ ಪೇದೆ ಬಾಯಿ ತೆರೆದರು. 'ನೋಡಿ ಮಿಸ್ಟರ್ ಸೂರ್ಯ, ಮನಸ್ಸು ಗಟ್ಟಿ ಮಾಡಿಕೊಳ್ಳಿ. ನಿಮ್ಮ ತಂದೆ, ತಂಗಿ ಇಬ್ಬರೂ ಅಸುನೀಗಿದ್ದಾರೆ. ಅದೃಷ್ಟವಶಾತ್ ನಿಮ್ಮ ತಾಯಿ ಬದುಕಿ ಉಳಿದಿದ್ದಾರೆ. ಕೆಲವು ಸಣ್ಣಪುಟ್ಟ ಗಾಯಗಳಾಗಿವೆ. ಅಷ್ಟು ಬಿಟ್ಟರೆ ಮತ್ತೇನೂ ತೊಂದರೆ ಇಲ್ಲ. ಅವರಿಗೆ ನಿಮ್ಮ ತಂದೆ, ತಂಗಿಯ ವಿಷಯವನ್ನು ತಿಳಿಸಿಲ್ಲ. ನಿಮ್ಮ ತಂಗಿ ಸ್ಥಳದಲ್ಲಿಯೇ ಮೃತಪಟ್ಟರೆ, ತಂದೆಯವರ ತಲೆಗೆ ತೀವ್ರವಾದ ಪೆಟ್ಟು ಬಿದ್ದಿತ್ತು. ಕೆಲವು ತಾಸು ಸಾವು ಬದುಕಿನ ಸಂಗಡ ಹೋರಾಟ ನಡೆಸಿದ್ದರು. ಅಂತಿಮವಾಗಿ ಸಾವಿಗೆ ಶರಣಾಗಬೇಕಾಯಿತು' ಎಂದರು.

# ಕಂಬನಿ ಒರೆಸಿದ ಕೈ

● ಸರೋಜಾ ರಾವ್

ಸಂಜೆ ಕೆಂಪಾಯಿತು. ಇರುಳು ಇಡೀ ನಾಡನ್ನೆಲ್ಲ ಆವರಿಸಿತು. ಎಲ್ಲ ಹಡಗುಗಳ ಒಡೆಯರು ತಮ್ಮ ತಮ್ಮ ಬಿಡಾರಕ್ಕೆ ತೆರಳಿದರು. ಇಂದು - ನಾಳೆಯ ಸೇರಿತು. ಆದರೆ ಮಾತಂಗಿ ಮಾತ್ರ ಇನ್ನೂ ನದಿ ತೀರದಲ್ಲೇ ಒಬ್ಬಳೇ ಕುಳಿತು ಬಾಹ್ಯ ಪ್ರಪಂಚವನ್ನೇ ಮರೆತು ತನ್ನ ಕನಸಿನ ಲೋಕದಲ್ಲಿ ವಿಹರಿಸುತ್ತಿದ್ದಳು. ತನ್ನ ಮತ್ತು ಸೋಮನ ಪ್ರೇಮ ಪ್ರಾರಂಭವಾದದ್ದು, ಪ್ರೇಮಪಾಶದಲ್ಲಿ ಜಗತ್ತನ್ನೇ ಮರೆತಿದ್ದು, ನದಿಯೇ ಮಂಗಳಘೋಷ ಹಾಡಿದ್ದು, ನದಿಯ ಕಲರವವೇ ಮಂಗಳಕರ ನಾದವಾಗಿ, ಮರಳೇ ಮಂತ್ರಾಕ್ಷತೆಯಾಗಿ ಅವರಿಬ್ಬರನ್ನು ತನ್ನ ಮಕ್ಕಳಂತೆ ಒಂದುಗೂಡಿಸಿದ್ದು, ಸೋಮ ತನ್ನ ನಾವೆಯಲ್ಲಿ ಮಾತಂಗಿಯನ್ನು ಕೂಡ್ರಿಸಿಕೊಂಡು 'ಹಯ್ಯಾರೇ, ಹಯ್ಯಾರೇ, ಹೋ' ಎಂಬ ಹಾಡನ್ನು ಮಾರ್ಮಿಕವಾಗಿ ಹಾಡುತ್ತಾ ಹುಟ್ಟು ಹಾಕುತ್ತಾ ನಲಿಯುತ್ತಿರುವ ದೃಶ್ಯ ಇನ್ನೂ ಕಣ್ಮರೆಯಾಗದೇ ಅವಳ ಜೀವನದಲ್ಲಿ ಹಾಡಿ ನಲಿಯುತ್ತಿರುವ ಕ್ಷಣದಲ್ಲೇ ಭಯಂಕರವಾದ ಚಂಡಮಾರುತ ಬೀಸಿ, ಬಿರುಗಾಳಿಗೆ ಸಿಕ್ಕ ಸೋಮನ ನೌಕೆ ಛಿದ್ರ ಛಿದ್ರವಾಗಿ ಬಾಳಕಡಲಿನಿಂದ ಎಂದೂ ಸಿಗದಂತೆ ಹೋಗಿತ್ತು. ಮಾತಂಗಿ ಎಂದೂ ಹೊರಗೆ ಬರದಿದ್ದವಳು ಸುಖ ಸಾಗರದಲ್ಲೆ ಮುಳುಗಿ ಜಗತ್ತನ್ನೇ ಮರೆತವಳು. ಇಂದು ಯಾವ ಆಸರೆಯೂ ಇಲ್ಲದೇ ಕೂಲಿ - ನಾಲಿ ಮಾಡಿ ತನ್ನ ಕರುಳಿನ ಕುಡಿಗಳಾದ ಕರಿಯ - ಮಾದರನ್ನು ಸಾಕಿ ಸಲುಹಬೇಕಾಗಿ ಬಂದ ಸಂದರ್ಭಕ್ಕೆ ವಿಧಿಯನ್ನು ದೂರಿದರೆ ಸಾಲದು. ಅವರ ಭವಿಷ್ಯವನ್ನು ನೆನೆದು ಹೃದಯವೇ ಬಾಯಿಗೆ ಬಂದಂತಾಗಿತ್ತು. ನದಿಗೆ ನೆರೆ - ತೊರೆಗಳು ಬಂದು ೪ - ೮ ದಿನಗಳಲ್ಲಿ ನಿಲ್ಲಬಹುದು. ಆದರೆ ಮಾತಂಗಿಗೆ ಇನ್ನೂ ಅಲೆ ಅಲೆಯಾಗಿ ಬೀಸುತ್ತಿರುವ ಗಾಳಿ ಚಂಡಮಾರುತವಾಗಿ ಅವಳ ಮನಃಪಟಲದಿಂದ ಮರೆಯಾಗಿರಲಿಲ್ಲ.

'ಯಾರು, ಯಾರಿವಳು' ಎಂಬ ಮಾತು ಕೇಳಿಸಿ, ಧ್ವನಿ ಬಂದೆಡೆ ನೋಡುತ್ತಲೇ ಇದ್ದಾಗ, ಆ ಧ್ವನಿ ಮತ್ತೆ ಹತ್ತಿರದಲ್ಲೆ ಬಂದಂತಾಗಿ ಕುಳಿತವಳು ಎದ್ದು ನಿಂತಳು. ಭೂಮಿ - ಆಕಾಶ ಒಂದೆಡೆ ಸೇರಿದಂತೆ 'ಭೀಮ' ನಿಂತಿದ್ದ. ಅವನ ಬಲಾಢ್ಯವಾದ ದೇಹ, ಹರಿತವಾದ ಕಣ್ಣು,

ನೋಡಿದರೇ ಹೆದರುವಂತಾಗಿ ಸುಮ್ಮನೆ ಮೌನವಾಗಿ ನಿಂತಾಗ ಭೀಮನೇ 'ಮಾತಂಗಿ, ಎಲ್ಲರೂ ಹೊರಟು ಹೋಗಿ ಹೊತ್ತಾಯಿತು. ಇನ್ನೂ ಇಲ್ಲೆ ಕುಳಿತು ಏನೂ ಮಾಡುತ್ತಿದ್ದೀಯಾ, ಯಾರಿಗೆ ಕಾಯುತ್ತಿರುವೆ, ಯಾಕೆ ?' ಎಂದ. ಮಾತಂಗಿ 'ಏನೂ ಇಲ್ಲಾ, ಹೊತ್ತು ಮುಳುಗಿದ್ದೇ ತಿಳಿಯಲಿಲ್ಲಾ, ಕರಿಯನಿಗೆ ಮೈಯಲ್ಲಿ ಆರಾಮವಿಲ್ಲ, ಮನೆಯಲ್ಲಿ ಮಲಗಿದ್ದಾನೆ, ಕೂಲಿ ಹಣದಿಂದ ಸ್ವಲ್ಪ ಔಷಧ ತೆಗೆದುಕೊಂಡು ಹೋಗಬೇಕೆಂದು ಯೋಚಿಸುತ್ತಾ ಕುಳಿತಿದ್ದೆ. ಈಗ ಹೋಗುತ್ತೇನೆ' ಎಂದು ಎಲ್ಲವನ್ನೂ ಒಂದೇ ಉಸಿರಿನಲ್ಲಿ ಹೇಳಿದಳು.

ಭೀಮ ಮರುಮಾತನಾಡದೇ ದಾಪುಗಾಲು ಹಾಕುತ್ತಾ ಮುಂದೆ ನಡೆದ. ಅವನ ಹಿಂದೆಯೇ ಮಾತಂಗಿಯೂ ನಡೆದಳು. ಭೀಮನ ಮನಸ್ಸಿನಲ್ಲಿ ದ್ವಂದ್ವ ಆವರಿಸಿತ್ತು. ಮಾತಂಗಿಯನ್ನು ಸಣ್ಣವಳಿದ್ದಾಗಿನಿಂದ ನೋಡಿ ಬಲ್ಲವನಾಗಿದ್ದ. ಮನಸ್ಸಿನಲ್ಲಿಯೇ ಅವಳನ್ನು ಇಷ್ಟಪಟ್ಟಿದ್ದ. ಮಾತಂಗಿ - ಸೋಮನ ಪ್ರೀತಿಯನ್ನು ಕಂಡು ಎಷ್ಟೋ ಸಾರೆ ಅಸೂಯೆಪಟ್ಟಿದ್ದು ಉಂಟು. ಆದರೆ ತನ್ನ ಪ್ರೀತಿಯ ವಸ್ತು ತನಗೆ ಸಿಗದಿದ್ದರೂ, ಸೋಮನಿಗೆ ಸಿಕ್ಕಿತಲ್ಲ, ಎಂದು ಸೋಮ - ಮಾತಂಗಿಯರ ಮದುವೆಗೆ ಖುದ್ದಾಗಿ ಹೋಗಿ, ಅವರನ್ನು ಹರಸಿದ 'ನೂರು ಕಾಲ ಬಾಳಲೆಂದು' ತನ್ನ ಮನೆಗೆ ಬಂದು ಸುಮ್ಮನೆ ಯಾರಿಗೂ ಹೇಳದೇ ನೋವನ್ನು ಅನುಭವಿಸಿದ್ದ. 'ಮದುವೆ' ಎಂಬ ಶಬ್ದವನ್ನೇ ಮರೆತಂತೆ ತನ್ನ ತಾಯಿ 'ತಾಯವ್ವ'ಳಿಗೆ ಯಾವುದಾದರೂ ಸಬೂಬು ಹೇಳುತ್ತಿದ್ದ. ಕಾಲ ಎಲ್ಲರನ್ನೂ, ಎಲ್ಲವನ್ನು ಮರೆಸುತ್ತದೆ ಎಂಬ ಮಾತು ಭೀಮನಿಗೆ ವ್ಯತಿರಿಕ್ತವಾಗಿತ್ತು. ತನ್ನ ಮದುವೆಯನ್ನು ಯಾರ ಜೊತೆಗೂ ಕಲ್ಪಿಸಿಕೊಳ್ಳುವದಕ್ಕೂ ಸಿದ್ಧನಿರಲಿಲ್ಲ. ಇನ್ನೂ ಬ್ರಹ್ಮಚಾರಿಯಾಗಿಯೇ ಇದ್ದ. ಮನೆಯಲ್ಲಿ ತಾಯವ್ವ ಎಷ್ಟು ಸಾರಿ ಮದುವೆಯ ಬಗ್ಗೆ ಹೇಳಿದರೂ ಹಾರಿಕೆಯೇ ಉತ್ತರವಾಗಿತ್ತು.

ಮಾತಂಗಿ ಗಂಡ ಸೋಮನ ಸಾವು ಭೀಮನಿಗೆ ಮತ್ತೆ ಆಸೆ ಚಿಗುರಿಸಿತ್ತು. ಮಾತಂಗಿಗೆ ಇನ್ನೂ ಚಿಕ್ಕವಯಸ್ಸು. ಮಕ್ಕಳು, ಬಡತನ ಎಲ್ಲವನ್ನೂ ದಿನನಿತ್ಯವೂ ಕಣ್ಣಾರೆ ಕಂಡು ತನ್ನ ಆಸೆಯನ್ನು ಮಾತಂಗಿಗೆ ಹೇಳಬೇಕು. ಅವಳ ಕಣ್ಣಲ್ಲಿ ಕಂಡ ಸಂತೋಷವನ್ನು ಕಂಡು ತಾನು ಆನಂದಿಸಬೇಕೆಂದು ಪ್ರಯತ್ನಪಟ್ಟರೂ ಹೇಳಲಾಗದೆ ಸುಮ್ಮನಿರುತ್ತಿದ್ದ. ಇಷ್ಟು ಯೋಚಿಸಿ ಹಿಂದೆ ತಿರುಗಿ ನೋಡಿದ.

ಈಗ ಮಾತಂಗಿ ಇಪ್ಪತ್ತು ಹೆಜ್ಜೆ ಹಿಂದಿದ್ದಾಳೆ. ಈಗ ಕೇಳದೇ ಬಿಟ್ಟರೆ ಮುಂದೆ ಇಂಥ ಸಂದರ್ಭ ಸಿಗುತ್ತದೆಯೋ ? ಇಲ್ಲವೋ ? ಅವಳು ತನಗೆ ಸಿಗುವದಿಲ್ಲವೇನೋ ಎಂದು ನೋಡಿದ. ಮಾತಂಗಿ ಗುಬ್ಬಚ್ಚಿಯಂತೆ ಸಣ್ಣ ಸಣ್ಣ ಹೆಜ್ಜೆಗಳಿಡುತ್ತಾ ಸೋತ ನಡಿಗೆಯನ್ನು ಕಂಡು ಭೀಮನಿಗೆ ಮಾತಂಗಿ ಸ್ವರ್ಗದಿಂದಿಳಿದು ಬಂದ ಶಾಪಗ್ರಸ್ಥ ಅಪ್ಸರೆಯಂತೆ ಕಂಡಳು. ತನ್ನ ಮನಸ್ಸಿನ ಆಸೆಯನ್ನು ಅವಳ ಮುಂದಿಡಬೇಕೆಂಬ ನಿರ್ಧಾರದಿಂದ ತಿರುಗಿ ನಿಂತ ಭೀಮನಿಗೆ,

ಮಾತಂಗಿ ಹೆದರಿದ ಹುಲ್ಲೆಯಂತೆ ದೂರ ನಿಂತಳು. ಭೀಮ ನಗುತ್ತಾ 'ಏನಿಲ್ಲಾ ಮಾತಂಗಿ, ನಿನ್ನ ಕಷ್ಟ ಸುಖದಲ್ಲಿ ನನಗೆ ಭಾಗಿಯಾಗಬೇಕು, ಸೋಮನ ಮಕ್ಕಳನ್ನು ನನ್ನ ಮಕ್ಕಳಂತೆ ಕಾಣಬೇಕೆಂಬ ಆಸೆ ಬಹಳ ದಿನದಿಂದ ನನ್ನ ಮನಸ್ಸನ್ನು ಕೊರೆಯುತ್ತಾ ಇದೆ. ನಿನ್ನ ಅಭಿಪ್ರಾಯವನ್ನು ಯೋಚಿಸಿ ನಾಳೆ ತಿಳಿಸು. ಇದಕ್ಕೆ ಒತ್ತಾಯವಿಲ್ಲಾ' ಎಂದ. ಮಾತಂಗಿ ಏನು ಹೇಳಬೇಕೆಂದು ತಿಳಿಯದೇ ಸುಮ್ಮನಿದ್ದಳು. ಅವಳ ಉತ್ತರಕ್ಕೂ ಕಾಯದೇ ಭೀಮ ತನ್ನ ಮನೆ ಸೇರಿದ.

ರಾತ್ರಿ ಮನೆಗೆ ಬಂದ ಮಾತಂಗಿ, ಕರಿಯ ಸುಮ್ಮನೆ ಮಲಗಿದ್ದವನ ಎದೆಗವಿಚಿಕೊಂಡು ಮುತ್ತನಿಟ್ಟಳು. ಆದರೆ ದುರಾದೃಷ್ಟ ಯಾರನ್ನೂ ಕೇಳುವದಿಲ್ಲ. ಕರಿಯ ಇನ್ನಿಲ್ಲವಾಗಿದ್ದ. ಅಂಥ ಸಮಯದಲ್ಲಿ ಭೀಮನ ಆಸರೆ ಅವಳಿಗೆ ಬೇಕೆ ಬೇಕಾಗಿ ಭೀಮನಿಗೆ ಸುದ್ದಿ ತಿಳಿದು ಕರಿಯನ ಕಳೇಬರವನ್ನು ಮಣ್ಣು ಮಾಡಿ ಬಂದು ಮಾತಂಗಿಗೆ ಸಮಾಧಾನ ಮಾಡಿ, ತನ್ನ ಮನೆಗೆ ಬಂದು ಮಲಗಿದರೂ ನಿದ್ರೆ ಅವನ ಕಡೆ ಸುಳಿಯಲಿಲ್ಲ. ಮಾತಂಗಿಯ ದುಃಖಕ್ಕೆ ಹೇಗೆ ಸಮಾಧಾನ ಹೇಳಬೇಕು ? ಅವಳಿಗೆ ಬಾಳು ಕೊಟ್ಟು ವಿಧವೆಯೆಂಬ ಪಟ್ಟದಿಂದ ಕೆಳಗಿಳಿಸಿ, ಅವಳನ್ನು ಮರುಮದುವೆಯಾಗಿ ಮುತ್ತೈದೆಯಂತೆ ಕಣ್ಣತುಂಬ ನೋಡಿ ಕಂಬನಿ ಒರೆಸಿ ಅವಳ ಕಣ್ಣಲ್ಲಿ ಆನಂದಭಾಷ್ಪ ಚೆಲ್ಲಿಸಬೇಕು ಎಂಬ ನಿರ್ಧಾರವೇ ಅವನನ್ನು ನಿದ್ರಾಲೋಕಕ್ಕೆ ಒಯ್ಯಿತು.

ಮರುದಿನದ ಬೆಳಗು ಶುಭಕರವಾಗಿ, ಉಲ್ಲಾಸಮಯವಾಗಿ ಗೋಚರಿಸಿತು. ಮಾತಂಗಿ ಮನೆಗೆ ಬಂದ ಭೀಮ. ಆದರೆ ಮಲಗಿದ್ದಂತೆ ಮಲಗಿದ್ದವಳನ್ನು ನೋಡಿ 'ಮಾತಂಗಿ', 'ಮಾತಂಗಿ' ಎಂದು ಬಾಗಿಲು ಬಡಿದಾಗ ಬಾಗಿಲು ಪೂರ್ಣ ತೆಗೆದ ಮಾತಂಗಿ, ಭೀಮನನ್ನು ನೋಡಿ ಕಣ್ಣಲ್ಲಿ ಮಹಾಪೂರವನ್ನೇ ಹರಿಸಿದಳು. ಅವಳು ಅತ್ತು ಅತ್ತು ದುಃಖ ಕಡಿಮೆಯಾಗುವತನಕ ಸುಮ್ಮನಿದ್ದ ಭೀಮ, ಕಡೆಯದಾಗಿ 'ಭೀಮ, ಆಗಬಾರದ್ದೆಲ್ಲಾ ಆಯಿತು. ಇನ್ನು ನಾನು ಬದುಕುವದು ಹೇಗೆ ?' ಎಂದಳು. ಕ್ಷಣ ಮಾತ್ರದಲ್ಲೇ ಭೀಮ 'ಮಾತಂಗಿ, ಜೀವನದಲ್ಲಿ ಸಾವು - ಬದುಕು ಎರಡೂ ಒಂದೇ ನಾಣ್ಯದ ಎರಡು ಮುಖಗಳು. ಜೀವನ - ಸಂಜೀವನ ಆಗಬೇಕಾದರೆ ಇದ್ದುದರಲ್ಲೆ ಸುಖಪಡಬೇಕು. ಜಗತ್ತಿನಲ್ಲಿ ಯಾವುದೂ ಶಾಶ್ವತವಲ್ಲ. ನಿನ್ನ ಮಗ ಮಾದನನ್ನು ನನ್ನ ಮಗನಂತೆ ಸಾಕುತ್ತೇನೆ. ನಿನ್ನ ಬಾಳಕಡಲಲ್ಲಿ ಮುಳುಗದ ದೋಣಿಯಾಗಿರುತ್ತೇನೆ. ನಾನು ಶ್ರೀಮಂತನಲ್ಲದಿದ್ದರೂ ನಿನ್ನನ್ನು ಸುಖವಾಗಿಡಬಲ್ಲೆ. ಬದುಕನ್ನು ಬಂಗಾರಗೊಳಿಸುವುದು, ಕಬ್ಬಿಣವಾಗಿಸುವುದು ನಿನ್ನ ಕೈಯಲ್ಲಿದೆ. ಈ ಮಾತುಗಳಿಗೆ ನನ್ನ ಮನಸ್ಸೇ ಸಾಕ್ಷಿ. ಮುಂಜಾವಿನ ಈ ಹೂ ಬಿಸಿಲು ನಮ್ಮಿಬ್ಬರ ಬಾಳಿಗೆ ನಾಂದಿ ಹಾಡುತ್ತಾ ಇದೆ. ಯಾವ ಕಾರಣಕ್ಕೂ ನಿನ್ನ ಮನನೋಯಿಸುವುದಿಲ್ಲ. ಅಂದದ ಅರಮನೆಯಲ್ಲಿಡದಿದ್ದರೂ ಸುಖವಾಗಿಡಬಲ್ಲೆ. ಇನ್ನೂ ಹೆಚ್ಚಿಗೆ ಹೇಳಲು ನನಗೆ ಬರುವದಿಲ್ಲ'

ಎಂಬ ಧೈರ್ಯದ ನುಡಿ ಕೇಳಿದ ಮಾತಂಗಿ ಕಷ್ಟ ಜೀವನಕ್ಕೆ ಸೋತ್ತೋ ಅಥವಾ ಕಣ್ಣೀರೇ ತನ್ನ ಬಾಳಲ್ಲಾ ಎಂಬುದನ್ನು ಮನಗಂಡೋ ಯಾವ ವಿವೇಚನೆಗೂ ಒಳಗಾಗದೇ ಇದ್ದಲ್ಲಿಂದ ಓಡಿ ಹೋಗಿ ಭೀಮನ ಆಕಾಶದೆತ್ತರವಿರುವ ಮನಸ್ಸನ್ನು ಅರಿತು ಭೀಮನ ತೋಳತೆಕ್ಕೆಯ ಆಸರೆ ಪಡೆದಳು. ಭೀಮನ ಬಾಹುಬಂಧನ, ಇಷ್ಟು ದಿನ ನಿರೀಕ್ಷಿಸಿದ ಪ್ರೀತಿಯ ಹೂ ಅವನ ಕೈ ಸೇರಿತ್ತು. ಇನ್ನು ಎಂದೂ ಸಿಗುವದಿಲ್ಲ ಮಾತಂಗಿ ಎಂಬ ಅಚಲ ನಿರ್ಧಾರವಿಂದು ಸಡಿಲಿಸಿದ್ದನ್ನು ಕಂಡು ಮಾತಂಗಿಗೆ ಎಷ್ಟು ಮುತ್ತನಿಡುತ್ತಿದ್ದನೊ, ಆಗ ಹೊರಗೆ ಆಡಲು ಹೋಗಿದ್ದ ಮಾದ ಪ್ರೀತಿಯ ಶಿಖರವನ್ನೇರಿದ್ದ ಇಬ್ಬರನ್ನೂ ಕಂಡು ತನ್ನ ತಾಯಿ ಮತ್ತು ತಂದೆಯರಿರಬಹುದೆಂದು ಅಪ್ಪಾss ಅಮ್ಮಾss ಎಂದಾಗ ಆ ಎರಡು ಹೃದಯ ಬೇರ್ಪಟ್ಟು ಸ್ವರ್ಗ ಮೂರೇ ಗೇಣಾದಂತೆ ಭಾವಿಸಿ ಇಬ್ಬರೂ ಮಾದನನ್ನು ಆಲಂಗಿಸಿ ಮುತ್ತನಿಟ್ಟರು.

• • • • • • • • • •

● ವೀಣಾ ಕುಲಕರ್ಣಿ

ರಾತ್ರಿಯಾಗುತ್ತಿದ್ದಂತೆ ಮನಸ್ಸು ಅಭಿಸಾರಿಕೆಯಂತೆ ಅಲೆಯುತ್ತದೆ. ಭೂಮಿಯೆಲ್ಲಾ ಕರೀ ಕಂಬಳಿ ಹೊದ್ದು ಮಲಗಿದಾಗ ಪ್ರೇಮಿಗಳ ಖಳನಾಯಕ ಚಂದ್ರ, ನಕ್ಷತ್ರಗಳ ಗುಂಪಿನಲ್ಲಿ ನಗುತ್ತಿದ್ದಾನೆ. ದಿನವಿಡೀ ಹಾರಾಡಿ ಸುಸ್ತಾದ ಹಕ್ಕಿಗಳು, ತಮ್ಮ ಸಂಸಾರದೊಂದಿಗೆ ಬೆಚ್ಚಗೇ ಗೂಡಿನಲ್ಲಿ ವಿರಮಿಸುತ್ತಿವೆ. ನಿರಂತರವಾಗಿ ನಿಲ್ಲದ ಸೃಷ್ಟಿ ಕ್ರಿಯೆ ನಡೆಯುತ್ತಿರಲು ನಾನೊಬ್ಬಳೇ ರೂಮಿನ ಕಿಟಕಿಯಲ್ಲಿ ನಿಂತು, ಎದುರಿಗೆ ಬೆತ್ತಲೆಯಾಗಿ ಬಿದ್ದ ರಸ್ತೆಯನ್ನು ದಿಟ್ಟಿಸುತ್ತೇನೆ. ಲೆಕ್ಕಕ್ಕೆ ಸಿಗದ ನಕ್ಷತ್ರಗಳನ್ನು ಎಣಿಸುತ್ತೇನೆ.

ಮನೆಯ ಹತ್ತಿರವಿರುವ ಮಸೀದೆಯಲ್ಲಿನ ರಾತ್ರಿ ರಾಣಿಯ ಸುವಾಸನೆ ನನ್ನೊಳಗಿನ ಭಾವನೆಗಳನ್ನು ಕೆರಳಿಸುತ್ತಿದೆ. ಅಲ್ಲಲ್ಲಿ ಜೀರುಂಡೆಗಳ ಚೀರುವಿಕೆ ಮೌನವನ್ನು ಭೇದಿಸಿ ಬರುತ್ತಿದೆ. ಹಗಲು ದಣಿದ ಜೀವಗಳಿಗೆ ರಾತ್ರಿ ಸುಖವಾದರೆ, ನನಗೆ ಮನದಲ್ಲೇನೋ ಉದ್ವಿಗ್ನತೆ. ಅರ್ಧ ರಾತ್ರಿಯಾದರೂ ನಿದ್ದೆ ಬಾರದೇ ಹೊರಳಾಡಿದ, ನನ್ನ ಹಾಸಿಗೆಯಲ್ಲಿ ಬಿದ್ದ ಮಡಿಕೆಗಳು ಮನದ ಚಿತ್ತಾರವನ್ನು ಮೂಡಿಸಿವೆ.

ಆ ನಿಶ್ಶಬ್ದತೆಯಲ್ಲಿ ಸರಸರನೇ ಶಬ್ದವಾದಾಗ ಹೊರಳಿ ನೋಡಿದರೆ, ಮನೆಯೆದುರಿನ ಸಂಪಿಗೆ ಮರದಡಿಯ ಬಿಲದ ಹೊರಗೆ ಆರಡಿಯ ನಾಗರ ಹಾವೊಂದು ಹೆಡೆಯೆತ್ತಿ ನಿಂತಿದೆ. ನಾನು ಸಣ್ಣವಳಿರುವಾಗ ಸಂಪಿಗೆ ಹೂವಿನಾಸೆಗೆ ಮರದ ಹತ್ತಿರ ಹೋದಾಗೆಲ್ಲ ಅಲ್ಲಿ ಹಾವುಗಳಿರುತ್ತವೆಂದು ಹೆದರಿಸುತ್ತಿದ್ದ ಅವ್ವನ ಮಾತು ನೆನಪಾಗುತ್ತದೆ. ರಾತ್ರಿ ನಿದ್ದೆ ಬಾರದಾಗ ಅಜ್ಜಿ ಹೇಳುತ್ತಿದ್ದ ರಾಜಕುಮಾರನ ಫ್ಯಾಂಟಸಿ ಕತೆಗಳು ನೆನಪಿಗೆ ಬರುತ್ತವೆ. ಕಪ್ಪಗೆ ಹೆಡೆಯೆತ್ತಿ ನಿಂತಿದ್ದ ಆ ಹಾವು ಹಾಗೆಯೇ ತೆವಳುತ್ತಾ ಹೊರಟಾಗ ಆ ಬೆಳದಿಂಗಳ ಬೆಳಕಿನಲ್ಲಿ ಮಿರುಗುತ್ತಿರುವ ಅದು ತನ್ನ ಜೊತೆಗಾರನನ್ನು ಹುಡುಕಿ ಹೊರಟಂತೆ ಕಾಣುತ್ತಿದೆ.

ಎಷ್ಟೆಲ್ಲಾ ಅದ್ಭುತವನ್ನು ತನ್ನೊಡಲಿಗೆ ಹಾಕಿಕೊಂಡ ಸೃಷ್ಟಿಯ ಬಗ್ಗೆ ಯೋಚಿಸುತ್ತೇನೆ. ಹಗಲು ತಿರುಗುವ ಜೀವಿಗಳೇ ಬೇರೆಯಾದ್ರೆ, ರಾತ್ರಿ ತಿರುಗುವ ಪ್ರಾಣಿಗಳದೇ ಬೇರೆ ಲೆಕ್ಕ. ಈ ರಾತ್ರಿಯೇಕೆ ಬರುತ್ತದೆ ? ಬರೀ ಹಗಲುಗಳಿದ್ದರೇ ಎಷ್ಟು ಒಳ್ಳೆಯದಿತ್ತು ಅಂತ ಮೂರ್ಖ

ತರ್ಕ ಹಾಕುತ್ತೇನೆ. ನನ್ನದ್ಯಾವಾಗಲೂ ಹಾಗೇ ಪ್ರಕೃತಿ ವಿರುದ್ಧ ವಾದಗಳು. ಚಕೋರನ ಪ್ರಿಯತಮ ಕಳ್ಳ ಚಂದ್ರ ನನ್ನ ದುಗುಡ ನೋಡಿ ನಗುತ್ತಿದ್ದಾನೆ.

ರಾತ್ರಿಯ ಆ ಮೌನದಲ್ಲಿ ಮನದ ಹುತ್ತವೊಡೆದು, ನೂರಾರು ಬಯಕೆಯ ಸರ್ಪಗಳು ಹೊರ ಬಂದು ಹರಿದಾಡುತ್ತವೆ. ಆಗ ಹಗಲೆಲ್ಲ ಜೊತೆಗಿದ್ದು ರಾತ್ರಿ ಮಾತ್ರ ದೂರವಿರುವ 'ಆತ' ನೆನಪಾಗ್ತಾನೆ. ನೆನಪಿನೊಂದಿಗೇ ಆತನ ಮೈ ವಾಸನೆ ಗಾಳಿಯೊಂದಿಗೇ ತೇಲಿಬಂದು ಬಯಕೆ ಹೆಡೆಯೆತ್ತಿ ನಿಲ್ಲುತ್ತದೆ.

ನನ್ನ ಪಾಲಿಗೆ ಅವನೊಂದು ಬತ್ತಲಾರದ ಒರತೆ. ಸುಂದರ ಕನಸುಗಳನ್ನು ಹೆಣೆದು ಕೊಡುವ ಕನಸುಗಾರ. ತನ್ನ ಒಡಲ ಪ್ರೀತಿಯನ್ನು ಮೊಗೆ ಮೊಗೆದು ಕೊಡುವ ನಿರಂತರ ಮೊರೆಯುವ ಶರಧಿ. ಜೀವನದ ಯಾವುದೋ ತಿರುವಿನಲ್ಲಿ ಅಕಸ್ಮಾತ್ತಾಗಿ ಸಿಕ್ಕ, ಮರಳುಗಾಡಿನ ಓಯಸಿಸ್. ನಾವಿಬ್ಬರೂ ಚರ್ಚಿಸಲಾರದ ವಿಷಯವಿಲ್ಲ. ಮಾರ್ಕ್ಸ್‌ವಾದ, ಲೋಹಿಯಾವಾದದೊಂದಿಗೇ, ಇಂದಿನ globalisation, privatisation ವರೆಗೆ ನಿರರ್ಗಳವಾಗಿ ಮಾತಾಡಬಲ್ಲ ಆತನೊಂದಿಗೆ ಮಾತಿಗೆ ಕುಳಿತರೆ ಇತಿಹಾಸ, ವಿಜ್ಞಾನದೊಂದಿಗೆ ರಾಜಕೀಯ, ಸಾಹಿತ್ಯದ ವಿಷಯಗಳೂ ಅದರಲ್ಲಿ ಹಾಯ್ದು ಹೋಗುತ್ತವೆ. ಬೆಳದಿಂಗಳ ಚಂದ್ರ ಹೊತ್ತೇರಿದಂತೆ ಸಣ್ಣಗಾಗುತ್ತಿದ್ದಾನೆ. ಅಲ್ಲಲ್ಲಿ ನಾಯಿಗಳು ಊಳಿಡುವ ಶಬ್ದ ಕೇಳಿಸುತ್ತಿದೆ. ಗಾಳಿ ಹೆಚ್ಚಾದಂತೆ ಅದರೊಂದಿಗೇ ಸಂಪಿಗೆಯ ಸುವಾಸನೆ ಎಲ್ಲೆಡೆ ಹರಡುತ್ತಿದೆ.

ಆತನ courage ಆ straightforwardness ಜೀವನದಲ್ಲಿ ಮಹತ್ವವಾದದ್ದೇನನ್ನೋ ಸಾಧಿಸ ಹೊರಟ ಆ ಏಕಲವ್ಯನನ್ನು ನೋಡಿದಾಗೆಲ್ಲ ನನಗೆ ಶೇಕ್ಸ್‌ಪಿಯರ್‌ನ ಜ್ಯೂಲಿಯಸ್ ಸೀಜರ್ ನೆನಪಾಗ್ತಾನೆ. 'ನಿನ್ನ ನೋಡಿದರೆ ಇಡೀ ಜಗತ್ತನ್ನು ಗೆಲ್ಲಬೇಕೆಂಬ ಮಹತ್ವಾಕಾಂಕ್ಷಿ ಸೀಜರ್ ನೆನಪಾಗ್ತಾನೆ ನೋಡೋ' ಅಂದ್ರೆ ಆತ 'ಹುಷಾರು ಮರೀ, ಸೀಜರ್‌ನನ್ನು ಕೊಂದ ಅವನ ಆಪ್ತ ಸ್ನೇಹಿತ ಬ್ರೂಟಸ್‌ನ ಬಗ್ಗೆಯೂ ಯೋಚಿಸು' ಅನ್ನುತ್ತಾನೆ. ಈ ಯೋಚನೆಯಲ್ಲಿರುವಾಗಲೇ ಸಣ್ಣಗೆ ಸಿಳ್ಳಿನ ಧ್ವನಿ ಕೇಳುತ್ತದೆ. ಫ್ಯಾಕ್ಟ್ರಿಯಿಂದ ನೈಟ್ ಶಿಫ್ಟ್ ಮುಗಿಸಿದ ವ್ಯಕ್ತಿಯೊಬ್ಬ ಮನೆಯಲ್ಲಿ ತನಗಾಗಿ ತನ್ನ ಹೆಂಡ್ತಿ ಕಾಯ್ತಿರಬಹುದೆಂಬ ಕಲ್ಪನೆಯಲ್ಲಿ ಖುಷಿಯಿಂದ ಹೊರಟಿದ್ದಾನೆ.

ಈ ರಾತ್ರಿ ಎಷ್ಟೋ ಜನರಿಗೆ ಖುಷಿ ಕೊಡುತ್ತದೆ. ನಾನು ಮಾತ್ರ ಅದಕ್ಕೆ ಹೊರತಾಗಿದ್ದೇನೆಂಬುದು ಮನದಲ್ಲಿ ನೋವು ಮೂಡಿಸುತ್ತದೆ. ನನ್ನನ್ನೇ ಇಡಿಯಾಗಿ ತಿನ್ನುತ್ತಿರುವ ರಾತ್ರಿಯ ಒಂಟಿತನದಲ್ಲಿ, ನನ್ನ ಕಷ್ಟದಲ್ಲಿ, ಮನಸ್ಸಿಗೆ ನೋವಾದಾಗೆಲ್ಲ ತನ್ನೆದೆಯ ಹರವಿನಲ್ಲಿ ನನ್ನನ್ನೆಳೆದುಕೊಂಡು ಸಮಾಧಾನಿಸಿದ ಆತ ಬೇಕೆನಿಸುತ್ತಾನೆ. ನದಿಯ ಪಾತಳಿಯಂತಿರುವ ಹರವಾದ ಎದೆ ಕಣ್ಮುಂದೆ ಬರುತ್ತದೆ. ಹಗಲೆಲ್ಲಾ ಕೈಗೆ ಸಿಗುವ ಆತ ರಾತ್ರಿ ಮಾತ್ರ ಮನಸ್ಸಿನಲ್ಲಿ ನೆನಪಾಗಿ ಉಳಿಯುತ್ತಾನೆ.

ಬಹಳ ಭಾವುಕಳಾಗಿ ನಾನಿದರ ಬಗ್ಗೆ ಹೇಳಿಕೊಂಡರೆ 'be bold, be practical' ಎನ್ನುವ ಮಾತಿನಿಂದ ಮತ್ತೆ ನನ್ನನ್ನು ಭಾವನಾಲೋಕದಿಂದ ಎಚ್ಚರಿಸುತ್ತಾನೆ. ಊಟ, ನಿದ್ರೆಯನ್ನೇ ಮರೆಯುವಷ್ಟು ತೀವ್ರವಾಗಿ ನನ್ನನ್ನಾವರಿಸಿಕೊಂಡ ಆತನ ಬಗ್ಗೆ ಬಹಳ possessiveness ಬೆಳೆಸಿಕೊಂಡ ನನಗೆ ತೀರ ವಿರುದ್ಧವಾದ ಆತ practical ಗುಣದವನು. ಬದುಕನ್ನು ಸರಿಯಾಗಿ ತಿಳಿದವನು. ತಾನು ಬಯಸಿದ ದಿಕ್ಕಿನಲ್ಲಿ ಬದುಕನ್ನು ಕೊಂಡೊಯ್ಯುವ ಛಲವಾದಿಯಾದ ಆತನಿಗೆ ತನ್ನ ಪ್ರತಿ ಕೆಲಸದಲ್ಲೂ ವಿಪರೀತ ಶ್ರದ್ಧೆ.

ಜೀವನದಲ್ಲಿ ಎಲ್ಲವನ್ನು positive ಆಗಿ ನೋಡುವ ಆತನಿಗೆ 'ಇಷ್ಟೆಲ್ಲ ಒಳ್ಳೆಯತನವಿರುವ ನಿನ್ನನ್ನು ಯಾರಾದರೂ ಕದ್ದೊಯ್ದಾರೆಂದು ನನಗೆ ಹೆದರಿಕೆ ಮಾರಾಯಾ' ಅಂದ್ರೆ 'ಹುಚ್ಚಾ, ಸ್ವಲ್ಪ practical ಆಗಿ ಯೋಚಿಸು. ಸಾಧಾರಣ ಚಾಳಿನ ಹುಡುಗಿಯಂತಾಡದೇ ಕರಿಯರ್ ಮೈಂಡೆಡ್ ಆಗು. ಸ್ವಲ್ಪ ಹೃದಯ ವೈಶಾಲ್ಯತೆ ಬೆಳೆಸಿಕೋ' ಅಂತ ಆತ ಬುದ್ಧಿ ಹೇಳಿದರೂ ಸಹ ಜಗತ್ತಿನ ಯಾವುದೇ ವಸ್ತುವಿನಲ್ಲಿಲ್ಲದ ಆತನ ಬಗ್ಗೆಯ ಭಾವುಕತೆಯಲ್ಲಿ ಎಳ್ಳಷ್ಟೂ ಕಡಿಮೆಯಾಗುವದಿಲ್ಲ. ಹಗಲಿನ ಯಾಂತ್ರಿಕತೆಯಲ್ಲಿ ನನ್ನನ್ನೇ ಕಳೆದುಕೊಳ್ಳುವ ನನಗೆ ರಾತ್ರಿ ಆತ ನೆನಪಾದಾಗ ಈ ರಾತ್ರಿಯೇ ಇರದಿದ್ರೆ ಎಷ್ಟು ಒಳ್ಳೆಯದಿತ್ತಲ್ಲ ಅಂತ ಅಂದುಕೊಳ್ತೇನೆ. ಇಡೀ ರಾತ್ರಿಯನ್ನು ಒಂಟಿಗೂಬೆಯಂತೆ ಕಳೆಯುತ್ತೇನೆ. ಹೀಗೆಯೇ ನೆನಪಿನ ಮೊಟ್ಟೆಗಳು ಮರಿ ಹಾಕುತಿರಲು, ಅವನಿದ್ದಲ್ಲಿಗೆ ಓಡಿ ಹೋಗಿಬಿಡಬೇಕೆಂಬ ಹುಚ್ಚು ಆಸೆಗೆ, ಅವನ ಗುರಿ ಅಡ್ಡಗಾಲು ಹಾಕಿ ಕೆಡವುತ್ತದೆ. ಅಷ್ಟರಲ್ಲಿ ಬೀಟ್ ಪೊಲೀಸಿನವನ ವ್ಹಿಷಲ್ ಕೇಳುತ್ತದೆ. ಬೂಟಿನ ಶಬ್ದ ಮನೆಯ ಹತ್ತಿರವಾದಾಗ ಕಿಟಕಿಯಿಂದ ಇಣುಕಿ ನೋಡಿದರೆ ಕಂಬಳಿ ಹೊದ್ದು, ಕೈಯಲ್ಲಿ ಲಾಠಿ ಕುಟ್ಟುತ್ತ, ವ್ಹಿಷಲ್ ಹಾಕುವ ಪೊಲೀಸ್ ಕಾಣುತ್ತಾನೆ. ಕಳ್ಳನನ್ನು ಹಿಡಿಯಲು ಬೀಟ್ ಪೊಲೀಸ್‌ನವರಿರುತ್ತಾರೆ. ಆದರೆ ಮನ ಕದ್ದವನನ್ನು ?

ಅದೇ ಚಿತ್‌ಚೋರನನ್ನು ನೆನಸುತ್ತಾ ಮುಗಿಲ ಕಡೆಗೆ ನೋಡಿದಾಗ 'ನೋಡು ನಾ ಬಂದ ಮೇಲೆ ನೈದಿಲೆಗಳು ಹೇಗೆ ಅರಳಿದವು' ಅಂತ ಚಂದ್ರ ಬೀಗುತ್ತಿರುವಂತೆ ಕಾಣುತ್ತಾನೆ. ವಿಶಿಷ್ಟವಾದದ್ದನ್ನು ಸಾಧಿಸ ಹೊರಟ ಆತನಿಗೆ ನಾನು best companion ಆಗಬೇಕೆಂದು ಆತನ ಬಯಕೆ. ನನ್ನನ್ನೆದುರಿಗೆ ಕೂಡಿಸಿಕೊಂಡು 'ನೋಡು ಇತಿಹಾಸ ನೆನಪಿಸಿಕೋ, ಸೌಂದರ್ಯರಾಣಿ ಕ್ಲಿಯೋಪಾತ್ರಾ ಈಜಿಪ್ತಿನ ರಾಣಿಯಾಗಬೇಕೆಂಬ ಮಹದಾಸೆಯಿಂದ, ಮಹತ್ವಾಕಾಂಕ್ಷಿ ಸೀಜರ್‌ನನ್ನು ಜೊತೆಗಿರಿಸಿಕೊಂಡಿದ್ದಳು. ಅವರು ಪ್ರೇಮವನ್ನ ತಮ್ಮ ಗುರಿ ಸಾಧನೆಗಾಗಿ ಬಳಸಿಕೊಂಡರೆಂಬುದನ್ನು ತಿಳಿ' ಅಂತ ಇತಿಹಾಸದ ಪುಟಗಳನ್ನು ನನ್ನೆದುರಿಗೆ ತೆರೆದಾಗ, ನಾನು ಹುಸಿ ಮುನಿಸಿನಿಂದ 'ಹೂಂ, ಇರಬಹುದು ಆದ್ರೆ ಮುಂದೆ ಅವರು ಮದುವೆಯಾಗಿ ಸಂಸಾರ ಬೆಳೆಸಿಕೊಂಡರು' ಅನ್ನುವಾಗ ಆ ಮದುವೆ, ಸಂಸಾರ ನೆನಪಾದಾಗ ನನ್ನ ಕೆಳ ಹೊಟ್ಟೆಯ ಎಡಗಡೆ ಸಣ್ಣ ಕದಲಿಕೆಯಾಗುತ್ತದೆ.

ಅವನ ಪಡಿಯಚ್ಚಿನ ಮಗು ನನ್ನ ಮಡಿಲಲ್ಲಿ ಮಲಗಿದಂತೆ ಕನಸು ಕಾಣುತ್ತೇನೆ. ಬಹುಶಃ ನನಗೆ ಕನಸು ತೋರಿಸಲು ಮಾತ್ರ ಈ ರಾತ್ರಿಗಳಿಗೆ ಸಾಧ್ಯವೇನೋ ಅನ್ನುವ ಭಾವನೆ ಬಂದಾಗ ಮತ್ತೆ ಅವನ 'be practical, be bold' ಮಾತುಗಳು ಕಿವಿಯಲ್ಲಿ ಗುಂಯ್ ಗುಟ್ಟಿದಾಗ ಮನಸ್ಸು ದೃಢವಾಗುತ್ತದೆ.

ಜೊತೆಗಿದ್ದ ಕೌಶಿಕರಾಜನನ್ನು ತಿರಸ್ಕರಿಸಿ, ಸಿಗದ ಚೆನ್ನಮಲ್ಲಿಕಾರ್ಜುನನನ್ನು ಹುಡುಕುವುದರಲ್ಲೇ ಅಕ್ಕಮಹಾದೇವಿ ತನ್ನ ಜೀವನ ಮುಡಿಪಾಗಿಸುತ್ತಾಳೆ. ಆದರೆ ನನ್ನ ಕೈಗೆ ಸಿಕ್ಕ ಚೆನ್ನಮಲ್ಲಿಕಾರ್ಜುನನ ನಿರೀಕ್ಷೆಯಲ್ಲೇ ನನ್ನ ರಾತ್ರಿಗಳು ಕಳೆಯುತ್ತಿವೆ. ಜೀರುಂಡೆಗಳ ಸದ್ದು ಇನ್ನೂ ಕೇಳ್ತಾ ಇದೆ. ಗೂಬೆಯ ಕೂಗನ್ನು ಬಿಟ್ಟರೆ ಬಾಕೀ ಎಲ್ಲ ನಿಶ್ಯಬ್ಧ. ಎಷ್ಟೋ ನಿಗೂಢಗಳನ್ನಡಗಿಸಿಕೊಂಡು, ಮೈಚೆಲ್ಲಿ ಬಿದ್ದ ಮೌನ ಏನೇನೋ ಮಾತಾಡ್ತಿದೆ.

ಮುಂದೆಂದಾದರೂ ನನ್ನ ನಿರಂತರ ರಾತ್ರಿಗಳ ನಿರೀಕ್ಷೆಗೆ ಪ್ರತಿಫಲ ಸಿಗಬಹುದು. ಸಮಾನಾಂತರವಾಗಿ ರೈಲು ಹಳಿಗಳಂತೆ ಚಲಿಸುತ್ತಿರುವ ನಾವೆಂದಾದರೂ ಸಂಧಿಸಬಹುದೆಂಬ ನಂಬಿಕೆಯೇ ಮತ್ತೆ ಇದೊಂದು ರಾತ್ರಿಯನ್ನು ಕಾಯ್ದ ರಾತ್ರಿಗಳ ಲಿಸ್ಟಿನಲ್ಲಿ ಸೇರಿಸುತ್ತದೆ. ರೂಮಿನ ಕಿಟಕಿಯಲ್ಲಿ ನಿಂತ ನನಗೆ ಕಾಲು ಸೋಲುತ್ತಿರುವಾಗ ದೇಹದ ಭಾರವನ್ನು ಇನ್ನೊಂದು ಕಾಲಿಗೆ ವರ್ಗಾಯಿಸುತ್ತ ಕತ್ತಲನ್ನು ನೋಡುತ್ತಿರುವಾಗ, ಮತ್ತೆ ಎದುರಿಗಿನ ಸಂಪಿಗೆ ಮರದ ಹತ್ತಿರ ಸಪ್ಪಳವಾದಾಗ ದಿಟ್ಟಿಸುತ್ತೇನೆ. ಅದೇ ಆರಡಿಯ ಕಪ್ಪನೆಯ ಹಾವು ಸರಸರನೇ ಹರಿದು ಬಂದು ಬಿಲವನ್ನು ಸೇರಿಕೊಳ್ಳುತ್ತದೆ.

ಆ ಹಾವಿನ ತೆವಳುವಿಕೆಯಲ್ಲಿ ಲಾಲಿತ್ಯವಿದೆ. ಹೋಗುವಾಗಿನ ಆತುರ, ಉನ್ಮಾದತೆ ಕಡಿಮೆಯಾಗಿ ಸಂತೃಪ್ತತೆಯಿಂದ ಕೂಡಿದ ನಿಧಾನತೆ ಇದೆ. ಮನದ ದುಗುಡವೆಲ್ಲಾ ಹೊರಹಾಕುವಂತೆ ಸಣ್ಣ ನಿಟ್ಟುಸಿರೊಂದು ಹೊರಬರುತ್ತದೆ. ದೂರದಲ್ಲೆಲ್ಲೋ ಹೇಮಂತಕುಮಾರನ "ये रात ये चान्दनी फिर कहॉ, सुनजा दिल की दास्तान" ಹಾಡು ಗಾಳಿಯಲ್ಲಿ ತೇಲಿಬರುತ್ತದೆ. ಈ ರಾತ್ರಿ ಇದೆ. ಬೆಳದಿಂಗಳೂ ಇದೆ. ಆದರೆ ಮನದ ಮೊರೆತವನ್ನೇ ಕೇಳುವವನಿಲ್ಲ. ಹೀಗೇ ಕಾಯುವಿಕೆಯಲ್ಲಿಯೇ ಮತ್ತೊಂದು ರಾತ್ರಿ ಕಳೆದು ಹೋಗುತ್ತದೆ. ಎಂದೋ ಓದಿದ उम्मीद पर दुनिया कायं है ಮಾತು ನೆನಪಾಗಿ ಮತ್ತೆ ಮರುದಿನದ ಸುಂದರ ಮುಂಜಾವಿಗಾಗಿ ನಿರೀಕ್ಷಿಸುತ್ತೇನೆ. ನೈಟ್ ಡ್ಯೂಟಿ ಮುಗಿಸಿದ ಚಂದ್ರ ಮರಳಿದ ಮೇಲೆ ಸೂರ್ಯ ಡೇ ಡ್ಯೂಟಿಗೆ ಹಾಜರಾದ. ಆಗ ಎಲ್ಲೋ ಪ್ಯಾಂಸೆಂಜರ್ ರೈಲು ಚಲಿಸುವ ಸದ್ದು ಕೇಳಿಸಿತು, ಆರ್ತವಾಗಿ ಅಳುವ ಮಗುವಿನಂತೆ. ಬಹುಶಃ ಸಿಗ್ನಲ್ ಬಿದ್ದಿರಲಿಕ್ಕಿಲ್ಲ. ಅಷ್ಟರಲ್ಲಿ ಕರ್ಕಶವಾದ ಕರೆಗಂಟೆ, ಇದು ಅವನ style ಅಲ್ಲದೇ ಮತ್ತಾರದು, ಧಡಪಡಿಸಿಕೊಂಡು ಎದ್ದೆ !

# ಕನಸುಗಳ ಗೂಡಿಗೆ ಬಿದ್ದ ಬೆಂಕಿ

● ವಿಜಯ ಕಾಂಬಳೆ

ಬೇಸಿಗೆಯ ಸುಡು ಉರಿಬಿಸಿಲಿನಿಂದ ಗಿಡಬಳ್ಳಿಗಳೆಲ್ಲ ಒಣಗಿ, ಎಲೆಗಳು ಉದುರಿ, ಬರಡಾಗಿದ್ದವು. ಎತ್ತ ನೋಡಿದತ್ತ, ಪ್ರಕೃತಿ ಬಾಡಿ, ಒಣಗಿ ಸೊರಗಿ ಹೋಗಿತ್ತು. ಎಲ್ಲ ಕಡೆಗೂ ರಣಗುಡುತ್ತಿತ್ತು. ಭೂಮಿತಾಯಿಯ ಮುಖದಲ್ಲಿ ಸ್ವಲ್ಪವೂ ಕಳೆಯಿರಲಿಲ್ಲ.

ಹೊಲದ ಕೆಲಸಕ್ಕೆ ಬಂದಿದ್ದ, ಮಾಯಣ್ಣಾ ತನ್ನ ಎತ್ತುಗಳು ತೇಕುವುದನ್ನು ನೋಡಿ, ಹೊಲ ಹರಗುವ ಕೆಲಸವನ್ನು ನಿಲ್ಲಿಸಬೇಕೆಂದಿದ್ದ. ಆದರೂ ಇನ್ನೆರಡು ತಿರುವುಗಳು ಉಳಿಯುವದರಿಂದ ಅದಷ್ಟು ಹರಗಿ ಬಿಡಬೇಕೆಂದು ತೀರ್ಮಾನಿಸಿ, ಕೆಲಸ ಪ್ರಾರಂಭಿಸಿದ. ಅದಷ್ಟು ಕೆಲಸವನ್ನು ಮುಗಿಸಿದ್ದರೆ, ಅಂದಿನ ಕೆಲಸವು ಮುಗಿದಂತಿತ್ತು. ಮತ್ತೆ ಮಾರನೆಯ ದಿನ ಸೋಮಣ್ಣಾ ಸಾಹುಕಾರನಲ್ಲಿ ಬಾಡಿಗೆಗಾಗಿ, ಕೆಲಸಕ್ಕೆ ಹೋಗುವ ವಿಚಾರದಲ್ಲಿದ್ದ.

ಮಾಯಣ್ಣಾ ಬೊಮ್ಮಳ್ಳಿ ಗ್ರಾಮದ ಒಬ್ಬ ಸಣ್ಣ ರೈತನಾಗಿದ್ದ. ಇದ್ದ ತನ್ನ ಏಳು ಎಕರೆ ಜಮೀನನ್ನು ಪ್ರತಿವರ್ಷ ಬೇಸಿಗೆಯಲ್ಲಿ ತನ್ನ ಎತ್ತುಗಳಿಂದ ಹೊಲವನ್ನು ಹದ ಮಾಡಿ ಮಳೆಯಿಂದ ಸಕಾಲಕ್ಕೆ ಬೆಳೆಯನ್ನು ತೆಗೆಯುತ್ತಿದ್ದ. ಅದರಲ್ಲಿ ಜೋಳ, ಹತ್ತಿ ಇತರೆ ಬೇಳೆ ಕಾಳುಗಳನ್ನು ಬೆಳೆದು ತನ್ನ ಉಪಜೀವನ ಸಾಗಿಸುತ್ತಿದ್ದ. ತನ್ನ ಹೊಲದ ಕೆಲಸ ಮುಗಿಸಿ, ಬೇರೆಯವರಲ್ಲಿಯೂ ಎತ್ತುಗಳನ್ನು ಬಾಡಿಗೆಗಾಗಿ ಕೆಲಸಕ್ಕೆ ಒಯ್ದು, ಬಂದ ಹಣವನ್ನು ಉಪ್ಪು, ಎಣ್ಣೆ, ಬಟ್ಟೆ ಬರೆ ಇತ್ಯಾದಿ ಖರ್ಚಿಗಾಗಿ ಉಪಯೋಗಿಸಿ ಜೀವನ ನಡೆಸಿದ್ದ.

ಕೊನೆಯ ತಿರುವು ಮುಗಿದು, ಎತ್ತುಗಳು ದಂಡೆಗೆ ಬಂದಾಗ, ಅವುಗಳನ್ನು ನಿಲ್ಲಿಸಿ, ಕೊರಳಲ್ಲಿನ ಹಗ್ಗವನ್ನು ಬಿಚ್ಚಿ, ಅವುಗಳ ಹೆಗಲ ಮೇಲಿನ ನೊಗವನ್ನು ಇಳಿಸಿ, ಎಲ್ಲ ಸಾಮಾನುಗಳನ್ನು ತೆಗೆದುಕೊಂಡು ತನ್ನ ಎತ್ತುಗಳ ಸಂಗಡ ಗುಡಿಸಿಲಿನ ದಾರಿಯತ್ತ ನಡೆದ.

ದಾರಿಯ ಮಧ್ಯದಲ್ಲಿ 'ಯಾಕೋ ಮಾಯಪ್ಪ ಎತ್ತಗೋಳ ಭಾಳ ಸರಾ ಸರಾ ಹೊಡಕೊಂಡ ನಡದಿದಿ' ಎಂದು ಮಲ್ಲು ಮಾತಾಡಿಸಿದ್ದಕ್ಕೆ 'ಯಾನ ಮಾಡತಿ ಮಲ್ಲು ಯಾಳೆ ಆಗೇತಿ. ಹರಗೋದು ಜರಾನ ಉಳಿದಿತ್ತು, ಅಟ್ಟss ಹೆಂಗ ಬಿಟ್ಟ ಬರತಿ ? ಮತ್ತ ಅದಕ್ಕೆಲ್ಲಿ ನಾಳೆ ಹೋಗಲಿ. ನಾಳಿಬ್ಯಾರಿ ಸೋಮಣ್ಣಾ ಸಾಹುಕಾರನಲ್ಲಿ ಎತ್ತಗೋಳ ಕೆಲಸಕ್ಕೆ ಹೇಳ್ಯಾನು. ಅವನಲ್ಲಿ ಹೋಗೂದೈತಿ' ಅನ್ನುತ್ತ ತನ್ನ ಗುಡಿಸಿಲಿನ ದಾರಿಯತ್ತ ಕಾಲುಹಾಕಿದ್ದ.

'ಹೌಂದss ಅದಿ ಯಾನ ಒಳಗ ? ಯಾನ ಮಾಡತಿ ? ಕುಡಿಲಾಕ ನೀರ ತಗೊಂಡ ಬಾ' ಎಂದು ಗುಡಿಸಿಲಿನ ಮುಂದ ನಿಂತು ಹೆಂಡತಿ ಸೋನ್ಯಾನ ಕರೆದ.

'ಅಪ್ಪಾ, ಅಕ್ಕಾ ಬಂದಾಳು ಒಳಗ' ಎನ್ನುತ್ತ ಮಾಯಣ್ಣಾನ ಸಣ್ಣ ಮಗಳು ಬಂದು ಹೇಳಿದಾಗ, 'ಅಕ್ಕಾ ಬಂದಾಳು ? ಆಕಿ ಸಂಗಾಟ ಮತ್ತ್ಯಾರ ಬಂದಾರು ?' ಮಾಯಣ್ಣಾ ಅಂದಿದ್ದ. 'ಮತ್ತ್ಯಾರ ಬರತಾರು. ಆಕೀ ಒಬ್ಬಾಕೀನ ಬಂದಾಳು. ಹೊಡದು ಬಡದು ಕೊಲಿಹೇರಿ ಹುಡುಗೀನ ಕಳಸ್ಯಾರು' ಎನ್ನುತ್ತ ಸೋನವ್ವ ತಂಬಗಿಯಲ್ಲಿ ನೀರು ತಂದು ಮಾಯಣ್ಣಾನ ಕೈಯಲ್ಲಿ ಕೊಟ್ಟಿದ್ದಳು.

ನೀರಡಿಸಿ ನೀರು ಕುಡಿಯಬೇಕೆಂದಿದ್ದ ಮಾಯಣ್ಣಾನ ಒಣಗಿದ ಗಂಟಲವು ಹೆಂಡತಿಯು ಹೇಳಿದ ಮಗಳ ವಿಷಯವನ್ನು ಕೇಳಿ, ನೀರಡಿಕೆ ಹೋಗಿ, ಗಂಟಲು ತುಂಬ ದುಃಖ ಉಮ್ಮಳಿಸಿ ಬಂದಿತ್ತು. ನೀರಿನ ತಂಬಗಿಯನ್ನು ಕೈಯಲ್ಲಿ ಹಾಗೆಯೇ ಹಿಡಿದುಕೊಂಡು ಗುಡಿಸಲೊಳಗೆ ಹೋಗಿ, 'ಯಾನ ಸೀತವ್ವಾ ಮತ್ಯಾನ ಆತು ? ಮತ್ತ್ಯಾಕ ನಿನ್ನ ಬಡದ ಕಳಸ್ಯಾರು, ಮತ್ಯಾನ ಅನತಾರ ಅವರು ? ನಾ ಮೊನ್ನಿ ಎಲ್ಲಾ ಅವರಿಗಿ ತಾಕೀತ ಮಾಡಿ ಬಂದೀನಲ್ಲಾ. ಬರುವಾಗ ಅಲ್ಲಿ ಪಂಚರಿಗೂ, ಭೆಟ್ಟಿಯಾಗಿ ಹೇಳಿ ಬಂದೀನಲ್ಲಾ' ಅಂದನು ಮಾಯಣ್ಣಾ.

'ಪಂಚರ ಮಾತ ಅವರ್‍ಯಾನ ಕೇಳತಾರು. ದಿನ ಅದ ಹಾಡ ಐತಿ. ಅವರಿಗಿ ಬಂಗಾರ ಮತ್ತss ಹಜಾರ ರೂಪಾಯಿ ಬೇಕಂತ ಅನತಾರು. ನಾ ಏಟ್ಯs ಹೇಳೇನಿ. ನಮ್ಮಪ್ಪಾ ಈ ಸಧ್ಯ ಬೇಕಂದ್ರ ಎಲ್ಲಿಂದ ಕುಡತಾನು. ಈಗ ಅಲ್ಲೇರೆ ಯಾನ ಐತಿ, ಈ ವರ್ಷ ಏನಾರೆ ಮಾಡಿ ಹೊಲದಾಗ ಬಂದ ಹತ್ತೀರೆ ಮಾರಿ ನಿಮಗ ಬಂಗಾರ ಸರಾ ತಂದ ಕುಡತಾರು ಅಂತ ಏಟ್ಯs ಹೇಳೇನಿ. ನನ್ನ ಮಾತ ಅವರು ಕೇಳಲಿಲ್ಲಾ. ಆಕಿಬ್ಯಾರಿ ಅದಾಳಲ್ಲಾ ಮನಿಯಾಗ ಗಂಡನ ಮಿಂಡ್ತಿ ಯಾತರ ಮ್ಯಾಲಿಂದರೆ ಹಾಸಿ, ಯಾಸಿ - ದಿಗಡಿ ಬೈಯ್ಯೋದು ಮತ್ತ ಚುಚ್ಚಿ - ಚುಚ್ಚಿ ಮಾತಾಡೋದು, ದಿನ ಹರ್‍ಯಾಗೆದ್ದ ಕೂಡಲೇ ಇದs ಐತಿ. ದೇವರಿಗಿ ಹೂವು ತಪ್ಪೀತು, ಆದರ.. ಇವರ ಮನ್ಯಾಗೀನ ಕಾಟ ನನಗ ತಪ್ಪಿಲ್ಲ' ಎಂದು ಸೀತಾ ಕಣ್ಣಾಗಿನ ನೀರ ತಗೆದು ತನ್ನ ಗೋಳನ್ನು ತಂದೆ ತಾಯಿಯ ಮುಂದೆ ಹೇಳಿಕೊಂಡಿದ್ದಳು.

ಕಳೆದ ಎರಡು ವರ್ಷಗಳ ಹಿಂದೆ ಮಾಯಣ್ಣಾ ಪ್ರೀತಿಯ ಮುದ್ದು ಮಗಳಾದ ಸೀತಾಳನ್ನು ಪಕ್ಕದ ಕೊಲ್ಲೂರ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿದ್ದ. ಬಡಿಗೇರ ಶಾಣಪ್ಪನss ಕೊಲ್ಲೂರ ಗ್ರಾಮದಲ್ಲಿನ ಮನೆತನವನ್ನು ತಂದಿದ್ದ. 'ಮನಿ ಛೊಲೊ ಐತಿ. ಇಪ್ಪತ್ತ ಎಕರೆ ಹೊಲಿಸಾಲ ಜಮೀನ ಐತಿ. ಹೊಲದಾಗ ಯಾನ ಬೇಕಾದ್ದ ಬೆಳೆಸಬಹುದು. ಇಬ್ಬರ.. ಅಣ್ಣಾ - ತಮ್ಮಂದೀರ ಅದಾರು. ಸಿದ್ದಪ್ಪನ ಹುಡುಗ ಸಣ್ಣಾಂವ ದೊಡ್ಡಾಂವ ಭರಮಣ್ಣಾನ ಮದುವಿ ಈಗಾಗಲೇ ಆಗ್ಯೆತಿ. ಆ ಮನಿಯಾಗ ನಿಮ್ಮ ಸೀತವ್ವನ ಕೊಟ್ಟರ ಹುಡುಗಿ ನಸೀಬ ತೆರೀತ್ಯೆತಿ. ಬಾಕಿ ಹೊರಗೆ ಯಾತಕ್ಕೂ, ಯಾರಲ್ಲೂ ಹೋಗೋದ ಇಲ್ಲಾ' ಎಂದು ಬಡಿಗೇರ ಶಾಣಪ್ಪಾ ತಿಳಿಸಿದ್ದ.

ಶಾಣಪ್ಪನ ಮಾತಿಗೆ ಒಪ್ಪಿ 'ಮನೆತನ ಛೊಲೊ ಇದ್ದರ ಆತು. ನಮ್ಮ ಸೀತವ್ವ ಆ ಮನಿಯಾಗ ಛಂದ ಇದ್ದರ ಸಾಕು. ನಮಗರೆ ಯಾನ ಬೇಕು ? ಹೆಂಗಂತಿ ?' ಎಂದು ಮಾಯಣ್ಣಾ ಹೆಂಡತಿ ಸೋನವ್ವನನ್ನು ಕೇಳಿದ್ದ. ಹೆಂಡತಿ ಆ ಮಾತಿಗೆ ಹೂಂಗೂಡಿಸಿದಾಗ, ತಮ್ಮಲ್ಲಿ ಇದ್ದ ಹಣದಲ್ಲಿ ಅವರ ಕಡೆ, ಇವರ ಕಡೆ ಹಣ ತಂದು ಒಟ್ಟುಗೂಡಿಸಿ, ಎಲ್ಲ ಮಾತುಕತೆಯಾದ ಎರಡು ದಿವಸದಾಗ 'ಯಾದಿ ಮ್ಯಾಲ ಶಾದಿ' ಮಾಡಿ ಮುಗಿಸಿದ್ದ.

ಅಳಿಯ ಸಿದ್ದನಿಗೆ ಎರಡ ತೊಲಿ ಬಂಗಾರ ಸರಾ ಮಾಡಿ 'ಮುಂದ ನಮ್ಮ ಕೈಯಾಗ ರೊಕ್ಕ ಆದಾಗ ಕೊಡಸ್ತೀವು' ಅಂದಿದ್ರು. ಆದರ ಐದಹಜಾರ ರೂಪಾಯಿ ಮಾತೇನು ಮಾಡಿರಲಿಲ್ಲ.

'ಸೀತವ್ವನನ್ನು ಕೊಲ್ಲೂರಿಗೆ ಕೊಟ್ಟು, ಕೊಂದಾಂಗಾತು. ಅಕೀದ ನಸೀಬ ಛೊಲು ಇಲ್ಲಾ' ಮದುವೆಯಾದ ಆರು ತಿಂಗಳಿನ ನಂತರ ಮಗಳ ಕಡೆಗೆ ಹೋಗಿ ಬಂದ ಮಾಯಣ್ಣಾ ತನ್ನ ಹೆಂಡತಿಯ ಮುಂದ ಮಗಳ ಕಥೆಯನ್ನೆಲ್ಲಾ ಹೇಳಿದ್ದ.

ಆವಾಗ ಸೋನವ್ವ ಗಾಬರಿಯಾಗಿ, ಯಾಕ್ರೀ ಯಾನಾತು ? ಅಕಿ ಅತ್ತಿ - ಮಾವ ಛೊಲು ಇಲ್ಲ್ಯಾನ್ರಿ, ಗಂಡ ಸಿದ್ದಪ್ಪಾ ಕುಡಿತಾನೇನ ? ಅಕಿ ಮೈದುನ, ಅತಿಗಿ ಎಲ್ಲಾರ ಗೂಡಾ ಛೋಲೋ ಅದಾಳೋ ? ಇಲ್ಲೋ ? ನನ್ನ ಮನಸ ಮೊದಲsss ಅಲ್ಲಿ ಆಕೀನ ಕೊಡೋದ ಇಲ್ಲಾಗಿತ್ತು. ನೀವs ಮನಿಯಾಗ ಹಂಗೈತಿ - ಹಿಂಗೈತಿ ಸೀತವ್ವ ಸುಖದಾಗ ಇರತಾಳು ಅಂತ ಬಡಿಗೇರ ಶಾಣಪ್ಪನ ಮಾತಕೇಳಿ ಫಸಾಸ್ರಿ. ಹೆಂಗ ಮಾಡೋದು ? ದೇವ್ರ ನನ್ನ ಮಗಳಿಗೆ ಛೋಲೋ ಇಡು' ಎಂದು ಗಂಟಲುಬ್ಬಿ ದುಃಖ ತುಂಬಿ ಬಂದು ಸೋನವ್ವನ ಕಣ್ಣಾಗೀನು ದಳಾದಳಾ ನೀರು ಸೋರಲಾರಂಭಿಸಿದವು.

'ಮತ್ತs ಅಕ್ಕಾನ ಅಲ್ಲೇ ಯಾಕ ಬಿಟ್ಟ ಬಂದಿ ? ಕರಕೊಂಡ ಬರಬಾರದೇನ ?' ಎಂದು ಸೀತವ್ವನ ತಂಗಿ ಗೌರಿ ಅವ್ವ ಅಳೋದನ್ನ ನೋಡಿ ಅಂದಿದ್ದಳು.

ಸಿದ್ದಪ್ಪನ ಅಣ್ಣ ಭರಮಣ್ಣಾ ಯಾವಾಗಲೂ ಹೊಲದಾಗ ಇರಾಂವ ಮನೆಯ ಕಡೆಗೆ ಯಾವಾಗಲಾದರೂ ಒಮ್ಮೊಮ್ಮೆ ಬರತಿದ್ದ. ಹಿಂಗಾಗಿ ಅವನ ಹೆಂಡತಿ ಸುಂದ್ರಾನ ಕಣ್ಣು ಸಿದ್ದಪ್ಪನ ಮೇಲೆ ಇತ್ತು. ಭರಮಣ್ಣನ ತಲೆ ಸರಿಯಿರಲಿಲ್ಲಾ. ಹೊಲದಲ್ಲಿ ಕೆಲಸ ಮಾಡುತ್ತಿದ್ದರೆ, ಕೆಲಸಾನ ಮಾಡಾಂವ. ಹೆಂಡತಿ ಸಂಗಡ ಒಂದು ದಿನವಾದರೂ, ಕುಳಿತು ಚೆನ್ನಾಗಿ ಮಾತಾಡಿರಲಿಲ್ಲ. ಗಂಡ ಭರಮಣ್ಣನ ಸುಖ ಒಂದು ದಿನವೂ ಕಂಡಿರಲಿಲ್ಲ ಸುಂದ್ರಾ. ಕಾರಣ ಸುಖ, ಸರಸಸಲ್ಲಾಪ, ಮೈದುನ ಸಿದ್ದಪ್ಪನ ಕೂಡ ನೆರವೇರಿಸಿ ಕೊಳ್ಳುತ್ತಿದ್ದಳು. 'ಪತಿ' ಎಂಬ ಹೆಸರಿನ ಹಣೆಪಟ್ಟಿ ಮಾತ್ರ ಪಡೆದುಕೊಂಡಿದ್ದ ಭರಮಣ್ಣಾ.

ಹಿಂಗಾಗಿ ಸಿದ್ದಪ್ಪಾ ಸುಂದ್ರಾನ ಮಾತು ಕೇಳಿ ಹೆಂಡತಿ ಸೀತಾಳನ್ನು ಕಡೆಗಣಿಸುತ್ತಿದ್ದ. ಮಾತಿಗೊಮ್ಮೆ ಬೈಯುತ್ತಿದ್ದ. ಇದಕ್ಕೆ ಸೀತಾ ವಿರೋಧಿಸಲು ಅಸಹಾಯಕಳಂತಿದ್ದಳು.

ಮುಂಜಾನೆ ಎದ್ದ ಕೂಡಲೇ ದನಗಳ ಸಗಣಿ ತೆಗೆಯುವುದು, ಮನೆಯಲ್ಲಿ ನೀರು, ಕಸ ಮುಸುರೆ, ಅಡುಗೆ ಮಾಡಿಕೊಂಡು ಹೊಲಕ್ಕೆ ಹೋಗಬೇಕು. ಮತ್ತೆ ಹೊತ್ತು ಮುಳುಗಿ ಮನೆಗೆ ಬಂದರೆ ಮನೆಯಲ್ಲಿನ ಸಂಜೆಯ ಕೆಲಸವೂ ಕಾದಿರುತ್ತಿತ್ತು ಸೀತಾನ ಸಲುವಾಗಿ.

ಎಷ್ಟು ಕೆಲಸ ಮಾಡಿದರೂ ಒಂದು ದಿನವೂ ಅವಳನ್ನು ಯಾರೂ ಪ್ರೀತಿಸುತ್ತಿರಲಿಲ್ಲ. 'ನನಗ್ಯಾನ ಕೊಟ್ಟಾರು, ನಿಮ್ಮಪ್ಪ - ನಿಮ್ಮವ್ವ ಬಂಗಾರ ಸರಾ ಇನ್ನಾ ಮಾಡಿ ಹಾಕ್ಯಾಕತ್ತಾರು' ಎಂದು ಮಾತಿಗೊಮ್ಮೆ ಆ ವಿಷಯವನ್ನೇ ತೆಗೆದು, ಹಂಗಿಸಿ ಮಾತಾಡುತ್ತಿದ್ದ ಸಿದ್ದಪ್ಪ, ಒಮ್ಮೊಮ್ಮೆ ಬಡತ ತಪ್ಪಿದರೆ, ಅಂದು ಅವಳ ಪುಣ್ಯವೇ ಎಂಬಂತಿತ್ತು. ಬೈಗುಳ ಅವಳಿಗೆ ಮಾಮೂಲಿಯಾಗಿದ್ದವು. ಮನೆಯಲ್ಲಿ ಸಿದ್ದಪ್ಪನ ತಾಯಿ ಸುಶೀಲವ್ವಾ ಮಗನ ಹೆಜ್ಜೆಯನ್ನೇ ತುಳಿಯುತ್ತಿದ್ದಳು. ತಂದೆ ಅದಕ್ಕೆ ವಿರೋಧಿಸಿದರೆ, ಅವನ ಆಟ ನಡೆಯುತ್ತಿರಲಿಲ್ಲ ಸುಶೀಲಾನ ಮುಂದೆ.

ಸೀತಾ ತನ್ನ ತಂದೆ - ತಾಯಿಯಂತೆ ಕಷ್ಟವನ್ನು ಸಹಿಸುವ ದಿಟ್ಟಳಾಗಿದ್ದಳು. ಮುಂದೆ ಯಾವಾಗಲಾದರೊಮ್ಮೆ ದೇವರು ತನ್ನ ಮೇಲೆ ದಯೆ ತೋರಿ, ತನ್ನ ಗಂಡನ ಮನಸ್ಸನ್ನು ಬದಲಾಯಿಸಿ, ತನ್ನ ಜೋಡಿ ಸರಿಯಾಗಿ ಬಾಳ್ವೆ ಮಾಡುವಂತೆ ಅವನ ಮನಸ್ಸನ್ನು ತಿರುಗಿಸ್ಯಾನು ಎಂದು ನಂಬಿಕೆಯನ್ನು ಇಟ್ಟಿದ್ದಳು.

ಅಂದು ರಾತ್ರಿ ಹೊಲದಲ್ಲಿ ನೀರು ಉಣಿಸುವುದು ಮುಗಿಸಿ ಬಂದ ಮೇಲೆ, ಸೀತಾ ಮಲಗಲು ತನ್ನ ಕೋಣೆಯೊಳಗೆ ಹೋಗಲು ಸೀತಾನ ನೋಡಿದ ಸುಂದ್ರಾ, ಸಿದ್ದಪ್ಪನ ತೆಕ್ಕೆಯಿಂದ ಬಿಡಿಸಿಕೊಂಡು, ಎದ್ದು, ಯಾಸಿಗಣ್ಣಿನಿಂದ ಸೀತಾನ ನೋಡುತ್ತ 'ಹೂಂ' ಎಂದು ಕಾಲು ಕಿತ್ತಿದ್ದಳು. ಅವಳ ದಾಹ ತೀರಿರಲಿಲ್ಲ ಅಂತ ಕಾಣುತ್ತದೆ. ಸೀತಾ ಅದಕ್ಕೆ ಅಡ್ಡಿಯಾಗಿದ್ದಳು.

'ಸೀತಿ ಏಳ, ಹೊತ್ತ ನೆತ್ತಿ ಮ್ಯಾಲ ಬಂದೈತಿ, ದನಗೋಳ ದವನ್ಯಾಗೊಮ್ಮೆ, ಹೆಂಡ್ಯಾಗೊಮ್ಮೆ ಹಂಗs ಸುತ್ತಾಡಕತ್ತಾವು' ಎಂದು ಸುಂದ್ರಾ ಸೀತಾನ ಎಬ್ಬಿಸುತ್ತಿದ್ದಳು.

ರಾತ್ರಿ ಹನ್ನೆರಡರ ತನಕ ನೀರು ಉಣಿಸಿ ಬಂದು ಮೈಸುಸ್ತಾಗಿದ್ದ ಕಾರಣ ಸೀತಾ ಅಂದು ಬೇಗ ಎದ್ದಿರಲಿಲ್ಲ. ಸುಂದ್ರಾನ ಮುತ್ತು ನುಡಿಗಳು ಸೀತಾನ ಕಿವಿಗೆ ಬಿದ್ದಾಗ, ಎಚ್ಚರವಾಗಿ ಕಣ್ಣು ತಗೆದು ನೋಡಿದಾಗ, 'ಏಳ್, ಏಳ್ ಯಾನ ನೋಡ್ತಿ, ದಗದೆಲ್ಲಾ ಹಂಗ ಬಿದ್ದೈತಿ ಹೊತ್ತ ನೆತ್ತಿಮ್ಯಾಲ ಬಂದೈತಿ' ಎಂದಳು ಸುಂದ್ರಾ.

'ಇಲ್ಲ ಸುಂದ್ರಕ್ಕಾ ಇಂದ ಯಾಕೋ..... ನನ್ನ ಮೈ ನುಸಾಕತ್ತೇತಿ. ನೀನ .......' ನೀನ, ಅನ್ನುವುದರೊಳಗೆ ಸುಂದ್ರಾ ಬಂದು ಸೀತಾನ ತಲೆಯ ಜುಟ್ಟನ್ನೇ ಹಿಡಿದು ಕಪಾಳಕ್ಕೊಂದು ಹೊಡೆದು 'ಯಾನ ನಾ ಮಾಡಲ್ಯಾನ. ನಾ...... ನಿನ್ನಂಗ..... ಹಂಗ ಬಂದಿಲ್ಲಾ. ನಮ್ಮಪ್ಪ

ಇಪ್ಪತ್ತೈದು ಸಾವಿರ ರೂಪಾಯಿ ವರದಕ್ಷಿಣೆ ಕೊಟ್ಟಾನು ಗೊತ್ತೈತ್ಯಾನ' ತಲೆಯಲ್ಲಿನ ಜುಟ್ಟು ಹಿಡಿದು ಸುಂದ್ರಾ ಅಂದಿದ್ದಳು.

ಸೀತಾನ ಗಂಡ ಸಿದ್ದಪ್ಪನ ಸಂಗಡ ನಡೆಯಿಸಿದ ಕಿತಾಪತಿಯಂತೆಯೆ, ಮದುವೆಯಾಗುವ ಮೊದಲು ತನ್ನೂರಲ್ಲಿ ಗೌಡನ ಮಗನ ಸಂಗಡ ಇದ್ದ ಇವಳ ಸಂಬಂಧ ಯಾರಿಗೂ ಗೊತ್ತಾಗಬಾರದೆಂದು, ಇವಳು ಮನೆಯಿಂದ ಮೊದಲು ತೊಲಗಲಿ ಎನ್ನುವ ಒಂದೇ ಒಂದು ದೃಷ್ಟಿಯಿಂದ ಸುಂದ್ರಾನ ತಂದೆ ಇಪ್ಪತ್ತೈದು ಸಾವಿರ ರೂಪಾಯಿ ಕೊಟ್ಟು ಮದುವೆ ಮಾಡಿ ಮುಗಿಸಿದ್ದರು.

ಸೀತಾ ಏಳದಿದ್ದಾಗ ಸುಂದ್ರಾ ಅವಳನ್ನು ಹೊಡೆಯತೊಡಗಿದ್ದಳು. ಅಷ್ಟರಲ್ಲಿಯೇ ಸಿದ್ದಣ್ಣ ಬಂದು ಸುಂದ್ರಾನ ಸಂಗಡ ಕೈಗೂಡಿಸಿದ್ದನು. ಇದರಲ್ಲಿ ಅವರು ರಾತ್ರಿ ಸಿಟ್ಟನ್ನು ತೀರಿಸಿಕೊಂಡಿದ್ದರು.

'ಇನ್ನ ಮುಂದ ಮನ್ಯಾಗ ಒಂದ ಘಳಿಗೆ ಇದ್ರ್ಯಂದ್ರ ನೋಡ ನಿನ್ನ, ಇಂದಿನಿಂದ ನೀ...... ಹೋಗಿ ನನಗ ಎರಡ ತೊಲಿ ಬಂಗಾರ ಸರಾ ಮತ್ತ.... ಐದ ಹಜಾರ ರೂಪಾಯಿ ತರಬೇಕ. ಇಲ್ಲಂದ್ರ ಮತ್ತ..... ಇದ ತರಾ ಆಗತೈತಿ' ಎಂದು ಬೆದರಿಕೆ ಹಾಕಿ ಸಿದ್ದಪ್ಪ ಹೊರಗೆ ಹೋಗಿದ್ದನು.

ಬಡೆತ ತಿಂದ ಸೀತವ್ವಳ ತಲೆಯಲ್ಲಿನ ಕೂದಲು ಕಿತ್ತಿ ರಕ್ತ ಬರುತ್ತಿತ್ತು. ಮೈ ಮೈಯಲ್ಲಾ ನುಗ್ಗಾಗಿತ್ತು. ಸೀತಾ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ಅವಳು ಅತ್ತರೂ ಅಲ್ಲಿ ಕೇಳುವವರು ಸೀತಾಗ ಯಾರೂ ಇರಲಿಲ್ಲಾ. ಕೇವಲ ನಾಲ್ಕು ಗೋಡೆಗಳು ಮಾತ್ರ ಇದ್ದವು. ಇಷ್ಟೆಲ್ಲಾ ಸಹಿಸಿಕೊಂಡು ಇಲ್ಹೇಗೆ ಇರಲಿ ಎಂದು ದುಃಖ ತಾಳಲಾರದೇ ಸೀತಾ ತವರೂರ ತಂದೆ - ತಾಯಿಯ ಒಡಲು ಸೇರಿದ್ದಳು.

'ನೋಡ ದನಾ ಬಡದಂಗ ಬಡದಾರು, ಅವರಿಗೆ ಮನಸರೆ ಹೆಂಗ ಬಂತು ? ನನ್ನ ಮಗಳನ್ನು ಬಡಿಲಾಕ. ಕಟಕರ ಕೈಯಾಗ ಕುರಿ ಕೊಟ್ಟಾಂಗ ಆಗೇತಿ ನಮ್ಮ ಸೀತವ್ವನ್ನ' ಎನ್ನುತ್ತ ಹೆಂಡತಿಗೆ 'ನನ್ನ ಅಂಗಿ ತಾ ಇಲ್ಲಿ ನಾ ಊರ ಕಡೆಗೆ ಹೋಗಿ ಬರತೇನಿ, ಆ ಮಕ್ಕಳಿಗೆ ಇಂದ ಯಾನಾದರೂ ಮಾಡಿ ಬುದ್ಧಿ ಕಲಸತೂನು' ಎನ್ನುತ್ತ ಸೋನವ್ವ ಕೊಟ್ಟ ಅಂಗಿಯನ್ನು ಹಾಕಿ ಸಿಟ್ಟಿನಿಂದ ಊರ ದಾರಿ ಹಿಡಿದಿದ್ದ ಮಾಯಣ್ಣಾ. ಆತನ ಸಿಟ್ಟು ಹೊಟ್ಟೆಯಲ್ಲಿ ಇತ್ತು ವಿನಃ ರಟ್ಟೆಯಲ್ಲಿರಲಿಲ್ಲ. ಕಾರಣ ಅವನು ಅಸಹಾಯಕನಾಗಿದ್ದನು.

'ಯಾಕ್ರೀ ಮಾಯಪ್ಪಣ್ಣಾ ಭಾಳ ಭರಾ ಭರಾ ನಡದಿರಿ. ಎಲ್ಲಿಗೆ ? ದೌರಾ' ಎಂದು ಕಾಸವ್ವನ ಗುಡಿಸಿಲಿನ ಹತ್ತಿರ ಬಂದ ಮಾಯಣ್ಣಾನನ್ನು ಕೇಳಿದಳು ಕಾಸವ್ವ.

'ಎಲ್ಲಿs ದೌರಾ ಕಾಸಕ್ಕಾ, ಸೀತಾನ ಮತ್ತ ಹೊಡದು - ಬಡದು ಕಳಸ್ಯಾರು ಈ ಕಟುಕರು. ಈಗ ನಿನ್ನ ಕಡೇನ ಬಂದೇನಿ. ನನ್ನ ಅಳ್ಯಾ ಒಬ್ಬ ಪೊಲೀಸ್ ಅದಾನು ಅಂತ ನೀ ಮೊನ್ನೀ ಹೇಳಿದ್ದಿ. ಅವರು ಇರೋ ಕುಡಚಿ ಪೊಲೀಸ್ ಟೇಶನ್ ಹದ್ದಿನ ಒಳಗ ಕೊಲ್ಲೂರ ಬರತೈತಿ. ಅದಕ್ಕ ಆ ಮಕ್ಕಳ ಮ್ಯಾಲ ಫಿರ್ಯಾದಿ ಕೊಡಬೇಕಂತ ಬಂದೇನಿ. ನಿನ್ನ ಅಳ್ಯಾನು ಭೋಲೊ ಅದಾನು ಬಡವರಿಗೆ ಮದತ ಮಾಡತಾನು ಅಂತ ಅಂದಿದ್ದಿ. ಹೋಗಿ ಬರೋಣ ನಡಿ ಅವರ ಕಡಿಗಿ' ಎಂದು ನಿಂತ ನಿಂತಲ್ಲೆ ಒಂದೇ ಉಸುರಿನಿಂದ ಕಾಸವ್ವನಿಗೆ ಹೇಳಿದ್ದ ಮಾಯಣ್ಣಾ.

ಆವಾಗ ಕಾಸವ್ವ, 'ಅಯ್ಯ ಶಿವನ... ಮತ್ತ ಬಡದ ಕಳಸ್ಯಾರ ಹುಡುಗೀನ ಹಾಂಟ್ಯಾಗೋಳ್ಗs, ಈ ಕಡೇರ ಬರ್‍ರಿ ಮಾಯಪ್ಪಣ್ಣಾ ಭಾಳ ಬಿಸಲ ಐತಿ' ಎಂದು ನೆಳ್ಳಿನ ಆಸರೆಗೆ ನಿಲ್ಲಲು ಮಾಯಣ್ಣಾನನ್ನು ಕರೆದಿದ್ದಳು ಕಾಸವ್ವ. 'ಅಲ್ಲರ್‍ರೀ, ಮೊನ್ನೀ ನೀವs ಹುಡುಗಿ ಕಡಿ ಹೋಗಿ ಅಲ್ಲಿ ಎಲ್ಲಾ ತಾಕೀತು ಮಾಡಿ ಬಂದೇನಿ ಅಂತಿದ್ರೆಲ್ಲಾ' ಎಂದಳು ಕಾಸವ್ವ.

'ಬಂದಿದ್ನಿ ಯಾನ ಮಾಡತ್ತಿ ಕಾಸಕ್ಕಾ ನನ್ನ ಹಣೆಬರಾನ ಹಿಂಗೈತಿ. ತಯಾರಾಗು ದೌಡ ಹೋಗೋಣ ನಡ್ಸಿs' ಎಂದ ಮಾಯಣ್ಣಾನ ಗಡಿಬಿಡಿ ಮಾತಿಗೆ ಕಾಸವ್ವ ಗುಡಿಸಿಲೊಳಗೆ ಹೋಗಿ, ಎಲೆ ಚೆಂಚಿಯನ್ನು ಕೈಯಲ್ಲಿ ಹಿಡಿದು ಹೊರಗೆ ಬಂದು 'ನಡೀರಿ ಹೋಗೋಣ, ಗಾಡಿ ಒಂದ ಸಿಗತೈತೋ ..... ? ಇಲ್ಲೋ ..... ?' ಎನ್ನುತ್ತ ಬಸ್ಸು ನಿಲ್ಲುವ ಸ್ಥಳಕ್ಕೆ ಇಬ್ಬರೂ ಧಾವಿಸಿದ್ದರು.

ತಾಯಿ ಮತ್ತು ತಾಯಿಯ ಸಂಗಡ ಬಂದ ಮಾಯಣ್ಣಾನನ್ನು ನೋಡಿ, ಕಾಸವ್ವನ ಮಗಳು ಇಂದಾ ಎದ್ದು ನೀರು ಕೊಟ್ಟಿದ್ದಳು. ನೀರು ಕುಡಿದು ಮಾಯಣ್ಣಾ ತಾನು ಬಂದ ಕಾರಣ ಹೇಳಲು ಪ್ರಾರಂಭಿಸಿದ.

'ನೋಡವಾ ಇಂದಾ, ನನ್ನ ಮಗಳ್ಗಿ ಅವರು ಭಾಳ ತ್ರಾಸ ಕೊಡತಾರು. ನಾವು ಇರಲಿ ಅಂತ ತಾಳುತ್ತ ಬಂದೇವು. ಎಷ್ಟರೇ ತಾಳೋದು. ಕುತಗಿ ಮಟಾ ಬರತನಾ ತಾಳೀದೀವು. ಈಗ ಮತ್ತ ಅದ ಹಾಡ ಐತಿ. ಯಾವ ಪರಿ ಬಡದಾರ ಹುಡುಗೀನ, ನುಗ್ಗ ನುಗ್ಗ ಆಗಿ ಹೋಗೈತಿ ಅವರ ಕೈಯಾಗ. ತಲೆಯೊಳಗಿನ ಕೂದಲ ಹೋಗೋತನಾ ಬಡದಾರು ಮನಸ್ಯಾ ಅದಾರೋ ? ಏನ್ ದನಾ ಅದಾರೋ ? ಎಂದು ಕಣ್ಣಲ್ಲಿನ ನೀರು ತೆಗೆದು ದುಃಖಿಸ ತೊಡಗಿದ ಮಾಯಣ್ಣಾ.

'ಅಳಬ್ಯಾಡ್ರಿ ಮಾಯಪ್ಪ ಕಾಕಾ. ನಿಮ್ಮ ಮಗಳ ಆದರೇನು ? ನಾ ಅಂದರೇನು ? ಒಂದs ಹಿಡೀರಿ' ಎಂದು ಚಹದ ಕಪ್ಪನ್ನು ಮಾಯಣ್ಣಾನ ಕೈಯಲ್ಲಿ ಕೊಟ್ಟಿದ್ದಳು ಇಂದಾ.

ಮಾಯಣ್ಣಾ ಚಹದ ಕಪ್ಪನ್ನು ಕೆಳಗಿಡುತ್ತ, 'ಇಲ್ಲವಾ ಇಂದಾ, ಅವರು ನನ್ನ ಸೀತವ್ವನ ಭಾಳ ಕಾಡತಾರು. ಅವರ ಮ್ಯಾಲಿನಾ ಫಿರ್ಯಾದಿ ಕೊಡಾಂವ. ಅವರಿಗಿ ಬಡತ ಬೀಳಲಾಕs ಬೇಕು'

ಎಂದ ಮಾತಿಗೆ ಇಂದಾ, 'ಇರ್‍ಲಿ ಮಾಯಪ್ಪ ಕಾಕಾ, ಅವರು ಈಗ ಡ್ಯೂಟಿಗೆ ಹೋಗ್ಯಾರು. ಡ್ಯೂಟಿಯಿಂದ ಬಂದ ಬಳಿಕ ಅವರೀಗಿ ಹೇಳೋಣ. ಆದರ... ಅವರು ಒಬ್ಬರು ನಮ್ಮವರು. ಉಳಿದ ಅವರ ಮ್ಯಾಲಿನ ಸಾಹೇಬರು ನಮ್ಮವರಲ್ಲಾ. ಅದಕ್ಕs ಆ ಸಾಹೇಬರಿಗೆ ಮೊದಲ ಕೈ ಬೆಚ್ಚಗ ಮಾಡಬೇಕಾಗತೈತಿ. ಹಣ ಸ್ವಲ್ಪ ಬೇಕು' ಎಂದಳು.

ಹಣ ಅಂದ ಕೂಡಲೇ ಮಾಯಣ್ಣಾನ ಬಾಯಿ ಒಣಗಿತು. ಮೊದಲs ಬಡತನ ಸ್ಥಿತಿ. ಆದರೂ ಅವರನ್ನು ಏನಾದರೂ ಮಾಡಿ ಶಿಕ್ಷಿಸಿ, ಅಂಜಿಸಿ, ಬುದ್ಧಿ ಕಲಿಸಿ, ತನ್ನ ಮಗಳ ತ್ರಾಸ ಕಡಿಮೆ ಮಾಡುವದು ಮಾಯಣ್ಣಾನ ಉದ್ದೇಶವಾಗಿತ್ತು. 'ನೋಡ ಇಂದಾ, ಐದುನೂರು ರೂಪಾಯಿ ತಂದೇನಿ ಹಿಡಿ ತಗೋ' ಎಂದು ಕೈ ಚಾಚಿ ಕೊಡಲು ಹೋದ.

'ಐದನೂರು ರೂಪಾಯಿ ಏನಾಗಬೇಕು ? ಮಾಯಪ್ಪ ಕಾಕಾ ಈಗ ದುನಿಯಾ ಬದಲ ಆಗೇತಿ. ನಮ್ಮ ಕೆಲಸ ಆಗಬೇಕಾದ್ರ ಸಾಹೇಬ್ರ ಕಿಸೆ ತುಂಬಬೇಕು' ಎಂದಳು ಇಂದಾ.

ಹಾಗಂದದ್ದಕ್ಕೆ ಮಾಯಣ್ಣಾ, 'ಹಂಗನಬ್ಯಾಡ ಇಂದಾಬಾಯಿ, ಅವರಿಗಿ ಬಡಿಸಬೇಕು, ಬುದ್ಧಿ ಕಲಿಸಬೇಕು. ಮೊದಲ ಆ ಸುಂದ್ರಿಗೆ ಬುದ್ಧಿ ಕಲಿಸಬೇಕು. ಈಗ ಇಟ್ಟs ಅದಾವು ತಗೊ ಮತ್ತ ಮನಿಯಾಗ ಜ್ವಾಳ ಅದಾವು, ಸಜ್ಜಿ ಅದಾವು, ಅವನ್ನೆಲ್ಲ ಮಾರಿ ಬಂದಾದ್ರು ನಿಮಗ ಕೊಡೊ ರೊಕ್ಕ ತಂದು ಮುಟ್ಟಿಸುತೂನು. ಅಟ್ಟು ಸಾಲದಿದ್ದರೂ, ಬರೋ ಆಯಿತಾರ ಪ್ಯಾಟಿಗೆ ಎತ್ತಗೋಳ ವೈದು ಮಾರಿ ನಿಮಗ ರೊಕ್ಕ ತಂದು ಕುಡತೂನು. ಯಾಕಂದ್ರ ನನ್ನ ಮಗಳಿಗೆ ತ್ರಾಸ ಭಾಳ ಕೊಟ್ಟಾರು. ಅವರಿಗೂ, ಅದರಂಗ ತ್ರಾಸ ಆದಾಗ ನನಗೆ ಸಮಾಧಾನ' ಈ ರೀತಿ ಮಾಯಣ್ಣಾ ಒಂದೇ ಸವನೆ ತನ್ನ ಅಳಲನ್ನು ಇಂದಾನ ಮುಂದೆ ತೋಡಿಕೊಂಡಿದ್ದನು.

ಮಾಯಣ್ಣಾನ ಪರಿಸ್ಥಿತಿಯನ್ನು ನೋಡಿ, ಅವನ ಮಾತಿಗೆ ಒಪ್ಪಿ ತನ್ನ ಗಂಡನಿಗೆ ಎಲ್ಲ ವಿಷಯ ಹೇಳಿದ್ದಳು ಇಂದಾ.

ಮಾಯಣ್ಣಾ ಅಂದುಕೊಂಡಂತೆ ಇಂದಾಬಾಯಿಯ ಗಂಡನ ಸಹಾಯದಿಂದ ಮಾಯಣ್ಣಾನ ಅಳಿಯನಿಗೆ ಮತ್ತು ಸುಂದ್ರಾಗೆ ಶಿಕ್ಷೆಯಾಗಿ ಇನ್ನು ತನ್ನ ಮಗಳಿಗೆ ಏನು ತ್ರಾಸ ಕೊಡುವುದಿಲ್ಲ, ಅವಳ ಮೈಗೆ ಐದು ಬೆರಳು ಹಚ್ಚುವುದಿಲ್ಲ ಎಂದು ಒಂದು ಕರಾರಿನಂತೆ ಅವರಿಗೆ ತಾಕೀತು ಮಾಡಿ, 'ಸೀತಾಗೆ ಏನಾದರ ಧಕ್ಕೆ ಆದ್ರ ನಿಮ್ಮನ್ನು ಜೀವಂತ ಸುಡತೇವ' ಎಂದು ಅಂಜಿಕೆ ಹಾಕಿದ್ದರು.

ಮಾಯಣ್ಣಾ ಎಲ್ಲ ಸರಿಹೋದ ನಂತರ ಸೀತಾಳನ್ನು ಕರೆದುಕೊಂಡು, ಗಂಡನ ಮನೆಯಲ್ಲಿ ಬಿಟ್ಟು 'ಇನ್ನು ಆರು ತಿಂಗಳ ತಡೀರಿ. ನಿಮಗ ಎರಡ ತೊಲಿ ಬಂಗಾರ ಸರಾ ಮತ್ತs ಐದ ಹಜಾರ ರೂಪಾಯಿ ತಂದ ಕೊಡತೇವಿ. ಇಟ್ಟs ನಾ ನಿಮಗ ಕೈ ಮುಗಿದ ಬೇಡಕೋತೀನಿ. ಆಕೀನ ಛೊಲೊ ನೋಡಿಕೊಳ್ರಿ' ಎಂದು ಅಳಿಯ ಸಿದ್ದಪ್ಪನಿಗೆ ಹೇಳಿ ಸೀತವ್ವಳನ್ನು ಬಿಟ್ಟ ಬಂದಿದ್ದ.

ಆರು ತಿಂಗಳುಗಳು ಕಳೆದಿದ್ದವು. ಮಾಯಣ್ಣನ ಹತ್ತಿಯ ಬೆಳೆ ಮತ್ತು ಜೋಳದ ಬೆಳೆ, ಚೆನ್ನಾಗಿ ಬೆಳೆದು ಬಿಗಿದು ನಿಂತಿತ್ತು. ಸಂಜೆಯಾಗಿತ್ತು, ಮಾಯಣ್ಣ ಮತ್ತು ಸೋನವ್ವ ಬೆಳೆದ ಹೊಲಗಳನ್ನು ನೋಡುತ್ತ 'ನಮ್ಮ ಸೀತಾಗ ಬಂದ ಸ್ಥಿತಿ ಈ ವರ್ಷ ಕಳೆದು ಹೋಗತೈತಿ, ಅಕಿ ಗಂಡಗ ಕೊಡಬೇಕಾಗಿದ್ದ ಬಂಗಾರ ಮತ್ತ ರೊಕ್ಕಾ ಈ ವರ್ಷ ಕೊಟ್ಟು, ನಮ್ಮ ಸೀತವ್ವನ ಕುತಗಿ ಉರುಲು ತಗ್ಯೋನು' ಎಂದು ಗಂಡ – ಹೆಂಡರಿಬ್ಬರು ಮಾತಾಡುತ್ತಿದ್ದರು.

'ಹೌಂದರ್ರಿ, ನಮ್ಮ ಸೀತವ್ವಗ ಕಾಡೋ ಕಾಟ ನಿಂತ ಹೋಗತೈತಿ. ಅಕಿ ಗಂಡ ಬಡಿಯೋದು ನಿಲ್ಲಿಸಿದರ, ಅಕಿ ಸುಖದಾಗ ಇರತಾಳು. ನಮಗ ಅಕಿ ಕಾಳಜಿ ಇರೋದಿಲ್ಲ. ದೇವರ ಅಕೀನ ಛಂದಾಗಿ ಇಟ್ಟರ ಸಾಕ' ಎಂದು ಗಂಡನಿಗೆ ಹೇಳುತ್ತಿದ್ದಳು ಸೋನವ್ವ.

'ಅಪ್ಪಾ, ಅವ್ವಾ, ಯಾರೋ ಜೀಪ್‌ಗಾಡಿ ತಗೊಂಡ ಬಂದಾರು. ನಿಮ್ಮನ್ನ ಕೇಳಲಾತಾರು' ಎಂದ ಮಾಯಣ್ಣನ ಸಣ್ಣ ಮಗಳು ಗೌರಿ ಓಡುತ್ತ ಬಂದು ಹೇಳಿದ್ದಳು. ಮಾಯಣ್ಣ ಮತ್ತು ಸೋನವ್ವ ಅಲ್ಲಿಂದ ಲಗುಲಗು ನಡೆದರು. ಹೋಗಿ ನೋಡುವುದರಲ್ಲಿ ಪೊಲೀಸ್ ಇಲಾಖೆಯವರ ಜೀಪ್ ಗುಡಿಸಿಲಿನ ಮುಂದೆ ಬಂದು ನಿಂತಿತ್ತು. ಪೊಲೀಸ್‌ರನ್ನು ನೋಡಿ ಮಾಯಣ್ಣನ ಕಾಲು ತಣ್ಣಗಾಗಿದ್ದವು.

'ಮಾಯಣ್ಣ ಅಂದರ ನೀನಯೇನು ? 'ಹೌಂದ್ರಿ' 'ನಿಮ್ಮ ಮಗಳ್ನ ಕೊಲ್ಲೂರಿಗೆ ಕೊಟ್ಟಿರೇನು' 'ಹೌಂದ್ರಿ' ಎಂದು ಪೊಲೀಸ್ ಇನಸ್ಪೆಕ್ಟರ್ ಕೇಳಿದ ಪ್ರಶ್ನೆಗೆ ಉತ್ತರಿಸಿ, 'ಯಾನಾತ್ರಿ ನನ್ನ ಮಗಳ್ಗಿ' ಗಾಬರಿಯಿಂದ ಕೇಳಿದ್ದ ಮಾಯಣ್ಣ.

'ಅವಳೀಗ ಇಲ್ಲ. ಹೊಳೆಯಲ್ಲಿ ಬಿದ್ದು ಪ್ರಾಣ ಕಳಕೊಂಡಾಳು. ಬರ್ರೀ, ಇಲ್ಲೊಂದು ಸಹಿ ಹಾಕರ್ರಿ. ಹೆಣವನ್ನು ಪೋಸ್ಟ್‌ಮಾರ್ಟಂ ಮಾಡಬೇಕು' ಎಂದು ಸಹಿ ಹಾಕಿಸಿಕೊಂಡರು.

ಮಗಳ ನಾನಾ ತರಹದ ನೆನಪುಗಳು ಬಂದು ಸೋನವ್ವ ಬಿಕ್ಕಿಬಿಕ್ಕಿ ಅಳುತ್ತ, ಸೆರಗಿನಿಂದ ಕಣ್ಣೀರನ್ನು ಒರಸಿಕೊಳ್ಳುತ್ತಿದ್ದಳು. 'ಅಲ್ಲಿ ಹೆಣ್ಣಾ ಇಟ್ಟೇವಿ ನಡೀರಿ. ಬೇಗ ಗಾಡಿ ಹತ್ತರಿ' ಎಂದು ಪೊಲೀಸ್ ಇನಸ್ಪೆಕ್ಟರ್ ಹೇಳಿದ್ದ.

ಮಾಯಣ್ಣ, ಸೋನವ್ವ, ಅವರ ಮಗಳು ಗೌರಿ ಎಲ್ಲರೂ ಅಳುತ್ತ ಜೀಪ್ ಗಾಡಿ ಹತ್ತಿದರು. ಧೂಳೆಬ್ಬಿಸುತ್ತ ಹೋದ ಜೀಪನ್ನೇ ಮಾಯಣ್ಣನ ಎತ್ತುಗಳು ನೋಡುತ್ತಿದ್ದವು. ಅವುಗಳ ಕಣ್ಣಿನಿಂದ ನೀರು ಒಂದೇ ಸವನೆ ಸುರಿಯುತ್ತಿದ್ದವು.

●

# ಹಳೇಮರ

● ಲಕ್ಷ್ಮಣ ಧೋಂಡೆ

ಮೋಡ ಮುಸುಕಿದ ಮ್ಯಾಲ ಮುಗ್ಲಾಗಿನ ಸೂರ್ಯ ಮರೆಯಾಗ್ಲಿಕತ್ತಿದ್ದ. ಕಾರ್ಮೋಡದಿಂದ ಮಳೆ ಹನಿ ಒಂದೊಂದಾಗಿ ಉದರ್ರ್ಯೊಂತ ಒಮ್ಮಿಂದೊಮ್ಮೆಲೆ ರಭಸದಿಂದ ಇಳೆಯೊಡ್ಲಿಗಪ್ಪಳಿಸ್ಲಕತ್ತಿತ್ತು. ಖಡ್ ಖಡಲ್ ಎಂದು ಅರ್ಭಟಿಸುತ್ತಾ ಮಿಂಚಿನ ಬೆನ್ನಾಗ ಸಿಡಿಲು ಸ್ವರವೇರಿಸಿತು. ಕ್ಷಣಕ್ಷಣಕ್ಕೂ ಗುಡು ಗುಡು ಎನ್ನುತ್ತಾ ಗುಡುಗಿನ ಸದ್ದು ಆಗಾಗ ಕೇಳಿ ಬರುತ್ತಿತ್ತು.

ಮುಗ್ಲೆಂಬ ಮುಗಿಲಿನ್ಯಾಗ ಗುಡುಗು ಸಿಡಿಲು ಹೊರಚಿಮ್ಮಿ ಬರ್ಲಿಕತ್ತಿತ್ತು. ಅವುಗಳ ತಾಳಕ್ಕೆ ತಕ್ಕಂತೆ ಮೇಘರಾಜ ಹಂಗs ನಿರಂತರವಾಗಿ ನರ್ತಿಸಲಿಕತ್ತಿದ್ದ. ಊರಾಗಿನ ಮನೆಗಳ ಮಾಳಗಿಯಿಂದ ಹರಿನಾಳಿಗೆಗಳ ಮುಖಾಂತರ ನೀರು ಹರಿದು ಕೆಳ್ಗ ಬೀಳ್ಲಿಕತ್ತಿತ್ತು.

ಮ್ಯಾಲಿನ ಓಣ್ಯಾಗಿಂದ ನೀರ ಹರ್ರ್ಯೊಂತ ಕೆಳ್ಗಿನ ಓಣಿ ತುಂಬಾ ನೀರು ನೀರಾಗಿ ಹೊಳೆಯಂತೆ ಹರ್ರ್ಯೊಂತ ಮತ್ತೆ ಮುಂದಿನ ಓಣಿ ಕಡೆಗೆ ಸಾಗಿತ್ತು. ಓಣ್ಯಾಗಿನ ಹುಡ್ರು 'ಕಳ್ಳೆ ಮಳ್ಳೆ ಕಪಾಟ ಮಳ್ಳೆ' ಅನ್ನೊಂತ ಆಟವಾಡ್ತಿದ್ದವು. ಕೆಲವು ಹುಡುಗ್ರು ಹಾಳಿ ಹಡ್ಗ ಮಾಡಿ ಹರೇಂತ ನೀರಾಗ ತೇಲಿಬಿಟ್ಟು, ಆಹ್ಲಾದದಿಂದ ಅರಚ್ಯಾಡುತ್ತ, ಕುಣಿದು ಕುಪ್ಪಳಿಸುತ್ತಿದ್ರು. ಹಂಗ ಅವರ ನೀರಾಟ ಸುರಿವ ಮಳ್ಯಾಗ ನಿರಾತಂಕವಾಗಿ ನಡೆದಿತ್ತು. ಅವರವರ ಹೊಡೆದಾಟ ಬಡದಾಟ ನೋಡ್ಕೊಂತ ರಾಮಜ್ಜ ಬಾಲ್ಯ ಲೋಕ್ದಾಗ ತೇಲಿ ಹ್ವಾದ. ಹಾಗೆ ಹಗಲ್ಗನಸು ಕಾಣ್ಕೋಂತ ಕನಸಿನ ಲೋಕ್ದಾಗ ಮೈ ಮರೆತು ಕುಂತಾ. ಹಂಗs ತನ್ನಲ್ಲಿ ಗತಿಸಿಹ್ವಾದಂತ ಬಾಲ್ಯದ ನೆನಪು ಮರುಕಳಸ್ಲಿಕತ್ತಿದ್ದವು.

ಊರ ದ್ಯಾಮವ್ವನ ಗುಡಿ ಕಟ್ಟೆಮ್ಯಾಗ ಕುಂತಗೊಂಡು 'ಅವರ ಬಿಟ್ಟು ಇವರ್ಯಾರಂತ' ಕೇಳ್ತಾ ಕಣ್ಣು ಮುಚ್ಚಾಲೆಯಾಟವಾಡಿದ್ದು; ಹುಣ್ಸೆಗಿಡ್ದಾಗಿನ ಎಳೇ ಹುಣ್ಸೆ ಕಾಯಿ ತಿನ್ತಾ, ಗಿಡ ಮಂಗ್ಯಾನಾಟವಾಡಿದ್ದು; ಸಣ್ಣವನಿದ್ದಾಗ ಸ್ವಾದರಮಾವನ ಮಗ್ಳು ಮಾದೇವಿಯೊಂದಿಗೆ ಗಂಡ - ಹೆಂಡ್ತಿಯರಾಟವಾಡಿದ್ದು; ಸುರಿವ ಮಳ್ಯಾಗ ಓಡಾಡಿ ಕುಣಿದು ಕುಪ್ಪಳಿಸಿದ್ದು; ಗಂಡು - ಹೆಣ್ಣೆಂಬ ಭೇದ - ಭಾವವಿಲ್ಲದೆ ಕೂಡಿ, ಆಡಿ ಬೆಳೆದು ದೊಡ್ಡವರಾಗಿದ್ದು, ಹೀಗೆ ಒಂದೊಂದರಂತೆ ಕಂತೆ ಕಂತೆ ಹಿಂದಿನ ನೂರು ನೋಟಗಳು ಮೂಡಿ, ಇವತ್ತಿನ ಮಳೆ ಸುರಿದು

ಮತ್ತೆ ರಾಮಜ್ಜನ ಕನಸಿನ ಬಳ್ಳಿ ಚಿಗ್ರುವಂಗ ಮಾಡ್ತು. ಹಾಗೆ ತನ್ನ ನಿಜ ಜೀವನದಲ್ಲಿ ದಾರುಣ ಘಟನೆಯ ಚಕ್ರ ತಿರುಗುತ್ತಿತ್ತು.

ತಾಯಿ ಇಲ್ದ ಮಗ್ಳನ ಸಾಕಿ ಸಲುಹಿ ಜ್ವಾಪಾನ ಮಾಡಿ ದೊಡ್ಡವರ್ನ ಮಾಡ್ದ. ಆದ್ರೆ ಆಕಸ್ಮಿಕವಾಗಿ ಮುಂದೊಂದುದಿನ ಮಾವ ಮಾಲಿಂಗಪ್ಪ ಕ್ಯಾನ್ಸರ್ ರೋಗದ ಬಾಧೆ ತಾಳ್ದೆ ಉರ್ಲ್ಲು ಹಾಕಿಕೊಂಡು ಇದ್ದಂತ ಒಬ್ಬ ಮಗಳು ಮಾದೇವಿನ ಪರದೇಶಿ ಮಾಡಿ ಹ್ವಾದ. ಬಳಿಕ ಕತ್ತಲಾವರಿಸಿದ ಮನೆಯೊಳಗೆ ರಾಮು ಬೆಳಕಾಗಿ ಬರುತ್ತಾ, ಮಾದೇವಿಗೆ ಅನ್ನ ನೀರು ತೊಗೊಂಡು ಬರುವುದನ್ನು ನೋಡಿ ಮಾದೇವಿ ದುಃಖ ದುಃಖ್ಖಿಸಿ ಜೋರಾಗಿ ಆಕ್ರಂದಿಸುತ್ತಾ, 'ನನ್ಗೆ ನನ್ನವರಂತ ಯಾರದಾರ ರಾಮ' ಅಂತ ಅಳಾಕುಂತ್ಲು.

'ಹಿಂಗ್ಯಾಕ ಅಳ್ತೀ ಮಾದಿ ನಾನಿದ್ದೇನಿ. ತಾಯಿ ತಂದಿ ಸತ್ತು ಹ್ವಾದ್ರಂತ ಚಿಂತ್ಯಾಗ ಕೊಳೆತು ಹೂತು ಹೋಗಬ್ಯಾಡ. ನಿನ್ನಂಥಾ ಆಸ್ರ ಇಲ್ದ ಬಳ್ಳಿಗೆ ನಾ ಮರವಾಗಿ ಆಶ್ರಯ ನೀಡ್ತಿನೀಂತ ನಿನ್ನ ತಂದೆ ತಾಯಿ ಮುಟ್ಟಿ ಆಣೆ ಮಾಡಿ ಹೇಳ್ತಿನಿ. ನಿನ್ನ ನಾ ಮದ್ವಿಯಾಗ್ತೀನಿ ಮಾದಿ ಮದ್ವಿಯಾಗ್ತೀನಿ' ಎಂದು ಅವಳನ್ನು ರಮಿಸುತ್ತಾ ಅವಳ್ಗೆ ಊಟಾ ಮಾಡ್ಸಿ ಮನ್ಗೆ ಬಂದ.

ರಾಮ ತನ್ನ ತಂದಿ - ತಾಯ್ಗಳ ಜ್ವತಿ ಮಾತಾಡ್ತಾ 'ನೀವಿಬ್ಬರು ಹೀರೇರು ಹಿಂದಿನ ಮಾತೀಗ ಸಾಗ್ಸಿದ್ರ ಪಾಪ ದಿಕ್ಕಿಲ್ಲದ ಮಾದಿ ಗತಿಯೇನಾಗ್ಬೇಕು. ನೀವ ಯೋಚ್ನೆ ಮಾಡ್ರಿ'.

'ಹೌದ ಹಿರ್‍ಯಾ, ರಾಮನ ಮಾತು ಖರೇ ಐತಿ. ನಿನ್ನ ಜ್ವತಿ ದ್ವೇಷ ಸಾಧ್ಸಿದ ನಮ್ಮಣ್ಣ ಸತ್ತು ಸುಡುಗಾಡ ಸೇರ್‍ಯಾನ. ಅವ್ನ ಮಾತೀಗ ಮಣ್ಣಾಗ ಹೂತು ಹೋಗೇತಿ, ಹಿಂದ ಹಿಂದಲ್ ದ್ವೇಷ ಸಾಧ್ಸಿದ್ರ ಊರನ ಮಂದಿ ನಮ್ಗಂತಾರ. ಪಾಪ ಮಾದಿನ್ನ ನನ್ನ ಮಗಾ ರಾಮ್ಗ ಮದುವಿ ಮಾಡಿಬಿಡೋಣ'.

'ಆಯ್ತು, ಆಯ್ತು ನೀ ಹೇಳ್ದಂಗ ತಂದಿ - ತಾಯಿಲ್ಲದ ತಬ್ಬಲಿ ಮಾದಿನ ಗೋಳು ನೋಡದು ಬ್ಯಾಡ. ನಮ್ಮ ರಾಮ್ಗ ಇಕಿನ ತೊಗೊಂಡು ಮದುವಿ ಮಾಡಿದ್ರಾಯಿತು' ಎಂದು ಅಪ್ಪನ ಕಂಠದಿಂದ ಮಾತು ಹೊರಹೊಮ್ಮಿದಾಗ ರಾಮ್ಗು ಎಂದಿಲ್ಲದ ಸಂತಸ ಅವತ್ತು ಅವನೆದ್ಯಾಗ ಮೂಡಿ, ಊರೆ ಬಂದು ಈ ಸಂತಸದ ವಿಷಯ ಮಾದಿಗೆ ಹೇಳಾಕ ಓಡೋಡಿ ಹೋದ, ಹಾಗೇ ಮಾಲಿಂಗಪ್ಪ ಸತ್ತು ತಿಂಗಳ ತುಂಬುವುದ್ರೊಳಗ ಅವ್ನ ಮಗಳ ಮಾದೇವಿನ ಸೀತಕ್ಕ ತನ್ನ ಸೊಸೆಯಾಗಿ ಮಾಡಿಕೊಂಡು ಮನೆ ತುಂಬಿಸಿಕೊಂಡ್ಲು.

ಹೀಗೆ ರಾಮಜ್ಜ ಮಾದೇವಿಯೊಂದಿಗೆ ಸಪ್ತಪದಿಯ ತುಳಿದು ಸಂಸಾರದ ಜಂಜಾಟದಾಗ ಸಿಲುಕಿದ ಅಂದಿನ ನೂರು ನೋಟಗಳು ಇವತ್ತು ಬಣ್ಣ ಕಳೆದುಕೊಂಡ್ರೂ ರಾಮಜ್ಜನ ಕಣ್ಮುಂದೆ ಹಚ್ಚ ಹಸುರಾಗಿ ಮರೆಯಲಾಗದ ನೆನಪುಗಳು ಉಳಿದುಬಿಟ್ಟಿದ್ದವು.

'ಹೂಂ, ಇನ್ನೂ ಏನೇನೈತೋ ಈ ಜೀವ್ದಾಗ, ಪಾಲಿಗೆ ಬಂದದ್ದು ಪಂಚಾಮೃತಂತ ಅನುಭವಿಸಿದ್ರಾಯ್ತು' ಎಂದು ನಿರಾಳವಾಗಿ ನಿಟ್ಟುಸಿರು ಬಿಡುತ್ತಾ ಮತ್ತೆ ಸುರಿವ ಮಳೆ ಹನಿಗಳ

ಕಡೆಗೆ ಗಮನ ಹರಿಸಿದಾಗ, ಮಣ್ಣಾಗಿನಿಂದ ಬೆಳ್ಕು ಮಿಂಚಿ ಮರೆಯಾದಾಗ ಓಣ್ಯಾಗ ಆಟವಾಡುವ ಮುಗ್ಧ ಹಸುಳೆಗಳು ಭಯ - ಭೀತಗೊಂಡು ಮನೆಯೊಳಗ ಹ್ವಾದ ಬಳಿಕ, ನೋಡ್ ನೋಡುತ್ತಿದ್ದಂತೆ ಖಡ್ ಖಡ್‌ಲೆಂದು ಹಳೆಯ ಅಶ್ವತ್ಥ ಮರಕ್ಕೆ ಸಿಡಿಲು ಹೊಡೆದಾಗ, ಮರವು ಅರಚುತ್ತಲೆ ನೆಲಕ್ಕುರಳಿತು. ಬೆಂಕಿ ಹೊತ್ತಿ ಉರಿಯುತ್ತಿತ್ತು.

ಊರಾಗಿನ ಜನ ಅಶ್ವತ್ಥ ಮರಕ್ಕೆ ಸಿಡಿಲು ಬಡಿದಿರುವ ಸುದ್ದಿ ಕೇಳಿ, ಊರಾಗಿನ ಜನಸ್ತೋಮ ಉರಿಯುವ ಅಶ್ವತ್ಥ ಮರದ ಮುಂದೆ ನೆರೆದಿತ್ತು. ಮುಪ್ಪು ವಯಸ್ಸಿನಿಂದ ತೆಲ್ಯಾಗ ನೆರೆ ಹಾದ ಕೆಲವು ಮುದುಕ್ರು ಅಶ್ವತ್ಥ ಮರದ ಪರಿಸ್ಥಿತಿ ನೋಡಿ ಮರುಗುತ್ತಾ, 'ಅಲ್ಲೋ ..... ಸಂಗಪ್ಪಾ, ಇದು ಎಷ್ಟು ವರ್ಷದ ಗಿಡಾಂತಿ ? ಈ ಗಿಡಾ ಭೂಮಿ ಮ್ಯಾಲ ಹುಟ್ಟಿ ಸುಮಾರು ಯಾಡ್ನೂರು ತೆಲಿ ಹ್ವಾದ್ಸು ನೋಡು'

'ಹೌದೌದು ! ಇದು ಭಾಳ ಹಳೇಮರ ನೋಡು, ಅಷ್ಟ ಅಲ್ಲೋ ರಾಯಪ್ಪ ಈ ಗಿಡಾ ಎಷ್ಟೋ ಜನ ನಿರ್ಗತಿಕರಿಗೆ ಆಶ್ರಯ ನೀಡಿ ತನ್ನ ಜೀವ್ನಾ ಸಾರ್ಥಕ ಮಾಡ್ಕೋಂತ ನೋಡು'.

ಕೆಲವು ಪಡ್ಡೆ ಹುಡ್ರು ನಗುತ್ತಾ, 'ಅಲ್ಲೇ ಪಕ್ಯಾ, ಈ ಗಿಡಾನs ಪಂಚೇತಿಯವರು ಕಡ್ಸಿ ರೋಡ ಮಾಡಬೇಕಂದ್ರು. ಆದ್ರs ಇವತ್ತಿನ ಸಿಡ್ಲಿಗೆ ಬಲಿಯಾಗಿದ್ದು ಬೇಷ್ಯಾತು ನೋಡು. ಇಲ್ಲಾಂದ್ರ ಸೂಳೆಮಗಂದು ಭಾಳ ಆಳು ತಿಂತಿತ್ತು ನೋಡು' ಎನ್ನುತ್ತಾ ನಗಾಡುತ್ತಿದ್ದರು.

ತಮ್ಮ ತಮ್ಮ ಮನೆ ಬಾಗಲ್ದಾಗ ನಿಂತ ಹೆಂಗಸ್ರು, 'ಅಲ್ಲವಾ ಕಲ್ಲವ್ವಕ್ಕಾ ಈ ಅರಳಿ ಗಿಡಕ ಸಿಡಿಲು ಬಡದು ಭಾಳ ಛೋಲೋ ಆತು'.

'ಹೌದ ತಂಗಿ, ನಮ್ಮ ಹುಡ್ರು; ನಿಮ್ಮ ಹುಡ್ರು ಈ ಗಿಡದ ಹುಡ್ದಾಗ ಆಡತಿದ್ರು. ಯಾವತ್ತಿನ್ಯಾಗ ಪೆಡಂಭೂತ ಏನಾಗತೈತೇಂತ ಹೆದ್ರತಿದ್ವಿ. ಈಗ ಆ ಪೀಡೆ ತೊಲ್ಗುತು ನೋಡು. ಇನ್ನಮ್ಯಾಲ ನಮ್ಮ ಮಕ್ಳು ನಿಶ್ಚಿಂತೆಯಾಗಿ ಆಟವಾಡಬಹುದು' ಎಂದು ಮಾತ್ನಾಡಿದ್ರು.

ರಾಮಜ್ಜ ಇವರೆಲ್ಲರ ಮಾತನ್ನು ಮೂಲ್ಯಾಗ ಕುತ್ಕೊಂಡು ಆಲಿಸ್ಕೊಂತ, 'ನಿಮ್ಗೇನು ಗೊತ್ತೈತ್ರೋ ಪಡಪೋಶಿ ನನ ಮಕ್ಳ. ನಿಮ್ಗೇನು ಗೊತ್ತೈತ್ರೀವಾ ದುರ್ಗವ್ವಗೋಳ, ಈ ಅಶ್ವತ್ಥಮರದ ಹಿಂದಿರುವ ಅದ್ಭುತಕತೆ. ಏನೋ ಶಿವನ ಅಸ್ತ್ರಕ್ಕ ಬಲಿಯಾಗಿ ಈ ಅಶ್ವತ್ಥಮರದ ಜೀವ್ನ ಪಾವನವಾಯಿತು. ಇನ್ನೂ ಈ ಭೂಮಿ ಮ್ಯಾಲಿದ್ದು ಏನೇನೊ ನರಕಯಾತನೆ ಅನುಭವಿಸ್ತೇವಿ ಯಾರ್ಗ ಗೊತ್ತು, ನಾನು ಎಂದಾದ್ರೂ ಉದುರುವ ಹಣ್ಣೆಲೆ ನಾ ಉದರಿ ಹ್ವಾದಮಾಗ ನನ್ನ ನೋಡಿ ಎಷ್ಟು ಮಂದಿ ನಗ್ತಾರೋ ಎಷ್ಟು ಮಂದಿ ಮರುಗುತ್ತಾರೋ ಯಾರು ಬಲ್ಲರು. ಹಣ್ಣೆಲೆ ಉದುರುವಾಗ ಈ ಹಸಿರೆಲೆ ನಗುವುದು ಸಹಜ' ಎಂದು ಮನದಲ್ಲಿ ಗುನುಗುತ್ತಿದ್ದ.

●

# ತಣ್ಣೀರು

● ಶಬ್ಬೀರ ಅಹ್ಮದ ಮಡಕಿ

ಆ ಮುದುಕಿ ದೂರದ ಊರಿನಿಂದ ಶವಸಂಸ್ಕಾರಕ್ಕೆ ಬಂದಿದ್ದಾಳೆ. ಇವಳಂತೆಯೇ ಎಷ್ಟೋ ಊರುಗಳಿಂದ ಜನರು ಬಂದು ಕಿಕ್ಕಿರಿದಿದ್ದಾರೆ. ಕುಳಿತುಕೊಳ್ಳಲೂ ಸ್ಥಳ ಇಲ್ಲದಂತಾಗಿದೆ. ಸ್ವಲ್ಪ ದೂರ ಇರುವ ಮನೆಯ ಮುಂದುಗಡೆ ಹಲವು ಹೆಣ್ಣುಮಕ್ಕಳು ಕುಳಿತಿದ್ದಾರೆ. ಆಕೆಯೂ ಅಲ್ಲಿಗೆ ಹೋಗಿ ಕುಳಿತುಕೊಳ್ಳುತ್ತಾಳೆ. ಇನ್ನೂ ದೂರ ದೂರದ ಊರುಗಳಿಂದ ಜನರು ಬರುವವರಿರುವುದರಿಂದ ಶವಸಂಸ್ಕಾರಕ್ಕೆ ಬಹಳ ತಡವಾಗುತ್ತಿದೆ.

ಬೇಸಿಗೆ ಕಾಲ. ಮೇಲೆ ಬೆಂಕಿಯಂಥ ಬಿಸಿಲು, ನೆಲ ಕಾದ ತಗಡು. ಇವಳಿಗೆ ಭಯಂಕರ ನೀರಡಿಕೆಯಾಗಿದೆ. ಇಷ್ಟು ಕಿಕ್ಕಿರಿದ ಜನರ ನಡುವೆ ಹೋಗಿ ಹೇಗೆ ನೀರು ಬೇಡಬೇಕು ! ಹೋಗಲೋ, ಬೇಡವೋ ಎಂದು ಹೇಳಿ ಪಕ್ಕದ ಮನೆಯೊಳಗೆ ಹೋಗುತ್ತಾಳೆ.

"ಬಿಸಿಲಿನಿಂದ ನಾಲಿಗೆ ಒಣಗಿ ಹೋಗಿದೆ. ಸ್ವಲ್ಪ ನೀರು ಬೇಕಾಗಿತ್ತು ....." ಎಂದು ಕೇಳಿದಳು. ಆ ಮನೆಯ ಹೆಣ್ಣು ಮಗಳು "ಅರೇ, ಬರ್‍ರೀ .... ಈ ಕಡೆ ಕೂಡ್ರಿ, ತರ್ತೀನಿ ನೀರು" ಎಂದು ಹೇಳಿ ತಂಬಿಗೆಯಲ್ಲಿ ನೀರು ತಂದು ಕೊಟ್ಟಾಗ ಹೊಟ್ಟೆತುಂಬ ಕುಡಿದು, "ಅಬ್ಬಾ ! ಎಷ್ಟು ತಣ್ಣನೆಯ ನೀರು ಕೊಟ್ಟೆ, ಮಗಳೇ, ನಿನ್ನ ಹೊಟ್ಟೆ ತಣ್ಣಗಿರಲವ್ವ. ಈ ಹಿಂದೆ ನನ್ನಲ್ಲಿ ಸಂಕುಚಿತ ಮನೋಭಾವನೆಯಿತ್ತು. ಬೇರೆ ಧರ್ಮ, ಬೇರೆ ಜಾತಿಯವರನ್ನು ಕಂಡರೆ ನನ್ನ ಮನಸ್ಸಿನಲ್ಲಿ ದ್ವೇಷ, ತಿರಸ್ಕಾರದ ಅಗ್ನಿ ಜ್ವಲಿಸುತ್ತಿತ್ತು. ಆದರೆ ನಿನ್ನ ತಣ್ಣನೆಯ ನೀರು ಕುಡಿದಾದ ಮೇಲೆ ನನ್ನ ಆ ಅಗ್ನಿ ತಣ್ಣಗಾಗಿದೆ ಮಗಳೇ".

"ನೋಡು, ನಾವು ಈ ಶವಸಂಸ್ಕಾರಕ್ಕೆ ಬಂದಿದ್ದೇವಲ್ಲ ಆಕೆ ಇದ್ದಾಗ ಎಷ್ಟು ಮೆರೆದಳು. ಈಗ .... ಆಕೆಯನ್ನು ಮಣ್ಣಾಗ ಕಲಸಿ ಬರ್‍ತಾರ ನೋಡು. ಈ ಜೀವವೇ ಹೋದ ಮೇಲೆ ನಾವು ಏನು ಮಾಡಲು ಸಾಧ್ಯವಿದೆ".

"ಮನುಷ್ಯತ್ವಕ್ಕಿಂತ ದೊಡ್ಡದಾದ ಧರ್ಮ ಇನ್ನೊಂದಿಲ್ಲ ಮಗಳೇ, ಎಲ್ಲರೂ ಇದೇ ರೀತಿಯ ಮನೋಭಾವನೆಯನ್ನು ಬೆಳೆಸಿಕೊಂಡರೆ ಈ ಜಗತ್ತಿನಲ್ಲಿ ಇಂದೇನು ತುಚ್ಛ

ಕಾರಣಗಳಿಗಾಗಿ, ಸ್ವಾರ್ಥ, ಪ್ರತಿಷ್ಠೆಗಾಗಿ ರಕ್ತದ ಕೋಡಿ ಹರಿಯುತ್ತಿದೆಯಲ್ಲ ಅದು ಅಮೃತಧಾರೆಯಾಗಿ ಹರಿಯುತ್ತದೆ. ಜನರ ಮನಸ್ಸಿನಲ್ಲೇನು ಬೆಂಕಿ ಕೆಂಡಗಳು ಉರಿಯುತ್ತಿವೆಯಲ್ಲ ಅವು ಹೂವುಗಳಾಗಿ ಸುವಾಸನೆ ಬೀರುತ್ತವೆ. ಇದಕ್ಕಿಂತ ದೊಡ್ಡದು ಈ ಜಗತ್ತಿನಲ್ಲಿ ಇನ್ನೇನು ಬೇಕು. ಎಲ್ಲರೂ ಒಬ್ಬರಿಗೊಬ್ಬರು ಅರಿತು ಶಾಂತಿ, ನೆಮ್ಮದಿ, ಪ್ರೀತಿ, ವಿಶ್ವಾಸದಿಂದ ಇದ್ದರೆ ಆ ಬದುಕು, ಆ ಸಮಾಜ, ಆ ರಾಷ್ಟ್ರ, ಆ ಜಗತ್ತು ಎಷ್ಟು ಸುಂದರ ! ಎಷ್ಟು ಮಧುರ ! ಆಯಿತು ಮಗಳೇ, ಈ ಮಾತುಗಳಲ್ಲಿ ಹೊತ್ತು ಸರಿದುದೇ ಗೊತ್ತಾಗಲಿಲ್ಲ. ಇನ್ನೇನು ಶವಯಾತ್ರೆಗೆ ಸಿದ್ಧತೆ ನಡೆದಿರಬೇಕು. ಮಗಳೇ, ನಿನಗೆ ಆ ದೇವರು ಒಳ್ಳೆಯದನ್ನು ಮಾಡಲಿ" ಎಂದು ಹರಸಿ ಹೊರಟಳು.

●

# ದುರಾಶೆ

● ಎಚ್. ಎ. ಭೋಗಲೆ

ಮುಂಜಾನೆಯಿಂದ ಸಾಯಂಕಾಲದವರೆಗೆ ಜನದಟ್ಟಣೆಯಿಂದ ಕೂಡಿದ ಸ್ಥಳದಲ್ಲಿ ಭರ್ ಭರ್ ಎಂದು ಸದ್ದು ಮಾಡುತ್ತ ಓಡಾಡುವ ಗಾಡಿಗಳಿಗೆ ಲೆಕ್ಕವೇ ಇಲ್ಲ. ಊರಿನಿಂದ ಬರತಕ್ಕಂತಹ ಜನರು ಶಾಲಾ ಮಕ್ಕಳು ಎಲ್ಲರಿಂದ ಗುಯ್‌ಗುಟ್ಟುವ ಪ್ರದೇಶ, ಅಲ್ಲಿ ಬರುವಂತಹ ಪ್ರತಿಯೊಂದು ಬಸ್ಸಿಗಾಗಿ ಓಡಾಡುವ ಜನರು ಬಸ್ಸು ನೋಡಿ ತಮ್ಮದಲ್ಲ ಎಂದು ಗೊತ್ತಾದ ಮೇಲೆ ಸುಮ್ಮನೆ ದಂಡೆಗೆ ಸರಿದು ನಿಲ್ಲುತ್ತಿರುವುದು ಅಲ್ಲಿಯ ಸಾಮಾನ್ಯ ದೃಶ್ಯ. ಪೇಪರ್, ಹೂವಿನ ಮಾಲೆ, ಪಾಪ್‌ಕಾರ್ನ್ ಇನ್ನಿತರ ವಸ್ತುಗಳನ್ನು ಮಾರುವವರು ಅಡ್ಡಾಡುವ ನೋಟ, ಬಸ್‌ಸ್ಟ್ಯಾಂಡಿನ ಅಂಗಡಿಯಲ್ಲಿ ಕುಳಿತು ಗಿರಾಕಿಗಳ ಬರುವಿಕೆಯನ್ನು ಕಾಯುತ್ತಿರುವ ಸನ್ನಿವೇಶಗಳು ಜನರನ್ನು ಆಕರ್ಷಿಸುತ್ತಿದ್ದವು.

'ಏ ಶಾಮ ಯಾವುದೋ ಬಸ್ಸ್ ಬಂತ ನೋಡೋs ಅದರ ಮ್ಯಾಲಿ ಯ್ಯಾನ ಲಗೇಜ್ ಇದ್ದಾಂಗೇತಿ. ಇಳಸಾಕ ನಡಿ ಹೋಗೂನು' ಎಂದು ಗೋವಿಂದ ಆತನನ್ನು ಕರೆದಾಗ ಅದೇ ಕುಡಿದ ಅಮಲಿನಲ್ಲಿ ಇರತಕ್ಕಂತಹ ಶಾಮು ಎದ್ದು ಅತ್ತ ಇತ್ತ ಕಡೆಗೆ ಹೊರಳಾಡುತ್ತ ನೋಡಿದಾಗ, ಬೇಗ ಬಾರೋ ಶಾಮ ಹೋಗೂನು ಎಂದು ಮತ್ತೊಮ್ಮೆ ಕರೆದ. ಅಲ್ಲಿ ಹೋಗಿ 'ಲಗೇಜ್ ಯಾರದೈತಿ ?' ಎಂದು ಕೂಗಿದಾಗ ಒಬ್ಬ 'ನಂದ ಐತ್ಯೋ ಯಪ್ಪಾ, ಹss ಎಷ್ಟ ತಗೋತೇರಿ ಇಳಸಾಕ. ಯಾಡ್ಡ ಮೆಣಸಿನಕಾಯಿ ಚೀಲ ಅದಾವ ನೋಡ ! ಎಂದಾಗ ಗೋವಿಂದ ಹದಿನೈದ ರೂಪಾಯಿ ಆಗತೇತಿ ನೋಡ' ಎನ್ನುತ್ತಾನೆ. 'ಅಂಹs ಇಲ್ಲ. ನಾವ ಖಾಯಂ ಬರಾವರ ನಮಗ ಹಿಂಗ ಮಾಡಿದರ ಹೆಂಗss ಯಾವಾಗರೆ ಒಮ್ಮೆ ಬರಾವರಿಗಿ ಹದಿನೈದಾ ಇಪ್ಪತ್ತಾ ಅಂತ ಹೇಳಕೋತ ಕುಂದ್ರೋದ. ಆದ್ಯಾನ ಆಗಾಂಗಿಲ್ಲ ಹತ್ತ ರೂಪಾಯಿ ಕುಡತ್ಯಾನ ಇಳಸಾವರಿದ್ರ ಇಳಿಸ್ರಿ ಇಲ್ಲಾದ್ರ ಬಿಡ್ರಿ' ಎನ್ನುತ್ತಾನೆ. ಆಗ ಶಾಮ ಗೋವಿಂದನಿಗೆ 'ಎಷ್ಟ ಚೀಲ ಇದಾವೋ ಗೋವಿಂದ, ಎರಡಾ ಇರವಾತ ತಗೋ ಇಳಸೂನು' ಅಂತಾ ಹೇಳಿ ಅವರಿಬ್ಬರು ಅವನ್ನು ಇಳಿಸಿಕೊಟ್ಟರು.

ಹಮಾಲಿ ಮಾಡಿ ಸಿಕ್ಕ ಹಣದಲ್ಲಿ ಖುಷಿ ಪಡುತ್ತಾ ಯಥಾಪ್ರಕಾರ ಬಂದು ಬೆಂಚಿನ ಮೇಲೆ ಒರಗಿದ ಶಾಮ ನಿದ್ರೆಗೆ ಅವಚಿಕೊಳ್ಳುತ್ತಾನೆ. ಶಾಮ ಒಬ್ಬ ಸಾಮಾನ್ಯ ವ್ಯಕ್ತಿ. ಯಾರ

ತಂಟೆಗೂ ಹೋಗದೇ ತನ್ನಷ್ಟಕ್ಕೆ ತಾನೇ ಇದ್ದು, ಹಮಾಲಿ ಕೆಲಸ ಮಾಡಿ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ. ಆದರೆ ಸ್ವಲ್ಪ ವಿಚಿತ್ರ ವರ್ತನೆಯಿಂದ ಕೂಡಿದ ಅವನ ಚಟ ಕೈಯಲ್ಲಿ ಸಿಕ್ಕ ದುಡ್ಡನ್ನು ಸರಿಯಾಗಿ ಬಳಸಿಕೊಳ್ಳದೆ, ನಾಳಿನ ಚಿಂತೆಯಿಲ್ಲದೆ ಬಾಳುತ್ತಿದ್ದ. ಬಂದ ಹಣವನ್ನೆಲ್ಲ ಕುಡಿಯುವುದಕ್ಕೆ ಬಳಸಿ 'ಜೀವನದಾಗ ಯ್ಯಾನೈತಿ ?' ಅನ್ನುತ್ತ ಕುಡಿದ ಅಮಲಿನಲ್ಲಿ ಒದರಾಡುತ್ತ ಬೀಳುವುದು ಅವನ ಪ್ರತಿನಿತ್ಯದ ರೂಢಿಯಾಗಿತ್ತು.

ಮೈಮೇಲೆ ಬಟ್ಟೆಯ ಅರಿವಿಲ್ಲದೆ ಇರುತ್ತಿದ್ದ ಇವನ ಇರುವ ಒಂದೆರಡು ಜೊತೆ ಬಟ್ಟೆ, ಅವನ್ನೇ ತೊಳೆದು ತೊಟ್ಟು ಮತ್ತೇ ಸಾಯಂಕಾಲ ಬರುವ ಹೊತ್ತಿಗೆ ಹೊಲಸು ಮಾಡಿಕೊಂಡು ಬರುತ್ತಿದ್ದನು. ಮುಂಜಾನೆ ಎದ್ದು ಯಥಾಪ್ರಕಾರ ಬಂದು ಹಮಾಲಿ ವೃತ್ತಿಯಲ್ಲಿ ತೊಡಗಿಕೊಳ್ಳುತ್ತಿದ್ದನು. ಗೋವಿಂದ, ಬಸು ಇವರಿಬ್ಬರೂ ಇವನ ಗೆಳೆಯರಿದ್ದರೂ, ಕುಡಿತಕ್ಕೆ ಅಷ್ಟೇನೂ ಬಲಿಯಾಗಿರಲಿಲ್ಲ. ಹೆಂಡಿರು ಮಕ್ಕಳು ಎಂದು ಸಂಸಾರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು.

ಒಂದು ದಿನ ಗೆಳೆಯರೆಲ್ಲರೂ ಕೆಲಸವಿಲ್ಲದೆ ಹಾಗೇ ಹರಟೆ ಹೊಡೆಯುತ್ತಾ ಕುಳಿತ ಸಮಯದಲ್ಲಿ ಗೋವಿಂದ ಶಾಮನಿಗೆ 'ಏ ಶಾಮಾ ಕುಡೇದು ಸ್ವಲ್ಪ ಕಡಿಮೆ ಮಾಡೋ, ಇಲ್ಲಾ ಅಂದರ ನೀ ಹಾಳ ಆಗಿ ಕೆಟ್ಟ ಹೋಗತಿ ನೋಡ ! ಹಿಂಗ ಎಲ್ಲಾ ಮಾಡಿದರ ಹೆಂಗ. ನಿನ್ನ ನಾಳಿ ಯಾರಾದರ ನೋಡಾವರ ಇದ್ದರ ಈ ರೀತಿ ಮಾಡ. ಸುಳ್ಳುಳ್ಳ ಕುಡದ ರೊಕ್ಕಾ ಯಾಕ ಹಾಳ ಮಾಡತಿ' ಎಂದಾಗ ಶಾಮನಿಗೆ ಸಿಟ್ಟು ಬಂದು 'ಅದನ್ಯಾನ ನೀ ಕೇಳತಿ. ನಾ ದುಡ್ಯಾವ ಬಿಡಾವ ನಿನಗ್ಯಾನ ಸಂಬಂಧೋ... ನಿನ್ನಷ್ಟಕ್ಕ ನೀ ಇರ್. ಯಾಕ ಇನ್ನೊಬ್ಬರ ವಿಚಾರ ಮಾಡತಿ' ಎಂದು ಆತನಿಗೆ ರೇಗಾಡುತ್ತಾನೆ. ಇದರಿಂದ ಸುಮ್ಮನಾದ ಗೋವಿಂದ ಇನ್ನೊಮ್ಮೆ ಆತನ ಹಿಂದೆ ಎಂದೂ ಬೀಳಲೇ ಇಲ್ಲ. ಮತ್ತೇ ಶಾಮ ತನ್ನ ಚಟವನ್ನು ಮುಂದುವರೆಸಿ, ಪ್ರತಿದಿನ ಕುಡಿದು ಖುಷಿ ಪಡುತ್ತಿದ್ದನು. ದಿನಾಲು ಈತ ಲಾಟರಿ ಟಿಕೇಟನ್ನು ಖರೀದಿಸುವ ಚಟ ಇರಿಸಿಕೊಂಡಿದ್ದ.

ಯಾರ ಗೋಜಿಗೂ ಹೋಗದೇ ಜೀವನದಲ್ಲಿ ನೊಂದಿದ್ದ ಶಾಮ ತನ್ನ ಹಿಂದಿನ ಜೀವನವನ್ನು ನೆನಪಿಸಿಕೊಳ್ಳುತ್ತಾನೆ. ನಗುನಗುತ್ತಾ ಜೀವನ ಸಾಗಿಸುತ್ತಿದ್ದ ಬಾಳು ಒಮ್ಮೆಲೆ ಆಘಾತಕ್ಕೀಡಾದದ್ದನ್ನು ಜ್ಞಾಪಿಸಿ ಕಣ್ಣೀರು ಸುರಿಸುತ್ತಾನೆ. ಯಾವ ಕುಡಿತದ ಚಟದಿಂದ ಸಂಸಾರ ಹಾಳಾಯಿತೋ, ಅದೇ ಕುಡಿತವನ್ನು ತಾ ಹಾಳಾದರೂ ಬಿಡದೇ ಮತ್ತೇ ನೊಂದು ಹೆಚ್ಚು ಕುಡಿಯಲಾರಂಭಿಸಿದ. ಹೀಗೇಕಾಯಿತು ನನ್ನ ಜೀವನ ? ಎಂದು ಪಶ್ಚಾತ್ತಾಪ ಪಡುತ್ತಾನೆ. ಹಿಂದಿನ ಜನ್ಮದಲ್ಲಿ ಯಾವುದಾದರೂ ಪಾಪ ಮಾಡಿರಬಹುದೇನೋ ? ಅದನ್ನೇ ಈಗ ಅನುಭವಿಸುವ ಹಾಗಾಗಿದೆ. ಹೆಂಡತಿ ಮಗುವನ್ನು ಕಳಕೊಂಡ ಮೇಲೆ ವಿಪರೀತ ಕಷ್ಟವನ್ನು

ಅನುಭವಿಸುತ್ತಿದ್ದಾನೆ. ಸರಿಯಾಗಿ ಊಟ ಮಾಡದೆ ಇದ್ದಾಗ, ತನ್ನ ಹೆಂಡತಿ ಮಾಡಿಟ್ಟ ಅಡಿಗೆಯನ್ನು ಎರಡೊತ್ತು ತಿಂದು ಆರಾಮಾಗಿದ್ದನ್ನು ಜ್ಞಾಪಿಸಿ ದುಃಖಿತನಾಗುತ್ತಾನೆ.

ಆದರೆ ಕುಡುಕರ ಬೆನ್ನತ್ತಿ ಕುಡಿಯುವ ಚಟ ಕಲಿತು ತನ್ನ ಸಂಸಾರ ಹಾಳು ಮಾಡಿಕೊಂಡಿದ್ದ. ತನ್ನ ಹೆಂಡತಿ ಮಗುವಿನ ಸಾವಿಗೆ ತಾನೇ ಕಾರಣ ಎಂದು ಮರ ಮರ ಮರಗುತ್ತಿದ್ದ. ಕೊನೆಗೂ ಜೀವನದಲ್ಲಿ ಜಿಗುಪ್ಸೆಗೊಂಡು ಸಾಯಬೇಕೆಂಬ ನಿರ್ಧಾರಕ್ಕೆ ಬಂದನು. ಆದರೂ ಕುಡಿತದ ಅಮಲಿನಲ್ಲಿ ತನ್ನನ್ನು ತಾನೇ ಮರೆತು ಹೋಗುತ್ತಿದ್ದ. ಹೀಗೆ ಈತನು ಜೀವನದಲ್ಲಿ ಯಾರೂ ತನ್ನವರಿಲ್ಲ, ತನಗಾಗಿ ಯಾರೂ ಉಳಿದಿಲ್ಲ ಎಂದು ಚಿಂತಿಸುತ್ತಾ ಹೃದಯವನ್ನು ಕಲ್ಲಿನ ಹಾಗೆ ಗಟ್ಟಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದನು. ಯಾವ ವಸ್ತುವಿನ ಮೇಲೆ ಆಶೆ ಇಲ್ಲದೆ ತನ್ನಷ್ಟಕ್ಕೆ ತಾ ತಿಳಿದ ಹಾಗೆ ಇರುತ್ತಿದ್ದ. ಇವನ ವಿಚಾರಕ್ಕ ಬೇರೆಯವರೂ ಯಾರೂ ಬರುತ್ತಿಲಿಲ್ಲ. ಹೀಗೆ ಜೀವನವನ್ನು ಪ್ರತಿನಿತ್ಯ ಕುಡಿದು ಸಾಗಿಸುತ್ತಿದ್ದ.

ಅದೃಷ್ಟವಶಾತ್ ಇಂತಹ ಸಂದರ್ಭದಲ್ಲಿ ಶಾಮನ ಹಣೆಬರಹ ಬದಲಾಗುವ ಸಮಯ ಬಂದೇ ಬಿಟ್ಟಿತು ಎನ್ನುವಷ್ಟರಲ್ಲಿ ಲಾಟರಿ ಟಿಕೇಟನ್ನು ಖರೀದಿಸುವ ಹಂಬಲವಿದ್ದ ಈತನಿಗೆ ಒಂದು ಲಕ್ಷ ಲಾಟರಿ ಹತ್ತಿತು. ಆಗ ಯಾವುದೇ ರೀತಿಯಲ್ಲಿ ಸಂತೋಷ ವ್ಯಕ್ತಪಡಿಸದೇ ಸುಮ್ಮನೆ ಕುಳಿತಿದ್ದ. ಆದರೆ ಒಮ್ಮೆಲೆ ಒಂದು ಲಕ್ಷ ಹಣವನ್ನು ಯಾವ ರೀತಿ ಉಪಯೋಗಿಸಬೇಕೆಂಬ ಹಂಬಲ ಮನದಲ್ಲಿ ಕುಣಿದಾಡತೊಡಗಿತು. ಮೊದಲಿನಿಂದಲೇ ಹಮಾಲಿ ಮಾಡಿ ದುಡಿದು ಅದೇ ಹಣದಲ್ಲಿ ಜೀವನ ನಿರ್ವಹಿಸುತ್ತಿದ್ದ ಈತನ ಮನಸ್ಸು ಚಂಚಲವಾಗಹತ್ತಿತು. ಇಷ್ಟು ಹಣದಲ್ಲಿ ಕುಡಿದು, ಕುಣಿದು ಕುಪ್ಪಳಿಸಬಹುದೆಂದು ಮಹದಾಸೆ ಮನದಲ್ಲಿ ಇದ್ದಾಗ, ಅದೇ ದಿನ ತನ್ನಷ್ಟಕ್ಕೆ ತಾನೇ ಜಂಭ ಕೊಚ್ಚಿಕೊಳ್ಳುತ್ತ ನಾನೇ ಶ್ರೀಮಂತ, ನನ್ನ ಕೈ ಹಿಡಿಯುವರ್‍ಯಾರು ಎಂದು ಖುಷಿ ಪಡುತ್ತಿದ್ದನು. ಬೇರೆಯವರು ಅಸೂಯೆ ಪಡುವಂತೆ ವರ್ತಿಸತೊಡಗಿದನು. ಯಾವುದೇ ವಸ್ತುಗಳು ಈತನ ಕಣ್ಣಿನಲ್ಲಿ ಚಿಲ್ಲರೆಯಾಗಿ ಕಾಣಲಾರಂಭಿಸಿದವು.

ಆ ದಿನ ಗೆಳೆಯರ ಹತ್ತಿರ ಹಣವನ್ನು ಸಾಲವಾಗಿ ತೆಗೆದುಕೊಂಡು ಕುಡಿದು ನಶೆ ಆದಾಗ ಮನೆದಾರಿ ಹಿಡಿದ. ಮನೆಯಲ್ಲಿ ಹೋದಾಗ ಈತನಿಗೆ ಪ್ರತಿಯೊಂದು ವಸ್ತುಗಳು ಚಿಲ್ಲರೆಯಾಗಿ ಕಾಣತೊಡಗಿದವು. ಯಾಕೆಂದರೆ ಒಂದು ಲಕ್ಷ ಲಾಟರಿ ಬಂದಿದೆ ಎಂಬ ಅಹಂಭಾವ ಇವನಲ್ಲಿ ಹೆಚ್ಚಾಗುತ್ತಿತ್ತು: ಪ್ರತಿಯೊಂದು ವಸ್ತುಗಳನ್ನು ವಕ್ರದೃಷ್ಟಿಯಿಂದ ವೀಕ್ಷಿಸತೊಡಗಿದನು. ಅವನ್ನೆಲ್ಲ ಹೊರಗೆಸೆಯಬೇಕೆಂದು ತೀರ್ಮಾನಿಸಿದ. ಅದೇ ಹೊತ್ತಿಗೆ ಗೋಡೆಗೆ ತೂಗು ಹಾಕಿದ ತನ್ನ ಬಟ್ಟೆಗಳ ಮೇಲೆ ಕಣ್ಣು ಹಾಯಿಸಿದಾಗ ಮತ್ತಷ್ಟು ಜಿಗುಪ್ಸೆಯಿಂದ ಅವುಗಳನ್ನು ನೋಡಿ, ತಡೆಯಲಾರದಷ್ಟು ಸಿಟ್ಟು ಬಂದು, ಇಷ್ಟು ಹಳೆಯ ಬಟ್ಟೆಗಳು ತನಗೆ ಎಂದು ಬಡಬಡಿಸುತ್ತಾ ಬೆಂಕಿಕಡ್ಡಿಯಿಂದ ಅವುಗಳನ್ನು ಅಲ್ಲಿಯೇ ಸುಟ್ಟು ಹಾಕಿದನು.

ನಂತರ ಬೇಸತ್ತು ಅವುಗಳನ್ನೆಲ್ಲ ದಿಟ್ಟಿಸಿ ನೋಡುತ್ತ ಸುಸ್ತಾಗಿ ಸುಮ್ಮನೆ ಅಲ್ಲಿಯೇ ಒಂದು ಮೂಲೆಯಲ್ಲಿ ಮಲಗಿಕೊಂಡನು. ಹೀಗೆ ರಾತ್ರಿಯಲ್ಲಾ ಆರಾಮಾಗಿ ನಿದ್ರೆ ಮಾಡಿ ಮುಂಜಾನೆ ಎದ್ದು ನೋಡುವಷ್ಟರಲ್ಲಿ ತಾನೇ ಏನು ಮಾಡಿದೆನೆಂದು ನೆನಪಿರದಷ್ಟು ಮಾಡಿದ ಕೆಲಸ ನೆನಪಿಸಿಕೊಂಡನು. ಆದರೆ ಏನಾಯಿತು ? ಎಲ್ಲ ಬಟ್ಟೆ ಸುಟ್ಟು ಹೋದರೆ ಬೇರೆ ಹೊಸ ಬಟ್ಟೆಗಳನ್ನು ಖರೀದಿಸಿದರಾಯಿತು ಎಂದು ಮನದಲ್ಲಿ ನಸು ನಕ್ಕು ಸುಮ್ಮನಾದ. ಆದರೆ ಆತನಿಗೆ ತಕ್ಷಣ ತನ್ನ ಲಾಟರಿ ಟಿಕೇಟ್ ನೆನಪಾಯಿತು. ಹುಡುಕಾಡಲು ಪ್ರಾರಂಭಿಸಿದನು. ಆಗ ಆತನ ನೆನಪಿಗೆ ಬಂದಿತು. ಹಿಂದಿನ ದಿನ ಹೋಗುವಾಗ ಅದನ್ನು ಸುಟ್ಟು ಹಾಕಿದ ಬಟ್ಟೆಯ ಜೇಬಿನಲ್ಲಿ ಇಟ್ಟದ್ದು ನೆನಪಾಯಿತು. ಕಸಿವಿಸಿಗೊಂಡ, ಏನು ಮಾಡಬೇಕೆಂದು ತೋಚದಾಯಿತು. ಆದರೆ ಆಗಲೇ ಸಮಯ ಮೀರಿ ಹೋಗಿತ್ತು. 'ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ' ಎಂದು ವ್ಯಥೆಪಡತೊಡಗಿದನು. ಕುಡಿದ ಅಮಲಿನಲ್ಲಿ ರೋಷಾವೇಷದಿಂದ, ಅಸೂಯೆಯಿಂದ ಬಟ್ಟೆಯನ್ನು ಸುಟ್ಟು ಹಾಕಿ ಪರಿತಪಿಸುವಂತಾಯಿತು ಎಂದು ಚಿಂತಾಕ್ರಾಂತನಾದ. ಆದರೆ ಅವನ ಕುಡಿತ ಅವನ ಜೀವನವನ್ನು ಹಾಳು ಮಾಡಿತು. ತಾ ಇರಿಸಿದ್ದ ಆಶೆಯಲ್ಲಾ ನುಚ್ಚು ನೂರಾಯಿತೆಂದು ಮನಸ್ಸು ಚಿಂತಿಸತೊಡಗಿತು. ಗೆಳೆಯರ ಸಾಲವನ್ನು ಹೇಗೆ ಕೊಡುವುದು, ನನಗೆ ನಾನೇ ಮೂರ್ಖ ಎಂದು ಒಂದು ಮೂಲೆಯಲ್ಲಿ ಕುಳಿತು ಏಕಾಗ್ರತೆಯಿಂದ ಕಣ್ಣು ಮಿಟುಕಿಸದೇ ಹಾಗೇ ಕುಳಿತ. 'ಏನೋ ಮಾಡಲು ಹೋಗಿ ಏನೋ ಆಯಿತು' ಎಂದು ಆ ದಿನ ಹಮಾಲಿ ಮಾಡಲು ಹೋಗದೆ, ಅದೇ ಭ್ರಮೆಯಲ್ಲಿ ಕುಳಿತಿದ್ದ. ಏಳಲು ಮನಸ್ಸು ಬರುತ್ತಿರಲಿಲ್ಲ. ಸುಸ್ತಾಗಿ ಹೋಗಿದ್ದ ಅವನ ಮುಖ ಬಾಡಿ ಹೋಗಿತ್ತು. ಎಷ್ಟು ದಿನ ಅಂತ ಹಾಗೇ ಕುಳಿತುಕೊಳ್ಳುತ್ತಾನೆ. ಮತ್ತೇ ಹೊಟ್ಟೆಯ ಚಿಂತೆ ಪ್ರಾರಂಭವಾಗಿ, ಪ್ರತಿದಿನ ಎದ್ದರೆ ಅದೇ ತನ್ನ ಹಮಾಲಿ ಕೆಲಸ ಮಾಡಿ ಮಾಡಿ ಕೊನೆಗೊಂದು ದಿನ ದಿಕ್ಕಿಲ್ಲದೆ ಹೆಣವಾಗಿ ಹೋದ.

●

# ಕೊಲೆಯ ಕೈವಾಡ

● ಸುಕುಮಾರ ಸಿಮಾನಿ

ಹೊಳಿ ದಂಡೆಯ ಮ್ಯಾಲ ಹೆಣಾ ಬಂದ ಹತ್ತೈತ್ರೋ ಎಂದು ಗಾಬರಿಯಿಂದ ಊರೊಳಗೆ ಚೀರುತ್ತ ಬಂದ ಪರಮೇಶಿಯನ್ನು ನೋಡಿ ಪಂಚಾಯ್ತಿ ಕಟ್ಟೆಗೆ ಕುಳಿತ ನಾಲ್ಕೈದು ಜನ ಹೊಳಿ ಕಡೆಗೆ ಓಡಿ ಹೋದಾಗ ಆ ಹೆಣ ನೀರಿನಲ್ಲಿ ತೇಲುತ್ತ ಒಂದು ಗಿಡಕ್ಕೆ ತಟ್ಟಿ ನಿಂತಿತ್ತು. ಅದು ನೀರಿನಲ್ಲಿ ಉಬ್ಬಿ ಮೀನುಗಳು ಅದನ್ನು ಬಾಯಿಂದ ಹರಿದು ತಿನ್ನುತ್ತಿದ್ದವು. ಮುಖವು ಕಲ್ಲಿನಿಂದ ಜಜ್ಜಿದ ಹಾಗೆ ಕಾಣುತ್ತಿತ್ತು. ಮೈಯಲ್ಲಿ ಮುಂಡು, ಚಡ್ಡಿ ಗಟ್ಟಿಯಾಗಿಯೇ ಇದ್ದವು. ಜರಾ ಜರಾ ಗುರುತು ಹತ್ತಿದ ಹಾಗೆ ಅನ್ನಿಸುತ್ತಿತ್ತು.

ಕೆಲವು ಸಮಯದ ನಂತರ ಊರಿನ ಜನಾ ಗುಂಪು ಗುಂಪಾಗಿ ಆ ಹೆಣಾ ನೋಡಲಿಕ್ಕೆ ಬಂದರು. ಅದನ್ನು ನೋಡಿದ ಬಳಿಕ ಗುರುತು ಹತ್ತಿದಂತೆ ಒಳಗೊಳಗೆ ಸಂಕಟ ಪಡುತ್ತ ಯಾರಿಗೂ ಹೇಳಲಾಗದೆ ತಳಮಳಿಸುತ್ತಿದ್ದರು. ಅಲ್ಲಿ ನೆರೆದಿದ್ದ ಕೆಲವು ಹೆಂಗಸರಲ್ಲಿ ಗುನು ಗುನು ಮಾತು ಚಾಲೂ ಆಗಿತ್ತು. "ಅಯ್ಯ ಈ ಹೆಣಾ ಆ ದೊಡಮನಿ ಗಂಗಪ್ಪನದ ಹೌದ ನೋಡ. ಗಂಗಪ್ಪನ ಹೆಂಡ್ತಿ ಕಾವೇರಿ ಮತ್ತು ಆವಳ ಗೆಣ್ಯಾ ಮಲ್ಯಾ ಅವರದ ಇದರೊಳಗ ಮಸಲತ್ತ ಐತಿ ನೋಡ" ಎಂದು ತಮ್ಮ ತಮ್ಮಲ್ಲಿಯೇ ಮಾತಾಡಿಕೊಳ್ಳುತ್ತಿದ್ದರು.

ಎಲ್ಲಾ ಜನ ಗುಂಪಾಗಿ ಹೆಣಾ ನೋಡಿ ಅಲ್ಲೇ ಕುಳಿತಿದ್ದರು. ಅಷ್ಟರಲ್ಲಿ ಊರಿನ ಪಂಚ ಮಲ್ಲನಗೌಡ ಪೊಲೀಸ್ ಕಛೇರಿಗೆ ಫೋನ್ ಮಾಡಿ ಹೇಳಿದಾಗ ಜೀಪಿನಲ್ಲಿ ನಾಲ್ಕೈದು ಮಂದಿ ಪೊಲೀಸ್‌ರು ಮತ್ತು ಒಬ್ಬ ಮೇಲಿನ ಆಫೀಸರ್ ಬಂದರು. ಬಂದ ಕೂಡಲೇ ಆ ಹೆಣವನ್ನು ಪರೀಕ್ಷಿಸಿ ಇದಕ್ಕೆ ಕಾರಣ ಯಾರು ? ಈ ಹೆಣಾ ಯಾರದು ? ಎಂದು ಕೇಳಿದಾಗ ಅಲ್ಲಿದ್ದ ಊರಿನ ಜನಾ ಯಾರೂ ಬಾಯಿ ಬಿಡಲಿಲ್ಲ.

ಅದೇ ಊರಿನಲ್ಲಿದ್ದ ಗಂಗಪ್ಪನ ಅವ್ವ, ಅಪ್ಪ, ಅಣ್ಣ, ತಮ್ಮಂದಿರು ಮತ್ತು ಅವನ ಹೆಂಡ್ತಿ ಕಾವೇರಿ ಎಲ್ಲರೂ ಸಹ "ಹೆಣಾ ನಮ್ಮದೇನ ಅಲ್ಲ, ನನ್ನ ಗಂಡ ಊರಿಗೆ ಹೋಗ್ಯಾನ ಇನ್ನೆರಡ ದಿವಸಕ ಬರತಾನ" ಎಂದು ಹೇಳುತ್ತಾ ತಮ್ಮ ಮನೆ ಕಡೆಗೆ ಹೆಜ್ಜೆ ಇಟ್ಟರು.

ಆಗ ಪೊಲೀಸರು ಆ ಹೆಣವನ್ನು ಮೇಲೆ ತೆಗೆಯಿಸಿ ಅವನ ಮೈಯಲ್ಲಿದ್ದ ಮುಂಡಾ ಒಳಗಿನ ಸೇದುವ ಚಿಲುಮಿ ಇದ್ದದ್ದನ್ನು ಕಂಡು ತೆಗೆದುಕೊಂಡರು. ನಂತರ ಕಟ್ಟಿಗೆಯನ್ನು ತರಿಸಿ ಆ ಹೆಣವನ್ನು ಸುಟ್ಟರು. ಪೊಲೀಸರು ಹೊರಡುವಾಗ ನಾವು ಮತ್ತೆ ಆಗಾಗ ಬಂದು ಸಂಶಯ ಬಂದ ಜನರನ್ನು ವಿಚಾರ ಮಾಡುತ್ತೇವೆ ಎಂದು ಹೇಳಿ ಹೋದರು.

ಅಲ್ಲಿಯೇ ಇದ್ದ ನನಗೆ ಆಶ್ಚರ್ಯದ ಜೊತೆಗೆ ವಿಚಿತ್ರವಾದ ಅನುಭವವಾಯಿತು. ಯಾಕೆ ? ತಮ್ಮವನೆಂದು ಗೊತ್ತಿದ್ದೂ, ನಮಗೇನೂ ಗೊತ್ತಿಲ್ಲಾ ಎಂದು ಹೇಳಿದರಲ್ಲಾ ಇದಕ್ಕೇನು ಕಾರಣ ಎಂದು ಮನಸ್ಸಿನಲ್ಲಿ ವಿಚಾರಿಸುತ್ತಾ ಮನೆ ಕಡೆಗೆ ಹೋದಾಗ ಅಲ್ಲಿಯೇ ಕಟ್ಟೆಯ ಮೇಲೆ ಕುಳಿತಿದ್ದ ಅಜ್ಜಿಯನ್ನು ಕೇಳಿದೆ. ಆಗ ಅಜ್ಜಿ "ತಮ್ಮಾ ನಮಗ್ಯಾಕ ಬೇಕ ಮಂದಿ ಉಸಾಬರಿ, ನೋಡಿ ಏನ್ ಮಾಡೂದು ಬಿಡ" ಎಂದು ಹೇಳಿದಾಗ ಇನ್ನಷ್ಟು ಅದನ್ನು ತಿಳಿಯುವ ಕುತೂಹಲ ಉಂಟಾಯಿತು.

ಆಗ ಅಜ್ಜಿಯನ್ನು ನೀನು ಹೇಳಿಯೇ ಬಿಡಬೇಕು ಎಂದು ಹಟ ಹಿಡಿದಾಗ, 'ಏನ್ ಮಾಡೂದ ಐತಿ ಇಂಥಾ ಸಂಭಾಯಿತ ಮನಸ್ಯಾಗ ಹಿಂಗ ಆಗಬಾರದಿತ್ತು' ಎಂದು ಕಣ್ಣಲ್ಲಿ ನೀರು ತಂದಳು.

'ಈ ಹಲಮಾಲಗಿತ್ಯಾರ ಎಲ್ಲಾ ಕೂಡಿ ಅವನ್ನ ಕೊಂದ ಬಿಟ್ರು. ಪಾಪ ಬಾಯಾಗ ಮಣ್ಣ ಹಾಕ್ಕೊಂಡ ಹೋಯ್ತು ಏನ್ ಮಾಡುದ್ಯೆತಿ ಹೇಳ. ಆ ದೊಡಮನಿ ಸಿದ್ದಪ್ಪ ಸಾವುಕಾರ ಅದಾನಲಾ ಅಂವಾ ಭಾಳ ಅಂತಸ್ತಿಕೆ ಹೊಂದಿದವನು. ಸಾಕಷ್ಟು ನೀರಾವರಿ ಜಮೀನಿತ್ತು, ಮನೆಯಲ್ಲಿ ಸಾಕಷ್ಟು ಕಾಳು ಕಡಿ ಬಂದು ಸಂಸಾರ ಚೆನ್ನಾಗಿ ನಡೆದಿತ್ತು. ಸಿದ್ದಪ್ಪ ಸಾವುಕಾರನಿಗೆ ಐದು ಜನಾ ಗಂಡು ಹಾಗೂ ಎರಡು ಹೆಣ್ಣು ಮಕ್ಕಳು ಹುಟ್ಟಿದ್ದರು. ಹಿರಿಯ ಮಗ ಸಾಬಣ್ಣನಿಗೆ ಪಕ್ಕದ ಹಳ್ಳಿಯ ಕರಿಯಣ್ಣನ ಮಗಳನ್ನು ನೋಡಿ ಮದುವೆ ಮಾಡಿದರು. ಮದುವೆಯಾದ ವರುಷದಲ್ಲಿಯೇ ಗಂಡು ಮಗಾ ಹುಟ್ಟಿದಾ. ಅವನಿಗೆ ಮಲ್ಲಪ್ಪನೆಂದು ಹೆಸರಿಟ್ಟರು. ಮಗಾ ಬೆಳೆಯುತ್ತಾ ಹರೇಕ ಬಂದು ಹೊಲದಲ್ಲಿ ಕೆಲಸಾ ಮಾಡಾಕಹತ್ತಿದ.

ಸಿದ್ದಪ್ಪ ಸಾವುಕಾರ ಸರದಿಯಂತೆ ತನ್ನ ಎರಡನೇ ಮಗ ಗಂಗಪ್ಪನಿಗೆ ಅಲ್ಲಿಯೇ ಇದ್ದೂರಲ್ಲಿಯೇ ಪರಪ್ಪನ ಮಗಳು ಕಾವೇರಿಯನ್ನು ತಂದು ಮದುವೆ ಮಾಡಿದನು. ಕಾವೇರಿ ನೋಡಲು ತುಂಬಾ ಸುಂದರವಾಗಿ ಇದ್ದಳು. ಗಂಗಪ್ಪ ಮತ್ತು ಕಾವೇರಿ ಇಬ್ಬರೂ ಗಂಡ ಹೆಂಡತಿ ಬಹಳ ಅನ್ಯೋನ್ಯತೆಯಿಂದ ಇದ್ದರು. ಅದೊಂದು ಸುಂದರವಾದ ಕೌಟುಂಬಿಕ ಸಂಸಾರ. ಮದುವೆಯಾದ ಒಂದೆರಡು ವರುಷದಲ್ಲಿಯೇ ಕಾವೇರಿಗೆ ಹೆಣ್ಣು ಮಗು ಹುಟ್ಟಿತು.

ದೊಡ್ಡದಾದ ಕುಟುಂಬದಲ್ಲಿ ಕೆಲವೊಮ್ಮೆ ಮನಸ್ತಾಪಗಳು ಬರುತ್ತವೆ. ಇವರಲ್ಲಿಯೂ ಸಹ ಯಾವುದೋ ಮನಸ್ತಾಪದಿಂದ ಗಂಗಪ್ಪನು ಮನೆಯಲ್ಲಿ ತಂದೆ ತಾಯಿಯರ ಜೊತೆ

ಜಗಳವಾಡಿ ಹೆಂಡತಿ ಮತ್ತು ಮಗುವಿನೊಂದಿಗೆ ಬೇರೆ ಮನೆ ಮಾಡಿದನು. ಗಂಡ ಹೆಂಡತಿ ಇಬ್ಬರೂ ದಿನಾಲು ಕೂಲಿ ಮಾಡಿ ಸುಖವಾದ ಸಂಸಾರ ಮಾಡ ಹತ್ತಿದರು.

ಹತ್ತೆಂಟು ವರುಷ ಕಳೆದ ಮೇಲೆ ಗಂಗಪ್ಪನ ಅಣ್ಣನ ಮಗ ಮಲ್ಲಪ್ಪನು ತನ್ನ ಚಿಕ್ಕಪ್ಪನ ಮನೆಗೆ ಆಗಾಗ ಬರುತ್ತಿದ್ದನು. ಒಮ್ಮೊಮ್ಮೆ ಅಲ್ಲಿಯೇ ಊಟ, ಉಪಚಾರ, ಮಲಗುವುದು ಮಾಡುತ್ತಾ ಅತೀ ಸಲುಗೆಯಿಂದ ಇರುತ್ತಿದ್ದನು. ಗಂಗಪ್ಪನು ತಮಗೂ ಗಂಡು ಮಕ್ಕಳು ಇಲ್ಲಾ, ಇವನೇ ನಮಗ ಮಗಾ ಇದ್ದ ಹಾಗೆ ಅಂತೆ ತಿಳಿದುಕೊಂಡಿದ್ದನು. ಹಾಗೆ ಅಮ್ಮಾಜಿಮಗಳು ದೊಡ್ಡವಳಾದಾಗ ಶಾಲೆ ಬಿಡಿಸಿ ಮದುವೆ ಮಾಡಲು ವಿಚಾರ ಮಾಡಿ ಗಂಡು ಹುಡುಕುವ ಕೆಲಸ ಪ್ರಾರಂಭಿಸಿದರು.

ಮಲ್ಲಪ್ಪನು ಈ ಮನೆಗೆ ಅತಿಯಾದ ಸಂಪರ್ಕವನ್ನು ಇಟ್ಟುಕೊಂಡಾಗ ನೆರೆಹೊರೆಯವರಿಗೆ ಸಂಶಯಗಳು ಕಂಡುಬಂದವು. ಗಂಗಪ್ಪನ ಹೆಂಡತಿ ಕಾವೇರಿ ಚಿಕ್ಕಮ್ಮನ ಜೊತೆ ಮಲ್ಲಪ್ಪ ಅನೈತಿಕ ಸಂಬಂಧ ಹೊಂದಿದ್ದು ಆ ಓಣಿಯಲ್ಲಿ ಸುದ್ದಿಯಾಗಿತ್ತು.

ಹೀಗೆ ಎಷ್ಟೋ ಸಲ ಕದ್ದು ಮುಚ್ಚಿ ಅವರು ಕೂಡುತ್ತಿದ್ದರು. ಕೆಲವು ದಿವಸಗಳ ನಂತರ ಗಂಗಪ್ಪನು ಮಗಳನ್ನು ಮಹಾರಾಷ್ಟ್ರದಿಂದ ಒಳ್ಳೆಯ ಮನೆತನದ ವರ ಬಂದು ನೋಡಿ ಒಪ್ಪಿಕೊಂಡು ಹೋದರು. ಸ್ವಲ್ಪೇ ದಿನಗಳಲ್ಲಿ ಮದುವೆ ಏರ್ಪಡಿಸಿದಾಗ, ಗಂಗಪ್ಪನ ತಂದೆ - ತಾಯಿಗಳು ಎಲ್ಲರೂ ಕೂಡಿ ಅತೀ ವಿಜೃಂಭಣೆಯಿಂದ ಮದುವೆ ಮಾಡಿ ಮುಗಿಸಿದರು. ಒಬ್ಬಳೇ ಮಗಳನ್ನು ಗಂಡನ ಮನೆಗೆ ಕಳಿಸುವುದು ಗಂಗಪ್ಪನಿಗೆ ದುಃಖ ಉಕ್ಕಿ ಬಂತು. ಎದೆ ಬಿರಿದು ಅತ್ತನು. ಮಗಳನ್ನು ಗಂಡನ ಮನೆಗೆ ಕಳಿಸಿ ಬಂದು, ದಿನಾಲು ಹೊಲದ ಕೆಲಸಕ್ಕೆ ಹೋಗಹತ್ತಿದನು.

ಕೆಲವು ದಿವಸಗಳ ನಂತರ ಮಗಳನ್ನು ನೋಡಿ ಬರಲು ಗಂಗಪ್ಪನು ಊರಿಗೆ ಹೋದನು. ನಾಲ್ಕೈದು ದಿವಸ ಅಲ್ಲೇ ಇದ್ದು ನಂತರ ಊರಿಗೆ ಮರಳಿದನು.

ಊರಿಗೆ ಬಂದಾಗ ರಾತ್ರಿಯಾಗಿತ್ತು. ಮನೆಯ ಹತ್ತಿರಕ್ಕೆ ಹೋದಾಗ ಮನೆಯೊಳಗೆ ಗುನು ಗುನು ಶಬ್ದ ಕೇಳಿಸುತ್ತಿತ್ತು. ಇಷ್ಟೊಂದು ರಾತ್ರಿಯಲ್ಲಿ ತಮ್ಮ ಮನೆಯಲ್ಲಿ ಗಂಡಸಿನ ಧ್ವನಿ ಕೇಳುತ್ತಿದ್ದುದನ್ನು ಕಂಡು ಗಾಬರಿಗೊಂಡು ಹಿತ್ತಲ ಕಿಡಕಿಯಲ್ಲಿ ಕಣ್ಣು ಹಾಯಿಸಿದನು. ಆಗ ಒಳಗೆ ತನ್ನ ಹೆಂಡತಿ ಕಾವೇರಿ ಹಾಗೂ ತನ್ನ ಅಣ್ಣನ ಮಗ ಮಲ್ಲಪ್ಪನು ನಡೆಸಿದ ರಾಸಲೀಲೆಯನ್ನು ಕಂಡು ದಿಗ್ಭ್ರಾಂತನಾದನು. ತನ್ನ ಕಣ್ಣನ್ನು ತಾನೇ ನಂಬದಾದನು. ಅವನಿಗೆ ದಿಕ್ಕೇ ತೋಚದಾಯಿತು.

ಗಂಗಪ್ಪನು ಬಾಗಿಲು ಬಡಿದ ಶಬ್ದವನ್ನು ಕೇಳಿ ಕಾವೇರಿ ಮತ್ತು ಮಲ್ಲಪ್ಪ ಇನ್ನು ಅನಾಹುತವಾಯಿತು ಎಂದು ಒಬ್ಬರನ್ನೊಬ್ಬರು ನೋಡಿದಾಗ ಇಬ್ಬರೂ ಕೂಡಿ ಒಂದು

ನಿರ್ಧಾರಕ್ಕೆ ಬಂದಂತೆ ತೋರಿದರು. ಬಾಗಿಲು ತೆಗೆದಾಗ 'ಎಲಾ ಹಲ್ಕಟ್ ನನ್ನ ಮಗನೇ' ಎಂದು ರೋಷದಿಂದ ಅಲ್ಲೇ ಮೂಲೆಯಲ್ಲಿ ಇಟ್ಟಿದ್ದ ಕೊಡಲಿಯನ್ನು ತೆಗೆದುಕೊಂಡು ಅವನ ಮೇಲೆ ಕೈ ಮಾಡಿದಾಗ, ಹಿಂದಿನಿಂದ ಕಾವೇರಿಯು ಕಟ್ಟಿಗೆಯಿಂದ ತನ್ನ ಗಂಡನ ತಲೆಗೆ ಹೊಡೆದಾಗ ಗಂಗಪ್ಪನು ಪ್ರಜ್ಞೆ ತಪ್ಪಿ ಬಿದ್ದುಬಿಟ್ಟನು. ಆಗ ಮಲ್ಲಪ್ಪನು ಇವನನ್ನು ಹಾಗೇ ಬಿಟ್ಟರೆ ತಮಗೆ ಉಳಿಗಾಲ ಇಲ್ಲವೆಂದು ನಿರ್ಧರಿಸಿ, ಅವನ ಕುತ್ತಿಗೆಯನ್ನು ಹಿಸುಕಿ ಕೊಲೆ ಮಾಡಿದರು. ಗುರುತು ಸಿಗದಂತೆ ಮುಖಕ್ಕೆ ಕಲ್ಲಿನಿಂದ ಜಜ್ಜಿದನು. ಹೆಣವನ್ನು ಗೋಣಿಚೀಲದಲ್ಲಿ ಹಾಕಿದರು. ನಡುರಾತ್ರಿಯಲ್ಲಿ ಹೆಣವನ್ನು ಹೊಳೆಯಲ್ಲಿ ಹಾಕಿ ಬಂದರು.

ಅಗ್ನಿಸಾಕ್ಷಿಯಾಗಿ ತಾಳಿ ಕಟ್ಟಿದ ಗಂಡನನ್ನು ಬಲಿ ತೆಗೆದುಕೊಂಡು ಮಿಂಡನ ಕೂಡ ಸಂಸಾರ ಹೂಡಿದಳು ಕಾವೇರಿ. 'ಇಷ್ಟೆಲ್ಲಾ ದುರಂತ ನಡೀತ ನೋಡ ತಮ್ಮಾ' ಎಂದು ಅಜ್ಜಿ ಕಣ್ಣೀರು ತೆಗೆದ್ಲು. ಗಂಗಪ್ಪನ ಹೆಣಾ ಹೊಳೆಯಲ್ಲಿ ಪರದೇಶಿಯಂತೆ ಯಾರೂ ದಿಕ್ಕಿಲ್ಲಧಂಗ ಆಗಿ ಹೋಯಿತು.

ಇದನ್ನೆಲ್ಲಾ ಕೇಳಿ ನನ್ನ ಎದೆಯಲ್ಲಿ ದುಃಖವು ಉಕ್ಕಿ ಬಂದು ಜಗತ್ತು ಎಷ್ಟೊಂದು ವಿಚಿತ್ರವಾಗಿದೆ. ವಿವಾಹ ಬಾಹಿರವಾದ ಸಂಬಂಧವನ್ನು ಕಂಡು ಒಂದು ಕ್ಷಣ ಜೀವನದ ಮೇಲೆ ಜಿಗುಪ್ಸೆ ಉಂಟಾಯಿತು. ಇಷ್ಟೆಲ್ಲಾ ನಡೆದರೂ ಊರಿನ ಜನಾ ತಮಗೇನೂ ಗೊತ್ತಿಲ್ಲಾ ಅಂತ "ನಮಗ್ಯಾಕ ಬೇಕ ಮಂದಿ ಉಸಾಬರಿ" ಅಂತ ಬಾಯಿ ಮುಚ್ಚಿಕೊಂಡು ಸುಮ್ಮನೆ ಕುಳಿತಿದ್ದು ಎಷ್ಟೊಂದು ಸೋಜಿಗದ ಸಂಗತಿಯಲ್ಲವೇ ?

# ಇದೆಂಥಾ ಅದೃಷ್ಟ... !

● ಖುರ್ಷೀದ್‌ಆಲಂ ಮೋಮಿನ

ಸೂರ್ಯ ತಲೆಯ ಮೇಲೆ ಬಂದಾಗ ಮಂಜನಿಗೆ ಎಚ್ಚರವಾಯಿತು. ಎದ್ದು ಸುತ್ತಮುತ್ತಲು ನೋಡಿದಾಗ ತಾನು ಎಲ್ಲಿ ನಿಂತಿದ್ದೇನೆಂಬುದು ಗೊತ್ತಾಗಲಿಲ್ಲ. ಗಿಡಗಳು, ಹೊಲದಲ್ಲಿರುವ ಮನೆಗಳು ಬಿದ್ದಿದ್ದವು. ಬಿದ್ದಿರುವ ಮನೆಗಳನ್ನು ನೋಡಿ ಮಂಜನಿಗೆ ತನ್ನ ಮನೆಯ ನೆನಪಾಯಿತು. ಮನೆಯೆಂದರೆ ಅವನದೇನು ದೊಡ್ಡ ಮನೆ ಇರಲಿಲ್ಲ. ಒಂದು ಸಣ್ಣ ಗುಡಿಸಲು ಇತ್ತು. ಅದರ ಪಕ್ಕಕ್ಕೆ ಹತ್ತಿಕೊಂಡೇ ಒಂದು ಪ್ರಾಚೀನ ಮಾವಿನಮರ ಇತ್ತು. ಆ ಸಣ್ಣದಾದ ಗುಡಿಸಲಿನಲ್ಲಿ ಮಂಜ ತನ್ನ ಹೆಂಡತಿ ಸುಬ್ಬಿ ಮತ್ತು ಮಗುವಿನೊಡನೆ ವಾಸವಾಗಿದ್ದ. ಆತ ತನ್ನ ಗುಡಿಸಲಿಗೆ ಬಂದಾಗ ವಿಚಿತ್ರ ಕಾದಿತ್ತು. ಆತನ ಗುಡಿಸಲು ಪ್ರವಾಹದ ಸುಳಿಗೆ ಸಿಕ್ಕಿ, ನಾಶವಾಗಿತ್ತು. ಪಕ್ಕದಲ್ಲಿದ್ದ ಹಳೆಯ ಮಾವಿನ ಮರ ಗುಡಿಸಲಿನ ಮೇಲೆ ಬಿದ್ದಿತ್ತು. ಸುತ್ತಮುತ್ತಲಿನ ಎಲ್ಲ ಗುಡಿಸಲುಗಳು ಬಿದ್ದಿದ್ದವು. ಊರ ಜನರ ಸಹಾಯದಿಂದ ಬಿದ್ದ ಮಾವಿನ ಮರವನ್ನು ಸರಿಸಿ ಒಳಗಡೆ ಹೋದಾಗ ಆತನ ಹೆಂಡತಿ ಸುಬ್ಬಿ ಮತ್ತು ಮಗು ದಾರುಣ ಸಾವನ್ನಪ್ಪಿದ್ದರು. ಅದನ್ನು ಕಂಡು ಮಂಜನಿಗೆ ಅರ್ಧ ಜೀವವೇ ಹೋದಂತಾಯಿತು. ನಾಲ್ಕೂ ದಿಕ್ಕುಗಳು ಆತನ ತಲೆಯಲ್ಲಿ ಗಿರಕಿ ಹೊಡೆಯತೊಡಗಿದವು. ಅವನ ಕಣ್ಣ ಮುಂದೆ ಕತ್ತಲೆ ಆವರಿಸಿತು. ಅವನಿಗೆ ದಿಕ್ಕೇ ತೋಚದಾಯಿತು.

ಮಂಜ ಬಹಳ ಹೊತ್ತಿನವರೆಗೆ ತನ್ನ ಗುಡಿಸಲಿನ ಹೊರಗೆ ಮೂಕವಿಸ್ಮಿತನಾಗಿ ಕುಳಿತಿದ್ದ. ಊರ ಜನರ ಒತ್ತಾಯದಿಂದ ತನ್ನ ಹೆಂಡತಿ, ಮಗುವಿನ ಅಂತ್ಯಸಂಸ್ಕಾರ ಮಾಡಿ ಬಂದ. ಆ ಊರಿನ ಹಲವಾರು ಮಂದಿ ಮನೆಗಳನ್ನು ಕಳೆದುಕೊಂಡಿದ್ದರು. ಹಲವಾರು ಜನ ಸಾವಿಗೀಡಾಗಿದ್ದರು. ನೂರಾರು ಜನರಿಗೆ ಗಾಯಗಳಾಗಿದ್ದವು. ಹೊಲದಲ್ಲಿ ಬೆಳೆದಂಥ ಫಸಲು ನಾಶವಾಗಿತ್ತು. ಆಕಸ್ಮಿಕವಾಗಿ ಬಂದ ಪ್ರವಾಹದಿಂದ ಹಲವಾರು ಜನ ಬೀದಿಪಾಲಾಗಿದ್ದರು.

ಮಂಜನಿಗೆ ಒಂದು ಎಕರೆ ಹೊಲ ಇತ್ತು. ಆ ಹೊಲದಲ್ಲಿ ಕಷ್ಟಪಟ್ಟು ದುಡಿಯುತ್ತಿದ್ದ. ಒಳ್ಳೆಯ ಫಸಲು ಬರುತ್ತಿತ್ತು. ಇದರಿಂದ ಆತ ಹೆಂಡತಿ ಮಗುವಿನೊಡನೆ ಸುಖವಾಗಿದ್ದ. ಆ ದಿನ ಶನಿವಾರ ಸಂಜೆಯ ಹೊತ್ತು, ಮಂಜ ತನ್ನ ಹೊಲದಲ್ಲಿ ಕೆಲಸ ಮಾಡುತ್ತಿದ್ದ. ಮುಗಿಲು ಕಪ್ಪಾಗಿತ್ತು, ಗಾಳಿಯ ವೇಗ ಇರಲಿಲ್ಲ. ಆತನ ಹೆಂಡತಿ ಮತ್ತು ಮಗು ಗುಡಿಸಲಿನಲ್ಲಿಯೇ

ಇದ್ದರು. ಮಂಜ ತನ್ನ ಕೆಲಸ ಮುಗಿಸಿಕೊಂಡು ಇನ್ನೇನು ಗುಡಿಸಲಿಗೆ ಹೋಗಬೇಕೆನ್ನುವಷ್ಟರಲ್ಲಿ, ಜೋರಾಗಿ ಗಾಳಿ ಬೀಸತೊಡಗಿತು, ಮಳೆಯೂ ಪ್ರಾರಂಭವಾಯಿತು. ಮಂಜ ಒಂದು ದೊಡ್ಡ ಮರದ ಅಡಿಯಲ್ಲಿ ನಿಂತಿದ್ದ. ಆದರೆ ಮಳೆ ನಿಲ್ಲಲಿಲ್ಲ. ಅದು ರಭಸವಾಗಿ ಸುರಿಯುತ್ತಿತ್ತು. ಕೆಲವು ಗಂಟೆಗಳು ಸಂದರೂ ಸಹ ಮಳೆ ನಿಲ್ಲುವ ಸೂಚನೆ ಕಾಣಲಿಲ್ಲ. ಮಂಜನಿಗೆ ತನ್ನ ಹೆಂಡತಿ ಮತ್ತು ಮಗುವಿನ ಬಗ್ಗೆ ತುಂಬಾ ಚಿಂತೆಯಾಯಿತು. ಗಾಳಿಯು ತನ್ನ ವೇಗವನ್ನು ಹೆಚ್ಚು ಮಾಡಿ ಜೋರಾಗಿ ಬೀಸತೊಡಗಿತು. ಮಂಜನ ಹೊಲದಲ್ಲಿದ್ದ ಸಣ್ಣ ದೊಡ್ಡ ಗಿಡ ಮರಗಳು ಬೀಳಲಾರಂಭಿಸಿದವು. ಮಳೆಯೂ ಕೂಡ ಸುರಿಯುತ್ತಲೇ ಇತ್ತು. ಆಗ ಯಾವುದೋ ಒಂದು ಭಾರವಾದ ವಸ್ತು ಅಸದೃಶವಾಗಿ ಬಂದು ಮಂಜನ ತಲೆಗೆ ಬಡಿಯಿತು. ಅದರ ಹೊಡೆತದಿಂದ ಆತ ಪ್ರಜ್ಞೆ ತಪ್ಪಿ ಬಿದ್ದು ಬಿಟ್ಟಿದ್ದ. ಮರುದಿನ ಸೂರ್ಯ ಆತನ ತಲೆಯ ಮೇಲೆ ಬಂದಾಗ ಆತನಿಗೆ ಎಚ್ಚರವಾಗಿತ್ತು. ಎದ್ದು ತನ್ನ ಗುಡಿಸಲಿಗೆ ಹೋಗಿ ನೋಡಿದಾಗ ಆತನ ಹೆಂಡ್ತಿ ಮತ್ತು ಮಗು ದಾರುಣ ಸಾವನ್ನಪ್ಪಿದ್ದರು. ನೂರಾರು ಜನರು ನಿರಾಶ್ರಿತರಾಗಿದ್ದರು.

ಮಂಜನಿಗೆ ಈಗ ಜೀವನವೇ ಬೇಸರವೆನಿಸಿತು. ಆತನ ಹೊಲದಲ್ಲಿದ್ದ ಫಸಲು ನಾಶವಾಗಿ ರೋದಿಸುತ್ತಿತ್ತು. ಸಾಲ ಸೋಲ ಮಾಡಿ, ಕಷ್ಟಪಟ್ಟು ದುಡಿದು ಒಳ್ಳೆಯ ಫಸಲು ಬರುವ ಹಾಗೆ ಮಾಡಿದ್ದ. ಆದರೆ ವಿಧಿಯ ಅಟ್ಟಹಾಸದಿಂದ ಆತನ ಕನಸು ನೂಚ್ಚು ನೂರಾಗಿತ್ತು. ಪ್ರವಾಹದಿಂದ ಆತನ ಫಸಲು ಕೊಚ್ಚಿ ಹೋಗಿತ್ತು. ಅದರಿಂದ ಸಾಲ ಮಾಡಿದ್ದ ಹಣವನ್ನು ಹೇಗೆ ಮರಳಿ ಕೊಡುವುದು ಎಂಬ ಚಿಂತೆ ಆತನನ್ನು ಕಾಡುತ್ತಿತ್ತು.

ಆತ ತನ್ನ ತಲೆಯಲ್ಲಿ ಯೋಚನೆಗಳೆಂಬ ಕೀಟಗಳನ್ನು ಹಾಕಿಸಿಕೊಂಡು ಕೊರೆಸಿಕೊಂಡಂತೆ ತುಂಬಾ ಯೋಚನೆ ಮಾಡಿದ. ನಂತರ ಊರು ಬಿಟ್ಟು ಹೋಗುವುದಾಗಿ ತೀರ್ಮಾನ ಮಾಡಿದ. ಹೋಗುವ ಮೊದಲು ಊರಗೌಡನ ಹತ್ತಿರ ಹೋಗಿ ಹೊಲ ಮಾರಿ ಹಣ ಪಡೆದುಕೊಳ್ಳುವುದಾಗಿ ಯೋಜನೆ ಹಾಕಿದ. ಮಾರನೇ ದಿನ ಗೌಡನ ಹತ್ತಿರ ಹೋಗಿ ತನ್ನ ಯೋಜನೆಯನ್ನು ಮುಂದಿಟ್ಟ. ಗೌಡ ತಡಮಾಡದೇ ಮಂಜನ ಹೊಲವನ್ನು ತನ್ನ ಹೆಸರಿಗೆ ಬರೆದುಕೊಂಡು ಆತನ ಕೈಯಲ್ಲಿ ನೂರು ರೂಪಾಯಿಯನ್ನು ಇಟ್ಟ. ಮಂಜ ಇನ್ನಷ್ಟು ಹಣ ಕೇಳಿದಾಗ ಗೌಡ ಆ ಸಾಲ - ಈ ಸಾಲ ಎಂದು ಸುಳ್ಳು ಪುರಾವೆಗಳನ್ನು ತೋರಿಸಿದ. ಮಂಜ ಹತ್ತು ರೂಪಾಯಿ ಸಾಲ ಪಡೆದಿದ್ದರೆ, ಗೌಡ ನೂರು ರೂಪಾಯಿ ಎಂದು ಬರೆದಿಡುತ್ತಿದ್ದ. ತಾನು ಸತ್ಯ ಹರಿಶ್ಚಂದ್ರ ಎಂದು ತೋರಿಸಲು ಸಾಲದ ಪುಸ್ತಕದ ನಾಲ್ಕೈದು ಪುಟಗಳನ್ನು ತಿರುವು ಹಾಕಿ, ಹತ್ತು ನಿಮಿಷ ಮಂಜನ ತಲೆ ಕೊರೆದ. ಮಂಜ ಮರುಮಾತನಾಡದೇ ಸಿಕ್ಕಷ್ಟು ಸಿಗಲಿ ಎಂದು ತನ್ನ ದಾರಿ ಹಿಡಿದ. ಒಂದೆರಡು ದಿನ ಅಲ್ಲಿ ಇಲ್ಲಿ ಕಾಡಿ ಬೇಡಿ ತಿಂದ.

ತನ್ನ ಊರಿನಲ್ಲಿ ಮಂಜನಿಗೆ ಹೆಂಡ್ತಿ ಮಗುವಿನ ನೆನಪು ತುಂಬಾ ಬರುತ್ತಿತ್ತು. ಆದ್ದರಿಂದ ಆತ ತಡ ಮಾಡದೇ ಮಾರನೆಯ ದಿನ ಹುಬ್ಬಳ್ಳಿಯ ಬಸ್ಸನ್ನೇರಿದ. ಕಿಸೆಯಲ್ಲಿ ಕೇವಲ ನೂರು

ರೂಪಾಯಿ. ಮೈಮೇಲೆ ಕೊಳಕು ಹರಿದ ಬಟ್ಟೆಗಳು. ಮಂಜ ಹುಬ್ಬಳ್ಳಿಗೆ ಬಂದಾಗ ಆತನಲ್ಲಿ ಕೇವಲ ಐವತ್ತು ರೂಪಾಯಿ ಉಳಿದಿದ್ದವು. ಆತನ ಹೊಟ್ಟೆ ತುಂಬಾ ಹಸಿದಿತ್ತು, ದುಡ್ಡಿನ ಚಿಂತೆ ಮಾಡದೇ ಒಂದು ಒಳ್ಳೆಯ ಹೊಟೇಲಿಗೆ ಹೋಗಿ ರಾಜಾರೋಷವಾಗಿ ಉಂಡು ಬಂದು, ಬಸ್‌ಸ್ಟ್ಯಾಂಡಿನಲ್ಲೇ ಮಲಗಿಕೊಂಡ. ಬೆಳಿಗ್ಗೆ ಎದ್ದು ಸುತ್ತಮುತ್ತ ಕಣ್ಣಾಡಿಸಿದ. ಒಂದು ದೊಡ್ಡ ಜಾತ್ರೆಯಲ್ಲಿ ಕಳೆದುಕೊಂಡಂತೆ ಭಾಸವಾಯಿತು ಮಂಜನಿಗೆ. ಊರಿಗೆ ಹೋಗುವ, ಊರಿಂದ ಬರುವ ಜನರು ಬಸ್‌ಸ್ಟ್ಯಾಂಡಿನಲ್ಲಿ ತುಂಬಿದ್ದರು. ಬೆಳಿಗ್ಗೆ ಎದ್ದಾಗ ಮಂಜನಿಗೆ ಚಹಾಕ್ಕೂ ಗತಿಯಿರಲಿಲ್ಲ. ಇದ್ದ ಹಣವನ್ನು ನಿನ್ನೆ ರಾತ್ರಿ ಹೊಟೇಲಿಗೆ ಹಾಕಿ ಬಂದಿದ್ದ.

ಆತನ ಹೊಟ್ಟೆ ಹಸಿವಿನಿಂದ ತಾಳ ಹಾಕುತ್ತಿತ್ತು. ಮುಂದೇನು ಮಾಡುವುದು ? ಎಲ್ಲಿ ಹೋಗುವುದು ? ಎಂಬ ಪ್ರಶ್ನೆಗಳು ಆತನ ತಲೆಯಲ್ಲಿ ಎದ್ದರೂ, ಅದಕ್ಕೆ ಅವನಲ್ಲಿ ಖಚಿತವಾದ ಉತ್ತರವಿರಲಿಲ್ಲ. ಮಂಜ ಸ್ವಾಭಿಮಾನಿಯೇನಲ್ಲ. ಅಲ್ಲಿ ಇಲ್ಲಿ ಸಿಕ್ಕಿದ್ದನ್ನು ತಿನ್ನುತ್ತಿದ್ದ. ಊರಲ್ಲಿದ್ದಾಗಲೂ ಕೂಡ ಕಾಡಿ ಬೇಡಿ ಅವರಿವರ ಹತ್ತಿರ ತಿನ್ನುತ್ತಿದ್ದ.

ಮಂಜನ ಹೊಟ್ಟೆ ಹಸಿದಿದ್ದರಿಂದ ಯಾವುದೇ ಯೋಚನೆ ಆತನ ತಲೆಗೆ ಹೊಳೆಯಲಿಲ್ಲ. ಭಿಕ್ಷೆಯೇ ಗತಿ ಎಂದು ಒಂದು ದೇವಸ್ಥಾನದ ಹತ್ತಿರ ಬಂದ. ಅಲ್ಲಿ ಮೊದಲೇ ಸಾಲು ಸಾಲಾಗಿ ಭಿಕ್ಷುಕರು ಕುಳಿತಿದ್ದರು. ಇವರೊಡನೆ ಎಲ್ಲಿ ಜಗಳಾಡುವುದು ಎಂದು ಮುಂದಕ್ಕೆ ಹೊರಟ. ಭಿಕ್ಷೆ ಬೇಡುತ್ತಾ ಬೇಡುತ್ತಾ ಶ್ರೀಮಂತರಿರುವ ಒಂದು ಬಡಾವಣೆಗೆ ಬಂದ. ಅಲ್ಲಿ ಹತ್ತಾರು ಮನೆಗಳಲ್ಲಿ ಭಿಕ್ಷೆ ಬೇಡಿದರೂ ಯಾರೂ ಭಿಕ್ಷೆ ನೀಡಲಿಲ್ಲ. ಮಂಜ ಎರಡು ವಾರಗಳಿಂದ ಜಳಕ ಮಾಡಿರಲಿಲ್ಲ. ಮೈ ಮೇಲಿನ ಬಟ್ಟೆಗಳು ತುಂಬಾ ಕೊಳಕಾಗಿದ್ದವು. ಸ್ವಲ್ಪ ಗಡ್ಡವೂ ಬೆಳೆದಿತ್ತು. ಬಡಾವಣೆಯಲ್ಲಿನ ಹೆಂಗಸರು, ಈತನ ವೇಷ ನೋಡಿ ಕಳ್ಳನಿರಬಹುದೆಂದು ಹೆದರಿ ಹೊರಗೆ ಬರಲು ಹೆದರುತ್ತಿದ್ದರು.

ಒಂದೆರಡು ದಿನ ಸುತ್ತಾಡಿದರೂ ಯಾರೂ ಭಿಕ್ಷೆ ನೀಡಲಿಲ್ಲ. ಮಂಜನ ಹೊಟ್ಟೆ ಹಸಿದು, ಇಲಿಗಳ ತಾಣವಾಗಿತ್ತು. ರಸ್ತೆ ಬದಿಯಲ್ಲಿ ಭಿಕ್ಷೆ ಬೇಡುತ್ತಾ ಬರುವಾಗ ಯಾರೋ ಒಬ್ಬ ಮಹಾನುಭಾವರು ಐದು ರೂಪಾಯಿಯನ್ನು ಕೈಯಲ್ಲಿಟ್ಟಾಗ ಮಂಜನಿಗೆ ಅತೀವ ಖುಷಿಯಾಯಿತು. 'ಇಂತಹ ಕಾಲದಲ್ಲಿಯೂ ಐದು ರೂಪಾಯಿ ಕೊಡುವ ಮಹಾನುಭಾವರು ಇದ್ದಾರೆಯೇ' ಎಂದು ಉದ್ಗಾರ ತೆಗೆದ.

ಆ ಹಣ ಪಡೆದು ಒಂದು ಸಣ್ಣ ಹೊಟೇಲಿಗೆ ಪ್ರವೇಶಿಸುವಾಗ ಹೊಟೇಲ್ ಮಾಲೀಕ ಮಂಜನ ವೇಷ ನೋಡಿ ಆತನನ್ನು ಒಳಬಿಡಲು ಹಿಂದೆ ಮುಂದೆ ನೋಡಿದರೂ, ಅವನ ಹತ್ತಿರ ಹಣ ಇರಬಹುದೆಂದು ಬಗೆದು ಒಳಗೆ ಬಿಟ್ಟ. ಮಂಜ ಹೊಟೇಲಿನಲ್ಲಿ ಊಟ ಎಂದೂ ಕಾಣದವನಂತೆ, ಹೊಟ್ಟೆ ತುಂಬಾ ಉಂಡ. ಹಲವು ದಿನಗಳಿಂದ ಹಸಿದಿದ್ದ ಆತನ ಹೊಟ್ಟೆ ಈಗ ಸ್ವಲ್ಪ ತಣ್ಣಗಾಗಿತ್ತು. ಉಂಡಾದ ಮೇಲೆ ಮಂಜ ಹೊಟೇಲ್ ಮಾಲೀಕನಿಗೆ ಐದು

ರೂಪಾಯಿ ಕೊಟ್ಟಾಗ, ಮಾಲೀಕ ಸಿಟ್ಟಾಗಿ ಇಪ್ಪತ್ತು ರೂಪಾಯಿಯನ್ನು ಬೇಡಿದ. ಆದರೆ ಮಂಜನ ಹತ್ತಿರ ಅಷ್ಟು ಹಣ ಇಲ್ಲವೆಂಬುದು ಮಾಲೀಕನಿಗೆ ಗೊತ್ತಾಯಿತು.

'ಹಣಾ ಇಲ್‌ದಿದ್ರ ಹೊಟೇಲಿಗೆ ಯಾಕ್ಲೆ ಬಂದೆ ?' ಎಂದು ಮಂಜನ ಮೇಲೆ ರೇಗಾಡಿದ. ಹಿಂಬದಿಗೆ ನಾಲ್ಕು ಒದ್ದು ಹಿತ್ತಲ ಕಡೆ ಪಾತ್ರೆ ತೊಳೆಯಲು ಕಳಿಸಿದ. ಮಂಜ ಮರುಮಾತನಾಡದೇ ಎಲ್ಲ ಪಾತ್ರೆಗಳನ್ನು ತೊಳೆದು ಹೊರಗೆ ಬಂದ. ಆತನಿಗೆ ಸ್ವಲ್ಪ ಆಯಾಸವಾಗಿತ್ತು. ಮಂಜ ತನ್ನ ಅದೃಷ್ಟಕ್ಕೆ ಮೀಸೆಯಂಚಿನಲ್ಲಿಯೇ ನಕ್ಕ. ಆ ನಗುವಿನಲ್ಲಿ ವ್ಯಂಗ್ಯವಿತ್ತೊ ! ವಿಷಾದವಿತ್ತೊ ! ಗೊತ್ತಿಲ್ಲ. ಸಂಜೆಯ ಹೊತ್ತು, ಬಸ್ ನಿಲ್ದಾಣದ ಹತ್ತಿರ ಬಂದ. ಬರುವ ಹಾಗೂ ಹೋಗುವ ಬಸ್ಸುಗಳನ್ನು ಜಾತಕಪಕ್ಷಿಯ ಹಾಗೆ ನೋಡುತ್ತ ಒಂದು ಕಂಭಕ್ಕೆ ಒರಗಿ ಕೂತ. ರಾತ್ರಿಯಾದರೂ ಹಾಗೆಯೇ ಕೂತಿದ್ದ. ಹೊಟ್ಟೆ ಹಸಿದಿದ್ದರೂ ಆತನಿಗೆ ನಿದ್ದೆ ಬಂತು. ಎಲ್ಲೂ ಹೋಗದೆ ಅಲ್ಲೇ ಬಿದ್ದುಕೊಂಡ.

ಬೆಳಗಾಯಿತು ಮಂಜ ಏಳಬೇಕೆನ್ನುವಷ್ಟರಲ್ಲಿ ಭುಜಕ್ಕೆ ಯಾರೋ ಹೊಡೆದಾಗಾಯಿತು. ತಿರುಗಿ ನೋಡಿದಾಗ ಒಬ್ಬ ಮುದುಕ ನಿಂತಿದ್ದ. ಆತನ ಹೆಸರು ರಂಗಪ್ಪ. ಅವನು ಒಬ್ಬ ಕೂಲಿ, ಬಸ್ ನಿಲ್ದಾಣದ ಹತ್ತಿರ ಆತನ ಒಂದು ಸಣ್ಣ ಗುಡಿಸಲು ಇತ್ತು. ಮಂಜನ ರೂಪ, ಆತನ ಸ್ಥಿತಿ ನೋಡಿ ನೀನು ಯಾರು ? ಎಲ್ಲಿಂದ ಬಂದೆ ? ಎಲ್ಲಿಗೆ ಹೋಗಬೇಕು ? ಎಂದು ಕೇಳಿದಾಗ ಮಂಜ ತನ್ನ ಹಿಂದಿನ ಕಥೆಯನ್ನು ವಿವರವಾಗಿ ತಿಳಿಸಿದ. ಮಂಜನ ಕಥೆ ಕೇಳಿ ರಂಗಪ್ಪನಿಗೆ ತುಂಬಾ ದುಃಖವಾಯಿತು. ಆತನ ಬಗ್ಗೆ ಕನಿಕರ ಉಂಟಾಗಿ ತನ್ನ ಗುಡಿಸಲಿಗೆ ಕರೆದುಕೊಂಡ ಹೋದ.

ರಂಗಪ್ಪ ಗುಡಿಸಲಿನಲ್ಲಿ ಒಬ್ಬನೇ ಇರುತ್ತಿದ್ದ. ಮಂಜನನ್ನು ಕರೆದುಕೊಂಡು ಹೋಗಿ, ಕೂದಲನ್ನು ಸ್ವಚ್ಛ ಮಾಡಿಸಿ, ತನ್ನ ಬಟ್ಟೆಗಳನ್ನು ಉಡಲು ಕೊಟ್ಟ. ತನ್ನಲ್ಲಿದ್ದ ಚೂರು, ಪಾರು ರೊಟ್ಟಿಯನ್ನು ತಿನ್ನಲಿಕ್ಕೆ ಕೊಟ್ಟು, ಕೂಲಿ ಕೆಲಸಕ್ಕೆ ಹಚ್ಚಿದ. ಆ ದಿನದಿಂದ ಮಂಜನಿಗೆ ಒಂದು ಆಧಾರ ಬಂದು ಕೆಲಸ ಸಿಕ್ಕಂತಾಯಿತು. ಆತ ಕಷ್ಟಪಟ್ಟು ದುಡಿಯತೊಡಗಿದ. ಒಂದೊಂದು ದಿನ ಹೆಚ್ಚು ಸಂಪಾದನೆಯಾಗುತ್ತಿತ್ತು, ಒಂದೊಂದು ದಿನ ಆಗುತ್ತಿರಲಿಲ್ಲ. ಹೀಗೆ ಮಂಜನ ಜೀವನ ಏಳುಬೀಳಿನ ನಡುವೆ ಸಾಗಿತ್ತು.

ನಿಲ್ದಾಣದಲ್ಲಿ ಬಸ್ಸುಗಳು ಸ್ವಲ್ಪಕಾಲ ನಿಂತು ಮುಂದೆ ಹೋಗುವ ಹಾಗೆ ಮಂಜನ ತಲೆಯಲ್ಲೂ ಹಲವಾರು ವಿಚಾರಗಳು ಬಂದು ಹೋಗುತ್ತಿದ್ದವು. ಆ ದಿನ ಶುಕ್ರವಾರ ಮಂಜನಿಗೆ ತುಂಬಾ ಸಂಪಾದನೆಯಾಗಿತ್ತು. ಆತ ಸಂತೋಷದಿಂದ ಬೀಗುತ್ತಿದ್ದ.

'ಒಂದು ಒಳ್ಳೆಯ ಹೊಟೇಲಿನಲ್ಲಿ ಊಟ ಮಾಡಿ ಬರಲೇ ಅಥವಾ ಒಂದು ದೊಡ್ಡದಾದ ಚಿತ್ರಮಂದಿರಕ್ಕೆ ಹೋಗಿ ಸಿನೇಮಾ ನೋಡಿ ಬರಲೇ' ಎಂಬ ವಿಚಾರಗಳು ಮಂಜನ ತಲೆಯಲ್ಲಿ

ಸುಳಿಯುತ್ತಿದ್ದವು. ಹೀಗೆ ವಿಚಾರ ಮಾಡುತ್ತಿದ್ದಾಗ ಆತನ ಹಿಂದಿನಿಂದ ಒಂದು ಧ್ವನಿ ಕೇಳಿಸಿತು. 'ಲಾಟ್ರಿ ... ಲಾಟ್ರಿ ... ಇಪ್ಪತ್ತು ರೂಪಾಯಿಗೆ ಒಂದು ಲಕ್ಷ ರೂಪಾಯಿ ಬಹುಮಾನ, ಐವತ್ತು ರೂಪಾಯಿಗೆ ಐದು ಲಕ್ಷ ರೂಪಾಯಿ ಬಹುಮಾನ ಪಡೆಯಬಹುದು. ಬೇಗ ಬೇಗ ತ್ವರೆ ಮಾಡಿ, ಈ ಅದೃಷ್ಟವನ್ನು ನಿಮ್ಮದಾಗಿಸಿಕೊಳ್ಳಿ' ಎಂದು ಕೈಯಲ್ಲಿ ಲಾಟ್ರಿ ಟಿಕೇಟುಗಳನ್ನು ಹಿಡಿದು ಒಬ್ಬ ಬಡಕಲು ವ್ಯಕ್ತಿ ಕೂಗುತ್ತಿದ್ದ. ಇದನ್ನು ಕೇಳಿದ ಕೂಡಲೇ ಮಂಜನ ಮೈ ಪುಳಕಿತವಾಯಿತು. ಲಾಟ್ರಿಯವನ ವ್ಯಾಪಾರ ಭರದಿಂದ ಸಾಗಿತ್ತು. ಮಂಜನಿಗೂ ತನ್ನ ಅದೃಷ್ಟ ಪರೀಕ್ಷೆ ಮಾಡಿಕೊಳ್ಳಬೇಕೆಂಬ ಆಸೆಯಾಯಿತು. ಹಿಂದೆ ಮುಂದೆ ನೋಡದೇ, ರಂಗಪ್ಪಜ್ಜ ಏನಂದಾನು ಎಂಬುದನ್ನು ಯೋಚನೆ ಮಾಡದೇ ಇಪ್ಪತ್ತು ರೂಪಾಯಿ ಕೊಟ್ಟು ಲಾಟ್ರಿ ಟಿಕೇಟು ಖರೀದಿಸೇ ಬಿಟ್ಟ. ಲಾಟ್ರಿ ಮಾರುತ್ತಿದ್ದ ವ್ಯಕ್ತಿ, 'ಮುಂದಿನ ಶುಕ್ರವಾರ ಡ್ರಾ ಇದೆ. ಆ ಅದೃಷ್ಟ ನಿಮ್ಮದೇಕಾಗಿರಬಾರದು ?' ಎಂದಾಗ ಮಂಜನ ಮೈ ಮತ್ತಷ್ಟು ರೋಮಾಂಚನಗೊಂಡಿತು.

ಮಾರನೇ ದಿನ ಲಾಟ್ರಿ ಟಿಕೇಟು ಖರೀದಿಸಿದ್ದನ್ನು ರಂಗಪ್ಪ(ಜ್ಜ)ನಿಗೆ ತಿಳಿಸಿದ. ರಂಗಪ್ಪ ಸಿಟ್ಟಿನಿಂದ 'ನಿನಗ್ಯಾಕ ಬೇಕ್ಲೆ ಈ ಲಾಟ್ರಿ ಸಹವಾಸ' ಎಂದು ಕೂಗಾಡಿದ. ಇದನ್ನು ಕೇಳಿ ಮಂಜ ನಾಚಿಕೆಯಿಂದ ತಲೆತಗ್ಗಿಸಿದ. ಆಮೇಲೆ ರಂಗಪ್ಪನೇ ಆತನಿಗೆ ಸಾಂತ್ವನ ನೀಡಿ, 'ಇರ್ಲಿ ಬಿಡು, ಈಗ ತಗೊಂಡ ಆಗೈತಿ, ನೋಡೂಣು ನಿನ್ ನಸೀಬನ್ಯಾಗ ಏನೈತಿಂತ. ಒಂದ್ ಸಲ ನಿನ್ ಅದೃಷ್ಟ ನಿನಗ ಕೈ ಕೊಟ್ಟೈತಿ, ಈ ಸಲ ಏನ್ ಮಾಡತೈತಿ ಅಂತ ನೋಡೇ ಬಿಡೋಣ' ಎಂದಾಗ ಮಂಜನಿಗೆ ಜೀವದಲ್ಲಿ ಜೀವ ಬಂದ ಹಾಗಾಯಿತು. ಆ ರಾತ್ರಿ ಏನೂ ಯೋಚನೆ ಮಾಡದೇ ಉಂಡು ಮಲಗಿಕೊಂಡ. ಮುಂಜಾನೆ ಎದ್ದು ತನ್ನ ಕೆಲಸದಲ್ಲಿ ಮಗ್ನನಾದ.

ನಾಲ್ಕೈದು ದಿನಗಳು ಕಳೆದವು. ಮಂಜ ಲಾಟ್ರಿ ವಿಷಯ ಮರತೇ ಬಿಟ್ಟ. ತನ್ನ ಕೆಲಸದಲ್ಲಿ ಆತ ಲೀನವಾಗಿದ್ದ. ಮುಂಜಾನೆಯಿಂದ ಸಂಜೆಯವರೆಗೆ ಕಷ್ಟಪಟ್ಟು ದುಡಿದು ರಾತ್ರಿ ಸಿಕ್ಕಿದ್ದನ್ನು ತಿಂದು ಮಲಗಿಕೊಳ್ಳುತ್ತಿದ್ದ. ಇದರ ನಡುವೆ ಏನಾದರೂ ಯೋಚನೆ ಮಾಡಲು ಸಮಯವಿರಲಿಲ್ಲ. ಆದರೆ ರಂಗಪ್ಪನಿಗೆ ಲಾಟ್ರಿಯ ಬಗ್ಗೆ ನೆನಪಿತ್ತು. ಆ ದಿನ ಶುಕ್ರವಾರ ಬಂದೇ ಬಿಟ್ಟಿತು. ಎಂದಿನ ಹಾಗೆ ಮಂಜ ತನ್ನ ಕೆಲಸದಲ್ಲಿ ನಿರತನಾಗಿದ್ದ. ಆತ ಲಾಟ್ರಿಯ ವಿಷಯ ಮರತೇ ಬಿಟ್ಟಿದ್ದ. ಶನಿವಾರ ಬೆಳಿಗ್ಗೆ ಲಾಟ್ರಿಯ ವಿವರ ದಿನಪತ್ರಿಕೆಯಲ್ಲಿ ಬಂತು. ಆ ಕಡೆಯಿಂದ ರಂಗಪ್ಪ 'ಮಂಜ .......... ಮಂಜ' ಎಂದು ಕೂಗುತ್ತ ಓಡೋಡಿ ಬರುತ್ತಿದ್ದ. ರಂಗಪ್ಪ ಸಮೀಪ ಬಂದಾಗ ಮಂಜ ಆಶ್ಚರ್ಯದಿಂದ ಏನಾಯಿತು ? ಎಂದು ಕೇಳಿದ.

ರಂಗಪ್ಪ ಒಂದೇ ಉಸಿರಿನಲ್ಲಿ 'ಹೋದ ವಾರದಲ್ಲಿ ನೀನು ಖರೀದಿಸಿದ ಲಾಟ್ರಿಯ ಡ್ರಾ ಆಗಿದೆ. ಅದು ಪತ್ರಿಕೆಯಲ್ಲಿ ಬಂದಿದೆ. ನಿನ್ ಟಿಕೇಟು ಕೊಡು ನೋಡೋಣ' ಎಂದ. ಇದನ್ನು ಕೇಳಿದ ಮೇಲೆ ಮಂಜನಿಗೆ ಲಾಟ್ರಿಯ ಬಗ್ಗೆ ನೆನಪಾಯಿತು. ಮಂಜ ಓಡುತ್ತಾ ತನ್ನ ಗುಡಿಸಲಿಗೆ ಹೋಗಿ, ಟಿಕೇಟ್‌ನ್ನು ತಂದು ರಂಗಪ್ಪನ ಕೈಯಲ್ಲಿಟ್ಟ. ರಂಗಪ್ಪ ಪತ್ರಿಕೆಯಲ್ಲಿ ನಂಬರ್

ಹುಡುಕುತ್ತಿದ್ದಾಗ, ಮಂಜ ತುಂಬಾ ಕುತೂಹಲ ಕಾತುರತೆಯಿಂದ ಪತ್ರಿಕೆಯಲ್ಲಿ ಬಗ್ಗಿ ಬಗ್ಗಿ ನೋಡುತ್ತಿದ್ದ. ಮಂಜ ಪರಿಣಾಮಕ್ಕಾಗಿ ಆತುರದಿಂದ ಕಾಯುತ್ತಿದ್ದ. ಆಗ ರಂಗಪ್ಪ 'ಅಯ್ಯಯ್ಯಪ್ಪೊ...' ಎಂದು ಬೊಬ್ಬೆ ಹೊಡೆದ. ಮಂಜ ಏನಾಯಿತು ಎಂದು ಅಂಜಿಕೆಯಿಂದ ಕೇಳಿದಾಗ, 'ನಿನಗ ಒಂದು ಲಕ್ಷ ರೂಪಾಯಿ ಲಾಟ್ರಿ ಹತ್ಯೆತ್ಲೇ' ಎಂದು ಕೂಗಿದ. ಆಂ..... ಎಂದು ಮಂಜ ಅವಾಕ್ಕಾದ. ರಂಗಪ್ಪನ ಮಾತು ಕೇಳಿ ಮಂಜನ ಕಾಲಿನ ಕೆಳಗೆ ನೆಲವಿರಲಿಲ್ಲ. ಆತನಿಗೆ ಒಂದು ಕ್ಷಣ ಶಾಕ್ ! ಹೊಡೆದಾಗಾಯಿತು. ತನಗೆ ಲಾಟ್ರಿ ಹತ್ತಿದ್ದು ನಿಜ ಎಂದು ಖಾತ್ರಿಪಡಿಸಿಕೊಂಡು ಮರುಕ್ಷಣವೇ ಆತನಿಗೆ ತನ್ನ ಊರು, ಹೆಂಡ್ತಿ - ಮಗು, ಮನೆ, ಹೊಲ - ಗದ್ದೆಗಳ ನೆನಪಾಯಿತು. ಆತ ಕಣ್ಣು ಮುಚ್ಚಿ ತೆರೆದಾಗ ಆತನ ಕಣ್ಣಲ್ಲಿ ಕಂಬನಿ ಹರಿಯುತ್ತಿತ್ತು. ಹಿಂದಿನದೆಲ್ಲಾ ನೆನಪಿಗೆ ಬಂದು ಬಿಕ್ಕಿ ಬಿಕ್ಕಿ ಅತ್ತುಬಿಟ್ಟ.

ರಂಗಪ್ಪ ಮಂಜನನ್ನು ಸಮಾಧಾನಪಡಿಸಿದ. ಮಂಜನಿಗೆ ಲಾಟ್ರಿ ಟಿಕೇಟು ಖರೀದಿಸುವಾಗ ಎಷ್ಟು ಉತ್ಸಾಹವಿತ್ತೋ, ಅದು ಈಗ ಮಾಯವಾಗಿತ್ತು. ಆ ಒಂದು ಲಕ್ಷ ರೂಪಾಯಿಯ ನಡುವೆ, ಆತನ ಹೆಂಡ್ತಿ, ಮಗುವಿನ ಅಸ್ಪಷ್ಟ ಚಿತ್ರ ಹಾದು ಹೋಯಿತು. ಈಗ ನನ್ ಜೊತೆ, ನನ್ ಹೆಂಡ್ತಿ - ಮಗು ಇದ್ದಿದ್ರೆ ಆ ಒಂದು ಲಕ್ಷ ರೂಪಾಯಿ ತುಂಬಾ ಉಪಯೋಗವಾಗ್ತಿತ್ತು. ಮಂಜನ ಮನಸ್ಸು ಹೇಳುತ್ತಿತ್ತು. ಆದರೆ ಮಂಜನ ಜೊತೆ ಅವರಾರೂ ಇರಲಿಲ್ಲ. ಆತನಿಗೆ ಈ ಒಂದು ಲಕ್ಷ ರೂಪಾಯಿಯ ಬಗ್ಗೆ ಸ್ವಲ್ಪವೂ ಆಸಕ್ತಿ ಇರಲಿಲ್ಲ. ಮಂಜ ತನ್ನ ಮನಸ್ಸಿನೊಳಗೆ ಅಂದುಕೊಂಡ, ಇದೆಂಥಾ ಅದೃಷ್ಟ ...... !

●

# ದ್ಯಾವಪ್ಪನ ದುನಿಯಾ

● ಕೆ. ಸಿದ್ರಾಮ

'ಮನೀ ಕೂಳ್ ತಿಂದ್ ಊರ್ ಉಸಾಬರಿ ಮಾಡೋದ್ರಾಗs ಹತ್ಯಾನೋ ನಂಗಂತೂ ಯಾನೂ ತಿಳಿವಲ್ತು. ಹುಚ್ಚ ಹುಡ್ಗ ದೊಡ್ಡಾಂವಾದ್ರೂ ಬುದ್ಧಿ ಬರವಲ್ತು....' ಮಾದೇವ ಒಂದೇ ಸವನೆ ಮಗನನ್ನು ಬೈಯ್ಯುತ್ತಿದ್ದ. ಎದುರು ಕುಂತ ಬಾಳಜ್ಜ ಅವ್ನ ಮಾತಿಗೆ ಲಕ್ಷ್ಯಗೊಟ್ಟಂತಿದ್ದರೂ ಉಳಿದ ನಾಲ್ಕೇ ಹಲ್ಲಿನಲ್ಲಿ ಸಿಕ್ಕಿದ್ದ ಮಾಂಸದ ಚೂರನ್ನು ತೆಗೆಯಲು ಪ್ರಯತ್ನಪಡುತ್ತಿದ್ದ. ಮಾದೇವನ ಮಗ ದ್ಯಾವಪ್ಪ ಆ ಕೇರಿಯಲ್ಲೆ ಹೆಚ್ಚು ಓದಿದವ. ಕಲಿಯುವಾಗಲೇ ದಲಿತ ಸಂಘಟನೆಗಳಲ್ಲಿ ಗುರ್ತಿಸಿಕೊಂಡಿದ್ದ ಆತ ಮೊದಲಿನಿಂದಲೂ ಮೇಲ್ಜಾತಿ ಜನ ಮಾಡುವ ಹೀನ ಕಾರ್ಯಗಳನ್ನು ಬಯಲಿಗೆಳೆಯುತ್ತಿದ್ದ. ಶೋಷಣೆ ಕಂಡಲ್ಲಿ ಸಿಡಿದೇಳುತ್ತಿದ್ದ. ಕೇರಿಯ ಯುವಕರಿಗೆಲ್ಲ ಆತನಿರುವುದರಿಂದಲೇ ತುಸು ಮಟ್ಟಿನ ಧೈರ್ಯದೊಂದಿಗೆ ಆತನ ಪ್ರತಿಕಾರ್ಯದಲ್ಲಿ ಭಾಗಿಯಾಗುತ್ತಿದ್ದರು. ದಲಿತ ಸಂಘದ ಲೀಡರ್ ಆದ ಮೇಲಂತೂ ದ್ಯಾವಪ್ಪ, ಸರ್ಕಾರದ ಹಲವಾರು ಯೋಜನೆಗಳನ್ನು ಕೇರಿಯ ಸುಧಾರಣೆಗೆ ಬಳಸಿದ. ಆತನ ಹಿಂದಿನ ಹಿಂಡೂ ದೊಡ್ಡದಾಯಿತು. ಅದೊಂದು ಶಕ್ತಿಯಾಯಿತು. ಆ ಹಳ್ಳಿಯ ಮುಖಂಡರೂ ಆತನಿಗೆ ಗೌರವ ನೀಡುತ್ತಿದ್ದರು. ಒಳಗೊಳಗೆ ಹಲ್ಲು ಮಸೆದರೂ ದ್ಯಾವಪ್ಪನ ಮುಂದೆ ತಮ್ಮಾಟ ನಡಿಯೋದಿಲ್ಲ ಅನ್ನೋದನ್ನು ಅರಿತಿದ್ದ ಅವರು ಆತನ ಜೊತೆ ಒಂದು ಅಲಿಖಿತ ಒಪ್ಪಂದ ಮಾಡಿಕೊಂಡಂತ್ತಿತ್ತು. ಆತನ ಮುಂದೆ ತಮ್ಮ 'ಜಾತ್ಯಾತೀತತೆ' ಮೆರೆಯುತ್ತಿದ್ದರು. ತನ್ನ ಮಗ ಊರಿನಲ್ಲಿ ಹೆಸರು ಮಾಡಿದ್ದರೂ ಮಾದೇವನಿಗೆ ಚಿಂತೆ ತಪ್ಪಲಿಲ್ಲ. ಮಗನ ಕ್ರಾಂತಿಕಾರಿ ನಿಲುವು ಅರಿಯದ ಆತ ಸಣ್ಣಾಗಿ ಸಕ್ಕರಿ ಮೇಯ್ಬೇಕು ಎಂಬ ವಿಚಾರದವ.

'ಅಂವ್ಯಾನ ಉಡಾಳ ಅಲ್ಬಿಡೋ ಮಾದೇವ. ಯಾನೋ ನಮ್ಕೇರಿ ಮಂದಿ ಚೋಲೋ ಆಗ್ಬೇಕಂತನ ದುಡಿತಿದಾನ...' ಬಾಳಜ್ಜನ ಮಾತು ಮುಗಿಯುವಷ್ಟರಲ್ಲಿ ದ್ಯಾವಪ್ಪನೇ ಒಳಬಂದ. ಬಾಳಜ್ಜ ಆತನನ್ನು ನೋಡಿ ನಕ್ಕು ಬಾಯೊಳಗೆ ಕೈ ಹಾಕಿ ಮಾಂಸದ ಚೂರನ್ನು ಹಲ್ಲಿನಿಂದ ತೆಗೆಯುವ ಪ್ರಯತ್ನ ಮುಂದುವರಿಸಿದ. ದ್ಯಾವಪ್ಪ ಕೂಡ ಸಣ್ಣಗೆ ನಗುತ್ತ ಬಾಳಜ್ಜನ ಹತ್ತಿರ ಕುಳಿತು, 'ಮತ್ತೇನ ಅಜ್ಜಾ' ಎಂದಾಗ, 'ಅವನವ್ವನ ಹಲ್ಲಾಗ ಖಂಡದ ಚೂರ ಸಿಕ್ಕೇತಿ. ಒಟ್ಟು

ಬರವಲ್ತು ಮಗಂದು' ಇರೋ ನಾಲ್ಕು ಹಲ್ಲು ತೋರಿಸಿ ನಕ್ಕ ಮಾದೇವ ಪಿಟಿಪಿಟಿ ನಡಿಸೇ ಇದ್ದ. 'ನೀನ್ಯ ಹೇಳೋ ಕಾಕಾ ನಮಗರೆ ಇಂವ್ನ ಬಿಟ್ರ ಯಾರದಾರು. ನಾ ಎಲ್ಲಾ ಹೇಳೂದ ನಿಂತೇತಿ.....' ಎಂದು ಉಸಿರು ಹಾಕಿದ.

'ಯಪ್ಪಾ, ಇದೇನ ಬಂದ್ಯೂಕ್ತ್ಲೆ ಸುರು ಮಾಡಿಯಲ್ಲ. ನಾ ಏನ ಅಂತಾದ ಮಾಡೇನಂತ ಹಿಂಗ್ ಮಾತಾಡ್ತಿ. ಅಲ್ಲೋ ಅಜ್ಜಾ ಮ್ಯಾಲಿನ ಜಾತಿ ಮಂದಿ ನಮ್ಮ ತುಳ್ಯೊಂತ ಬಂದ್ರ ಹಂಗ ನೋಡ್ಕೋಂತ ಗಪ್ಪಿರಬೇಕೇನ ? ತುಳಿಯೋ ಮಂದಿ ನಮ್ಮ ಏಳ್ಬಾರದಾಂಗ ಮಾಡ್ಯಾರು. ಬಗ್ಗಿದರ ಮ್ಯಾಲ ಕುಂಡರತಾರು. ಅದ ನಾವು ಬಗ್ಗಿಸಿದ್ರ ಮ್ಯಾಲ ಕುಂಡರಸ್ಕೋತಾರು, ಇದೆಲ್ಲ ನಿಮ್ಗ ತಿಳಿಯಲ್ಲೇಳು' ಎಂದೆದ್ದು ಒಳಮನೆಗೆ ಸೇರಿದ. ಮಾದೇವ, 'ಸರೀಕದೋರೆಲ್ಲ ಮದಿವ್ಯಾಗಿ ಹೆಂಡ್ರ ಮಕ್ಳಾ ಮನಿ ಅಂತಿದ್ರ ಇಂವಾ ಹೀಂಗ ತಿರ್ಗತಾನು. ಈ ಸಲಾ ಇಂವ್ನ ಮದ್ವಿನರೇ ಮಾಡಿರ ಚೊಲೋ' ಎಂದು ಹೇಳಿದಾಗ ಈತನ ಮಾತಿನ ಕಡೆ ಲಕ್ಷ್ಯವಿಟ್ಟಿರದ ಬಾಳಜ್ಜ ಹಲ್ಲಿನಲ್ಲಿ ಸಿಕ್ಕಿದ್ದ ಮಾಂಸದ ಚೂರನ್ನು ಹೊರತೆಗೆಯುವಲ್ಲಿ ಯಶ ಕಂಡ. 'ಬಂತ ನೋಡ ಅವ್ನವ್ನ ಬಾಳಾ ಕಾಡಾಕತ್ತಿತ್ತು. ನಾ ಬಿಟ್ಟೇನ್ಯ ಮಗಾ' ಎಂದು ಅದನ್ನು ಮತ್ತೆ ಬಾಯಿಗಾಕಿ ನುಂಗಿದ. ಮಾದೇವ ಆತನನ್ನೇ ಒಂದು ಕ್ಷಣ ದಿಟ್ಟಿಸಿ, ಉಸಿರಾಕಿ, ಬೀಡಿ ಹೊತ್ತಿಸಿ ಒಂದು ದಮ್ ಜಗ್ಗಿದ.

❖ ❖ ❖

ಬೇಸಿಗೆಯ ಉರಿಬಿಸಿಲ ಮರೆಯಾಗಿ ಕತ್ತಲಾವರಿಸಿದರೂ ಧಗಿ ಸುಡುತ್ತಿತ್ತು. ಉಂಡು ಮಂಚದ ಮೇಲುರುಳಿದ್ದ ದ್ಯಾವಪ್ಪ ಗೋಡೆಗೆ ನೇತಾಕಿದ ಫ್ಯಾನು ಗಾಳಿ ಬೀಸುತ್ತಿದ್ದರೂ ಧಗಿ ಹೆಚ್ಚಾದಂತಾಗಿ ಹಾಕಿದ್ದ ಬನಿಯನ್ನೂ ಕಿತ್ತೆಸೆದ. ಏನಾದರೂ ಬರೆಯಬೇಕೆಂದು ಕೊಂಡು ಕಪಾಟಿನಿಂದ ಬಿಳಿ ಹಾಳೆ ತೆಗೆದು ಪ್ಯಾಡಿಗೆ ಸಿಕ್ಕಿಸಿ, ನೇತಾಕಿದ ಅಂಗಿಯಿಂದ ಪೆನ್ನು ತೆಗೆದು ಅಲ್ಲೇ ಮಂಚದ ಮೇಲೆ ಡಬ್ಬ ಮಲಗಿ ಬರೆಯಲು ಪ್ರಯತ್ನಿಸಿದ. ಏನು ಬರೆಯಬೇಕೆಂಬುದೇ ತೋಚಲಿಲ್ಲ. ಮೊನ್ನೆ ಬೆಂಗಳೂರಿಗೆ ಹೋದಾಗ ದಲಿತ ಸಂಘದ ಮೀಟಿಂಗ್‌ನಲ್ಲಿ ಚರ್ಚಿಸಿದ 'ರಕ್ತಸಂಕರ'ದ ಕುರಿತು ಬರೆಯಬೇಕೆಂದುಕೊಂಡ. ರಕ್ತ ಸಂಕರವೆಂದಾಗಲೇ ಸಾರಿಕೆಯ ಚಿತ್ರ ಕಣ್ಮುಂದೆ ಸುಳಿದಾಡಿತು. ಕಾಲೇಜಿನ ನೆನಪುಗಳು ಒದ್ದುಕೊಂಡು ಬಂದವು. ದ್ಯಾವಪ್ಪ ಹೇಗೆ ಓದಿನಲ್ಲಿ ಮುಂದೋ ಸಾರಿಕೆ ಕೂಡ ಹಾಗೇ ಮುಂದೆ. ಇಬ್ಬರಲ್ಲೂ ಕಾಂಪಿಟೇಶನ್ ನಡೆಯುತ್ತಿತ್ತು. ಹಾಗಂತ ಇಬ್ಬರಲ್ಲಿ ಜಗಳವೇನೂ ಇರಲಿಲ್ಲ. ಆತ ಆಕೆಯಡೆಗೆ, ಆಕೆ ಆತನೆಡೆಗೆ ನೋಡುತ್ತಲೇ ಇರಲಿಲ್ಲ. ಆಕೆ ತಾನಾತು ತನ್ನ ಓದಾತು. ನಂತರ ಮನೆದಾರಿ ಇಷ್ಟೇ ಎಂಬಂತಿದ್ದಳು. ಆತನಾದರೋ ಆ ಸಂಘ - ಈ ಸಂಘ ಎಂದು ಓಡಾಡಿದ ಚುರುಕಿನವ. ದಲಿತ ಸಂಘಗಳಲ್ಲಿ ಸಕ್ರಿಯನಾದ ಆತ ಬ್ರಾಹ್ಮಣ ವಿರೋಧಿ ನೆಲೆಯಲ್ಲೆ ಯೋಚಿಸುತ್ತಿದ್ದ. ಸಾರಿಕೆ ಕೂಡ ಬ್ರಾಹ್ಮಣ ಆದ್ದರಿಂದಲೇ ಏನೋ ಆಕೆಯನ್ನು ಆತ ಹೆಚ್ಚು ಮಾತನಾಡಿಸುತ್ತಿರಲಿಲ್ಲ. ಆದರೆ ಒಂದು ದಿನ ಕಾಲೇಜಿನ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ

ಆಕೆಯನ್ನು ಆತ ಕೋರಲೇಬೇಕಾದಂತಹ ಅನಿವಾರ್ಯ ಪ್ರಸಂಗ ಎದುರಾಯಿತು. ಆಕೆಯೇನು ತಿರಸ್ಕರಿಸಲಿಲ್ಲ. ಅಂದಿನಿಂದ ಅವರಿಬ್ಬರಲ್ಲಿ ಮಾತುಗಳು ವಿನಿಮಯವಾದವು. ಆಗಲೇ ದ್ಯಾವಪ್ಪ ಬ್ರಾಹ್ಮಣರು ನಮ್ಮ ವಿರೋಧಿಗಳಲ್ಲ; ಬ್ರಾಹ್ಮಣಶಾಹಿ ಮಾತ್ರ ನಮ್ಮ ವಿರೋಧಿ ಎಂದು ಮನಸ್ಸು ಬದಲಾಯಿಸಿದ. ದಲಿತ ಸಂಘಗಳಲ್ಲಿ ಈ ಕುರಿತು ಚರ್ಚೆ ಕೂಡ ನಡೆಸಿದ. ಕ್ರಮೇಣ ಆತ ಆಕೆಯತ್ತ ವಾಲಿದ. ಆಕೆ ಕೂಡ ಆತನ ಸ್ನೇಹ ಬಯಸಿದಳು. ಆದರೆ ಮರುವರ್ಷವೇ ಆಕೆಯ ಮದುವೆ ಬೇರೊಬ್ಬನ ಜತೆ ನಡೆಯಿತು. ಮನೆಯವರನ್ನು ಎದುರು ಹಾಕಿಕೊಂಡು ಈ ಜಾತಿಯೆಂಬ ಅಡ್ಡಗೋಡೆ ಜಿಗಿದು ಈತನೆಡೆಗೆ ಬರುವದು ಆಕೆಯಿಂದ ಆಗಲೇ ಇಲ್ಲ. ಕೆಲದಿನ ಮಂಕಾಗಿರುತ್ತಿದ್ದ ದ್ಯಾವಪ್ಪ ಕೂಡ ಆನಂತರದಲ್ಲಿ ಕನಸುಗಳನ್ನು ಬದಲಿಸಿ, ಹೋರಾಟಗಳಲ್ಲಿ ತೊಡಗಿಸಿಕೊಂಡ.

ಅಡಿಗೆ ಮನೆಯಲ್ಲಿ ತಂಬಿಗೆ ಉರುಳಿ ಬಿದ್ದಾಗ ದ್ಯಾವಪ್ಪ ವಾಸ್ತವಕ್ಕೆ ಬಂದ. ಏಳುವ ಮನಸ್ಸಾದರೂ 'ಬೆಕ್ಕಿರಬೇಕು' ಎಂದುಕೊಂಡು ಮತ್ತೆ ಹಾಸಿಗೆಯಲ್ಲೇ ಹೊರಳಾಡಿದ. ಸಾರಿಕೆಯ ಮದುವೆಯಾಗಿ ತಿಂಗಳುರುಳುವಷ್ಟರಲ್ಲೇ ಆಕೆಯ ಗಂಡ ಹಾವು ಕಡಿದು ಸಾವನ್ನಪ್ಪಿದ್ದ. ಸಾರಿಕೆ ವಿಧವೆಯಾಗಿ ಮತ್ತೆ ತೌರಿಗೆ ವಾಪಾಸಾದಾಗ ದ್ಯಾವಪ್ಪ ಮರುಗಿದ. ಮುಂದೇನು ? ದ್ಯಾವಪ್ಪ ಪೆನ್ನು ಕೈಗೆತ್ತಿಕೊಂಡವನೇ ಬಿಳಿ ಹಾಳೆಯಲ್ಲಿ ಅಕ್ಷರ ಮೂಡಿಸಿದ "ರಕ್ತಸಂಕರ ಮತ್ತು ಅದರ ಪ್ರಸ್ತುತತೆ" ತಲೆಬರಹ ಬರೆದು ಜೋಡಿ ಅಂಡರ್‌ಲೈನ್ ಮಾಡಿ ಬರೆಯತೊಡಗಿದ.

ತಾ ಮುಂದು - ನಾ ಮುಂದು ಎಂದು ಜಿದ್ದಿಗೆ ಬಿದ್ದು ದಿನಗಳು ಓಡುತ್ತಿದ್ದವು. ಕತ್ತಲೆ ಬೆಳಕಾಗುತ್ತಿತ್ತು, ಬೆಳಕು ಕತ್ತಲಾಗುತ್ತಿತ್ತು. ದಲಿತ ಸಂಘದ ಚಟುವಟಿಕೆ ಜೋರಾಗಿದ್ದ ಸಮಯದಲ್ಲೇ ನಡೆದ ಘಟನೆಯೊಂದರಿಂದ ವಾತಾವರಣದಲ್ಲಿ ಬದಲಾವಣೆಯಾತು. ದ್ಯಾವಪ್ಪನ ಕ್ರಾಂತಿಕಾರಿ ಮನದ ಹುಮ್ಮಸ್ಸಿನ ಆ ಪರಿವರ್ತನೆ ಇಡೀ ಹಳ್ಳಿಯನ್ನೇ ಅಚ್ಚರಿಯಲ್ಲಿ ಕೆಡವಿತ್ತು. ಆ ಅಚ್ಚರಿ ಬಾಯಿಂದ ಬಾಯಿಗೆ ಸಾಗಿ ಚೆಲ್ಲಾಪಿಲ್ಲಿಯಾತು. ಕೆಲವರು ವಿರೋಧ ವ್ಯಕ್ತಪಡಿಸಿದರು, ಕೆಲವರು 'ಇಲ್ಬಿಡ ಅಂವಾ ಮಾಡೋದು ಬರೋಬ್ಬರಿ ಐತಿ' ಎಂದು ಸ್ವಾಗತಿಸಿದರು. ಸಾರಿಕೆಯನ್ನು ಮದುವೆಯಾಗಿ ಮನೆ ಬಾಗಿಲಿಗೆ ಬಂದು ನಿಂತ ಮಗನನ್ನು ಕಂಡು ಮಾದೇವ ಕೂಡ ದಂಗಾಗಿ ಹೋಗಿದ್ದ. ಏನು ಮಾತಾಡಬೇಕೆಂಬೋದು ಮರ್ತ ಹೋಗಿತ್ತು. ಒಬ್ಬ ವಿಧವೆಯನ್ನು ಮದುವೆಯಾದ್ದರ ಕುರಿತು ಗಲ್ಲಿ ಗಲ್ಲಿ ಚರ್ಚೆ ನಡೀತು. ಅದೂ ಆಕೆ ಬ್ರಾಹ್ಮಣ ಜಾತಿ ಬೇರೆ. ಹಳ್ಳಿಯಲ್ಲಿ ಎಲುಬಿಲ್ಲದ ನಾಲಿಗೆಗಳು ಎರಡೂ ಕಡೆ ಪಿಟಾಡಿಸಿದವು. ದ್ಯಾವಪ್ಪನದು ದಿಟ್ಟ ಹೆಜ್ಜೆ ಎಂದು ದಿನಪತ್ರಿಕೆಗಳು ಸುದ್ದಿ ಮಾಡಿದವು. ದಲಿತ ಸಂಘಗಳ ರಾಜ್ಯ ನಾಯಕರು ಓಡೋಡಿ ಬಂದು 'ವಿಶ್' ಮಾಡಿದರು. ನಗರದ ದಲಿತ ಸಂಘ ಆತನನ್ನು ಕರೆಯಿಸಿ ಸತ್ಕರಿಸಿ ಬೆನ್ನು ತಟ್ಟಿದವು. ಮಾದೇವ ಒಂದೆರಡು ದಿನ ದಂಗಾಗಿ ಕುಂತು ಅನಂತರ ಮಗನ ಮಾತನಾಡಿಸದೆ ತನ್ನ ಕೆಲಸಗಳಲ್ಲಿ ನಿರತನಾದ. ಮಗ ಮಾಡಿದ್ದು ಸರಿಯೋ

ತಪ್ಪೋ ಎಂಬ ಗೊಂದಲದಲ್ಲಿದ್ದ ಆತ 'ಬ್ಯಾರೆ ಜಾತ್ಯಾವರ್ನ ಮದ್ವ್ಯಾಗಿ ಜಾತಿ ಕೆಡಸ್ಕೊಂಡ ಸೂಳಿಮಗಾ' ಎಂದು ಕೊರಗುತ್ತಿದ್ದದ್ದು ಮಾತ್ರ ಕೆಲವರ ಲೊಚಗುಟ್ಟುವಿಕೆಗೆ ಕಾರಣವಾಯಿತು.

❖ ❖ ❖

ಕೇರಿಯ ಭಜನಾ ಮನೆಯಲ್ಲಿ ದಿನವೂ ಸೇರುತ್ತಿದ್ದ ಮಂಡಳಿಯಲ್ಲೂ ಇದೇ ಮಾತು, ಚರ್ಚೆ. ಕೆಲವ್ರು ದ್ಯಾವಪ್ಪ ಮಾಡಿದ್ದು 'ಹೊಸಕ್ರಾಂತಿ' ಎಂದರೆ, ಕೆಲವ್ರು 'ಅಂವಾ ಹಂಗ ಮಾಡ್ಬಾರ್ದಿತ್ತು' ಎನ್ನುತ್ತಿದ್ದರು. ಬಾಯಿಗೆ ಬಾಯಿ ಹತ್ತಿ ಜೋರಾಗಿ ಬಿಡುತ್ತಿತ್ತು. ಯುವಕರೆಲ್ಲ ದ್ಯಾವಪ್ಪನ ಕಾರ್ಯವನ್ನು ಮೆಚ್ಚಿದ್ದರು. ನಡುವಯಸ್ಕರು ಅವರನ್ನು ಛೇಡಿಸುತ್ತಿದ್ದರು. 'ಅಂತೂ ದ್ಯಾವಪ್ಪ ಆ ಬ್ರಾಹ್ಮಣ ಹುಡ್ಗಿನ ಮದ್ವ್ಯಾದ. ಅಂವ್ನ ಹಿಂದ್ ತಿರ್ಗ್ಯಾ ನೀವೂ ಚಾಲೂ ಮಾಡ್ರಿನ್ನ. ಸುತ್ತಳ್ಳಿಯೊಳಗ ಇರೋ ಬ್ರಾಮ್ಮನ ಹುಡ್ಗ್ಯೆರೆಲ್ಲ ಕೇರ್ಯಾಗ ಸೊಸಿಗೊಳಾಗಿ ಬರ್ಲಿ' ಎಂದು ನಗುತ್ತಿದ್ದರು. ಅದಕ್ಕೆ ಯುವಕರೇನು ಸುಮ್ಮಿರತಿರಲಿಲ್ಲ. 'ಮತ್ತ ಸುಮ್ಮ ಇರ್ತೇವಂತ ತಿಳಿದಿರೇನು... ಸಿಕ್ರ ನಾವೂ ದ್ಯಾವಪ್ಪನ ಹಾದೀನ ತುಳ್ಯಾರು. ಹೀಂಗಾದ್ರನ್ನ ನಮ್ಮ ಜಾತಿ ಶ್ರೇಷ್ಠ, ನಿಮ್ಮ ಜಾತಿ ಕೀಳಾ ಅನ್ನೋ ಭಾವ್ನಾ ಹೋಗ್ತೇತಿ....' ಎಂದು ಒಬ್ಬ ಅಂದರೆ, ಇನ್ನೊಬ್ಬ 'ಅಲ್ಲೋ ಮಾಂವ, ನಮ್ಮ ಜಾತಿ ಮ್ಯಾಲ ಎಷ್ಟು ಅನ್ಯಾಯ ಮಾಡಿದಾರವರ್ರು, ಅದರ ಸೇಡಾರೇ ತೀರಿಸ್ಕೋಬೇಕೋ ಬ್ಯಾಡ ....' ಎಂದು ಹಲ್ಕಿರಿಯುತ್ತಿದ್ದ. ಬಾಳಜ್ಜ ಚೀಲದೊಳಗಿನಿಂದ ತಾಳ ಕೈಗೆತ್ತಿಕೊಂಡು,

'ದ್ಯಾವಪ್ಪಂದು ಹುಡ್ಗಬುದ್ಧಿ ಯಾನರೇ ಮಾಡಾಕ ಹೋಗಿ ಯಾನರೇ ಮಾಡ್ದ್ಯ. ಗಂಡ್ಸತ್ತ ಬ್ರಾಮ್ಮನ್ರ ಹುಡ್ಗಿನ ಮದ್ವ್ಯಾಗೋದ್ಕಿಂತ ನಮ್ಮ ಜಾತೀವಳ್ಗs ಯಾರ್ನರೇ ಮದ್ವ್ಯಾಗಬೇಕಿತ್ತು. ಹಂಗಾಗಿದ್ರ ಕಲಿತ ಮನಿಸ್ಯಾ ಇವ್ನಿಂದ ನಮ್ಜಾತಿ ಒಬ್ಬ ಹೆಣ್ಮಗಳಾದ್ರೂ ಶಾಣ್ಯಾ ಆಗತಿದ್ಲು. ಜರಾ ಸುಧಾರಣಾ ಆಕ್ಕಿತ್ತು. ಬರೀ ಬ್ಯಾರೆ ಜಾತ್ಯಾವರ್ನ ಮದ್ವ್ಯಾದ್ರ ನಾವ್ ಉದ್ಧಾರಾಕ್ಕೇವಿ, ಯಾನಾರ ಸಾಧಸ್ತೆವಂದ್ರ ಹುಚ್ಚತನಾದೀತು. ನಮ್ಜಾತಿ ಗಂಡ್ಸರೆಲ್ಲ ಬ್ಯಾರೆ ಜಾತಿ ಹೆಣ್ಗೊಳ ಮದ್ವಿ ಮಾಡಕೊಂಡ್ರ ನಮ್ಜಾತಿ ಹೆಣ್ಗೊಳ್ನ ಯಾರ್ ಮದ್ವ್ಯಾಗಬೇಕ .....' ನಿರ್ಲಿಪ್ತವಾದ ಆತನ ಮಾತು ಅಲ್ಲಿ ಪ್ರತಿಧ್ವನಿಸಿತು. ಆನಂತರ ತಾಳ ಒಮ್ಮೆ ಹೊಡೆದ ಬಾಳಜ್ಜ, 'ಏ ಸೂರ್ಯಾ ಪೇಟಿ ಹಿಡಿ..... ಎ ಎಲ್ಲ್ಯಾ ದಮ್ಡ ಹಿಡಿ .. ಕುಂತ್ರ ಹಂಗ ಮಾತ ನಡ್ತ್ಯಾವ. ಹಾಳ ಮಣ್ಣಿನ ಗ್ವಾಡಿ ತೊಳದಂಗ' ಎಂದು ಹಾರ್ಮೋನಿಯಂ ಕುಂಯ್ ಗುಟ್ಟಿದಾಗ ತಾಳ ಬಡೆದು ಹಾಡತೊಡಗಿದ.

ಪರ ಚಿಂತೆ ನಮಗೇಕಯ್ಯ
ನಮ್ಮ ಚಿಂತೆ ನಮಗೆ ಸಾಲದೇ ?

# ನಿರ್ಧಾರ

● ಕೆ. ಜಿ. ಭದ್ರಣ್ಣವರ

ಕನ್ನಡಿಯೆದುರು ನಿಂತು ಕುಂಕುಮವಿಟ್ಟುಕೊಳ್ಳುವಾಗ ಶಾರದೆಗೆ ತನ್ನ ತಲೆಗೂದಲಿನತ್ತ ಗಮನ ಹೋಯಿತು. ಅಲ್ಲಲ್ಲಿ ಒಂದೆರಡು ಬೆಳ್ಳಿಕೂದಲುಗಳು ! ತನಗೀಗ ಮೂವತ್ತು ! ಯೌವ್ವನ ಕಳೆಯುತ್ತಿದೆಯೇ! ? ಆಶ್ಚರ್ಯ ಹಾಗೂ ದುಗುಡ ಏಕಕಾಲಕ್ಕೆ ಸುಳಿಯುತ್ತವೆ. ಕಳೆದ ಹತ್ತು ವರ್ಷಗಳ ಋತುಚಕ್ರಗಳು ವ್ಯರ್ಥ ಹಾಳಾಗುತ್ತಿರುವದನ್ನು ನೆನೆದು ದುಃಖಿಸುತ್ತಾಳೆ. 'ಆಸ್ತಿ ಇದೆ, ಉತ್ತಮ ವ್ಯಾಪಾರ ಇದೆ, ಉಂಡುಡಲು ತಾಪತ್ರಯ ಇಲ್ಲ' ಎಂಬ ಏನೇನೋ ಸಬೂಬು ಹೇಳಿದ ಬಂಧು ಬಾಂಧವರು, ತನಗಿಂತ ಹದಿನೈದು ವರ್ಷ ಹಿರಿಯನಾದ, ನಾಮರ್ದ, ನಾಲಾಯಕ್‌ನಿಗೆ ಮದುವೆ ಮಾಡಿಕೊಟ್ಟಿದ್ದರು. ಇವನಿಗೆ ಎರಡನೆಯ ಹೆಂಡತಿಯಾಗಿ ಬಂದವಳು. ಮೊದಲನೆಯವಳು ಯಾವ ಕಾರಣಕ್ಕೋ ಸತ್ತು ಎರಡು ವರ್ಷಗಳಾಗಿದ್ದವು. ಅವಳಿಗೂ ಸಂತಾನವಾಗಿರಲಿಲ್ಲ. ಹೆಂಡತಿಯ ಬಯಕೆ ಈಡೇರಿಸುವಲ್ಲಿ ಗಂಡನು ಮಾಡುವ ಕಸರತ್ತು, ವ್ಯರ್ಥ ಪ್ರಯತ್ನ ನೆನೆದಾಗ ಶಾರದೆಗೆ ದುಃಖ ಉಕ್ಕಿ ಬರುತ್ತಿತ್ತು. ತನ್ನ ಹದಿನೈದನೇ ವಯಸ್ಸಿನಲ್ಲೇ ಈ ಮಹಾಶಯ ಕಾಮಕ್ರೀಡೆಯಾರಂಭಿಸಿದ ಸುದ್ದಿ ಅವರಿವರಿಂದ ತಿಳಿಯಿತು. ಈಗವನು ತನ್ನ ದೌರ್ಬಲ್ಯ ಹಾಗೂ ವೈಫಲ್ಯತೆ ನೆನೆದು ಸಾಕಷ್ಟು ಪಶ್ಚಾತ್ತಾಪ ಪಡುತ್ತಿರಬಹುದು. ಇದಕ್ಕಿಂತ ಶಿಕ್ಷೆ ಇನ್ನಾವುದು ಬೇಕು ? ವಿವಾಹದ ಆರಂಭದಲ್ಲಿ ಜಾಹೀರಾತುಗಳನ್ನು ನೋಡಿ, ಮರುಳಾಗಿ ತೈಲ, ಕ್ರೀಂ ಲೇಪಿಸಿಕೊಳ್ಳುವುದು, ಕ್ಯಾಪ್ಸೂಲ್ ನುಂಗುವದು ಮಾಡಿದನು. ಕ್ಷಣಹೊತ್ತಿನ ಕಸರತ್ತಿನಲ್ಲಿ ಗಡುಸತ್ವ ಕಳಕೊಂಡು, ಪಕ್ಕಕ್ಕೆ ಸರಿದು, ತೇಕುತ್ತಾ ವ್ಯಥೆಪಡುತ್ತಿದ್ದ. ಕೆಲ ಸಮಯದ ಬಳಿಕ ನಿದ್ರೆ ಹೋಗುತ್ತಿದ್ದ. ಕಳಚಿಹಾಕಿದ್ದ ವಸ್ತ್ರಗಳನ್ನೆಲ್ಲ ಧರಿಸಿ, ರವಿಕೆಯ ಬಟನ್ನುಗಳನ್ನು ಹಾಕಿಕೊಂಡು, ಇನ್ನೊಂದು ಬದಿಗೆ ಮುಖಮಾಡಿ, ಒದ್ದೆಯಾದ ಕಣ್ಣುಗಳನ್ನು ಸೆರಗಿನಿಂದೊರೆಸಿಕೊಳ್ಳುತ್ತಾ ಶಾರದೆ ನಿದ್ರೆ ಹೋಗುತ್ತಿದ್ದಳು. ಏತನ್ಮಧ್ಯೆ ಇವನಿಗೆ ಒಬ್ಬ ಸಾಧುವಿನ ಪರಿಚಯವಾಯಿತು. ತನ್ನ ಸಮಸ್ಯೆಯನ್ನು ಅವನೆದುರು ತೆರೆದಿಟ್ಟಿರಬೇಕು. ಅವನು ಗಿಡಮೂಲಿಕೆ ಔಷಧಿಯಿಂದ ಚೈತನ್ಯ ತುಂಬುವ ಭರವಸೆಯಿತ್ತಿರಬೇಕು. ರಸಸೇವನೆ ಆರಂಭವಾಯಿತು. ರಸ ಸೇವನೆಯಲ್ಲಿ ತುಂಬಾ ಭರವಸೆ ಹೊಂದಿದವನಾಗಿದ್ದ.

ಅಂಚೆಯವ ಲಕೋಟೆಯೊಂದನ್ನು ಶಾರದೆಗೆ ಕೊಟ್ಟು ಹೋದ. ಅದು ತನ್ನ ತಂಗಿ ಲಕ್ಷ್ಮೀ ಬರೆದುದಾಗಿತ್ತು. ಲಕ್ಷ್ಮೀಗೆ ಎರಡನೆಯ ಹೆರಿಗೆ ಕಾಲ ಸಮೀಪಿಸುತ್ತಿದೆಯಂತೆ. ಬಾಣಂತಿತನ ಮಾಡಲು ಅಕ್ಕನಿಗೆ ಹೊರಟು ಬರಲು ಬೇಡಿಕೊಂಡಿದ್ದಳು. ಶಾರದೆ ಗಂಡನಿಗೆ ಪತ್ರ ತೋರಿಸಿ "ನೋಡಿ, ಅವಳಿಗಾದರೂ ಯಾರಿದ್ದಾರೆ ? ಅಮ್ಮ ಇಲ್ಲ. ಯಾರೂ ಇಲ್ಲ. ನಾವಲ್ಲದೆ ಯಾರುಂಟು ಅವರಿಗೆ ?" ಎಂದು ಪರಿಸ್ಥಿತಿಯನ್ನು ವಿವರಿಸಿದ್ದಳು. ಒಂದು ತಿಂಗಳ ಮಟ್ಟಿಗೆ ತಂಗಿಯ ಆರೈಕೆಗೆ ಹೋಗಿಬರುವದಾಗಿ ಹೇಳಿದಳು. ಈ ಒಂದು ತಿಂಗಳ ಅವಧಿಯಲ್ಲಿ ಗಿಡಮೂಲಿಕೆ ರಸ ತನಗೆ ಕಸುವು ತರಬಹುದೆಂದು ಮನದಲ್ಲಿಯೇ ಸಮಾಧಾನಪಟ್ಟುಕೊಂಡನು. ಶಾರದೆ ತಂಗಿಯ ಬಳಿ ಬಂದ ಕೆಲವೇ ದಿನಗಳಲ್ಲಿ ಆಸ್ಪತ್ರೆಯಲ್ಲಿ ಹೆಣ್ಣು ಮಗು ಹಡೆದಳು. ಮೂರು ವರ್ಷದ ಮಗ, ನವಜಾತ ಹೆಣ್ಣು ಎರಡೂ ಮುದ್ದಾಗಿದ್ದವು. ಸಂತಾನ ಭಾರ ಬೇಡವೆಂದು ಲಕ್ಷ್ಮೀ ಸಂತಾನಹರಣ ಶಸ್ತ್ರ ಚಿಕಿತ್ಸೆಗೆ ಸಿದ್ಧವಾದಳು. ಲಕ್ಷ್ಮೀಯದು ಸುಖ ಸಂಸಾರ. ಆರೋಗ್ಯವಂತ ಗಂಡ, ಲಕ್ಷಣವಾಗಿದ್ದನು, ಲಕ್ಷ್ಮಣನಂತೆ ! ಅಲ್ಲಿ ದೊರೆಯಿತು 'ಪರ್ವ' ಕಾದಂಬರಿ. ಅದು ಡಾ. ಎಸ್. ಎಲ್. ಭೈರಪ್ಪನವರ ವಿನೂತನ ಗ್ರಂಥ. ಓದುತ್ತಾ ಹೋದಂತೆ, ಈವರೆಗೆ ಶಾರದೆಗೆ ಗೊತ್ತಿಲ್ಲದ ಹೊಸ ಪ್ರಸಂಗಗಳು ಗಮನಕ್ಕೆ ಬಂದವು. ರೋಮಾಂಚನ, ಸಂತೋಷ ಉಂಟಾಗತೊಡಗಿದವು.

ಮಹಾಭಾರತದ ಮೂಲ ನಾಯಕರುಗಳಾದ ಧೃತರಾಷ್ಟ್ರ ಹಾಗೂ ಪಾಂಡು ಮಹಾರಾಜರು, ವಿಧವೆಯರಾದ ಅಂಬಾಲಿಕೆ, ಅಂಬಿಕೆಯರ ಮಕ್ಕಳು ! ವಿಧವೆಯರಾದ ಇವರು ಮಕ್ಕಳನ್ನು ಹೆತ್ತ ಪ್ರಸಂಗ ಸ್ವಾರಸ್ಯಪೂರ್ಣವಾಗಿದೆ. ಹೆಂಡತಿಗೆ ಗರ್ಭದಾನ ನೀಡುವಲ್ಲಿ ವಿಫಲನಾದ ಪತಿ, ಗರ್ಭದಾನಕ್ಕೆ ಸೂಕ್ತನಾದ 'ದೇವಗಣ'ದ ಪುರುಷನನ್ನು ಆಯ್ಕೆ ಮಾಡಿ, ಒಪ್ಪಿಗೆ ಪಡೆದು 'ಗರ್ಭದಾನ' ಕ್ರಿಯೆಗೆ ಅಣಿಗೊಳಿಸುತ್ತಾನೆ. ಮಡದಿಯಿಂದ ಪ್ರಮಾಣ ಪಡೆಯುತ್ತಾನೆ. "ಗರ್ಭ ಕಟ್ಟಿದುದು ಖಚಿತವಾದ ಕೂಡಲೇ ಆ ಪರಪುರುಷನನ್ನು ತೊರೆಯಬೇಕು. ನಂತರ ಅವನನ್ನು ಮೋಹಿಸುವಂತಿಲ್ಲ. ಅವನನ್ನು ತಂದೆಯ ಭಾವದಿಂದ ಅವಳು ಕಾಣಬೇಕು. ಅವನೂ ಸಹ ಅವಳನ್ನು ಪುತ್ರಿ ಸಮಾನಳೆಂಬ ಭಾವನೆಯಿಂದ ಕಾಣಬೇಕು. ಇದಕ್ಕೆ 'ನಿಯೋಗ'ವೆಂದು ಹೆಸರು. ವೇದವ್ಯಾಸರ ನಿಯೋಗ ಕ್ರಿಯೆಯಿಂದಲೇ ಪಾಂಡು ಹಾಗೂ ಧೃತರಾಷ್ಟ್ರರು ವಿಧವೆ ತಾಯಂದಿರಿಂದ ಜನಿಸಿದರು ! ಮುಂದೆ ಪಾಂಡುವಿನ ಪಾಡೂ ಇದೇ ಆಯ್ತು ! ಕುಂತಿ, ಮಾದ್ರಿಯರನ್ನು ಕೈ ಹಿಡಿದ ಪಾಂಡುವಿಗೆ ಮಕ್ಕಳಾಗಲಿಲ್ಲ. ಈ ದುಃಖವನ್ನು ಸಹಿಸಿಕೊಳ್ಳಲಾಗದೇ, ಆತನು ಇಬ್ಬರು ಹೆಂಡಂದಿರೊಡನೆ ಹಿಮಾಲಯಕ್ಕೆ ತೆರಳುತ್ತಾನೆ. ಅಲ್ಲಿ ಋಷಿವರ್ಯ ವೈದ್ಯರಿಂದ ಗಿಡಮೂಲಿಕೆ ಔಷಧಿ ಸೇವಿಸಿ, ಮರಳಿ ಚೈತನ್ಯ ವೃದ್ಧಿಗೊಳಿಸಿಕೊಂಡು, ತನ್ನ ವೀರ್ಯದಿಂದಲೇ ಸ್ವಂತ ಮಕ್ಕಳನ್ನು ಪಡೆಯುವ ಬಲವಾದ ಆಶೆಯಿರಿಸಿಕೊಳ್ಳುತ್ತಾನೆ. ಅದು ಫಲಕಾರಿಯಾಗದೇ, ನಿಸ್ಸಹಾಯಕನಾಗಿ ನಿಯೋಗ ಕ್ರಿಯೆಗೆ ಒಪ್ಪಿಕೊಳ್ಳುತ್ತಾನೆ. ದೇವಗಣದ ಧರ್ಮದೇವತಾ ಪುರುಷನಿಂದ ಕುಂತಿ ಧರ್ಮನನ್ನು

ಹಡೆಯುತ್ತಾಳೆ. ಧರ್ಮ ಸಣಕಲು ಶರೀರದ ದುರ್ಬಲ. ಅವನು ಯೋಧನಲ್ಲ. ರಣರಂಗದಲ್ಲಿ ಅವನು ಹೋರಾಡಿ ಜಯಶಾಲಿಯಾಗಲಾರನು. ಇದನ್ನು ತಿಳಿದ ಬಳಿಕ ಪಾಂಡು ವೀರ ಸೇನಾನಾಯಕ ಮರುತ್ತನನ್ನು ನಿಯೋಗಕ್ಕೆ ಆಹ್ವಾನಿಸುತ್ತಾನೆ. ಮರುತ್ತನು ಅಜಾನುಬಾಹು ಪುರುಷ. ಅವನ ಎದೆಯ ಎತ್ತರಕ್ಕೆ ಕುಂತಿಯ ತಲೆಯ ಮಟ್ಟ. ಮರುತ್ತನ ವೀರ್ಯದಿಂದ ಭೀಮ ಜನಿಸಿದವನು. ರಣರಂಗದಲ್ಲಿ ಹೋರಾಡಲು ಭೀಮ ಒಬ್ಬನೇ ಏನು ಮಾಡಿಯಾನು ? ಇಂದ್ರ ಕುಂತಿಯನ್ನು ನೋಡಿದ. 'ಪದ್ಮಿನಿ' ಜಾತಿಗೆ ಸೇರಿದ ಅಪೂರ್ವ ಸುಂದರಿ ಕುಂತಿ. ಇಂದ್ರನ ಬಯಕೆ ಇಮ್ಮಡಿಯಾಯಿತು. ವಜ್ರಕಾಯದ ಬಲಿಷ್ಠ ಬಾಹುಗಳ ಸುಂದರಾಂಗ ಇಂದ್ರ. ಅವನ ಕಣ್ಣುಗಳ ಕಾಂತಿ, ತೋಳ್ಬಲ ನೋಡಿ ಕುಂತಿ ನಿಯೋಗಕ್ಕೆ ಆತುರಳಾಗುತ್ತಾಳೆ. ಮಾದ್ರಿಗೆ ಸಂತಾನವಿಲ್ಲ. ಅವಳಿಗೆ ಗರ್ಭದಾನ ಮಾಡಬಹುದಲ್ಲ ? ಎಂದು ಪಾಂಡು ಕೇಳಿದಾಗ ಇಂದ್ರ 'ಕುಂತಿ ಈಗಾಗಲೇ ಎರಡು ಮಕ್ಕಳಿಗೆ ಜನ್ಮವಿತ್ತವಳು. ಅವಳ ಗರ್ಭದಲ್ಲಿ ಸೇರಿದ ವೀರ್ಯ ನಷ್ಟವಾಗಲಾರದು. ಒಂದು ವೇಳೆ ಮಾದ್ರಿಗೆ ಗರ್ಭ ಕಟ್ಟದೇ ಹೋದರೆ, ವೀರ್ಯ ನಷ್ಟವಾದ ಪಾಪ ಬರುವದೆಂದು' ಇಂದ್ರ ಎಚ್ಚರಿಸುತ್ತಾನೆ. ಕುಂತಿಗೂ ಸಹ ಇಂದ್ರನ ಸಂಗ ಬೇಕಾಗಿತ್ತು. ಅವಳು ಕಾತುರಳಾಗಿದ್ದಳು. ಇಂದ್ರ ಕುಂತಿಗೆ ನಿಯೋಗಿಯಾದ ! ಹಗಲಿರುಳು ಅವರೀರ್ವರೂ ಸುಖದಲ್ಲಿ ತೇಲಾಡಿದರು. ಗರ್ಭ ಕಟ್ಟಿದುದು ಖಚಿತವಾದರೂ ಸಹ, ಪರಸ್ಪರ ಅಗಲಲಾರದ ಮೋಹ ! ಪಾಂಡು ಕುಂತಿಯನ್ನಗಲಿ ಹೋಗುತ್ತಾನೆ. ಇಂದ್ರನನ್ನೇ ಹೋಲುವ 'ಅರ್ಜುನ' ಜನಿಸುತ್ತಾನೆ. ನಂತರ ಮಾದ್ರಿಯು ದೇವಗಣದ ಅವಳಿ ಸೋದರರ ನಿಯೋಗದಿಂದ 'ನಕುಲ - ಸಹದೇವ'ರನ್ನು ಹಡೆಯುತ್ತಾಳೆ. ಏತನ್ಮಧ್ಯೆ ಗಿಡಮೂಲಿಕೆ ರಸ ಸೇವನೆಯಿಂದ ತನ್ನ ವೀರ್ಯವೃದ್ಧಿಯಾಗಿರಬಹುದೆಂಬ ನಂಬಿಗೆಯಿಂದ ಪಾಂಡು ಮಾದ್ರಿಯನ್ನು ಮತ್ತೆ ಮತ್ತೆ ಸಂಭೋಗಕ್ಕೆ ಒತ್ತಾಯಿಸುತ್ತಾನೆ. ಅವನನ್ನು ನಿರಾಶೆಗೊಳಿಸಬಾರದೆಂದು, ರತಿಕ್ರೀಡಾ ಕಲೆಯಲ್ಲಿ ಪಾರಂಗತಳಾದ ಮಾದ್ರಿ ವಿವಿಧ ಆಸನ ಆಲಿಂಗನಗಳಿಂದ ಪತಿಯನ್ನು ಉತ್ತೇಜಿಸುತ್ತಾಳೆ. ಪರಿಣಾಮ, ಆಯಾಸಗೊಂಡು ಅತಿಯಾಗಿ ದಣಿವಾದ ಪಾಂಡು ನಿಸ್ತೇಜನಾಗಿ ಬಂಡೆಯ ಮೇಲೆ ಒರಗಿ ಸಾಯುತ್ತಾನೆ. ತನ್ನಿಂದಾಗಿಯೇ ಪಾಂಡು ಸತ್ತನೆಂಬ ಪಾಪ ಭೀತಿಯಿಂದ ಮಾದ್ರಿ ಸತಿ ಹೋಗುತ್ತಾಳೆ." ಶಾರದೆಗೆ ಇದೆಲ್ಲ ವಿಚಿತ್ರವೆನಿಸಿತು. 'ಮಹಾಭಾರತ'ವನ್ನು ಒಂದು ವೇಳೆ 'ಆದರ್ಶ' ಹಾಗೂ 'ಅನುಕರಣೆ' ಯೋಗ್ಯವಾದ ಗ್ರಂಥವೆಂದು ಭಾವಿಸಿಧರೆ !! ಛೇ ! ಇದು ಎಂದಿಗೂ ಸಾಧ್ಯವಿಲ್ಲ ! ಇದೆಲ್ಲ ಅಪ್ಪಟ ಹಾದರ ! ಇದನ್ನು 'ಪತಿವ್ರತೆ'ಯಾದ ಯಾವ ಮಹಿಳೆಯೂ ಒಪ್ಪಲಾರಳು. ತನ್ನ ಗಂಡ ಬೇರಾರೂ ಅಲ್ಲ. ಪಾಂಡುವಿನ ಅವತಾರವೆಂದೇ ಭಾವಿಸಿದಳು.

ಶಾರದೆ ಪಡಸಾಲೆಯಲ್ಲಿ ಮಲಗುತ್ತಾಳೆ. ಪಕ್ಕದ ರೂಮಿನಲ್ಲಿ ಮೈದುನ ಮಲಗಿದ್ದಾನೆ. ಇನ್ನೊಂದು ರೂಮಿನಲ್ಲಿ ಲಕ್ಷ್ಮೀ ಮಗನನ್ನು ಬೆನ್ನಹಿಂದೆ ನವಜಾತ ಶಿಶುವನ್ನು ಎದೆಗಪ್ಪಿಕೊಂಡು ಮಲಗಿದ್ದಾಳೆ. ಬಹಳ ಹೊತ್ತು ನಿದ್ರೆ ಬರಲಿಲ್ಲ. ನಿದ್ರೆ ಬಂದುದು

ಗೊತ್ತಾಗಲೇ ಇಲ್ಲ..... ನಂತರ ಸುಪ್ತಾವಸ್ಥೆಯಲ್ಲಿರುವಾಗ, ಮಹಾಭಾರತದ ಕುಂತಿ ಬಂದು ಪಕ್ಕದಲ್ಲಿ ಕುಳಿತಳು. ಶಾರದೆಯ ಮುಂದಲೆಯನ್ನು ಸೇವರಿಸುತ್ತಲೇ, ನುಡಿಯುತ್ತಾಳೆ.

"ಶಾರದಾ, ಇಂದಿನದು ಮಾತ್ರ ಸತ್ಯ ! ನಿನ್ನೆಯವರೆಗಿನದೆಲ್ಲ ಸತ್ತಿದೆ. ನಾಳೆಯದು ಹುಟ್ಟಿಯೇ ಇಲ್ಲ ! ಪಾಪ ಪುಣ್ಯಗಳು ಇಲ್ಲ. ಈಗಿರುವ ಅವಕಾಶ ಉಪಯೋಗಿಸಿಕೋ ! ನಿನ್ನ ಸಮಸ್ಯೆ ಪರಿಹಾರವಾಗಬೇಕಾದರೆ, ನಿನ್ನ ಮೈದುನನ್ನು ನಿಯೋಗಿಯನ್ನಾಗಿ ಬಳಸಿಕೋ" ಕುಂತಿ ಮಾಯವಾದಳು. ಅವಳ ಮಾತು ನಿಜವೆನಿಸಿತು. ಸಾವಕಾಶ ಎದ್ದು ಶಾರದೆ, ಮೈದುನನ ಶಯನಕ್ಕೆ ಸರಿದಳು. ಕತ್ತಲೆಯಲ್ಲಿ ಅವನ ಪಕ್ಕದಲ್ಲಿ ಮಲಗುತ್ತಾಳೆ. ಮೆಲ್ಲ ಮೆಲ್ಲನೆ ಅವನ ವಿವಿಧ ಅಂಗಗಳನ್ನು ಸ್ಪರ್ಶಿಸುತ್ತಾಳೆ. ಅಷ್ಟರಲ್ಲಿ ಅವನಿಗೆ ಎಚ್ಚರವಾಗಿರಬೇಕು. ಅವನು ಮಾತಾಡದಿರಲಿ ಎಂದು ಅವನ ತುಟಿಗಳನ್ನು ಹಲ್ಲುಗಳಿಂದ ಕಚ್ಚಿ ಹಿಡಿಯುತ್ತಾಳೆ. ಬೆತ್ತಲೆಯ ಎದೆಯನ್ನು ಅವನೆದೆಗೆ ಘರ್ಷಿಸುತ್ತಾಳೆ. ಕ್ರಮೇಣ ಅವನು ಉದ್ರೇಕಗೊಳ್ಳುತ್ತಾನೆ. ದಾನ ಬೇಡುವ ದೇಹ ಅಂಗಾತ ಮಲಗುತ್ತದೆ. ಇಂದ್ರನು ಕುಂತಿಯನ್ನು ಭೋಗಿಸಿದ ಪ್ರಸಂಗವೇ ತನ್ನದಾಗಿತ್ತು. ಮುಂದೆ ಮೂರ್ನಾಲ್ಕು ರಾತ್ರಿಗಳು ಹೀಗೆಯೇ ಶೃಂಗಾರರತಿಯಲ್ಲಿ ಕಳೆದವು. ಶಾರದೆಯ ಸಂತೋಷಕ್ಕೆ ಪಾರವೇ ಇರಲಿಲ್ಲ. ಗರ್ಭ ಕಟ್ಟಿದುದು ಖಚಿತವಾಯ್ತು. ಲಕ್ಷ್ಮೀಯಿಂದ ಬೀಳ್ಕೊಂಡು ತನ್ನ ಊರಿಗೆ ಹೊರಟಳು. ಗಿಡಮೂಲಿಕೆ ರಸಸೇವನೆಯ ಭ್ರಮೆಯಲ್ಲಿ ಓಲಾಡುತ್ತಿದ್ದ ಷಂಡ ಗಂಡನನ್ನು ಕೂಡಿದಳು. ಮಾದ್ರಿಯು ತಾನಾಗಿ, ಗಂಡನು 'ಪಾಂಡು'ವಾಗಿ ವರ್ತಿಸಿದಂತಾಯಿತು. ಆದರೆ ಅಲ್ಲಿ ಪಾಂಡು ಸಾಯುತ್ತಾನೆ, ಇಲ್ಲಿ ಗಂಡ ಸಾಯಲಿಲ್ಲ. ಶಾರದೆ ಹಡೆಯುವದನ್ನು ನೋಡಲು ಅವನಿನ್ನೂ ಬದುಕಿದ್ದ. ಅಂತೂ ಒಂದು ದಿನ ಶಾರದೆ ಮುದ್ದಿನ ಮಗುವನ್ನು ಹಡೆದಳು. ಅಪ್ಪಿ ಮುದ್ದಾಡಿದಳು. ಸಂತಸದಿಂದ ಮೊಲೆಯೂಡಿದಳು. ಮಗು ಅಳುತ್ತಿರುವ ಹಾಗಿದೆ. ಬಹುಶಃ ಮಗು ಹಸಿದಿರಬೇಕು. ಅದಕ್ಕೆ ಮೊಲೆಯುಣಿಸಬೇಕು. ಅಳು ನಿಲ್ಲಲೊಲ್ಲದು. ಮಗುವಿಗಾಗಿ ಕೈ ಸವರಾಡಿದಳು. ಮಗು ತನ್ನ ಮುಂದಿಲ್ಲ. ಅಳುತ್ತಿರುವ ಮಗು ಲಕ್ಷ್ಮೀಯದು. ಶಾರದೆ ಎದ್ದು ಕುಳಿತಳು. "ಲಕ್ಷ್ಮೀ, ಮಗು ಅಳ್ತಾಯಿದೆ" ಎಂದು ಜೋರಾಗಿ ಹೇಳಿದಳು. ಲಕ್ಷ್ಮೀ ಕಣ್ಣು ತೆರೆಯದೇ ಮಗುವನ್ನು ತನ್ನತ್ತ ಜರುಗಿಸಿ, ಬಾಯಲ್ಲಿ ಮೊಲೆಯಿಟ್ಟಳು. ಮಗು ಸುಮ್ಮನಾಯಿತು. ಹಾಗಾದರೆ ಈವರೆಗಿನದು ? ಶಾರದೆ ತನ್ನ ಊರಿಗೆ ಹೊರಡುವಾಗ, ಲಕ್ಷ್ಮೀ ಹಾಗೂ ಅವಳ ಗಂಡನಿಗೆ ತನ್ನ 'ನಿರ್ಧಾರ' ತಿಳಿಸಿದಳು. "ಹಾಲು ಕುಡಿಯುವದನ್ನು ನಿಲ್ಲಿಸಿದ ಬಳಿಕ ಆ ಹೆಣ್ಣು ಮಗುವನ್ನು ಸಾಕಿಕೊಳ್ಳಲು ತನಗೆ ಕೊಡಬೇಕೆಂದು" ಅವರು ಸಮ್ಮತಿಸಿದರು.

●

# ಸಾವು ಬದುಕಿನ ನಡುವೆ

● ವೈ. ಬಿ. ಕಡಕೋಳ

"ಯವ್ವಾ ಬಸವ್ವಾ ಏನ್ ಮಾಡಾಕ ಹತ್ತೀಯಬೇ" ಎಂದು ನಿಂಗವ್ವ ಒಂದೇ ಸಮನೆ ನಿಟ್ಟುಸಿರುಬಿಡುತ್ತ ಬಂದಳು.

"ಏನಾಯ್ತವಾ ಹಿಂಗ್ಯಾಕ ಬಂದೀ ?" ಎನ್ನುತ್ತ ಬಸವ್ವ ಮನೆಯ ಒಳಗ್ನಿಂದ ಹೊರಬಂದವಳು.

"ಏನೂ ಅಂತ ಹೇಳಲಿ, ನನ್ನ ಮಗಳು ಕಮಲವ್ವ, ಮನಿ ಬಿಟ್ಟು ಹೋಗ್ಯಾಳಂತ, ಗಂಡನ ಮನೆಯಿಂದ ಅಕಿ ಮೈದುನ ಬಂದು ಹೇಳಿದ", ಎನ್ನುತ್ತ ನಡುಗುವ ಸ್ವರದಲ್ಲಿ ಹೇಳಿದಳು.

"ಏನ್, ಬ್ಯಾನಿ ಆಗಿತ್ತ ಅಕಿಗೆ, ಮನಿ ಬಿಟ್ಟು ಹೋಗುವಂಥಾದ್ದು". ಎಂದಳು ಬಸವ್ವ.

"ಏನಾರೆ ಆಗಲಿ ಗಂಡನ ಮನ್ಯಾಗಿಂದ ಹೋಗ್ಯಾಳಂದ್ರ, ನನಗೇನೋ ? ಸಂಶಯ ಬರ್‍ತಿದೆ. ಅವಳ ಅತ್ತೆ ಮಾವನ ಕಾಟ, ಹುಂಬ ಗಂಡನ ಸಲುವಾಗಿ ಬೇಸತ್ತು ಹೋಗ್ಯಾಳೋ ಏನೋ ?" ಎಂದಳು ನಿಂಗವ್ವ ತನ್ನ ಮಗಳನ್ನು ಸಮರ್ಥಿಸುತ್ತ.

"ಏನಾರ ಇರಲಿ ಮೊದ್ಲು, ಮಗ್ಗುಲ ಮನಿ ಕರೆಪ್ಪನನ್ನ ಕರೆದು ನಾಲ್ಕೈದು ಜನರನ್ನು ಹುಡುಕ್ಯಾಡಾಕ ಹಚ್ಚೋಣ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ ಕಡೆ ರೊಕ್ಕಾ ಕೊಟ್ಟ ಕಳುಹಿಸಿ ನೋಡೋಣ, ಅಕಿ ಗಂಡನ ಮನೆಗೂ ಹಿರಿಯರನ್ನು ಕರೆದುಕೊಂಡು ಹೋಗಿ ವಿಚಾರಿಸೋಣ", ಎನ್ನುತ್ತಾ ಬಸವ್ವ ನಿಂಗವ್ವಳನ್ನು ಕರೆದುಕೊಂಡು ಪಕ್ಕದ ಮನೆ ಕರೆಪ್ಪನನ್ನು ಕರೆದುಕೊಂಡು ಹಿರಿಯರನ್ನು ಕೂಡಿಸಿ ವಿಷಯ ಚರ್ಚಿಸಿ, ಅದೇ ಓಣಿಯಲ್ಲಿರುವ ಹುಡುಗರಾದ ಮಹಾದೇವ, ವೀರಣ್ಣ, ಚಂದ್ರಪ್ಪ, ಗೂಳಪ್ಪನನ್ನು ಗೊತ್ತುಪಡಿಸಿ ಅವರಿಗೆ ಹಣ ಕೊಟ್ಟು ಕಮಲವ್ವಳನ್ನು ಹುಡುಕಿಕೊಂಡು ಬರ್‍ರೀ ಅಂತಾ ಹೇಳಿ ಕಳುಹಿಸಿದರು.

ಸುದ್ದಿ ಹೇಳಾಕ ಬಂದಿದ್ದ ಬಸಪ್ಪನೊಂದಿಗೆ ಎಲ್ಲರೂ ಸೇರಿ ಅವಳ ಗಂಡನ ಮನೆಯತ್ತ ಹೊರಡಲೂ ಮುಂದಾಗಿ ಬಸ್ ನಿಲ್ದಾಣಕ್ಕೆ ಬಂದು ಬಸ್ಸನ್ನೇರಿದರು. ಬಸ್ಸಿನಲ್ಲಿ ಕುಳಿತ

ನಿಂಗವ್ವನಿಗೆ ಮಗಳ ನೆನಪುಗಳೇ ಕಾಡತೊಡಗಿದವು. ನಿಂಗವ್ವ ಓರ್ವ ವಿಧವೆ, ಮಗಳು ಕಮಲವ್ವ ಹುಟ್ಟಿದ ವರ್ಷವೇ ಗಂಡ ತೀರಿಕೊಂಡ, ಅವರಿವರ ಮನೆಗೆಲಸ ಮಾಡುತ್ತಾ ಮಗಳನ್ನು ಸಾಕಿ ಸಲುಹಿದ್ದಳು. ತವರು ಮನೆಯಿಂದ ತಂದೆ ತಾಯಿ, ಮಗಳ ಬಳಿ ಬರುವುದು, ಯೋಗಕ್ಷೇಮ ವಿಚಾರಿಸುವುದು, ತಮ್ಮ ಮಗ ಗಿರೆಪ್ಪನಿಗೆ ಕಮಲವ್ವಳನ್ನು ತಂದುಕೊಳ್ಳುವುದಾಗಿ ಭರವಸೆ ನೀಡುತ್ತಿದ್ದರು. ಅಷ್ಟೇ ಅಲ್ಲ ತನಗಾರು ದಿಕ್ಕು, ಹೆತ್ತ ತಂದೆ ತಾಯಿ ಒಡಹುಟ್ಟಿದ ಸಹೋದರ ಮನೆಯಲ್ಲೇ ಸಂಬಂಧ ಬೆಳೆಸಿದರೆ ಮಗಳು ಸುಖವಾಗಿರುವಳು ಎಂಬ ಕನಸು ಕೂಡಾ ಕಂಡಿದ್ದಳು ನಿಂಗವ್ವ.

ಎಲ್ಲರ ನಿರೀಕ್ಷೆಯಂತೆ ಗಿರೆಪ್ಪನ ಜೊತೆಗೆ ಮಗಳ ವಿವಾಹ ನಡೆದಿತ್ತು. ಗಿರೆಪ್ಪನ ಜೊತೆಗೆ ವಿವಾಹವಾದ ಒಂದೆರಡು ವರ್ಷ ಕಳೆದಿದ್ದರೂ ಹಬ್ಬಕ್ಕೆಂದು ಬಂದ ಮಗಳು ಆಗಾಗ ಗಂಡನ ಮನೆ, ಅತ್ತೆ, ನಾದಿನಿ, ಮಾವನ ಬಗ್ಗೆ ಆರೋಪ ಮಾಡುತ್ತಿದ್ದಾಗ, ಅವಳಿಗೆಷ್ಟು ಸೊಕ್ಕು ? ತನಗೆ ಹೊಂದಾಣಿಕೆ ಮಾಡಿಕೊಂಡು ಹೋಗಲು ಬಾರದೇ ಗಂಡನ ಮನೆಯವರನ್ನೆಲ್ಲ ಅಪವಾದದಕ್ಕೆ ಗುರಿ ಮಾಡುತ್ತಿರುವಳಲ್ಲಾ ಎಂದು ಭಾವಿಸಿ ಬೈಯ್ದು ಮತ್ತೆ ಗಂಡನ ಮನೆಗೆ ಕಳುಹಿಸಿದಳು. ಏಕೆಂದರೆ ಎಷ್ಟೇ ಆದರೂ ಅದು ತನ್ನ ಮನೆಯಲ್ಲವೇ ? ತನ್ನ ತಂದೆ - ತಾಯಿ, ತಮ್ಮ - ತಂಗಿಯರು ಎಲ್ಲರ ಬಗ್ಗೆ ರಕ್ತ ಸಂಬಂಧಿ ವಿವಾಹವಾದ ನನ್ನ ಮಗಳು ಹೀಗೇಕೆ ? ಎಂದು ಅವಳ ಮನಸ್ಸು ಚಿಂತಿಸಿತ್ತು.

ಹೀಗೇ ಚಿಂತಿಸುವಷ್ಟರಲ್ಲಿ ಊರು ಬಂದಿತ್ತು. ಎಲ್ಲರೂ ಮನೆಗೆ ಬಂದಾಗ ಬೀಗರು ಸ್ವಾಗತಿಸಿದರು. ಕಮಲವ್ವಳು ಮನೆಬಿಟ್ಟು ಹೊರಹೋಗಿರುವ ವಿಚಾರವನ್ನೇ ಅವರು ನೇರವಾಗಿ ಎತ್ತಿದರು. 'ಎಂಥಾ ಬಿನ್ನಾಣಗಿತ್ತಿ ಅಂತೀವ್ನಿ ನಿನ್ನೆ ಮಧ್ಯಾಹ್ನ ಹೊಲಕ್ಕೆ ಊಟಾ ತಗೊಂಡು ಬಾ ಅಂತಾ ಎಲ್ಲರೂ ಹೊಲಕ್ಕೆ ಹೋಗೇವಿ. ಹೊಟ್ಟೆ ಹಸಿದ ಮಧ್ಯಾಹ್ನದಾಗ ದಾರಿ ನೋಡಕೊಂತ ಕುಂತ ಕುಂತೇವಿ. ಆಟ ಆಡಲಿಕ್ಕೆ ಹೋಗಿದ್ದ ಬಸ್ಯಾ ಬೇಗ ಮನೆಗೆ ಹೋಗಿ ಅವರ ಅಕ್ಕನ ಕಡೆಯಿಂದ ಅಡುಗೆ ಕಟ್ಟಿಸಿಕೊಂಡ ಯಾಕ ಇನ್ನೂ ಬರಲಿಲ್ಲ' ಅಂತ ವಿಚಾರಿಸುತ್ತಿರುವಾಗ ಸೈಕಲ್ ಮೇಲೆ ಬಂದ ಬಸಪ್ಪ 'ಅಕ್ಕಾ ಮನ್ಯಾಗ ಎಲ್ಲೀ ಕಾಣಿಸವಳ್ಳು, ಭಾವಿ ಕಟ್ಟಿ ಮ್ಯಾಗ ನೋಡಿದೆ ಅಲ್ಲಿಯೂ ಇಲ್ಲ, ಗೌಡರ ಓಣಿ ಕಡೆಗೆ ಶಾಂತಕ್ಕನ ಹತ್ರಾ ಹೋಗ್ಯಾಳನ ಅಂದ ಅಲ್ಲೀ ಹೋಗಿ ಬಂದೆ ಅಲ್ಲಿಯೂ ಇಲ್ಲ' ಎನ್ನುತ್ತ ಒಂದೇ ಉಸಿರಿನಿಂದ ಹೇಳಿದನು.

ಇದು ಒಳ್ಳೆ ಅಪವಾದ ಬಂತು ಅಂತ ಎಲ್ಲರೂ ಹೊಲದಿಂದ ನೆಟ್ಟಗ ಮನೀಗೆ ಬಂದೇವಿ. ಊರಲ್ಲೆಲ್ಲ ಹುಡುಕಾಡಿದೆವು. ತವರ ಮನೆಗೆ ಹೋಗ್ಯಾಳೇನೋ ಅಂತ ಬಸಪ್ಪನನ್ನು ಕಳುಹಿಸಿದೆವು ಎಂದರು.

ಅವರ ಆಪಾದನೆ ಕೇಳಿದ ನಿಂಗವ್ವ, ಬಸವ್ವ, ಊರ ಹಿರಿಯ ಕರೆಪ್ಪ ಮತ್ತಿತರರು ಆದದ್ದಾಗಲಿ ನಮ್ಮೂರ ಹುಡುಗರು ಹುಬ್ಬಳ್ಳಿ, ಧಾರವಾಡ, ಬೆಳಗಾಂವಿಗಳಲ್ಲೆಲ್ಲ ಹುಡುಕಾಡಲು ಹೋಗಿದ್ದಾರೆ, ಏನೇ ಆಗಲಿ ಎಲ್ಲರೂ ಕೂಡಿಯೇ ಪೊಲೀಸ್‌ರಿಗೆ ಕಂಪ್ಲೆಂಟು ಕೊಡೋಣ ಬನ್ನಿ ಎಂದು ಪೊಲೀಸ್ ಠಾಣೆಗೆ ಹೋಗಿ ಕಾಣೆಯಾಗಿದ್ದಾಳೆ ಎಂದು ದೂರು ಸಲ್ಲಿಸಿ ಊರ ಕಡೆಗೆ ಮರಳಿದ್ದರು.

ಹುಡುಕಾಡಲು ಹೋಗಿರುವ ಹುಡುಗರು ಕೂಡ ಬರಿಗೈಯಲ್ಲಿ ಬಂದಾಗ ನಿಂಗವ್ವನಿಗೆ ಆಕಾಶವೇ ಕೈ ಚೆಲ್ಲಿದಂತಾಯಿತು.

ಹೀಗೇಯೇ ನಾಲ್ಕೈದು ತಿಂಗಳು ಕಳೆದವು. ಎಲ್ಲರೂ ತಮ್ಮಷ್ಟಕ್ಕೆ ತಾವೇ ಈ ಘಟನೆ ಮರೆತು ತಮ್ಮ ತಮ್ಮ ಕೆಲಸ ಕಾರ್ಯಗಳಲ್ಲಿ ತೊಡಗಿದ್ದರು. ಒಂದು ದಿನ ಪೊಲೀಸ್‌ನವನೊಬ್ಬ ನಿಂಗವ್ವನ ಮನೆಗೆ ಬಂದು 'ನೀವು ನಿಮ್ಮ ಮಗಳು ಕಾಣೆಯಾಗಿರುವಳೆಂದು ದೂರು ಸಲ್ಲಿಸಿರುವಿರಿ. ನಿನ್ನೆ ಊರಾಚೆ ಇರೋ ಹೊಲದಲ್ಲಿ ಯುವತಿಯೊಬ್ಬಳ ಶವ ದೊರಕಿದೆ, ಸಾಹೇಬ್ರು ನಿಮ್ಮನ್ನು ಕರೆತರಲು ಹೇಳಿದ್ದಾರೆ. ಅದನ್ನು ಗುರುತಿಸಿ' ಎಂದನು.

ನಿಂಗವ್ವ, ಬಸವ್ವ, ಹಿರಿಯ ಕರೆಪ್ಪನೊಡನೆ ಸೇರಿ ಪೊಲೀಸ್ ಠಾಣೆಗೆ ಹೋದರು. ಕೆಂಪು ಸೀರೆ, ನೀಲಿ ಬಳೆಗಳ ಶವವಾಗಿತ್ತದು. ಮುಖ ಜಜ್ಜಿ ಹೋಗಿ ಗುರುತು ಸಿಗಲಾರದಂತಾಗಿತ್ತು. ಕಾಲಿಗೆ ಧರಿಸಿದ್ದ ಗೆಜ್ಜೆ ಇವುಗಳ ಮೂಲಕ ನಿಂಗವ್ವ 'ಇವಳೇ ನನ್ನ ಮಗಳು ಅಯ್ಯೋ ಪಾಪಿಗಳು ಕೊಂದು ಹಾಕಿ ಓಡಿ ಹೋಗ್ಯಾರೆ' ಅಂತಾ ಸುದ್ದಿ ಹಬ್ಬಿಸಿದ್ದಾರೆ. ನನ್ನ ಮಗಳು ತವರಿಗೆ ಬಂದಾಗ ಹೇಳುತ್ತಿದ್ದ ಅತ್ತೆ, ಮಾವ, ಗಂಡ, ನಾದಿನಿಯರ ಕಿರುಕುಳ ನಿಜ ಎಂದು ರೋದಿಸತೊಡಗಿದಳು.

ಇವಳ ಹಾಗೂ ಹಿರಿಯರ ಹೇಳಿಕೆ ಪಡೆದ ಪೊಲೀಸ್ನೋರು ಪೋಸ್ಟ್‌ಮಾರ್ಟಂ ವರದಿಗೆ ಹೆಣ ಕಳುಹಿಸಿದರು. ಕಮಲಳ ಗಂಡ, ಅತ್ತೆ, ಮಾವಂದಿರನ್ನು ಬಂಧಿಸಿದರು. ಕಲ್ಲಿನಿಂದ ಜಜ್ಜಿ ಕೊಲೆ ಎಂಬ ಪೋಸ್ಟ್‌ಮಾರ್ಟಂ ವರದಿ ಬಂದ ನಂತರ ಶವವನ್ನು ಹುಡುಗಿಯ ತಾಯಿಗೆ ಒಪ್ಪಿಸಿದರು. ಶವಸಂಸ್ಕಾರ ಮಾಡಿದರು.

ಇತ್ತ ಅವಳ ಅತ್ತೆ, ನಾದಿನಿ, ಮಾವ, ಗಂಡಂದಿರ ಮೇಲೆ ಕೊಲೆ ಆರೋಪ ಮೊಕದ್ದಮೆ ದಾಖಲಾಗಿ ಅವರೂ ಕೂಡ ತಾವೂ ನಿರಪರಾಧಿಗಳೆಂದು ಕೋರ್ಟ್‌ನಲ್ಲಿ ಜಾಮೀನಿಗಾಗಿ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ಆರಂಭವಾಯಿತು. ಆದರೂ ಆರೋಪದ ನಿರ್ಧಾರ ಖಚಿತವಾಗುವವರೆಗೆ ಜೈಲಿನಲ್ಲಿರಬೇಕಾದ ಅನಿವಾರ್ಯತೆ ಅವರಿಗಾಗಿತ್ತು.

ನಿತ್ಯವೂ ನಿಂಗವ್ವ ಅವರಿವರ ಮುಂದೆ ತನ್ನ ಮಗಳ ನೆನಪು ಬಿಚ್ಚಿ ಮಾತನಾಡುವುದು, ಅಳುವುದು ಇವಳಿಗೆ ಅವರಿಂದ ಸಾಂತ್ವನ ಇತ್ಯಾದಿ ಬದುಕು ಸಾಗಿ ದಿನ ದಿನಕ್ಕೆ ಅವಳು ಕೃಶವಾಗತೊಡಗಿದಳು. ಒಬ್ಬಳೇ ಮಗಳ ಜೀವನ ಹೀಗಾಯಿತಲ್ಲ ಎಂಬ ಕೊರಗು ಅವಳದು. ಆಕೆಯ ಮನಸ್ಸಿಗೆ ಸ್ವಲ್ಪವಾದರೂ ನೆಮ್ಮದಿ ಸಿಗಲೆಂದು ಹುಬ್ಬಳ್ಳಿಯಲ್ಲಿರುವ ಅವಳ ಹಿರಿಯ ಸಹೋದರ ಕರೆದುಕೊಂಡು ಹೋಗುವನು. ಆಗಾಗ ಆತನ ಮಕ್ಕಳೊಂದಿಗೆ ನಿಂಗವ್ವ ಮಾರುಕಟ್ಟೆಗೆ ಬಂದು ತರಕಾರಿ ತರುವುದು, ಮಕ್ಕಳಿಗೆ ಕಥೆ ಹೇಳುವುದು ಮನೆಗೆಲಸದಲ್ಲಿ ಪಾಲ್ಗೊಂಡು ತನ್ನ ದುಃಖ ಮರೆಯಲೆತ್ನಿಸಿದಳು.

ಒಂದು ವರ್ಷ ಕಳೆದಿತ್ತು. ದುಃಖದ ಕಟ್ಟೆಯೊಡೆದಿದ್ದ ಜೀವಕ್ಕೆ ತಂಗಾಳಿ ಆಸರೆಯಂತೆ ಅವಳ ಸಹೋದಶ ಅವನ ಪತ್ನಿ ಮಕ್ಕಳು ಬಂದೊದಗಿದ್ದರು. ನಿಂಗವ್ವ ಉತ್ಸಾಹದ ಚಿಲುಮೆಯಂತಾಗಿದ್ದಳು. ಹುಬ್ಬಳ್ಳಿಯ ವಾತಾವರಣ ಅವಳ ಮನಕ್ಕೆ ಮುದ ನೀಡಿತ್ತು. ಒಂದು ದಿನ ಮಾರುಕಟ್ಟೆಗೆ ಮಕ್ಕಳೊಡನೆ ತರಕಾರಿ ತರಲು ಹೋಗಿದ್ದಳು. ಅಂದು ಮಕ್ಕಳು ಹಾಗಲಕಾಯಿ ತಗೋಳಜ್ಜಿ ನಮಗೆ ಉಪ್ಪಿನಕಾಯಿ ಮಾಡಿ ಕೊಡುವೆಯಂತೆ ಎಂದು ಹಾಗಲಕಾಯಿಗಾಗಿ ಪೀಡಿಸುವಾಗ ಒಳ್ಳೆಯ ಹಾಗಲಕಾಯಿಗೋಸ್ಕರ ಇಡೀ ಮಾರುಕಟ್ಟೆ ವೀಕ್ಷಿಸುತ್ತಿರುವಾಗ ಒಂದು ಕ್ಷಣ ತನ್ನ ಪಕ್ಕಕ್ಕೆ ಹಾಯ್ದು ಹೊರಟ ಯುವತಿ ಇವಳ ಗಮನ ಸೆಳೆದಳು. ಅದೇ ಕೆಂಪು ಸೀರೆ, ಅದೇ ನಡುಗೆ, ಅವಳ ಧ್ವನಿ ಗಮನಿಸಿದಳು ಕಮಲವ್ವನ ಧ್ವನಿ. ಅವಳೊಂದಿಗೆ ಬಿಳಿ ಧೋತರ ಧರಿಸಿದ್ದ ವ್ಯಕ್ತಿಯೊಬ್ಬನಿದ್ದ, ಅವನ ಧ್ವನಿಯೂ ಕೂಡ ಇವಳಿಗೆ ಪರಿಚಿತವೆನಿಸುವಂತಿದ್ದು, ಹಾಗಲಕಾಯಿ ವಿಚಾರ ಅವಳ ಮುಂದೆ ಮಾಯವಾಗಿ ಆ ಮಕ್ಕಳೊಂದಿಗೆ ಇವರನ್ನು ಹಿಂಬಾಲಿಸಿದಳು. ಅವರಿಬ್ಬರು ನಿಂತು ಒಂದು ಅಂಗಡಿಯಲ್ಲಿ ಏನನ್ನೋ ಕೊಳ್ಳಲೆಂದು ಅಂಗಡಿಯಾತನೊಡನೆ ಮಾತನಾಡುವಾಗ ಆತ ತನ್ನ ಮನೆ ಪಕ್ಕದ ಓಣಿಯ ಯುವಕ 'ಬೀರಾ' ಎಂದಳು. ಆತ ಮುಖ ಇವಳತ್ತ ತಿರುಗಿಸಿದ.

'ಏನ್ ಮಾಡ್ಬಿಟ್ಟೆ ನನ್ನ ಮಗಳ್ನ ಎಂಥ ನೀಚ ನೀನು ಕಮಲವ್ವ ಅನ್ಯಾಯ ಮಾಡಿ ಬಿಟ್ಟೆಯಲ್ಲೋ ನಿನ್ನ ತಾಯಿಗೆ' ಎನ್ನತೊಡಗಿದಾಗ.

'ಯವ್ವಾ ಸುಮ್ನಿರ ಸಮಾಧಾನ ತಂದುಕೊಳ್ಳಬೇ, ಹಿಂಗ್ಯಾಕ ಮಾಡಾಕ ಹತ್ತೀದಿ, ಬಾ ಇಲ್ಲಿ. ಇಲ್ಲೇ ಚಹ ಕುಡಿಯೋಣಂತ' ಎಂದು ಸಮಾಧಾನಿಸುವಂತೆ ಮಾತನಾಡಿದಳು.

ಆದರೂ ನಿಂಗವ್ವನ ಹರಿತವಾದ ಮಾತುಗಳು ಮಾತನಾಡಲು ಅವರಿಬ್ಬರಿಗೂ ಮುಂದೆ ಚಲಿಸದಂತೆ ಮಾಡಿದ್ದವು. ಅದೇ ಅಂಗಡಿಯ ಹತ್ತಿರ ಒಂದು ಕಡೆಗೆ ಹೋಗಿ ನಿಂತರು. ನಿಂಗವ್ವ ಅಲ್ಲಿಗೆ ಹೋದಾಗ ಅವರಿಬ್ಬರೂ ಪರಸ್ಪರ ಪ್ರೀತಿಸಿದ್ದು, ತವರಿಗೆ ಬಂದಾಗ ಭೇಟಿಯಾಗುವುದು, ಅಲ್ಲದೇ ಗಂಡನಿಗಿಂತ ಬೀರಪ್ಪನೇ ವಾಸಿ ಎಂದೆನಿಸಿ, ಮನೆಬಿಟ್ಟು ಹೋಗುವ ನಿರ್ಧಾರ ತಳೆದು

ಊರನ್ನೇ ಬಿಟ್ಟು ಗೋವೆಗೆ ಇಬ್ಬರೂ ದುಡಿಯಲು ಹೋಗಿ ಕಳೆದ ಎರಡು ದಿನದ ಹಿಂದೆ ಬೀರಪ್ಪನ ಸ್ನೇಹಿತನ ವಿವಾಹ ಹುಬ್ಬಳ್ಳಿಯಲ್ಲಿರುವ ಕಾರಣ ಮರಳಿದ್ದರು. ಅನಿರೀಕ್ಷಿತವಾಗಿ ನಿಂಗವ್ವನ ಕೈಗೆ ಸಿಕ್ಕಿ ಬಿದ್ದಿದ್ದರು. ಈ ಘಟನೆ ವಿವರಿಸಿದಾಗ ನಿಂಗವ್ವನ ಕಣ್ಣೀರು ಅವಳ ಕಣ್ಣಂಚಿನಲ್ಲಿ ಮೂಡಿಬಂದಿತ್ತು.

'ಎಷ್ಟೊಂದು ಅನ್ಯಾಯ ಆಗಿ ಹೋಯ್ತವ್ವ ನಿನ್ನಿಂದ, ಬಂಗಾರದಂಥ ನನ್ನ ಕುಟುಂಬದ ಮೇಲೆ ನಾನೇ ಮಗಳೆಂಬ ಮಮಕಾರದಿಂದ ನಿನಗಾಗಿ, ಕೊಲೆಯಾದ ಯುವತಿ ನೀನೇ ಎಂದು ನಂಬಿ, ಅವರು ಜೈಲಿಗೆ ಹೋಗುವಂತೆ ಮಾಡಿದೆನಲ್ಲಾ ಓ ! ದೇವರೆ ? ಇದೆಂಥ ದುರ್ದೈವ, ಇಲ್ಲಿ ನೋಡಿದರೆ ನನ್ನ ಮಗಳು, ಛೇ ! ಅದಾವ ಯುವತಿ ಶವವಾಗಿ ಈ ತಾಯಿಯ ಮೂಲಕ ಮಣ್ಣಾಗುವಂತಾಯಿತಲ್ಲಾ' ಎಂದು ಶೋಕಿಸುತ್ತ ಒಂದು ಕ್ಷಣ ನಡೆದ ಘಟನೆಗಳೆಲ್ಲ ಅವಳ ಕಣ್ಮುಂದೆ ಸುಳಿಯುತ್ತಿದ್ದವು.............

# ನಾವು ಮಾಡಿದ ತಪ್ಪು

● ಹಜರೇಸಾಬ ಹು. ನದಾಫ

'ನಾನೊಬ್ಬವ ಬರ್ತೇನ್ರಿ ನಾನೊಬ್ಬವ ಬರ್ತೇನ್ರಿ ಮೇಸ್ತ್ರಿಯರ, ರ್ರೀ ಮೇಸ್ತ್ರಿಯರ, ನಾನೊಬ್ಬವ ಬರ್ತೇನ್ರಿ ? ಪಗಾರ ಎಷ್ಟರ ಕೊಡ್ರಿ ನನ್ನನ್ನು ಕೆಲಸಕ್ಕೆ ಕರ್ಕೊರ್ರಿ' ಎಂದು ಮೇಸ್ತ್ರಿಯವರ ಬೆನ್ನ ಹಿಡಿದು ಕೇಳಾಕ ಹತ್ತಿದ. ಆದರೆ ಮೇಸ್ತ್ರಿಗೆ ಬೇಕಾಗಿದ್ದು, ನಾಲ್ಕೇ ಜನ. ಅಷ್ಟೇ ಜನರನ್ನು ಕರಕೊಂಡು ಮೇಸ್ತ್ರಿ ಹೊರಟಿದ್ದ. ಶಂಕ್ರಪ್ಪ ಬಿಡಲಿಲ್ಲ. ಮೇಸ್ತ್ರಿ ಬೆನ್ನಾಗಬಿದ್ದು ಕೇಳಾಕ ಹತ್ತಿದ. ಮೇಸ್ತ್ರಿ ಬ್ಯಾಡ ಹೋಗ ಅಂತ ಜಬರಿಸಿದಾ, ಆದರೂ ಶಂಕ್ರಪ್ಪ ಒಂದೇ ಸಮನೆ ಹಲಬಾಕ ಹತ್ತಿದ. ಹೀರೋನಂತಿದ್ದ, ಮೇಸ್ತ್ರಿ ಸಿಟ್ಟು ಬಂದು ಬ್ಯಾಡ ಹೋಗೋ ಅಂತ ದೂಡಿಬಿಟ್ಟಾಗ ಶಂಕ್ರಪ್ಪ ಕಾಲುಜಾರಿ ಬಿದ್ದ.

ಹಿಂಗ ದುಡಿತೇನ್ರಿ ಕೆಲಸಕೊಡ್ರಿ ಅನ್ನುವ ಈ ಮನುಷ್ಯ ಒಂದು ಹಳ್ಳಿಯಲ್ಲಿರುವ ಬಡವ. ಇವನ ಗ್ರಾಮ, ಹುಬ್ಬಳ್ಳಿ ರೇಲ್ವೆ ಸ್ಟೇಷನ್‌ದಿಂದ ಅರವತ್ತು ಕಿ.ಮೀ. ದೂರದಲ್ಲಿರುವ ಒಂದು ರೇಲ್ವೆ ಸ್ಟೇಷನ್ ಪಕ್ಕದ ಹಳ್ಳಿ. ತನ್ನ ಹಳ್ಳಿಯಲ್ಲಿ ಶ್ರೀಮಂತರ ಹಾಗೂ ಹೊಟೇಲ್ ಮಾಲೀಕರ ಕೈವಶನಾಗಿ, ದಿನಾಲು ತನ್ನ ಗ್ರಾಮದ ಪಕ್ಕದಲ್ಲಿರುವ ಚಿಕ್ಕದಾದ ಅಡವಿಗೆ ಹೋಗಿ ಮರಗಳನ್ನು ಕಡಿದು ಮಾಲೀಕರ ಬೊಕ್ಕಸಕ್ಕೆ ಹಾಕಿ ಅವರು ಹೇಳಿದಹಾಗೆ ಕೇಳುತ್ತಾ ಅವರ ಕೈಗೊಂಬೆಯಾಗಿ ಜೀವನ ನಡೆಸುತ್ತಿದ್ದ.

ಹಳ್ಳಿಯ ಗ್ರಾಮಸ್ಥರೂ ಸಹ ತಮಗೆ ಬೇಕೆಂದಾಗ ಹೋಗಿ, ಮರಗಳನ್ನು ಕಡಿಯಲಿಕ್ಕೆ ಪ್ರಾರಂಭಿಸಿದರು. ಹಾಗೂ ಜನಸಂಖ್ಯೆ ಹೆಚ್ಚಾಗಿ ಜನರ ವಾಸಸ್ಥಳದ ಸಮಸ್ಯೆಯಾದಾಗ ಮರಗಳನ್ನು ಕಡೆದ ಜಾಗದಲ್ಲಿ ಚಪ್ಪರವನ್ನು ಹಾಕಿಕೊಂಡರು. ಇನ್ನೂ ಸಮಸ್ಯೆಯಾದಾಗ ತಾವೇ ಮರಗಳನ್ನು ಕಡಿದು ಮನೆಗಳನ್ನು ಮಾಡಿಕೊಂಡರು. ಹೀಗೆ ಈ ಚಿಕ್ಕ ಅಡವಿಯು ಅವನತಿ ಹೊಂದಿತು. ಮುಂದೆ ಹೊಟೇಲ್ ಮಾಲೀಕರಿಗೆ ಉರುವಲು ಕಟ್ಟಿಗೆಯ ಸಮಸ್ಯೆ ಬಂದಾಗ ಹಳ್ಳಿಯ ಸುತ್ತಮುತ್ತಲು ಇದ್ದ ಅಲ್ಲೊಂದು ಇಲ್ಲೊಂದು ಗಿಡಗಳನ್ನು ಖರೀದಿಮಾಡಿ ಕಡಿಸಿಕೊಂಡರು. ಸಣ್ಣಪುಟ್ಟ ರೈತರೂ ಅವಶ್ಯಕತೆ ಬಂದಾಗ ತಮ್ಮ ಹೊಲಗಳ ಬದುವಿನಲ್ಲಿದ್ದ ಮರಗಳನ್ನು ಹೊಟೇಲ್ ಮಾಲೀಕರಿಗೆ ಮಾರಿದರು. ಮುಂದೆ ಹಳ್ಳಿಯ ಸುತ್ತಮುತ್ತ ಮರಗಳ ಸಂಖ್ಯೆ ಕಡಿಮೆಯಾಗಿ ಹಳ್ಳಿಗೆ ಬಿಸಿಲಿನ ತಾಪ ಹೆಚ್ಚಾಯಿತು. ಹಳ್ಳಿಯ ಜನರ ಮನಸ್ಸಿಗೆ ಶಾಂತಿ

ಇಲ್ಲದಾಯಿತು. ನೆಮ್ಮದಿಯ ಜೀವನವನ್ನು ಸಾಗಿಸುವದು ಹಳ್ಳಿಗರಿಗೆ ಕಷ್ಟವಾಯಿತು. ಹಳ್ಳಿಯ ನಿಸರ್ಗ, ಸೌಂದರ್ಯ ಮಾಯವಾಯಿತು. ಮುಂದೆ ಅನೇಕ ಕಾಲದವರೆಗೆ ಹಳ್ಳಿಯಲ್ಲಿ ಮಳೆಯೇ ಸರಿಯಾಗಿ ಬೀಳಲಿಲ್ಲ. ದಿನ ದಿನಕ್ಕೆ ಬಿಸಿಲಿನ ಝಳ ಹೆಚ್ಚಾಯಿತು. ಇದರಿಂದ ಹಳ್ಳಿಯು ಬೆಂದಂತಾಯಿತು. ಹಳ್ಳಿಗರ ಮುಖದಲ್ಲಿ ಧಗೆಯೇ ಪ್ರಜ್ವಲಿಸುತ್ತಿತ್ತು. ಜನರು ಬೆಪ್ಪಾದರು, ಬೆಂಡಾದರು ಏನೂ ತಿಳಿಯದಾಗಿ ಗ್ರಾಮಸ್ಥರ ಮನಸ್ಸಿನಲ್ಲಿ ಪ್ರಶ್ನೆಗಳ ಜಾಲವೇ ಎದ್ದಿತು. ಇದರಿಂದ ಅನೇಕ ಜನರು ಬೇರೆ ಬೇರೆ ಕಡೆ ಕೆಲಸಕ್ಕೆ ಹೋದರು. ಗ್ರಾಮದಲ್ಲಿ ಜನರ ಸುಳಿವು ಕಡಿಮೆಯಾಯಿತು. ಹೊಟೇಲ್‌ಗಳು ನಡೆಯದೆ ಬಾಗಿಲು ಮುಚ್ಚಿದವು.

ಈ ಹೊಟೇಲ್‌ಗಳು ಮುಚ್ಚಿದ್ದರಿಂದ ಮಾಲೀಕರು ಶಂಕ್ರಪ್ಪನಿಗೆ ಕೆಲಸ ಇಲ್ಲವೆಂದು ಹೊರಕ್ಕೆ ದೂಡಿದರು. ಮುಂದೆ ಇವನು ಕುಟುಂಬವನ್ನು ನಡೆಸಿಕೊಂಡು ಹೋಗುವುದು ಕಷ್ಟಕರವಾಯಿತು. ಒಮ್ಮೆ ಚಿಂತಾಕ್ರಾಂತನಾಗಿ ಕುಳಿತಾಗ ಥಕ್ಕನೆ ಮಿಂಚಿನ ಹಾಗೆ ಒಂದು ವಿಚಾರ ಹೊಳೆಯಿತು. ಅದು ಏನೆಂದರೆ - ಹುಬ್ಬಳ್ಯಾಗ ಬಿಲ್ಡಿಂಗ್ ಕೆಲಸಗಳು ಬಹಳ ಇರತಾವು. ಮುಂಜಾನೆ ಗಾಡಿಗೆ ಹೋಗಿ ರೇಲ್ವೆ ಸ್ಟೇಷನ್ ಹೊರಗ ನಿಂತಗೊಂಡರೆ ಕೆಲಸಕ್ಕೆ ಕರಿಯಲಿಕ್ಕೆ ಬರತಾರ ಅಂತ ಅನ್ನುವುದನ್ನು ಯಾರಿಂದಲೋ ಕೇಳಿದ್ದ. ರಾತ್ರಿ ಊಟಾ ಮಾಡುವಾಗ ಹೆಂಡತಿಗೆ ನಾನು ನಾಳೆ ಹುಬ್ಬಳ್ಳಿ ಕೆಲಸಕ್ಕೆ ಹೋಕ್ಕನಿ ದೌಡ ನಸುಕಿನ್ಯಾಗ ಎದ್ದು ರೊಟ್ಟಿ ಮಾಡಿ ಕಟ್ಟು ಎಂದು ಟಬರ್ ಮಾಡಿ ಹೇಳಿದ್ದ. ಅದಪ್ರಕಾರ ಹೆಂಡತಿ ಇದ್ದಂಥಾ ಸ್ವಲ್ಪ ಹಿಟ್ಟಿನ್ಯಾಗ ರೊಟ್ಟಿ ಮಾಡಿ ಗಂಟು ಕಟ್ಟಿ ಒಂದು ಚೀಲದಾಗ ಹಾಕಿ ಇಟ್ಟಳು. ಇವಾ ಮುಂಜಾನೆಯೆದ್ದು ಬಡಾಬಡಾ ಅಂಗಿ ಹಾಕ್ಕೊಂಡು ಕೈಯಾಗ ರೊಟ್ಟಿ ಗಂಟಿನ ಚೀಲಾ ಹಿಡಕೊಂಡು ಸ್ಟೇಷನ್‌ಗೆ ಬಂದ. ಸರಿಯಾದ ಸಮಯಕ್ಕೆ ಗಾಡಿ ಬಂತು. ಗಾಡಿ ಹತ್ತಿಕೊಂಡು ಕುಳಿತುಕೊಂಡ. ದುಡಿಯುವ ಜನ ಪ್ರತಿಯೊಂದು ಸ್ಟೇಷನ್‌ನಿಂದ ಹತ್ತುತ್ತಿದ್ದರು. ಹುಬ್ಬಳ್ಳಿ ಸ್ಟೇಷನ್‌ಗೆ ಗಾಡಿ ಬಂದು ನಿಂತರೆ ಸಮುದ್ರವೇ ಹರಿದು ಬರುವಂತೆ ಜನಸಮೂಹ ಕಂಗೊಳಿಸುತ್ತಿತ್ತು. ಶಂಕ್ರಪ್ಪನು ಇಳಿದು ಹೊರಗೆ ಬಂದು ನೋಡತಾನ ಅಲ್ಲಲ್ಲಿ ಜನರು ಗುಂಪು ಗುಂಪಾಗಿ ನಿಂತಿದ್ದರು. ಸುತ್ತಲೂ ನೋಡಿದಾ ಯಾರೂ ಇವನನ್ನು ಕೆಲಸಕ್ಕೆ ಬರತಿ ಏನಪಾ ಅಂತ ಕೇಳಾಕ ಬರಲಿಲ್ಲ. ಇವನು ಆ ಗುಂಪೊಮ್ಮೆ ಈ ಗುಂಪೊಮ್ಮೆ ನೋಡಕೊಂತ ಮುಂದೆ ಹೆಜ್ಜಿ ಇಟ್ಟ. ಯಾರೂ ಇವನನ್ನು ದಾದ್ ಮಾಡಲಿಲ್ಲ. ಅವಾಗ ಇವಾ ಯೋಚನೆ ಮಾಡಾಕ ಹತ್ತಿದ. ಹುಬ್ಬಳ್ಯಾಗ ಬಿಲ್ಡಿಂಗ್ ಕೆಲಸ ಬಹಳ ಇರತಾವು. ಸ್ಟೇಷನ್‌ನಿಂದ ಹೊರಗ ಬರತ್ತಗೆ ಯಾರರ ಕರದೇ ಕರೀತಾರ ಎನ್ನುವ ಸುದ್ದಿ ಕೇಳಿ, ಟಿಕೇಟ್ ತೆಗಸಾಕ ಶೆಟ್ರ ಈರಣ್ಣನ ಹತ್ತಿರ ಸಾಲಾ ಮಾಡಿ ರೊಕ್ಕಾ ತಂದೇನಿ. ಇಲ್ಲಿ ನೋಡಿದರ ಸಿಕ್ಕಾಪಟ್ಟೆ ಜನ. ನಾ ಬರತೇನ್ರಿ ಕೆಲಸಕ್ಕೆ, ನಾ ಬರತೇನ್ರಿ ಕೆಲಸಕ್ಕ ಅಂತಾ ಮುಗಿಬಿದ್ದಾರ. ಹೊರಳಿ ನಮ್ಮೂರಿಗೆ ಹೋಗುವುದು ಹ್ಯಾಂಗ್ ? ಶೆಟ್ರ ಸಾಲ ಕೊಡುವುದು ಹೇಗೆ ? ಅಂತ ಮೆಲುಕು ಹಾಕುತ್ತಾ ಒಂದು ಗುಂಪಿನ್ಯಾಗ ಅವನು ಬಂದು ಸೇರಿದ. ಮೇಸ್ತ್ರಿ ಹಿಂದ ಮುಂದ ಅಕ್ಕಪಕ್ಕಾ ನಾ ಬರತೇನ್ರಿ ನಾ ಬರತೇನ್ರಿ ಅಂತಿದ್ದರು. ಅದರಾಗ ಇವನು

ಹೋಗಿ ನಾನು ಬರತೇನ್ರಿ ನಾನು ಬರತೇನ್ರಿ ಅಂತಿದ್ದ. ಒಳಗಿನ ಮನಸ್ಸಿನ್ಯಾಗ ಶೆಟ್ರ ಸಾಲ ಕೊಡುವಷ್ಟರ ಪಗಾರ ಕೊಡಲಿ. ಅನ್ನುವುದು ಕಟೀತಿತ್ತು. ಮ್ಯಾಗ ನಾನೂ ಬರತೇನ್ರಿ ನಾನೂ ಬರತೇನ್ರಿ ಅಂತ ಒಂದೇ ಸಮನೆ ಹಲುಬುತ್ತಿದ್ದ. ನನ್ನ ಕೆಲಸಕ್ಕೆ ಕರಕರ್‍ರಿ ಅನ್ನುತ್ತಾ ಮೇಸ್ತ್ರಿ ಬೆನ್ನ ಹಿಂದೆಯೇ ಹೊರಟ. ಮೇಸ್ತ್ರಿ ಇಲ್ಲ ಹೋಗೋ ಮಾರಾಯಾ ಅಂತ ಜೋರಾಗಿ ದೂಡಿದಾ. ಕಾಲುಜಾರಿ ನೆಲಕ್ಕೆ ಬಿದ್ದ. ಇವಾ ಪಿಳಿಪಿಳಿ ಕಣ್‌ಬಿಡುತ್ತಾ ಅಲ್ಲಿಯೇ ಕುಳಿತ. ಇವನ ಮುಂದೆ ಠೀವಿಯಿಂದ ಅಲೆದಾಡುತ್ತಿದ್ದ ಶ್ರೀಮಂತ ಪ್ರಯಾಣಿಕರನ್ನು ನೋಡುತ್ತಾ ವಿಚಾರ ಮಾಡಲಿಕ್ಕೆ ಶುರುವಾದನು. ಮರಳಿ ಟಿಕೇಟ್‌ಗಾಗುವಷ್ಟು ಹಣವನ್ನು ಸಂಪಾದನೆ ಮಾಡಬೇಕೆನ್ನುವ ಆಸೆ ಅವನಲ್ಲಿ ಆಗಾಗ್ಗೆ ಹಾತೊರೆಯುತ್ತಿತ್ತು. ಹಮಾಲಿ ಮಾಡಲು ನಿರ್ಧರಿಸಿ ಹಮಾಲಿ ಕೆಲಸ ನೋಡಲು ಪ್ರಾರಂಭಿಸಿದನು. ಈ ಕೆಲಸವೂ ಸಹ ಅವನಿಗೆ ಸಿಗಲಿಲ್ಲ. ಏಕೆಂದರೆ ಈಗಾಗಲೇ ಸರಕಾರದಿಂದ ಪರವಾನಿಗೆ ಪಡೆದ ಹಮಾಲರು ಇದ್ದರು. ಅವರಿಗೇ ಸರಿಯಾಗಿ ಕೆಲಸ ಇದ್ದಿದ್ದಿಲ್ಲಾ. ಹೀಗಿರುವಾಗ ಇವನಿಗೆಲ್ಲಿ ಸಿಗಬೇಕು. ಇವನಲ್ಲಿಗೆ ಒಬ್ಬ ಪೊಲೀಸ್ ಬಂದು ಇಲ್ಲ್ಯಾಕ ಕುಂತಿ ಅಂದ. ಪೊಲೀಸ್‌ನು ಹೀಗೆ ಜಬರದಸ್ತ ಕೇಳಿದಾಗ ಇವನು ಹೆದರಿಕೊಂಡು ತೊದಲು ನುಡಿಯಲಿಕ್ಕೆ ಪ್ರಾರಂಭಿಸಿದ. ಸರಿಯಾಗಿ ಮಾತಾಡಕ್ಕ ಬರತೈತ ಇಲ್ಲಾ, ಸರಿಯಾಗಿ ಮಾತಾಡು ಎಂದು ಮತ್ತೊಮ್ಮೆ ಜಬರಿಸಿದ. ನಿಧಾನವಾಗಿ 'ಕೆಲಸಕ್ಕೆ ಬಂದಿದ್ರಿ' ಅಂದ. 'ಮತ್ತ ಹೋಗಿಲ್ಲೇನು' ಅಂದರು. ಕೆಲಸ ಸಿಗಲಿಲ್ಲರಿ ಅಂದ. 'ಬಾ ಇಲ್ಲೆ ಹಂಗಾರ' ಪೊಲೀಸ್ ಕೈ ಹಿಡಿದ. ಆಗ ಇವನ ಮೈಯೆಲ್ಲಾ ತಣ್ಣಗಾಗಿ 'ಯಾಕರ್‍ರೀ ಸಾಹೇಬ್ರ ನಾ ಏನೂ ಮಾಡೇನ್ರಿ, ನಾ ಏನು ಮಾಡಿಲ್ರಿ, ನಾ ಸುಮ್ಮನೆ ಕುಂತೇನ್ರಿ, ನಾ ಏನೂ ಕಳವು ಮಾಡಿಲ್ರಿ, ಈ ರೊಟ್ಟಿ ಗಂಟು ಬಿಟ್ಟ ನನ್ನ ಕಡೆ ಏನೂ ಇಲ್ರಿ, ನಾ ಅಂಥಾವಲ್ರಿ, ನಿಮ್ಮ ಕೈ ಮುಗಿತೇನ್ರಿ, ಬಿಡ್ರಿ ಸಾಹೇಬ್ರ ಬಿಡ್ರಿ ಸಾಹೇಬ್ರ, ಬ್ಯಾಡ್ರೀ ಸಾಹೇಬ್ರ, ಸ್ಟೇಷನ್‌ಕ್ಕ ಒಯ್ಯಬ್ಯಾಡ್ರಿ, ಅಲ್ಲೆ ನನ್ನ ಹೊಡಿಬ್ಯಾಡ್ರಿ, ಮುಂಜಾನೆಯಿಂದ ಇಲ್ಲೆ ಕುಂತೇನ್ರಿ, ನಾ ಕಳ್ಳ ಅಲ್ರಿ, ನನ್ನ ಮಾತ ನಂಬ್ರಿ ಸಾಹೇಬ್ರ.'

ನಿನ್ನ ಸ್ಟೇಷನ್‌ಗೆ ಒಯ್ಯೋದಿಲ್ಲೋ. ಅಲ್ಲೊಂದು ಕೆಲಸ ಐತಿ. ಬಾ ಮಾಡುವಂತಿ ಅನ್ನುವಷ್ಟರಲ್ಲಿ ಇವನಿಗೆ ಸ್ವರ್ಗವೇ ಇಳಿದಂತಾಯಿತು. ಎಂಥಾ ಕೆಲಸ ಅಂತ ಸಹ ಕೇಳಲಿಲ್ಲಾ. ಎಷ್ಟು ಪಗಾರ ಕೊಡತೀರಿ ಅನ್ನುವ ಶಬ್ದವೇ ಬರಲಿಲ್ಲಾ. ಸಂತೋಷದಿಂದ ಅವರ ಹಿಂದೆ ಹಿಂದೆ ನಡೆದ. ಮುಂದೆ ಹೋಗತ್ತಿಗೆ ಅಲ್ಲೇ ಮುನ್ಸಿಪಾಲ್ಟಿ ಹೆಣ ಬಿದ್ದಿತ್ತು. ಆ ಹೆಣದ ಸುತ್ತಲೂ ಒಂದು ರೂಪಾಯಿ ನಾಲ್ಕಾಣೆ ನಾಣ್ಯಗಳು ಬಿದ್ದಿದ್ದವು. ಅವನೆಲ್ಲ ಆರಿಸಲಿಕ್ಕೆ ಇವನಿಗೆ ಹೇಳಿದರು. ಇವಾ ಹಣವನ್ನು ಆರಿಸಿ ಪೊಲೀಸ್‌ರ ಕೈಯಲ್ಲಿ ಕೊಡಲಿಕ್ಕೆ ಹೋದ. ಅವರು ನಿನ್ನ ಚೀಲದಾಗ ಹಾಕು ಅಂತ ಹೇಳಿ, ಚೀಲಾ ಇಸಗೊಂಡರು. ಇನ್ನಿಬ್ಬರು ಪೊಲೀಸ್‌ರು ಕೂಡಿ ಅರಿವಿಮ್ಯಾಲೆ ಹೆಣವನ್ನು ಹಾಕಿದರು. ಅರಿವಿ ಕಟ್ಟಿದ ಮ್ಯಾಲೆ ಜೀಪಿನಲ್ಲಿ ಹಾಕಿಕೊಂಡು

ಶಂಕ್ರಪ್ಪನನ್ನು ಕುಳ್ಳಿರಿಸಿಕೊಂಡು ಅದರ ಅಂತ್ಯಕ್ರಿಯೆ ಮಾಡಲು ಹೋದರು. ಅಂತ್ಯಕ್ರಿಯೆ ಮಾಡಿದ ಮೇಲೆ ಪೊಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋಗಿ, ಅಲ್ಲಿ ಇವನಿಗೆ ಕೈ-ಕಾಲು ತೊಳೆದುಕೊಳ್ಳಲು ಹೇಳಿ ಇವನ ಚೀಲವನ್ನು ಮತ್ತು ಆರಿಸಿದ ಹಣವನ್ನು ಇವನಿಗೆ ಕೊಟ್ಟು ಕಳುಹಿಸಿದರು. ಆಗ ಇವನು ಸಂತೋಷಗೊಂಡು, ಮ್ಯಾಲೆ ಇವನ ಮನಸ್ಸಿನಲ್ಲಿ ಪುಣ್ಯದ ಕೆಲಸ ಮಾಡಿದೆ ಎನ್ನುವ ಹಿರಿಮೆ ಸೇರಿತ್ತು. ಕಾರಣ ಸ್ಮಶಾನಕ್ಕೆ ಹೋಗುವುದು ಶಿವನ ಭೆಟ್ಟಿಯಾಗಲಿಕ್ಕೆ ಅಥವಾ ಭೇಟಿಯಾಗುವದು ಎನ್ನುವ ನಂಬಿಕೆ ನಮ್ಮ ಹಿಂದೂ ಸಂಪ್ರದಾಯದಲ್ಲಿದೆ. ಹೀಗೆ ಸಂತೋಷಪಡುತ್ತಾ ಸ್ಟೇಷನ್‌ಗೆ ಬಂದು ತಲುಪಿದನು. ಇದ್ದಂಥ ಹಣದಲ್ಲಿ ಟಿಕೆಟ್ ತೆಗೆದುಕೊಂಡು ಉಳಿದ ಹಣವನ್ನು ಕಿಸೆಕ್ಕ ಹಾಕಿಕೊಂಡು, ತನ್ನ ಊರ ಕಡೆ ಹೋಗುವ ಗಾಡಿ ಎಲ್ಲಿ ನಿಂತಿದೆ ಎಂದು ಕೇಳಿ ಆ ಪ್ಲಾಟ್‌ಫಾರ್ಮ ಕಡೆ ಹೊರಟ. ನಿಂತಿರುವ ಗಾಡಿಯ ಒಳಗೆ ಹೋಗಿ ಕುಳಿತ. ಊಟ ಮಾಡದೆ ಇದ್ದದ್ದರಿಂದ ರೊಟ್ಟಿಗಂಟು ಹಾಗೆಯೇ ಇದ್ದಿತ್ತು. ಆ ಚೀಲವನ್ನು ಸಹ ತನ್ನ ಪಕ್ಕಕ್ಕೆ ಇಟ್ಟು ಕುಳಿತುಕೊಂಡ. ಚಹ ಕುಡಿಯುವ ಚಟ ಆಗಿರಬೇಕು, ಮಗ್ಗಲಿಗೆ ಇದ್ದ ಕ್ಯಾಂಟೀನ್‌ನಲ್ಲಿ ಚಹಾ ಕುಡಿದು ತನ್ನ ಅಂಗಿಯ ಕಿಸೆಗೆ ಕೈ ಹಾಕಿ ನೋಡಿದ. ಕಿಸೆಯ ಮೂಲೆಯಲ್ಲಿ ಅಲ್ಲೊಂದು ಇಲ್ಲೊಂದು ಅಡಿಕೆ ಚೂರುಗಳಿದ್ದವು. ಬಾಡಿದ ಅರ್ಧ ಎಲೆ ಸಹ ಇತ್ತು. ಅಲ್ಲಿಯೇ ಅಡಿಕೆ ಹಾಕುತ್ತಿದ್ದ ಯಾರೋ ಒಬ್ಬರನ್ನು ನೋಡಿ ಅವರಲ್ಲಿ ಸುಣ್ಣ ಇಸಗೊಂಡು ಎಲಿ ಅಡಿಕೆ ತಿನ್ನುತ್ತ ಸೀಟಿನ ಮೇಲೆ ಕುಳಿತುಕೊಂಡ. ತನ್ನ ಮಗ್ಗಲಿಗೆ ರೊಟ್ಟಿಯ ಚೀಲ ಸಹ ಇತ್ತು. ಗಾಡಿಯ ತುಂಬಾ ಜನ ಹತ್ತಿದ್ದರು. ಎಲ್ಲಾ ಸೀಟುಗಳು ತುಂಬಿದ್ದವು. ಅಲ್ಲೊಬ್ಬರು, ಇಲ್ಲೊಬ್ಬರು ನಿಂತುಕೊಂಡರು. ಇವನು ತನ್ನ ಪಕ್ಕದಲ್ಲಿದ್ದ ಚೀಲವನ್ನು ತೆಗೆದುಕೊಳ್ಳಲೇ ಇಲ್ಲ. ಒಬ್ಬರು ಕುಳಿತುಕೊಳ್ಳುವಷ್ಟು ಜಾಗ ಆ ಚೀಲ ಇಟ್ಟಲ್ಲಿ ಇತ್ತು. ಯಾರು ಅದನ್ನು ಮ್ಯಾಲೆ ಇಡರಿ ಕುಳಿತುಕೊಳ್ಳುತ್ತೇವೆ ಎನ್ನಲಿಲ್ಲ. ಏಕೆಂದರೆ ಯಾರಾದರೂ ಕುಳಿತಿರಬೇಕು ಬಿಡು. ಚೀಲ ಇಟ್ಟು ಯಾತಕ್ಕರ ಹೋಗಿದ್ದಾರು ಎಂದು ಸುಮ್ಮನೆ ಇದ್ದರು. ಯಾರೋ ಒಬ್ಬ ತಡಿಯಲಾರದೆ ಯಾರ್‍ದು ಚೀಲ ಎಂದು ಕೇಳಿದ. ಇವನು ನನ್ನದು, ಕುಳಿತುಕೊಳ್ಳಿರಿ ಎಂದು ಹೇಳಿ ತನ್ನ ಚೀಲ ತೊಡಿಮ್ಯಾಲೆ ಇಟ್ಟುಕೊಂಡು ಕುಳಿತ. ಆಗ ಕುಳಿತುಕೊಂಡ ಈ ಮನುಷ್ಯ ನನಗೆ ಸೀಟು ಕೊಟ್ಟ ಎನ್ನುವ ಭಿಡೆಯಿಂದಲೂ ಈ ಶಂಕ್ರಪ್ಪನನ್ನು ಯಾವೂರು ಎಂದು ಕೇಳಿ ಮಾತನಾಡಿಸಲಿಕ್ಕೆ ಪ್ರಾರಂಭಿಸಿದ. ಆಗ ಇವಾ ತನ್ನ ಎಲ್ಲಾ ಕಥೆಯನ್ನು ಹೇಳಿದ. ಇವನ ಕಥೆ ಕೇಳಿ ಆ ಮನುಷ್ಯ ಇವನ ಮೇಲೆ ಕರುಣೆ ಬಂದು ಪಾಪ ಅಂತ ಮನಸ್ಸಿನ್ಯಾಗ ಮರಗಿದ. ಇವಾ ಗೌಂಡಿ ಕೆಲಸ ಮಾಡುವವಾ. ಈ ಗೌಂಡಿ ಸ್ವಲ್ಪ ಹೊತ್ತು ವಿಚಾರ ಮಾಡಿ ನಾಳೆ ಬಾ ನನ್ನ ಕೂಡ ನಿನ್ನನ್ನು ಕರಕೊಂಡು ಹೋಗಿ ನಮ್ಮ ಮೇಸ್ತ್ರಿಗೆ ಹೇಳಿ ಕೆಲಸ ಕೊಡಸ್ತೇನಿ. ತಪ್ಪಿಸಬ್ಯಾಡ, ನಾಳೆ ನಾನು ಮುಂದಿನ ಡಬ್ಬ್ಯಾಗ ನಿನ್ನ ನೋಡಿ ಹತ್ತುತ್ತೇನೆ. ತಪ್ಪಿಸಬ್ಯಾಡ ಅಂತ ಹೇಳಿ ತನ್ನ ಸ್ಟೇಷನ್ ಬಂತು ಇಳಿದು ಹೋದ. ಮುಂದೆ ಎರಡು ಸ್ಟೇಷನ್

ತಡಾದಿಂದ ಇವನ ಸ್ಟೇಷನ್ ಬಂತು. ಇವನು ಇಳಿದು ತನ್ನ ಊರ ಕಡೆ ಇರುವ ದಾರಿ ಹಿಡಿದು ನಡಕೊಂತ ಹೋದ. ಅವನ ಹೆಂಡತಿ ದಾರಿ ಕಾಯುತ್ತ ಬಾಗಿಲದಾಗ ನಿಂತಿದ್ಲು. ತನ್ನ ಗಂಡನ ನೋಡಿದ ತಕ್ಷಣ ಒಳಗೆ ಹೋಗಿ ನೀರು ತುಂಬಿಕೊಂಡು ಬಂದು ಚರಗಿ ಕೊಟ್ಟು, ಕೈಯಲ್ಲಿಯ ಚೀಲ ಇಸಗೊಂಡಳು. ಚೀಲ ವಜ್ಜೆ ಇರುವದನ್ನು ನೋಡಿ ಹೆಂಡತಿ ಒಳಗೊಳಗ ಸಂತೋಷಪಡಹತ್ತಿದಳು. ಏಕೆಂದರೆ ತನ್ನ ಗಂಡನಿಗೆ ದೊಡ್ಡ ರೊಕ್ಕದ ಕೆಲಸ ಸಿಕ್ಕಿರಬೇಕು. ಮಕ್ಕಳಿಗೆ, ಹೆಂಡತಿಗೆ ಅಂತ ಪ್ಯಾಟಾಗಿಸಿಂದ ಏನಾರ ತಂದಿರಬೇಕು ಅಂತ ಆನಂದದಿಂದ ಚೀಲವನ್ನು ಬಿಚ್ಚಲು ಪ್ರಾರಂಭಿಸಿದಳು. ಬಂಗಾರದಂತ ಎರಡು ಮಕ್ಕಳು ಸಹ ನಮ್ಮಪ್ಪ ಏನಾರ ತಂದಿರಬೇಕು ಅಂತ ತಾಯಿ ಬಿಚ್ಚುವ ಚೀಲವನ್ನು ನೋಡುತ್ತಾ ಕುಳಿತವು. ಬಿಚ್ಚಿದರೆ ಅದೇ ರೊಟ್ಟಿ, ಅದೇ ಪಲ್ಲೆಯಿತ್ತು. ಅದನ್ನೇ ಆ ಎರಡು ಮಕ್ಕಳು ನನಗೆ ಕೊಡಬೇ, ನನಗೆ ಕೊಡಬೇ ಅಂತ ಕೇಳಿ ತಾಯಿ ಕೈಯಿಂದ ಒಂದೊಂದು ರೊಟ್ಟಿ ಇಸಗೊಂಡು ತಿನ್ನಲಿಕ್ಕೆ ಪ್ರಾರಂಭಿಸಿದವು. ಆದರೆ ಹೆಂಡತಿಯ ಸಂತೋಷದ ಚಿಗುರು ಬಾಡಿ ಹೋತು ನನ್ನ ಗಂಡ ಏಕೆ ಊಟ ಮಾಡಿಲ್ಲ ಎನ್ನುವ ಕೊರಗು ಪ್ರಾರಂಭವಾಯಿತು. ಯಾವಾಗಲೂ ಗಂಡನ ಸುಖ ದುಃಖವನ್ನು ವಿಚಾರಿಸುವ ಹೆಂಡತಿಗೆ ಈ ಕೊರಗು ಸಹಜವಾದುದೇ. ಗಂಡನು ಒಳಕ್ಕೆ ಬಂದ ಕೂಡಲೇ ಹೆಂಡತಿಯು ಯಾಕ್ರೀ ಊಟ ಮಾಡಿಲ್ಲ. ಆರಾಮ ಇಲ್ಲೇನ್ರಿ, ಅಂತ ಕೇಳಿದಳು. ಇವಾ ಆರಾಮ ಇದ್ದೇನಿ ಕೆಲಸ ಸಿಗಲಿಲ್ಲಾ, ನಾಳೆ ಮತ್ತೆ ಹೋಗಬೇಕು. ಹಸಿವು ಆಗೈತಿ ರೊಟ್ಟಿ ಹಚ್ಚಿಕೊಡು ಎಂದು ಹೇಳಿ, ಊಟ ಮಾಡಿಕೊಂಡು ನಾಳಿನೂ ಬೇಗ ಎದ್ದು ರೊಟ್ಟಿ ಮಾಡು. ಗಾಡ್ಯಾಗಾ ಬರೂಮುಂದ ಒಬ್ಬಾಂವಾ ಕೆಲಸಾ ಕೊಡಸ್ತೇನಿ ಅಂತ ಹೇಳ್ಯಾನ. ತಪ್ಪಿಸಬ್ಯಾಡ, ಅಂತ ಹೇಳ್ಯಾನ. ಮುಂದ ಡಬ್ಯಾಗ ಹತ್ತಬೇಕಂತ ಅವನು ಅದ ಡಬ್ಯಾಗ ಹತ್ತತೇನಿ ಅಂತ ಹೇಳ್ಯಾನ. ಅದಕ್ಕ ಬೇಗ ಎದ್ದು ರೊಟ್ಟಿ ಮಾಡಿ ಕಟ್ಟು, ಅಂತ ಹೇಳಿ, ಊಟ ಮಾಡಿ ಕೈತೊಳ್ಕೊಂಡು ಮಗ್ಗಲದ ಮನಿ ನೀಲಪ್ಪ ಮಾಸ್ತರ ಕಡೆ ಅಡಿಕಿ ಎಲಿ ಇಸಗೊಂಡು, ಅಡಕಿ ಎಲಿ ತಿನ್ನುತ್ತಾ ಕುಳಿತುಕೊಂಡ. ಹೆಂಡತಿ ಬಂದು ಹಾಸಿಗಿ ಹಾಸಿದಳು. ಅದ ಕೆಲಸದ ಹಪಾ ಹಪಾದಾಗ ಮಲಗಿಕೊಂಡಿದ್ದ. ಮುಂಜಾನೆ ಎದ್ದು ರೊಟ್ಟಿ ಚೀಲ ಹಿಡಕೊಂಡು ಗಾಡಿ ಹತ್ತಿಹೋದ. ಆ ಗೌಂಡಿನೂ ಸಹ ಭೆಟ್ಟಿಯಾದ. ಇಬ್ಬರೂ ಕೂಡಿಕೊಂಡು ಕುಳಿತರು. ಇಬ್ಬರೂ ಮೇಸ್ತ್ರಿ ಕಡೆ ಹೋದರು. ಮೇಸ್ತ್ರಿಗೆ ಈ ಶಂಕ್ರಪ್ಪನನ್ನು ಪರಿಚಯ ಮಾಡಿಸಿ ನಾವು ಅಲ್ಲೇ ಕೆಲಸ ಮಾಡುವಲ್ಲೆ ಒಂದಾಳು ಹೆಚ್ಚಿಗೆ ಬೇಕಲ್ರಿ, ಅಲ್ಲೇ ಕರ್ಕೊಂಡು ಹೋಕ್ಕನ್ರಿ ಅಂತ ಹೇಳಿದ. ಹೌದಲ್ಲ, ಹಂಗಾದ್ರ ಕರ್ಕೊಂಡು ಹೋಗು ಅಂತ ಮೇಸ್ತ್ರಿ ಹೇಳಿದ. ಇಬ್ಬರೂ ಕೂಡಿ ಕೆಲಸ ಮಾಡುವಲ್ಲಿಗೆ ಹೋದರು. ದೊಡ್ಡಂಗಿ ಕಳೆದು ಕೆಲಸಕ್ಕೆ ನಿಂತುಕೊಂಡರು. ಶಂಕ್ರಪ್ಪ ಉಸುಕು, ಸಿಮೆಂಟ್ ಕಲಿಸಿದ. ಇನ್ನೇನು ಬುಟ್ಟಿಗೆ ಹಾಕಿಕೊಂಡು ಗೌಂಡಿ ಕೈಯಲ್ಲಿ ಕೊಡಬೇಕು ಎನ್ನುವಷ್ಟರಲ್ಲಿಯೇ ಅವನ ಹೆಂಡತಿ ಬಂದು ಏಳ್ರಿ, ರೊಟ್ಟಿ ಮಾಡಿ ಕಟ್ಟೇನ್ರಿ. ಕೈಕಾಲು ಮಾರಿಗೆ

ಬಿಸಿ ನೀರು ತಂದೇನ್ರಿ ತೊಗೋರಿ ಅಂತ ಹೇಳಿ ಚರಗಿ ತಂದು ಇಟ್ಟಳು. ಆಗ ಈತ ಪಟಕ್ಕನೆ ಕಣ್ಣು ತೆರೆದು ನೋಡತಾನ. ತನ್ನ ಮನೆಯೇ ಕಾಣಿಸುತ್ತಿದೆ. ಹಾಸಿಗೆಯ ಮೇಲೆ ಕುಳಿತುಕೊಂಡು ತನ್ನ ತಂದೆ ತಾತ ಹೇಳಿದ ಮಾತನ್ನು ಮೆಲಕು ಹಾಕುತ್ತಾ, ಹಿಂದೆ ನಮ್ಮ ತಾತನ ಕಾಲದಾಗ ಬಹಳ ಮಳಿ ಆಗ್ತಿತ್ತಂತ, ಹೊಲದಾಗ ಕೆಲಸ ಮಾಡಾಕ ಆಳ ಸಿಗುತ್ತಿದ್ದಿಲ್ಲಂತ, ಹೊಲದಾಗ ಹುಲ್ಲು, ಕಸ ಬೆಳೆದು ಬೀಳು ಬೀಳುತ್ತಿದ್ವಂತ. ಆದರೆ ಈಗ ಹುಲ್ಲೂ ಇಲ್ಲ, ಕಸಾನೂ ಇಲ್ಲ, ಬರಡು ಭೂಮಿ. ಕೆಲಸ ಮಾಡಾಕ ಕೆಲಸ ಇಲ್ಲ. ಬ್ಯಾರೆ ಊರಿಗೆ ಹೋಗಿ ಕೆಲಸ ಕೇಳಿದರ 'ನಾಯಿ ಜಬರಿಸಿಧಂಗ ಜಬರಸ್ತಾರ' ಎಂದು ಯೋಚಿಸುತ್ತಾ ಏಕೆ ಹೀಗಾಯಿತು. ಇದಕ್ಕೆಲ್ಲಾ ನಮ್ಮದೇ ತಪ್ಪು. ಸಾವುಕಾರ ಮಾತು ಕೇಳಿ ಊರಿನ ಮರಗಳನ್ನು ಕಡ್‌ದ್ವಿ. ಊರಿನ ಪಕ್ಕದ ಅಡವಿ ನಾಶ ಮಾಡಿದ್ವಿ.

'ಅಡವಿ ಇಲ್ಲದೆ ಮಳೆ ಇಲ್ಲದಾಯಿತು
ಮಳೆ ಇಲ್ಲದೆ ಬೆಳೆ ಇಲ್ಲದಾಯಿತು.
ಬೆಳೆ ಇಲ್ಲದೆ ಕೂಲಿ ಇಲ್ಲದಾಯಿತು
ಇದಕ್ಕೆಲ್ಲಾ ನಮ್ಮದೇ ತಪ್ಪು, ನಮ್ಮದೇ ತಪ್ಪು, ನಾವು ಮಾಡಿದ್ದೇ ತಪ್ಪು'.

●

# ದೈವದ ಚಿತ್ತಾರ

● ಸುಮಾ ಜೋಶಿ

ರಂಜನಾ, ರಾಜಶ್ರೀ ಇಬ್ಬರೂ ಸ್ನೇಹಿತೆಯರು. ಒಂದೇ ಕ್ಲಾಸಿನಲ್ಲಿ ಅವರಿಬ್ಬರೂ ಓದುತ್ತಿದ್ದುದು. ಇಬ್ಬರ ಪ್ರಾಯವೂ ಒಂದೇ. ರಂಜನಾ ತಂದೆ - ತಾಯಿಯರಿಗೊಬ್ಬಳೇ ಮಗಳು. ತುಂಬ ಮರ್ಯಾದಸ್ತರು. ರಾಜಶ್ರೀಗೆ ಒಬ್ಬ ಅಣ್ಣ ಇದ್ದನು. ಒಂದು ವಿಷಯದ ಹೊರತು ಬೇರೆಲ್ಲಾ ವಿಷಯಗಳಲ್ಲೂ ಇವರಿಬ್ಬರೂ ಒಂದು.

ರಂಜನಾಳನ್ನು ರಾಜಶ್ರೀಯ ಅಣ್ಣನಿಗೆ ಕೊಡುವುದು ನಿಶ್ಚಯವಾಗಿತ್ತು. ಚಿಕ್ಕಂದಿನಿಂದಲೂ ರಂಜನಾಗೆ ರಾಜಶ್ರೀಯ ಅಣ್ಣ ಪ್ರಸನ್ನನಲ್ಲಿ ಪ್ರೀತಿ. ಅವಳ ತಂದೆ - ತಾಯಿಯರೂ ಪ್ರಸನ್ನನಿಗೆ ಮಗಳನ್ನು ಕೊಡಲು ಅನುಮತಿಸಿದ್ದರು. ಪ್ರಸನ್ನನಿಗೂ ಒಪ್ಪಿಗೆಯಿತ್ತು. ಬೇರೇನೂ ಅಭ್ಯಂತರಗಳಿಲ್ಲದುದರಿಂದ ರಂಜನಾ ಬಿ.ಎ. ಆದೊಡನೆಯೇ ಮದುವೆ ಎಂದು ನಿಶ್ಚಯವಾಗಿತ್ತು.

ಈ ವಿಷಯುದಲ್ಲಿ ರಾಜಶ್ರೀಯ ಒಪ್ಪಿಗೆ ಇಲ್ಲ. ರಂಜನಾಳನ್ನು ಪ್ರಸನ್ನಗೆ ಕೊಡಬಾರದೆಂದಲ್ಲ - ರಂಜನಾನೂ ತನ್ನಂತೆಯೇ ಇರಬೇಕೆಂದು. ಪ್ರೀತಿಯ, ಮದುವೆಯ ಸುದ್ದಿ ಎತ್ತಿದರೆ ರಾಜಶ್ರೀಗೆ ಕೋಪ ಬರುತ್ತಿತ್ತು. ಕೈಗಳಿಂದ ಕಿವಿಗಳನ್ನು ಮುಚ್ಚಿಕೊಡು 'ಥೂ' ಎನ್ನುತ್ತಿದ್ದಳು. 'ನನ್ನೊಡನೆ ಪ್ರೀತಿಯ, ಮದುವೆಯ ಬಗ್ಗೆ ಮಾತೆತ್ತಬೇಡಿ' ಎನ್ನುವುದು ರಾಜಶ್ರೀಯ ಉತ್ತರ, ಮದುವೆಯ ಪ್ರಸ್ತಾಪಕ್ಕೆ. ಈ ಪ್ರೀತಿ - ಮದುವೆ ವಿಷಯಕ್ಕಾಗಿ ರಂಜನಾ - ರಾಜಶ್ರೀಗೆ ಪ್ರತಿದಿನವೂ ವಾಗ್ವಾದ.

ಒಂದು ದಿನ ರಾತ್ರಿ ಆ ಮಾತು ಈ ಮಾತು ಆಡುತ್ತ ಕೊನೆಗೆ ರಂಜನಾ -

'ಲೇ ರಾಜಿ, ನಿನ್ನಣ್ಣನ ಕಾಗ್ದ ಬಂತೇನೇ ?' ಎಂದು ಕೇಳಿದಳು. 'ಇದೆಂಥ ಹುಚ್ಚೇ ನಿನ್ಗೆ ? ಮೊನ್ನೆ ತಾನೆ ಅವನ ಕಾಗ್ದ ಬಂದಿದೆ. ಅದ್ಕಿನ್ನೂ ಉತ್ತರವೇ ಬರ್ದಿಲ್ಲ ನಾನು - ನನ್ನುತ್ತರ ಹೋಗೋ ಮೊದ್ಲು ಅವನು ಬರೀತಾನೇನೋ' ಎಂದು ಹೇಳಿಕೊಂಡು ರಾಜಿ ನಗತೊಡಗಿದಳು.

'ನಗೋದ್ಯಾಕೇ ?' ರಂಜನಾ ಕೇಳಿದಳು.

'ನಿನ್ಹುಚ್ಚು ನೋಡಿ'.

'ತಡೀ, ಒಂದ್ಸಲ ನಿನ್ಗೂ ಹುಚ್ಚಿಡೀದೇ ಇರೋಲ್ಲ'

'ಈ ಜನ್ಮದಲ್ಲಿ ಅಂಥ ಹುಚ್ಗೆ ಅವಕಾಶವಿಲ್ಲ'

'ನೋಡೋಣ್ವಂತೆ'

'ನೋಡೋದೇನು ! ನೋಡ್ತಾಗೇ ಇದೆ - ನಾನು ಸನ್ಯಾಸಿನಿ ತರಹ'

'ಅರ್ಜುನ ಸನ್ಯಾಸಿ, ರಾವಣ ಸನ್ಯಾಸಿ ತರಹನಾ ......'

'ಮುಚ್ಕೊಳ್ಳೇ ಬಾಯಿ - ಹೆಚ್ಮಾತಾಡ್ಬೇಡ - ಆಮೇಲೆ ಕೋಪ ಬರುತ್ತೆ ನೋಡು....'

'ಸನ್ಯಾಸಿನಿಗಳಿಗೆ ಕೋಪ ಬರುತ್ತೇನೇ ?'

'ನೋಡ್ಮತ್ತೆ - ತೆಗೆದ್ಯಲ್ಯಾ ನಿನ್ನ ತರ್ಕಾನ. ನನ್ಮಾತು ನಂಬು - ನಾನು ಖಂಡಿತವಾಗಿಯೂ ಪ್ರೀತಿಸುವದಿಲ್ಲ, ಮದ್ವೆ ಆಗೋಲ್ಲ.'

'ನೀನು ಖಂಡಿತವಾಗಿಯೂ ಪ್ರೀತಿಸ್ತಿಯಾ, ಮದ್ವೆ ಆಗೇ ಆಗ್ತಿ ?'

'ನಿನ್ಹಾಗೆ ಸಂಸಾರದಲ್ಲಾಗ್ಲೀ, ಪ್ರೀತಿಯ ಹಳ್ಳಕ್ಕೆ ಬೀಳೋ ಆಸೆ ನನ್ಗೇನಿಲ್ಲ'

'ನನ್ಗಿಂತ್ಲೂ ದೊಡ್ಡ ಹಳ್ಳದಲ್ಲಿ ಬೀಳ್ತಿ ನೋಡು ನೀನು. ಆವಾಗ ಹೇಳ್ತೀನಂತೆ ತಡಿ'

'ಆಗ್ಲೀ - ಹಾಗಾದಾಗ ಹೇಳ್ವೀನು - ಈಗ್ಸುಮ್ನೆ ಬಾಯಿ ಮುಚ್ಕೊಂಡು ಬಿದ್ಕೋ'

'ಬಿದ್ಕೋತೀನಿ - ಆದ್ರೆ ನಿನಗೊತ್ತಾ, ಇಲ್ಲಿ ಕೇಳೆ -

ಅಯಸ್ಕಾಂತದ ಬಳಿ ಕಬ್ಬಿಣವನ್ನು ಒಯ್ದರೆ ಆ ಅಯಸ್ಕಾಂತ ಕಬ್ಬಿಣವನ್ನು ಆಕರ್ಷಿಸುವುದಿಲ್ಲವೆ ? ಆಗ ಆ ಅಯಸ್ಕಾಂತಕ್ಕೆ ಕಬ್ಬಿಣ ಬೇಕು. ಅಯಸ್ಕಾಂತ - ಕಬ್ಬಿಣಗಳ ನಡುವಿರುವ, ಹೃದಯ - ಹೃದಯಗಳ ನಡುವೆ ಇರುವ ಅನ್ಯೋನ್ಯ ಆಕರ್ಷಣೆಯೇ ಪ್ರೀತಿ. 'ನಾನು ನಿನ್ನವಳು, ನೀನು ನನ್ನವನು' ಎಂಬ ಆಪ್ತ ಒಡಂಬಡಿಕೆಯೇ, ಆತ್ಮೀಯತೆಯ ಅನುಬಂಧವೇ ಪ್ರೀತಿ. ಕಬ್ಬಿಣವನ್ನು ಆಕರ್ಷಿಸುವುದು ಅಯಸ್ಕಾಂತದ ಸ್ವಾಭಾವಿಕ ಗುಣ ಆದಂತೆ, ಪ್ರೀತಿಸುವುದೂ ಎಲ್ಲ ಮನುಷ್ಯರ ಹುಟ್ಟುಗುಣ. ಪ್ರೇಮಮಯನಾದ ಆ ದೇವರು ಎಲ್ಲರ ಅಂತರ್ಯದಲ್ಲಿರುವದರಿಂದಲೇ, ಉರಿಯುವ ದೀಪದ ಸುತ್ತಲೂ ಬೆಳಕಿರುವಂತೆ, ಕಾದ ಇಸ್ತ್ರೀ ಪೆಟ್ಟಿಗೆಯ ಸುತ್ತಲೂ ಕಾವು ಇರುವಂತೆ, ಎಲ್ಲರಲ್ಲೂ ಪ್ರೀತಿಯ ವರ್ಚಸ್ಸಿರುತ್ತದೆ. ಈ ಪ್ರೀತಿ ಎಂಬುದು ಹೃದಯ ಹೃದಯಗಳ ನಡುವಣ ಸ್ನೇಹ ಸೇತು. ಆದ್ದರಿಂದ ಇನ್ನೊಬ್ಬರೊಂದಿಗೆ ಬಾಂಧವ್ಯ ಬೆಳೆಸಲು ಸದಾ ತುಡಿಯುವಂತೆ ಮಾಡುವುದೇ ಈ ಪ್ರೀತಿ. ಬೆಳೆಯುವ ಬಳ್ಳಿಗೊಂದು ಆಸರೆ ಬೇಕೇ ಬೇಕಾದಂತೆ ಹೃದಯದಲ್ಲಿ ಉಕ್ಕುವ ಪ್ರೀತಿಯ

ಹರಿವಿಗೊಂದು ವಸ್ತು ಬೇಕೇ ಬೇಕು ಕಣೆ. ಒಬ್ಬರ ಹೃದಯದಲ್ಲಿರುವ ದೇವರು ಇನ್ನೊಬ್ಬರ ಹೃದಯದಲ್ಲಿರುವ ದೇವರ ಜೊತೆ ಸಂಪರ್ಕ ಕಲ್ಪಿಸಿಕೊಳ್ಳುವುದೇ ಈ ಪ್ರೀತಿಯ ಜಾಲದ ಮೂಲಕ. ಆದ್ದರಿಂದ ದೀಪದಿಂದ ಹೊರಟು ಎಲ್ಲೆಡೆಗೂ ಹರಿಯುವ ಬೆಳಕಿನಂತೆ ಹೃದಯದಿಂದ ಹೊರಟು ನಗುವಿನ - ನಲಿವಿನ ಅಲೆ ಎಬ್ಬಿಸುತ್ತ ಸಾಗಿ ಎಲ್ಲರ ಹೃದಯಗಳನ್ನು ಮುಟ್ಟಿತಟ್ಟಿ ವಿಶ್ವಾಸ ನಂಬಿಕೆಗಳಿಂದ ಎಲ್ಲವನ್ನು ತಬ್ಬಿ ತನ್ನವರಾಗಿಸಿಕೊಳ್ಳುವುದೇ ಈ ಪ್ರೀತಿಯ ರೀತಿ. ಹೃದಯ ಹೃದಯಗಳ ಬೆಸುಗೆಯಾದ ಈ ಪ್ರೀತಿಯ ಉಸಿರೇ ಏಕನಿಷ್ಠೆ. ಅದಕ್ಕೆಂದಿಗೂ ಯಾವ ಭೇದಭಾವವಾಗಲೀ, ತಾರತಮ್ಯವಾಗಲೀ ಇಲ್ಲ. ಎಲ್ಲರಲ್ಲೂ ಆ ದೇವರಿರುವದರಿಂದ ಎಲ್ಲರೂ ತನ್ನವರೇ ಎಂಬುದೇ ಪ್ರೀತಿಯ ಧೋರಣೆ'.

ರಂಜನಾ ಬಿ.ಎ. ಆದ ವರ್ಷವೇ ಅವಳ ಅಜ್ಜಿ ಸತ್ತುಹೋದರು. ಆದುದರಿಂದ ಆ ವರ್ಷ ರಂಜನಾಳ ಮದುವೆ ನಿಂತುಹೋಯಿತು. ಅಜ್ಜಿ, ಮುದುಕಿ; ಸತ್ತು ಹೋದಳು. ಆದರೆ ನಾನಿನ್ನೂ ಪ್ರಸನ್ನನನ್ನು ಮದುವೆಯಾಗುವುದಕ್ಕೆ ಒಂದು ವರ್ಷ ಕಳೆಯಬೇಕಲ್ಲಾ ಎಂದು ರಂಜನಾಳಿಗೆ ವ್ಯಸನ. ಅದೇ ವರ್ಷ 'ಲಾ' ಕಲಿಯುವುದಕ್ಕೆ ಹೊರಡಬೇಕಾಗಿತ್ತು. ರಾಜಶ್ರೀಯೊಡನೆ ಮಾತನಾಡುವ ನೆಪದಿಂದ ದಿನಕ್ಕೆ ಹತ್ತು ಸಾರಿಯಾದರೂ ಪ್ರಸನ್ನನ ದರ್ಶನಕ್ಕೆ ರಂಜನಾ ಹೋಗದ ದಿನವಿರಲಿಲ್ಲ. ರಾಜಿಗೆ ರಂಜನಾಳ ಈ ಥರದ ವ್ಯವಹಾರದಿಂದ ತಡೆಯಲಾರದಷ್ಟು ನಗು ಬರುತ್ತಿತ್ತು. ರಾಜಿ ನಕ್ಕಾಗಲೆಲ್ಲಾ ರಂಜನಾ 'ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ' ಎನ್ನುತ್ತಿದ್ದಳು. ಆಗ ರಾಜಶ್ರೀ 'ಸೊಸೆಗೆ ಕಾಲ ಬಂದಾಗ ಹೇಳಂತೆ' ಎಂದು ರಂಜನಾಗೆ ಹೇಳಿದಾಗ, 'ಬಂದೇ ಬರುತ್ತೆ, ಬಾರದೆ ಹೋದ್ರೆ ಹೇಳ್ತಿತ್ತೆ' ಎಂದು ರಂಜನಾ, ರಾಜಿಯ ಮುಖವನ್ನು ನೋಡಿ ನಗುತ್ತ ಹೇಳುತ್ತಿದ್ದಳು.

ರಜೆ ಕಳೆದು ಹೋಯಿತು. ಜೊತೆಯಾಗಿಯೇ ಇಬ್ಬರೂ ಮದ್ರಾಸಿಗೆ ಹೊರಟರು. ಪ್ರಸನ್ನನನ್ನು ಬಿಟ್ಟು ಹೊರಡುವಾಗ ರಂಜನಾಗೆ ತಡೆಯಲಾರದಷ್ಟು ದುಃಖ, ರಾಜಿಗೆ ಹಿಡಿಸಲಾರದಷ್ಟು ನಗು, ರಂಜನಾಳ ಅವಸ್ಥೆ ನೋಡಿ. ಅಂತೂ ಇಂತೂ ರೈಲು ಹೊರಟು ಬಿಟ್ಟಿತು. ಮದ್ರಾಸಿಗೂ ತಲುಪಿದರು.

ಒಂದು ದಿನ ಸಾಯಂಕಾಲ ರಂಜನಾ ಮತ್ತು ರಾಜಿ ಸಮುದ್ರ ತೀರದಲ್ಲಿ ತಿರುಗಾಡುತ್ತಿದ್ದರು. ರಾಜಿಗೆ ತನ್ನದೇ ಚಿಂತೆ. ಯಾಕೆಂದರೆ ರೈಲಿನಲ್ಲಿ ತನ್ನ ಸರ್ಟಿಫಿಕೇಟ್ಸ್, ಮಾರ್ಕ್ಸ್‌ಕಾರ್ಡ್ ಮುಂತಾದವುಗಳ ಬ್ಯಾಗ್‌ನ್ನ ಮರೆತು ಇಳಿದು ಬಿಟ್ಟಿದ್ಲು. ಆ ಯೋಚನೆಯಲ್ಲೆ ಮಗ್ನಳಾಗಿದ್ದಳು. ಅದೇ ಸಮಯದಲ್ಲಿ ಪ್ರಸನ್ನನ ಕಾಗದ ರಾಜಿಗೆ ಬಂದಿತ್ತು. ಏನೇನು ಬರೆದಿದೆ ಆ ಕಾಗದದಲ್ಲಿ ಎಂದು ತಿಳಿದುಕೊಳ್ಳಲು ರಂಜನಾಗೆ ಆತುರ; ಕೇಳಿದರೆ ರಾಜಿ ಚೇಷ್ಟೆ ಮಾಡುತ್ತಾಳೆಂದು ಭಯ; ಮೇಲಾಗಿ ಆ ಬ್ಯಾಗ್‌ನ್ನ ಕಳೆದುಕೊಂಡ ಬೇಜಾರದಲ್ಲಿ ಇದ್ಲು.

'ಲೇ ರಾಜಿ, ಆ ಬ್ಯಾಗ್‌ನಲ್ಲಿ ನಿನ್ನ ವಿಳಾಸ ಇದೆ ಅಲ್ವಾ. ಯಾವ ಪುಣ್ಯಾತ್ಮರ ಕೈಗೆ ಸಿಕ್ಕುತ್ತೋ, ನಿನ್ನ ವಿಳಾಸಕ್ಕೆ ತಲುಪಿಸಬಹುದಲ್ವಾ.'

'ಅಲ್ವೇ ರಂಜು, ಇವತ್ತು - ನಾಳೆ ಯಾರೇ ಸರಿಯಾದ ವಿಳಾಸಕ್ಕೆ ತಲುಪಿಸುವಷ್ಟು ಪ್ರಾಮಾಣಿಕರಾಗಿರ್ತಾರೆ.'

'ಯಾಕಾಗಬಾರ್ದ್ದೆ ಸಮಯ ಚೆನ್ನಾಗಿದ್ರೆ ಸಿಕ್ರೂ ಸಿಗಬಹುದು'. ಹೌದು ರಾಜಿ, 'ನಿಮ್ಮಣ್ಣ ಹೇಗಿದ್ದಾರಂತೆ ?' 'ಇರೋ ಹಾಗೆ ಇದ್ದಾರಂತೆ'.

'ದಮ್ಮಯ್ಯ (ಕಾಗದ) ಕೊಡೀಗ' ಎಂದ್ಲು.

'ದಮ್ಮಯ್ಯ ಅನ್ನಲಿಕ್ಕೆ ಈ ಕಾಗ್ದದ ಚೂರುಗಳಲ್ಲಿ ಏನಿದ್ಯೋ ದೇವ್ರೇ ಬಲ್ಲ' ಎಂದು ನಗುತ್ತಾ ರಾಜಿ ಕಾಗದ ಕೊಟ್ಲು. 'ನಿನ್ಗೂ ಬರದೆ ಇರೋಲ್ಲ ಕಾಲ, ಹಾಗಾಗ್ಲಿ ಮಾಡ್ತೀನ್ನೋಡು' ಎಂದುಕೊಂಡು ಕಾಗದ ಕೊಟ್ಟು ಆ ಕಡೆ ಬರುತ್ತಿದ್ದ ತನ್ನ ಸ್ನೇಹಿತೆಯ ಹತ್ತಿರ ಹೋಗಿ ಹರಟೆಗಾರಂಭಿಸಿದಳು.

ರಾತ್ರಿ ಹತ್ತುಗಂಟೆಯಾಗಿತ್ತು. ರಂಜು ನೂರ ಒಂದನೆಯ ಸಲ ಪ್ರಸನ್ನನ ಕಾಗದವನ್ನೋದುತ್ತಾ ಅವನ ಚಿತ್ರದ ಮುಂದೆ ತನ್ನ ರೂಮಿನಲ್ಲಿ ಕುಳಿತಿದ್ದಳು. ರಾಜಿ ಪಾಪ, ತನ್ನ ಸರ್ಟಿಫಿಕೆಟ್‌ನ ಚಿಂತೆಯಲ್ಲಿಯೇ ಓದ್ತಾ ಅವಳೊಂದು ಕಡೆ ಕುಳಿತಿದ್ಲು.

ಹೊರಗಿನಿಂದ ಯಾರೋ ಬಾಗಿಲು ತಟ್ಟುವ ಸಪ್ಪಳ. ಯಾರೂ ಅನ್ನುತ್ತಲೇ ಹೋಗಿ ಬಾಗಿಲು ತೆಗೆದಳು. 'ಮೇಡಂ, ರಾಜಶ್ರೀಯವರನ್ನು ಕೇಳಿಕೊಂಡು ಯಾರೋ ಹುಡ್ಗ ಬಂದಿದ್ದಾರೆ'. 'ಲೇ ರಾಜಿ, ಬಾರೇ ನೋಡೋಣ ಯಾರಂತ'.

'ನೋಡಿ ಇದು ನಿಮ್ಮ ಬ್ಯಾಗ್'

'ಹ್ವಾ ! ಹೌದು ಇದು ..... ನಿಮಗೆಲ್ಲಿ ಸಿಕ್ತು.'

'ನಾನು ಮದರಾಸಿನಿಂದ ಮೈಸೂರಿಗೆ ರೈಲಿನಲ್ಲಿ ಹೋಗುವಾಗ ನಾನು ಕುಳಿತ ಕಂಪಾರ್ಟಮೆಂಟ್‌ನಲ್ಲಿತ್ತು. ಅದರಲ್ಲಿ ನಿಮ್ಮ ವಿಳಾಸ ಇದ್ದುದರಿಂದ ತಲುಪಿಸಲು ಸಾಧ್ಯವಾಯ್ತು.'

'ತುಂಬಾ, ತುಂಬಾ, ಧನ್ಯವಾದಗಳು ಕಣ್ರೀ. ಅಂದಹಾಗೆ ನಿಮ್ಮ ಹೆಸರು ?'

ನಗು ಬೀರುತ್ತಾ 'ರಾಕೇಶ್.'

ರಂಜನಾ ಕೇಳಿದ್ಲು, 'ನೀವು ಏನು ಮಾಡ್ಕೊಂಡಿದೀರಾ ?'

'ಕೊನೇ ವರ್ಷ 'ಲಾ' ಓದ್ತಾ ಇದ್ದೇನೆ. ನಾನಿನ್ನು ಬರ್‍ತೀನಿ.'

ಏನೇ ರಂಜು, 'ರೂಪ, ಅಂದಚಂದವಾಗಿರುವ ಲಕ್ಷಣವಾಗಿರುವ ಹುಡ್ಗ ಪಾಪ ಸ್ವಲ್ಪ ಕೂಡಾ ಸೊಕ್ಕಿಲ್ಲ. ಎಷ್ಟು ಪ್ರಾಮಾಣಿಕತನದಿಂದ ವಾಪಸ್ ನನ್ನ ಬ್ಯಾಗನ್ನ ಕೊಟ್ಟು ಬಿಟ್ಟು ಹೋದ್ರು'

'ಇದೇನೋ ಸನ್ಯಾಸಿನಿ ! ರೂಪ ರಾಗದ ವರ್ಣನೆಗೆ ಹೊರಟ್ಬಿಟ್ಯಲ್ಲಾ !'

'ಯಾಕೆ ನನಗೇನು ಕಣ್ಣಿಲ್ಲಾಂತ ತಿಳ್ಕೊಂಡ್ಯ ನೀನು ? ಇದ್ದಿದ್ದಿದ್ದಾಗೆ ಹೇಳಿದ್ರೆ ಕೊರ್ತೆ ಏನೇ ?'

'ಈಗಿಲ್ಲಾಂತನ್ನು, ಅದೇ ರಾಜಿ ಸಂಗೀತಕ್ಕೂ, ಸೌಂದರ್ಯಕ್ಕೂ ಮೊದಲ ಬಾರಿಯೇ ಮರುಳಾದ್ರೆ ಮುಂದ್ಗತಿ ?'

'ತಾ ಕೆಟ್ಟ, ಕಪಿ, ವನವೆಲ್ಲಾ ಕೆಡ್ಸಿತು' ಎಂಬ ಗಾದೆಯಿದೆಯಲ್ಲ. ಹಾಗೆ ನಿನ್ನ ಮಾತಿಗೆ ಕಿವಿ ಕೊಟ್ರೆ ಸರಿ - ನೀನು ಹೇಳ್ದಾಗೇ ಮುಂದ್ಗತಿ - ನಿನ್ನತ್ರ ಇದೇ ಮಾತು - ನಡಿ ಊಟಕ್ಹೋಗೋಣ'

ರಾಜಿ ಮರುದಿನ ಸಾಯಂಕಾಲ ಕಾಲೇಜಿನಿಂದ ಬಂದೊಡನೆಯೇ ಹೊಸ ಡ್ರೆಸ್ ಹಾಕಿಕೊಂಡು ಕನ್ನಡಿಯ ಮುಂದೆ ನಿಂತು ತಲೆಬಾಚಿಕೊಳ್ತಾ, 'ರಂಜು ಬರಲ್ವೇನೆ, ಹೊರಗಡೆ' ಎಂದು ಕೇಳಿದಳು. 'ಇಲ್ಲಮ್ಮ ನಾನು ನಾವೆಲ್ ಓದ್ತಾ ಇದ್ದೇನೆ. ಇದಾದ ಮೇಲೇನೆ, ಈಗ ಬರೋದಿಲ್ಲ'.

ರಾಜಿ ಇತ್ತ ಸಮುದ್ರದ ಕಡೆ ಬಂದಾಗ ಅಲ್ಲಿಯೂ ರಾಕೇಶ್ ಬಂದಿದ್ದ. ರಾಜಶ್ರೀ ನಿಮ್ಮ ಮುಖದಲ್ಲಿ ಅದೊಂದು ಬಗೆಯ - ಎಷ್ಟು ನೋಡಿದರೂ ಸಾಲದೆನ್ನುವ ಥರದ ಸೌಂದರ್ಯ. ಪ್ರೀತಿ ಎಂದೊಡನೆಯೇ ಹೆಣ್ಣು, ಗಂಡುಗಳ ನಡುವಣ ಪ್ರೀತಿಯನ್ನು ನೆನಪಿಸಿಕೊಳ್ಳುವವರೇ ಜಾಸ್ತಿ. ಆದರೆ ಹೆಚ್ಚಿನ ಸಂದರ್ಭಗಳಲ್ಲಿ ಗಂಡು - ಹೆಣ್ಣುಗಳ ನಡುವಿರುವುದು ನಿಜವಾದ ಪ್ರೀತಿ ಅಲ್ಲ - ಕೇವಲ ಆಕರ್ಷಣೆ. ಆದರೆ ಪ್ರೀತಿ ಎಂದರೆ ನಾವು ಯಾರನ್ನು ಪ್ರೀತಿಸಿದರೂ ಅವರ ಪ್ರಗತಿಗಾಗಿ, ಬೆಳವಣಿಗೆಗಾಗಿ ಶ್ರಮಿಸುವುದು ಎಂದು ರಾಕೇಶ್ ಹೇಳಿದಾಗ ರಾಜಶ್ರೀ ಸಂಪೂರ್ಣವಾಗಿ ರಾಕೇಶ್‌ನನ್ನು ಪ್ರೀತಿಸಿ ಮದುವೆಯಾಗಲು ಯೋಗ್ಯನಾದವನು. ಅವನ ಮಾತುಗಳು ಎಷ್ಟು ಅರ್ಥಪೂರ್ಣವಾಗಿವೆ ಎಂದೆನಿಸ್ತು. ದಿನಕಳೆದಂತೆ ಇವರಿಬ್ಬರ ಪ್ರೀತಿ ಮದುವೆಯಾಗುವಷ್ಟರ ಮಟ್ಟಿಗೆ ಬಂದಿತು.

'ರಾಜಿ ಬರಲಿ, ಜೊತೆಯಲ್ಲಿ ಊಟ ಮಾಡಿದರಾಯಿತು' ಎಂದು ಊಟ ಮಾಡದೆ ಕುಳಿತಿದ್ಲು. ಬಹಳ ಹೊತ್ತಾದ್ರು ರಾಜಿ ಬರಲಿಲ್ಲ. ಕಾದು ಕಾದು ಸಾಕಾಗಿ ಹೋಯಿತು ರಂಜನಾಗೆ. ರಾಜಿ ಬಂದೊಡನೆಯೇ -

'ಎಲ್ಹೋಗಿದ್ಯೋ ಇಷ್ಹೊತ್ತು ? ಕಾದು ಕಾದು ಸಾಕಾಯ್ತು'.

'ರಾಕೇಶ್‌ನ ಹತ್ರ ಮಾತಾಡ್ತಾ ವೇಳೆ ಆದದ್ದೇ ತಿಳೀಲಿಲ್ಲ ಕಣೆ'

'ಅಯ್ಯೋ ಸನ್ಯಾಸಿನೀ ! ಸಂಸಾರದ ಹಳ್ಳಕ್ಕೆ ಬೀಳೋ ಕಾಲ ಬಂತೆ ನಿನ್ಗೆ ? ನಿನ್ನ ಸ್ಥಿತಿ ನೋಡಿ ಅಳು ಬರುತ್ತೆ ನನ್ಗೆ'.

'ಮುಚ್ಕೊಳ್ಳೆ ಬಾಯಿನಾ'.

'ಇದೇ ಸೊಸೆ ಕಾಲ ಕಣೇ - ಅತ್ತೆ ಕಾಲ ಕಳೆದುಹೋಯ್ತು'.

'ರಂಜನಾ......'

ಓದ್ತಾ ಕೂತಿದ್ದ ರಂಜು ತಲೆ ಎತ್ತಿ 'ಏನು ರಾಜಿ' ಎಂದಳು. ಅಲ್ವೇ ನಾನು ರಾಕೇಶ್‌ನ್ನ ಹೇಗೆ ಮದ್ವೆ ಆಗೋದು, ಇದಕ್ಕೆ ಮನೇಲಿ ಖಂಡಿತಾ ಒಪ್ಪಲ್ವಲ್ಲೇ. ಸಮಯದಲ್ಲಿ ನಡೆಯದಿದ್ದುದನ್ನು ಮಾಡಿ ನಾನು ಪರರ ಹಾಗೂ ತಂದೆ - ತಾಯಿಯ ಮರ್ಯಾದೆಗೆ, ಹಾಸ್ಯಕ್ಕೆ ಈಡಾಗಬೇಕೇನು ? ಸಮಾಜದಲ್ಲಿ ನಡೆದರೂ ನನ್ನ ಪವಿತ್ರ ಕುಲವನ್ನು ಈ ವಿವಾಹದಿಂದ ಕಲುಷಿತ ಮಾಡಲು ತಯಾರಿಲ್ಲ.

'ಪಾಶ್ಚಾತ್ಯರಂತೆ ನಮ್ಮಲ್ಲಿ ಪ್ರೇಮದ ಅಂತ್ಯವೇ ಮದುವೆಯಾಗುವದಲ್ಲ. ಜೀವನದ ನಿಜವಾದ ಶ್ರೇಷ್ಠತೆಗೆ ಮೊದಲಿನ ಮೆಟ್ಟಿಲಷ್ಟೇ ಮದುವೆ'. ಕೊನೆಗೆ ಮಂದಿರವೊಂದರಲ್ಲಿ ರಾಕೇಶ್ ಮತ್ತು ರಾಜಶ್ರೀಯ ಮದುವೆ ನಡೆಯಿತು. 'ಹೌದು ರಾಜಿ, ನೀನಂದಂತೆ ನನ್ನ - ನಿನ್ನ ಮದುವೆಯಾಗಿ ಹೋಯ್ತು - ಇನ್ನು ನೀನೇನು ಮಾಡಿದರೂ ಅದು ಬದಲಾಗುವಂತಿಲ್ಲ. ಜನ್ಮವಿರುವ ತನಕವೂ ಬಂಧಿಸುವ ಕಟ್ಟು ಅದು. ನೋಡು, 'ಅದು ಮುಳ್ಳಿನ ಕಟ್ಟೂ ಆಗಬಹುದು. ಸುಕೋಮಲ ಪುಷ್ಪಗಳ ಮೃದುಸ್ಪರ್ಶವೂ ಆಗಬಹುದು' ಎಲ್ಲದಕ್ಕೂ ಮನಸ್ಸೇ ಮುಖ್ಯ ಕಾರಣ'. ಈ ಮಾತುಗಳ ಅರ್ಥ ರಾಜಿಗೆ ವಿಚಿತ್ರವಾಗಿ ಅನಿಸಿತು.

ಒಬ್ಬರಿಗೊಬ್ಬರು ತುಂಬಾ ಇಷ್ಟ ಪಡ್ತಾ ಇದ್ರು. ಆದರೂ ಇತ್ತೀಚೆಗೆ ರಾಕೇಶ್‌ನ ವರ್ತನೆಯಲ್ಲಿ ಬದಲಾವಣೆಗಳುಂಟಾಗ್ತಾ ಇದ್ವು. ಒಂದು ತರಹ ಕ್ರೂರ ವರ್ತನೆ. ರಾಜಿಯನ್ನು ಗೋಳಾಡಿಸೋದರಲ್ಲಿ ಅವನು ತುಂಬಾ ಖುಶಿ ಪಡ್ತಿದ್ದ. ಇವರ ಮದುವೆಯ ವಿಷಯ ರಾಜಿಯವರ ಮನೆಯಲ್ಲಿ ಗೊತ್ತಿರಲಿಲ್ಲ. ರಾಜಿ ರಾಕೇಶ್‌ನ್ನ ಕುರಿತು, 'ರ್‍ರೀ ರಾಕೇಶ್, ನೀವು ನನ್ನನ್ನ ಮದ್ವೆಯಾಗಿದೀರಾ ಮತ್ತೊಂದು ರೀತಿಯಲ್ಲಿ ಯಾಕೆ ಹಿಂಸೆ ಮಾಡ್ತೀರಾ'. 'ನೋಡು ರಾಜಿ, ನಿನ್ನ ಮದುವೆಯಾಗಿದೀನಿ ಅನ್ನೋದಕ್ಕೆ ಅಲ್ಲಿ ಯಾರಾದ್ರೂ ಸಾಕ್ಷಿ ಇದ್ರಾ .... ?' ಹಾಗೆ ಅವಳು ಬರೆದ ಪತ್ರಗಳನ್ನಿಟ್ಟುಕೊಂಡು ಅವಳನ್ನು ಹೆದರಿಸುವದಾಗಿ, ಹೀಗೆ ಬಾಯಿಗೆ ಬಂದಂತೆ ಮಾತಾಡಿ, ಜಗಳವಾಡಿ ಹೋಗಿದ್ದ. ಆಗ ರಾಜಿ ಸ್ವಲ್ಪವೂ ಮಾತಾಡ್ದೇ ಕಲ್ಲು ನಿಂತ್ಹಾಗೆ ನಿಂತುಬಿಟ್ಟಿದ್ಲು. ಅವನ ಇನ್ನೊಂದು ಮುಖದ ಪರಿಚಯ ಅವಳಿಗೆ ಗೊತ್ತಾಗಿತ್ತು. ಅವನು ಇನ್ನೊಂದು ಮದುವೆಯಾಗೋ ತಯಾರಿಯಲ್ಲಿದ್ದ. ಪಾಪ ! ರಾಜಿ ಮಾನಸಿಕವಾಗಿ ತುಂಬಾ ಹಿಂಸೆಯನ್ನ ಅನುಭವಿಸುತ್ತಿದ್ಲು. ಕುಗ್ಗಿಹೋದ ಅವಳ ಮನಸ್ಸು ರಂಜನಾಳ ಹೊರತು ಯಾರಿಗೂ ಗೊತ್ತಿಲ್ಲ.

ಮನೆಯಲ್ಲಿ ರಾಜಿಯ ಮದುವೆಯ ಯೋಚನೆ ನಡೆದಿತ್ತು. .ರಾಜಿಯ ಮನಸ್ಸು ಇದಕ್ಕೆ ಒಪ್ತಾ ಇಲ್ಲ. ಅವತ್ತೇ ಅವಳನ್ನು ನೋಡಲು ವರ ಬರ್‍ತಾ ಇದಾನೆ. ಮನೆಯವರ ಒತ್ತಾಯಕ್ಕೆ, ನಿರ್ವಾಹವಿಲ್ಲದೆ....... ಹೊರಗಡೆ ಕಾರಿನ ಶಬ್ದವಾಯ್ತು. ಎತ್ತರದ ನಿಲುವು, ಕೆಂಪಗೆ ಸುಂದರವಾಗಿದ್ದ ದೀಪಕ್ ಉನ್ನತ ಅಧಿಕಾರಿಯಾಗಿದ್ದ, ರಾಜಿಗೆ ಹೇಳಿ ಮಾಡಿಸಿದ ಜೋಡಿ. ಮನೆಯವರ ಮನಸ್ಸು ನೋಯಿಸಬಾರದೆಂದು ಮನಸ್ಸಿಲ್ಲದಿದ್ದರೂ ರಾಜಿ ದೀಪಕ್‌ನನ್ನು ಮದುವೆಯಾಗಲು ತಲೆಯಾಡಿಸಿದ್ದಳು.

ಆದರೂ ರಾಜಿ ಒಮ್ಮೆ ದೀಪಕ್‌ನನ್ನು ಭೇಟಿ ಮಾಡಿ, ತನ್ನ ಜೀವನದಲ್ಲಾದ ಆ ಘಟನೆಯನ್ನು ವಿವರಿಸಿದಳು. ಅವನು ಇದನ್ನು ಕೇಳಿ ನಿರಾಕರಿಸುತ್ತಿರಬಹುದೆಂದು ತಿಳಿದುಕೊಂಡಿದ್ದ ರಾಜಿ ಅವನ ಮಾತು ಕೇಳಿ ಅವಾಕ್ಕಾದಳು. 'ನೋಡಿ, ಈ ಘಟನೆ ಗಂಡಸಿನ ಜೀವನದಲ್ಲಾದರೆ ಅದನ್ನ ಸಾಮಾನ್ಯವಾಗಿ ಪರಿಗಣಿಸ್ತಾರೆ. ಅಷ್ಟಕ್ಕೂ ನಿಮ್ಮ ಮದುವೆಗೆ ಯಾರು ಸಾಕ್ಷಿ ಇದ್ರು, ಯಾರು ನೋಡಿದ್ರು, ನೀವು ಕಟ್ಟಿಕೊಂಡ ತಾಳಿ ಕೂಡಾ ಡುಪ್ಲಿಕೇಟ್. ನಿಮ್ಮ ಬಗ್ಗೆ ನನಗ್ಯಾವ ತಪ್ಪಭಿಪ್ರಾಯಗಳಿಲ್ಲ. ನಿಮ್ಮನ್ನ ನಾನು ಮಡದಿಯಾಗಿ ಸ್ವೀಕರಿಸಲು ಇಷ್ಟಪಡ್ತೇನೆ, ಯಾಕಂದ್ರೆ ನೀವು ಇಷ್ಟೊಂದು ವಿಧೇಯತೆಯಿಂದ ಒಂದನ್ನೂ ಮುಚ್ಚಿಡದೆ ಮನಬಿಚ್ಚಿ ಹೇಳಿದಾಗ್ಲೆ ನೀವು ನನಗೆ ತಕ್ಕವರೆಂದು ನಿರ್ಧರಿಸಿದೆ'.

ರಾಜಿಯ ವಿಷಯ ಅದ್ಹೇಗೊ ಅವಳ ತಾಯಿಗೆ ಗೊತ್ತಾಗಿ, ರಾಜಿ ಮೇಲೆ ಎಷ್ಟು ನಂಬಿಕೆ ಇಟ್ಟಿದ್ದು. ಹೀಗೆ ಮಾಡಿದ್ಲಂತ ಮನಸ್ಸಿಗೆ ತುಂಬಾ ನೋವು ಮಾಡಿಕೊಂಡ್ರು. ಮತ್ತೆ ರಂಜನಾ ಹಾಗೂ ರಾಜಿಯ ಮಾಮಾ ಅವರಿಗೆ ಸಮಾಧಾನ ಹೇಳಿದ್ರು.

ರಾಜಿ ಒಂದು ತೀರ್ಮಾನಕ್ಕೆ ಬಂದಳು. ಏನೋ ಕೆಟ್ಟ ಘಳಿಗೆ, ಆಕಸ್ಮಿಕವಾಗಿ ರಾಹು, ಕೇತು, ಶನಿ ಹಾಗೆ ಮೂರು ಸಂಗಮವಾಗಿದ್ದ ರಾಕೇಶ್ ಬಂದು ನನ್ನ ಮನಸ್ಥಿತಿಯನ್ನು ಕದಡಿಬಿಟ್ಟ. ಅಷ್ಟು ಆಗಬೇಕಿತ್ತು ಆಯ್ತೇನೋ ಎಂದುಕೊಳ್ಳುತ್ತಾ ತನ್ನ ಮನಸ್ಸಿಗೆ ಸಮಾಧಾನ ತಂದುಕೊಂಡು ಆ ಘಟನೆಯನ್ನು ಮರೆಯಲು ಪ್ರಯತ್ನಿಸಿ, ತನ್ನ ಮನಸ್ಸನ್ನು ಅರ್ಥ ಮಾಡಿಕೊಂಡು, ಮೇಲಾಗಿ ತಾವೇ ನಮ್ಮನ್ನು ಬಯಸಿ ಬಂದ ಉನ್ನತ ಅಧಿಕಾರಿ ದೀಪಕ್ ಜೊತೆ ಮದುವೆಯಾಗುವದಕ್ಕೆ ಮನಸು ಮಾಡಿದಳು.

ರಂಜನಾಳ ಮದುವೆ ಪ್ರಸನ್ನನ ಜೊತೆ, ರಾಜಶ್ರೀಯ ಮದುವೆ ದೀಪಕ್ ಜೊತೆ ಭರ್ಜರಿಯಾಗಿ ನಡೆಯಿತು. ಆಕಸ್ಮಿಕವಾಗಿ, ದೈವದ ಬಲದಿಂದ ರಾಜಿಯ ಜೀವನವು ಸುಂದರವಾಯಿತು. ರಾಜಶ್ರೀ ದೀಪಕ್‌ನನ್ನು ಮದುವೆಯಾಗಿ ಉತ್ತರಪ್ರದೇಶಕ್ಕೆ ಎಲ್ಲರಿಗೂ ಟಾ.... ಟಾ..... ಹೇಳ್ತಾ ರೈಲನ್ನು ಏರಿದಳು.

'ಅದೃಷ್ಟದ ಆಟ ಎಷ್ಟೊಂದು ವಿಚಿತ್ರ .......' ಎಂದು ರಾಜಶ್ರೀ ನಿಟ್ಟುಸಿರು ಬಿಟ್ಟಳು.

●

# ಕೈಜಾರಿದವಳು

● ಜಯಪ್ರಕಾಶ ಅಬ್ಬಿಗೇರಿ

ಮಧ್ಯರಾತ್ರಿಯಾಗಿದ್ದರೂ ನಿದ್ದೆ ಸತೀಶನಿಂದ ದೂರವಾಗಿತ್ತು. ಮಲಗುವ ಕೋಣೆ ಮಹಡಿಯ ಮೇಲೆ ಇದ್ದುದರಿಂದ ಹುಣ್ಣಿಮೆಯ ಚಂದ್ರನ ಬೆಳಕು ಕೋಣೆಯ ಕಿಡಕಿಯ ಮೂಲಕ ತೂರಿಬಂದು ಕತ್ತಲೆಯನ್ನು ದೂಡಿತ್ತು. ಇಂಥ ಬೆಳಕಿನಲ್ಲೂ ಸಹ ಸತೀಶನಿಗೆ ಜೀವನ ನೀರಸವೆನಿಸಿತ್ತು. ಎರಡು ದಿನಗಳಿಂದ ತನ್ನ ಮದುವೆಯ ಬಗೆಗೆ ನಡೆದ ಚರ್ಚೆಗಳೇ ಇವನನ್ನು ಗೊಂದಲಕ್ಕೀಡುಮಾಡಿದ್ದವು. ಪ್ರೀತಿ, ಪ್ರೇಮ ಇವೆಲ್ಲವೂ ಸುಳ್ಳು ಎಂಬ ಹಂತಕ್ಕೆ ಸತೀಶ ಬಂದಿದ್ದ.

ಆದರೆ ಬಾಳಿನ ಗೆಳತಿಯಾಗಲಿದ್ದ ರೀಟಾಳ ನೆನಪು ಮೇಲಿಂದ ಮೇಲೆ ಮರುಕಳಿಸುತ್ತಿತ್ತು. ಆದರೂ ಆ ದಿನ, ಅವಳು ಆಡಿದ ಮಾತುಗಳು 'ಸತೀಶ ನನ್ನನ್ನು ಮರೆತುಬಿಡು, ನನ್ನ ನಿನ್ನ ಮದುವೆ ಈ ಜನ್ಮದಲ್ಲಿ ಸಾಧ್ಯವಿಲ್ಲ. ಈ ಸಮಾಜದಲ್ಲಿ ಅಂತರ್ಜಾತಿ ವಿವಾಹಗಳಿಗೆ ಬೆಲೆ ಇಲ್ಲ. ನನ್ನಿಂದ ನೀನು ನಿನ್ನ ತಂದೆ ತಾಯಿಗಳಿಂದ ದೂರವಾಗುವುದು ಬೇಡ. ದಯವಿಟ್ಟು ನಮ್ಮಿಬ್ಬರ ಮದುವೆಯ ಬಗೆಗೆ ಕನಸು ಕಟ್ಟಬೇಡ.....' ಸ್ಮೃತಿಪಟಲದಲ್ಲಿ ತೇಲಿಬರುತ್ತಿದ್ದವು.

ಅವಳ ಮಾತುಗಳನ್ನು ತಳ್ಳಿಹಾಕಿ ಖಂಡಿತವಾಗಿ ಅಪ್ಪ - ಅಮ್ಮನನ್ನು ಒಪ್ಪಿಸುವೆನೆಂದು ಬಂದಿದ್ದ ಸತೀಶನಿಗೆ ಒಂದರ ಮೇಲೊಂದು ವಿಘ್ನಗಳು ಬಂದೊದಗಿದ್ದವು. ಆದರೂ ರೀಟಾಳ ನೆನಪು ಬೇಸರವನ್ನು ಮರೆಸುತ್ತಿತ್ತು.

ರೀಟಾ ಪರಿಚಯವಾಧುದು ಸತೀಶನ ಕಾಲೇಜು ಜೀವನದಲ್ಲಿ. ಗ್ರಾಮಾಂತರ ಪ್ರದೇಶದಲ್ಲಿ ಬೆಳೆದ ಸತೀಶ ಉನ್ನತ ಶಿಕ್ಷಣಕ್ಕಾಗಿ ನಗರ ಸೇರಿದ್ದ. ನಗರದ ಕಾಲೇಜಿನ ಹುಡುಗಿಯರನ್ನು ಮಾತನಾಡಿಸುವುದೇ ಒಂದು ಅಪರಾಧ ಎಂದೆನಿಸುತ್ತಿದ್ದ ಸತೀಶನಿಗೆ ಆ ಕಾಲೇಜಿನಲ್ಲಿ ಹುಡುಗ ಹುಡುಗಿಯರು ಯಾವುದೇ ರೀತಿಯ ಸಂಕೋಚವಿಲ್ಲದೇ ಅತೀ ಸಲುಗೆಯಿಂದ ಮಾತನಾಡುತ್ತಿದ್ದುದನ್ನು ಕಂಡು ದಂಗುಬಡಿದಿದ್ದ.

ತಮ್ಮ ಹಳ್ಳಿಯಲ್ಲಿ ಕೇವಲ ಲಂಗ ತೊಡುತ್ತಿದ್ದ ಹುಡುಗಿಯರನ್ನು ನೋಡಿದ್ದ. ಆದರೆ ದಿನ ಬೆಳಗಾದರೆ ಕಾಲೇಜಿಗೆ ವಿವಿಧ ನಮೂನೆಯ ಡ್ರೆಸ್ ಮಾಡಿಕೊಂಡು ಬರುತ್ತಿದ್ದ ಲಲನೆಯರನ್ನು ನೋಡಿ ಅವನಿಗೆ ತುಂಬಾ ಮೋಜೆನಿಸಿತ್ತು. ಯಾವ ಅಳುಕೂ ಇಲ್ಲದೆ 'ವಿಶ್'

ಮಾಡುತ್ತಿದ್ದ ಹುಡುಗಿಯರೊಂದಿಗೆ ಮಾತನಾಡಲು ಸತೀಶನಿಗೆ ಮೊದಮೊದಲು ಸಂಕೋಚವೆನಿಸುತ್ತಿದ್ದರೂ ಸಹ ಪರಿಸರಕ್ಕೆ ಹೊಂದಿಕೊಳ್ಳಲು ಪ್ರಯತ್ನಿಸುತ್ತಿದ್ದ.

ಸತೀಶನನ್ನು ಮಾತನಾಡಿಸುತ್ತಿದ್ದ ಎಲ್ಲ ಹುಡುಗಿಯರಲ್ಲಿ ರೀಟಾ ಮಾತ್ರ ಎದ್ದು ಕಾಣುತ್ತಿದ್ದಳು. ರೀಟಾ ಮೊದಲೇ ಕ್ರಿಶ್ಚಿಯನ್ ಆಗಿದ್ದರಿಂದ ಜೀನ್ಸ್ ಧರಿಸಿ ಗಾಗಲ್ ಹಾಕಿಕೊಂಡು ಹೊರಟಳೆಂದರೆ ಗಂಡಿಗೂ ಮೀರಿದ ಗಾಂಭೀರ್ಯ ಇವಳಲ್ಲಿರುತ್ತಿತ್ತು. ಇವಳೊಂದಿಗೆ ಮಾತನಾಡಲು, ಸ್ನೇಹ ಬೆಳೆಸಲು ಎಲ್ಲರೂ ಹವಣಿಸುತ್ತಿದ್ದರು. ಕೇವಲ ಗಂಡುಬೀರಿಯಂತಿರದೆ ಕ್ಲಾಸಿನಲ್ಲಿಯೂ ಸಹ ಇವಳು ಜಾಣವಿದ್ಯಾರ್ಥಿನಿಯಾಗಿದ್ದಳು.

ಕಾಲೇಜಿನಲ್ಲಿ ನಡೆದ ಚರ್ಚಾಸ್ಪರ್ಧೆಯೇ ರೀಟಾ, ಸತೀಶರ ಗೆಳೆತನಕ್ಕೆ ನಾಂದಿಯಾಯಿತು. "ಅಂತರ್ಜಾತಿ ವಿವಾಹ ಸಾಧ್ಯವೇ ?" ಎಂಬುದು ಅಂದಿನ ಚರ್ಚಾಕೂಟದ ಮುಖ್ಯ ವಿಷಯವಾಗಿತ್ತು. ಹಳ್ಳಿಯಲ್ಲಿ ಪ್ರತಿವರ್ಷ ಸ್ವಾತಂತ್ರ್ಯೋತ್ಸವಕ್ಕೋ ಅಥವಾ ಗಣರಾಜ್ಯೋತ್ಸವಕ್ಕೋ ಏರ್ಪಡಿಸುತ್ತಿದ್ದ ಭಾಷಣ ಸ್ಪರ್ಧೆಗಳಲ್ಲಿ ಭಾಗವಹಿಸಿ ರೂಢಿಯಿದ್ದ ಸತೀಶನೂ ಸಹ ವಿಷಯದ ಪರವಾಗಿ ಮಾತನಾಡಲು ತನ್ನ ಹೆಸರನ್ನು ಕೊಟ್ಟಿದ್ದ.

ಇಂದಿನ ಜನಾಂಗದಲ್ಲಿ ಜಾತಿಭೇದಗಳು ಎದ್ದು ಕಾಣುತ್ತಿರುವುದನ್ನು ಕಂಡುಕೊಂಡಿದ್ದ ರೀಟಾ, ಕೊಟ್ಟಿರುವ ವಿಷಯದ ವಿರುದ್ಧವಾಗಿ ಮಾತನಾಡಲು ಹೆಸರು ಕೊಟ್ಟಿದ್ದಳು. ಇವರಲ್ಲದೆ ಅನೇಕರು ಪರವಾಗಿ ಮತ್ತು ವಿರೋಧವಾಗಿ ಮಾತನಾಡಲು ಹೆಸರು ಕೊಟ್ಟಿದ್ದರು. ಅಂದು ಚರ್ಚಾಸ್ಪರ್ಧೆ ಅತೀ ಗಂಭೀರವಾಗಿಯೇ ನಡೆಯಿತು. ರೀಟಾ, ಸತೀಶರ ನಡುವಿನ ವಾಗ್ವಾದಗಳು ಕಾಲೇಜಿನ ಪ್ರತಿಯೊಬ್ಬರ ಮನಮುಟ್ಟುವಂತೆ ತಲುಪಿದ್ದವು.

'ಅಂತರ್‌ಜಾತಿ ವಿವಾಹಗಳಿಂದ ಎಷ್ಟೋ ಸಂಸಾರಗಳು ಬೀದಿಪಾಲಾಗಿವೆ. ಜೀವನದಲ್ಲಿ ನೆಮ್ಮದಿ ಸಿಗದ ಇವರು ಅನೇಕ ಚಟಗಳ ಆಧೀನರಾಗಿ ಸಮಾಜದಲ್ಲಿ ದುರ್ಬಲ ವ್ಯಕ್ತಿಯಾಗಿ ನರಳುತ್ತಿದ್ದಾರೆ. ವಿವಾಹವಾಗಿ ಪ್ರೀತಿಯಿಂದ ಇದ್ದರೂ ನಮ್ಮ ಸಮಾಜ ಇವರನ್ನು ನೋಡುವ ದೃಷ್ಟಿಯೇ ಬೇರೆ. ಈ ಎಲ್ಲಾ ಕಾರಣಗಳಿಂದ ಅಂತರ್‌ಜಾತಿ ವಿವಾಹಗಳು ಯಶಸ್ವಿಯಾಗಲಾರವು......' ಎಂದು ರೀಟಾ ವಾದಿಸಿದರೆ ಅದಕ್ಕೆ ಪ್ರತಿಯಾಗಿ ಸತೀಶನು ಅಂತರ್‌ಜಾತಿ ವಿವಾಹವಾಗಿ ಸುಖಜೀವನ ನಡೆಸುವ ಅನೇಕ ಉದಾಹರಣೆ ಕೊಡುತ್ತ, 'ಜೀವನ ನಡೆಸಲು ಜಾತಿ ಮುಖ್ಯವಲ್ಲ. ಬೆರೆತ ಜೀವಿಗಳ ಒಲವು ಮುಖ್ಯ. ಅವರಿಬ್ಬರಲ್ಲಿ ಒಲವು ಇದ್ದರೆ ಯಾರಿಂದಲೂ ಅವರನ್ನು ಬೇರ್ಪಡಿಸಲು ಸಾಧ್ಯವಿಲ್ಲ.....' ಎಂದು ವಾದಿಸಿದ್ದ.

ಇಬ್ಬರೂ ತಮ್ಮ ಪಟ್ಟು ಬಿಡದೆ ಇದ್ದುದರಿಂದ ಕೊನೆಗೆ ಕಾಲೇಜಿನ ಪ್ರಾಚಾರ್ಯರೇ ಬಂದು ಇಬ್ಬರನ್ನೂ ಸಮಾಧಾನಪಡಿಸಿ ಅಂದಿನ ಕಾರ್ಯಕ್ರಮವನ್ನು ಮುಗಿಸಿದ್ದರು. ಈ ರೀತಿಯಾಗಿ ಚರ್ಚಾಸ್ಪರ್ಧೆಯಲ್ಲಿ ಆರಂಭಗೊಂಡ ಅವರ ಪರಿಚಯವು ತುಸು ದಿನಗಳಲ್ಲೇ ಸ್ನೇಹಕ್ಕೆ ತಿರುಗಿತ್ತು. ಸತೀಶನ ವಾಕ್‌ಪಟುತ್ವವನ್ನು ಕಂಡು ರೀಟಾ ಬೆರಗಾಗಿದ್ದಳು.

ಇವನು ಅವಳನ್ನು ಮಾತನಾಡಿಸದೆ ಹೋದರೂ ಪುಸ್ತಕ ಕೇಳುವ ನೆಪದಲ್ಲೋ, ಮತ್ತೇನಾದರೂ ನೋಟ್ಸ್ ಕೇಳುವ ನೆಪದಲ್ಲೋ ದಿನಕ್ಕೊಮ್ಮೆಯಾದರೂ ಮಾತನಾಡಿಸುತ್ತಿದ್ದಳು. ಸ್ವಭಾವತಃ ಒಂಟಿಜೀವನವನ್ನು ಬಯಸುತ್ತಿದ್ದ ಸತೀಶನಿಗೆ ಇದೊಂದು ಹೊಸ ಅನುಭವ ಎನಿಸತೊಡಗಿತು. ಕ್ರಮೇಣ ರೀಟಾಳೊಂದಿಗೆ ಮಾತನಾಡುವುದು ತುಂಬಾ ಹಿತಕರವೆನಿಸುತ್ತಿತ್ತು. ಅನೇಕ ಹುಡುಗಿಯರಿದ್ದರೂ ಸಹ ರೀಟಾಳ ವ್ಯಕ್ತಿತ್ವ ಸತೀಶನ ಹೃದಯಕ್ಕೆ ಅದೇನೋ ಮೋಡಿ ಮಾಡಿತ್ತು.

ಹೀಗೆ ತಿಂಗಳುಗಳು ಗತಿಸಿದಾಗ ಅವರಿಬ್ಬರ ನಡುವೆ ಅವರಿಗರಿವಿಲ್ಲದೆಯೆ ಎರಡೂ ಹೃದಯಗಳಲ್ಲಿ ಪ್ರೀತಿಯ ಮೊಳಕೆಯೊಡೆದಿತ್ತು. ಮೊದಮೊದಲು ಯಾಕ್ರೀ ? ಏನ್ರೀ ? ಎಂದು ಸಾಗುತ್ತಿದ್ದ ಸತೀಶನ ಸಂಭಾಷಣೆ ಈಗ ಯಾಕೇ ? ಏನೇ ? ಎನ್ನುವ ಹಂತಕ್ಕೆ ಬಂದಿತ್ತು. ಸಲಿಗೆ ಹೆಚ್ಚಿದುದರಿಂದಲೋ, ಪ್ರೀತಿಯ ಮೊಗ್ಗು ಅರಳುತ್ತಿದ್ದುದರಿಂದಲೋ ಅವರ ಕೌಟುಂಬಿಕ ವಿಷಯಗಳು ಪರಸ್ಪರ ಚರ್ಚಿತವಾಗಿ ಇಬ್ಬರೂ ಪರಸ್ಪರರ ಮನೆಯ ಬಗ್ಗೆ ಕೂಲಂಕುಷವಾಗಿ ಅರಿತುಕೊಂಡಿದ್ದರು.

ದಿನಗಳು ಕಳೆದಂತೆ ಸತೀಶ ರೀಟಾಳ ಮನೆಗೆ ಹೋಗಿಬರಲು ಪ್ರಾರಂಭಿಸಿದ್ದ. ಮೂಲತಃ ಕ್ರಿಶ್ಚಿಯನ್ನರಾದ ರೀಟಾಳ ಮನೆಯವರು ತುಂಬಾ ಸ್ನೇಹಪರ ಆಗಿದ್ದುದರಿಂದ ಸತೀಶನಿಗೆ ರೀಟಾಳ ಮನೆ ಬೇರೆ ಮನೆ ಎನಿಸದೆ ಇವನ ಪ್ರೀತಿ ಬೆಳೆಯಲು ಇನ್ನಷ್ಟು ಪುಷ್ಠಿ ನೀಡಿದಂತಾಗಿತ್ತು. ಅವಳ ಮನೆಯಲ್ಲಿಯೇ ರೀಟಾಳೊಡನೆ ಅಭ್ಯಾಸ ಮಾಡತೊಡಗಿದ್ದ.

ಇವರಿಬ್ಬರ ಸ್ನೇಹವನ್ನು ಕಂಡು ಅನೇಕ ಗೆಳೆಯರು ಸಹಿಸದಿದ್ದರೂ ಇನ್ನು ಕೆಲವರು ಏನಾದರೊಂದು ಗೇಲಿ ಮಾಡುತ್ತಿದ್ದುದು ಇವರಿಬ್ಬರಿಗೂ ತಿಳಿದಿತ್ತು. ಎಲ್ಲರೂ ಸಂಶಯಿಸುವಷ್ಟು ಅವರಿಬ್ಬರ ಮಧ್ಯೆ ಪ್ರೀತಿಯು ಹೆಮ್ಮರವಾಗಿ ಬೆಳೆದಿತ್ತು. ಇಬ್ಬರೂ ಪರಸ್ಪರ ಅನ್ಯ ಜಾತಿಯವರೆಂದು ಗೊತ್ತಿದ್ದರೂ ಸತೀಶ ರೀಟಾಳ ಸ್ನೇಹಕ್ಕೆ ಮನಸೋತಿದ್ದ. ಸಮಯ ಬಂದಾಗ ತನ್ನ ಮನದಳಲನ್ನು ಅವಳಿಗೆ ತಿಳಿಸಿದರಾಯಿತೆಂದು ಹವಣಿಸುತ್ತಿದ್ದ.

ಪರೀಕ್ಷೆಗಳು ಮುಗಿದಾಗ ಇಬ್ಬರೂ ಪಂಜರದಿಂದ ಹೊರಬಿಟ್ಟ ಗಿಳಿಗಳಂತಾಗಿದ್ದರು. ಆ ದಿನ ಸಂಜೆ ರೀಟಾ ವಾಕಿಂಗ್ ಹೋದಾಗ ರೀಟಾ ಸತೀಶನಿಗೆ 'ಏನೋ ಸತೀಶ, ಪರೀಕ್ಷೆಯಂತೂ ಮುಗಿದವು. ಮುಂದೆ ಏನ್ ಮಾಡಬೇಕಂತಾ ಮಾಡಿರುವಿ ? ಹಳ್ಳಿಗೆ ಹೋದಿ ಅಂತಂದ್ರ ನನ್ನ ನೀನು ಮರೆತಬಿಡ್ತಿ ಏನೋ ?' ಎಂದಾಗ ಸತೀಶ ತಟ್ಟನೇ ಅವಳ ಬಾಯಿಗೆ ಕೈ ಹಿಡಿದು 'ಏನೇ ಹುಚ್ಚೀ, ಈ ಮಾತನ್ನ ನೀನು ಮಾತ್ರ ಹೇಳಬೇಡ. ನಾನು ನಿನ್ನ ಎಂದಾದರೂ ಮರೀಲಿಕ್ಕೆ ಸಾಧ್ಯಾನಾ ? ನನ್ನ ಜೀವನದಲ್ಲಿ ಮರೀಲಾರದಂಥಾ ಗೆಳತಿ ನೀನೊಬ್ಬಳೇ. ನೀನೇ ಮೊದಲನೆಯ ಗೆಳತಿ, ನೀನೇ ಕೊನೆಯವಳು. ಅದಕ್ಕೆ ನನ್ನೆಲ್ಲಾ ಪ್ರೀತಿ ಮೀಸಲು' ಎಂದಾಗ ರೀಟಾ ಹೌಹಾರಿದ್ದಳು.

'ಏನ್ ಸತೀಶಾ, ನೀನ್ ಏನ್ ಹೇಳ್ತಾ ಇದ್ದಿ. ನೀನು ನುಡಿತಾ ಇರೋ ಮಾತು ನಿಜಾನಾ ? ನನ್ನನ್ನ ನಿಜವಾಗ್ಲೂ ಪ್ರೀತಿಸ್ತಿಯಾ ? ಇದು ಕನಸಲ್ಲ ತಾನೆ ?' ಎಂದಾಗ ಸತೀಶ ಅವಳ ತಲೆಮುಟ್ಟಿ ಕೈಯಲ್ಲಿ ಕೈ ಹಿಡಿದು 'ನಿಜವಾಗಿಯೂ ನಾನು ನಿನ್ನನ್ನು ಪ್ರೀತಿಸ್ತಾ ಇದ್ದೀನಿ. ರೀಟಾ, ಈ ವಿಷಯ ನಿನಗೆ ತಿಳಿಸಬೇಕು, ನಿನ್ನ ಒಪ್ಪಿಗೆ ಕೇಳಬೇಕು ಅಂತಾ ಅನೇಕ ಸಂದರ್ಭಗಳಲ್ಲಿ ಪ್ರಯತ್ನಿಸಿದೆ. ಆದರೆ ಈಗ ಕಾಲ ಕೂಡಿಬಂತು ನೋಡು, ನಾನು ನಿನ್ನನ್ನು ಮನಸಾರೆ ಮೆಚ್ಚಿದ್ದೇನೆ' ಎಂದ.

'ನೋಡು ಸತೀಶ ನೀನು ನನ್ನನ್ನ ಪ್ರೀತಿಸಿದ್ದೇನೋ ನಿಜ. ನನ್ನ ಮನಸ್ಸೂ... ನಿನ್ನ ಬಗ್ಗೆ ಪ್ರೀತಿ ತೋರಿಸುತ್ತಿದೆ ನಿಜ. ಆದರೆ..... ನಾನು ಕ್ರಿಶ್ಚಿಯನ್, ನೀನು ಹಿಂದೂ. ನಮ್ಮಿಬ್ಬರ ಮಧ್ಯೆ ಜಾತಿ ಅನ್ನೋ ಅಡ್ಡಗೋಡೆ ಇದೆ. ನನ್ನ ಮನೆಯವರು ನಮ್ಮಿಬ್ಬರ ಮದುವೆಗೆ ಸಮ್ಮತಿಸಿದರೂ ನಿನ್ನ ಮನೆಯಲ್ಲಿ ನಿನ್ನ ತಂದೆ - ತಾಯಿಗಳು ಒಪ್ತಾರಾ ? ಜಾತಿಯಿಂದಲೇ ನಿರ್ಮಿತವಾದ ಈ ಸಮಾಜ ನಮ್ಮಿಬ್ಬರ ಪ್ರೀತಿಗೆ ಪ್ರೋತ್ಸಾಹ ನೀಡುತ್ತಾ ? ಸಾಧ್ಯವೇ ಇಲ್ಲ. ಈ ಸಮಾಜದ ಕಟು ಟೀಕೆ, ನಿಂದನೆಗಳನ್ನು ಎದುರಿಸುವ ಶಕ್ತಿ ನಿನ್ನಲ್ಲಿ ಇದೆಯಾ ? ನಿನ್ನ ತಂದೆ, ತಾಯಿ, ರಕ್ತ ಸಂಬಂಧಿಗಳ ಮಾತನ್ನು ಕಡೆಗಾಣಿಸಿ ಬರುತ್ತೀಯಾ ? ಸಾಧ್ಯವಿಲ್ಲಾ. ನಾನು ನಿನ್ನ ತಂದೆ, ತಾಯಿ ಮತ್ತು ರಕ್ತ ಸಂಬಂಧಿಗಳಿಂದ ನಿನ್ನನ್ನು ದೂರ ಮಾಡಲಾರೆ. ಇಷ್ಟೆಲ್ಲಾ ಸಮಸ್ಯೆಗಳನ್ನು ನಿನ್ನ ಜೀವಕ್ಕೆ ತಂದುಕೊಳ್ಳುವುದು ಬೇಡ. ದಯವಿಟ್ಟು ನನ್ನನ್ನು ಮರೆತುಬಿಡು' ಎಂದು ರೀಟಾ ಹೇಳಿದಾಗ 'ಇಲ್ಲಾ ರೀಟಾ, ನಿನ್ನನ್ನು ಬಿಟ್ಟು ನಾನು ಬದುಕೋಕೆ ಸಾಧ್ಯಾನೇ ಇಲ್ಲ. ಏನಿದ್ದರೂ ನನ್ನ ಜೀವನ ನಿನ್ನ ಜೊತೆನೇ. ಯಾರೇ ಎಷ್ಟೇ ನಿಂದನೆ ಮಾಡಿದರೂ, ಸಮಾಜ ಕುಹಕ ದೃಷ್ಟಿಯಿಂದ ನೋಡಿದರೂ ನನ್ನ ನಿನ್ನ ಪ್ರೀತಿಯನ್ನು ಬೇರ್ಪಡಿಸಲಿಕ್ಕೆ ಸಾಧ್ಯವಿಲ್ಲ' ಎಂದಾಗ ರೀಟಾಳ ಹೃದಯ ತುಂಬಿಬಂದಿತ್ತು.

ಮನಸ್ಸಿನಲ್ಲೇ ಪ್ರೀತಿಸುತ್ತಿದ್ದ ಹೃದಯಗಳು ಒಂದಾಗಿ ಮೈಮರೆತಿದ್ದವು. ಪ್ರೀತಿಯ ಕಾಣಿಕೆಯನ್ನು ಪಡೆದ ಸತೀಶ ಸಮಯ ನೋಡಿಕೊಂಡು ತಂದೆತಾಯಿಗಳೊಂದಿಗೆ ಚರ್ಚಿಸಿ ಅವರ ಒಪ್ಪಿಗೆ ಪಡೆದು ನಿನ್ನನ್ನು ಬಾಳಸಂಗಾತಿಯನ್ನಾಗಿ ಮಾಡಿಕೊಳ್ಳುವೆ ಎಂದು ರೀಟಾಳಿಗೆ ಭಾಷೆಕೊಟ್ಟು ಊರಿಗೆ ನಡೆದಿದ್ದ.

ರೀಟಾಳನ್ನು ಬಿಟ್ಟುಬಂದ ಸತೀಶನಿಗೆ ಊರಲ್ಲಿರುವ ಮನಸ್ಸಿಲ್ಲದೆ ಹೋಯಿತು. ಪ್ರತಿಸಲಕ್ಕಿಂತ ಈ ಸಲ ಅವನಲ್ಲಿಯ ಬದಲಾವಣೆ ಕಂಡು ಅವನ ತಾಯಿ 'ಯಾಕೋ ? ಹಿಂಗ್ಯಾಕಿದ್ದೀ ? ಪರೀಕ್ಷೆಯಲ್ಲಿ ಚೆನ್ನಾಗಿ ಮಾಡಿಲ್ವೇನೋ ?' ಎಂದಾಗ, 'ಇಲ್ಲಾ ಅವ್ವಾ, ಪರೀಕ್ಷೆ ಏನೋ ಚೆನ್ನಾಗಿ ಆಗಿದೆ. ಆದರೆ......' ಎಂದಾಗ 'ಆದರೆ ಗೀದರೆ ಎಂದರೇನೋ, ಬಿಡಿಸಿ ಹೇಳಬಾರದಾ, ನನ್ನ ಮುಂದೆ ಹೇಳಬಾರದಂತಾದ್ದು ಏನಾರ ಐತೇನು ?' ಎಂದು ತಾಯಿ ಕೇಳಿದಾಗ ಸತೀಶ ತನ್ನ ಮತ್ತು ರೀಟಾಳ ಪ್ರೇಮದ ಕಥೆಯನ್ನು ತಾಯಿಗೆ ಚಾಚೂತಪ್ಪದೆ ಹೇಳಿ ಅವಳಿಗೆ ಮಾತುಕೊಟ್ಟಿರುವ ವಿಷಯವನ್ನು ತಿಳಿಸಿದ್ದ.

ತಾಯಿ ತನ್ನ ಮಗ ಬೇರೆ ಜಾತಿಯ ಹೆಣ್ಣನ್ನು ಪ್ರೀತಿಸಿದ್ದಾನೆ ಎನ್ನುವುದನ್ನು ತಿಳಿದು ಮನಸ್ಸಿಗೆ ವೇದನೆ ಎನಿಸಿದರೂ ಸಹ ಅವನನ್ನು ನೋಯಿಸಬಾರದೆಂದು 'ನಿನ್ನ ತಂದೆಗೆ ತಿಳಿಸಿ ಅವರಿಂದಲೂ ಒಪ್ಪಿಗೆ ಪಡೆದ ಮೇಲೆ ಮುಂದೆ ವಿಚಾರಿಸೋಣ' ಎಂದು ಸಮ್ಮತಿಸಿದಳು. ತಾಯಿಯ ಸಾಂತ್ವನದಿಂದ ಹರುಷಗೊಂಡಿದ್ದ ಸತೀಶ ಅಪ್ಪನ ಒಪ್ಪಿಗೆಗಾಗಿ ಚಾತಕಪಕ್ಷಿಯಂತೆ ಕಾಯುತ್ತಿದ್ದ.

ಈ ವಿಷಯ ಸತೀಶನ ತಾಯಿಯನ್ನು ಗೊಂದಲಕ್ಕೀಡುಮಾಡುವುದಲ್ಲದೆ ಅವನ ತಂದೆಗೆ ಈ ವಿಷಯ ತಿಳಿಸುತ್ತೇನೆಂಬ ಹೊಣೆ ಹೊತ್ತಿದ್ದರಿಂದ ಈ ವಿಷಯ ಅವಳಿಗೆ ನುಂಗಲಾರದ ತುತ್ತಾಗಿತ್ತು. ಮೊದಲೇ ತನ್ನ ಗಂಡ ಸಿಡುಕು ಸ್ವಭಾವದವ, ಈ ಅನ್ಯ ಜಾತಿಯ ಹುಡುಗಿಯ ಜೊತೆ ತಮ್ಮ ಮಗ ಮದುವೆಯಾಗುವನೆಂದು ತಿಳಿದರಂತೂ ಎಲ್ಲಿ ದೊಡ್ಡ ರಾದ್ಧಾಂತವಾಗುವುದೋ, ಏನೋ ? ಎಂದು ಗಂಡನ ಕೋಣೆ ಸೇರಿದ್ದಳು.

ಸತೀಶನಿಗೆ ಎಚ್ಚರವಾದಾಗ ಆಗಲೇ ಬೆಳಗಿನ ಎಂಟು ಗಂಟೆಯಾಗಿತ್ತು. ಚಹಾ ಕುಡಿದು ಇನ್ನೇನು ಹೊರಬಿದ್ದರಾಯಿತು ಎನ್ನುವಷ್ಟರಲ್ಲಿ ಅಪ್ಪನ ಕರೆ ಕೇಳಿಸಿತು. ಮತ್ತೇನು ವಿಪತ್ತು ಕಾದಿವೆಯೋ ಎಂದು ಅನುಮಾನಿಸುತ್ತ ಅಪ್ಪನ ಕೋಣೆಯೆಡೆಗೆ ನಡೆದಾಗ ಸತೀಶನ ದುಗುಡ ಇಮ್ಮಡಿಯಾಗಿತ್ತು. 'ಅಲ್ಲೋ ಸತೀಶ ನೀನು ಈಗರ ಕಾಲೇಜ್ ಮುಗಿಸಿ ಹಂಗs ಮದುವಿ ಅಂದರ ಹ್ಯಾಂಗಪಾ. ನೀನು ನಿನ್ನ ಸ್ವಂತ ಕಾಲಮ್ಯಾಲ ನಿಲ್ಲಾಕ ಕಲತಿ ಅಂದರ ಮುಂದಿನ ವಿಚಾರ. ಮೊದಲ ಚೊಲೋ ನೌಕರಿ ಮಾಡಾಕ ಪ್ರಯತ್ನ ಮಾಡು. ನೌಕರಿ ಸಿಕ್ಕಿಂದ ಮುಂದಿನ ವಿಚಾರ ಮಾಡೂನಂತ. ನಾನೂ ಅವರ , ಇವರಿಗೆ ಹೇಳಿ ಇಟ್ಟೇನಿ' ಎಂದು ಅವನ ಮದುವೆಯ ವಿಷಯವನ್ನು ಅಷ್ಟಕ್ಕೇ ಮುಗಿಸಿದ್ದರು. ಹೀಗಾಗಿ ಅಪ್ಪನ ಮುಂದೆ ತನ್ನ ವಿಷಯವನ್ನು ಹೇಳಲು ಅಸಹಾಯಕನಾಗಿ ಮರುಮಾತಿಲ್ಲದೇ ಸತೀಶ ನೌಕರಿಯ ಬೇಟೆಗೆ ತೊಡಗಿದ್ದ.

ನೌಕರಿಯ ಹುಡುಕಾಟದಲ್ಲಿ ರೀಟಾಳೊಂದಿಗಿನ ಭೇಟಿ ಬಹಳ ಕಡಿಮೆಯಾಗಿತ್ತು. ಪತ್ರ ವ್ಯವಹಾರವೂ ಕಡಿಮೆಯಾಗಿತ್ತು. ಅನಿರೀಕ್ಷಿತವಾಗಿ ರೀಟಾಳಿಂದ ಈ ರೀತಿಯಾಗಿ ಪತ್ರ ಬಂದಿತ್ತು.

ಪ್ರೀತಿಯ ಸತೀಶ್,

ನಿನ್ನ ಪತ್ರದ ಹಾದಿಯನ್ನು ದಿನಾಲು ಕಾಯುತ್ತಿರುವೆ. ನೀನು ಭಾಷೆ ಕೊಟ್ಟು ಹೋದವನು ಪುನಃ ಭೇಟಿ ಇಲ್ಲ. ಈಗಾಗಲೇ ನಮ್ಮ ಅಪ್ಪ ಅಮ್ಮಂದಿರು ನನಗಾಗಿ ಗಂಡು ಹುಡುಕತೊಡಗಿದ್ದಾರೆ. ಬೇಗನೇ ಯಾವುದಕ್ಕೂ ನಿರ್ಧರಿಸಿ ಒಮ್ಮೆ ಬಂದು ಹೋಗು.

ನಿನ್ನೊಲುಮೆಯ

ರೀಟಾ

ರೀಟಾಳ ಪತ್ರವನ್ನೋದಿದ ಸತೀಶನಿಗೆ ದೊಡ್ಡ ಸಮಸ್ಯೆಯೇ ಆಗಿತ್ತು. ಆದರೂ ಹಿಡಿದ ಛಲ ಬಿಡಬಾರದೆಂದು ಅಲ್ಲಲ್ಲಿ ಅಲೆದಾಡಿ ಕೊನೆಗೆ ಬಂಧುವೊಬ್ಬರ ಶಿಫಾರಸ್ಸಿನ ಮೇಲೆ ನೌಕರಿ ಗಿಟ್ಟಿಸಿದ್ದ. ನೌಕರಿ ಸಿಕ್ಕ ಸಂತಸವು ಒಂದೆಡೆಯಾದರೆ ತನ್ನ ಮತ್ತು ರೀಟಾಳ ಪ್ರೀತಿಯ ಕಥೆಯನ್ನು ಅಪ್ಪನಿಗೆ ಹೇಗೆ ಹೇಳಬೇಕೆಂಬುದೇ ತೋಚದಾಗಿತ್ತು. ಆದರೂ ಸಹ ಅಂದು ಧೈರ್ಯ ತಂದುಕೊಂಡು ಅಪ್ಪನ ಕೋಣೆಯಲ್ಲಿ ನಿಂತಿದ್ದ. ಅನಿರೀಕ್ಷಿತವಾಗಿ ತಮ್ಮ ಕೋಣೆಗೆ ಬಂದ ಮಗನನ್ನು ಪ್ರೀತಿಯಿಂದ ಪ್ರಶ್ನಿಸಿದ್ದರು.

ಆಗ ಸತೀಶ ತನ್ನ ಮತ್ತು ರೀಟಾಳ ಪ್ರೀತಿ, ಸಲುಗೆ ಮತ್ತು ಭಾಷೆ ಕೊಟ್ಟುದೆಲವನ್ನೂ ವಿವರಿಸಿದ್ದ. ಆಗ ಅಪ್ಪ ಸಮಾಧಾನದಿಂದ 'ಅಲ್ಲೋ ನೀ ಇರಾವ ಒಬ್ಬನ ಮಗಾ, ನೀನ ಹಿಂಗ ಮಾಡಿದ್ರ ಹ್ಯಾಂಗ, ನೀ ಸಣ್ಣಾವ ಇದ್ದಾಗ ನಿನ್ನ ಸೋದರತ್ತೆ ಮಗಳು ಸುಜಾತಾನ್ನ ನಿಂಗ ತಗೋಬೇಕಂತ ವಿಚಾರಿಸಿ ಈಗಾಗಲೇ ನಿಮ್ಮ ಅತ್ತೆಗೆ ನಾನು ಮಾತು ಕೊಟ್ಟೇನಿ. ನೀನು ಎಲ್ಲೀದರ ಕ್ರಿಶ್ಚಿಯನ್ ಹೆಣ್ಣಾನ್ನ ಮನೀಗೆ ತರತೀನಿ ಅಂದ್ರ ಹ್ಯಾಂಗಪಾ. ನಮ್ಮ ಸಂಪ್ರದಾಯ, ನಮ್ಮ ಸಮಾಜ ಎಲ್ಲಾ ಬಿಟ್ಟು ಬ್ಯಾರೆ ಹೆಣ್ಣ ತಂದರ ಊರನ್ನ ಮಂದೇರ ಏನ್ ಅಂದಾರು ಅಂತ ವಿಚಾರ ಮಾಡೀ ಏನು ? ನಮ್ಮದು ಪೂರ್ವಜರಿಂದಲೂ ಗೌರವಯುತ ಮನೆತನ ಐತಿ. ಇಷ್ಟೆಲ್ಲಾ ಮಾನ, ಮರ್ಯಾದಿಯಿಂದ ಇರುವಾಗ ಈ ಅಪಮಾನ ಆಗೂವಂತಾ ಕೆಲಸ ಮಾಡಬ್ಯಾಡ. ಈಗಾಗಲೇ ನಿಮ್ಮ ಅತ್ತಿ ಗಟ್ಯಾಗಿ ನಿನಗ ಮಗಳನ್ನ ಕೊಡ್ತೀನಿ ಅಂತ ಮನ್ಯಾಗ ಬಂದ ಕುಂತಾಳ. ಅಕಿಗೆ ನಾ ಏನ್ ಉತ್ತರ ಕೊಡಲಿ, ನೀನ ವಿಚಾರ ಮಾಡಿ ಹೇಳು ನೋಡೂಣು' ಎಂದಾಗ ಅಪ್ಪನ ಮಾತಿಗೆ ಸತೀಶ ದಿಕ್ಕುತೋಚದವನಾಗಿದ್ದ.

ಆದರೂ ಸಹ ಒಂದು ಮಾತು ಹೇಳಿಯೇ ಬಿಡಬೇಕೆಂದು 'ನೋಡಪ್ಪಾ, ನಾನು ರೀಟಾಳನ್ನು ಪ್ರೀತಿಮಾಡೇನಿ. ಅದೂ ಅಲ್ಲದೆ ಅವಳಿಗೆ ನಿಮ್ಮನ್ನೆಲ್ಲಾ ಒಪ್ಪಿಸಿ ಮದುವೀನೂ ಆಗತೇನಿ ಅಂತಾ ಮಾತನ್ನೂ ಕೊಟ್ಟೇನಿ. ಅವಳು ಬೇರೆ ಜಾತಿಯವಳಾಗಿದ್ದರೂ ಸಹ ತುಂಬಾ ವಿಶಾಲ ಹೃದಯದವಳು. ಯಾವುದೇ ಭೇದಭಾವ ಇಲ್ಲದಂತ ಹುಡುಗಿ ಸಿಕ್ಕಿದ್ದು ನನ್ನ ಪುಣ್ಯ. ಆದ್ದರಿಂದ ನಾನು ಮದುವಿ ಆಗೋದಾದ್ರ ರೀಟಾಳನ್ನೇ ಹೊರತು ಬೇರೆ ಯಾರ ಕೂಡಾನೂ ಸಾಧ್ಯವಿಲ್ಲ' ಎಂದಾಗ ಅಪ್ಪನ ಸಿಟ್ಟು ಏರಿತು.

'ನಿನ್ನಂತಹ ಮಕ್ಕಳನ್ನ ತಗೊಂಡು ಏನ್ ಮಾಡೂದು ? ತಂದೆ - ತಾಯಿಯರ ಮಾತನ್ನು ಕೇಳದ ಮಕ್ಕಳು ಇದ್ರೂ ಸತ್ತಂಗ. ಇಷ್ಟೆಲ್ಲಾ ರಾದ್ಧಾಂತ ಮಾಡಿ ನಮ್ಮ ಸಂಸಾರವನ್ನು ಎರಡು ಮಾಡಾಕ ತಯಾರ ಆಗಿ. ಇರೋ ಒಬ್ಬ ಮಗನಿದ್ದು ನೀನು ನಮ್ಮ ಮುಪ್ಪಿನ ಕಾಲಕ್ಕ ಯಾವ ಸುಖಾನೂ ಕೊಡೂದುಲ್ಲ. ಎಲ್ಲಾದ್ರೂ ಹಾಳಾಗಿ ಹೋಗು' ಎಂದು ಸಿಟ್ಟಿಗೆದ್ದು ಹೊರನಡೆದಿದ್ದರು.

ಅಷ್ಟರಲ್ಲೇ ವಕ್ಕರಿಸಿದವಳು ಹೆಣ್ಣು ಕೊಡಬೇಕೆಂದು ಬಂದ ಸೋದರತ್ತೆ 'ಅಲ್ಲಪಾ ಸತೀಶಾ, ನಿಮ್ಮ ತಂದೆತಾಯಿನ್ನ ಮತ್ತ ನಮ್ಮನ್ನ ಎಲ್ಲಾ ದೂರಮಾಡಿ ಆ ಬ್ಯಾರೆ ಜಾತಿ ಹುಡುಗಿನ್ನ ಮಾಡಿಕೊಳ್ಳುವಂಥಾ ಹುಚ್ಚು ನಿನಗೇನು ಬಂದೈತಿ. ನನ್ನ ಮಗಳರ ಏನ್ ಆಗ್ಯಾಳ. ಅಕೀನೂ ಪಿ.ಯು.ಸಿ. ತನಕಾ ಓದ್ಯಾಳ. ಅಲ್ಲದನ ನಿಮ್ಮ ಮಾವ ನೀ ಏನ್ ಕೇಳಿದ್ರೂನೂ ಕೊಡಾಕ ತಯಾರ ಅದಾನ. ಹಿಂಗ ಇರೂವಾಗ ಎಲ್ಲಾ ಸಂಬಂಧಿಕರನ್ನ ದೂರ ಮಾಡ್ತೀಯಾ ? ನಮ್ಮನ್ನೆಲ್ಲಾ ದೂರಮಾಡಿ ಇರಾಕ ನಿನ್ನ ಮನಸು ಒಪ್ಪುತ್ತಾ ?' ಎಂದ ಅತ್ತೆಯ ಬಿರುಸಿನ ಮಾತು ಸಿಡಿಲಿನಂತೆ ಎದೆಗೆ ಎರಗಿತ್ತು. ಇವರೆಲ್ಲರ ಮಾತಿಗೆ ಅಮ್ಮನೂ 'ಹೂಂ' ಗುಟ್ಟಿದಾಗ ಸತೀಶನ ಮನಸ್ಸು ತೊಳಲಾಡುತ್ತಿತ್ತು.

ಇನ್ನು ಇವರಿಗೆ ಯಾವ ರೀತಿ ಹೇಳಿದರೂ ಪ್ರಯೋಜನವಾಗುವುದಿಲ್ಲ ವೆಂದುಕೊಂಡು ಕೊನೆಗೆ ರಿಜಿಸ್ಟರ್ ಮದುವೆ ಮಾಡಿಕೊಂಡರಾಯಿತೆಂಬ ನಿರ್ಧಾರಕ್ಕೆ ಸತೀಶ ಬಂದಿದ್ದ. ಎಲ್ಲಾ ಬಟ್ಟೆಗಳನ್ನು ಪ್ಯಾಕ್ ಮಾಡಿಕೊಂಡು ಇನ್ನೇನು ಮನೆ ಬಿಡಬೇಕೆನ್ನುವಷ್ಟರಲ್ಲಿ ಪೋಸ್ಟಮನ್ ಬಾಗಿಲಲ್ಲಿ ಬಂದಿದ್ದ.

'ಸಾಹೇಬ್ರ ನಿಮ್ಮ ಹೆಸರಿಗೆ ಪತ್ರ ಬಂದೈತ್ರೀ' ಎಂದಾಗ ಸತೀಶ ಗಡಬಡಿಸಿ ಬಂದವನೆ ಅವನಿಂದ ಪತ್ರ ಇಸಿದುಕೊಂಡಿದ್ದ.

ಅದು ಬೇರೆ ಯಾರ ಪತ್ರವಾಗಿರದೆ ರೀಟಾಳ ಮದುವೆಯ ಆಮಂತ್ರಣ ಪತ್ರವಾಗಿತ್ತು. ಅದನ್ನು ನೋಡಿದವನೇ ಅರ್ಧ ಕುಸಿದು ಹೋಗಿದ್ದ. ಪೂರ್ತಿ ತೆಗೆದು ನೋಡಿದಾಗ "ರೀಟಾ ವೆಡ್ಸ್ ಜೋಸೆಫ್" ಎಂದು ಇಂಗ್ಲೀಷಿನಲ್ಲಿ ಅಂದವಾಗಿ ಮುದ್ರಿತವಾಗಿತ್ತು. ಅಲ್ಲದೆ ಪತ್ರದೊಂದಿಗೆ ಸಣ್ಣ ಚೀಟಿಯೂ ಇತ್ತು. ತೆಗೆದು ಓದಿದಾಗ,

ಪ್ರೀತಿಯ ಸತೀಶ,

ಕಾಲ ಮಿಂಚಿದೆ, ಬೇಸರಪಡದಿರು. ನಿನ್ನ ಶುಭ ಹಾರೈಕೆಯೊಂದೇ ನನಗೆ ಬೇಕಾಗಿದೆ.

ಇಂತಿ,

ರೀಟಾ

ಸತೀಶನ ಕಣ್ಣಂಚಿನಲ್ಲಿ ನೀರು ತನಗರಿವಿಲ್ಲದಂತೆಯೇ ಬಂದಿತ್ತು. ಕೊನೆಗೂ ರೀಟಾ ಮಾತೇ ಸತ್ಯವಾಗಿತ್ತು. ಕ್ರಾಂತಿ ಮಾಡಹೊರಟಿದ್ದ ಸತೀಶನಿಂದ ರೀಟಾ ಕೈಜಾರಿದ್ದಳು. ಕೊನೆಗೂ ಸಂಪ್ರದಾಯಕ್ಕೆ ಶರಣಾಗಿ ಸತೀಶ ಅಪ್ಪನ ಆಜ್ಞೆಯನ್ನು ಪಾಲಿಸಿದ್ದ.

# ಲೇಖಕರ ವಿಳಾಸ

- **ಡಾ. ಪಾಟೀಲ ಪುಟ್ಟಪ್ಪ**
  ನಂ. ೪೦-ಎ, 'ಪ್ರಪಂಚ'
  ಕವಿರಾಜ ಮಾರ್ಗ, ವಿಶ್ವೇಶ್ವರ ನಗರ,
  ಹುಬ್ಬಳ್ಳಿ.

- **ಆರ್ಯ**
  ೯ ನೇ ಕ್ರಾಸ್, ಕಲ್ಯಾಣನಗರ,
  ಧಾರವಾಡ - ೫೮೦ ೦೦೭.
  ಧಾರವಾಡ - ೫೮೦ ೦೦೩.

- **ವಿಷ್ಣು ನಾಯ್ಕ**
  ಸಕಾಲಿಕ ಪತ್ರಿಕೆ,
  ಅಂಬಾರಕೊಡ್ಲ.
  ತಾ. ಅಂಕೋಲಾ (ಉ. ಕ.)

- **ರವಿ ಬೆಳಗೆರೆ**
  ನಂ. ೨, ಪೆಟ್ರೋಲ್ ಬಂಕ್ ಹತ್ತಿರ,
  ಎಂಭತ್ತು ಅಡಿ ರಸ್ತೆ, ಕದಿರೇನ ಹಳ್ಳಿ,
  ಪದ್ಮನಾಭ ನಗರ,
  ಬನಶಂಕರಿ ಎರಡನೇ ಹಂತ,
  ಬೆಂಗಳೂರು - ೫೬೦ ೦೭೦.

- **ಡಾ. ಬಸವರಾಜ ಸಾದರ**
  'ನನಸು', ಎರಡನೇ ಕ್ರಾಸ,
  ಸಪ್ತಾಪೂರ,
  ಧಾರವಾಡ - ೫೮೦ ೦೦೧.

- **ಪ್ರೊ. ಕೀರ್ತಿನಾಥ ಕುರ್ತಕೋಟಿ**
  ರೈಲ್ವೇ ಗೇಟ್ ಹತ್ತಿರ,
  ಶ್ರೀನಗರ,
  ಧಾರವಾಡ - ೫೮೦ ೦೦೩.

- **ಡಾ. ಗಿರಡ್ಡಿ ಗೋವಿಂದರಾಜ**
  'ಸರೋಜ'
  ನವೋದಯ ನಗರ,

- **ಡಾ. ಕಮಲಾ ಹೆಮ್ಮಿಗೆ**
  ನಂ. ೫೦, 'ಆಶೀರ್ವಾದ',
  ಶಿವಗಿರಿ,
  ಧಾರವಾಡ - ೫೮೦ ೦೦೭.

- **ಪ್ರೊ. ಕೊರಗಲ್ ವಿರೂಪಾಕ್ಷಪ್ಪ**
  ಬಸವೇಶ್ವರ ನಗರ,
  ಹಾವೇರಿ.

- **ಸಿದ್ಧಲಿಂಗ ದೇಸಾಯಿ**
  ಮುಮ್ಮಿಗಟ್ಟಿ.
  ತಾ. ಜಿ. ಧಾರವಾಡ

- **ಬಸೂ ಬೇವಿನಗಿಡದ**
  ಕಾರ್ಯಕ್ರಮ ನಿರ್ವಾಹಕರು,
  ಆಕಾಶವಾಣಿ,
  ಧಾರವಾಡ - ೫೮೦ ೦೦೮.

- **ಮೋಹನ ನಾಗಮ್ಮನವರ**
  'ಮಹಾಮನೆ ಪ್ರಕಾಶನ'
  ನವೋದಯ ನಗರ,
  ಧಾರವಾಡ - ೫೮೦ ೦೦೩.

- **ಸುಬ್ಬು ಹೊಲೆಯಾರ್**
  ರಂಗಪರಿಕರ ವಿಭಾಗ
  ದೂರದರ್ಶನ ಕೇಂದ್ರ
  ಜಯಚಾಮರಾಜ ನಗರ,
  ಬೆಂಗಳೂರು - ೫೬೦ ೦೦೬.

- **ಲೋಹಿತ್ ನಾಯ್ಕರ್**
  'ರೇಣುಕಾ ನಿಲಯ'
  ಸನ್ಮತಿ ಮಾರ್ಗ,
  ಧಾರವಾಡ - ೫೮೦ ೦೦೧.

- **ಪ್ರಹ್ಲಾದ ಅಗಸನಕಟ್ಟೆ**
  ನಂ. ೬, ಬ್ಲಾಕ್ ನಂ. ೨,
  ಕೆ.ಎಂ.ಸಿ. ಕ್ವಾರ್ಟರ್ಸ್, ವಿದ್ಯಾನಗರ,
  ಹುಬ್ಬಳ್ಳಿ - ೫೮೦ ೦೨೧.

- **ಆರೂರು ಲಕ್ಷ್ಮಣ ಶೇಟ್**
  ೩೭, 'ನಿಸರ್ಗ', ಶಕ್ತಿ ಕಾಲನಿ,
  ನೃಪತುಂಗ ಬೆಟ್ಟದ ಹತ್ತಿರ,
  ಹುಬ್ಬಳ್ಳಿ - ೫೮೦ ೦೩೨.

- **ಸುದರ್ಶನ ದೇಸಾಯಿ**
  'ಹಳದಿ ಚೇಳು', ಸಾರಸ್ವತಪುರ,
  ಧಾರವಾಡ - ೫೮೦ ೦೦೪.

❖❖❖❖❖

- **ಯೋಗೀಶ ಜಿ.**
  ಆಂಗ್ಲಭಾಷಾ ಉಪನ್ಯಾಸಕರು
  ಶ್ರೀ ಗುರುವಿದ್ಯಾಧಿರಾಜ
  ಪದವಿಪೂರ್ವ ಕಾಲೇಜು,
  ಭಟ್ಕಳ - ೫೮೧ ೩೨೦.

- **ಅಂಜನಾ ಹೆಗಡೆ**
  ದೊಡ್ಡಮನೆ, ಮತ್ತಿಗಾರ
  ಶಿರಸಿ - ೫೮೧ ೪೫೦ (ಉ.ಕ.)

- **ಎಂ. ಜೆ. ಪದ್ಮಿನಿ**
  ಸ್ಟೆನೋಗ್ರಾಫರ
  ಸಂಶೋಧನಾ ನಿರ್ದೇಶಕರ ಕಛೇರಿ,
  ಕೃ.ವಿ.ವಿ., ಗಾಂಧೀ ಕೃಷಿ ವಿಜ್ಞಾನ ಕೇಂದ್ರ,
  ಬೆಂಗಳೂರು - ೫೬೦ ೦೬೫.

- **ಸುನಂದಾ ಕಡಮೆ**
  ನಂ. ೯೦, 'ನಾಗಸುಧೆ'
  ಕಾಳಿದಾಸ ನಗರ,
  ವಿದ್ಯಾನಗರ ವಿಸ್ತೀರ್ಣ,
  ಹುಬ್ಬಳ್ಳಿ - ೫೮೦ ೦೩೧.

- **ಅಬ್ದುಲ್ ರೆಹಮಾನ**
  ಮು. ಡೋಮಗೇರಾ ಪೊ. ಕೆಸರೊಳ್ಳಿ
  ತಾ. ಹಳಿಯಾಳ (ಉ. ಕ.)

- **ಸಂಕೇತ ಪಾಟೀಲ**
  ಮನೆ ನಂ. ೬, 'ಶ್ರೀನಿಕೇತನ',
  ರಾಣಿಚೆನ್ನಮ್ಮ ನಗರ,
  ಮೊದಲನೆಯ ಹಂತ,
  ಬೆಳಗಾವಿ - ೫೯೦ ೦೦೬.

- **ಸುನಂದಾ ಹಾಲಬಾವಿ**
  'ಸಿರಿ ಕಟ್ಟಡ' ಹಟ್ಟಿಹೊಳಿ ಗಲ್ಲಿ,
  ಶಹಾಪೂರ,
  ಬೆಳಗಾಂವ - ೫೯೦ ೦೦೩.

- **ರವಿಕಾಂತ ಎಂ. ಕೆ.**
  ಮನೆ. ನಂ. ೩೯, ಮೊದಲನೆಯ ತಿರುವು,
  ಜನತಾ ಕಾಲೋನಿ, ಮರಳೂರು ಅಂಚೆ,
  ತುಮಕೂರು - ೫೭೨ ೧೦೫.

- **ವೀಣಾ ಕುಲಕರ್ಣಿ**
  'ಕಮಲಕುಂಜ' ೬೧/೧,
  ಪಂಚಕಭೇರಿ ಓಣಿ,
  ಧಾರವಾಡ - ೫೮೦ ೦೦೧.

- **ಲಕ್ಷ್ಮಣ ಧೋಂಡೆ**
  ಹೂವಿನ ಶಿಗ್ಲಿ - ೫೮೧ ೧೧೮.
  ತಾ. ಸವಣೂರು ಜಿ. ಹಾವೇರಿ

- **ಎಚ್. ಎ. ಭೋಗಲೆ**
  ಮಲಪ್ರಭಾ ವಸತಿ ನಿಲಯ,
  ರೂಮ್ ನಂ. ೫೩, ಕ. ವಿ. ವಿ.,
  ಧಾರವಾಡ - ೫೮೦ ೦೦೩.

- **ಪ್ರಸನ್ನ ಬೆನ್ನೂರ**
  ಅಗಡಿ - ೫೮೧ ೧೨೮.
  ತಾ. ಜಿ. ಹಾವೇರಿ.

- **ಡಾ. ಚಿತ್ರಾ ದೈಜೋಡೆ**
  'ನಿಸರ್ಗ', ರಜತಗಿರಿ,
  ಧಾರವಾಡ - ೫೮೦ ೦೦೪.

- **ಎಸ್. ಎಚ್. ರೆಡ್ಡಿ**
  ಸಾ. ವಲಸೆ,
  ಚಳ್ಳಕೆರೆ,
  ಜಿ. ಚಿತ್ರದುರ್ಗ

- **ಸರೋಜಾ ರಾವ್**
  ನಂ. ೧೦, ದೇಸಾಯಿ ಕಾಲನಿ,
  ಯುನಿವರ್ಸಿಟಿ ಕ್ರಾಸ್,
  ಧಾರವಾಡ - ೫೮೦ ೦೦೩.

- **ವಿಜಯ ಕಾಂಬಳೆ**
  ನ್ಯೂ ಬಾಯ್ಸ್ ಹಾಸ್ಟೆಲ್,
  ರೂಮ್ ನಂ. ೩೪, ಕ. ವಿ. ವಿ.,
  ಧಾರವಾಡ - ೫೮೦ ೦೦೩.

- **ಶಬ್ಬೀರ ಅಹ್ಮದ ಮಡಕಿ**
  ಪೋ. ಇಜೇರಿ ತಾ. ಜೇವರ್ಗಿ
  ಜಿ. ಗುಲಬರ್ಗಾ - ೫೮೫ ೩೧೦.

- **ಸುಕುಮಾರ ಎಸ್. ಸಿಮಾನಿ**
  ಸಂಶೋಧನಾ ವಿದ್ಯಾರ್ಥಿ,
  ನ್ಯೂ ಬಾಯ್ಸ್ ಹಾಸ್ಟೆಲ್,
  ರೂ. ನಂ. ೨೩, ಕ. ವಿ. ವಿ.,
  ಧಾರವಾಡ - ೫೮೦ ೦೦೩.

- **ಖುರ್ಷಿದ್ ಆಲಂ ಮೋಮೀನ್**
  ನಂ. ೧೦೭೩, ಗುರುವಾರ ಪೇಟ,
  ಚನ್ನಮ್ಮನ ಕಿತ್ತೂರು - ೫೯೧ ೧೧೫.
  ಜಿ. ಬೆಳಗಾವಿ

- **ಕೆ. ಜಿ. ಭದ್ರಣ್ಣವರ**
  'ಬಸವ ನಿಲಯ', ಮಾರುತಿ ನಗರ,
  ಪೋ. ಮುದ್ದೇಬಿಹಾಳ - ೫೮೬ ೨೧೨.
  ಜಿ. ವಿಜಾಪೂರ

- **ಹಜರೇಸಾಬ ಹು. ನದಾಫ**
  ಪೋ. ಹತ್ತಿಮತ್ತೂರ,
  ಕುರುಬರ ಓಣಿ, ತಾ. ಸವಣೂರ
  ಜಿ. ಹಾವೇರಿ - ೫೮೧ ೧೧೮.

- **ಜಯಪ್ರಕಾಶ ಅಬ್ಬಿಗೇರಿ**
  ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್,
  ಶಾಖೆ ಹಿರೇಕುಂಬಿ ತಾ. ಸವದತ್ತಿ
  ಜಿ. ಬೆಳಗಾವಿ

- **ಕೆ. ಸಿದ್ರಾಮ**
  ಮೋರೆ ಬಿಲ್ಡಿಂಗ್,
  ದುರ್ಗಾದೇವಿ ಕಾಲನಿ, ಸಪ್ತಾಪೂರ,
  ಧಾರವಾಡ - ೫೮೦ ೦೦೧.

- **ವೈ. ಬಿ. ಕಡಕೋಳ**
  ಮುನವಳ್ಳಿ - ೫೯೧ ೧೧೭.
  ತಾ. ಸವದತ್ತಿ
  ಜಿ. ಬೆಳಗಾವಿ

- **ಸುಮಾ ಜೋಶಿ**
  ನವಿಲುತೀರ್ಥ - ೫೯೧ ೧೧೬.
  ತಾ. ಸವದತ್ತಿ
  ಜಿ. ಬೆಳಗಾವಿ

# ಅನುಬಂಧ

## ಕನ್ನಡದ ಸಾಂಸ್ಕೃತಿಕ ಸಂಸ್ಥೆ ಕರ್ನಾಟಕ ವಿದ್ಯಾವರ್ಧಕ ಸಂಘ

• ಡಾ. ಜಿ. ಎಂ. ಹೆಗಡೆ

ಕರ್ನಾಟಕ ಸಾಂಸ್ಕೃತಿಕ ಇತಿಹಾಸದಲ್ಲಿ ಕನ್ನಡ ನಾಡು - ನುಡಿ, ಸಾಹಿತ್ಯದ ಏಳಿಗೆಯ ಏಕೈಕ ಉದ್ದೇಶದಿಂದ ಹುಟ್ಟಿಕೊಂಡ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ನೂರಾಹತ್ತು ವರ್ಷಗಳ ದೊಡ್ಡ ಪರಂಪರೆಯಿದೆ. ದಕ್ಷಿಣ ಮಹಾರಾಷ್ಟ್ರವಾಗಿದ್ದ ಧಾರವಾಡದಲ್ಲಿ ಮರಾಠಿ ಪ್ರಾಬಲ್ಯದಿಂದ ಕನ್ನಡದ ಸ್ಥಿತಿ ಶೋಚನೀಯವಾಗಿದ್ದ ಸಂದರ್ಭದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ (೨೦ ಜುಲೈ, ೧೮೯೦) ಸ್ಥಾಪಿತವಾದದ್ದು ಒಂದು ಚಾರಿತ್ರ್ಯಿಕ ಘಟನೆಯಾಗಿದೆ. ಅಖಿಲ ಕರ್ನಾಟಕ ವ್ಯಾಪ್ತಿಯ ಮೊದಲ ಸಾಂಸ್ಕೃತಿಕ ಸಂಸ್ಥೆಯಾದ ಕರ್ನಾಟಕ ವಿದ್ಯಾವರ್ಧಕ ಸಂಘದ ಮೊದಲ ಅಧ್ಯಕ್ಷರು ಶಾಮರಾವ್ ವಿಠ್ಠಲ ಕಾಯ್ಕಿಣಿ. ಕಾರ್ಯದರ್ಶಿ ರಾ. ಹ. ದೇಶಪಾಂಡೆ. ಕರ್ನಾಟಕದ ವಿವಿಧ ಭಾಗಗಳ ಕನ್ನಡಿಗರು ಇದರ ಆಜೀವ ಸದಸ್ಯರು. ಕನ್ನಡಕ್ಕಾಗಿ ದುಡಿದ ಋಿಗ್ಲರ್, ಕಿಟೆಲ್, ಬಿ. ಎಲ್. ರೈಸ್ ಮೊದಲಾದ ವಿದೇಶಿ ಮಿಶನರಿಗಳು ಗೌರವ ಸದಸ್ಯರಾಗಿ; ಬಿ. ಎಂ. ಶ್ರೀ, ಮಾಸ್ತಿ, ಆಲೂರು ವೆಂಕಟರಾವ್ ಮೊದಲಾದ ಹಿರಿಯ ಸಾಹಿತಿಗಳು ಪ್ರಧಾತೃಗಳಾಗಿದ್ದ ಕರ್ನಾಟಕ ವಿದ್ಯಾವರ್ಧಕ ಸಂಘ ಕನ್ನಡದ ಏಳಿಗೆಗೆ ಶ್ರಮಿಸಲು ಮುಂದಾಯಿತು. ಕನ್ನಡ ಸಾಹಿತ್ಯ ಪರಿಷತ್ತು ಮತ್ತು ನಾಡಿನ ಬೇರೆ ಬೇರೆ ಕನ್ನಡಪರ ಸಂಘ - ಸಂಸ್ಥೆಗಳಿಗೆ ಕರ್ನಾಟಕ ವಿದ್ಯಾವರ್ಧಕ ಸಂಘ ಮಾತೃಸಂಸ್ಥೆಯಾಗಿದೆ. ಕನ್ನಡದ ಪುನರುಜ್ಜೀವನದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಅದ್ವಿತೀಯ ಕಾರ್ಯ ಮಾಡಿದೆ. ಮುಂಬಯಿ ಕರ್ನಾಟಕದಲ್ಲಿ ಮರಾಠಿ; ನಿಜಾಮರ ಆಡಳಿತದ ಹೈದರಾಬಾದ್ ಕರ್ನಾಟಕದಲ್ಲಿ ಉರ್ದು, ತೆಲುಗು; ಮದ್ರಾಸ್ ಪ್ರಾಂತದಲ್ಲಿ ತಮಿಳು ಭಾಷಾ ಪ್ರಾಬಲ್ಯ ಪಡೆದು ಕನ್ನಡ ನಿರ್ಲಕ್ಷ್ಯಕ್ಕೆ ಗುರಿಯಾದಾಗ ಕನ್ನಡಕ್ಕೆ ಶಿಕ್ಷಣದಲ್ಲಿ ಸಾಹಿತ್ಯಿಕ, ಸಾಂಸ್ಕೃತಿಕ ಜೀವನದಲ್ಲಿ

ಗಣ್ಯಸ್ಥಾನವನ್ನು ತಂದುಕೊಡಲು ಕರ್ನಾಟಕ ವಿದ್ಯಾವರ್ಧಕ ಸಂಘ ಮುಂದಾಯಿತು. ಆರಂಭದಲ್ಲಿ ಕನ್ನಡದಲ್ಲಿ ಮಾತನಾಡಲು, ಉಪನ್ಯಾಸ ಮಾಡಲು ಹುರಿದುಂಬಿಸಿ, ಕನ್ನಡ ಉಪನ್ಯಾಸಮಾಲೆ, ಕನ್ನಡ ವಾಕ್‌ಸ್ಪರ್ಧೆಗಳನ್ನು ಅದು ನಡೆಸಿತು. ಸಾಹಿತ್ಯಿಕ ಪರೀಕ್ಷೆಯನ್ನು ನಡೆಸುವ ಮೂಲಕ ಕನ್ನಡದ ಅಭ್ಯಾಸಕ್ಕೆ ಬುನಾದಿ ಹಾಕಿತು. ಧಾರವಾಡದಲ್ಲಿ ಗ್ರಂಥಕರ್ತರ ಸಮ್ಮೇಳನ ಜರುಗಿಸಿ ಕನ್ನಡ ಲೇಖಕರ ಗ್ರಂಥ ಪ್ರಕಾಶನಕ್ಕೆ ಉತ್ತೇಜನ ನೀಡಿತು. ಜಿಲ್ಲಾ ಸಾಹಿತ್ಯ ಸಮ್ಮೇಳನ ಪರಂಪರೆಯನ್ನು ಮೊದಲು ಆರಂಭಿಸಿದ್ದು ಕರ್ನಾಟಕ ವಿದ್ಯಾವರ್ಧಕ ಸಂಘ. ಕನ್ನಡ ವಾಙ್ಮಯ ಪ್ರಸಾರಕ್ಕಾಗಿ 'ವಾಗ್ಭೂಷಣ ಪಂಡಿತ' ಪತ್ರಿಕೆಯನ್ನು ೧೮೯೬ ರಲ್ಲಿ ಆರಂಭಿಸಿ ೨೩ ವರ್ಷಗಳ ಕಾಲ ನಡೆಸಿ ಕನ್ನಡ ವಿದ್ವತ್ತಿನ ಬೆಳವಣಿಗೆಗೆ ಕಾರಣವಾಯಿತು.

ಧಾರವಾಡದ ಕಲೆಕ್ಟರಾಗಿದ್ದ ಗಿಬ್ಸ್ ಅವರಿಂದ ನಿವೇಶನ ಪಡೆದುಕೊಂಡು ೧೯೦೫ ರಲ್ಲಿ ಆರಂಭಗೊಂಡ ಕರ್ನಾಟಕ ವಿದ್ಯಾವರ್ಧಕ ಸಂಘದ ಕಟ್ಟಡ ಮೈಸೂರು ಮಹಾರಾಜರು ಹಾಗೂ ಸಾರ್ವಜನಿಕರು, ಕನ್ನಡಾಭಿಮಾನಿಗಳ ಆರ್ಥಿಕ ಸಹಾಯದಿಂದ ನಗರದ ಹೃದಯಸ್ಥಾನದಲ್ಲಿ ಸಾಂಸ್ಕೃತಿಕ ಕೇಂದ್ರವಾಗಿ ಬೆಳೆದು ನಿಂತಿದೆ. ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಬಹು ಹಿಂದೆಯೇ ಆರಂಭಗೊಂಡ ಗ್ರಂಥಾಲಯ ಮತ್ತು ಶಾಂತೇಶ ವಾಚನಾಲಯ ಇಂದಿಗೂ ಅಪೂರ್ವ ಭಂಡಾರವಾಗಿದೆ. ಸಾಹಿತ್ಯ ಪ್ರೇಮಿ ಕನ್ನಡ ಓದುಗರಿಗೆ ಪ್ರಿಯವಾದ ತಾಣವಾಗಿದೆ.

ಕರ್ನಾಟಕ ವಿದ್ಯಾವರ್ಧಕ ಸಂಘ ತನ್ನ ನೂರಾಹದಿಮೂರು ವರ್ಷಗಳ ಇತಿಹಾಸದಲ್ಲಿ ನೂರಕ್ಕೂ ಹೆಚ್ಚು ಗ್ರಂಥಗಳನ್ನು ಪ್ರಕಟಿಸಿದೆ. ಗಳಗನಾಥರಂತಹ ಕಾದಂಬರಿಕಾರರ ಮೊದಲ ಪುಸ್ತಕ ಪ್ರಕಟಿಸಿ ಸಾಹಿತ್ಯ ಕ್ಷೇತ್ರದಲ್ಲಿ ಅವರು ಬೆಳಗುವಂತೆ ಮಾಡಿದೆ. ೧೮೯೨ ರಲ್ಲಿ ಭವಭೂತಿಯ ಉತ್ತರ ರಾಮಚರಿತದ ಕಾವ್ಯಾವಲೋಕನ, ಶಬ್ದಾನುಶಾಸನ, ಕನ್ನಡದ ನೆಲೆ, ಕರ್ನಾಟಕ ಜನಜೀವನ, ಜೈನಧರ್ಮ ಪರಿಭಾಷೆ, ಸರ್ವಜ್ಞನ ವಚನಗಳು, ಕರ್ನಾಟಕದ ಹರಿದಾಸರು, ಅಸಂಗತನಾಟಕಗಳು, ಚೆನ್ನವೀರ ಕಣವಿ ಕಾವ್ಯದೃಷ್ಟಿ, ರುಚಿ ಮೊದಲಾದ ಮೌಲಿಕ ಸಾಹಿತ್ಯ ಕೃತಿಗಳನ್ನು ಪ್ರಕಟಿಸಿದೆ. ದಕ್ಷಿಣ ಕರ್ನಾಟಕ - ಉತ್ತರ ಕರ್ನಾಟಕದ ಸಾಂಸ್ಕೃತಿಕ ಬಾಂಧವ್ಯವನ್ನು ಬೆಳೆಸಲು ಕರ್ನಾಟಕ ವಿದ್ಯಾವರ್ಧಕ ಸಂಘ ಮೊದಲಿನಿಂದಲೂ ಯತ್ನಿಸುತ್ತ ಬಂದಿದೆ. ನಾ. ವೆಂ. ಕುರಡಿಯವರು 'ಆರ್. ನರಸಿಂಹಾಚಾರ್ಯರ ಜೀವನ ಚರಿತ್ರೆ'ಯನ್ನು, ಬಿ. ವೆಂಕಟಾಚಾರ್ಯರ 'ಅಮೃತಪುಲಿನಗಳು' ಪುಸ್ತಕಗಳನ್ನು ಸಂಘ ಪ್ರಕಟಿಸಿದೆ. ೧೯೦೦ ರಿಂದ ೧೯೪೦ ರ ವರೆಗೆ ೧೭೫ ಗ್ರಂಥಕಾರರಿಗೆ ೧೮,೯೯೦ ರೂಪಾಯಿಗಳ ಸಂಭಾವನೆ ನೀಡಿ ಅವರ ಸಾಹಿತ್ಯ ವ್ಯವಸಾಯಕ್ಕೆ ಸಂಘ ಪ್ರೋತ್ಸಾಹ ನೀಡಿದೆ. ಬೇಂದ್ರೆ, ಬೆಟಗೇರಿಯವರು ೧೯೦೬ ರಲ್ಲಿ ಆರಂಭಿಸಿದ ನಾಡಹಬ್ಬದ ಉತ್ಸವವನ್ನು ನಿರಂತರವಾಗಿ ಸಂಘ ನಡೆಸಿಕೊಂಡು ಬಂದಿದೆ.

ಕನ್ನಡಿಗರಲ್ಲಿ ಭಾಷಾಭಿಮಾನ, ಕನ್ನಡ ಸಂಸ್ಕೃತಿಯ ಅಭಿಮಾನ ಬೆಳೆಸಿದ ಕರ್ನಾಟಕ ವಿದ್ಯಾವರ್ಧಕ ಸಂಘವು ಕರ್ನಾಟಕ ಏಕೀಕರಣಕ್ಕಾಗಿ ದೊಡ್ಡ ಹೋರಾಟ ಮಾಡಿದೆ. ಭಾರತ ಸ್ವಾತಂತ್ರ್ಯ ಮತ್ತು ಕನ್ನಡತ್ವದ ವಿಕಾಸ ಸಂಘದ ಧ್ಯೇಯವಾಗಿತ್ತು. ಧಾರವಾಡದಲ್ಲಿ ಕನ್ನಡ ಸಂಶೋಧನ ಕೇಂದ್ರ ಹಾಗೂ ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆ, ಆಕಾಶವಾಣಿಯ ಕೇಂದ್ರದ ಹುಟ್ಟು - ಇವೆಲ್ಲದರಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಅಪಾರವಾಗಿ ಶ್ರಮಿಸಿದೆ. ೧೯೧೧ ರಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಬಿ. ಎಂ. ಶ್ರೀಕಂಠಯ್ಯನವರು 'ಕನ್ನಡಮಾತು ತಲೆ ಎತ್ತುವ ಬಗೆ' ವಿಷಯವಾಗಿ ಉದ್ಬೋಧಕ ಉಪನ್ಯಾಸ ಮಾಡಿದ್ದನ್ನು ಇಲ್ಲಿ ಉಲ್ಲೇಖಿಸಬೇಕು. ಕನ್ನಡ ನಾಡು - ನುಡಿಯ ಹೋರಾಟಕ್ಕಾಗಿ ಕರ್ನಾಟಕ ವಿದ್ಯಾವರ್ಧಕ ಸಂಘ ತನ್ನ ಹೃದಯವನ್ನು ತೆರೆದುಕೊಂಡು ಕಾರ್ಯಮಾಡಿದೆ. ಗೋಕಾಕ ಚಳುವಳಿಯ ಕೇಂದ್ರ ಸ್ಥಾನ ಧಾರವಾಡದ ವಿದ್ಯಾವರ್ಧಕ ಸಂಘ ಎಂಬುದು ಸರ್ವವಿದಿತ. ಕನ್ನಡ ಚಳುವಳಿಯ ಇತಿಹಾಸದಲ್ಲಿ ವಿದ್ಯಾವರ್ಧಕ ಸಂಘ ಮಹತ್ವದ ಪಾತ್ರ ವಹಿಸಿದೆ.

ಕನ್ನಡ ಸಾಹಿತಿಗಳ ಉಪನ್ಯಾಸ, ಸನ್ಮಾನ, ಸಾಹಿತ್ಯ ವಿಚಾರ ಸಂಕಿರಣ, ಕವಿಗೋಷ್ಠಿಗಳನ್ನು ಎಡೆಬಿಡದೆ ನಡೆಸುತ್ತ ಬಂದ ವಿದ್ಯಾವರ್ಧಕ ಸಂಘವು ಹಲವು ವೇದಿಕೆಗಳ ಮೂಲಕ ಕಾರ್ಯಕ್ರಮ ನಡೆಸುತ್ತಲಿದೆ. ಸಾಸನೂರ ವ್ಯಾಖ್ಯಾನಮಾಲೆ, ಕಿತ್ತೂರರಾಣಿ ಚೆನ್ನಮ್ಮ ದಿನಾಚರಣೆ, ಬಸವಜಯಂತಿ ಆಚರಣೆ, ಕಾನೂನು ಪರಿಣತರಿಗೆ ಪಾರಿತೋಷಕ, ಕೊಟ್ರಶೆಟ್ಟಿ ದತ್ತಿ ಉಪನ್ಯಾಸ, ಆರ್. ಸಿ. ಹಿರೇಮಠ ಸ್ಮಾರಕ ಭಾಷಣ ಆರ್. ಸಿ. ನಾಗಮ್ಮನವರ ದತ್ತಿ ಹೀಗೆ ಹಲವು ದತ್ತಿ ಉಪನ್ಯಾಸಗಳ ಜೊತೆಗೆ 'ಮಾತೋಶ್ರೀ ರತ್ನಮ್ಮ ಹೆಗ್ಗಡೆ ಮಹಿಳಾ ಗ್ರಂಥ ಬಹುಮಾನ'ದ ಯೋಜನೆಯಲ್ಲಿ ಐವತ್ತಕ್ಕೂ ಹೆಚ್ಚು ಲೇಖಕಿಯರಿಗೆ ಗ್ರಂಥ ಬಹುಮಾನ ನೀಡಿ ಸನ್ಮಾನಿಸಿದ ಕೀರ್ತಿ ವಿದ್ಯಾವರ್ಧಕ ಸಂಘಕ್ಕಿದೆ. ಸಾಹಿತಿಗಳ ಭಾವಚಿತ್ರಗಳ ದೊಡ್ಡ ಭಂಡಾರವನ್ನು ಇದು ಹೊಂದಿದೆ.

ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ಕನ್ನಡದ ಧೀಮಂತ ಹೋರಾಟಗಾರ, ಪತ್ರಕರ್ತ, ಅಂಕಣಕಾರ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರು ಮೂರೂವರೆ ದಶಕಗಳಿಂದ ಅಧ್ಯಕ್ಷರಾಗಿದ್ದು, ಸಾಹಿತಿ, ಸಂಶೋಧಕ, ಕನ್ನಡಾಭಿಮಾನಿಗಳಿಂದ ಕೂಡಿದ ಕಾರ್ಯಕಾರಿ ಸದಸ್ಯ ಮಂಡಳಿಯು ಸಂಘದ ಬೆಳವಣಿಗೆಗೆ ಶ್ರಮಿಸುತ್ತಿದೆ. ವ್ಯಾಪಾರ ಮಳಿಗೆಗಳ ಮೂಲಕ ಸಂಘಕ್ಕೆ ಶಾಶ್ವತ ಆದಾಯ, ಆರ್ಥಿಕ ಸಂಪನ್ಮೂಲ ಬರುವಂತೆ ಮಾಡಿದೆ. ಈಗ ಸುಸಜ್ಜಿತವಾದ ಡಾ. ಪಾಟೀಲ ಪುಟ್ಟಪ್ಪ ಸಭಾಭವನ ನಿರ್ಮಾಣಗೊಂಡಿದೆ.

ಕರ್ನಾಟಕ ವಿದ್ಯಾವರ್ಧಕ ಸಂಘವು ಕನ್ನಡದ ಕೇಂದ್ರಸ್ಥಾನವಾಗಿ, ಧಾರವಾಡದ ಸಾಂಸ್ಕೃತಿಕ ಪ್ರಪಂಚದ ಹೃದಯಮಂದಿರವಾಗಿ, ಸಾಹಿತ್ಯಿಕ ಚಟುವಟಿಕೆಯ ನೆಲೆಯಾಗಿ ಕನ್ನಡದ ಸೇವೆಯನ್ನು ನಿರಂತರವಾಗಿ ನಡೆಸುತ್ತಿದೆ. ಗೋವೆಯಲ್ಲಿ ಹಾಗೂ ಮುಂಬೈನಲ್ಲಿ ಕನ್ನಡ ಸಮ್ಮೇಳನ

ಜರುಗಿಸಿ ಹೊರನಾಡಿನಲ್ಲಿರುವ ಕನ್ನಡಿಗರಲ್ಲಿ ಕನ್ನಡ ಸಂಸ್ಕೃತಿಯ ಅಭಿಮಾನ ಬೆಳೆಸಿದೆ. ದೇಶೀಯತೆ, ಭಾರತೀಯತೆಯ ಚಿಂತನೆಗೆ ಮಹತ್ವ ಹೆಚ್ಚುತ್ತಿರುವ ಸಮಕಾಲೀನ ಸಂದರ್ಭದಲ್ಲಿ ಸ್ವಾತಂತ್ರ್ಯಪೂರ್ವ ದಿನಗಳಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ನಾಡು - ನುಡಿ - ಸಾಹಿತ್ಯ, ಸಂಸ್ಕೃತಿಯ ಅಭಿಮಾನ ಬೆಳೆಸಿದ್ದು ನಿಜಕ್ಕೂ ಅನನ್ಯಕಾರ್ಯವೆನಿಸುತ್ತದೆ. ವಸಾಹತುಶಾಹಿ ಅನುಭವದಿಂದ ಬಿಡುಗಡೆಗೊಂಡು ಕನ್ನಡದ ಜನ ಸಾಂಸ್ಕೃತಿಕವಾಗಿ ಬೆಳೆಯಬೇಕೆಂಬ ಆಶಯವನ್ನು ವಿದ್ಯಾವರ್ಧಕ ಸಂಘ ಮೊದಲಿನಿಂದಲೂ ಸಾರುತ್ತ ಬಂದಿದೆ. 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ', 'ವಿಶ್ವಭಾರತಿಗೆ ಕನ್ನಡದಾರತಿ' ಯೆಂಬ ಕವಿವಾಣಿಯನ್ನು ಸಾಕಾರಗೊಳಿಸಲು ಸಂಘವು ತನ್ನನ್ನು ತೆರೆದುಕೊಂಡಿದೆ. ಕನ್ನಡ ನಾಡಿನ ಹಿರಿಯ ಸಾಂಸ್ಕೃತಿಕ ಸಂಸ್ಥೆಯಾದ ಕರ್ನಾಟಕ ವಿದ್ಯಾವರ್ಧಕ ಸಂಘವು ಕಥಾಕಮ್ಮಟವನ್ನು ಜರುಗಿಸಿ, ಕಥೆಯ ಹಿನ್ನೆಲೆ - ಮುನ್ನೆಲೆಗಳ ಮಾಹಿತಿಯೊಂದಿಗೆ ಸಂವಾದ ನಡೆಸಿ **'ಕಥನ ಕುತೂಹಲ'** ಮತ್ತು **'ಬಯಲ ಬೇರ ಚಿಗುರು'** ಗ್ರಂಥಗಳನ್ನು ಪ್ರಕಟಿಸುತ್ತಿರುವುದು ಕನ್ನಡ ಕಥನ ಸಾಹಿತ್ಯಕ್ಕೆ ಕರ್ನಾಟಕ ವಿದ್ಯಾವರ್ಧಕ ಸಂಘದ ಕೊಡುಗೆಯಾಗಿದೆ.

# ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಕಟಣೆಗಳು

| ಅ.ಸಂ. | ಪುಸ್ತಕದ ಹೆಸರು | ಲೇಖಕರು | ಬೆಲೆ | ಪ್ರಕಟಣೆ ವರ್ಷ |
|---|---|---|---|---|
| *೧. | ಉತ್ತರರಾಮ ಚರಿತ್ರೆ | ಧೋಂಡೋ ನರಸಿಂಹ ಮುಳಬಾಗಲ | ೯ ಆಣೆ | ೧೮೯೨ |
| ೨. | ವೇಣೀ ಸಂಹಾರ | ಧೋಂಡೋ ನರಸಿಂಹ ಮುಳಬಾಗಲ | | ೧೮೯೨ |
| ೩. | ಆರ್ಯ ಕುಲಾಂಗನಾ | ಎಚ್. ತಿಮ್ಮಕೃಷ್ಣರಾವ್ | | ೧೮೯೬ |
| ೪. | ಕಂತ, ತಗಾಯಿ, ಇಳಿವತ್ತಿ | ಆರ್. ಎಸ್. ಕುಲಕರ್ಣಿ | ೧೮೬ಪೈ | ೧೮೯೬ |
| ೫. | ಮಾಳವಿಕಾಗ್ನಿ ಮಿತ್ರ | ಧೋಂಡೋ ನರಸಿಂಹ ಮುಳಬಾಗಲ | ೪೪ ಪೈ | ೧೮೯೭ |
| ೬. | ಕನ್ನಡ ಸುಶೀಲಾ ಪರಿಣಯಂ (ನಾಟಕ) | ಎಚ್. ಚಿದಂಬರಯ್ಯ | ೪ ಆಣೆ | ೧೮೯೯ |
| ೭. | ಕನ್ನಡಿಗರ ಜನ್ಮ ಸಾರ್ಥಕತೆ | ವಲ್ಲಭ ಮಹಾಲಿಂಗ ತಟ್ಟಿ | ೩ ಆಣೆ | ೧೮೯೯ |
| ೮. | ಹಿತೋಪದೇಶ ಭಾಗ - ೩ | ಶಿವರುದ್ರಪ್ಪ ಸೋಮಪ್ಪ ಕುಲಕರ್ಣಿ | ೫ ಆಣೆ | ೧೯೦೦ |
| ೯. | ಹಿತೋಪದೇಶ ಭಾಗ - ೪ | ಶಿವರುದ್ರಪ್ಪ ಸೋಮಪ್ಪ ಕುಲಕರ್ಣಿ | ೫ ಆಣೆ | ೧೯೦೦ |
| ೧೦. | ಬಾಲ್ಯವಿವಾಹಶಾಸ್ತ್ರ ನಿಷೇಧ | ತಿಮ್ಮಾಜಿ ಅನಂತ ಕಾಳಿ | ೫ ಆಣೆ | ೧೯೦೦ |
| ೧೧. | ನಿದ್ದೆಯಲ್ಲೆಬ್ಬಿಸಲ್ಪಟ್ಟ ಚಂದನದಾಸನು (ನಾಟಕ) | ಗಂಗಾಧರರಾವ ಹುಯಿಲಗೋಳ | ೪ ಆಣೆ | ೧೯೦೧ |
| ೧೨. | ಕರ್ಣಾಟಕ ನರಕಾಸುರ ವಿಜಯ ವ್ಯಾಯೋಗಂ | ಸಿದ್ಧಾಂತಿ ಶಿವಶಂಕರ ಶಾಸ್ತ್ರಿ | ೩ ಆಣೆ | ೧೯೦೧ |
| ೧೩. | ವೀರಮಣಿ | ತೋಂಟೇಶ ಅನ್ನದಾನಿ ಮಂಗಳೂರು | ೨ ಆಣೆ | ೧೯೦೨ |
| ೧೪. | ಸತ್ಯರಾಜಾಪೂರ್ವದೇಶ ಯಾತ್ರೆಗಳು | ಅನು : ರಾಮರಾವ್ ಬೆನಗಲ್ | ೮ ಆಣೆ | ೧೯೦೩ |
| ೧೫. | ಸುಭದ್ರಾ ಹರಣಂ | | ೨ ಆಣೆ | ೧೯೦೩ |
| ೧೬. | ಅಭಿನವ ಕಾದಂಬರಿ | ಸಿದ್ಧಾಂತಿ ಶಿವಶಂಕರ ಶಾಸ್ತ್ರಿ | ೫ ಆಣೆ | ೧೯೦೩ |
| ೧೭. | ಆರ್ಥರ್ ಡ್ಯೂಕ್ ಆಫ್ ವೆಲಿಂಗ್ಟನ್ ಚರಿತ್ರೆಯು | ಗುರುಬಸಪ್ಪಾ ಫಕೀರಪ್ಪಾ ಹಳಕಟ್ಟಿ | ೧ ರೂ. | ೧೯೦೪ |

| | | | | |
|---|---|---|---|---|
| ೧೮. | ಆರ್ಯವಿದ್ಯಾದರ್ಶನವು | ಗುರುನಾಥ ವೆಂಕಟೇಶ ಕಿತ್ತೂರ | ೮ ಆಣೆ | ೧೯೦೪ |
| ೧೯. | ಚಿತ್ತೂರಿನ ಮುತ್ತಿಗೆ | ಕೃಷ್ಣಾಜಿ ಹ. ಮುದವೇಡಕರ | ೬ ಆಣೆ | ೧೯೦೫ |
| ೨೦. | ಸುಭದ್ರಾವಿಜಯ ನಾಟಕಂ | ಬಿ. ರಾಮರಾವ್ | ೧೨ ಆಣೆ | ೧೯೦೬ |
| ೨೧. | ಕರ್ನಾಟಕ ಕಥಾಸರಿತ್ಸಾಗರ | ಸೋಮದೇವ ಮಹಾಕವಿ | ೬ ಆಣೆ | ೧೯೦೬ |
| ೨೨. | ಕೃಷಿಕರ್ಮ ಶಾಸ್ತ್ರವು | ರಾಮಚಂದ್ರ ಮಧ್ವ ಮಹಿಷಿ | ೧೨ ಆಣೆ | ೧೯೦೬ |
| ೨೩. | ದಕ್ಷಿಣ ಮುಸಲ್ಮಾನ ರಾಜ್ಯಗಳ ಇತಿಹಾಸವು | ರಾಘವೇಂದ್ರ ಕೃ. ಇನಾಮತಿ | ೬ ಆಣೆ | ೧೯೦೭ |
| ೨೪. | ವಿಜಯನಗರದ ಸಾಮ್ರಾಜ್ಯವು | ವೀರಭದ್ರ ಬಸಪ್ಪಾ | ೧ ರೂ. | ೧೯೦೮ |
| ೨೫. | ಮಾನವಶಾಸ್ತ್ರವು | ಗುಡ್ಡೋ ಮುಕುಂದ ಉದಕಟ್ಟಿ | ೮ ಆಣೆ | ೧೯೦೮ |
| ೨೬. | ಎಂಟು ಸ್ತ್ರೀ ರತ್ನಗಳು | ಗದಿಗೆವ್ವ ಕುರಹಟ್ಟಿ | ೬ ಆಣೆ | ೧೯೦೯ |
| ೨೭. | ನಾಮದಾರ ವಿಲಿಯಮ್ ಎವರ್ಟ್ ಗ್ಲಾಡಸ್ಟನ್ ದೊರೆಗಳ ಚರಿತ್ರೆಯು | ಗುರುಬಸಪ್ಪ ಫಕ್ಕೀರಪ್ಪ ಹಳಕಟ್ಟಿ | ೧ ರೂ. | ೧೯೦೯ |
| ೨೮. | ವಿಶ್ವ | ಜೀವಾಜಿ ವಿಷ್ಣು ಗೋರೆ | ೪ ಆಣೆ | ೧೯೧೦ |
| ೨೯. | ಮೋಹಿನಿ ಅಥವಾ ನಿಂದಕರ ನಡವಳಿ | ಗದಿಗಯ್ಯಾ ಹು. ಹೊನ್ನಾಪುರಮಠ | ೮ ಆಣೆ | ೧೯೧೧ |
| ೩೦. | ಕನ್ನಡ ಮಾತು ತಲೆ ಎತ್ತುವ ಬಗೆ | ಬಿ. ಎಂ. ಶ್ರೀಕಂಠಯ್ಯ | | ೧೯೧೧ |
| ೩೧. | ಶಿಕ್ಷಣ ಮೀಮಾಂಸೆ | ವೆಂಕಟೇಶ ಬಿ. ಆಲೂರ | ೨ ರೂ. | ೧೯೧೧ |
| | | ವೆಂಕಟೇಶ ನ. ಮಗದಾಳ | ೪ ಆಣೆ | |
| ೩೨. | ಕೌಸಲ್ಯಾಪರಿಣಯಂ | ಕೆ. ರಾಮಸ್ವಾಮಯ್ಯಂಗಾರ | ೩ ಆಣೆ | ೧೯೧೨ |
| ೩೩. | ಕಾಲಿದಾಸ ಚರಿತ್ರ | ಗುರುನಾಥ ವೆಂಕಟೇಶ ಕಿತ್ತೂರ | ೬ ಆಣೆ | ೧೯೧೨ |
| ೩೪. | ಕರ್ನಾಟಕ ಯಯಾತಿ ನಾಟಕಂ | ಶಾ. ವೆಂಕಟರಮಣಯ್ಯ | ೪ ಆಣೆ | ೧೯೧೩ |
| ೩೫. | ಕವಿಕಾರ್ಯ ಪ್ರಶಂಸೆ | ಮ. ಅ. ರಾಮಾನುಜಯ್ಯಂಗಾರ | ೩ ಆಣೆ | ೧೯೧೩ |
| ೩೬. | ಸರಸ್ವತೀ | ಅನು : ಲಿಂಗೋ ರಾಮಚಂದ್ರ ಅಕ್ಕೂರ | ೧೨ ಆಣೆ | ೧೯೧೩ |
| ೩೭. | ಭಾರತೀಯ ವಿದುಷಿಯರು | ಮ. ಪ್ರ. ಪೂಜಾರ | ೫ ಆಣೆ | ೧೯೧೪ |
| ೩೮. | ಪ್ರಾಚೀನ ಹಿಂದೂಸ್ತಾನ | ವೆಂಕಟೇಶ ಮಗದಾಳ | ೧ ರೂ. | ೧೯೦೪ |
| ೩೯. | ಪಂ. ಈಶ್ವರಚಂದ್ರ ವಿದ್ಯಾಸಾಗರ ಇವರ ಚರಿತ್ರವು | ಕೆ. ರಾಮಸ್ವಾಮಯ್ಯಂಗಾರ | ೧ ರೂ. | ೧೯೧೭ |
| ೪೦. | ಅಶೋಕ ಅಥವಾ ಪ್ರಿಯದರ್ಶಿನಿ | ಎಂ. ಪಿ. ಪೂಜಾರ | ೧ ರೂ. ೬ಆ. | ೧೯೧೯ |

| | | | | |
|---|---|---|---|---|
| ೪೧. | ಬೇಗಮ ಸಮರೂ | ಎಸ್. ಎ. ಕುಲಕರ್ಣಿ | ೬ ಆಣೆ | ೧೯೨೦ |
| ೪೨. | ಹಜರತ ಮಹಮ್ಮದ ಪೈಗಂಬರರು | ಎಮ್. ಪಿ. ಪೂಜಾರ | ೬ ಆಣೆ | ೧೯೨೦ |
| ೪೩. | ಅಮೆರಿಕೆಯೊಳಗಿನ ಬಡ ವಿದ್ಯಾರ್ಥಿಗಳು | ಶ್ರೀನಿವಾರ ಪಾಂಡುರಂಗ ಕೋಟಿ | ೫ ಆಣೆ | ೧೯೨೦ |
| *೪೪. | ಮದುವೆ | ಮ. ಪ್ರ. ಪೂಜಾರ | ೨ ಆಣೆ | ೧೯೨೦ |
| *೪೫. | ಹರಿಶನ ಪ್ರೇಮ | | ೪ ಆಣೆ | ೧೯೨೦ |
| ೪೬. | ಇಸೋಪನ ಚರಿತ್ರೆ | ತ. ನಾ. ಅಮ್ಮಿನಭಾವಿ | ೩ ಆಣೆ | ೧೯೨೦ |
| ೪೭. | ಪಂಡಿತರಾಜ | ಕೇಶನ ರಂಗಭಟ್ಟ ಜೋಶಿ | ೪ ಆಣೆ | ೧೯೨೦ |
| ೪೮. | ವಿದ್ಯಾರಣ್ಯ ಸ್ವಾಮಿಗಳು | ಭೀ. ಜೀ. ಹುಲಿಕವಿ | ೧ ರೂ. | ೧೯೨೨ |
| ೪೯. | ಅಭಿಷೇಕ ನಾಟಕ | ಪಾನ್ಯಂ ಸುಂದರಶಾಸ್ತ್ರಿ | ೬ ಆಣೆ | ೧೯೨೪ |
| ೫೦. | ಕರ್ನಾಟಕ ಸ್ವಪ್ನವಾಸವದತ್ತಂ | ಅನು : ಭೀ. ಜೀ. ಹುಲಿಕವಿ | ೬ ಆಣೆ | ೧೯೨೫ |
| ೫೧. | ಸತ್ಕಥಾ ಕುಸುಮಮಂಜರಿ | ನಾರಾಯಣ ವೆಂಕಟೇಶ ಕುರಡಿ | ೧೦ ಆಣೆ | ೧೯೨೫ |
| ೫೨. | ದಿವಾಣ ಬಹಾದ್ದೂರ ರೊದ್ದ ಶ್ರೀನಿವಾಸರಾಯರ ಚರಿತ್ರೆಯು | | | ೧೯೨೫ |
| ೫೩. | ಭಾಸಕವಿ ಅಭಿಷೇಕ ನಾಟಕ | ಅನು : ಪಾನ್ಯ ಸುಂದರಶಾಸ್ತ್ರಿ | ೬ ಆಣೆ | ೧೯೨೫ |
| ೫೪. | ರಘುವಂಶ (ಕಾಳಿದಾಸ ವಿರಚಿತ) | ಅನು : ಕಲಮಡಿ ನರಹರಿರಾಯರು | ೨ ರೂ. | ೧೯೨೮ |
| ೫೫. | ಆರ್ಯರ ಶಿಕ್ಷಣ ಪದ್ಧತಿ | ಎಸ್. ಎನ್. ನರಹರಯ್ಯ | ೪ ಆಣೆ | ೧೯೨೮ |
| ೫೬. | ಭೀಷ್ಮಾಚಾರ್ಯ | ಮ. ಪ್ರ. ಪೂಜಾರ | ೫ ಆಣೆ | ೧೯೨೮ |
| ೫೭. | ಜೈನಧರ್ಮ ಪರಿಭಾಷೆ | ಮಹಾದೇವ ಪ್ರಭಾಕರ ಪೂಜಾರ | ೧ರೂ.೪ಆ | ೧೯೩೦ |
| ೫೮. | ನರಗುಂದ ಬಂಡಾಯ | ಪಂ. ಭೀ. ಜೀ. ಹುಲಿಕವಿ | ೧ ರೂ. | ೧೯೩೦ |
| ೫೯. | ವೇಣೀಬಂಧನ | ತಮ್ಮಾಜಿ ನಾ. ಅಮ್ಮಿನಭಾವಿ | ೪ ಆಣೆ | ೧೯೩೭ |
| ೬೦. | ಕರ್ನಾಟಕ ಜನಜೀವನ | ಬೆಟಗೇರಿ ಕೃಷ್ಣಶರ್ಮ | ೨ ರೂ. | ೧೯೩೯ |
| ೬೧. | ಕರ್ನಾಟಕ ಸಾಹಿತ್ಯ ಸಂಸ್ಕೃತಿ ದರ್ಶನ | ಪ್ರೊ. ಸ. ಸ. ಮಾಳವಾಡ | ೨ ರೂ. | ೧೯೩೯ |
| ೬೨. | ಕಾವ್ಯಾವಲೋಕನ | ಪ್ರೊ. ಎಸ್. ಎಸ್. ಬಸವನಾಳ | | ೧೯೩೯ |
| ೬೩. | ಶಬ್ದಾನುಶಾಸನ ಭಾಗ - ೧ | ಕುಂಡಲಗಿರಿ ಆಚಾರ್ಯ | | ೧೯೪೧ |
| | ಶಬ್ದಾನುಶಾಸನ ಭಾಗ - ೨ | ಕುಂಡಲಗಿರಿ ಆಚಾರ್ಯ | | ೧೯೪೧ |
| ೬೪. | ಕರ್ನಾಟಕ ಶಬ್ದಾನುಶಾಸನ ಪ್ರಕಾಶಿಕೆ ಭಾಗ - ೨ | ಶಿ. ಶಿ. ಬಸವನಾಳ | ೨ ರೂ. | ೧೯೪೧ |

| | | | |
|---|---|---|---|
| ೬೫. ಕರ್ನಾಟಕ ವಿದ್ಯಾವರ್ಧಕ ಸಂಘ ಐವತ್ತು ವರ್ಷ | | | ೧೯೪೧ |
| ೬೬. ಜೀವನ ವಾಙ್ಮಯ ವಿಮರ್ಶೆ | ಗಳಗನಾಥ | ೧ರೂ.೮ಆ. | ೧೯೪೧ |
| *೬೭. A CULTURAL HISTORY OF KARNATAKA | ಕರಮರಕರ ಎ. ಪಿ. ಹಾಗೂ ಕಲಮದಾನಿ | ೫ ರೂ. | ೧೯೪೬ |
| *೬೮. ನಾನು ಓದುವುದೇನು ? | ವಿವಿಧ ಲೇಖಕರು | ೧ ರೂ. | ೧೯೬೮ |
| ೬೯. ಕಾರ್ಯಾಲಯ ದೀಪಿಕೆ | | ೨೦ ರೂ. | ೧೯೭೬ |
| ೭೦. ಅಸಂಗತ ನಾಟಕಗಳು | ಕೀರ್ತಿನಾಥ ಕುರ್ತಕೋಟಿ | ೧ ರೂ. | ೧೯೭೬ |
| ೭೧. ಲಾವಣಿ ಸಾಹಿತ್ಯ | ಶಿಂಪಿ ಲಿಂಗಣ್ಣಾ | ೧ ರೂ. | ೧೯೭೬ |
| ೭೨. ಚೆನ್ನವೀರ ಕಣವಿ ಕಾವ್ಯದೃಷ್ಟಿ | ಗೌರೀಶ ಕಾಯ್ಕಿಣಿ | ೪ ರೂ. | ೧೯೭೭ |
| *೭೩. ಆಲ್ಬರ್ಟ್ ಐನ್‌ಸ್ಟೀನ್ | ಡಾ. ಎಂ. ಆಯ್. ಸವದತ್ತಿ<br>ಡಾ. ವಿ. ಎಂ. ಪೂಜಾರ | ೩ ರೂ. | ೧೯೮೧ |
| ೭೪. ರುಚಿ | ಡಾ. ಕೆ. ಕೃಷ್ಣಮೂರ್ತಿ | ೧.೮೦ | ೧೯೮೧ |
| ೭೫. ಜಾನಪದ | ಡಾ. ಜಿ. ಶಂ. ಪರಮಶಿವಯ್ಯ | ೧.೮೦ | ೧೯೮೧ |
| *೭೬. ಬಾಣ ಕಾದಂಬರಿ | ಗಂಗಾಧರ ಮಡಿವಾಳೇಶ್ವರ ತುರಮರಿ | ೩೫ ರೂ. | ೧೯೯೫<br>(೧೦ ನೇ ಮುದ್ರಣ) |
| *೭೭. ಕನ್ನಡ ಕರ್ನಾಟಕ ಏನು ಮಾಡಬೇಕು ? | ಡಾ. ಪಾಟೀಲ ಪುಟ್ಟಪ್ಪ | ೨ ರೂ. | ೧೯೯೫ |
| *೭೮. ಕಾವ್ಯಯಾನ | ಡಾ. ಬಸವರಾಜ ಸಾದರ | ೩೦ ರೂ. | ೨೦೦೦ |
| *೭೯. ಸ್ವಾತಂತ್ರ್ಯ ಚಿಂತನೆ | ಮೋಹನ ನಾಗಮ್ಮನವರ | ೫೦ ರೂ. | ೨೦೦೦ |
| *೮೦. ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯ ಘಟ್ಟಗಳು | ಡಾ. ಬಸವರಾಜ ಸಾದರ | ೧೫೦ ರೂ. | ೨೦೦೨ |
| *೮೧. ಗೋಕಾಕ ವರದಿ ಹೋರಾಟದ ಕಥೆ | ಡಾ. ಪಾಟೀಲ ಪುಟ್ಟಪ್ಪ | ೧೫ ರೂ. | ೨೦೦೨ |
| *೮೨. ಕಥನ ಕುತೂಹಲ | ಮೋಹನ ನಾಗಮ್ಮನವರ | ೬೦ ರೂ. | ೨೦೦೩ |
| *೮೩. ಬಯಲ ಬೇರ ಚಿಗುರು | ಮೋಹನ ನಾಗಮ್ಮನವರ | ೧೫೦ ರೂ. | ೨೦೦೩ |

# ಕರ್ನಾಟಕ ವಿದ್ಯಾವರ್ಧಕ ಸಂಘದ ಪದಾಧಿಕಾರಿಗಳು

| | | |
|---|---|---|
| ಅಧ್ಯಕ್ಷರು | : | ಡಾ. ಪಾಟೀಲ ಪುಟ್ಟಪ್ಪ |
| ಗೌರವ ಉಪಾಧ್ಯಕ್ಷರು | : | ಶ್ರೀ ಕೈಯಾರ ಕಿಞ್ಞಣ್ಣ ರೈ (ಕಾಸರಗೋಡು) |
| | | ಶ್ರೀ ಸುರೇಂದ್ರ ಹೆಗ್ಗಡೆ (ಧರ್ಮಸ್ಥಳ) |
| | | ಶ್ರೀಮತಿ ಸುಧಾಮೂರ್ತಿ(ಬೆಂಗಳೂರು) |
| | | ಶ್ರೀ ಜಿ. ಜಿ. ದೊಡವಾಡ |
| | | ಶ್ರೀ ಲೋಹಿತ ಡಿ. ನಾಯ್ಕರ |
| ಉಪಾಧ್ಯಕ್ಷರು | : | ಶ್ರೀ ಎಂ. ಆರ್. ಟೆಂಗಿನಕಾಯಿ |
| ಕಾರ್ಯಾಧ್ಯಕ್ಷರು | : | ಶ್ರೀ ಎಚ್. ಸಿ. ಮೊಗಲಿ |
| ಕೋಶಾಧ್ಯಕ್ಷರು | : | ಶ್ರೀ ಎಸ್. ಎಂ. ಹೊಳೆಯಣ್ಣವರ |
| ಪ್ರಧಾನ ಕಾರ್ಯದರ್ಶಿ | : | ಪ್ರೊ. ಬಿ. ವ್ಹಿ. ಗುಂಜೆಟ್ಟಿ |
| ಸಹ ಕಾರ್ಯದರ್ಶಿ | : | ಶ್ರೀ ಸದಾನಂದ ಶಿವಳ್ಳಿ |
| ಕಾರ್ಯಕಾರಿ ಸಮಿತಿ ಸದಸ್ಯರು | : | ಶ್ರೀ ಕೃಷ್ಣ ಜೋಶಿ |
| | | ಶ್ರೀ ಸಿದ್ಧಲಿಂಗ ದೇಸಾಯಿ |
| | | ಶ್ರೀ ಶಿವಾನಂದ ಭಾವಿಕಟ್ಟಿ |
| | | ಶ್ರೀಮತಿ ಸಿ. ಆರ್. ಅಗಡಿ |
| | | ಶ್ರೀ ಮೋಹನ ನಾಗಮ್ಮನವರ |
| | | ಶ್ರೀ ಶಂಕರ ಹಲಗತ್ತಿ |
| | | ಶ್ರೀಮತಿ ವಿಜಯಾ ಲಿಂಬಣ್ಣದೇವರಮಠ |
| | | ಪ್ರೊ. ಎಸ್. ಸಿ. ಹಿರೇಮಠ |
| | | ಶ್ರೀಮತಿ ಜಯಶ್ರೀ ಗುತ್ತಲ |
| | | ಹಾಗೂ ನಿರ್ದೇಶಕರು |
| | | ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ |
| | | ಬೆಂಗಳೂರು (ಸರ್ಕಾರದ ಪ್ರತಿನಿಧಿ) |

# ಸಂಪಾದಕರ ಬಗ್ಗೆ ಒಂದಿಷ್ಟು

೧೯೬೩ ಅಕ್ಟೋಬರ್ ೭ ರಂದು ಅವಿಭಕ್ತ ಕೃಷಿ ಕುಟುಂಬದಲ್ಲಿ ಜನಿಸಿದ ಮೋಹನ ನಾಗಮ್ಮನವರ ಧಾರವಾಡದ ಕರ್ನಾಟಕ ಕಾಲೇಜಿನ ದಿನಗಳಿಂದಲೇ ಚಳುವಳಿಗಳಲ್ಲಿ ತೊಡಗಿಕೊಂಡವರು. ಗೋಕಾಕ ಚಳುವಳಿ, ದಲಿತ ಚಳುವಳಿಗಳ ನಡುವೆ ಬೆಳೆದ ಮೋಹನ ಬರೆಯ ತೊಡಗಿದ್ದು ಅನಿರೀಕ್ಷಿತ ರೀತಿಯಲ್ಲಿ. ಕರಪತ್ರ, ಮನವಿ ಪತ್ರದ ಸಾಹಿತ್ಯದಿಂದ ಕತೆ, ಕವಿತೆ ಮತ್ತು ಪತ್ರಿಕೋದ್ಯಮಕ್ಕೆ ಹೊರಳಿಕೊಂಡ ಮೋಹನರ 'ವಿಧಾನಸೌಧ' (೧೯೯೩), 'ಅಗ್ರಹಾರದ ಒಂದು ಸಂಜೆ' (೧೯೯೬), 'ಮಹಾನಿರ್ಗಮನ' (೨೦೦೩) ಕವನ ಸಂಕಲನ ಪ್ರಕಟಗೊಂಡಿವೆ. 'ಅಗ್ರಹಾರದ ಒಂದು ಸಂಜೆ'ಗೆ ಮುದ್ದಣ ಕಾವ್ಯ ಪ್ರಶಸ್ತಿ, ಕ.ಸಾ.ಪ.ದ ರತ್ನಾಕರವರ್ಣಿ - ಮುದ್ದಣ ಅನಾಮಿಕ ದತ್ತಿ ಪ್ರಶಸ್ತಿ ಹಾಗೂ ಆರ್ಯಭಟ ಪ್ರಶಸ್ತಿ ಸಂದಿವೆ. 'ಸಂಕಟಪುರದ ನಾಟಕ ಪ್ರಸಂಗ' ಕಥಾ ಸಂಕಲನಕ್ಕೆ ವಾರಂಬಳ್ಳಿ ಪ್ರತಿಷ್ಠಾನದ ೧೯೯೯ ರ ಕಥಾ ಪ್ರಶಸ್ತಿ ದೊರೆತಿದೆ. ಸಾಹಿತ್ಯ, ಪತ್ರಿಕೋದ್ಯಮದ ಸೇವೆಗೆ ಕರ್ನಾಟಕ ಸರಕಾರವು ೧೯೯೭ ರ ಡಾ. ಅಂಬೇಡ್ಕರ ಜಯಂತಿ ಸಂದರ್ಭದಲ್ಲಿ ಗೌರವಿಸಿದೆ. ೧೯೯೮ ರ ಧ್ರುವರಾಜ ಕಡಕೋಳ ಸ್ಮಾರಕ ಪ್ರಶಸ್ತಿ, ಸಾಹಿತ್ಯ, ಸಂಘಟನೆಗಾಗಿ ೨೦೦೩ ನೇ ಸಾಲಿನ ನಾಡಚೇತನ ಪ್ರಶಸ್ತಿ ಪಡೆದ ಮೋಹನರ ಇನ್ನಿತರ ಕೃತಿಗಳು 'ಸ್ವಾತಂತ್ರ್ಯ ಚಿಂತನೆ' (೨೦೦೦), 'ಬೆಡಗಿನೆದುರಿನ ಬೆರಗು' (೨೦೦೨).

ಒಂದು ಅವಧಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿದ್ದ ಮೋಹನ 'ಲಂಕೇಶ್ ಪತ್ರಿಕೆ'ಯಲ್ಲಿನ ತಮ್ಮ ಬರಹ ವಿಶ್ಲೇಷಣೆಗಳಿಂದ ರಾಜ್ಯದ ಗಮನ ಸೆಳೆದವರು. ಬಸವ ತತ್ವ ಹಾಗೂ ಭಾವೈಕ್ಯತೆಗಾಗಿ ಕರ್ನಾಟಕದಾದ್ಯಂತ ಪಾದಯಾತ್ರೆ ಮಾಡಿದ ಮೋಹನ, ಸಮಗ್ರ ಉತ್ತರ ಕರ್ನಾಟಕದ ಅಭಿವೃದ್ಧಿ ಆಗ್ರಹಿಸಿದ ಚಳುವಳಿಯ ಮುಂಚೂಣಿಯಲ್ಲಿದ್ದ ಕಾರಣಕ್ಕಾಗಿ ಕೆಲ ಕಾಲ ಬಳ್ಳಾರಿ ಜೈಲಿನ ವಾಸವನ್ನು ಅನುಭವಿಸಿದವರು. ಈಗಲೂ ಈ ಭಾಗದ ರೈತ ಚಳುವಳಿಯ ಪ್ರಮುಖರಲ್ಲೊಬ್ಬರಾಗಿರುವ ಮೋಹನ 'ರಾಜಕೀಯ ರಂಗ' ಪತ್ರಿಕೆಯ ಸಂಪಾದಕರು. ಹಲವು ಶಿಕ್ಷಣ ಸಂಸ್ಥೆಗಳ ಹಾಗೂ ಸಾಮಾಜಿಕ ಸಂಘಟನೆಗಳ ಚುಕ್ಕಾಣಿ ಹಿಡಿದವರು.

ಪ್ರಸ್ತುತ ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಅವರೇ ಸಂಘಟಿಸಿದ ಕಥಾಕಮ್ಮಟದ ಫಲಶ್ರುತಿಯಾಗಿ ಸಂಪಾದಕರಾಗಿ ಹೊರತರುತ್ತಿರುವ **'ಕಥನ ಕುತೂಹಲ'** ಹಾಗೂ **'ಬಯಲ ಬೇರ ಚಿಗುರು'** ಗ್ರಂಥಗಳು ಸಂಘವು ನೂರ ಹದಿನಾಲ್ಕನೆಯ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಸಂದರ್ಭದಲ್ಲಿ ಪ್ರಕಟವಾಗುತ್ತಿರುವುದು ಸಂತಸದ ಸಂಗತಿ.

**ಎಚ್. ಸಿ. ಮೊಗಲಿ**
ಕಾರ್ಯಾಧ್ಯಕ್ಷರು, ಕರ್ನಾಟಕ ವಿದ್ಯಾವರ್ಧಕ ಸಂಘ

ಬಯಲ ಬೇರ ಚಿಗುರು

ಹಾಗೆ ನೋಡಿದರೆ, ಕೇವಲ ನೂರು ವರ್ಷಗಳ ಇತಿಹಾಸ ಹೊಂದಿರುವ ಕನ್ನಡದ ಸಣ್ಣ ಕಥಾಸಾಹಿತ್ಯ ಪ್ರಕಾರದಲ್ಲಿ ಬಂದ ಬೆಳೆ ಸಣ್ಣ ಪ್ರಮಾಣದ್ದೇನಲ್ಲ. ಆಯಾ ಕಾಲಘಟ್ಟದಲ್ಲಿ ತೆನೆಯೊಡೆದ ಕಥೆಗಳ ಕೃಷಿ, ಸಾಮಾಜಿಕ ಪರಿವರ್ತನೆಯ ಆಶಯವನ್ನೇ ಪ್ರಧಾನವಾಗಿಟ್ಟುಕೊಂಡು ಬೆಳೆದಿದ್ದರಿಂದ ಮನರಂಜನೆಯಾಚೆಗೆ ಮೆದುಳಿಗೂ ಕೈ ಹಾಕಿತು. ಈ ಶತಮಾನದ ಸಾಮಾಜಿಕ ಬದಲಾವಣೆಯಲ್ಲಿ ಇಂಥ ಕಥೆಗಳ ಕೊಡುಗೆಯೂ ಇದೆ ಎಂಬುದನ್ನು ನಾವಿಲ್ಲಿ ಗಮನಿಸಬೇಕು. ಸಮುದಾಯವನ್ನು ಪ್ರಭಾವಿತಗೊಳಿಸಬಲ್ಲ ತಾಕತ್ತಿರುವ ಕಥೆಗಳ ಪರಿಣಾಮ ಕಂಡದ್ದರಿಂದ ಮತ್ತು ಆ ಪರಿಣಾಮಗಳು ಕಾಲದ ಅಲೆಯಲ್ಲಿ ಸಾಧಿಸಿದ ಫಲಿತಾಂಶಗಳ ಬಗೆಗಿನ ಮನವರಿಕೆಯಿಂದಾಗಿ ಸಣ್ಣ ಕಥೆ ಎಂಬುದನ್ನು ಅಷ್ಟು ಸುಲಭವಾಗಿ ತಳ್ಳಿಹಾಕಲಾಗುವದಿಲ್ಲ.

ಆಯಾ ನೆಲದ ಕಥೆ ಅಲ್ಲಿನ ಪರಂಪರೆಯ, ವಾಸ್ತವದ ಪ್ರತಿಫಲನವೇ ಆಗಿರುತ್ತದೆ. ಈ ಪ್ರತಿಫಲನಕ್ಕೆ ನಾವೆಲ್ಲ ಸೇರಿ ಇಂತಹುದೇ ಪಂಥದ ಬೇಲಿಯೆಂದು ಗುರುತಿಸಿ ಕಂಪೌಂಡು ಕಟ್ಟಬಹುದು. ಹಾಗೆ ನಾವು ಪಂಗಡದ ಗೋಡೆ ಕಟ್ಟಿಕೊಂಡಿದ್ದೇವೆಂದು ತಿಳಿದು ಬೀಗಿದ ಮರುಕ್ಷಣ ಆ ಕಂಪೌಂಡ್‌ಗೋಡೆಗಳ ನಡುವಿನ ನೀರು ನೆಲಕ್ಕಿಳಿದು ಮತ್ತೆಲ್ಲೋ ಪ್ರಕಟಗೊಳ್ಳುವಂತೆ ಸಾಹಿತ್ಯದ ಗತಿ. ನೆಲದ ಮೇಲಿನದ್ದು ನೋಟಕ್ಕೆ ದಕ್ಕುವಂತಹುದಾಗಿ ಕಾಣುವ ಈ ಸಂಗತಿ ಹಿಡಿಯ ಹೋದರೆ ತೆಕ್ಕೆಗೆ ನಿಲುಕದ್ದು. ನೆಲದ ಮೇಲಿನ ಹರಿವಿನ ನದಿಗೆ ನೆಲದ ಕೆಳಗೂ ಝುರಿಗಳಿರುವಂತೆ, ನಾವರಿಯದ ಸುಳಿಗಳಿರುವಂತೆ ಸಾಹಿತ್ಯಕ್ಕೂ ಆದರದೇ ನಡಿಗೆ ಇದೆ.

ಇದೊಂದು ಹಿರಿಯರು, ಕಿರಿಯರು ಸೇರಿ ಶ್ರಮಿಸಿದ ಫಲ. ಕನ್ನಡ ಕನ್ನಡಿಗ ಕರ್ನಾಟಕದ ಹಿತರಕ್ಷಣೆಯ ವಿಷಯದಲ್ಲಿ ಶತಮಾನ ಕಂಡ ಕನ್ನಡದ ಹಿರಿಯ ಸಂಸ್ಥೆ ಕರ್ನಾಟಕ ವಿದ್ಯಾವರ್ಧಕ ಸಂಘವು ನೂರ ಹದಿನಾಲ್ಕನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಸಂದರ್ಭದಲ್ಲಿ ಬಿಡುಗಡೆಯಾಗುತ್ತಿರುವ "ಬಯಲ ಬೇರ ಚಿಗುರು" ಕಥನ ಸಾಹಿತ್ಯದ ಕಡಲ ಮೇಲೆ ತೇಲಿ ಬಿಟ್ಟ ಮತ್ತೊಂದು ಪುಟ್ಟ ದೋಣಿ.

ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ